ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ		815(835)
ಮಾನ್ಯ ಸದಸ್ಯರ ಹೆಸರು		ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ಸಚಿವರು		ಉನ್ನತ ಶಿಕ್ಷಣ ಸಚಿವರು
ಉತ್ತರಿಸಬೇಕಾದ ದಿನಾಂಕ		24.08.2026
ಪ್ರಶ್ನೆ		**ಉತ್ತರ**
ಅ)	2023-24 ಮತ್ತು 2024-25ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು ಇಲ್ಲಿಯ ರಾಜ್ಯ ಲೆಕ್ಕಪತ್ರ ಹಾಗೂ ಲೆಕ್ಕಪರಿಶೋಧನೆ ಇಲಾಖೆಯಿಂದ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳನ್ನು ಒದಗಿಸುವುದು;	ಕರ್ನಾಟಕ ರಾಜ್ಯ ಲೆಕ್ಕಪತ್ರ ಹಾಗೂ ಲೆಕ್ಕಪರಿಶೋಧನ ಇಲಾಖೆಯು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸಿದ್ದು **ಅನುಬಂಧ-1ರಲ್ಲಿ** ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸಿದ್ದು **ಅನುಬಂಧ-2** ರಲ್ಲಿ ಒದಗಿಸಲಾಗಿದೆ.
ಆ)	ಸದರಿ ವಿವಿಗೆ ಸರ್ಕಾರದ ಅನುದಾನ ಮತ್ತು ಲಭ್ಯವಿರುವ ಹಾಲಿ ಪೂರ್ಣ ಆರ್ಥಿಕ ನಿಧಿಯ ವಿವರವನ್ನು ಒದಗಿಸುವುದು; ವಿವಿ ವೆಚ್ಚ ಮಿತವ್ಯಯಕ್ಕೆ ಸರ್ಕಾರದಿಂದ ಸೂಚಿಸಿರುವ ಕ್ರಮಗಳು ಹಾಗೂ ಆದೇಶಗಳ ವಿವರ ಒದಗಿಸುವುದು;	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ. ವಿಶ್ವವಿದ್ಯಾಲಯವು ತನ್ನ ಆಂತರಿಕ ಸಂಪನ್ಮೂಲದಿಂದಲೇ ತನ್ನ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿದೆ. 2025-26ನೇ ಸಾಲಿನಲ್ಲಿ ವಿವಿಧ ಇಲಾಖೆಗಳಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಕ್ಕೆ ಈ ಕೆಳಕಂಡಂತೆ ಅನುದಾನ ಬಿಡುಗಡೆಯಾಗಿರುತ್ತದೆ. 1. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ 2025-26ನೇ ಸಾಲಿನಲ್ಲಿ ರೂ.3,80,00,000/- ಗಳ ಅನುದಾನ ಬಿಡುಗಡೆಯಾಗಿರುತ್ತದೆ. 2. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಆವರಣದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಪೀಠಕ್ಕೆ 2025-26ನೇ ಸಾಲಿನಲ್ಲಿ ರೂ.8,00,000/- ಗಳ ಅನುದಾನ ಬಿಡುಗಡೆಯಾಗಿರುತ್ತದೆ. 3. ಡಾ. ಬಾಬು ಜಗಜೀವನ್ ರಾಮ್ ಅಧ್ಯಯನ ಪೀಠಕ್ಕೆ 2025-26ನೇ ಸಾಲಿನಲ್ಲಿ ರೂ.5,00,000/-ಗಳ ಅನುದಾನ ಬಿಡುಗಡೆಯಾಗಿರುತ್ತದೆ. 4. 2025-26ನೇ ಸಾಲಿನ ಅಂತ್ಯಕ್ಕೆ ಠೇವಣಿ ರೂಪದಲ್ಲಿ ರೂ.563,30,97,041/- ಗಳ ಮೊತ್ತವು ಲಭ್ಯವಿರುತ್ತದೆ. ರಾಜ್ಯದಲ್ಲಿನ ಸಾರ್ವಜನಿಕ ವಿಶ್ವವಿದ್ಯಾಲಯಗಳು ರಾಜ್ಯ ಸರ್ಕಾರದ ಪೂರ್ವಾನುಮೋದನೆ ಇಲ್ಲದೇ ಮಂಜೂರಾದ ಹುದ್ದೆಗಳಿಗಿಂತಲೂ ಮೀರಿ ಅಗತ್ಯಕ್ಕಿಂತ ಹೆಚ್ಚಿನ ಹುದ್ದೆಗಳನ್ನು ತಮ್ಮ ಆಂತರಿಕ ಸಂಪನ್ಮೂಲದ ಆಧಾರದ

		ಮೇಲೆ ಹೊರಗುತ್ತಿಗೆ ಮೇಲೆ ಭರ್ತಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದ ಹಿನ್ನಲೆಯಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ :ಇಡಿ 15 ಯುಎನ್‌ಇ 2023, ದಿನಾಂಕ:08.08.2023ರಲ್ಲಿ ಸರ್ಕಾರದ ಪೂರ್ವಾನುಮೋದನೆ ಇಲ್ಲದೇ ನಿಯಮಬಾಹಿರವಾಗಿ ಮಂಜೂರಾದ ಹುದ್ದೆಗಳಿಗೂ ಮೀರಿ ಅಗತ್ಯಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ನೇಮಿಸಿಕೊಂಡ ನೌಕರರನ್ನು ಸೇವೆಯಿಂದ ಬಿಡುಗಡೆಗೊಳಿಸಿ ವಿಶ್ವವಿದ್ಯಾಲಯಗಳ ಸಿಬ್ಬಂದಿಗಳ ಸಂಖ್ಯೆಯನ್ನು ತರ್ಕಬದ್ಧಗೊಳಿಸಲು (Rationalize) ಕ್ರಮವಹಿಸುವಂತೆ ವಿಶ್ವವಿದ್ಯಾಲಯಗಳಿಗೆ ನಿರ್ದೇಶನ ನೀಡಲಾಗಿದ್ದು, ಸದರಿ ಸುತ್ತೋಲೆಯ ಪ್ರತಿಯನ್ನು ಅನುಬಂಧ-3ರಲ್ಲಿ ಒದಗಿಸಲಾಗಿದೆ. ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಆಂತರಿಕ ಸಂಪನ್ಮೂಲ ಗಣನೀಯವಾಗಿ ಕಡಿಮೆಯಾಗುತ್ತಿರುವ ಹಿನ್ನಲೆಯಲ್ಲಿ ಆಡಳಿತಾತ್ಮಕ ವೆಚ್ಚ/ ವೇತನ ವೆಚ್ಚಗಳನ್ನು ತಗ್ಗಿಸುವಂತೆ ಸರ್ಕಾರದ ಪತ್ರ ಸಂಖ್ಯೆ: ಇಡಿ 148 ಹೆಚ್‌ಪಿಯು 2024 ದಿನಾಂಕ: 19.05.2026ರಲ್ಲಿ ರಾಜ್ಯದಲ್ಲಿನ ಸಾರ್ವಜನಿಕ ವಿಶ್ವವಿದ್ಯಾಲಯಗಳಿಗೆ ನಿರ್ದೇಶನ ನೀಡಲಾಗಿದ್ದು, ಪ್ರತಿಯನ್ನು ಅನುಬಂಧ-4ರಲ್ಲಿ ಒದಗಿಸಲಾಗಿದೆ.
ಇ)	ಕಳೆದ ಎರಡು ವರ್ಷಗಳಲ್ಲಿ ವಿವಿಯಲ್ಲಿ ವೇತನ, ಮೂಲಸೌಕರ್ಯ, ವಿದ್ಯಾರ್ಥಿ ಸೇವೆಗಳು, ಗುತ್ತಿಗೆದಾರರ ಪಾವತಿ ವೆಚ್ಚ ಮತ್ತು ಅಧ್ಯಯನ ಕೇಂದ್ರಗಳ ವೆಚ್ಚದ ವಿವರಗಳನ್ನು ಒದಗಿಸುವುದು;	<table><tr><td>ವಿವರ</td><td>2024-25</td><td>2025-26</td></tr><tr><td>ವೇತನ</td><td>75,21,26,721</td><td>84,59,49,909</td></tr><tr><td>ಮೂಲಭೂತ ಸೌಕರ್ಯ</td><td>16,73,79,003</td><td>13,34,76,428</td></tr><tr><td>ವಿದ್ಯಾರ್ಥಿ ಸೇವೆಗಳು</td><td>21,63,95,685</td><td>38,10,71,603</td></tr><tr><td>ಗುತ್ತಿಗೆದಾರರ ಪಾವತಿವೆಚ್ಚ</td><td>43,61,20,552</td><td>5,27,30,656</td></tr><tr><td>ಅಧ್ಯಯನ ಕೇಂದ್ರಗಳ ವೆಚ್ಚ</td><td>1,13,65,132</td><td>73,11,896</td></tr></table>
ಈ)	ಸದರಿ ವಿವಿಗೆ ಸಂಬಂಧಿಸಿದಂತೆ ರಾಜ್ಯ ಉನ್ನತ ಶಿಕ್ಷಣ ಇಲಾಖೆಯಿಂದ ವಿವಿ ಬ್ಯಾಂಕ್ (SBI, HDFC & AXIS) ಖಾತೆಗಳನ್ನು ಸ್ಥಗಿತಗೊಳಿಸುವಂತೆ ಆದೇಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸದರಿ ಆದೇಶದ ಅನುಷ್ಠಾನದ ಪ್ರಗತಿಯ ಮಾಹಿತಿಯನ್ನು ಒದಗಿಸುವುದು)	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು SBI, HDFC & AXIS ಬ್ಯಾಂಕುಗಳಲ್ಲಿ ಹೊಂದಿದ್ದ ಖಾತೆಗಳನ್ನು ಸ್ಥಗಿತಗೊಳಿಸಲು ಇಲಾಖೆಯಿಂದ ಸಂಬಂಧಪಟ್ಟ ಬ್ಯಾಂಕುಗಳಿಗೆ ನಿರ್ದೇಶನ ನೀಡಲಾಗಿತ್ತು. ಘನತೆವೆತ್ತ ರಾಜ್ಯಪಾಲರ ನಿರ್ದೇಶನದ ಹಿನ್ನೆಲೆಯಲ್ಲಿ HDFC ಬ್ಯಾಂಕ್‌ನಲ್ಲಿ ವಿಶ್ವವಿದ್ಯಾಲಯವು ಹೊಂದಿರುವ ಖಾತೆಗಳನ್ನು FREEZE ಮಾಡುವಂತೆ ನೀಡಲಾಗಿದ್ದ ನಿರ್ದೇಶನವನ್ನು ಹಿಂಪಡೆಯಲಾಗಿರುತ್ತದೆ.

ಸಂಖ್ಯೆ: ಇಡಿ 37 ಯುಒವಿ 2026

(**ಬಸವರಾಜ ಕಾಯರಡ್ಡಿ**)
ಉನ್ನತ ಶಿಕ್ಷಣ ಸಚಿವರು

ಅನುಬಂಧ-1

Office of the Additional Director
Regional office, Mysuru Division,
Examination Building, Behind Crawford Hall,
University of Mysore, Mysore-05
Phone No: 0821-2953130

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ

ಅಪರ ನಿರ್ದೇಶಕರ ಕಛೇರಿ
ಪ್ರಾಂತೀಯ ಕಛೇರಿ, ಮೈಸೂರು ವಿಭಾಗ,
ಪರೀಕ್ಷಾ ಭವನ ಹಿಂಭಾಗ, ಕ್ರಾಫರ್ಡ್ ಹಾಲ್ ಎದುರಾಗ,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-05
E-Mail:adromys@gmail.com

ಸಂಖ್ಯೆ:ಅನಿ/ಪ್ರಾಕ ಮೈ/ಲೆ ತ ಕಾ/ಕ.ರಾ.ಮು.ವಿ.ವಿ/2024–25 /1[illegible]/12 ದಿನಾಂಕ: 19.09.2025

ರವರಿಗೆ,

ಕುಲಸಚಿವರು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ,

ಮೈಸೂರು.

ಮಾನ್ಯರೆ,

ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಬಿಡುಗಡೆ ಬಗ್ಗೆ.

ಉಲ್ಲೇಖ: ಮಾನ್ಯ ನಿರ್ದೇಶಕರು, ಕರಾಲೆಪ&ಲೆಪ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: KSAAD/AUD3/MYSR(UNIV)/1/2021 Dated:12.08.2025

——**—**—**—**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000 ರ 47(3) ರಡಿ ಈ ಕಛೇರಿಯಿಂದ ತಮ್ಮ ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕೈಗೊಂಡು ಉಲ್ಲೇಖಿತ ಪತ್ರದ ಸೂಚನೆಗಳನುಸಾರ ಪರಿಷ್ಕೃತ ವರದಿಯನ್ನು ಬಿಡುಗಡೆಗೊಳಿಸಿದ. ಲೆಕ್ಕತನಿಖಾ ವರದಿಯಲ್ಲಿ ತಿಳಿಸಿರುವ ಎಲ್ಲಾ ಆಕ್ಷೇಪಣೆಗಳಿಗೂ ಮುಖ್ಯ ಮಹಾಲಾತಿ ಕಂಡಿಕೆಗಳಿಗೆ ಅನುಪಾಲನಾ ವರದಿಯನ್ನು ಈ ವರದಿ ತಲುಪಿದ ಎರಡು ತಿಂಗಳೊಳಗಾಗಿ ಸೂಕ್ತ ಪೂರಕ ದಾಖಲಾತಿಗಳೊಡನೆ ಈ ಕಛೇರಿಗೆ ಸಲ್ಲಿಸಲು ಕೋರಿದೆ.

ಅದಕ :ಸಂಪುಟ 1 & 2

ತಮ್ಮ ವಿಶ್ವಾಸಿ,

ಅಪರ ನಿರ್ದೇಶಕರು (ಪ್ರ)
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ
ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಮೈಸೂರು

REGISTRAR PERSONAL SECTION,
R.P.A No. ...
Computer No. ...
Date ...
KSOU, Mysuru-570006

2023–24ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನೆಯ ಕಂಡು ಬಂದ ಆಕ್ಷೇಪಣೆಗಳು ಮತ್ತು ವಸೂಲಾತಿಗಳ ವಿವರ

ಕ್ರಮ ಸಂಖ್ಯೆ	ಕಂಡಿಕೆ ಸಂಖ್ಯೆ	ವಿವರ	ಆಕ್ಷೇಪಣೆಗೆ ಸೂಚಿಸಿದ ಮೊತ್ತ (ರೂ.ಗಳಲ್ಲಿ)	ವಸೂಲಾತಿ ಸೂಚಿಸಿದ ಮ (ರೂ.ಗಳಲ್ಲ
		10. ವಿಶ್ವವಿದ್ಯಾನಿಲಯದ ಸ್ವೀಕೃತಿಗಳು		
1	10.1	ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಪರೀಕ್ಷಾ ಶುಲ್ಕಕ್ಕೆ ಬ್ಯಾಂಕಿನವರು ವಹಿವಾಟು ಶುಲ್ಕ ವಿಧಿಸುತ್ತಿರುವುದು	–	27
2	10.2	ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಬ್ಯಾಂಕ್ ಕಟ್ಟಡದಿಂದ ಬಾಡಿಗೆಯನ್ನು ಕಡಿಮೆ ವಸೂಲಿಸಿರುವುದು ಮತ್ತು ವಿದ್ಯುತ್ ಶುಲ್ಕವನ್ನು ವಸೂಲಿಸಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸದಿರುವುದು	32,400	2,16,
3	10.5	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2023–24ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ವಿವರಗಳ ಪರಿಶೀಲನೆ.	–	27,55,
4	10.7	ಆನ್‌ಲೈನ್ ಕಾರ್ಯಕ್ರಮಗಳ ಪ್ರವೇಶಾತಿಯಲ್ಲಿ ಕಡಿಮೆ ಶುಲ್ಕ ಸ್ವೀಕೃತಿಯಾಗಿರುವುದು.	–	13,(
5	10.8	ಮುಕ್ತ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಅಧ್ಯಯನ ಕೇಂದ್ರ/ಕಲಿಕಾ ಸಹಾಯ ಕೇಂದ್ರಗಳಿಗೆ ಸಂಬಂಧಿಸಿದ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವ ಕುರಿತು.	48,51,005	
6	10.10	ಇ.ಎಂ.ಡಿ/ಭದ್ರತಾ ಠೇವಣಿ ಖಾತೆಯಲ್ಲಿ ಉಳಿಸಿಕೊಂಡಿರುವ ವರ್ಗೀಕೃತ ತಃಖ್ತೆ ಹಾಜರುಪಡಿಸದಿರುವುದು ಹಾಗೂ ಉಳತಾಯ ಖಾತೆಯಲ್ಲಿ ಉಳಿಸಿಕೊಂಡಿರುವುದಕ್ಕೆ ಬಡ್ಡಿ ನಷ್ಟವಾಗಿರುವುದು.	2,25,82,808	9,71,(
		11. ವಿಶ್ವವಿದ್ಯಾನಿಲಯದನಿಧಿ		
7	11.4	ನಿಶ್ಚಿತ ಠೇವಣಿಗಳಲ್ಲಿ ಕಟಾವಣೆಯಾದ ಆದಾಯ ತೆರಿಗೆ ಟಿ.ಡಿ.ಎಸ್ ಮೊತ್ತವನ್ನು ಹಿಂಭರಿಕೆ ಮಾಡಿಕೊಳ್ಳದಿರುವುದು.	43,91,772	
8	11.5	ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಒಂದು ವರ್ಷಕ್ಕೂ ಹೆಚ್ಚಿನ ಅವಧಿಗೆ ಠೇವಣಿಗಳನ್ನು ಹೂಡಿಕೆ ಮಾಡಿ	–	17,43,

		ವಿಶ್ವವಿದ್ಯಾನಿಲಯಕ್ಕೆ ಬಡ್ಡಿ ನಷ್ಟ ಉಂಟುಮಾಡಿರುವುದು.		
9	11.6	ಠೇವಣಿಗಳು ಪಕ್ವವಾಗುವುದಕ್ಕೂ ಮೊದಲೇ ನಗದೀಕರಿಸಿ ವಿಶ್ವವಿದ್ಯಾನಿಲಯಕ್ಕೆ ಆದಾಯ ನಷ್ಟ ಉಂಟುಮಾಡಿರುವುದು.	–	13,51,197
10	11.7	ಕಡಿಮೆ ಬಡ್ಡಿ ದರಗಳಿಗೆ ಠೇವಣಿಗಳನ್ನು ನವೀಕರಿಸಿ ವಿಶ್ವವಿದ್ಯಾನಿಲಯಕ್ಕೆ ಆದಾಯ ನಷ್ಟ ಉಂಟುಮಾಡಿರುವ ಬಗ್ಗೆ.	–	9,07,138
11	11.9	ಅನಗತ್ಯವಾಗಿ ಸಂಕೀರ್ಣ ಬ್ಯಾಂಕ್ ಖಾತೆ ನಿರ್ವಹಣೆ ಹಾಗೂ ಈ ಖಾತೆಯಲ್ಲಿರುವ ಕಟಾವಣೆಗಳ ಮೊತ್ತ ಸಂಬಂಧಿಸಿದ ಲೆಕ್ಕಶೀರ್ಷಿಕೆಗೆ/ಸಕ್ಷಮ ಪ್ರಾಧಿಕಾರಕ್ಕೆ ಪಾವತಿಸದಿರುವುದು.	1,00,48,804	–
		14. ಫಲದಾಯಕವಲ್ಲದ/ಅಳತೆಮೀರಿದವೆಚ್ಚಗಳು		
12	14.1	2023–24 ನೇ ಸಾಲಿನಲ್ಲಿ ಡಿಜಿಟಲ್ ಮಾರ್ಕೆಟಿಂಗ್ ಸೇವೆಗಳನ್ನು ಪಡೆದು ಪಾವತಿಸಿರುವುದು.	58,55,574	–
		20. ಅಧಿಕಾರಿ ಮತ್ತು ಬೋಧಕ ವರ್ಗದವರ ವೇತನ ಮತ್ತು ಭತ್ಯೆಗಳು		
13	20.1	ವೃತ್ತಿ ಪ್ರಗತಿ ಯೋಜನೆಯಡಿ (ಸಿ.ಎ.ಎಸ್) ಪದೋನ್ನತಿ ನೀಡಿದ ಬೋಧಕರಿಗೆ ಆರ್ಥಿಕ ಸೌಲಭ್ಯವನ್ನು ವಿಶ್ವವಿದ್ಯಾನಿಲಯದ ಆದೇಶದ ದಿನಾಂಕದಿಂದ ಪಾವತಿಸದೇ, ಅರ್ಹತಾ ದಿನಾಂಕದಿಂದ ಪಾವತಿಸಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟುಮಾಡಿರುವುದು.	–	1,00,53,204
14	20.4	ಸಹಾಯಕ ಪ್ರಾಧ್ಯಾಪಕರಿಗೆ ವೇತನ ವ್ಯತ್ಯಾಸದ ಬಾಕಿ ಪಾವತಿಸುವಾಗ ಹೆಚ್ಚುವರಿಯಾಗಿ ಪಾವತಿಸಿರುವುದು.	–	45,738
15	20.5	ಸಹಾಯಕ ಪ್ರಾಧ್ಯಾಪಕರು ಮುಕ್ತ ವಿಶ್ವವಿದ್ಯಾನಿಲಯಕ್ಕೆ ನೇಮಕಗೊಳ್ಳುವ ಪೂರ್ವದಲ್ಲಿ ಅನ್ಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಸೇವಾವಧಿಯನ್ನು ಪರಿಗಣಿಸಿ ಸಿ.ಎ.ಎಸ್ ಪದೋನ್ನತಿ ಮತ್ತು ಆರ್ಥಿಕ ಸೌಲಭ್ಯಗಳನ್ನು ನೀಡಿರುವ ಪೂರಕ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.	–	59,778
16	20.6	ಬೋಧಕ ಮತ್ತು ಬೋಧಕೇತರರ ವೇತನ ಮತ್ತು ಪೂರಕ ವೇತನ ಬಿಲ್ಲುಗಳಲ್ಲಿ ಕಟಾಯಿಸಲಾದ ಸಂಬಂಧಪಟ್ಟ ಲೆಕ್ಕಶೀರ್ಷಿಕೆ ಜಮೆ ಮಾಡಿರುವ ಮೂಲ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.	6,27,41,388	–

17	20.7	ಡಿಸೆಂಬರ್–2023 ರ ಮಾಹೆಯ ವೇತನದಲ್ಲಿ ಕಟಾಯಿಸಲಾದ ಕಟಾವಣೆಗಳ ಜಮಾ ಸಂಬಂಧದ ಧನಾದೇಶವನ್ನು ಖಾತೆಗೆ ವಿಳಂಬವಾಗಿ ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು	60,57,004	-
18	20.8	ವೇತನ ಕಟಾವಣೆಯ "Recovery" ಕಾಲಂಗೆ ಸಂಬಂಧಿಸಿದ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.	18,36,406	–
19	20.14	ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿರುವ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿನ ನ್ಯೂನತೆಗಳು.	3,19,94,119	–
		21. ಬೋಧಕೇತರ ಸಿಬ್ಬಂದಿಗಳ ವೇತನ ಮತ್ತು ಭತ್ಯೆಗಳು		
20	21.1	ಕ.ರಾ.ಮು.ವಿ ದೃಶ್ಯ ವಿಭಾಗದಲ್ಲಿ ವಿಡೀಯೋ ಚಿತ್ರೀಕರಣಕ್ಕಾಗಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿರುವ ತಾತ್ಕಾಲಿಕ ನೌಕರರ ನೇಮಕಾತಿಯಲ್ಲಿನ ನ್ಯೂನತೆಗಳು.	–	37,28,414
21	21.2	ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಪಾಲಿಯಿರದ ಬೋಧಕೇತರ ಹುದ್ದೆಗಳಿಗೆ ತಾತ್ಕಾಲಿಕ ನೌಕರರುಗಳನ್ನು ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದು.	10,37,85,322	–
22	21.3	ವಿಲೀನಗೊಂಡ 75 ಬೋಧಕೇತರ ನೌಕರರಿಗೆ ವೈದ್ಯಕೀಯ ವೆಚ್ಚ ಮರು ಪಾವತಿ ಮಾಡಿರುವುದು.	–	5,08,298
23	21.4	ಮಾನ್ಯ ಕುಲಾಧಿಪತಿಗಳ ನಿರ್ದೇಶನಗಳಿಗೆ ವಿರುದ್ಧವಾಗಿ ತಾತ್ಕಾಲಿಕ/ಕಾಲಿಕ ವೇತನ ಶ್ರೇಣಿಯ ಪ್ರಾದೇಶಿಕ ನಿರ್ದೇಶಕರುಗಳ ವೇತನ ಹೆಚ್ಚಿಸಿ ಮುಂದುವರೆಸಿರುವುದು ಹಾಗೂ ಮಂಜೂರಾಗಿರದ ಹುದ್ದೆಗಳಿಗೆ ಹೊಸದಾಗಿ ನೇಮಕ ಮಾಡಿಕೊಂಡು ಪಾವತಿಸಿರುವುದು.	–	3,61,36,155
24	21.5	ಗ್ರೇಡೆಡ್ ಪೇ (ಕಾಲಿಕ ವೇತನ ಶ್ರೇಣಿ) ಪ್ರಾದೇಶಿಕ ನಿರ್ದೇಶಕರುಗಳಿಗೆ ಡಿ.ಎ. ಹಿಂಬಾಕಿ ಮೊತ್ತವನ್ನು ಪಾವತಿಸಿರುವುದು	–	98,74,702
25	21.6	ಹೈದ್ರಾಬಾದ್–ಕರ್ನಾಟಕ 371(ಜೆ) ಅಡಿ ನೇರ ನೇಮಕಾತಿಗೆ ಮೀಸಲಿಡಬೇಕಾದ ಹುದ್ದೆಗಳಿಗೆ ಸಾಮಾನ್ಯ ಅಭ್ಯರ್ಥಿಗಳಿಗೆ ಪದೋನ್ನತಿ ನೀಡಿರುವುದರಿಂದ ಹೆಚ್ಚುವರಿಯಾಗಿ ಪಾವತಿಸಿರುವ ವೇತನ ಭತ್ಯೆಗಳ ಮೊತ್ತ ವಸೂಲಿಸುವುದು.	–	8,24,010
26	21.7	ಎ.ವಿ.ನಿಲಯದಲ್ಲಿ ತಾತ್ಕಾಲಿಕವಾಗಿ ನೇಮಕವಾಗಿದ್ದ ನೌಕರರಲ್ಲಿ	–	7,51,51,177

		207 ಜನ ನೌಕರರ ಪದನಾಮ ಬದಲಾವಣೆ ಮಾಡಿ ಕಾಲಿಕ ವೇತನ ಶ್ರೇಣಿಯಲ್ಲಿ (Graded Pay) ಎಂದು ನೇಮಕಾತಿ ಆದೇಶ ನೀಡಿ ಪಾವತಿಸಿರುವುದು.		
27	21.8	ರಜೆ ವಂತಿಕೆ ಮತ್ತು ಪಿಂಚಣಿ ವಂತಿಕೆ ಜಮೆ ಸಂಬಂಧದ ಲೆಕ್ಕ ಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.	9,79,012	–
28	21.9	ಶ್ರೀ ಲೋಕೇಶ್ ಜಿ.ಎಸ್. (ತಾತ್ಕಾಲಿಕ) ಇವರನ್ನು ಕಾಲಿಕ ವೇತನ ಶ್ರೇಣಿಯಡಿ (Graded Pay) ಎಸ್ಟೇಟ್ ಆಫೀಸರ್ ಹುದ್ದೆಗೆ ನೇಮಕ ಮಾಡಿ ಇಂಜಿನಿಯರಿಂಗ್ ವಿಭಾಗಕ್ಕೆ ನಿಯೋಜಿಸಿರುವುದು.	–	12,05,667
29	21.10	ನೇರ ನೇಮಕಾತಿ ಹುದ್ದೆಗಳನ್ನು ಪದೋನ್ನತಿ ಮೂಲಕ ಭರ್ತಿ ಮಾಡಿರುವುದು.	–	7,46,145
30	21.11	ಶ್ರೀ ಮುನಿಸ್ವಾಮಿ, ದ್ವಿತೀಯ ದರ್ಜೆ ಗುಮಾಸ್ತರು ಇವರನ್ನು ನೇರ ನೇಮಕಾತಿ ಹುದ್ದೆಗೆದುರಾಗಿ ನಿಯಮಬಾಹಿರವಾಗಿ ಸಹಾಯಕ ನಿರ್ದೇಶಕರ ಹುದ್ದೆಗೆ ನೇಮಕಾತಿ ಮಾಡಿರುವುದು.	–	13,07,431
31	21.13	2023–24 ನೇ ಸಾಲಿನಲ್ಲಿ 71 ಮಂದಿ ಬೋಧಕೇತರ ಸಿಬ್ಬಂದಿಗಳಿಗೆ ಪರೀಕ್ಷಾತಾವಧಿ ಘೋಷಿಸಿರುವ ಮತ್ತು 10 ವರ್ಷಗಳ ಕಾಲಬದ್ಧ ಮುಂಬಡ್ತಿ ಮಂಜೂರು ಮಾಡಿ ಪಾವತಿಸಿರುವುದು.	–	4,01,09,693
		22. ಪ್ರಯಾಣ ಭತ್ಯೆಗಳು		
32	22.1	ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳ ವಿದೇಶ ಪ್ರಯಾಣದ ಸಂಬಂಧ ಹೋಟೆಲ್‌ನ ವಾಸ್ತವ್ಯದ ಮತ್ತು ದಿನಭತ್ಯೆ ಪಡೆದ ವೋಚರ್‌ಗಳನ್ನು ಹಾಗೂ ಸರ್ಕಾರದ ಮಂಜೂರಾತಿ ಪತ್ರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.	6,22,260	–
33	22.2	ಬೋಧಕೇತರ ವರ್ಗದವರಿಗೆ ಕೆ.ಪಿ.ಎಸ್.ಆರ್ ನಿಯಮವನ್ನು ಉಲ್ಲಂಘಿಸಿ ಪ್ರಯಾಣಭತ್ಯೆ ಹಾಗೂ ದಿನಭತ್ಯೆ ದರಗಳನ್ನು ಹೆಚ್ಚುವರಿಯಾಗಿ ಪಾವತಿಸಿರುವುದು.	–	11,56,734
		23. ಸಾದಿಲ್ವಾರು ವೆಚ್ಚಗಳು		
34	23.1	ಪಿ.ಹೆಚ್.ಡಿ. ಕಾರ್ಯಕ್ರಮದ ಪ್ರಶ್ನೆಪತ್ರಿಕೆ ಮುದ್ರಣದಲ್ಲಿ	–	2,87,901

		ಉಂಟಾಗಿರುವ ಅನಗತ್ಯ ವಿಳಂಬದಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟವಾಗಿರುವುದು.		
35	23.2	ಸ್ವಯಂ ಕಲಿಕಾ ಸಾಮಗ್ರಿಗಳನ್ನು (SLM) ಬಾಹ್ಯ ಬರಹಗಾರರಿಂದ ಹೆಚ್ಚುವರಿಯಾಗಿ ಸಿದ್ಧಪಾಠಗಳನ್ನು ಬರೆಸಿ ಪಾವತಿಸಿರುವುದು.	–	1,74,27,000
36	23.3	ಎಂ.ಎ ಶಿಕ್ಷಣಶಾಸ್ತ್ರದ ಪ್ರಥಮ ಮತ್ತು ದ್ವಿತೀಯ ಸೆಮಿಸ್ಟರ್‌ಗಳ ಸ್ವಯಂ-ಕಲಿಕಾ ಸಾಮಗ್ರಿಗಳ ಭಾಷಾಂತರಕ್ಕೆ ಹೆಚ್ಚುವರಿಯಾಗಿ ಪಾವತಿಸಿರುವುದು.	–	3,95,000
37	23.4	ಮೆ: ವೈ.ಎಸ್. ಹೈಟೆಕ್ ಸೆಕ್ಯೂರ್ ಪ್ರಿಂಟ್ (ಪ್ರೈ) ಲಿಮಿಟೆಡ್, ಹೈದಾರಾಬಾದ್ ಹಾಗೂ ಪ್ರಿಂಟೆಕ್ ಸಿಸ್ಟಮ್ಸ್, ಹೈದಾರಾಬಾದ್ ರವರೊಂದಿಗೆ ಪ್ರಶ್ನೆಪತ್ರಿಕೆ ಹಾಗೂ ಒ.ಎಮ್.ಆರ್ ಗಳ ಮುದ್ರಣದ ಒಂದೇ ಕಾರ್ಯಕ್ಕೆ ಪ್ರತ್ಯೇಕ ಕರಾರುಗಳನ್ನು ಮಾಡಿಕೊಂಡಿರುವುದು.	17,30,587	5,65,036
38	23.6	ಪದವಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ಮುದ್ರಣಕ್ಕೆ ಮಾಡಿಕೊಂಡಿರುವ ಒಪ್ಪಂದದ ಅನುಬಂಧಗಳಲ್ಲಿರುವ ವಿಶೇಷಣಗಳಿಗೆ ದರ ನಿಗಧಿ ಪಡಿಸುವಾಗ ಉಲ್ಲೇಖಿಸಿರುವ ಯುಕ್ತೋಚಿತ ಮಾನದಂಡಗಳನ್ನು ಅನುಸರಿಸದೆ ಹೆಚ್ಚವರಿಯಾಗಿ ಪಾವತಿಸಿರುವುದು.	–	25,51,090
39	23.7	ಪರೀಕ್ಷಾಂಗ ವಿಭಾಗದಿಂದ ವಿವಿಧ ಕೋರ್ಸಗಳ ಪ್ರಶ್ನೆಪತ್ರಿಕೆ ಹಾಗೂ ಒ.ಎಮ್.ಆರ್ ಮುದ್ರಣಕ್ಕೆ ಸಂಬಂಧಿಸಿದಂತೆ ಮೆ: ವೈ.ಎಸ್. ಹೈಟೆಕ್ ಸೆಕ್ಯೂರ್ ಪ್ರಿಂಟ್ (ಪ್ರೈ) ಲಿಮಿಟೆಡ್, ಹೈದಾರಾಬಾದ್ ರವರಿಗೆ ಹೆಚ್ಚವರಿಯಾಗಿ ಪಾವತಿಸಿರುವುದು.	–	36,18,811
40	23.8	ಟೆಂಡರ್ ಆಹ್ವಾನಿಸದೇ ದರಪಟ್ಟಿ ಮೂಲಕ ಸರಕು ಹಾಗೂ ಸೇವೆಯನ್ನು ಪಡೆದು ಪಾವತಿಸಿರುವುದು.	12,94,721	–
41	23.9	ಇಲಾಖಾ ಮುಖ್ಯಸ್ಥರಿಗೆ ನಿಗಧಿಪಡಿಸಿರುವ ಆರ್ಥಿಕ ಮಿತಿಯನ್ನು ಮೀರಿ ವಿಶ್ವವಿದ್ಯಾನಿಲಯಕ್ಕೆ ಹೊಸ ವಾಹನಗಳನ್ನು ಖರೀದಿಸಿರುವುದು.	37,95,223	–
42	23.10	ಸರ್ಕಾರದ ಆದೇಶ ಉಲ್ಲಂಘಿಸಿ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ 150 ಗಣಕಯಂತ್ರಗಳನ್ನು ಖರೀದಿಸಿರುವುದು.	1,63,91,250	–

43	23.11	ಪ್ರಾದೇಶಿಕ ಕೇಂದ್ರ ಕಟ್ಟಡಗಳಿಗೆ ಪಿ.ಡಬ್ಲ್ಯೂ.ಡಿ ಇಂಜಿನಿಯರ್‌ರವರಿಂದ ಕಟ್ಟಡವನ್ನು ಮೌಲ್ಯಮಾಪನ ಮಾಡಿಸಿ ಬಾಡಿಗೆ ದರ ನಿಗದಿಪಡಿಸದೆ ಬಾಡಿಗೆ ಪಾವತಿಸಿರುವುದು.	25,35,779	–
44	23.13	ವಿಶ್ವವಿದ್ಯಾನಿಲಯದಲ್ಲಿ Digital Academic Platform ಸೇವೆ ಪಡೆದು ಪಾವತಿಸಿರುವುದು.	**2,46,84,548**	–
45	23.14	ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೌಕರರ **2017** ರಿಂದ **2022** ರವರೆಗೆ ಅವಧಿಯ ಇಎಸ್‌ಐ ವಂತಿಗೆ ಮೊತ್ತಕ್ಕೆ ಬಡ್ಡಿ ಕಾರ್ಮಿಕರ ರಾಜ್ಯ ವಿಮಾ ನಿಗಮ, ಮೈಸೂರು ಇವರಿಗೆ ಪಾವತಿಸಿರುವುದು.	–	**14,69,492**
46	23.15	ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೂಲಕ ಜಾಹೀರಾತು ಪ್ರಕಟಣೆ ಮಾಡದೆ ಖಾಸಗಿ ಸಂಸ್ಥೆಗಳಿಂದ ಪ್ರಕಟಣೆ ಮಾಡಿರುವುದು.	8,09,552	–
47	23.16	ಬಾಹ್ಯ ಪ್ರಾಧ್ಯಾಪಕರುಗಳನ್ನು ಬಳಸಿ ಆನ್ ಲೈನ್ ಸಂಪರ್ಕ/ಸಮಾಲೋಚನಾ ಕಾರ್ಯಕ್ರಮಗಳನ್ನು ಆಯೋಜಿಸಿ ಸಂಭಾವನೆ ಪಾವತಿಸಿರುವುದು.	**74,67,133**	–
48	23.17	ಸಂಕೀರ್ಣ ಬ್ಯಾಂಕ್ ಖಾತೆಯಿಂದ (ಖಾತೆ ಸಂಖ್ಯೆ: 54035421315) ಡ್ರಾ ಮಾಡಲಾಗಿರುವ ಮೊತ್ತ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸದಿರುವುದು.	11,62,881	–
49	23.18	ಸರ್ಕಾರದಿಂದ ಅನುಮೋದನೆಯಾಗದ ವಿಶ್ವವಿದ್ಯಾನಿಲಯ ವ್ಯಾಜ್ಯಗಳ ಮಾರ್ಗಸೂಚಿಗಳು–2019ರನ್ವಯ ಚಾರ್ಟರ್ಡ್ ಅಕೌಂಟೆಂಟ್‌ರವರ ಸೇವೆಯನ್ನು ಪಡೆದು ಪಾವತಿಸಿರುವುದು.	7,95,600	–
50	23.19	ಟೆಂಡರ್ ಪ್ರಕ್ರಿಯೆ ನಡೆಸದೆ ಮೌಲ್ಯದ ರಾಸಾಯನಿಕ ವಸ್ತುಗಳನ್ನು ಖರೀದಿಸಿರುವುದು.	68,31,984	–
51	23.20	ವಾಹನಗಳಿಗೆ ಹೊಸ ಟೈಯರ್ ಖರೀದಿ ಪೂರ್ವದಲ್ಲಿ ಮತ್ತು ನಂತರದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ದೃಢೀಕರಣ ಪತ್ರ ಪಡೆಯದೆ ಪಾವತಿಸಿರುವುದು.	9,92,206	–
52	23.21	ವೈದ್ಯಕೀಯ ವೆಚ್ಚ ಮರುಪಾವತಿಸುವಾಗ ಮಾರುಕಟ್ಟೆ ದರಕ್ಕಿಂತ ಹೆಚ್ಚುವರಿಯಾಗಿ ಪಾವತಿಸಿರುವುದು.	–	8,154
53	23.22	ಪ್ರಶ್ನೆಪತ್ರಿಕೆ ಮುದ್ರಕರಿಗೆ ಮುದ್ರಣ ವೆಚ್ಚ ಪಾವತಿಯಲ್ಲಿ ಎಂ.ಓ.ಯುನ ಅನುಬಂಧ 2 ರ ಕ್ರ.ಸಂ. 15ನ್ನು ಉಲ್ಲಂಘಿಸಿ	–	27,92,302

		ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿರುವುದು.		
54	23.23	ವಿಶ್ವವಿದ್ಯಾನಿಲಯದಲ್ಲಿ ಸರ್ಕಾರವು ಒದಗಿಸಿರುವ UUCMS ತಂತ್ರಾಂಶವನ್ನು ಬಳಸಿಕೊಳ್ಳದೇ ಮೆ. ಕಯೋನಿಕ್ಸ್, ಬೆಂಗಳೂರು ಇವರಿಂದ ಪ್ರವೇಶಾತಿಯಿಂದ ಪರೀಕ್ಷಾವರೆಗಿನ ಕಾರ್ಯಗಳಿಗೆ ತಂತ್ರಾಂಶವನ್ನು ಸಿದ್ದಪಡಿಸಿಕೊಂಡು ನಿರ್ವಹಣಾ ವೆಚ್ಚ ಪಾವತಿಸಿರುವುದು.	47,61,040	–
		24. ಪರೀಕ್ಷಕರ ಸಂಭಾವನೆ ಪಾವತಿಗಳು		
55	24.1	ಪರೀಕ್ಷಾ ಕಾರ್ಯ ಹಾಗೂ ಶೈಕ್ಷಣಿಕ ಕಾರ್ಯ ನಿರ್ವಹಿಸಿದ ಬೋಧಕ ವರ್ಗದವರಿಗೆ ನಿಯಮ ಮೀರಿ ಹೆಚ್ಚುವರಿ ಪ್ರಯಾಣ ಭತ್ಯೆ, ದಿನಭತ್ಯೆ, ಸ್ಥಳೀಯ ಭತ್ಯೆ ಪಾವತಿಸಿರುವುದು.	–	26,41,943
56	24.2	ಪರೀಕ್ಷಾ ಕಾರ್ಯ ಹಾಗೂ ಶೈಕ್ಷಣಿಕ ಕಾರ್ಯ ನಿರ್ವಹಿಸಿದ ವಿಶ್ವವಿದ್ಯಾನಿಲಯದ ಆಂತರಿಕ ಬೋಧಕ ವರ್ಗದವರಿಗೆ ನಿಯಮ ಮೀರಿ ಪರೀಕ್ಷಾ ಕರ್ತವ್ಯ ಸಂಬಂಧಿತ ಸಂಭಾವನೆ ಪಾವತಿಸಿರುವುದು.	–	32,59,772
57	24.3	ಪರೀಕ್ಷಾ ಸಾಮಗ್ರಿಗಳ ಸಾಗಾಣಿಕೆಗಾಗಿ ನಿಯೋಜಿಸಲಾದ ಸಿಬ್ಬಂದಿಗಳಿಗೆ ಕ.ನಾ.ಸೇ.ನಿಯಮಗಳನ್ನು ಮೀರಿ ಹೆಚ್ಚುವರಿಯಾಗಿ ಪಾವತಿಸಿರುವುದು.	–	1,06,275
58	24.4	2023–24 ನೇ ಸಾಲಿನಲ್ಲಿ ಪರೀಕ್ಷಾ ನಿಧಿ ಖಾತೆಯಿಂದ ಸಂಭಾವನೆ ಪಾವತಿಯಲ್ಲಿ ಆದಾಯ ತೆರಿಗೆ ಕಟಾವಣೆ ಮಾಡದಿರುವುದು.	–	51,720
		25. ಕಾಮಗಾರಿ ವೆಚ್ಚಗಳು		
59	25.4	ಪ್ಯಾಕೇಜ್ ಕಾಮಗಾರಿಯ ಬಿಲ್ಲುಗಳಲ್ಲಿ ಕಡಿಮೆ ರಾಜಧನವನ್ನು ಕಟಾಯಿಸಿರುವುದು.	–	14,403
60	25.5	ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲ್ಯುಡಿ 423 ಎಫ್‌ಸಿ–1 2018, ಬೆಂಗಳೂರು, ದಿನಾಂಕ:24.09.2018 ಮತ್ತು ಸಂಖ್ಯೆ ಆಇ 195 ವೆಚ್ಚ–12/11 ಬೆಂಗಳೂರು, ದಿನಾಂಕ: 30.03.2011ರ ನಿಯಮಗಳನುಸಾರ ತಾಂತ್ರಿಕ ಮಂಜೂರಾತಿ ಪಡೆಯದಿರುವುದು ಹಾಗೂ ಟೆಂಡರ್ ಕರೆಯಲು ನಿರ್ದಿಷ್ಟಪಡಿಸಿದ ಕಾಲಾವಧಿಯನ್ನು ಅನುಸರಿಸದೆ ಪಾವತಿಸಿರುವುದು.	10,89,34,839	–

61	25.6	ಪ್ಯಾಕೇಜ್ ಕಾಮಗಾರಿಯ ಬಿಲ್ಲುಗಳಲ್ಲಿ ಹೆಚ್ಚುವರಿ ಪರಿಮಾಣ (ವರ್ಕ್ ಸ್ಲೀಪ್) ಹಾಗೂ ಹೆಚ್ಚುವರಿ ಅಂಶ (ಇಎಐಆರ್ಎಲ್)ಗಳನ್ನು ನಿರ್ವಹಿಸಿರುವುದು.	11,61,54,000	–
62	25.7	ಪ್ಯಾಕೇಜ್ ಕಾಮಗಾರಿಗೆ ಸಂಬಂಧಿಸಿದಂತೆ ಟೆಂಡರ್ ಪ್ರೀಮಿಯಂಗಿಂತ ಹೆಚ್ಚುವರಿಯಾಗಿ ವೆಚ್ಚ ಭರಿಸಿರುವ ಹಾಗೂ 2023–24ನೇ ಸಾಲಿನವರೆಗೂ ಯಾವುದೇ ಆರ್ಥಿಕ ಪ್ರಗತಿಯನ್ನು ಸಾಧಿಸದಿರುವುದು.	1,61,75,060	–
63	25.8	2021–22ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ.25.3 ಮತ್ತು 2022–23ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ.25.5ಕ್ಕೆ ಅನುಸರಣಾ ವರದಿಯೊಂದಿಗೆ ಪೂರಕ ದಾಖಲಾತಿಗಳನ್ನು ಹಾಜರುಪಡಿಸದಿರುವುದು.	15,07,19,817	–
		30. ಇತರೆ ಮುಂಗಡಗಳು		
64	30.1	ಕಟಾಯಿಸಲಾದ ಆದಾಯ ತೆರಿಗೆಯ ಜಮೆ ಸಂಬಂಧದ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.	7,600	–
		32. ವಿದ್ಯಾರ್ಥಿ ವೇತನ ಮತ್ತು ಬಹುಮಾನಗಳ ದತ್ತಿಗಳು		
65	32.2	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಅನುಧಾನದಿಂದ ಅರ್ಜಿತವಾಗಿರುವ ಬಡ್ಡಿ ಮೊತ್ತವನ್ನು ಸರ್ಕಾರಕ್ಕೆ ಹಿಂದಿರುಗಿಸದೆ ಖಾತೆಯಲ್ಲಿ ಉಳಿಸಿಕೊಂಡಿರುವುದು.	1,70,30,747	–
	32.2 (ಆ)	ವಿದ್ಯಾರ್ಥಿಗಳಿಗೆ ವಿತರಿಸದೆ ಉಳಿದಿರುವ ಬಾಕಿ ಮೊತ್ತವನ್ನು ಪಾವತಿಸಲು ಕ್ರಮವಹಿಸದಿರವುದು.	2,90,70,226	–
		34. ಪಿಂಚಣಿ ಸೌಲಭ್ಯಗಳು		
66	34.1	ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್.ಪಿ.ಎಸ್) ಖಾತೆಗೆ ಜಮೆ ಮಾಡಬೇಕಿರುವ ಮೊತ್ತವನ್ನು ವಿಶ್ವವಿದ್ಯಾನಿಲಯದವರು ಉಳಿಸಿಕೊಂಡಿರುವುದು.	1,67,68,777	–
67	34.2	ನೌಕರರ ಪ್ರಾನ್ ಖಾತೆಯಲ್ಲಿರುವ ಮೊತ್ತ ವಿಶ್ವವಿದ್ಯಾನಿಲಯಕ್ಕೆ ಹಿಂಪಡೆಯದೇ ಕುಟುಂಬ ಪಿಂಚಣಿ ಸೌಲಭ್ಯಗಳನ್ನು ಮಂಜೂರು ಮಾಡಿರುವುದು.	41,69,511	–

68	34.3	2023–24ನೇ ಸಾಲಿನಲ್ಲಿ ಶ್ರೀ ಸೋಮಣ್ಣ ಆರ್. ನಿವೃತ್ತ ಸೇವಕರವರಿಗೆ ಉಪಧನ ಪಾವತಿ ಕಾಯ್ದೆಯಡಿ ಉಪಧನ ಮತ್ತು ಗಳಿಕೆ ರಜೆ ನಗದೀಕರಣ ಪಾವತಿಸಿರುವ ಮೊತ್ತ ವಸೂಲಿಸುವ ಬಗ್ಗೆ.	–	4,66,[illegible]4
69	34.4	ಶ್ರೀ ವಲೀಯುಲ್ಲಾ ಸಾಹೇಬ್ ಆರ್.ಪಿ., ನಿವೃತ್ತ ಸಹಾಯಕ ಕುಲಸಚಿವ ಇವರ ಖಾಯಂ ಪೂರ್ವ ಅವಧಿಯಲ್ಲಿನ ಸೇವೆಯನ್ನು ಪರಿಗಣಿಸಿ ಹಳೆಯ ಪಿಂಚಣಿ ಯೋಜನೆಯಡಿ ನಿವೃತ್ತಿ ವೇತನ ಸೌಲಭ್ಯಗಳನ್ನು ಪಾವತಿಸಿರುವುದು.	15,55,002	–
ಒಟ್ಟು ಮೊತ್ತ			**78,96,15,957**	**22,45,48,262**

ಅಪರ ನಿರ್ದೇಶಕರು (ಪ್ರ)

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,

ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಮೈಸೂರು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ಲೆಕ್ಕಪರಿಶೋಧನಾ ವರದಿ

ಸಾಮಾನ್ಯ ಮಾಹಿತಿ:

1	**ಲೆಕ್ಕಪರಿಶೋಧನಾ ಸಂಸ್ಥೆಯ ಹೆಸರು**	**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ**
2	**ಲೆಕ್ಕಪರಿಶೋಧನಾ ವರ್ಷ**	**2023–24**
3	**ಲೆಕ್ಕಪರಿಶೋಧಕರ ಹೆಸರುಗಳು**	**ಲೆಕ್ಕ ಪರಿಶೋಧನಾಧಿಕಾರಿ** 1.ಪ್ರೀತಿ.ಪ್ರ.ಮಗ್ಗಾವಿ 2.ಸುರೇಶ್ ಕುಮಾರ್ ಎಂ 3. ರವಿದಾಸ್ ಬಿ.ಆರ್ 4. ಸುಧಾಕರ್ ಎನ್.ಬಿ 5. ಶೈಲಜಾಎಸ್.ಎಲ್ 6. ಚಂದ್ರಪ್ರಸಾದ್ **ಲೆಕ್ಕಾಧೀಕ್ಷಕರು** 1. ಬಾಲರಾಜ್ ಎನ್ **ಲೆಕ್ಕ ಸಹಾಯಕರು** 1. ದಿವ್ಯ ಎನ್ ಸಹಾಯಕ ನಿಯಂತ್ರಕರು (ತರಬೇತಿ) 1. ಮಧು ಎ.ಎಸ್ 2. ನಂದಿಶ್ ಹೆಚ್.ಎಸ್ 3. ಮಹೇಶ್ ಎ 4. ಅಭೀಷೇಕ್ ಜಿ 5. ವಿಜಯಕುಮಾರ್ 6. ಮಹೇಂದ್ರ 7. ಚೇತನ್ ಹೆಚ್.ಕೆ
4	**ಲೆಕ್ಕಪರಿಶೋಧನೆ ಪ್ರಾರಂಭದ ದಿನಾಂಕ**	28–10–2024
5	**ಲೆಕ್ಕಪರಿಶೋಧನೆ ಮುಕ್ತಾಯದ ದಿನಾಂಕ**	28–02–2025
6	**ಲೆಕ್ಕಪರಿಶೋಧನೆಗೆ ತೆಗೆದುಕೊಂಡ ಮಾನವದಿನಗಳು**	491
7	**ಲೆಕ್ಕಪರಿಶೋಧನಾ ಕರಡು ವರದಿಯನ್ನು ಪುನರ್ ಪರಿಶೀಲಿಸಿದ ಅಧಿಕಾರಿಗಳ ಹೆಸರು ಮತ್ತು ಪದನಾಮ**	ಶ್ರೀ ನಾಗರಾಜ ಶೇರಗಾರ್ ಅಪರ ನಿರ್ದೇಶಕರು
8	**ಲೆಕ್ಕಪರಿಶೋಧನಾ ಕರಡು ವರದಿಯ ಪುನರ್ ಪರಿಶೀಲನೆ**	05.05.2025

ಆಡಿಟ್ ಪ್ರಮಾಣಪತ್ರ

I. ನಾನು ಇದರೊಡನೆ ಲಗತ್ತಿಸಿರುವ 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ವೀಕೃತಿ ಮತ್ತು ಪಾವತಿ ಲೆಕ್ಕಗಳ ಲೆಕ್ಕಪರಿಶೋಧನೆಯನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ–1992ರಲ್ಲಿನ ಕಲಂ–27ರ ಅನುಸಾರ ಕೈಗೊಂಡಿರುತ್ತೇನೆ. ಈ ಲೆಕ್ಕಗಳನ್ನು ಸಿದ್ಧಪಡಿಸುವ ಜವಾಬ್ದಾರಿಯು ವಿಶ್ವವಿದ್ಯಾನಿಲಯದ್ದಾಗಿದ್ದು, ನಾವು ಕೈಗೊಂಡ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಈ ಲೆಕ್ಕಗಳ ಮೇಲೆ ಅಭಿಪ್ರಾಯ ವ್ಯಕ್ತಪಡಿಸುವುದಷ್ಟೇ ನನ್ನ ಜವಾಬ್ದಾರಿಯಾಗಿರುತ್ತದೆ.

II. ನಾನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಆಡಿಟ್ ಕೈಪಿಡಿಯ ಮಾರ್ಗಸೂಚಿಗಳ ಅನುಸಾರ ಲೆಕ್ಕಪರಿಶೋಧನೆಯನ್ನು ಕೈಗೊಂಡಿರುತ್ತೇನೆ. ಈ ಮಾರ್ಗಸೂಚಿಗಳ ಅನ್ವಯ ವಿಶ್ವವಿದ್ಯಾನಿಲಯದ ಹಣಕಾಸು ತಃಖ್ತೆಗಳು ಭೌತಿಕ ತಪ್ಪುಗಳಿಂದ ಮುಕ್ತವಾಗಿರುವುದರ ಬಗ್ಗೆ ವಿಶ್ವವಿದ್ಯಾನಿಲಯದಿಂದ ಸಮಂಜಸವಾದ ಖಾತರಿ ಪಡೆದುಕೊಳ್ಳಲು ಪ್ರಯತ್ನಿಸಿರುತ್ತೇನೆ. ಲೆಕ್ಕಪರಿಶೋಧನೆಯು ಹಣಕಾಸು ತಃಖ್ತೆಯಲ್ಲಿ ಬಹಿರಂಗಪಡಿಸಿದ ಮೊತ್ತಗಳಿಗೆ ಬೆಂಬಲವಾಗಿ ಸಾಕ್ಷ್ಯಾಧಾರಗಳನ್ನು ಪರಿಶೀಲಿಸುವುದನ್ನು ಸಹ ಒಳಗೊಂಡಿರುತ್ತದೆ. ಸಂಸ್ಥೆಯು ಅನುಸರಿಸಿದ ಲೆಕ್ಕಗಳ ತತ್ವಗಳು ಮತ್ತು ಮಾಡಿರುವ ಮಹತ್ವದ ಅಂದಾಜುಗಳಲ್ಲದೆ ಒಟ್ಟಾರೆ ಲೆಕ್ಕಪತ್ರಗಳ ಮಂಡನೆಯ ಮೌಲ್ಯಮಾಪನ ಮಾಡುವುದನ್ನೂ ಲೆಕ್ಕಪರಿಶೋಧನೆಯು ಒಳಗೊಂಡಿರುತ್ತದೆ. ನಾವು ಮಾಡಿರುವ ಲೆಕ್ಕಪರಿಶೋಧನೆಯು ನನ್ನ ಅಭಿಪ್ರಾಯಕ್ಕೆ ಸಮರ್ಥನೀಯವಾದ ಆಧಾರವನ್ನು ಒದಗಿಸುತ್ತದೆ ಎಂದು ನಾನು ನಂಬುತ್ತೇನೆ.

III. ನನಗೆ ಅಗತ್ಯವಿರುವ ಮತ್ತು ಪಡೆಯಲಾದ ಮಾಹಿತಿಗಳು ಹಾಗೂ ವಿವರಣೆಗಳು, ಲೆಕ್ಕಪತ್ರಗಳ ಪರೀಕ್ಷಾ ಪರಿಶೀಲನೆಯ ಫಲಿತಾಂಶ ಮತ್ತು ನೀಡಲಾದ ವಿವರಣೆಗಳನ್ನು ಪರಿಗಣಿಸಿ ನನ್ನ ಅತ್ಯುತ್ತಮ ಅರಿವಿನ ಮೇರೆಗೆ, ಇದರೊಡನೆ ಲಗತ್ತಿಸಲಾಗಿರುವ ವರದಿಯಲ್ಲಿ ಸ್ಪಷ್ಟಪಡಿಸಿರುವಂತೆ ಲೆಕ್ಕಪತ್ರ ದಾಖಲೆಗಳಲ್ಲಿ ಭೌತಿಕವಾಗಿ ಮತ್ತು ವ್ಯಾಪಕವಾಗಿ ತಪ್ಪು ಹೇಳಿಕೆಗಳಿರುವ ಕಾರಣ ಮುಕ್ತ ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ಸ್ವೀಕೃತಿ ಮತ್ತು ಪಾವತಿ ಲೆಕ್ಕಗಳು ವಿಶ್ವವಿದ್ಯಾನಿಲಯದ ಸ್ವೀಕೃತಿಗಳು ಮತ್ತು ಪಾವತಿಗಳ ಒಂದು ನಿಜವಾದ ಮತ್ತು ನ್ಯಾಯೋಚಿತವಾದ ಚಿತ್ರಣವನ್ನು ನೀಡುವುದಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ಮೈಸೂರು

ದಿನಾಂಕ:

ಅಪರ ನಿರ್ದೇಶಕರು (ಪ್ರ)
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,
ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಮೈಸೂರು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ಲೆಕ್ಕಪತ್ರ ಪ್ರಮಾಣೀಕರಣಕ್ಕೆ ಲಗತ್ತಿಸಿದ ಲೆಕ್ಕಪರಿಶೋಧನಾ ವರದಿ

ಪ್ರಸ್ತಾವನೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಾಯ್ದೆ–1992ರ ಅನ್ವಯ ಕರ್ನಾಟಕ ರಾಜ್ಯ ಸರ್ಕಾರದಿಂದ 12ನೇ ಫೆಬ್ರವರಿ 1996 ರಂದು ಅಂಗೀಕಾರ ಪಡೆದು, 1ನೇ ಜೂನ್ 1996 ರಿಂದ ಅಸ್ತಿತ್ವಕ್ಕೆ ಬಂದಿರುತ್ತದೆ. ಮುಕ್ತ ವಿಶ್ವವಿದ್ಯಾನಿಲಯವು 46 ಪ್ರಮುಖ ವಿಭಾಗಗಳನ್ನು ಹೊಂದಿದ್ದು, ಸಂಶೋಧನಾ ಚಟುವಟಿಕೆಗಳ ಜೊತೆಗೆ ಒಟ್ಟು 77 ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಮತ್ತು ಡಿಪ್ಲೊಮಾ ಪ್ರಮಾಣ ಪತ್ರ ಕೋರ್ಸುಗಳನ್ನು ನಡೆಸುತ್ತಿದೆ. ರಾಜ್ಯದಲ್ಲಿ ಸಾಂಪ್ರದಾಯಿಕ ಶಿಕ್ಷಣ ಪಡೆಯಲು ಸಾಧ್ಯವಾಗದಿರುವವರಿಗೆ ಮುಕ್ತ ವಿಶ್ವವಿದ್ಯಾನಿಲಯ ಮತ್ತು ದೂರ ಸಂಪರ್ಕ ಶಿಕ್ಷಣದ ಮೂಲಕ ಪರ್ಯಾಯ ವಿಧಾನಗಳಲ್ಲಿ ಶಿಕ್ಷಣ ಪಡೆಯಲು ಉತ್ತೇಜಿಸಲು ಮತ್ತು ಅಂತಹ ಪದ್ಧತಿಗಳ ಗುಣಮಟ್ಟದ ಸಮನ್ವಯ ಮತ್ತು ನಿರ್ವಹಣೆಯ ದೃಷ್ಟಿಯಿಂದ ರಾಜ್ಯ ಮಟ್ಟದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಲಾಗಿರುತ್ತದೆ.

1. ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಂಡಿರುವ ಲೆಕ್ಕಪದ್ಧತಿ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಾಯ್ದೆ–1992ರ ಕಲಂ–27(1) ರ ಅನ್ವಯ ವಿಶ್ವವಿದ್ಯಾನಿಲಯವು ವ್ಯವಸ್ಥಾಪನಾ ಮಂಡಳಿಯ ನಿರ್ದೇಶನಗಳಡಿ ವಾರ್ಷಿಕ ಲೆಕ್ಕಪತ್ರಗಳು ಮತ್ತು ಸಮತೋಲನ ಪಟ್ಟಿಯನ್ನು(Balance Sheet) ತಯಾರಿಸಿ ಲೆಕ್ಕಪರಿಶೋಧನೆಗೆ ನೀಡಬೇಕಾಗಿರುತ್ತದೆ. ಲೆಕ್ಕಪತ್ರ ನಿರ್ವಹಣೆಯನ್ನು ಏಕ ನಮೂದು ಅಥವಾ ಜೋಡಿ ನಮೂದು ಎಂದು ನಿರ್ದಿಷ್ಟ ಬಗೆಯಲ್ಲಿ ನಿರ್ವಹಿಸುವ ಬಗ್ಗೆ ಯಾವುದೇ ಪರಿನಿಯಮವನ್ನು ವಿಶ್ವವಿದ್ಯಾನಿಲಯವು ರೂಪಿಸಿಕೊಂಡಿರುವುದಿಲ್ಲ. ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಂಡಿರುವ ಲೆಕ್ಕಪದ್ಧತಿಯ ವಿವರಗಳು ಹಾಗೂ ಸಮತೋಲನ ಪಟ್ಟಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂ+ಖ್ಯೆ: ಸಂಖ್ಯೆ:63/16.12.2024 ಮತ್ತು 160/03.01.2025ಕ್ಕೆ ಮುಕ್ತ ವಿಶ್ವವಿದ್ಯಾನಿಲಯದವರು ಲೆಕ್ಕಪರಿಶೋಧನಾ ಸಮಯದಲ್ಲಿ ನಿಗಧಿತ ನಮೂನೆಯಲ್ಲಿ ಸಿದ್ಧಪಡಿಸಿರುವ ವಾರ್ಷಿಕ ಲೆಕ್ಕಪತ್ರಗಳನ್ನು ಮತ್ತು ಹಣಕಾಸು ಸಮಿತಿ ಸಭೆ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದಿರುವ ಪ್ರತಿಯನ್ನು ಸಲ್ಲಿಸಲಾಗಿದೆ ಎಂದು ಉತ್ತರಿಸಿರುತ್ತಾರೆ. ಆದಾಯ ಮತ್ತು ವೆಚ್ಚದ ತಃಖ್ತೆ ಹಾಗೂ ಸಮತೋಲನ ಪಟ್ಟಿಯನ್ನು ಹಾಜರುಪಡಿಸಿರುವುದಿಲ್ಲ.

ಲೆಕ್ಕಪತ್ರ ನಮೂನೆಗಳು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಏಕನಮೂದು ಅಥವಾ ಜೋಡಿ ನಮೂದುಗಳಂತಹ ಯಾವುದೇ ಬಗೆಯ ನಿರ್ದಿಷ್ಟ ಲೆಕ್ಕಪದ್ಧತಿಯನ್ನು ಅನುಸರಿಸುತ್ತಿರುವುದು ಕಂಡುಬಂದಿರುವುದಿಲ್ಲ. ಅಲ್ಲದೆ ಲೆಕ್ಕಪತ್ರ ನಿರ್ವಹಣೆಗೆ ಯಾವುದೇ ನಮೂನೆಗಳನ್ನು ವಿನ್ಯಾಸಗೊಳಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು

ಅಳವಡಿಸಿಕೊಂಡಿರುವುದಿಲ್ಲ. ಮುಕ್ತ ವಿಶ್ವವಿದ್ಯಾನಿಲಯವು ನಿರ್ವಹಿಸುತ್ತಿರುವ ಯೋಜನೆವಾರು ಬ್ಯಾಂಕ್ ಖಾತೆಗಳಲ್ಲಿನ ಸ್ವೀಕೃತಿ ಮತ್ತು ಪಾವತಿಗಳನ್ನಾಧರಿಸಿ ಜಮೆ ಮತ್ತು ಪಾವತಿ ತಃಖ್ತೆಗಳನ್ನು ತಯಾರಿಸಿ, ಅವುಗಳನ್ನು ಕ್ರೋಢೀಕರಿಸಿ ವಾರ್ಷಿಕ ಲೆಕ್ಕ ಪತ್ರಗಳೆಂದು ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿರುತ್ತದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧಿನಿಯಮ, 1992ರ ಕಲಂ–27ರ ಅನುಸಾರ ಪ್ರತೀ ವರ್ಷ ಜೂನ್ ಅಂತ್ಯದೊಳಗೆ ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಬೇಕಾಗಿರುವುದರಿಂದ ಈ ಅವಧಿಗೆ ಮುಂಚಿತವಾಗಿ ವ್ಯವಸ್ಥಾಪನಾ ಮಂಡಳಿಯಿಂದ ಅನುಮೋದಿತವಾದ ವಾರ್ಷಿಕ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನಾ ಕಛೇರಿಗೆ ಕಳುಹಿಸಬೇಕಾಗಿರುತ್ತದೆ. ಆದರೆ ವಿಶ್ವವಿದ್ಯಾನಿಲಯದವರು ಬ್ಯಾಂಕ್ ಖಾತೆಗಳಲ್ಲಿನ ಸ್ವೀಕೃತಿ ಮತ್ತು ಪಾವತಿಗಳನ್ನಾಧರಿಸಿ ಜಮೆ ಮತ್ತು ಪಾವತಿ ತಃಖ್ತೆಗಳಿರುವ ವಾರ್ಷಿಕ ಲೆಕ್ಕಗಳನ್ನು ತಯಾರಿಸಿ ದಿನಾಂಕ: 27–09–2024ರಂದು ಲೆಕ್ಕಪರಿಶೋಧನಾ ಕಛೇರಿಗೆ ಸಲ್ಲಿಸಿರುತ್ತಾರೆ.

2.2 ಲೆಕ್ಕ ಪರಿಶೋಧನೆಯ ನಿರ್ದೇಶನಗಳು

2.2.1 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ–1992ರ ಅಧ್ಯಾಯ–VI ರಲ್ಲಿನ ಕಲಂ–26 ಹಾಗೂ ಕಲಂ–27ರಂತೆ ಮುಕ್ತ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ವ್ಯವಸ್ಥಾಪನಾ ಮಂಡಳಿಯ ನಿರ್ದೇಶನಗಳನುಸಾರ ತಯಾರಿಸಬೇಕಾಗಿರುತ್ತದೆ. ವಾರ್ಷಿಕ ಲೆಕ್ಕಗಳನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆಯ ಕಲಂ–20(3)(ii)ರ ಅನ್ವಯ ಹಣಕಾಸು ಸಮಿತಿಯು ಪರಿಶೀಲಿಸಿ, ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿದ ನಂತರ ವಾರ್ಷಿಕ ಲೆಕ್ಕಗಳನ್ನು ಲೆಕ್ಕಪರಿಶೋಧನಾ ಕಛೇರಿಗೆ ಕಳುಹಿಬೇಕಾಗಿರುತ್ತದೆ..

2.2.2 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳ 2023–24ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕಾಯ್ದೆಯ ಕಲಂ–27ರ ಅನುಸಾರ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪ್ರಧಾನ ನಿರ್ದೇಶಕರು ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಮೈಸೂರು ಪ್ರಾಂತೀಯ ಕಛೇರಿಯಿಂದ ಕೈಗೊಳ್ಳಲಾಗಿರುತ್ತದೆ.

2.2.3 2023–24ನೇ ಸಾಲಿನ ಮುಕ್ತ ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ–1992, ಅದರಡಿ ರಚಿತವಾದ ಪರಿನಿಯಮಗಳು, ಅಧ್ಯಾದೇಶಗಳು, ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಬಜೆಟ್ ಕೈಪಿಡಿ ನಿಯಮಗಳು, ಕರ್ನಾಟಕ ಲೋಕೋಪಯೋಗಿ ಲೆಕ್ಕ ಸಂಹಿತೆ ಮತ್ತು ಇಲಾಖಾ ಸಂಹಿತೆ, ಕರ್ನಾಟಕ ಸಾದಿಲ್ವಾರು ಕೈಪಿಡಿ ನಿಯಮಗಳು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಅಧಿನಿಯಮ–1999 ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳು–2000ದ ಉಪಬಂಧಗಳು, ಯು.ಜಿ.ಸಿ ಅಥವಾ ಅನುದಾನ ಒದಗಿಸುವ ಸಂಸ್ಥೆಗಳ ಮಾರ್ಗಸೂಚಿಗಳ ಅನ್ವಯ ತಪಾಸಣೆ ಮಾಡಿ ವರದಿಯನ್ನು ಸಿದ್ಧಪಡಿಸಲಾಗಿದೆ.

2.2.4 ಲೆಕ್ಕಪರಿಶೋಧನೆಗೊಂಡ ವಾರ್ಷಿಕ ಲೆಕ್ಕಗಳ ಪ್ರತಿಗಳನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ–1992ರ ಕಲಂ–27(4)ರ ಅನುಸಾರ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸಲು ಮುಕ್ತ ವಿಶ್ವವಿದ್ಯಾನಿಲಯವು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.

2.2.5 ಕರ್ನಾಟಕ ಬಜೆಟ್ ಕೈಪಿಡಿಯ ನಿಯಮ–303ರ ಪ್ರಕಾರ ಲೆಕ್ಕಪರಿಶೋಧನಾ ವರದಿಗಳ ಸ್ವರೂಪ ಮತ್ತು ಜವಾಬ್ದಾರಿಗನುಗುಣವಾಗಿ ಲೆಕ್ಕಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆಗಳಿಗೆ ಉತ್ತರಿಸುವ ಮತ್ತು ಲೆಕ್ಕಪರಿಶೋಧನೆಯಲ್ಲಿ ಎತ್ತಿದ ಇತರೆ ವಿಷಯಗಳನ್ನು ಇತ್ಯರ್ಥಗೊಳಿಸುವ ಹೊಣೆಗಾರಿಕೆಯು ಬಟವಾಡೆ ಅಧಿಕಾರಿ, ನಿಯಂತ್ರಣ ಅಧಿಕಾರಿ ಹಾಗೂ ವಿಶ್ವವಿದ್ಯಾನಿಲಯದ ಮುಖ್ಯಸ್ಥರದ್ದಾಗಿರುತ್ತದೆ.

3 ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ಸ್ಥಿತಿಗತಿ

ಮುಕ್ತ ವಿಶ್ವವಿದ್ಯಾನಿಲಯದವರು ಸಲ್ಲಿಸಿರುವ ವಾರ್ಷಿಕ ಲೆಕ್ಕಪತ್ರಗಳ ಅನ್ವಯ ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿಯು ಕೆಳಕಂಡಂತಿರುತ್ತದೆ.

ವಿವರಗಳು	ಭಾಗ–1 (ವಾಸ್ತವಿಕ)	ಭಾಗ–2 (ಇತರೆ)	ಒಟ್ಟು
ಪ್ರಾರಂಭಿಕ ಶಿಲ್ಕು	598,68,92,543	0	598,68,92,543
ಸ್ವೀಕೃತಿಗಳು	137,76,82,073	420,28,59,473	558,05,41,546
ಒಟ್ಟು	**736,45,74,616**	**420,28,59,473**	**11,56,74,34,089**
ಪಾವತಿಗಳು	174,83,32,667	445,96,65,635	620,79,98,302
ಅಂತಿಮ ಶಿಲ್ಕು	**561,62,41,949**	**–25,68,06,162**	**5,35,94,35,787**

ಹಿಂದಿನ ವರ್ಷದ ಲೆಕ್ಕಪರಿಶೋಧನಾ ವರದಿಯ ಪುಟ ಸಂ.40ರ ಕಂಡಿಕೆ ಸಂಖ್ಯೆ.11.1(ಅ)ದಲ್ಲಿ 2022–23ನೇ ಸಾಲಿನ ಅಂತಿಮ ಶಿಲ್ಕನ್ನು ರೂ.599,27,42,449/–**ಗಳೆಂದು** ತೆಗೆದುಕೊಳ್ಳಲು ತಿಳಿಸಿದ್ದಾಗ್ಯೂ 2022–23ನೇ ಸಾಲಿನಲ್ಲಿ ಸಾಮಾನ್ಯ ನಿಧಿ ಖಾತೆ ಸಂಖ್ಯೆ:54035420117 ರಿಂದ ನೂತನ ಪಿಂಚಣಿ ಖಾತೆ ಸಂಖ್ಯೆ:64090010482ಕ್ಕೆ ವರ್ಗಾವಣೆ ಮಾಡಲಾದ ಮೊತ್ತ ರೂ.58,45,566/–ಗಳನ್ನು ಮತ್ತು ಸಂಕೀರ್ಣ ಬ್ಯಾಂಕ್ ಖಾತೆ ಸಂಖ್ಯೆ:54035421315ರಲ್ಲಿ ರೂ.4,352/–ಗಳನ್ನು ಸದರಿ ಖಾತೆಯ ನಗದು ಪುಸ್ತಕಗಳಲ್ಲಿ ಸ್ವೀಕೃತಿ ತೆಗೆದುಕೊಂಡು ಅಂತಿಮ ಶಿಲ್ಕಿನಲ್ಲಿ ಪರಿಗಣಿಸದೆ, ರೂ.598,68,92,543/–ಗಳನ್ನು 2023–24ನೇ ಸಾಲಿನಲ್ಲಿ ಆರಂಭಿಕ ಶಿಲ್ಕಾಗಿ ಪರಿಗಣಿಸಲಾಗಿದೆ.

ಸ್ವೀಕೃತಿಗಳ ಮೊತ್ತವು ವಿಶ್ವವಿದ್ಯಾನಿಲಯವು ಸಲ್ಲಿಸಿರುವ ವಾರ್ಷಿಕ ಲೆಕ್ಕಪತ್ರಗಳ ಅನುಸಾರ ಭಾಗ–1ರಲ್ಲಿ ಮೊತ್ತ ರೂ137,76,82,073/–ಇರುತ್ತದೆ. ಲೆಕ್ಕಪರಿಶೋಧನೆಯ ಅನುಸಾರ ಇದು ರೂ.136,63,54,863/–ಇದ್ದು, ರೂ.1,13,27,210/–ಗಳಷ್ಟು ವ್ಯತ್ಯಾಸವಿರುತ್ತದೆ.

ಪಾವತಿಗಳ ಮೊತ್ತವು ವಿಶ್ವವಿದ್ಯಾನಿಲಯವು ಸಲ್ಲಿಸಿರುವ ವಾರ್ಷಿಕ ಲೆಕ್ಕಪತ್ರಗಳ ಅನುಸಾರ ಭಾಗ–Iರಲ್ಲಿ ರೂ.174,83,32,667/–ಇರುತ್ತದೆ. ಲೆಕ್ಕಪರಿಶೋಧನೆಯ ಅನುಸಾರ ಇದು ರೂ.164,02,97,980/–ಗಳು ಇದ್ದು, ರೂ.10,80,34,687/–ಗಳಷ್ಟು ವ್ಯತ್ಯಾಸವಿರುತ್ತದೆ.

4 ಪ್ರತಿಕೂಲ ಅಭಿಪ್ರಾಯಕ್ಕೆ ಆಧಾರಗಳು

4.1 ವಿಶ್ವವಿದ್ಯಾನಿಲಯದ ಲೆಕ್ಕಪತ್ರ ನಿರ್ವಹಣೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ–1994ರ ಅಡಿಯಲ್ಲಾಗಲೀ ಅಥವಾ ವಿಶ್ವವಿದ್ಯಾನಿಲಯವೇ ಲೆಕ್ಕಪತ್ರ ಕೈಪಿಡಿಯೊಂದನ್ನು ಅಳವಡಿಸಿಕೊಳ್ಳುವ ಮೂಲಕವಾಗಲೀ ಒಂದು ಪರಿಣಾಮಕಾರಿಯಾದ ಲೆಕ್ಕಪತ್ರ ನಿರ್ವಹಣಾ ಪದ್ಧತಿಯನ್ನು ಅನುಸರಿಸುತ್ತಿಲ್ಲ. ಹಾಗೂ ಲೆಕ್ಕಪತ್ರ ನಮೂನೆಗಳನ್ನು ಕೂಡ ನಿಗದಿಪಡಿಸಿಕೊಂಡಿರುವುದಿಲ್ಲ. ವಿಶ್ವವಿದ್ಯಾನಿಲಯವು ತನ್ನ ದೈನಂದಿನ ಆರ್ಥಿಕ ವಹಿವಾಟುಗಳನ್ನು ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ನಿರ್ವಹಿಸುವ ಸಲುವಾಗಿ ಅಳವಡಿಸಿಕೊಂಡಿರುವ ಲೆಕ್ಕಪತ್ರಗಳ ಕಾರ್ಯವಿಧಾನ ಹಾಗೂ ಸರಕಾರವು ಕಾಲಕಾಲಕ್ಕೆ ರೂಪಿಸಿ ಹೊರಡಿಸಿರುವ ಯಾವ ಯಾವ ನಿಯಮಗಳನ್ನು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳಲಾಗಿದೆ ಎಂಬುವುದರ ಬಗ್ಗೆ ಸಂಬಂಧಿತ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ 160/03.02.2025ರಲ್ಲಿ ಕೋರಲಾಗಿ, ವಿಶ್ವವಿದ್ಯಾನಿಲಯದಿಂದ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ.

4.2 ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 5 ಟಿಎಆರ್ 2017 ದಿನಾಂಕ:30.01.2017ರ ಭಾಗ–ಎ(III)ರ ಕಂಡಿಕೆ–1ರನ್ವಯ ವಿಶ್ವವಿದ್ಯಾನಿಲಯವು ತಾನು ನಿರ್ವಹಿಸುತ್ತಿರುವ ಬ್ಯಾಂಕ್ ಖಾತೆಗಳ ವಿವರಗಳನ್ನು ಸದರಿ ಆದೇಶದೊಡನೆ ಇರುವ ಅನುಬಂಧ–ಇ ನಮೂನೆಯಲ್ಲಿ ಲೆಕ್ಕಪರಿಶೋಧನೆಗೆ ನೀಡಬೇಕಾಗಿರುತ್ತದೆ. ಆದರಂತೆ ಬ್ಯಾಂಕ್ ಖಾತೆಗಳ ಸಂಖ್ಯೆ, ಬ್ಯಾಂಕಿನ ಹೆಸರು, ಬ್ಯಾಂಕ್ ಖಾತೆಯ ವಿಧ, ಬ್ಯಾಂಕ್ ಖಾತೆ ತೆರೆದಿರುವ ಉದ್ದೇಶ, ಆರಂಭಿಕ ಶಿಲ್ಕು(01–04–2023), ಸ್ವೀಕೃತಿಗಳು, ವೆಚ್ಚಗಳು ಹಾಗೂ ಅಂತಿಮ ಶಿಲ್ಕುಗಳ ವಿವರಗಳನ್ನು ದೃಢೀಕರಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ 03/28.10.2024ನ್ನು ನೀಡಲಾಗಿತ್ತು. ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳು ದಿನಾಂಕ: 19.12.2024ರಂದು ನೀಡಿರುವ ಅನುಪಾಲನಾ ವರದಿನ್ನು ಪರಿಶೀಲಿಸಿದಾಗ ಸಾಮಾನ್ಯ ನಿಧಿಯ 10 ಬ್ಯಾಂಕ್ ಖಾತೆಗಳು ಮತ್ತು ಪರೀಕ್ಷಾ ನಿಧಿಯ 06 ಬ್ಯಾಂಕ್ ಖಾತೆಗಳಿಗೆ ಮಾತ್ರ ದೃಢೀಕರಣಕ್ಕೆ ಹಾಜರುಪಡಿಸಿರುತ್ತಾರೆ, ವಿಶ್ವವಿದ್ಯಾನಿಲಯ ವಾರ್ಷಿಕ ಲೆಕ್ಕಪತ್ರದಲ್ಲಿ ನಮೂದಿಸಿರುವ ಎಲ್ಲಾ ಬ್ಯಾಂಕ್ ಖಾತೆಗಳ ದೃಢೀಕರಣವನ್ನು ಪೂರ್ಣಪ್ರಮಾಣದಲ್ಲಿ ನೀಡಿರುವುದಿಲ್ಲ ಮತ್ತು ಬ್ಯಾಂಕ್ ಖಾತೆ ತೆರೆದಿರುವ ಉದ್ದೇಶ ಹಾಗೂ ಬ್ಯಾಂಕ್ ಖಾತೆಯನ್ನು ತೆರೆಯಲು ಸಕ್ಷಮ ಪ್ರಾಧಿಕಾರದಿಂದ ಅನುಮತಿ ನೀಡಿರುವ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

4.3 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧೀನದಲ್ಲಿ ಒಟ್ಟು 35 ಪ್ರಾದೇಶಿಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ಸದರಿ ಕೇಂದ್ರಗಳ ಬ್ಯಾಂಕ್ ಖಾತೆಗಳ ಅಂಕಿ ಅಂಶಗಳನ್ನು ಮುಕ್ತ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರದಲ್ಲಿ ತೆಗೆದುಕೊಂಡಿರುವುದಿಲ್ಲ. ಈ ಬ್ಯಾಂಕ್ ಖಾತೆಗಳ ವಿವರಗಳು ಹಣಕಾಸು ಅಧಿಕಾರಿಗಳು ದೃಢೀಕರಿಸಿ ನೀಡಿರುವ ಎಲ್ಲಾ ಬ್ಯಾಂಕ್ ಖಾತೆಗಳದ್ದೆಂದು ಹೇಳಲಾದ ತಃಖ್ತೆಯಲ್ಲಿ ಕೂಡ ಇರುವುದಿಲ್ಲ.

4.4 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ದೃಶ್ಯ ಸ್ಟುಡಿಯೋ ಹೆಸರಿನಲ್ಲಿ ಐ ಸಿ ಐ ಸಿ ಬ್ಯಾಂಕ್, ಮೈಸೂರಿನ ಇನ್ಫೋಸಿಸ್ ಶಾಖೆ, ಇಲ್ಲಿ ಬ್ಯಾಂಕ್ ಖಾತೆಯನ್ನು (ಖಾತೆ ಸಂ-055801001170) ಹೊಂದಿದ್ದು, ಈ ಖಾತೆಯ ವಿವರಗಳು ವಾರ್ಷಿಕ ಲೆಕ್ಕಪತ್ರಗಳಲ್ಲಾಗಲೀ ಅಥವಾ ಹಣಕಾಸು ಅಧಿಕಾರಿಗಳು ದೃಢೀಕರಿಸಿ ನೀಡಿರುವ ಎಲ್ಲಾ ಬ್ಯಾಂಕ್ ಖಾತೆಗಳ ವಿವರದ ತಃಖ್ತೆಯಲ್ಲಾಗಲೀ ಇರುವುದಿಲ್ಲ.

4.5 ಡಾ.ಸುಮತಿ ಆರ್ ಗೌಡ, ಸಂಯೋಜಕರು, ಬಾಹ್ಯ ಪರೀಕ್ಷೆಗಳು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಇವರ ಪದನಾಮದಲ್ಲಿ ಆಕ್ಸಿಸ್ ಬ್ಯಾಂಕ್, ಕುವೆಂಪುನಗರ ಶಾಖೆ, ಮೈಸೂರು ಇಲ್ಲಿ ಬ್ಯಾಂಕ್ ಖಾತೆಯನ್ನು (ಖಾತೆ ಸಂ-92101003895267) ಹೊಂದಿದ್ದು, ಈ ಖಾತೆಯ ವಿವರಗಳು ವಾರ್ಷಿಕ ಲೆಕ್ಕಪತ್ರಗಳಲ್ಲಾಗಲೀ ಅಥವಾ ಹಣಕಾಸು ಅಧಿಕಾರಿಗಳು ದೃಢೀಕರಿಸಿ ನೀಡಿರುವ ಎಲ್ಲಾ ಬ್ಯಾಂಕ್ ಖಾತೆಗಳದ್ದೆಂದು ಹೇಳಲಾದ ತಃಖ್ತೆಯಲ್ಲಾಗಲೀ ಇರುವುದಿಲ್ಲ. ಈ ಬ್ಯಾಂಕ್ ಖಾತೆಯ ವಿವರಗಳನ್ನು ಹಾಜರುಪಡಿಸಲು ಕೋರಿ ನೀಡಲಾದ ವಿಚಾರಣಾ ಪತ್ರ ಸಂ.161/03.02.2025ಕ್ಕೆ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಹೀಗಾಗಿ ವಿಶ್ವವಿದ್ಯಾನಿಲಯದಲ್ಲಿ ನಿರ್ವಹಿಸುತ್ತಿರುವ ಎಲ್ಲಾ ಬ್ಯಾಂಕ್ ಖಾತೆಗಳ ವಿವರಗಳನ್ನು ಲೆಕ್ಕಪರಿಶೋಧನೆಗೆ ನೀಡದಿರುವ ಸಂದೇಹ ಉದ್ಭವವಾಗುತ್ತದೆ. ಹಾಗೂ ವಿಶ್ವವಿದ್ಯಾನಿಲಯದ ಸ್ವೀಕೃತಿ ಮತ್ತು ಪಾವತಿ ಲೆಕ್ಕಗಳು ನಿಖರ ಮತ್ತು ನೈಜ ಎಂಬ ಭಾವನೆ ಮೂಡುವುದಿಲ್ಲ.

4.6 ಬಜೆಟ್ ಕೈಪಿಡಿ ನಿಯಮಗಳು, 1958ರ ಕಂಡಿಕೆ-229-232ರಲ್ಲಿ ತಿಳಿಸಿರುವಂತೆ ಪ್ರತಿ ಮಾಹೆ ಅನುದಾನದ ಉಳಿತಾಯ, ಹೆಚ್ಚುವರಿ ವೆಚ್ಚ ಹಾಗೂ ಹಂಚಿಕೆ ಇವುಗಳ ಬಗ್ಗೆ ನಿಗಾ ವಹಿಸುವುದು ನಿಯಂತ್ರಣಾಧಿಕಾರಿಗಳ ಮತ್ತು ಬಟವಾಡೆ ಅಧಿಕಾರಿಗಳ ಜವಾಬ್ದಾರಿಯಾಗಿದ್ದು, ಲೆಕ್ಕಶೀರ್ಷಿಕೆವಾರು ಆಯವ್ಯಯದಲ್ಲಿ ನಿಗದಿಪಡಿಸಿಕೊಂಡಿರುವುದಕ್ಕೆ ಎದುರಾಗಿ ವೆಚ್ಚ ಭರಿಸಿರುವ ವಿವರಗಳನ್ನು ಬಿಲ್ಲುಗಳಲ್ಲಿ ಹಾಗೂ ನಿಗಾವಹಿಯಲ್ಲಿ ನಮೂದಿಸಬೇಕಾಗಿರುತ್ತದೆ. ಆದರೆ ವಿಶ್ವವಿದ್ಯಾನಿಲಯದಲ್ಲಿ ಈ ಕ್ರಮ ಅನುಸರಿಸದೆ ಪ್ರತೀ ವರ್ಷ ಆಯವ್ಯಯದಲ್ಲಿ ನಿಗದಿಪಡಿಸಿಕೊಂಡಿರುವುದಕ್ಕಿಂತ ಹೆಚ್ಚುವರಿಯಾಗಿ ವೆಚ್ಚಭರಿಸಿ, ವೆಚ್ಚ ಭರಿಸಿದ ಮೊತ್ತಕ್ಕೆ ಆಯವ್ಯಯವನ್ನು ಪರಿಷ್ಕರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಳ್ಳಲಾಗುತ್ತಿದೆ. ಇದು ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಆಯವ್ಯಯ ನಿಯಂತ್ರಣ ವ್ಯವಸ್ಥೆ ಇಲ್ಲದಿರುವುದನ್ನು ಬಿಂಬಿಸುತ್ತದೆ.

4.7 ಸಂಕೀರ್ಣ ಖಾತೆ ಸಂಖ್ಯೆ:54035421315ರ ನಗದು ಪುಸ್ತಕವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ನೀಡಲಾದ ವಿಚಾರಣಾ ಪತ್ರ ಸಂ.61/13.12.2024ಕ್ಕೆ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಹೀಗಾಗಿ ವಿಶ್ವವಿದ್ಯಾನಿಲಯದಲ್ಲಿ ನಿರ್ವಹಿಸುತ್ತಿರುವ ಎಲ್ಲಾ ಬ್ಯಾಂಕ್ ಖಾತೆಗಳ ವಿವರಗಳನ್ನು ಲೆಕ್ಕಪರಿಶೋಧನೆಗೆ ನೀಡದಿರುವ ಸಂದೇಹ ಉದ್ಭವವಾಗುತ್ತದೆ. ಹಾಗೂ ವಿಶ್ವವಿದ್ಯಾನಿಲಯದ ಸ್ವೀಕೃತಿ ಮತ್ತು ಪಾವತಿ ಲೆಕ್ಕಗಳು ನಿಖರ ಮತ್ತು ನೈಜ ಎಂಬ ಭಾವನೆ ಮೂಡುವುದಿಲ್ಲ.

4.8 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ-1992ರ ಅಧ್ಯಾಯ-VIರಲ್ಲಿನ ಕಲಂ-27(1)ರ ಅನುಸಾರ 2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರದೊಂದಿಗೆ ಮುಕ್ತ ವಿಶ್ವವಿದ್ಯಾನಿಲಯದ ಬ್ಯಾಲೆನ್ಸ್ ಶೀಟ್‌ನ್ನು ಸಿದ್ದಪಡಿಸಿ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ದಾಖಲೆಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

5. ಇತರೆ ಅವಲೋಕನಗಳು

5.1 ಆದಾಯ ಮತ್ತು ವೆಚ್ಚಗಳ ಅಂಕಿ ಅಂಶಗಳಲ್ಲಿ ವ್ಯತ್ಯಾಸಗಳು

5.1.1 2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಎನ್.ಪಿ.ಎಸ್ ನೌಕರರ ಉದ್ಯೋಗಿಯ ವಂತಿಕೆ ಮತ್ತು ಉದ್ಯೋಗದಾತರ ವಂತಿಕೆ ರೂ.6,14,01,376/-ಗಳನ್ನು ನೂತನ ಪಿಂಚಣಿ ಯೋಜನೆ ನಿಧಿ ಖಾತೆಗೆ ವರ್ಗಾಯಿಸಿದ ಮೊತ್ತ ಹಾಗೂ ಹೊರಗುತ್ತಿಗೆ ನೌಕರರ ಇಎಸ್‌ಐ ಮತ್ತು ಪಿಎಫ್ ಪಿಂಚಣಿ ಖಾತೆಗೆ ಅಂತರಿಕ ವರ್ಗಾವಣೆ ಮಾಡಿರುವ, ಒಟ್ಟು ಮೊತ್ತ ರೂ.12,15,60,344/-ಗಳು ಸೇರಿದಂತೆ ಒಟ್ಟು ರೂ.18,29,61,720/-ಗಳನ್ನು ಸಾಮಾನ್ಯ ನಿಧಿ ಖಾತೆಯ ಭಾಗ-Iರಲ್ಲಿ ವೆಚ್ಚವೆಂದು ತೆಗೆದುಕೊಂಡಿರುವುದರಿಂದ ವಾರ್ಷಿಕ ಲೆಕ್ಕಪತ್ರದಲ್ಲಿ ತೋರಿಸಿರುವ ಮೊತ್ತವು ವಾಸ್ತವಕ್ಕಿಂತ ಹೆಚ್ಚಾಗಿರುತ್ತದೆ.

5.1.2 ನೂತನ ಪಿಂಚಣಿ ನಿಧಿ ಖಾತೆಯಿಂದ ಎನ್‌ಎಸ್‌ಡಿಎಲ್ ಗೆ ಪಾವತಿಸಲಾಗಿರುವ ಉದ್ಯೋಗಿ ವಂತಿಕೆ ಮತ್ತು ಉದ್ಯೋಗದಾತರ ವಂತಿಕೆ ಮೊತ್ತವನ್ನು ರೂ.6,29,14,784/-ಗಳನ್ನು ಭಾಗ-Iರಲ್ಲಿ ವಾಸ್ತವಿಕ ವೆಚ್ಚವೆಂದು ಪರಿಗಣಿಸಿರುವುದಿಲ್ಲ.

5.1.3 ದತ್ತಿ ನಿಧಿ ಖಾತೆಯಿಂದ ಹೂಡಿಕೆ ಮಾಡಲಾಗಿರುವ ರೂ.2,00,000/-ಗಳನ್ನು ಭಾಗ-Iರಲ್ಲಿ ವೆಚ್ಚವೆಂದು ತೆಗೆದುಕೊಂಡಿರುವುದರಿಂದ ವಾರ್ಷಿಕ ಲೆಕ್ಕಪತ್ರದಲ್ಲಿ ತೋರಿಸಿರುವ ಮೊತ್ತವು ವಾಸ್ತವಕ್ಕಿಂತ ಹೆಚ್ಚಾಗಿರುತ್ತದೆ.

5.1.4 ಭದ್ರತಾ ಠೇವಣಿ ಖಾತೆಯಡಿ ಸರಬರಾಜುದಾರರಿಗೆ ಮತ್ತು ಗುತ್ತಿಗೆದಾರರಿಗೆ ಪಾವತಿ ಮಾಡಲಾದ ರೂ.1,21,08,988/-ಗಳ ವಾಸ್ತವಿಕ ವೆಚ್ಚವನ್ನು ಭಾಗ-Iರಲ್ಲಿ ಪರಿಗಣಿಸಿರುವುದಿಲ್ಲ.

5.1.5 ಭದ್ರತಾ ಠೇವಣಿ ಖಾತೆಯಿಂದ ರೂ.1,68,345/–ಗಳನ್ನು ಜಿ.ಆರ್.ಎ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಲಾದ ಮೊತ್ತವನ್ನು ವಾರ್ಷಿಕ ಲೆಕ್ಕಪತ್ರದಲ್ಲಿ ಭಾಗ–1ರಲ್ಲಿ ಸ್ವೀಕೃತಿ ಎಂದು ಪರಿಗಣಿಸಿದ್ದು, ಇದು ವಾಸ್ತವಿಕ ಸ್ವೀಕೃತಿಯಾಗಿರುವುದಿಲ್ಲ.

5.1.6 ಜಿ.ಆರ್.ಎ ಬ್ಯಾಂಕ್ ಖಾತೆಯಿಂದ ಪಿಂಚಣಿ ಖಾತೆಗೆ ವರ್ಗಾವಣೆಯಾದ ರೂ.1,00,00,000/–ಗಳನ್ನು ವಾರ್ಷಿಕ ಲೆಕ್ಕಪತ್ರದಲ್ಲಿ ಭಾಗ–1ರಲ್ಲಿ ಸ್ವೀಕೃತಿ ಎಂದು ಪರಿಗಣಿಸಿದ್ದು, ಇದು ವಾಸ್ತವಿಕ ಸ್ವೀಕೃತಿಯಾಗಿರುವುದಿಲ್ಲ.

5.1.7 ಪರೀಕ್ಷಾ ಖಾತೆಯಲ್ಲಿ ರೂ.15,36,715/–ಗಳನ್ನು ವಾರ್ಷಿಕ ಲೆಕ್ಕಪತ್ರದ ಭಾಗ–1ರಲ್ಲಿ ಠೇವಣಿಗಳ ಮೇಲಿನ ಬಡ್ಡಿಯನ್ನು ವಾಸ್ತವಿಕ ಸ್ವೀಕೃತಿಯೆಂದು ಪರಿಗಣಿಸಲಾಗಿದೆ. ಆದರೆ ಠೇವಣಿಗಳ ಮೇಲಿನ ಬಡ್ಡಿ ಮೊತ್ತವು ಬ್ಯಾಂಕ್ ಖಾತೆಗೆ ಜಮೆಯಾಗದೆ ನೇರವಾಗಿ ಠೇವಣಿ ಮರುಹೂಡಿಕೆಯಾಗಿರುತ್ತದೆ.

5.1.8 ಮಿಸೇನಿಯಷ್ ಬ್ಯಾಂಕ್ ಖಾತೆಗೆ ಜಮೆಯಾದ ಬಡ್ಡಿ ಮೊತ್ತ ರೂ.36,708/–ಗಳನ್ನು ವಾಸ್ತವಿಕ ಸ್ವೀಕೃತಿಯಾಗಿ ಪರಿಗಣಿಸಿರುವುದಿಲ್ಲ.

5.1.9 ಮುಕ್ತ ವಿಶ್ವವಿದ್ಯಾನಿಲಯದ ಅವರಣದಲ್ಲಿರುವ ಎಸ್.ಬಿ.ಐನಲ್ಲಿ Principal Investigator VGST ರವರ ಹೆಸರಿನಲ್ಲಿ ಬ್ಯಾಂಕ್ ಖಾತೆ ಸಂ:41120040270ನ್ನು ನಿರ್ವಹಿಸುತ್ತಿದ್ದು ಸದರಿ ಖಾತೆಯನ್ನು ವಾರ್ಷಿಕ ಲೆಕ್ಕಪತದಲ್ಲಿ ಪರಿಗಣಿಸಿರುವುದಿಲ್ಲ.

5.2 ಪ್ರಾರಂಭಿಕ ಮತ್ತು ಅಂತಿಮ ಶಿಲ್ಕುಗಳಲ್ಲಿ ವ್ಯತ್ಯಾಸಗಳು

5.2.1 ಪ್ರಾರಂಭಿಕ ಶಿಲ್ಕು

ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ವಾರ್ಷಿಕ ಲೆಕ್ಕಪತ್ರದ ಪ್ರಕಾರ ಈ ಕೆಳಕಂಡ ಖಾತೆಗಳಲ್ಲಿ ನಗದು ಪ್ರಾರಂಭ ಶಿಲ್ಕು ರೂ.1,88,88,181/–ಗಳನ್ನು ತೆಗೆದು ಕೊಂಡಿದ್ದು, ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಯ ಪ್ರಕಾರ ರೂ.2,47,38,089/–ಗಳಿದ್ದು, ಪ್ರಾರಂಭಿಕ ಶಿಲ್ಕನ್ನು ರೂ.58,49,908/–ಗಳನ್ನು ಕಡಿಮೆಯಾಗಿ ತೆಗೆದುಕೊಳ್ಳಲಾಗಿದೆ.

ಕ್ರ.ಸಂ	ಖಾತೆಯ ವಿವರ	ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರದ ಪ್ರಕಾರ	ಹಿಂದಿನ ಸಾಲಿನ ಲೆಕ್ಕಪರಿಶೋದನಾ ವರದಿಯ ಪ್ರಕಾರ	ವ್ಯತ್ಯಾಸ
1	ನೂತನ ಪಿಂಚಣಿ ನಿಧಿ	1,24,39,629/–	1,82,85,185/–	58,45,556/–
2	ಅಮಾನತ್ತು ಖಾತೆ	64,48,552/–	64,52,904/–	4,352/–
	ಒಟ್ಟು	**1,88,88,181/–**	**2,47,38,089/–**	**58,49,908/–**

5.2.2 ಅಂತಿಮ ಶಿಲ್ಕು

ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ವಾರ್ಷಿಕ ಲೆಕ್ಕಪತ್ರದ ಪ್ರಕಾರ ಈ ಕೆಳಕಂಡ ಖಾತೆಯಲ್ಲಿ ಅಂತಿಮ ಶಿಲ್ಕು ರೂ.1,00,99,878/–ಗಳನ್ನು ತೆಗೆದು ಕೊಂಡಿದ್ದು, ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಯ ಪ್ರಕಾರ ರೂ.1,00,48,804/–ಗಳಿದ್ದು, ಕಡಿಮೆಯಾಗಿ ರೂ.51,074/–ಗಳನ್ನು ಅಂತಿಮ ಶಿಲ್ಕಾಗಿ ತೆಗೆದುಕೊಳ್ಳಲಾಗಿದೆ.

ಕ್ರ.ಸಂ	ಖಾತೆಯ ವಿವರ	ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರದ ಪ್ರಕಾರ	ಲೆಕ್ಕಪರಿಶೋದನಾ ಪ್ರಕಾರ	ವ್ಯತ್ಯಾಸ
1	ಅಮಾನತ್ತು ಖಾತೆ	1,00,99,878/–	1,00,48,804/–	51,074/–
	ಒಟ್ಟು	**1,00,99,878/–**	**1,00,48,804/–**	**51,074/–**

5.3 ದಾಸ್ತಾನು ಮತ್ತು ಆಸ್ತಿ ವಹಿಗಳನ್ನು ಹಾಜರುಪಡಿಸದಿರುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯಕ್ಕೆ ಸೇರಿದ ಆಸ್ತಿ ವಹಿಯನ್ನು ಸೇರಿದಂತೆ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:39/20.11.2024ರಲ್ಲಿ ಕೋರಲಾಗಿದ್ದರೂ ಪೂರ್ಣ ಪ್ರಮಾಣದ ದಾಖಲೆಗಳನ್ನು ಹಾಜರುಪಡಿಸದಿರುವುದರಿಂದ ವರ್ಷಾರಂಭದಲ್ಲಿ ಇದ್ದ ಸಾಮಗ್ರಿ, ಸಲಕರಣೆಗಳು, ಆಸ್ತಿಗಳು ಹಾಗೂ 2023–24ನೇ ಸಾಲಿನಲ್ಲಿ ಖರೀದಿಸಿದ ಸಾಮಗ್ರಿಗಳು/ಸಲಕರಣೆಗಳು/ಎಲೆಕ್ಟ್ರಾನಿಕ್ ಉಪಕರಣಗಳು/ಇತರೆ ಸಾಮಗ್ರಿಗಳ ಬಗ್ಗೆ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.

5.4 ಅನುದಾನ ವಹಿ ಮತ್ತು ಖರ್ದಿ ಪುಸ್ತಕಗಳನ್ನು ಹಾಜರುಪಡಿಸದಿರುವುದು

ವಿಶ್ವವಿದ್ಯಾನಿಲಯದವರು ದಿನ ಪುಸ್ತಕ, ಅನುದಾನ ವಹಿ, ಖರ್ದಿ ಪುಸ್ತಕ ಮುಂತಾದ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲವಾದ್ದರಿಂದ ಸರ್ಕಾರ/ಯುಜಿಸಿಯಿಂದ ಬಂದ ಅನುದಾನ, ವಿದ್ಯಾರ್ಥಿಗಳಿಂದ ಸಂಗ್ರಹವಾದ ವಿವಿಧ ಶುಲ್ಕಗಳು, ದತ್ತಿ ನಿಧಿ ಮತ್ತು ಅಧ್ಯಯನ ಪೀಠಗಳಿಗೆ ಬಂದ ಅನುದಾನ/ಕೊಡುಗೆ, ಲಭ್ಯ ಅನುದಾನದ ಮೇಲೆ ಪ್ರಾಪ್ತವಾದ ಬಡ್ಡಿಯ ವಿವರ ಮುಂತಾದವುಗಳನ್ನು ವರ್ಗೀಕೃತ ಸ್ವೀಕೃತಿವಾರು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.

6. ಆಂತರಿಕ ನಿಯಂತ್ರಣಕ್ಕೆ ಸಂಬಂಧಿಸಿದ ಅಭಿಪ್ರಾಯಗಳು

ಅ) ಸಮನ್ವಯ ಮತ್ತು ನಿಯಂತ್ರಣದ ಕೊರತೆ

ವಿಶ್ವವಿದ್ಯಾನಿಲಯದಲ್ಲಿ ಕುಲಸಚಿವರ ಹಾಗೂ ಹಣಕಾಸು ಅಧಿಕಾರಿಗಳ ನೇತೃತ್ವದಲ್ಲಿ ಪ್ರತ್ಯೇಕವಾಗಿ ಆಡಳಿತ ಶಾಖೆ, ಪ್ರವೇಶಾತಿ ಶಾಖೆ, ಪರೀಕ್ಷಾ ಶಾಖೆ ಮತ್ತು ಹಣಕಾಸು ಶಾಖೆಗಳಿದ್ದು ಇವುಗಳು ವಿಶ್ವವಿದ್ಯಾನಿಲಯದ ಹಣಕಾಸು ಶಿಸ್ತನ್ನು ಕಾಯ್ದುಕೊಳ್ಳಲು ಅಗತ್ಯ ನಿಯಂತ್ರಣ ವಿಧಾನಗಳನ್ನು

ಅನುಸರಿಸಬೇಕಾಗುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಅನುಮೋದಿತ ಆಯವ್ಯಯಕ್ಕಿಂತ ವೆಚ್ಚಗಳು ಹೆಚ್ಚಾಗುತ್ತಿರುವುದನ್ನು ಆಯವ್ಯಯ ನಿಗಾ ವಹಿ ನಿರ್ವಹಿಸುವ ಮೂಲಕ ನಿಯಂತ್ರಿಸುವ ವ್ಯವಸ್ಥೆ ಇರುವುದಿಲ್ಲ. ಸಾದಿಲ್ವಾರು ಬಿಲ್ಲುಗಳು ಮತ್ತು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಹೊಂದಾಣಿಕೆಗೆ ಸಲ್ಲಿಸುವ ಸವಿವರ ಸಾದಿಲ್ವಾರು ಬಿಲ್ಲುಗಳಿಗೆ ವಿಶ್ವವಿದ್ಯಾನಿಲಯದ ವ್ಯವಹರಣೆಗಳ ನಿಯಂತ್ರಣಾಧಿಕಾರಿಗಳಾದ ಕುಲಸಚಿವರು ಪ್ರತಿ ಸಹಿ ಮಾಡುವ ಪದ್ಧತಿ ಚಾಲ್ತಿಯಲ್ಲಿರುವುದಿಲ್ಲ. ಹೀಗೆ ವಿಶ್ವವಿದ್ಯಾನಿಲಯದಲ್ಲಿನ ವ್ಯವಹರಣೆಗಳಲ್ಲಿ ಪರಿಣಾಮಕಾರಿಯಾದ ಆಂತರಿಕ ನಿಯಂತ್ರಣ ವ್ಯವಸ್ಥೆ ಇಲ್ಲದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

ಆ) ಬ್ಯಾಂಕ್ ಖಾತೆಯನ್ನು ಜಂಟಿಯಾಗಿ ನಿರ್ವಹಿಸದೆ ಒಬ್ಬರ ಪದನಾಮದಲ್ಲಿ ನಿರ್ವಹಿಸುತ್ತಿರುವುದು.

ವಿಶ್ವವಿದ್ಯಾನಿಲಯದಲ್ಲಿ ಬ್ಯಾಂಕ್ ಖಾತೆಯನ್ನು ಜಂಟಿಯಾಗಿ ನಿರ್ವಹಿಸದೆ ಹಣಕಾಸು ಅಧಿಕಾರಿಗಳ ಪದನಾಮದಲ್ಲಿ ನಿರ್ವಹಿಸಲಾಗುತ್ತಿದೆ. ಇದಲ್ಲದೆ ವಿಶ್ವವಿದ್ಯಾನಿಲಯಗಳ ಇತರೆ ಅಧಿಕಾರಿಗಳಾದ ಉಪ ಕುಲಸಚಿವ ಹಾಗೂ ಸಂಯೋಜಕರು, ಬಾಹ್ಯ ಪರೀಕ್ಷೆಗಳು ಮುಂತಾದವರ ಪದನಾಮದಲ್ಲಿ ಕೂಡ ಒಂಟಿಯಾಗಿ ಬ್ಯಾಂಕ್ ಖಾತೆಗಳ ನಿರ್ವಹಣೆ ಮಾಡಲಾಗುತ್ತಿದೆ.

ವಿಶ್ವವಿದ್ಯಾನಿಲಯದವರು ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ವಾರ್ಷಿಕ ಲೆಕ್ಕಪತ್ರಗಳು ಮತ್ತು ದಾಖಲೆಗಳ ಆಧಾರದ ಮೇಲೆ ಈ ವರದಿಯನ್ನು ತಯಾರಿಸಲಾಗಿದೆ.

ಭಾಗ–2

ವ್ಯವಹರಣೆ ಮತ್ತು ಅನುಪಾಲನಾ ಲೆಕ್ಕಪರಿಶೋಧನಾ ವರದಿ

2023–24

ಮುಕ್ತ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಹೆಸರು ಮತ್ತು ಪದನಾಮ

2023–24ನೇ ಸಾಲಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವಿಶ್ವವಿದ್ಯಾನಿಲಯದ ಅಧಿಕಾರಿಗಳ ವಿವರಗಳು ಈ ಕೆಳಕಂಡಂತಿವೆ.

ಕ್ರ.ಸಂ	ಪದನಾಮ	ಹೆಸರು	ಅವಧಿ
1	ಉಪಕುಲಪತಿಗಳು	ಪ್ರೊ. ಶರಣಪ್ಪ ವಿ ಹಲಸೆ	ದಿ:01–04–2023 ರಿಂದ 31–03–2024
2	ಕುಲಸಚಿವರು	ಡಾ.ಕೆ.ಎಲ್.ಎನ್. ಮೂರ್ತಿ ಕೆ.ಬಿ. ಪ್ರವೀಣ್	ದಿ: 01–04–2023 ರಿಂದ 16–03–2024 ದಿ: 16–03–2024 ರಿಂದ 31–03–2024
3	ಕುಲಸಚಿವರು(ಪರೀಕ್ಷಾಂಗ)	ಪ್ರೊ. ಕೆ.ಬಿ. ಪ್ರವೀಣ್	ದಿ:01–04–2023 ರಿಂದ 06–03–2024
		ಡಾ.ಹೆಚ್.ವಿಶ್ವನಾಥ್	ದಿ:06–03–2024 ರಿಂದ 31–03–2024
4	ಹಣಕಾಸುಅಧಿಕಾರಿಗಳು	ಡಾ.ಖಾದರ್ ಪಾಷ	ದಿ:01–04–2023 ರಿಂದ 10–11–2023
		ಡಾ.ವಿ.ಎಂ.ರಮೇಶ್	ದಿ:10–11–2023 ರಿಂದ 31.03.2024
5.	ಡೀನ್ ಶೈಕ್ಷಣಿಕ	ಪ್ರೊ. ಎನ್.ಲಕ್ಷ್ಮೀ	ದಿ:01–04–2023 ರಿಂದ 31–03–2024

6	ಡೀನ್ (ಅಧ್ಯಯನ ಕೇಂದ್ರ)	ಪ್ರೊ.ರಾಮನಾಥಂನಾಯ್ಡು	ದಿ:01–04–2023 ರಿಂದ 31–03–2024

7. ವಿಚಾರಣಾ ಪತ್ರಗಳ ಮೇಲೆ ಕೈಗೊಂಡ ಕ್ರಮ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಲೆಕ್ಕತಪಾಸಣೆ ಮಾಡುವಾಗ ಕಂಡುಬಂದ ನಿಯಮ ಬಾಹಿರ ವ್ಯವಹರಣೆಗಳ ಬಗ್ಗೆ ಲೆಕ್ಕಪರಿಶೋಧನಾ ವಿಚಾರಣೆಗಳನ್ನು ನೀಡಿ ಸಂಬಂಧಿಸಿದ ವಿಷಯಗಳ ಬಗ್ಗೆ ಅನುಸರಣಾ ವರದಿಗಳನ್ನು ಪಡೆದುಕೊಂಡು ವರದಿಯಲ್ಲಿ ಅಳವಡಿಸಲಾಗುತ್ತಿದೆ. 2023–24ನೇ ಸಾಲಿನ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಕಂಡು ಬಂದ ನ್ಯೂನತೆಗಳಿಗೆ ಸಂಬಂಧಿಸಿದಂತೆ ಒಟ್ಟು 211 ಲೆಕ್ಕಪರಿಶೋಧನಾ ವಿಚಾರಣಾ ಪತ್ರಗಳನ್ನು ವಿಶ್ವವಿದ್ಯಾನಿಲಯಕ್ಕೆ ನೀಡಲಾಗಿದ್ದು, ಅವುಗಳಲ್ಲಿ, 126 ವಿಚಾರಣಾ ಪತ್ರಗಳಿಗೆ ಮಾತ್ರ ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿರುತ್ತಾರೆ. ಆದರೆ ನೀಡಿರುವ ಬಹುತೇಕ ಉತ್ತರಗಳು ಸಮಂಜಸವಾಗಿರುವುದಿಲ್ಲ. ಅನುಪಾಲನಾ ವರದಿ ಹಾಗೂ ಅದಕ್ಕೆ ಸಂಬಂಧಿಸಿದ ಪೂರಕ ದಾಖಲೆಗಳನ್ನು ಪೂರ್ಣ ಪ್ರಮಾಣದಲ್ಲಿ ಹಾಜರುಪಡಿಸಿರುವುದಿಲ್ಲ.

8. ಹಿಂದಿನ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳ ಕಂಡಿಕೆಗಳ ತೀರುವಳಿ ಬಗ್ಗೆ

ವಿಶ್ವವಿದ್ಯಾನಿಲಯದ 1980–81 ರಿಂದ 2023–24ರವರೆಗಿನ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣಾ ಕಂಡಿಕೆಗಳ ಮತ್ತು ವಸೂಲಾತಿ ಕಂಡಿಕೆಗಳ ಮೊತ್ತ ತೀರುವಳಿಯಾದ ಮೊತ್ತ ಹಾಗೂ ಬಾಕಿ ಉಳಿದಿರುವ ಮೊತ್ತಗಳ ವಿವರಗಳು ಕೆಳಕಂಡಂತಿರುತ್ತದೆ.

ವಿವರಗಳು	ಆಕ್ಷೇಪಣಾ ಕಂಡಿಕೆಗಳ ಸಂಖ್ಯೆ	ಮೊತ್ತ	ವಸೂಲಾತಿ ಕಂಡಿಕೆಗಳ ಸಂಖ್ಯೆ	ಮೊತ್ತ
1996–97 ರಿಂದ 2022–23 ರವರೆಗಿನ ಕಂಡಿಕೆಗಳು	640	801,94,70,151	484	98,59,54,350
ಹಿಂದಿನ ಸಾಲಿನವರೆಗಿನ ತೀರುವಳಿ	20	2,69,44,369	23	46,72,887
1996–97 ರಿಂದ 2022–23 ರವರೆಗಿನ ಕಂಡಿಕೆಗಳಲ್ಲಿ ತೀರುವಳಿಯಾಗಿ ಬಾಕಿ ಉಳಿದಿರುವ ಕಂಡಿಕೆಗಳು	620	799,25,25,782	461	98,12,81,463
2023–24ನೇ ಸಾಲಿನಲ್ಲಿ ಸೇರ್ಪಡೆ	36	78,96,15,957	37	22,45,48,262
ಒಟ್ಟು	**656**	**878,21,41,739**	**498**	**1,20,58,29,725**
2023–24ರಲ್ಲಿ ತೀರುವಳಿ ಆಗಿರುವುದು	0	0	2	3,91,529

2023–24 ಅಂತ್ಯಕ್ಕೆ ಬಾಕಿ ಉಳಿದಿರುವುದು	656	878,21,41,739	496	120,54,38,196

ಬಾಕಿ ಉಳಿದಿರುವ ಕಂಡಿಕೆಗಳನ್ನು ಸಕಾಲದಲ್ಲಿ ತೀರುವಳಿ ಮಾಡದೆ ಇರುವುದರಿಂದ ನೌಕರರ ವರ್ಗಾವಣೆ, ನಿವೃತ್ತಿ, ಗುತ್ತಿಗೆಗಳ ಮುಕ್ತಾಯ ಇತ್ಯಾದಿ ಕಾರಣಗಳಿಂದ ವಸೂಲಿಸಬೇಕಾದ ಮೊತ್ತಗಳನ್ನು ವಸೂಲಿಸಲಾಗದೆಯೆ ವಿಶ್ವವಿದ್ಯಾನಿಲಯಕ್ಕೆ ನಷ್ಟ ಉಂಟಾಗುವ ಸಂಭವವಿರುತ್ತದೆ. ಕರ್ನಾಟಕ ಬಜೆಟ್ ಕೈಪಿಡಿಯ ನಿಯಮ–303ರ ಪ್ರಕಾರ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆಗಳಿಗೆ ಉತ್ತರಿಸುವ ಮತ್ತು ಲೆಕ್ಕಪರಿಶೋಧನೆಯಲ್ಲಿ ಎತ್ತಿದ ಇತರೆ ವಿಷಯಗಳನ್ನು ಇತ್ಯರ್ಥಗೊಳಿಸುವ ಹೊಣೆಗಾರಿಕೆಯು ಲೆಕ್ಕಪರಿಶೋಧನಾ ಕಂಡಿಕೆಗಳ ಸ್ವರೂಪ ಮತ್ತು ಜವಾಬ್ದಾರಿಗನುಗುಣವಾಗಿ ಬಟವಾಡೆ ಅಧಿಕಾರಿಗಳು, ನಿಯಂತ್ರಣ ಅಧಿಕಾರಿಗಳು ಹಾಗೂ ವಿಶ್ವವಿದ್ಯಾನಿಲಯದ ಮುಖ್ಯಸ್ಥರದ್ದಾಗಿರುತ್ತದೆ. ಲೆಕ್ಕಪರಿಶೋಧನಾ ಆಕ್ಷೇಪಣೆಗಳ ಬಗ್ಗೆ ನಿಗಾ ಇಡಲು ವಿಶ್ವವಿದ್ಯಾನಿಲಯವು ಬಜೆಟ್ ಕೈಪಿಡಿಯ ನಿಯಮ–305ರ ಅನುಸಾರ ನಮೂನೆ–21ರಲ್ಲಿ ಲೆಕ್ಕಪರಿಶೋಧನಾ ಆಕ್ಷೇಪಣೆಗಳ ವಹಿಯನ್ನು ನಿರ್ವಹಿಸಬೇಕಿದ್ದು, ವಿಶ್ವವಿದ್ಯಾನಿಲಯವು ಸದರಿ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ವರ್ಷದಿಂದ ವರ್ಷಕ್ಕೆ ಲೆಕ್ಕಪರಿಶೋಧನಾ ಕಂಡಿಕೆಗಳು ಸಂಚಯವಾಗುತ್ತಾ ಹೋದಲ್ಲಿ ಹಳೆಯ ಕಂಡಿಕೆಗಳ ತೀರುವಳಿಗೆ ದಾಖಲಾತಿಗಳನ್ನು ಒದಗಿಸಿ ತೀರುವಳಿ ಮಾಡಿಸುವುದು ಶ್ರಮದಾಯಕವಾಗುತ್ತದೆ. ಆಕ್ಷೇಪಣೆ ಕಂಡಿಕೆಗಳಿಗೆ ಪೂರಕ ದಾಖಲಾತಿಗಳೊಡನೆ ಸೂಕ್ತ ಅನುಪಾಲನಾ ವರದಿ ನೀಡುವ ಮೂಲಕ ಹಾಗೂ ವಸೂಲಾತಿ ಮೊತ್ತವನ್ನು ಸಂಬಂಧಿಸಿದವರಿಂದ ವಸೂಲಿಸಿ ಕೈಗೊಂಡ ಕ್ರಮಗಳ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವ ಮೂಲಕ ಕಂಡಿಕೆಗಳ ತೀರುವಳಿಗೆ ಕ್ರಮವಹಿಸಲು ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೂಚಿಸಲಾಗಿದ್ದರೂ ಯಾವುದೇ ಕ್ರಮ ವಹಿಸದಿರುವುದು ಕಂಡು ಬಂದಿದೆ.

ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ:ರಾಲೆಲೆಪ/ಲೆಪವಿ/30/ಅಡಹಾಕ್‌ಸ/2020–21/3556 ದಿನಾಂಕ:10.03.2021ರ ಪ್ರಕಾರ ಲೆಕ್ಕಪರಿಶೋಧನಾ ಕಾರ್ಯಕ್ರಮದ ಅವಧಿಯ ಮೂರನೇ ವಾರದಲ್ಲಿ ಹಿಂದಿನ ಸಾಲುಗಳ ಆಕ್ಷೇಪಣೆ ಮತ್ತು ವಸೂಲಾತಿಗಳ ಕಂಡಿಕೆಗಳ ತೀರುವಳಿಗೆ ಅನುಪಾಲನಾ ವರದಿಯೊಂದಿಗೆ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸುವಂತೆ ಏಚಾರಣಾ ಪತ್ರ ಸಂಖ್ಯೆ:164/04.02.2025ರಲ್ಲಿ ಕೋರಲಾಗಿತ್ತು. ಇದಕ್ಕೆ ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿ 2022–23ನೇ ಸಾಲಿನ ಕಂಡಿಕೆ ಸಂಖ್ಯೆ 20.7ಕ್ಕೆ ಮಾತ್ರ ಅನುಪಾಲನಾ ವರದಿ ಸಲ್ಲಿಸಿರುತ್ತಾರೆ. ಉಳಿದಂತೆ ಹಿಂದಿನ ಸಾಲುಗಳ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳಿಗೆ ಯಾವುದೇ ಅನುಪಾಲನಾ ವರದಿ ಅಥವಾ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಮತ್ತು ಇದುವರೆವಿಗೂ ಯಾವುದೇ ಅಡ್‌ಹಾಕ್ ಸಮಿತಿ ಸಭೆಗಳು ನಡೆದಿರುವುದಿಲ್ಲ.

1996–97 ರಿಂದ 2022–23ನೇ ಸಾಲಿನವರೆಗೆ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ವಿವರಗಳನ್ನು ಅನುಬಂಧ–1 ರಲ್ಲಿ, ತೀರುವಳಿಯಾಗಿರುವ ವಿವರಗಳನ್ನು ಅನುಬಂಧ–1(ಎ) ಮತ್ತು ಬಾಕಿ ಉಳಿದಿರುವ ಕಂಡಿಕೆಗಳ ವಿವರಗಳನ್ನು ಅನುಬಂಧ–1(ಬಿ)ನಲ್ಲಿ ನೀಡಲಾಗಿದೆ. ಸರ್ಕಾರದ ಆದೇಶ ಸಂಖ್ಯೆ:ಇಡಿ/20/ಯು.ಎನ್.ಇ /2021/ದಿ:09.11.2021ರನ್ವಯ ರಚಿಸಲಾಗಿರುವ ಅಡ್ಹಾಕ್ ಸಮಿತಿಗೆ

ವಿಶ್ವವಿದ್ಯಾನಿಲಯವು ಅನುಪಾಲನಾ ವರದಿಯನ್ನು ಮೂರಕ ದಾಖಲೆಗಳೊಡನೆ ಮಂಡಿಸುವ ಮೂಲಕ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ತಿರುವಳಿಗೆ ಕ್ರಮವಹಿಸಲು ಸೂಚಿಸಿದೆ.

8.1 ವಿಶ್ವವಿದ್ಯಾನಿಲಯದ ವಾರ್ಷಿಕ ವರದಿ ಮತ್ತು ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಡಿಸಲು ಸರ್ಕಾರಕ್ಕೆ ಸಲ್ಲಿಸಿರುವ ವಿವರ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿನಿಯಮ-1992ರ ಪ್ರಕರಣ 26 ಮತ್ತು 27ರಂತೆ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿ, ವಾರ್ಷಿಕ ಲೆಕ್ಕಗಳು ಮತ್ತು ಬ್ಯಾಲೆನ್ಸ್ ಶೀಟುಗಳನ್ನು ವ್ಯವಸ್ಥಾಪನಾ ಮಂಡಳಿಯ ನಿರ್ದೇಶನಗಳನುಸಾರ ಸಿದ್ಧಪಡಿಸಿ, ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ಲೆಕ್ಕಪರಿಶೋಧಿಸಿದ ವಾರ್ಷಿಕ ಲೆಕ್ಕಪತ್ರದ ಪ್ರತಿಯನ್ನು ಲೆಕ್ಕಪರಿಶೋಧನಾ ವರದಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಸಲ್ಲಿಸಿ, ಆ ಮುಖಾಂತರ ಶಾಸಕಾಂಗದ ಉಭಯ ಸಧನಗಳ ಮುಂದಿಟ್ಟು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಬೇಕಾಗಿರುತ್ತದೆ.

ಹೀಗೆ ಪ್ರಸಕ್ತ ಸಾಲಿನವರೆಗೆ ಮುಕ್ತ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಶಾಸಕಾಂಗದ ಉಭಯ ಸಧನಗಳ ಮುಂದಿಟ್ಟು ಅನುಮೋದನೆ ಪಡೆದಿರುವ ಹಾಗೂ ಕಳೆದ ಮೂರು ಹಣಕಾಸು ವರ್ಷಗಳ ವಾರ್ಷಿಕ ವರದಿ, ಲೆಕ್ಕಪತ್ರಗಳನ್ನು ಸರ್ಕಾರಕ್ಕೆ ಸಲ್ಲಿಸಿದ ಮಾಹಿತಿಯನ್ನು ಅಗತ್ಯ ಮೂರಕ ದಾಖಲೆಗಳೊಂದಿಗೆ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ಆಡಿಟ್ ವಿಚಾರಣೆ ಪತ್ರ ಸಂಖ್ಯೆ:146/01.02.2025 ರಂದು ನೀಡಲಾಗಿ, ವಿಶ್ವ ವಿದ್ಯಾನಿಯಲದಿಂದ ಯಾವುದೇ ವಿವರವನ್ನು ಲೆಕ್ಕಪರಿಶೋಧನೆಗೆ ನೀಡಿರುವುದಿಲ್ಲ.

ಹಿಂದಿನ ಸಾಲಿನ ಲೆಕ್ಕಪರಿಶೋಧನೆಗೆ ವಿಶ್ವವಿಯಾನಿಲಯದವರು ರಾಜ್ಯ ಸರ್ಕಾರಕ್ಕೆ ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸಿರುವ ಮಾಹಿತಿಯನ್ನು ಮಾತ್ರ ನೀಡಿದ್ದು, ವಿವರಗಳು ಕೆಳಕಂಡಂತಿರುತ್ತದೆ. ವಾರ್ಷಿಕ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿರುವುದಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

ಕ್ರ.ಸಂ	ವರ್ಷ	ಲೆಕ್ಕಪರಿಶೋಧನೆಗೊಂಡ ವಾರ್ಷಿಕ ಲೆಕ್ಕಪತ್ರಗಳನ್ನು ಸರ್ಕಾರಕ್ಕೆ ಸಲ್ಲಿಸಿದ ದಿನಾಂಕ
1	2019-20	22.12.2022
2	2020-21	05.04.2024

9.ಆಯವ್ಯಯ ಅಂದಾಜುಗಳು

ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಮೂಲ ಆಯವ್ಯಯ ಅಂದಾಜುಪಟ್ಟಿ ಹಾಗೂ ಪರಿಷ್ಕೃತ ಆಯವ್ಯಯ ಅಂದಾಜು ಪಟ್ಟಿಯನ್ನು ಪರಿಶೀಲಿಸಲಾಗಿ, ಮೂಲ ಆಯವ್ಯಯ ಅಂದಾಜು ಪಟ್ಟಿಯನ್ನು ದಿನಾಂಕ.17.03.2023 ರಂದು ನಡೆದ 86ನೇ ಹಣಕಾಸು ಸಮಿತಿ ಸಭೆ ಹಾಗೂ ದಿನಾಂಕ:18.03.2023ರಂದು

ನಡೆದ 171ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆಯಲಾಗಿದೆ. ಹಾಗೂ ಪರಿಷ್ಕೃತ ಆಯವ್ಯಯ ಅಂದಾಜು ಪಟ್ಟಿಯನ್ನು ದಿನಾಂಕ.07.03.2024 ರಂದು ನಡೆದ 88ನೇ ಹಣಕಾಸು ಸಮಿತಿ ಸಭೆ ಹಾಗೂ ದಿನಾಂಕ:07.03.2024ರಂದು ನಡೆದ 177ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆಯಲಾಗಿದೆ. ವಿವರಗಳನ್ನು **ಅನುಬಂಧ–2ರಲ್ಲಿ** ನೀಡಲಾಗಿದ್ದು, ಅದರ ಘೋಷ್ವಾರೆ ಕೆಳಕಂಡಂತಿದೆ.

2023–24ನೇ ಸಾಲು	ಆಯವ್ಯಯ ಅಂದಾಜು	ಪರಿಷ್ಕೃತ ಆಯವ್ಯಯ ಅಂದಾಜು	ವಾರ್ಷಿಕಲೆಕ್ಕಪತ್ರ ಪ್ರಕಾರ ಸ್ವೀಕೃತಿ	ಶೇಕಡವಾರು ವ್ಯತ್ಯಾಸ
ಸ್ವೀಕೃತಿಗಳು	125,60,70,000	148,39,87,000	138,04,75,901	–6.98
ಪಾವತಿಗಳು	314,23,08,001	245,41,35,002	166,65,69,618	–32.09

ಮೇಲೆ ವಿವರಿಸಿರುವಂತೆ 2023–24ನೇ ಸಾಲಿನ ಸ್ವೀಕೃತಿಯನ್ನು ಆಯವ್ಯಯ ಅಂದಾಜಿಗಿಂತ, ಪರಿಷ್ಕೃತ ಅಂದಾಜಿನಲ್ಲಿ ರೂ.22.79 ಕೋಟಿಗಳಷ್ಟು ಹೆಚ್ಚಿಸಿಕೊಳ್ಳಲಾಗಿರುತ್ತದೆ. ಆದರೆ ವಾಸ್ತವಿಕ ಸ್ವೀಕೃತಿಯು ಪರಿಷ್ಕೃತ ಅಂದಾಜಿಗಿಂತಲೂ ಶೇ.6.98%ರಷ್ಟು ಕಡಿಮೆಯಾಗಿರುವುದು ಕಂಡು ಬಂದಿರುತ್ತದೆ. ಅದೇ ರೀತಿ ಪಾವತಿಯನ್ನು ಆಯವ್ಯಯ ಅಂದಾಜಿಗಿಂತ, ಪರಿಷ್ಕೃತ ಅಂದಾಜಿನಲ್ಲಿ ರೂ.68.82 ಕೋಟಿಗಳಷ್ಟೂ ಕಡಿಮೆ ಮಾಡಲಾಗಿದೆ. ಆದರೆ ವಾಸ್ತವಿಕ ಪಾವತಿಯು ಪರಿಷ್ಕೃತ ಅಂದಾಜಿಗಿಂತಲೂ ಶೇ32.09%ರಷ್ಟು ಕಡಿಮೆಯಾಗಿರುತ್ತದೆ. ಆಯವ್ಯಯ ಅಂದಾಜುಗಳು ಹಾಗೂ ವಾರ್ಷಿಕ ಲೆಕ್ಕಗಳ ಆದಾಯ, ವೆಚ್ಚಗಳಿಗೆ ಹೊಂದಾಣಿಕೆ ಇಲ್ಲದಿರುವುದಕ್ಕೆ ವಿವರಣೆಯನ್ನು ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:65/16.12.2024ರಲ್ಲಿ ಕೋರಲಾಗಿತ್ತು. ಇದಕ್ಕೆ ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿರುವುದಿಲ್ಲ.


ಮುಂದಿನ ವರ್ಷದ ಆಯವ್ಯಯ ಅಂದಾಜುಗಳನ್ನು ಚಾಲ್ತಿ ವರ್ಷದಲ್ಲಿ ತಯಾರಿಸುವಾಗ ಹಿಂದಿನ ವರ್ಷದ ಅಂತಿಮ ಶಿಲ್ಕನ್ನು ಆರಂಭಿಕ ಶಿಲ್ಕಾಗಿ ತೆಗೆದುಕೊಂಡು ಚಾಲ್ತಿ ವರ್ಷದ ನಿರೀಕ್ಷಿತ ರಾಜಸ್ವವನ್ನು ಸೇರಿಸಿಕೊಂಡು, ಲಭ್ಯವಾಗುವ ಒಟ್ಟು ಮೊತ್ತದಿಂದ ಚಾಲ್ತಿ ವರ್ಷದ ನಿರೀಕ್ಷಿತ ವೆಚ್ಚಗಳನ್ನು ಕಳೆದು ಚಾಲ್ತಿ ವರ್ಷದ ಅಂತಿಮ ಶಿಲ್ಕನ್ನು ಅಂದಾಜಿಸಬಹುದಾಗಿರುತ್ತದೆ. ಈ ಮೊತ್ತವನ್ನು ನಂತರದ ವರ್ಷದ ಆಯವ್ಯಯ ಅಂದಾಜಿಗೆ ಆರಂಭಿಕ ಶಿಲ್ಕಾಗಿ ಪರಿಗಣಿಸಬೇಕಾಗಿರುತ್ತದೆ. ಅಲ್ಲದೆ ಒಟ್ಟಾರೆ ಆಯವ್ಯಯವನ್ನು ಗಮನಿಸಿದಾಗಲೂ ಸಹ ನಿರೀಕ್ಷಿತ ಆದಾಯ ರೂ.148.39 ಕೋಟಿಗಳಿದ್ದು, ನಿರೀಕ್ಷಿತ ವೆಚ್ಚವು ರೂ.245.41ಗಳಿದ್ದು ಆದಾಯಕಿಂತ ವೆಚ್ಚವು ರೂ.97.02 ಕೋಟಿ ಅಧಿಕವಾಗಿರುತ್ತದೆ. ಇದು ವಿಶ್ವವಿದ್ಯಾನಿಲಯದ ಹಣಕಾಸು ಸುಸ್ಥಿರತೆಯ ದೃಷ್ಟಿಯಿಂದ ಆರೋಗ್ಯಕರವಾದ ಬೆಳವಣಿಗೆಯಾಗಿರುವುದಿಲ್ಲ. ಆದ್ದರಿಂದ ವಿಶ್ವವಿದ್ಯಾನಿಲಯವು ಈ ಬಗ್ಗೆ ಪರಿಶೀಲಿಸಿ ಅಗತ್ಯ ಮಿತವ್ಯಯಗಳ ಕ್ರಮವಹಿಸುವಂತೆ ಹಾಗೂ ಕೈಗೊಂಡ ಕ್ರಮದ ಬಗ್ಗೆ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದೆ.

9.1 ಹಿಂದಿನ ಸಾಲುಗಳ ಆಯವ್ಯಯ ಅಂದಾಜುಗಳ ತುಲನಾತ್ಮಕ ವಿವರಗಳು

ವರ್ಷ	2019–20	2020–21	2021–22	2022–23	2023–24

ಸ್ವೀಕೃತಿಗಳು	58,97,63,000	184,11,58,847	106,03,61,882	150,50,20,500	148,39,87,000
ಪಾವತಿಗಳು	79,50,61,000	197,76,51,765	112,18,90,302	208,71,88,001	245,41,35,002

ಸ್ವೀಕೃತಿ ಮತ್ತು ಪಾವತಿಗಳ ಆಯವ್ಯಯ ಅಂದಾಜು ತುಲನೆ



ವಿಶ್ವವಿದ್ಯಾನಿಲಯದ ಹಿಂದಿನ ಸಾಲುಗಳ ಆಯವ್ಯಯ ಅಂದಾಜುಗಳನ್ನು ತುಲನಾತ್ಮಕವಾಗಿ ಪರಿಶೀಲಿಸಿದಾಗ 2020–21ನೇ ಸಾಲಿಗಿಂತ 2023–24ನೇ ಸಾಲಿನಲ್ಲಿ ಸ್ವೀಕೃತಿ ಹಾಗೂ ವೆಚ್ಚಗಳಲ್ಲಿ ಇಳಿಕೆ ಕಂಡಿದ್ದು ಇದು ಆರೋಗ್ಯಕರ ಬೆಳವಣಿಗೆಯಾಗಿರುವುದಿಲ್ಲ.

10. ಮುಕ್ತ ವಿಶ್ವವಿದ್ಯಾನಿಲಯದ ಸ್ವೀಕೃತಿಗಳು.

ವಿದ್ಯಾರ್ಥಿಗಳಿಂದ ಸಂಗ್ರಹಿಸುವ ಶುಲ್ಕ, ದಂಡ ಶುಲ್ಕಗಳು, ವಿಶ್ವವಿದ್ಯಾನಿಲಯದ ಆಸ್ತಿಗಳಿಂದ ಬರುವ ಬಾಡಿಗೆ ಮೊತ್ತಗಳು, ವಿಶ್ವವಿದ್ಯಾನಿಲಯವು ಬಾಹ್ಯ ಸಂಸ್ಥೆಗಳಿಗೆ ಒದಗಿಸುವ ಸೇವೆಗಳಿಗಾಗಿ ಪಡೆಯುವ ಶುಲ್ಕ, ಪ್ರಸಾರಾಂಗದಲ್ಲಿ ಪುಸ್ತಕ ಮಾರಾಟದಿಂದ ಬರುವ ಮೊತ್ತ, ರಾಜ್ಯ ಸರ್ಕಾರದಿಂದ ಬರುವ ಅನುದಾನ, ಕೇಂದ್ರ ಸರ್ಕಾರ, ಯು.ಜಿ.ಸಿ ಮತ್ತು ಅಂತರರಾಷ್ಟ್ರೀಯ ಏಜೆನ್ಸಿಗಳಿಂದ ಬರಬಹುದಾದ ಅನುದಾನಗಳು ಹಾಗೂ ಸಾರ್ವಜನಿಕ ದತ್ತಿಗಳು ಮತ್ತು ಕೊಡುಗೆಗಳು ವಿಶ್ವವಿದ್ಯಾನಿಲಯದ ಪ್ರಮುಖ ಸ್ವೀಕೃತಿಗಳಾಗಿರುತ್ತವೆ.

ವಿಶ್ವವಿದ್ಯಾನಿಲಯದಲ್ಲಿ ಅನುಮೋದಿತ ಪದ್ಧತಿ ಹಾಗೂ ನಮೂನೆಯಲ್ಲಿ ಸ್ವೀಕೃತಿಗೆ ಸಂಬಂಧಿಸಿದಂತೆ ನಿರ್ಧಿಷ್ಟ ವಹಿಯನ್ನು ಮತ್ತು ಖಿರ್ದಿ ಪುಸ್ತಕವನ್ನು ನಿರ್ವಹಿಸದಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಹಿಂದಿನ ವರ್ಷಗಳಿಂದ ಬರಬೇಕಾದ ಬಾಕಿ ಸ್ವೀಕೃತಿಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ವಿಶ್ವವಿದ್ಯಾನಿಲಯವು ಹಾಜರುಪಡಿಸಿದ ನಗದು ಪುಸ್ತಕಗಳು ಮತ್ತು ಬ್ಯಾಂಕ್ ಪಾಸ್ ಶೀಟ್‌ಗಳ ಅನುಸಾರ 2023–24ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಒಟ್ಟು ಆದಾಯ ರೂ.136,63,56,629/–ಗಳಾಗಿದ್ದು, ವಿವರಗಳು ಕೆಳಕಂಡಂತಿರುತ್ತದೆ.

ಕ್ರಸಂ	ವಿವರಗಳು	ಮೊತ್ತ (ರೂಗಳಲ್ಲಿ)
1	ಅನುದಾನ	7,05,000/-
2	ಶುಲ್ಕಗಳು ಮತ್ತು ಇತರೆ	101,65,58,493/-
3	ಉಳಿತಾಯ ಬಡ್ಡಿ	1,01,34,060/-
4	ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ	33,89,56,910/-
5	ಇತರೆ ಸ್ವೀಕೃತಿ	2,166/-
	ಒಟ್ಟು	**136,63,56,629/-**

ಮುಕ್ತ ವಿಶ್ವವಿದ್ಯಾನಿಲಯವು ಈ ಸಾಲಿನಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಿಂದ ಆಂತರಿಕವಾಗಿ ವರ್ಗಾವಣೆ ಮಾಡಿಕೊಂಡಿರುವ ಹಣದ ಒಟ್ಟು ಮೊತ್ತ ರೂ.1,01,68,345/-ಗಳನ್ನು ಹಾಗೂ ಬ್ಯಾಂಕ್ ಖಾತೆಗೆ ಜಮೆಯಾಗದ ಠೇವಣಿಗಳ ಬಡ್ಡಿ ಮೊತ್ತ ರೂ.15,36,715/- ಹಾಗೂ (-)3,77,850/-ಗಳ ಸ್ವೀಕೃತಿ ಮೊತ್ತವನ್ನು ವಾರ್ಷಿಕ ಲೆಕ್ಕಗಳ ಕ್ರೋಢೀಕೃತ ತಃಖ್ತೆಯ ಸ್ವೀಕೃತಿ ಭಾಗದ ಲೆಕ್ಕದಲ್ಲಿ ತೋರಿಸಲಾಗಿದೆ. ಆದರೆ, ಇವುಗಳು ನೈಜವಾಗಿ ವಿಶ್ವವಿದ್ಯಾಲಯದ ಆದಾಯಗಳಾಗಿರುವುದಿಲ್ಲ. ಹೀಗಾಗಿ ಇವುಗಳನ್ನು ಆದಾಯದ ಗುಂಪಿನಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳುವುದರಿಂದ ವಾಸ್ತವಿಕ ಆದಾಯಕ್ಕಿಂತ ಹೆಚ್ಚು ಮೊತ್ತವನ್ನು ಉತ್ಪ್ರೇಕ್ಷಿಸಿ ಆದಾಯವೆಂದು ತೋರಿಸಿದಂತಾಗುತ್ತದೆ. ಹಣಕಾಸು ವಿಭಾಗದಲ್ಲಿ ಕೂಲಂಕಶವಾಗಿ ಪರಿಶೀಲಿಸಿ ಸ್ವೀಕೃತಿ ಮತ್ತು ಪಾವತಿಗಳಿಂದ ನೈಜ ಆದಾಯ ಮತ್ತು ವೆಚ್ಚಗಳ ಅಂಕಿ ಅಂಶಗಳನ್ನು ತೆಗೆದುಕೊಂಡು ಆದಾಯ-ವೆಚ್ಚಗಳ ತಃಖ್ತೆಯನ್ನು ತಯಾರಿಸಲು ಸೂಚಿಸಿದೆ.

10.1 ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಪರೀಕ್ಷಾ ಶುಲ್ಕಕ್ಕೆ ಬ್ಯಾಂಕಿನವರು ವಹಿವಾಟು ಶುಲ್ಕ ವಿಧಿಸುತ್ತಿರುವುದು.

ಮುಕ್ತ ವಿಶ್ವವಿದ್ಯಾನಿಲಯದವರು ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಸಾಮಾನ್ಯ ನಿಧಿ ಖಾತೆ ಹಾಗೂ ಪರೀಕ್ಷಾ ನಿಧಿ ಖಾತೆಗಳ ನಗದು ಪುಸ್ತಕ ಮತ್ತು ಬ್ಯಾಂಕ್ ಸ್ಟೇಟ್‌ಮೆಂಟ್‌ನ್ನು ಪರಿಶೀಲಿಸಲಾಗಿ ಒಟ್ಟು ರೂ.27,915/-ಗಳನ್ನು ಬ್ಯಾಂಕ್ ಶುಲ್ಕ (Bank charges) ಎಂದು ನಮೂದಿಸಿ ಪಾವತಿ ಭಾಗದಲ್ಲಿ ಈ ಕೆಳಕಂಡಂತೆ ಕಟಾಯಿಸಿರುವುದು ಕಂಡು ಬಂದಿರುತ್ತದೆ.

ಕ್ರಸಂ	ಖಾತೆ ಹೆಸರು	ಖಾತೆ ಸಂಖ್ಯೆ	ಮೊತ್ತ
1	ಸಾಮಾನ್ಯ ನಿಧಿ	54035420117	10547.00
		31051187090	2348.00

2	ಪರೀಕ್ಷಾ ನಿಧಿ	5403520128	10547.00
		31106997538	4473.00
		ಒಟ್ಟು ಮೊತ್ತ	**27915.00**

ಮುಕ್ತ ವಿಶ್ವವಿದ್ಯಾನಿಲಯವು ಶೈಕ್ಷಣಿಕ ಚಟುವಟುಕೆಗಳ ಸಂಸ್ಥೆಯಾಗಿದ್ದು, ಯಾವುದೇ ವಾಣಿಜ್ಯ ಹಾಗೂ ಲಾಭದ ಉದ್ದೇಶದಿಂದ ಸ್ಥಾಪಿತವಾದ ಸಂಸ್ಥೆಯಾಗಿರುವುದಿಲ್ಲ ಹೀಗಾಗಿ ಸಂಬಂಧಪಟ್ಟ ಬ್ಯಾಂಕ್‌ಗಳೊಂದಿಗೆ ಪತ್ರ ವ್ಯವಹಾರ ನಡೆಸಿ ಕಟಾಯಿಸಲಾಗಿರುವ ಬ್ಯಾಂಕ್ ಶುಲ್ಕ ರೂ.27,915/-ಗಳ ಮರುಭರಿಕೆಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

ಬ್ಯಾಂಕಿನವರು ವಹಿವಾಟು ಶುಲ್ಕ ವಿಧಿಸುತ್ತಿರುವುದು ವಿಶ್ವವಿದ್ಯಾನಿಲಯಕ್ಕೆ ಅನಗತ್ಯ ಆರ್ಥಿಕ ಹೊರೆಯಾಗಿರುತ್ತದೆ. ವರ್ಷದಿಂದ ವರ್ಷಕ್ಕೆ ವಹಿವಾಟು ಶುಲ್ಕವೂ ಅಧಿಕವಾಗುತ್ತಿದ್ದು, ಇದು ಮುಂದಿನ ದಿನಗಳಲ್ಲಿ ವಿಶ್ವವಿದ್ಯಾನಿಲಯ ಹಾಗೂ ವಿದ್ಯಾರ್ಥಿಗಳಿಗೂ ಕೂಡ ಆರ್ಥಿಕ ಹೊರೆಯಾಗಿ ಪರಿಣಮಿಸುವುದರಿಂದ, ಬ್ಯಾಂಕ್‌ನವರು ವಹಿವಾಟು ಶುಲ್ಕ ಕಟಾವಣೆ ಮಾಡದಂತೆ ವಿಶ್ವವಿದ್ಯಾನಿಲಯದಿಂದ ಕೈಗೊಂಡಿರುವ ಕ್ರಮದ ಬಗ್ಗೆ ವಿವರಣೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:199/19.02.2025ರಲ್ಲಿ ಕೋರಲಾಗಿ, ವಿಶ್ವವಿದ್ಯಾನಿಲಯದವರು ದಿನಾಂಕ:28.02.2025ರಂದು ನೀಡಿರುವ ಅನುಪಾಲನಾ ವರದಿಯಲ್ಲಿ ಕಡಿತಗೊಳಿಸಿರುವ ಶುಲ್ಕವನ್ನು ವಿಶ್ವವಿದ್ಯಾನಿಲಯದ ಬ್ಯಾಂಕ್ ಖಾತೆಗಳಿಗೆ ಹಿಂಪಾವತಿಸುವಂತೆ ಕೋರಿ ಸಂಬಂಧಪಟ್ಟ ಬ್ಯಾಂಕ್‌ಗಳಿಗೆ ಪತ್ರ ವ್ಯವಹಾರ ಮಾಡಿದ್ದು ಕಡಿತಗೊಳಿಸಿರುವ ಮೊತ್ತವನ್ನು ವಿಶ್ವವಿದ್ಯಾನಿಲಯದ ಬ್ಯಾಂಕ್ ಖಾತೆಗೆ ಹಿಂಪಡೆಯಲಾಗುವುದು ಎಂದು ತಿಳಿಸಿರುತ್ತಾರೆ. ಬ್ಯಾಂಕ್ ಖಾತೆಗಳನ್ನು ನಿರ್ವಹಿಸಲು ಮಾರ್ಗಸೂಚಿಗಳನ್ನು ಆರ್ಥಿಕ ಇಲಾಖೆಯ ನಡವಳಿ ಸಂಖ್ಯೆ: FD 5 TAR 2017 dated:30.1.2017 ರ Para 9 (a) of Part A (II) ರನ್ವಯ ಬ್ಯಾಂಕ್ ರವರೊಂದಿಗೆ ತಿಳಿವಳಿಕೆ ಪತ್ರ ಮಾಡಿಕೊಂಡು ಕಡಿತವಾಗಿರುವ ವಹಿವಾಟು ಶುಲ್ಕಗಳ ಮೊತ್ತ **ರೂ.27,915/-ಗಳನ್ನು** ಬ್ಯಾಂಕ್‌ನವರಿಂದ ವಸೂಲಿಸಿ ಸಂಬಂಧಿಸಿದ ಬ್ಯಾಂಕ್ ಖಾತೆಗಳಿಗೆ ಮರುಜಮೆ ಮಾಡುವವರೆಗೆ **ವಸೂಲಾತಿಗೆ ಸೂಚಿಸಿದೆ.**

10.2 ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಬ್ಯಾಂಕ್ ಕಟ್ಟಡದಿಂದ ರೂ.2,16,000/-ಗಳ ಬಾಡಿಗೆಯನ್ನು ಕಡಿಮೆ ವಸೂಲಿಸಿರುವುದು ಮತ್ತು ವಿದ್ಯುತ್ ಶುಲ್ಕವನ್ನು ವಸೂಲಿಸಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸದಿರುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿ ನಿರ್ಮಾಣಗೊಂಡಿರುವ ಕಟ್ಟಡವನ್ನು ಬ್ಯಾಂಕ್‌ಗೆ ಬಾಡಿಗೆಗೆ ನೀಡಲು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳ ಜಲಸಾರಿಗೆ ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರು ತಮ್ಮ ಪತ್ರ ಸಂಖ್ಯೆ:ಕಾ.ಇಂ.ಮೈ.ವಿ.ಮೈ, ಎಇ-3 ಬಾಡಿಗೆ ನಿಗದಿ:11-12/1757, ದಿನಾಂಕ:10.03.2011ರಲ್ಲಿ ಕಟ್ಟಡದ ಬಾಡಿಗೆಯನ್ನು ಮಾಹೆಯಾನ ರೂ.37,500/-ಗಳಿಗೆ ನಿಗದಿಪಡಿಸಿರುತ್ತಾರೆ. ಆದರೆ ಬ್ಯಾಂಕ್‌ನವರೊಂದಿಗೆ ವಿಶ್ವವಿದ್ಯಾನಿಲಯವು 15 ವರ್ಷಗಳವರೆಗೆ ಪ್ರತಿ 5

ವರ್ಷಕ್ಕೊಮ್ಮೆ ಶೇ.20ರ ಪ್ರಮಾಣದಲ್ಲಿ ಬಾಡಿಗೆ ಮೊತ್ತವನ್ನು ಹೆಚ್ಚಿಸುವ ಷರತ್ತಿನ ಮೇಲೆ ಮಾಹೆಯಾನ ರೂ.25,000/–ಗಳಿಗೆ ಬಾಡಿಗೆ ನಿಗದಿಪಡಿಸಿ ದಿನಾಂಕ:16.08.2012 ರಂದು ದಿನಾಂಕ:01.02.2012 ರಿಂದ ಪೂರ್ವಾನ್ವಯವಾಗುವಂತೆ ಭೋಗ್ಯಪತ್ರವನ್ನು ಮಾಡಿಕೊಂಡಿರುತ್ತಾರೆ. ಈ ಬಗ್ಗೆ ಈ ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಆಕ್ಷೇಪಿಸಿ ವಸೂಲಾತಿಗೆ ಸೂಚಿದ್ದರೂ 2023–24ನೇ ಸಾಲಿನಲ್ಲಿಯೂ ರೂ.2,16,000/–ಗಳ ಕಡಿಮೆ ಬಾಡಿಗೆ ನಿಗದಿಪಡಿಸಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟುಮಾಡಲಾಗಿದೆ. ವಿವರಗಳು ಕೆಳಕಂಡಂತಿದೆ.

ಕ್ರ.ಸಂ	ಮಾಹೆ	ತಿಂಗಳು	ನಿಗದಿಪಡಿಸಬೇಕಾದ ಮಾಹೆಯಾನ ಬಾಡಿಗೆ ಮೊತ್ತ	ವಿಶ್ವವಿದ್ಯಾನಿಲಯ ನಿಗದಿಪಡಿಸಿರುವ ಮಾಹೆಯಾನ ಬಾಡಿಗೆ ಮೊತ್ತ	ವ್ಯತ್ಯಾಸ
1	ಏಪ್ರಿಲ್–21 ರಿಂದ ಮಾರ್ಚ್–2023ರವರೆಗೆ	12	54000 * 12 = 648000	36000 * 12 = 432000	**216000**

ಇದಲ್ಲದೆ ಕರಾರು ಪತ್ರದ ನಿಬಂಧನೆಗಳ ಕ್ರ.ಸಂ.9ರನ್ವಯ ಬ್ಯಾಂಕಿಗೆ ಬಾಡಿಗೆಗೆ ನೀಡಿರುವ ಕಟ್ಟಡಕ್ಕೆ ಸಂಬಂಧಿಸಿದಂತೆ ವಿದ್ಯುಚ್ಛಕ್ತಿ ಮತ್ತು ನೀರು ಸರಬರಾಜು ಶುಲ್ಕಗಳನ್ನು ಬ್ಯಾಂಕಿನವರು ಪಾವತಿಸಬೇಕಾಗಿದ್ದು ಈ ಸಂಬಂಧ ಬ್ಯಾಂಕಿನವರು ಪಾವತಿ ಮಾಡಿರುವ ವಿದ್ಯುತ್ ಮತ್ತು ಸರಬರಾಜು ಶುಲ್ಕಗಳ ವಿವರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಹಾಗೂ ಭಾರತೀಯ ಸ್ಟೇಟ್ ಬ್ಯಾಂಕಿನವರು ಪ್ರತಿ ಮಾಹೆಯ ಬಾಡಿಗೆ ಮೊತ್ತ ರೂ.36,000/–ಗಳಲ್ಲಿ ಶೇ 10ರಷ್ಟು ಆದಾಯ ತೆರಿಗೆ (ಟಿಡಿಎಸ್) ಕಟಾಯಿಸಿ ನಿವ್ವಳ ಪಾವತಿ ಮೊತ್ತ ರೂ.32,400/–ಗಳನ್ನು ಮುಕ್ತ ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ ಖಾತೆ(ಸಂಖ್ಯೆ:54035420117)ಗೆ ನೇರ ಜಮೆ ಮಾಡಿರುವುದು ಬ್ಯಾಂಕ್ ಸ್ಟೇಟ್‌ಮೆಂಟ್‌ಗಳ ಪರಿಶೀಲನೆಯಿಂದ ತಿಳಿದುಬಂದಿದ್ದು, ಒಟ್ಟು ಟಿಡಿಎಸ್ ಕಟಾವಣೆ ಮೊತ್ತ ರೂ.43,200/–ಗಳಿಗೆ (ರೂ.3600 x 12 ತಿಂಗಳು) ಬ್ಯಾಂಕಿನಿಂದ ಪಡೆದ ನಮೂನೆ–16ಎ ಹಾಗೂ ಟಿಡಿಎಸ್ ಹಿಂಭರಿಕೆಗೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆಯಿಂದ ಪಡೆದ ನಮೂನೆ–26ಎಎಸ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ಲೆಕ್ಕ ತಪಾಸಣಾ ವಿಚಾರಣೆ ಪತ್ರ ಸಂಖ್ಯೆ:200/19.02.2025ನ್ನು ನೀಡಲಾಗಿತ್ತು. ಇವಕ್ಕೆ ವಿಶ್ವವಿದ್ಯಾನಿಲಯವು ಯಾವುದೇ ವಿವರವನ್ನು ಲೆಕ್ಕಪರಿಶೋಧನಗೆ ನೀಡಿರುವುದಿಲ್ಲ.

ಮೇಲೆ ವಿವರಿಸಿರುವಂತೆ ಲೋಕೋಪಯೋಗಿ ಇಲಾಖೆಯವರು ನಿಗದಿಪಡಿಸಿದ ದರಕ್ಕಿಂತ ಕಡಿಮೆ ನಿಗದಿಪಡಿಸುವ ಮೂಲಕ ವಿಶ್ವವಿದ್ಯಾನಿಲಯಕ್ಕೆ ನಷ್ಟವುಂಟು ಮಾಡಿರುವ **ರೂ.2,16,000/–ಗಳನ್ನು ವಸೂಲಿಸಲು ಸೂಚಿಸಿದೆ** ಹಾಗೂ ಆದಾಯ ತೆರಿಗೆ ಟಿಡಿಎಸ್ ಕಟಾವಣೆ ಮೊತ್ತ ರೂ.32,400/–ಗಳಿಗೆ ನಮೂನೆ–16ಎ ಮತ್ತು ನಮೂನೆ–26ಎಎಸ್‌ಗಳನ್ನು ಹಾಜರುಪಡಿಸುವವರೆಗೆ ರೂ.**32,400/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

10.3 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ವಾಣಿಜ್ಯ ಕಟ್ಟಡಗಳ ವಿವರಗಳನ್ನು ಹಾಜರುಪಡಿಸದಿರುವುದು.

2023–24ನೇ ಸಾಲಿನಲ್ಲಿ ಕರಮುವಿವಿ ವ್ಯಾಪ್ತಿಯ ವಾಣಿಜ್ಯ ಕಟ್ಟಡಗಳು, ಭವನ, ಸಭಾಂಗಣ ಹಾಗೂ ವಿವಿ ಆವರಣದ ಬಾಡಿಗೆಗೆ ಸಂಬಂಧಿಸಿದಂತೆ ಹಾಜರುಪಡಿಸಿದ ಕಾರ್ಯಕ್ರಮವಾರು ಬಾಡಿಗೆ ಸ್ವೀಕೃತಿ ವಿವರಗಳ ತಃಖ್ತೆ ಪರಿಶೀಲಿಸಲಾಗಿ ಕಛೇರಿ ಆದೇಶ ಸಂಖ್ಯೆ:ಕರಾಮುವಿ:ಇಂಶಾ:41/2018–19 ದಿನಾಂಕ:05.12.2018 ಹಾಗೂ ಕಛೇರಿ ಆದೇಶ ಸಂಖ್ಯೆ:ಕರಾಮುವಿ:ಯುಇಡಿ:06:2023–24 ದಿನಾಂಕ:03.08.2023 ಮತ್ತು 15.12.2023ರಲ್ಲಿ ವ್ಯವಸ್ಥಾಪನಾ ಮಂಡಳಿಯ ಸಾಮಾನ್ಯ ಸಭೆಗಳಲ್ಲಿನ ತೀರ್ಮಾನದೊಂದಿಗೆ ಮತ್ತು ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ನಿಗದಿಪಡಿಸಿದ ದರಗಳನ್ವಯ ವಿವಿಧ ಖಾಸಗಿ ಕಾರ್ಯಕ್ರಮಗಳಿಗೆ ಬಾಡಿಗೆ ನೀಡಿರುವ ಬಾಬ್ತು ರೂ.52,83,568/–ಗಳನ್ನು ಸಂಗ್ರಹಿಸಲಾಗಿದೆ. ವಿವರಗಳನ್ನು **ಅನುಬಂಧ–3ರಲ್ಲಿ** ನೀಡಿದೆ. ಆದರೆ ನಿಯಮಾನುಸಾರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಒಡೆತನದ ಕಟ್ಟಡ ಮತ್ತು ಜಾಗಗಳನ್ನು ಕೆ,ಪಿ,ಡಬ್ಲ್ಯೂಡಿ ಕಾರ್ಯಪಾಲಕ ಅಭಿಯಂತರರು ಪರಿಶೀಲಿಸಿ ಬಾಡಿಗೆ ದರ ನಿಗದಿಪಡಿಸಬೇಕಾಗಿರುತ್ತದೆ. ಹೀಗೆ ವಿವಿ ಸ್ಥಿರಾಸ್ತಿಗಳ ಬಾಡಿಗೆ ದರ ನಿಗದಿಗೆ ಸೂಕ್ತ ಮಾನದಂಡಗಳನ್ನು ಅನುಸರಿಸದೆ ಇರುವುದಕ್ಕೆ ವಿವರಣೆ ನೀಡುವುದರ ಜೊತೆಗೆ ವಾಸ್ತವವಾಗಿ ಬಾಡಿಗೆಗೆ ಲಭ್ಯವಿರುವ ವಾಣಿಜ್ಯ ಕಟ್ಟಡಗಳ ಕ್ರೋಢೀಕೃತ ಪಟ್ಟಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ಆಡಿಟ್ ವಿಚಾರಣೆ ಪತ್ರ ಸಂಖ್ಯೆ:201/19.02.2025ನ್ನು ನೀಡಲಾಗಿತ್ತು. ಇದಕ್ಕೆ ವಿಶ್ವವಿದ್ಯಾನಿಲಯವು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಆದ್ದರಿಂದ ಮುಕ್ತ ವಿಶ್ವವಿದ್ಯಾನಿಲಯದ ಒಡೆತನದಲ್ಲಿರುವ ಕಟ್ಟಡಗಳು, ಭವನಗಳು, ಸಭಾಂಗಣಗಳು, ಮೈದಾನ ಮತ್ತು ಇತರೆ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ಬಾಡಿಗೆಗೆ ನೀಡುತ್ತಿರುವ, ಬಾಡಿಗೆಗೆ ನೀಡದ ಕಟ್ಟಡ ಮತ್ತು ಭವನಗಳೆಷ್ಟು ? ಮತ್ತು ಬರಬೇಕಾದ ಬಾಡಿಗೆ ಎಷ್ಟು ? ವಸೂಲಾಗದೆ ಬಾಕಿ ಉಳಿದಿರುವ ಬಾಡಿಗೆ ಎಷ್ಟು ? ಎಂಬ ವಿವರಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಸಕ್ಷಮ ಪ್ರಾಧಿಕಾರವು ಕೋರಿರುವ ವಿವರಗಳನ್ನು ಕ್ರೋಢೀಕರಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

10.4 ಮುಕ್ತ ಗಂಗೋತ್ರಿಯ ಆವರಣದಲ್ಲಿರುವ ಎಸ್.ಬಿ.ಐ. ಬ್ಯಾಂಕ್ ಪಕ್ಕದ ಕ್ಯಾಂಟೀನ್‌ನ ಬಾಡಿಗೆ ವಿವರಗಳನ್ನು ಹಾಜರುಪಡಿಸದಿರುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮುಕ್ತ ಗಂಗೋತ್ರಿಯ ಆವರಣದಲ್ಲಿರುವ ಬ್ಯಾಂಕ್ ಪಕ್ಕದಲ್ಲಿರುವ ಕ್ಯಾಂಟೀನ್‌ನ ಬಾಡಿಗೆ ವಿವರಗಳನ್ನು ಹಾಜರುಪಡಿಸುವಂತೆ **ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂ:** 202/19.02.2025ರಲ್ಲಿ ಕೋರಲಾಗಿದ್ದು, ವಿಶ್ವವಿದ್ಯಾನಿಲಯದವರು ನೀಡಿರುವ ಅನುಪಾಲನಾ ವರದಿಯಲ್ಲಿ ವಿಶ್ವವಿದ್ಯಾನಿಲಯದಿಂದ ಆಹ್ವಾನಿಸಿದ್ದ ಟೆಂಡರ್ ಅಧಿಸೂಚನೆಗೆ ಸಂಬಂಧಿಸಿದಂತೆ ಯಾವುದೇ ಬಿಡ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಿರುವುದಿಲ್ಲ. ಆದ್ದರಿಂದ ಸದರಿ ಮಳಿಗೆಯನ್ನು ಯಾರಿಗೂ ಬಾಡಿಗೆಗೆ ನೀಡಿರುವುದಿಲ್ಲ ಎಂಬ ಉತ್ತರವನ್ನು ನೀಡಿರುತ್ತಾರೆ202 ಆದ್ದರಿಂದ ಸಂಬಂಧಿಸಿದವರ ಹೊಣೆಗಾರಿಕೆಯ ಮೇಲೆ .32–4ನೇ ಸಾಲಿನ ಕ್ಯಾಂಟೀನ್‌ನ ಬಾಡಿಗೆ ಸ್ವೀಕೃತಿಯು ಎಂದು ಪರಿಗಣಿಸಲಾಗಿದೆ 'ಶೂನ್ಯ'.

10.5 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2023–24ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ವಿವರಗಳ ಪರಿಶೀಲನೆ.

ಕರ್ನಾಟಕ ರಾಜ್ಯದ ಏಕೈಕ ದೂರ ಶಿಕ್ಷಣ ಒದಗಿಸುವ ಸಂಸ್ಥೆಯಾಗಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ''ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ'' ಎಂಬ ಧ್ಯೇಯೋಕ್ತಿಯಿಂದ ಮುಕ್ತ ಕಲಿಕೆ ವ್ಯವಸ್ಥೆಯನ್ನು ದೂರ ಶಿಕ್ಷಣ ವಿಧಾನದಲ್ಲಿ ಒದಗಿಸುತ್ತಿದ್ದು, ಯುಜಿಸಿ–ಡಿಇಬಿ ಮಾರ್ಗಸೂಚಿಗಳ ಪ್ರಕಾರ ವರ್ಷಕ್ಕೆ ಜನವರಿ ಮತ್ತು ಜೂನ್‌ನಲ್ಲಿ ಎರಡು ಆವೃತ್ತಿಗಳಲ್ಲಿ ಕೋರ್ಸ್‌ಗಳಿಗೆ ಪ್ರವೇಶಾತಿಯನ್ನು ಆನ್‌ಲೈನ್ ನೋಂದಣಿಯ ಮೂಲಕ ಒದಗಿಸಲಾಗುತ್ತಿದೆ.

2023–24ನೇ ಶೈಕ್ಷಣಿಕ ಸಾಲಿಗೆ ಜುಲೈ ಮತ್ತು ಜನವರಿ, ಎರಡು ಆವೃತ್ತಿಗಳಲ್ಲಿ ರಾಜ್ಯದ ವಿವಿಧ ಕೇಂದ್ರಗಳಿಂದ ಪ್ರವೇಶಾತಿ ಪಡೆದಿರುವ ಸ್ನಾತಕ/ಸ್ನಾತಕೋತ್ತರ/ಸ್ನಾತಕೋತ್ತರ ಸರ್ಟಿಫಿಕೇಟ್ ಕಾರ್ಯಕ್ರಮ/ಡಿಪ್ಲೊಮಾ ಕಾರ್ಯಕ್ರಮಗಳ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕಕ್ಕೆ ಸಂಬಂಧಿಸಿದಂತೆ ಹಾಜರುಪಡಿಸಲಾದ ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಲಾಗಿ ಸದರಿ ಸಾಲಿನಲ್ಲಿ ಒಟ್ಟು 76,499 ವಿದ್ಯಾರ್ಥಿಗಳ ಪ್ರವೇಶಾತಿಯಿಂದ ಸಂಗ್ರಹವಾಗಬೇಕಾದ ಒಟ್ಟು ಪ್ರವೇಶಾತಿ ಶುಲ್ಕದ ಬೇಡಿಕೆ, ಸಂಗ್ರಹಣೆಯಾಗಿರುವ ಶುಲ್ಕ ಹಾಗೂ ಸಂಗ್ರಹಿಸದೇ ಬಾಕಿ ಉಳಿದ ಶುಲ್ಕದ ವಿವರಗಳು ಕೆಳಗಿನಂತಿವೆ:

2023–24ನೇ ಸಾಲಿನ ಪ್ರವೇಶಾತಿ ಶುಲ್ಕದ ಬೇಡಿಕೆ–ವಸೂಲಾತಿ–ಬಾಕಿ ವಿವರ

ಫೋಷ್ಠರೆ

ಪ್ರವೇಶಾತಿ ವಿವರ		ವಿದ್ಯಾರ್ಥಿಗಳ ಸಂಖ್ಯೆ	ಆರಂಭಿಕ ಶಿಲ್ಕು	ಬೇಡಿಕೆ	ವಸೂಲಾತಿ	ಬಾಕಿ
ಜುಲೈ	ಪ್ರಥಮ ವರ್ಷ	25045	1285660	317828612	317000837	2113435
ಆವೃತ್ತಿ	ದ್ವಿತೀಯ ವರ್ಷ	18984	1603508	180912245	180348899	2166854
ಜನವರಿ	ಪ್ರಥಮ ವರ್ಷ	17879	80994	264187848	262948423	1320419
ಆವೃತ್ತಿ	ದ್ವಿತೀಯ ವರ್ಷ	14541	0	166846787	166721446	125341
ಒಟ್ಟು		**76449**	**29,70,162**	**92,97,75,492**	**92,70,19,605**	**57,26,049**

ಈ ಮೇಲಿನ ಕೋಷ್ಠಕದಲ್ಲಿ ವಿವರಿಸಿರುವಂತೆ ಸಂಗ್ರಹಿಸದೇ ಬಾಕಿ ಉಳಿದ ಮೊತ್ತ ರೂ.57,26,049/– ಗಳಲ್ಲಿ ಆರಂಭಿಕ ಶಿಲ್ಕು ರೂ.29,70,162/– ಗಳನ್ನು 2022–23ನೇ ಸಾಲಿನ ಲೆಕ್ಕಪರಿಶೋಧನೆ ವರದಿಯಲ್ಲಿ ವಸೂಲಾತಿಗೆ ಸೂಚಿಸಿರುವುದರಿಂದ ಉಳಿಕೆ ಮೊತ್ತ ರೂ.27,55,887/– ಗಳಲ್ಲಿ ರೂ.57,875/– ಗಳು ವಿದ್ಯಾರ್ಥಿಗಳು ಪ್ರವೇಶಾತಿ ಶುಲ್ಕ ಪಾವತಿ ಸಂದರ್ಭ ಕೆಲವು ಕೋರ್ಸ್‌ಗಳಿಂದ ಕಡಿಮೆ ಶುಲ್ಕ ಸ್ವೀಕೃತಿಯಾಗಿರುತ್ತದೆ (ವಿವರಗಳನ್ನು **ಅನುಬಂಧ–4ರಲ್ಲಿ** ವಿವರಿಸಿದೆ) ಹಾಗೂ ರೂ.26,98,012/–ಗಳು ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿಯಡಿ ಪ್ರವೇಶಾತಿಯನ್ನು ನೀಡಲಾಗಿದ್ದು, ಸರ್ಕಾರದಿಂದ ಮರುಭರಿಕೆಯಾಗಬೇಕಾಗಿರುತ್ತದೆ.

ಈ ಬಗ್ಗೆ ಸೂಕ್ತ ವಿವರಣೆ ಕೋರಿ ಲೆಕ್ಕಪರಿಶೋಧನಾ ವಿಚಾರಣೆ ಪತ್ರ ಸಂಖ್ಯೆ:155/03.02.2025ರಲ್ಲಿ ಕೋರಲಾಗಿ, ವಿಶ್ವವಿದ್ಯಾನಿಯದವರು ಯಾವುದೇ ಅನುಪಾಲನಾ ವರದಿ ನೀಡಿರುವುದಿಲ್ಲ. ಈ ಮೇಲೆ ತಿಳಿಸಿರುವಂತೆ

ವಿದ್ಯಾರ್ಥಿಗಳಿಂದ ಕಡಿಮೆ ಶುಲ್ಕ ಸ್ವೀಕೃತಿಯಾಗಿರುವ ಮೊತ್ತ ರೂ.57,875/- ಹಾಗೂ ಸರ್ಕಾರದಿಂದ ಹಿಂಭರಿಕೆ ಮಾಡಿಕೊಳ್ಳದ ಮೊತ್ತ ರೂ.26,98,012/- ಒಟ್ಟು ರೂ.**27,55,887/-ಗಳನ್ನು ಸಂಬಂಧಿಸಿದ** ಇಲಾಖೆಯಿಂದ/ವಿದ್ಯಾರ್ಥಿಗಳಿಂದ ಹಿಂಭರಿಕೆ/ವಸೂಲಾತಿ ಮಾಡಿ ವಿಶ್ವವಿದ್ಯಾನಿಲಯದ ಲೆಕ್ಕಶೀರ್ಷಿಕೆಗೆ ಜಮೆ ಮಾಡಲು ಸೂಚಿಸಿದೆ. **ಅನುಬಂಧ-5 ಮತ್ತು 5(ಎ)ರಲ್ಲಿ** ಪ್ರವೇಶಾತಿ ಶುಲ್ಕದ ಬೇಡಿಕೆ-ವಸೂಲಾತಿ-ಬಾಕಿ ವಿವರಗಳನ್ನು ಒದಗಿಸಿದ್ದು, ವರದಿಗೆ ಲಗತ್ತಿಸಿದೆ.

10.6 ಕೆ.ಎಸ್.ಓ.ಯು ಆನ್‌ಲೈನ್ ಕಾರ್ಯಕ್ರಮಗಳು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 2023-24ನೇ ಸಾಲಿನಿಂದ ಆನ್‌ಲೈನ್ ಮೂಲಕವೂ ಸಹ ಪ್ರವೇಶಾತಿಯನ್ನು ಪ್ರಾರಂಭಿಸಿದ್ದು, ಪದವಿ ಕಾರ್ಯಕ್ರಮಗಳಿಗೆ ನೋಂದಣಿಯಾಗುವ ವಿದ್ಯಾರ್ಥಿಗಳಿಗೆ ಯಾವುದೇ ಸ್ಥಳದಿಂದ ಪ್ರವೇಶಾತಿಯ ಅವಕಾಶವನ್ನು ಒದಗಿಸಿ, ಉನ್ನತ ಶಿಕ್ಷಣಕ್ಕೆ ಅನುಕೂಲಕರ ಮತ್ತು ಹೊಂದಿಕೊಳ್ಳುವ ವಿಧಾನದಲ್ಲಿ ಆಧುನಿಕ ತಂತ್ರಜ್ಞಾನ/ಪರಿಕರಗಳು ಮತ್ತು ಮಲ್ಟಿಮೀಡಿಯಾ ಸಂಪನ್ಮೂಲಗಳನ್ನು ಬಳಸಿಕೊಂಡು ಕಲಿಕಾರ್ಥಿಗಳ ಅಗತ್ಯತೆಗಳನ್ನು ಪೂರೈಸಲು ಮತ್ತು ಸಮೃದ್ಧ ಶೈಕ್ಷಣಿಕ ಅನುಭವ ಹಾಗೂ ಶೈಕ್ಷಣಿಕ ಶ್ರೇಷ್ಠತೆಯನ್ನು ಸಾಧಿಸುವ ದೂರದೃಷ್ಟಿಯೊಂದಿಗೆ ವಿನ್ಯಾಸಗೊಳಿಸಿರುವ "ಕೆ.ಎಸ್.ಓ.ಯು ಆನ್‌ಲೈನ್ ಕಾರ್ಯಕ್ರಮಗಳಲ್ಲಿ" 2023-24ನೇ ಶೈಕ್ಷಣಿಕ ಸಾಲಿಗೆ ಒಟ್ಟು 10 ಕೋರ್ಸ್‌ಗಳಲ್ಲಿ 128 ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಪ್ರವೇಶಾತಿ ಪಡೆದಿದ್ದು ಸದರಿ ವಿದ್ಯಾರ್ಥಿಗಳಿಂದ ರೂ.9,05,220/-ಗಳ ಪ್ರವೇಶಾತಿ ಶುಲ್ಕವು ಸಾಮಾನ್ಯ ನಿಧಿ ಖಾತೆ ಸಂಖ್ಯೆ:50100316845801 ಗೆ ಸ್ವೀಕೃತಿಯಾಗಿದ್ದು, ವಿವರಗಳು ಕೆಳಗಿನಂತಿವೆ;

2023-24ನೇ ಸಾಲಿನ ಆನ್‌ಲೈನ್ ಕಾರ್ಯಕ್ರಮಗಳ ಪ್ರವೇಶಾತಿ ಶುಲ್ಕದ ವಿವರ ಈ ಕೆಳಕಂಡಂತಿದೆ

ಕ್ರ.ಸಂ.	ಕೋರ್ಸ್ ವಿವರ	ವಿದ್ಯಾರ್ಥಿಗಳ ಸಂಖ್ಯೆ	ಶುಲ್ಕ (ರೂ)
1.	ಬಿ.ಎ	25	85750
2.	ಬಿ.ಕಾಂ	33	150385
3.	ಎಂ.ಎ- ಕನ್ನಡ	4	19700
4.	ಎಂ.ಎ- ಇಂಗ್ಲೀಷ್	11	55450
5.	ಎಂ.ಎ- ಹಿಂದಿ	2	10300
6.	ಎಂ.ಎ- ಸಂಸ್ಕೃತ	5	48535
7.	ಎಂ.ಎ-ಅರ್ಥಶಾಸ್ತ್ರ	6	32000
8.	ಎಂ.ಕಾಂ	3	19350
9.	ಎಂ.ಬಿ.ಎ	26	323100
10.	ಎಂ.ಎಸ್ಸಿ-ಗಣಿತಶಾಸ್ತ್ರ	13	160650
	ಒಟ್ಟು	**128**	**905220**

10.7 ಆನ್‌ಲೈನ್ ಕಾರ್ಯಕ್ರಮಗಳ ಪ್ರವೇಶಾತಿಯಲ್ಲಿ ರೂ.13,000/–ಕಡಿಮೆ ಶುಲ್ಕ ಸ್ವೀಕೃತಿಯಾಗಿರುವುದು.

2023–24ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಸಾಮಾನ್ಯ ನಿಧಿ ಖಾತೆಯಲ್ಲಿ ಆನ್‌ಲೈನ್ ಕಾರ್ಯಕ್ರಮಗಳ ಪ್ರವೇಶಾತಿ ಶುಲ್ಕ ಸ್ವೀಕೃತಿಗೆ ಸಂಬಂಧಿಸಿದ ಹಾಜರುಪಡಿಸಲಾದ ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಲಾಗಿ, ಗಣಿತಶಾಸ್ತ್ರ ವಿಷಯದಲ್ಲಿ ರೂ.13,000/– ಗಳ ಕಡಿಮೆ ಶುಲ್ಕ ಸ್ವೀಕೃತಿಯಾಗಿರುವುದು ಕಂಡುಬಂದಿದೆ.

61ನೇ ಶೈಕ್ಷಣಿಕ ಮಂಡಳಿಯ ಸಭೆ ಹಾಗೂ 174ನೇ ವ್ಯವಸ್ಥಾಪನಾ ಮಂಡಳಿಯ ಸಾಮಾನ್ಯ ಸಭೆಯಲ್ಲಿ ಆನ್‌ಲೈನ್ ಕಾರ್ಯಕ್ರಮಗಳ ಕೋರ್ಸ್‌ಗಳಿಗೆ ನಿಗಧಿಪಡಿಸಿರುವ ಶುಲ್ಕವನ್ನು ಅನುಮೋದಿಸಿದ್ದು, ಎಂ.ಎಸ್ಸಿ – ಗಣಿತಶಾಸ್ತ್ರ ವಿಷಯದ ಬೋಧನಾ ಶುಲ್ಕ ರೂ.37,000/– ಗಳಿಗೆ ನಿಗಧಿಪಡಿಸಿದೆ. ಆದರೆ, ಹಾಜರುಪಡಿಸಿರುವ ಆನ್‌ಲೈನ್ ಪ್ರವೇಶಾತಿ ಅನುಮೋದಿತ ಪಟ್ಟಿಯನ್ವಯ ಪ್ರತಿ ವಿದ್ಯಾರ್ಥಿಗೆ ರೂ.36,000/– ಗಳನ್ನು ವಸೂಲಿಸಿರುವುದು ಕಂಡುಬಂದಿದ್ದು, ಸದರಿ ಕೋರ್ಸ್‌ನಲ್ಲಿ ಒಟ್ಟು 13 ವಿದ್ಯಾರ್ಥಿಗಳ ಪ್ರವೇಶಾತಿಯಿಂದ ರೂ.5,24,000/–ಗಳು ಸ್ವೀಕೃತಿಯಾಗಬೇಕಾಗಿದ್ದು ವಾಸ್ತವವಾಗಿ ರೂ.5,11,000/– ಗಳು ಮಾತ್ರ ಸ್ವೀಕೃತಿಯಾಗಿದ್ದು, ವ್ಯತ್ಯಾಸ ಮೊತ್ತ ರೂ.13,000/–ಗಳ ಕಡಿಮೆ ಸ್ವೀಕೃತಿಯಾಗಿದ್ದು, ಈ ಸಂಬಂಧ ಸೂಕ್ತ ವಿವರಣೆಯೊಂದಿಗೆ ಸ್ಪಷ್ಟೀಕರಣ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:194/17.02.2025ರಲ್ಲಿ ಕೋರಲಾಗಿ, ಸದರಿ ವಿಚಾರಣೆ ಪತ್ರಕ್ಕೆ ಅನುಪಾಲನಾ ವರದಿ ಸಲ್ಲಿಸಿರುವುದಿಲ್ಲ. ಹೀಗಾಗಿ, ಈ ಮೇಲೆ ತಿಳಿಸಿರುವಂತೆ **ರೂ.13,000/–ಗಳನ್ನು ಸಂಬಂಧಿಸಿದ ವಿದ್ಯಾರ್ಥಿಗಳಿಂದ ವಸೂಲಿಸಿ** ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ ಖಾತೆಗೆ ಜಮೆ ಮಾಡಲು ಸೂಚಿಸಿದೆ.

10.8 ಮುಕ್ತ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಅಧ್ಯಯನ ಕೇಂದ್ರ/ಕಲಿಕಾ ಸಹಾಯ ಕೇಂದ್ರಗಳಿಗೆ ಸಂಬಂಧಿಸಿದ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವ ಕುರಿತು.

2023–24ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ವಾರ್ಷಿಕ ಲೆಕ್ಕಪತ್ರಗಳು 2023–24ರ ಸ್ವೀಕೃತಿಗಳಲ್ಲಿ ಶೀರ್ಷಿಕೆ ಸಂಖ್ಯೆ 113/9 ರಲ್ಲಿ ನಮೂದಿಸಿರುವಂತೆ ಅಧ್ಯಯನ ಕೇಂದ್ರ/ಕಲಿಕಾ ಸಹಾಯ ಕೇಂದ್ರಗಳಿಂದ ರೂ.10,51,005/–ಗಳ ಶುಲ್ಕ ಸ್ವೀಕೃತಿಯಾಗಿರುತ್ತವೆ ಹಾಗೂ ಶೀರ್ಷಿಕೆ ಸಂಖ್ಯೆ 113/11ರಲ್ಲಿ ನಮೂದಿಸಿರುವಂತೆ ರೂ.38,00,000/–ಗಳ ನೋಂದಣಿ ಶುಲ್ಕ, ಹೊಸದಾಗಿ ನೋಂದಣಿಯಾಗಿರುವ ಕಲಿಕಾ ಕೇಂದ್ರಗಳಿಂದ ಸ್ವೀಕೃತಿಯಾಗಿರುತ್ತವೆ. ಸದರಿ ಸ್ವೀಕೃತಿಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ಲೆಕ್ಕಪತ್ರಗಳು ಮತ್ತು ಪೂರಕ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 143 & 144/01.02.2025ಗಳಲ್ಲಿ ಕೋರಲಾಗಿ, ಸದರಿ ವಿಚಾರಣಾ ಪತ್ರಗಳಿಗೆ ವಿಶ್ವವಿದ್ಯಾನಿಲಯದಿಂದ ಯಾವುದೇ ಅನುಪಾಲನಾ ವರದಿಯಾಗಲೀ, ಸಂಬಂಧಿಸಿದ ಲೆಕ್ಕಪತ್ರ ದಾಖಲೆಗಳಾಗಲೀ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಆದುದರಿಂದ ಈ ಮೇಲೆ ತಿಳಿಸಿರುವಂತೆ ಅಧ್ಯಯನ ಕೇಂದ್ರ/ಕಲಿಕಾ ಸಹಾಯ ಕೇಂದ್ರಗಳ ಒಟ್ಟು ಸ್ವೀಕೃತಿ ಮೊತ್ತ **ರೂ.48,51,005/–ಗಳನ್ನು** (ರೂ.10,51,005/–+ರೂ.38,00,000/–) **ಆಕ್ಷೇಪಣೆಯಲ್ಲಿಡಲಾಗಿದೆ.**

10.9 ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ ಪದವಿ ಕಾರ್ಯಕ್ರಮಗಳಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಮಾಹಿತಿ/ವಿವರಗಳನ್ನು ಪೂರ್ಣವಾಗಿ ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.

ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್‌ಡಿ) ಪದವಿ ಕಾರ್ಯಕ್ರಮವನ್ನು ನಿಯಮಿತ ಕ್ರಮದಲ್ಲಿ ಯಾವುದೇ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯದ ಪಿ.ಎಚ್.ಡಿ ಪದವಿಗೆ ಸಮಾನವಾಗಿ ಒದಗಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ವಿವಿಧ ವಿಭಾಗಗಳಲ್ಲಿ ಪಿ.ಎಚ್.ಡಿ ಪದವಿಗೆ ನೋಂದಣಿಯಾಗಿ ಸಂಶೋಧನೆ ನಡೆಸುತ್ತಿರುವ ವಿದ್ಯಾರ್ಥಿಗಳ ವಿವರಗಳು, ಸಂಶೋಧನೆಗೆ ಆಯ್ಕೆ ಮಾಡಿರುವ ವಿಷಯ ಹಾಗೂ ಮಾರ್ಗದರ್ಶನ ನೀಡುತ್ತಿರುವ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರುಗಳ ವಿವರಗಳು ಮತ್ತು ಸದರಿಯವರ ಅಡಿಯಲ್ಲಿ ಸಂಶೋಧನೆ ನಡೆಸುತ್ತಿರುವವರ ವಿವರಗಳು ಹಾಗೂ ಸಂಬಂಧಿಸಿದ ಇನ್ನಿತರೆ ಪೂರಕ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ. ವಿಚಾರಣಾ ಪತ್ರ ಸಂಖ್ಯೆ: 145/01.02.2025ರಲ್ಲಿ ಕೋರಲಾಗಿ, ಸದರಿ ವಿಚಾರಣೆಗೆ ಪೂರ್ಣ ಮಾಹಿತಿ/ ದಾಖಲೆಗಳನ್ನು ಒದಗಿಸಿರುವುದಿಲ್ಲ. 2023–24ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಲಾದ ದಾಖಲೆಗಳನ್ನು ಪರಿಶೀಲಿಸಿದ್ದು, ಶೈಕ್ಷಣಿಕ ಸಾಲಿಗೆ ಒಟ್ಟು 9 ವಿಭಾಗಗಳಲ್ಲಿ 37 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ, ಹಾಗೂ ಹಿಂದಿನ ಸಾಲುಗಳಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಲ್ಲಿ ಸದರಿ ಸಾಲಿನ ಪದವಿ ಪ್ರಧಾನಕ್ಕೆ ಹೊರಡಿಸಿರುವ ಅಧಿಸೂಚನೆಯ ವಿವರಗಳನ್ನು ಮಾತ್ರ ಹಾಜರುಪಡಿಸಿದ್ದು, ವಿವರಗಳು ಇಂತಿವೆ;

List of P.hd Notification Issued From 01-04-2023 to 31-03-2024

Sl	Roll No	Name	Subject	Guide Name	Notification Date
1	14KAN040	Sri.Zameer Ahmed	Kannada	Dr. D.Naganna	7/1/2023
2	14POL.SC012	Smt.Mamatha	Political Science	Dr. Shankaranaranappa	7/14/2023
3	14POL.SC013	Sri.Raghavendra K R	Political Science	Dr. Shankaranaranappa	9/14/2023
4	14POL.SC014	Sri.ThammeGowda M D	Political Science	Dr. Shankaranaranappa	6/12/2023
5	14POL.SC015	Sri. Prathap Lingaiah	Political Science	Dr. Shankaranaranappa	9/5/2023
6	14POL.SC020	Sri. C.T. Ravi	Political Science	Prof. K.J. Suresh	12/29/2023
7	14POL.SC023	Sri.Doddaboraiah	Political Science	Dr. Shankaranaranappa	1/20/2024

ಮುಂದುವರೆದು, ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪಿಎಚ್‌ಡಿ., ಪ್ರವೇಶಾತಿಯು ವಿಶ್ವವಿದ್ಯಾನಿಲಯ ಅನುದಾನ ಆಯೋಗ (ಯು.ಜಿ.ಸಿ) ದಿನಾಂಕ: 07 ನವೆಂಬರ್, 2022 ರಲ್ಲಿ ಹೊರಡಿಸಿರುವ ಅಧಿಸೂಚನೆಯ ನಿಬಂಧನೆಗಳು; University Grants commission (Minimum Standards and Procedures for

Award of Ph.D., Degree) Regulations, 2022 ರ ನಿಬಂಧನೆ ಕ್ರಮ ಸಂ.5. "Procedure of Admission" ನ (4) ರಲ್ಲಿ " The Higher Educational Institution shall maintain a list of Ph.D. supervisors (specifying the name of the supervisor, his or her designation, and the department/school/centre), along with the details of Ph.D. scholars (specifying the name of the registered Ph.D. scholar, the topic of his/her research and the date of admission) admitted under them on the website of the institution and update this list every academic year." ಎಂದು ಸೂಚಿಸಿದ್ದರೂ, ಯಾವುದೇ ಮಾಹಿತಿಯು ಜಾಲತಾಣದಲ್ಲಿ ಲಭ್ಯವಿರುವುದಿಲ್ಲ.

ನಿಬಂಧನೆ ಕ್ರಮ ಸಂ.6. "Allocation of research Supervisor" ನ (3) ರಲ್ಲಿ "An eligible Professor/Associate Professor/Assistant Professor can guide up to eight (8) /six (6) /four (4) Ph.D Scholars, respectively, at any given time." ಎಂದು ಸೂಚಿಸಲಾಗಿದ್ದು, ಲೆಕ್ಕಪರಿಶೋಧನೆ ವೇಳೆ ಅಗತ್ಯ ಮಾಹಿತಿ/ ದಾಖಲೆಗಳನ್ನು ಪೂರ್ಣವಾಗಿ ಒದಗಿಸಿಲ್ಲವಾದ್ದರಿಂದ, ಯು.ಜಿ.ಸಿ ನಿಬಂಧನೆಗಳಲ್ಲಿ (Regulations) ಸೂಚಿಸಿರುವಂತೆ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪಿ.ಎಚ್.ಡಿ ಪದವಿ ಕಾರ್ಯಕ್ರಮಗಳಲ್ಲಿ ಸಂಶೋಧನೆ ಕೈಗೊಂಡಿರುವ ವಿಷಯಗಳಾಗಲೀ, ಸಂಶೋಧನೆಯಲ್ಲಿ ತೊಡಗಿರುವವರ ಹಾಗೂ ಮಾರ್ಗದರ್ಶಕರ ವಿವರಗಳನ್ನು ಲಭ್ಯವಿರುವುದಿಲ್ಲ. ಹೀಗಾಗಿ, ಸಂಬಂಧಿಸಿದ ಸಿಬ್ಬಂದಿ/ಅಧಿಕಾರಿಗಳು ಯು.ಜಿ.ಸಿ ನಿಬಂದನೆಗಳನ್ವಯ ಕ್ರಮ ಕೈಗೊಳ್ಳಲು ಸೂಚಿಸಿದೆ.

10.10 ಇ.ಎಂ.ಡಿ/ಭದ್ರತಾ ಠೇವಣಿ ಖಾತೆಯಲ್ಲಿ ಉಳಿಸಿಕೊಂಡಿರುವ ರೂ.2,25,82,808/-ಗಳಿಗೆ ವರ್ಗೀಕೃತ ತಃಖ್ತೆ ಹಾಜರುಪಡಿಸದಿರುವುದು ಹಾಗೂ ಉಳಿತಾಯ ಖಾತೆಯಲ್ಲಿ ಉಳಿಸಿಕೊಂಡಿರುವುದಕ್ಕೆ ರೂ,9,71,061/- ಬಡ್ಡಿ ನಷ್ಟವಾಗಿರುವುದು.

ಇ.ಎಂ.ಡಿ/ಭದ್ರತಾ ಠೇವಣಿ ಬ್ಯಾಂಕ್ ಖಾತೆ ಸಂಖ್ಯೆ:54035421224ನ್ನು ಪರಿಶೀಲಿಸಲಾಗಿ ಡಿಸೆಂಬರ್-2023ರ ಅಂತ್ಯಕ್ಕೆ ಉಳಿದಿದ್ದ ಶಿಲ್ಕು ರೂ.1,01,18,985/-ಗಳು ಮಾರ್ಚ್-2024ರ ಅಂತ್ಯಕ್ಕೆ ರೂ.2,25,82,808/-ಗಳಾಗಿದ್ದು ಈ ಬಾರೀ ಮೊತ್ತವನ್ನು ನಿಶ್ಚಿತ ಅವಧಿ ಠೇವಣಿಗಳಲ್ಲಿ ಹೂಡಿಕೆ ಮಾಡಿದ್ದಲ್ಲಿ ಕನಿಷ್ಟ ಶೇ.4.3 ರಂತೆ ರೂ.9,71,061/- ಬಡ್ಡಿ ನಷ್ಟವಾಗಿರುತ್ತದೆ. ಉಳಿತಾಯ ಖಾತೆಯಲ್ಲಿ ಉಳಿಸಿಕೊಂಡಿರುವ ಔಚಿತ್ಯದ ಬಗ್ಗೆ ವಿವರಣೆ ನೀಡಲು ಮತ್ತು ಇದರ ವರ್ಗೀಕೃತ ತಃಖ್ತೆಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ಲೆಕ್ಕಪರಿಶೋಧನಾ ವಿಚಾರಣೆ ಪತ್ರ ಸಂಖ್ಯೆ:57/06.12.20224ನ್ನು ನೀಡಲಾಗಿತ್ತು. ಇದಕ್ಕೆ ವಿಶ್ವವಿದ್ಯಾನಿಲಯದಿಂದ ಯಾವುದೇ ಅನುಪಾಲನಾ ವರದಿ ಸಲ್ಲಿಸಿರುವುದಿಲ್ಲ. ಆದ್ದರಿಂದ ಬಡ್ಡಿ ಮೊತ್ತ **ರೂ.9,71,061/- ಗಳನ್ನು** ವಸೂಲಾತಿಗೆ ಹಾಗೂ ಇ.ಎಂ.ಡಿ/ಭದ್ರತಾ ಠೇವಣಿ ಉಳಿಕೆ ಮೊತ್ತ **ರೂ.2,25,82,808/-ಗಳಿಗೆ** ವರ್ಗೀಕೃತ ತಃಖ್ತೆಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೆ **ಆಕ್ಷೇಪಣೆಯಲ್ಲಿಡಲಾಗಿದೆ.**


11. ವಿಶ್ವವಿದ್ಯಾನಿಲಯದ ನಿಧಿ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕಾಯ್ದೆ–1994ರಲ್ಲಿನ ಕಲಂ–3(5)ರ ಅನುಸಾರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ತನ್ನದೇ ಆದ ನಿಧಿಯನ್ನು ಹೊಂದಿರುತ್ತದೆ. ವಿಶ್ವವಿದ್ಯಾನಿಲಯದ ಆಂತರಿಕ ಮೂಲಗಳಿಂದ ಬರುವ ಆದಾಯ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕಾಯ್ದೆ–1994ರ ಅಧ್ಯಾಯ–II ರಲ್ಲಿನ ಕಲಂ–3(5)ರ ಅನುಸಾರ ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತವಾಗುವ ರಾಜ್ಯ ಸರ್ಕಾರದಿಂದ ಬರಬಹುದಾದ ಅನುದಾನಗಳು, ಕೇಂದ್ರ ಸರ್ಕಾರದಿಂದ ಬರಬಹುದಾದ ಅನುದಾನಗಳು, ಹಾಗೂ ಸಾರ್ವಜನಿಕ ದತ್ತಿಗಳು/ಕೊಡುಗೆಗಳು ಈ ನಿಧಿಯ ಮೂಲಗಳಾಗಿರುತ್ತವೆ. ವಿಶ್ವವಿದ್ಯಾನಿಲಯದಲ್ಲಿ ಕಾರ್ಯಕ್ರಮವಾರು ಬ್ಯಾಂಕ್ ಖಾತೆಗಳನ್ನು ನಿರ್ವಹಿಸುತ್ತಿದ್ದು, ಇವುಗಳಲ್ಲಿನ ಸ್ವೀಕೃತಿ ಮತ್ತು ಪಾವತಿ ವಿವರಗಳನ್ನು ಕ್ರೋಢೀಕರಿಸಿ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಹಾಗೂ ವ್ಯವಸ್ಥಾಪನಾ ಮಂಡಳಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ. ಈ ನಿಧಿಯನ್ನು ರಾಷ್ಟ್ರೀಕೃತ/ಅನುಸೂಚಿತ ಬ್ಯಾಂಕ್‌ಗಳಲ್ಲಿ ನಿರ್ವಹಿಸಬೇಕಾಗಿರುತ್ತದೆ. ವಿಶ್ವವಿದ್ಯಾನಿಯಕ್ಕೆ ಈ ಕೆಳಕಂಡವುಗಳು ಪ್ರಮುಖ ಹಣಕಾಸಿನ ಮೂಲಗಳಾಗಿರುತ್ತವೆ.

ಅ). ಆಂತರಿಕ ಮೂಲಗಳಿಂದ ಆದಾಯ: ವಿದ್ಯಾರ್ಥಿಗಳ ಪ್ರವೇಶ ಶುಲ್ಕಗಳು, ಪರೀಕ್ಷಾ ಶುಲ್ಕಗಳು, ವಿಶ್ವವಿದ್ಯಾನಿಲಯಗಳ ಕಟ್ಟಡಗಳ ಬಾಡಿಗೆ, ವಿಶ್ವವಿದ್ಯಾನಿಲಯದ ನಿಧಿಯ ಹೂಡಿಕೆ ಮೇಲಿನ ಬಡ್ಡಿಯಿಂದ ಬರುವ ಆದಾಯ ಹಾಗೂ ಇತ್ಯಾದಿ

ಆ). ಕೇಂದ್ರ ಸರ್ಕಾರ/ಯು.ಜಿ.ಸಿ/ವಿದೇಶಿ ಸಂಸ್ಥೆಗಳಿಂದ ಅನುದಾನ

ಇ). ಸರ್ಕಾರ ಹಾಗೂ ಸಾರ್ವಜನಿಕರಿಂದ ಬರುವ ದತ್ತಿಗಳು ಹಾಗೂ ಕೊಡುಗೆಗಳು



11.1 ವಿಶ್ವವಿದ್ಯಾನಿಲಯದ ಹಣಕಾಸು ವ್ಯವಹರಣೆಯ ವಿವರ.

2023-24ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದಲ್ಲಿ ವ್ಯವಹರಣೆಯಲ್ಲಿದ್ದ ಎಲ್ಲಾ ಬ್ಯಾಂಕ್ ಖಾತೆಗಳ ತಃಖ್ತೆಯನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 5 ಟಿಎಆರ್ 2017 ದಿನಾಂಕ:30.01.2017ರ ಭಾಗ-ಎ(III)ರ ಕಂಡಿಕೆ-1ರನ್ವಯ ವಾರ್ಷಿಕ ಲೆಕ್ಕಗಳಲ್ಲಿ ಅನುಬಂಧ-ಇ ರಲ್ಲಿ ಬಹಿರಂಗಗೊಳಿಸಬೇಕಾಗಿರುತ್ತದೆ (Disclosure of Bank Accounts) ಆದರಂತೆ ದೃಢೀಕರಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ 03/28.10.2024, 61/13.12.2024, 63/16.12.2024, 147/01.02.2025 ಹಾಗೂ 161/03.02.2025ರಲ್ಲಿ ಮುಕ್ತ ವಿಶ್ವವಿದ್ಯಾನಿಲಯದ ಅಧೀನದಲ್ಲಿರುವ ವಿವಿಧ ವಿಭಾಗಗಳು, ಪ್ರಾದೇಶಿಕ ಕಛೇರಿ, ಅಧ್ಯಯನ ಕೇಂದ್ರ, ಸಹಾಯ ಕಲಿಕಾ ಕೇಂದ್ರ, ಶೈಕ್ಷಣಿಕ ಭವನಗಳು ಹಾಗೂ ಇತ್ಯಾದಿ ಕಛೇರಿಗಳಲ್ಲಿ ನಿರ್ವಹಿಸುತ್ತಿರುವ ಎಲ್ಲಾ ಬ್ಯಾಂಕ್ ಖಾತೆಗಳ ವಿವರ ಕೋರಲಾಗಿತ್ತು. ಆದರೆ ವಿಶ್ವವಿದ್ಯಾನಿಲಯದವರು ವಾರ್ಷಿಕ ಲೆಕ್ಕಪತ್ರದಲ್ಲಿ ದಾಖಲಿಸಿರುವ ಬ್ಯಾಂಕ್ ಖಾತೆಗಳ ವಿವರಗಳನ್ನು ಮಾತ್ರ ಹಾಜರುಪಡಿಸಿರುತ್ತಾರೆ.

ವಿಶ್ವವಿದ್ಯಾನಿಲಯವು ತನ್ನ ವಾರ್ಷಿಕ ಲೆಕ್ಕಪತ್ರವನ್ನು 37 ಬ್ಯಾಂಕ್ ಖಾತೆಗಳ ವ್ಯವಹರಣೆಯ ಆಧಾರದಲ್ಲಿ ತಯಾರಿಸಲಾಗಿದೆ. ವಿಶ್ವವಿದ್ಯಾನಿಲಯದವರು ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ವಾರ್ಷಿಕ ಲೆಕ್ಕಪತ್ರಗಳ ಅನುಸಾರ 2023-24ನೇ ಸಾಲಿನ ವಿಶ್ವವಿದ್ಯಾನಿಲಯದ ಆರ್ಥಿಕ ವ್ಯವಹರಣೆಯ ವಿವರಗಳು ಈ ಕೆಳಗಿನಂತಿರುತ್ತದೆ.

ವಿವರಗಳು	ಭಾಗ-1 (ವಾಸ್ತವಿಕ)	ಭಾಗ-2 (ಇತರೆ)	ಒಟ್ಟು
ಪ್ರಾರಂಭಿಕ ಶಿಲ್ಕು	598,68,92,543	0	598,68,92,543
ಸ್ವೀಕೃತಿಗಳು	137,76,82,073	420,28,59,473	558,05,41,546
ಒಟ್ಟು	**7,36,45,74,616**	**4,20,28,59,473**	**11,56,74,34,089**
ಪಾವತಿಗಳು	174,83,32,667	445,96,65,635	620,79,98,302
ಅಂತಿಮ ಶಿಲ್ಕು	**561,62,41,949**	**-25,68,06,162**	**5,35,94,35,787**

ಲೆಕ್ಕಪರಿಶೋಧನೆಯ ಪ್ರಕಾರ 37 ಬ್ಯಾಂಕ್ ಖಾತೆಗಳ ವ್ಯವಹರಣೆಯ ವಿವರಗಳು ಕೆಳಕಂಡಂತಿರುತ್ತದೆ

ವಿಶ್ವವಿದ್ಯಾನಿಲಯದ **2023-24**ನೇ ಸಾಲಿನ ಆರ್ಥಿಕ ಸ್ಥಿತಿಗತಿಯ ವಿವರ				
ಕ್ರ.ಸಂ	ವಿವರಗಳು		ಮೊತ್ತ (ರೂ.ಗಳಲ್ಲಿ)	ಮೊತ್ತ (ರೂ.ಗಳಲ್ಲಿ)
1	ಆರಂಭಿಕ ಶಿಲ್ಕು			73,78,02,291
	ಆದಾಯ (ವಾಸ್ತವಿಕ ಸ್ವೀಕೃತಿಗಳು)	ಅನುದಾನ	7,05,000	
		ಶುಲ್ಕಗಳು ಮತ್ತು ಇತರೆ	101,65,58,493	
		ಉಳಿತಾಯ ಬಡ್ಡಿ	1,01,34,060	
		ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ	33,89,56,910	
		ಇತರೆ ಸ್ವೀಕೃತಿ	2,166	
	ಒಟ್ಟು(ಅ)		**136,63,56,629**	
	ಹೊಂದಾಣಿಕೆಗಳು	ಪೂಡಿಕೆ ಏಂತೆಗೆತ	398,15,79,112	

		ಆಂತರಿಕ ನಿಧಿ ಸ್ವೀಕೃತಿ	96,90,54,550	
		ಇತರೆ ಹೊಂದಾಣಿಕೆಗಳು	1,65,171	
	ಒಟ್ಟು)ಆ(		**495.07.98.833**	
2	ಒಟ್ಟು(ಆ+ಅ)			631,71,55,462
3	ಒಟ್ಟು(2+1 ಸಂ.ಕ್ರ)			**705,49,57,753**

4	ವೆಚ್ಚಗಳು(ಇ)	ವಾಸ್ತವಿಕ ವೆಚ್ಚಗಳು	**164,02,97,980**	
	ಹೊಂದಾಣಿಕೆಗಳು	ಹೂಡಿಕೆ	409,86,16,439	
		ಆಂತರಿಕ ನಿಧಿ ವರ್ಗಾವಣೆ	96,90,54,550	
		ಇತರೆ ಹೊಂದಾಣಿಕೆಗಳು	52,587	
	ಒಟ್ಟು) ಈ(		**506,77,23,576**	
5	ಒಟ್ಟು (ಈ+ಇ)			**670,80,21,556**
6	ಅಂತಿಮ ಶಿಲ್ಕು (ಲೆಕ್ಕಪರಿಶೋಧನೆ/ನಗದು ಪುಸ್ತಕ) (3–5)			34,69,36,197
7	ಅಂತಿಮ ಶಿಲ್ಕು (ಬ್ಯಾಂಕ್ ಸ್ಟೇಟ್‌ಮೆಂಟ್)			35,65,69,477
8	ವ್ಯತ್ಯಾಸ (6–7)			**96,33,281**

ನಗದು ಪುಸ್ತಕದಲ್ಲಿನ ಸ್ವೀಕೃತಿ ಮತ್ತು ಪಾವತಿಗಳ ವಿವರಗಳನ್ನು **ಅನುಬಂಧ–6**ರಲ್ಲಿ ಹಾಗೂ ನಗದಾಗದ ಧನಾದೇಶದ ವಿವರಗಳನ್ನು **ಅನುಬಂಧ–6(ಎ)**ನಲ್ಲಿ ನೀಡಲಾಗಿದೆ. ವಿಶ್ವವಿದ್ಯಾನಿಲಯದಲ್ಲಿ ರೂ.34,69,36,197/– ಗಳಷ್ಟು ನಗದು ಬ್ಯಾಂಕ್ ಖಾತೆಯಲ್ಲಿಯೇ ಉಳಿದಿದ್ದು, ಬಡ್ಡಿ ನಷ್ಟವಾಗುವುದನ್ನು ತಪ್ಪಿಸಲು ಬ್ಯಾಂಕ್ ಖಾತೆಗಳನ್ನು ಫ್ಲೆಕ್ಸಿ ಖಾತೆಗಳಾಗಿ ಬದಲಾಯಿಸಲು ವಿಶ್ವವಿದ್ಯಾನಿಲಯವು ಪರಿಶೀಲಿಸಬಹುದಾಗಿರುತ್ತದೆ.

ಮುಕ್ತ ವಿಶ್ವವಿದ್ಯಾನಿಲಯದವರು ಸಲ್ಲಿಸಿರುವ ವಾರ್ಷಿಕ ಲೆಕ್ಕಗಳ ನಮೂದುಗಳನ್ನು ಪರಿಶೀಲಿಸಿದಾಗ ಸ್ವೀಕೃತಿ ಮತ್ತು ಪಾವತಿಗಳನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದ್ದು, ವಿಶ್ವವಿದ್ಯಾನಿಲಯದ ರಾಜಸ್ವ, ಠೇವಣಿಗಳ ಮೇಲಿನ ಬಡ್ಡಿ ಮುಂತಾದವುಗಳನ್ನು ಸ್ವೀಕೃತಿ ವಿಭಾಗದ ಭಾಗ–1 ರಲ್ಲಿ ಹಾಗೂ ಬೇರೆ ಬ್ಯಾಂಕ್ ಖಾತೆಗಳಿಂದ ಮಾಡಿಕೊಂಡ ವರ್ಗಾವಣೆಗಳು, ಠೇವಣಿಗಳು, ಇದಿರು ನಮೂದುಗಳು (ಕಾಂಟ್ರಾ ಎಂಟ್ರೀಸ್) ಮುಂತಾದವುಗಳನ್ನು ಸ್ವೀಕೃತಿ ವಿಭಾಗದ ಭಾಗ–2ರಲ್ಲಿ ತೆಗೆದುಕೊಳ್ಳಲಾಗಿದೆ. ಅದೇ ರೀತಿ ಸಾಮಾನ್ಯ ವೆಚ್ಚಗಳನ್ನು ಪಾವತಿ ವಿಭಾಗದ ಭಾಗ–1ರಲ್ಲಿ ಹಾಗೂ ಬೇರೆ ಬ್ಯಾಂಕ್ ಖಾತೆಗಳಿಗೆ ಮಾಡಿದ ವರ್ಗಾವಣೆಗಳು, ಹಿಂಪಾವತಿಸಿದ ಠೇವಣಿಗಳು, ಇದಿರು ನಮೂದುಗಳು ಮುಂತಾದವುಗಳನ್ನು ವೆಚ್ಚ ವಿಭಾಗದ ಭಾಗ–2ರಲ್ಲಿ ತೆಗೆದುಕೊಳ್ಳಲಾಗಿದೆ. ವಾರ್ಷಿಕ ಲೆಕ್ಕಗಳಲ್ಲಿ ರಾಜಸ್ವ ಸ್ವೀಕೃತಿ ಮತ್ತು ವೆಚ್ಚಗಳು, ಬಂಡವಾಳ ಸ್ವೀಕೃತಿ ಮತ್ತು ವೆಚ್ಚಗಳು ಹಾಗೂ ಸಾಲಗಳು ಮತ್ತು ಮುಂಗಡಗಳು ಮುಂತಾದ ವರ್ಗೀಕರಣವಾಗಲೀ ಅಥವಾ ಅಂತಹ ವರ್ಗೀಕರಣಕ್ಕೆ ಪೂರಕವಾದ

ನಮೂನೆಗಳಲ್ಲಿ ಲೆಕ್ಕಪತ್ರಗಳ ನಿರ್ವಹಣೆಯನ್ನಾಗಲೀ ಮಾಡಿರುವುದಿಲ್ಲ. ವಿಶ್ವವಿದ್ಯಾನಿಲಯದಲ್ಲಿ ಪ್ರತ್ಯೇಕವಾಗಿ ಹಣಕಾಸು ಶಾಖೆಯಿದ್ದರೂ ಕೂಡ ಹಣಕಾಸು ಹಾಗೂ ಲೆಕ್ಕಪತ್ರ ನಿರ್ವಹಣೆಯಲ್ಲಿ ಯಾವುದೇ ಶಿಸ್ತುಬದ್ಧ ಕ್ರಮಗಳನ್ನು ಅನುಸರಿಸುತ್ತಿರುವುದು ಕಂಡು ಬಂದಿರುವುದಿಲ್ಲ.


ವಾರ್ಷಿಕ ಲೆಕ್ಕಪತ್ರ ಹಾಗೂ ನಗದು ಪುಸ್ತಕಗಳ ವಾಸ್ತವಿಕ ಸ್ವೀಕೃತಿಗಳ ನಡುವೆ ರೂ.1,13,27,210/–ಗಳ ಹಾಗೂ ವಾರ್ಷಿಕ ಲೆಕ್ಕಪತ್ರಗಳ ಮತ್ತು ನಗದು ಪುಸ್ತಕಗಳ ವಾಸ್ತವಿಕ ಪಾವತಿಗಳ ನಡುವೆ ರೂ.10,80,25,362/–ಗಳ ವ್ಯತ್ಯಾಸ ಕಂಡುಬಂದಿದ್ದು. ಈ ವ್ಯತ್ಯಾಸದ ಮೊತ್ತಕ್ಕೆ ಲೆಕ್ಕಸಮನ್ವಯಗೊಳಿಸಿರುವ ವಿವರದ ತಃಖ್ತೆಯನ್ನು **ಅನುಬಂಧ–7ರಲ್ಲಿ** ನೀಡಲಾಗಿದೆ.

ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ ಖಾತೆಯನ್ನು 10 ಬ್ಯಾಂಕ್ ಖಾತೆಗಳ ಮೂಲಕ ಹಾಗೂ ಪರೀಕ್ಷಾ ನಿಧಿ ಖಾತೆಯನ್ನು 6 ಬ್ಯಾಂಕ್ ಖಾತೆಗಳ ಮೂಲಕ ನಿರ್ವಹಿಸಲಾಗುತ್ತಿದ್ದು, ಕ್ರಮವಾಗಿ 10 ಮತ್ತು 6 ನಗದು ಪುಸ್ತಕಗಳನ್ನು ನಿರ್ವಹಿಸಲಾಗುತ್ತಿದೆ. ಹೀಗೆ ಒಂದು ಉದ್ದೇಶಕ್ಕೆ ಒಂದಕ್ಕಿಂತ ಹೆಚ್ಚು ಬ್ಯಾಂಕ್ ಖಾತೆಗಳನ್ನು ನಿರ್ವಹಿಸಲಾಗುತ್ತಿದ್ದು, ಇದು ನಿಯಮಬಾಹಿರವಾಗಿರುತ್ತದೆ. ಹೀಗೆ ಹೆಚ್ಚುವರಿಯಾಗಿ ಬ್ಯಾಂಕ್ ಖಾತೆಗಳನ್ನು ನಿರ್ವಹಿಸುತ್ತಿರುವುದಕ್ಕೆ ವಿವರಣೆ ಕೋರಿ 2022–23ನೇ ಸಾಲಿನ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:204/19.08.2024ನ್ನು ನೀಡಲಾಗಿದ್ದು, ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿ ಪ್ರಸ್ತುತ ವಿಶ್ವವಿದ್ಯಾನಿಲಯದ ವಿರುದ್ಧ ಸಿ.ಬಿ.ಐ, ಎ.ಸಿ.ಬಿ ರವರಿಂದ ತನಿಖೆಗಳು ನಡೆಯುತ್ತಿದ್ದು, ವಿವಿಯ ಬ್ಯಾಂಕ್ ವಿವರಗಳನ್ನು ತನಿಖೆಗೆ ಒದಗಿಸಿರುವುದರಿಂದ ಈ ಹಂತದಲ್ಲಿ ಮುಕ್ತಾಯಗೊಳಿಸಲು ಸಾಧ್ಯಿರುವುದಿಲ್ಲ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಮುಂದಿನ ದಿನಗಳಲ್ಲಿ ಸರ್ಕಾರದ ಆದೇಶದಂತೆ ಮುಕ್ತಾಯಗೊಳಿಸಲು ಕ್ರಮವಹಿಸಲಾಗುವುದು ಎಂದು ಅನುಪಾಲನಾ ವರದಿ ಸಲ್ಲಿಸಿರುತ್ತಾರೆ. ವಾರ್ಷಿಕ ಲೆಕ್ಕಗಳಲ್ಲಿ ಬೇರೆ ವ್ಯವಹರಣೆ ಶೀರ್ಷಿಕೆಗಳ ಲೆಕ್ಕಗಳ ಶೀರ್ಷಿಕೆಯ ಜೊತೆಗೆ ಬ್ಯಾಂಕ್ ಖಾತೆಗಳ ವಿವರಗಳು ಇದ್ದು, ಸಾಮಾನ್ಯ ನಿಧಿ ಖಾತೆ ಹಾಗೂ ಪರೀಕ್ಷಾ ನಿಧಿ ಖಾತೆ ಲೆಕ್ಕಗಳಲ್ಲಿ ಇವುಗಳ ಬ್ಯಾಂಕ್ ಖಾತೆಗಳ ವಿವರಗಳು ಇರುವುದಿಲ್ಲ. ಮೇಲಿನ ನ್ಯೂನತೆಗಳನ್ನು ಗಮನಿಸಿದಾಗ ಹಣಕಾಸು ಶಾಖೆಯಲ್ಲಿ ವಾರ್ಷಿಕ ಲೆಕ್ಕಗಳನ್ನು ಜವಾಬ್ದಾರಿಯುತವಾಗಿ ತಯಾರಿಸದಿರುವುದು ಸ್ಪಷ್ಟವಾಗುತ್ತದೆ. 2023–24ನೇ ಸಾಲಿನ ಚಾಲ್ತಿಯಲ್ಲಿರುವ ಎಲ್ಲಾ ಖಾತೆಗಳ ವಿವರಗಳನ್ನು ಕೂಲಂಕಷವಾಗಿ ಪರಿಶೀಲಿಸಿ ನಂತರ ವಾರ್ಷಿಕ ಲೆಕ್ಕಗಳನ್ನು ತಯಾರಿಸಲು ಕ್ರಮಕ್ಕೈಗೊಳ್ಳಲು ಸೂಚಿಸಿದೆ.


ವಿಶ್ವವಿದ್ಯಾನಿಲಯದ ಪ್ರಸ್ತುತ ಸಾಲಿನ ಸ್ವೀಕೃತಿ ಮತ್ತು ಪಾವತಿಗಳನ್ನು ಕಳೆದ ಐದು ವರ್ಷಗಳ ಸ್ವೀಕೃತಿ ಮತ್ತು ವೆಚ್ಚಗಳ ಅಂಕಿ ಅಂಶಗಳ ನಕ್ಷೆ ತಯಾರಿಸಿ ತುಲನೆ ಮಾಡಿದಾಗ ಸ್ವೀಕೃತಿಗೆ ಸಂಬಂಧಿಸಿದಂತೆ, ಠೇವಣಿಗಳ ಮೇಲಿನ ಬಡ್ಡಿಯ ಸ್ವೀಕೃತಿ ಮೊತ್ತವು ಹಿಂದಿನ ನಾಲ್ಕು ವರ್ಷಗಳಿಗೆ ಹೋಲಿಸಿದರೆ ಕಡಿಮೆಯಾಗಿರುವುದನ್ನು ಗಮನಿಸಬಹುದು. ವಿಶ್ವವಿದ್ಯಾನಿಲಯವು ಸಂಗ್ರಹಿಸುವ ಶುಲ್ಕಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಏರಿಕೆಯಿದ್ದರೂ, ಪ.ಜಾತಿ/ವರ್ಗಗಳ ವಿದ್ಯಾರ್ಥಿಗಳಿಗೆ ನೀಡಲಾಗಿರುವ ರಿಯಾಯಿತಿ ಮೊತ್ತವನ್ನು ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಒಂಭರ್ತಿ ಮಾಡಿಕೊಳ್ಳುವಲ್ಲಿ ಆಶಾದಾಯಕ ಪ್ರಗತಿ ಕಂಡು ಬಂದಿರುವುದಿಲ್ಲ. ವೆಚ್ಚಕ್ಕೆ ಸಂಬಂಧಿಸಿದಂತೆ ಆಡಳಿತ ವೆಚ್ಚಗಳು ಹಿಂದಿನ ವರ್ಷಕ್ಕಿಂತ ದುಪ್ಪಟ್ಟಾಗಿದ್ದು, ಇದು ವಿಶ್ವವಿದ್ಯಾನಿಯದ ಆರ್ಥಿಕ

ದೃಷ್ಟಿಯಿಂದ ಅರೋಗ್ಯಕರ ಬೆಳವಣಿಗೆಯಾಗಿರುವುದಿಲ್ಲ. ಸ್ವೀಕೃತಿ ಮತ್ತು ಪಾವತಿಗಳಲ್ಲಿನ ಏರಿಳಿತಗಳನ್ನು ಕೆಳಗಿನ ನಕ್ಷೆಗಳಲ್ಲಿ ನೀಡಲಾಗಿದೆ.

ಕರಾಮುವಿವಿಯ 5 ವರ್ಷಗಳ ಸ್ವೀಕೃತಿಗಳ ತುಲನಾತ್ಮಕ ಹೋಲಿಕೆ



ಕರಾಮುವಿವಿಯ 5 ವರ್ಷಗಳ ವೆಚ್ಚಗಳ ತುಲನಾತ್ಮಕ ಹೋಲಿಕೆ



ಮೇಲಿನ ನಕ್ಷೆಗಳ ವಿವರಗಳನ್ನು ಅವಲೋಕಿಸಿದಾಗ ಕಳೆದ ಐದು ವರ್ಷಗಳಲ್ಲಿ ಶೈಕ್ಷಣಿಕ ಮತ್ತು ಪರೀಕ್ಷಾ ವೆಚ್ಚಗಳಿಗಿಂತ ಆಡಳಿತ ಮತ್ತು ಕಾಮಗಾರಿ ವೆಚ್ಚಗಳಲ್ಲಿ ಗಣನೀಯವಾಗಿ ಏರಿಕೆಯಾಗಿರುವುದನ್ನು ಗಮನಿಸಬಹುದಾಗಿದೆ. ಇದು ವಿಶ್ವವಿದ್ಯಾನಿಲಯದ ವೆಚ್ಚಗಳನ್ನು ಶೈಕ್ಷಣಿಕ ಮತ್ತು ಪರೀಕ್ಷಾ ಚಟುವಟಿಕೆಗಳಿಗಿಂತ ಆಡಳಿತ ಮತ್ತು ಕಾಮಗಾರಿ ಚಟುವಟಿಕೆಗಳ ಕಡೆಗೆ ಕೇಂದ್ರೀಕರಿಸಿರುವುದನ್ನು ಬಿಂಬಿಸುತ್ತದೆ.

11.2 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹೂಡಿಕೆಗಳು

ಮುಕ್ತ ವಿಶ್ವವಿದ್ಯಾನಿಲಯ ವಿವಿಧ ಯೋಜನೆಗಳ ಬ್ಯಾಂಕ್ ಖಾತೆಗಳಿಂದ 2023–24ನೇ ಸಾಲಿನಲ್ಲಿ ಹೂಡಿಕೆ ಮಾಡಿರುವ ನಿಶ್ಚಿತ ಠೇವಣಿಗಳ ವಿವರಗಳನ್ನು **ಅನುಬಂಧ–08 ಮತ್ತು 8(ಎ)**ರಲ್ಲಿ ನೀಡಲಾಗಿದ್ದು, ವಿವರ ಈ ಕೆಳಕಂಡಂತಿರುತ್ತದೆ.

ವಿವರ	ಮೊತ್ತ (ರೂ.ಗಳಲ್ಲಿ)	
ದಿನಾಂಕ: 01.04.2023ಕ್ಕೆ ಪ್ರಾರಂಭಿಕ ಶಿಲ್ಕು		**5,00,49,40,158**
ಕೂಡಿರಿ:		
1) 2023–24ನೇ ಸಾಲಿನಲ್ಲಿ ಬ್ಯಾಂಕ್ ಬಡ್ಡಿ ಜಮೆ	38,23,81,610	
2) 2023–24ನೇ ಸಾಲಿನ ಹೊಸ ಹೂಡಿಕೆ	4,10,58,58,853	4,48,82,40,463
ಒಟ್ಟು		9,49,31,80,621
ಕಳೆಯಿರಿ:		
1) ಆದಾಯ ತೆರಿಗೆ	43,91,772	
2) ಹಿಂಪಡೆದ ಬಡ್ಡಿ ಮೊತ್ತ	33,89,56,915	
3) ಠೇವಣಿ ಹಿಂಪಡೆದ ಮೊತ್ತ	3,97,70,64,113	4,32,04,12,800
ದಿನಾಂಕ: 31.03.2024ರ ಅಂತ್ಯಕ್ಕೆ ಅಂತಿಮ ಶಿಲ್ಕು		**5,17,27,67,821**

11.3 ವಿಶ್ವವಿದ್ಯಾನಿಲಯವು ಹೂಡಿಕೆಗೆ ಸಂಬಂಧಿಸಿದಂತೆ ಸರಕಾರವು ಹೊರಡಿಸಿರುವ ಸುತ್ತೋಲೆ ನಿಯಮಗಳನ್ನು ಪಾಲಿಸದೆ ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಿರುವುದು.

ಸರ್ಕಾರವು ಹೂಡಿಕೆಗೆ ಸಂಬಂಧಿಸಿದಂತೆ ಹೊರಡಿಸಿರುವ ಸುತ್ತೋಲೆ ಸಂಖ್ಯೆ FD 91 TAR 2022 ಬೆಂಗಳೂರು ದಿನಾಂಕ:02.07.2022 ರಂತೆ ಸರಕಾರದ ಎಲ್ಲಾ ಇಲಾಖೆಗಳು, ನಿಗಮ–ಮಂಡಳಿಗಳು, ಸ್ಥಳೀಯ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಹಾಗೂ ಸರಕಾರದ ಅಧೀನದಲ್ಲಿರುವ ಎಲ್ಲಾ ಸಂಸ್ಥೆಗಳು ಹೂಡಿಕೆ ಮಾಡುವ ಸಂದರ್ಭದಲ್ಲಿ ಸದರಿ ಸುತ್ತೋಲೆಗಳ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ ಹೂಡಿಕೆ ಮಾಡಬೇಕಾಗಿರುತ್ತದೆ.

2023–24ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ನಿಶ್ಚಿತ ಅವಧಿ ಠೇವಣಿ ಹೂಡಿಕೆಯ ರಶೀದಿಗಳು ಹಾಗೂ ಠೇವಣಿ ತಃಖ್ತೆಗಳನ್ನು ಪರಿಶೀಲಿಸಲಾಗಿ, ಸದರಿ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ, ಕಾರ್ಪಸ್ ನಿಧಿ, ಪರೀಕ್ಷಾ ನಿಧಿ, ಪಿಂಚಣಿ ನಿಧಿ, ಎಸ್.ಡಿ/ಇ.ಎಂ.ಡಿ ನಿಧಿ, ದತ್ತಿ ನಿಧಿ ಹಾಗೂ ವಿವಿಧ ಪೀಠಗಳ ಹೆಚ್ಚುವರಿ ನಿಧಿಯನ್ನು ಷೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕುಗಳಾದ–ಸಾರ್ವಜನಿಕ ವಲಯದ State Bank of India, Canara Bank, ಖಾಸಗಿ ವಲಯದ ICICI, HDFC, IndusInd ಸಣ್ಣ ಹಣಕಾಸು ಬ್ಯಾಂಕುಗಳಾದ Fincare (AU), Suryodaya, Ujjivan ಮತ್ತು ಕೆನೆರಾಬ್ಯಾಂಕ್ ಪ್ರಾಯೋಜಿತ

Karnataka Grameena Bankಗಳಲ್ಲಿ ಒಟ್ಟು ರೂ.517.28 ಕೋಟಿ (ಸದರಿ ಸಾಲಿನಲ್ಲಿ ಹೊಸ ಹೂಡಿಕೆ ರೂ.408.49 ಕೋಟಿಗಳು ಹಾಗೂ ಮರು ಹೂಡಿಕೆ/ನವೀಕರಿಸಲಾದ ರೂ.108.78 ಕೋಟಿ)ಗಳಷ್ಟು ಮೊತ್ತವನ್ನು ನಿಶ್ಚಿತ ಅವಧಿ ಠೇವಣಿಗಳಲ್ಲಿ ಹೂಡಿಕೆ ಮಾಡಲಾಗಿದ್ದು, ವಿವರಗಳನ್ನು ಈ ಕೂಡ ಲಗತ್ತಿಸಿರುವ **ಅನುಬಂಧ–8**ರಲ್ಲಿ ನೀಡಿದೆ. ಈ ಹೂಡಿಕೆಗಳನ್ನು ಒಂದು ಕೋಟಿ ರೂಪಾಯಿಗೂ ಮೀರಿದ ಘಟಕಗಳಲ್ಲಿ ಹೂಡಿಕೆ ಮಾಡಿರುವುದನ್ನು ಹಾಗೂ ಖಾಸಗಿ ಹಣಕಾಸು ಸಂಸ್ಥೆಗಳಲ್ಲಿ ನಿಶ್ಚಿತ ಠೇವಣಿಯಲ್ಲಿ ತೊಡಗಿಸಿರುವುದನ್ನು ಕೂಡ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

ವಿಶ್ವವಿದ್ಯಾನಿಲಯದವರು ತಮ್ಮಲ್ಲಿ ಲಭ್ಯವಿರುವ ಹೆಚ್ಚುವರಿ ನಿಧಿಯ ಹೂಡಿಕೆ ಮಾಡಿರುವ ವಿಧಾನಗಳಿಗೆ ಸಂಬಂಧಿಸಿದಂತೆ ಕಂಡು ಬಂದ ನ್ಯೂನತೆಗಳು ಈ ಕೆಳಕಂಡಂತಿವೆ.

1. ನಿಶ್ಚಿತ ಠೇವಣಿಗಳಿಗೆ ಸಂಬಂಧಿಸಿದಂತೆ ಕ್ರೋಢೀಕೃತ ಠೇವಣಿವಹಿ/ ನಿಗಾವಹಿ ನಿರ್ವಹಿಸಿರುವುದಿಲ್ಲ.

2. ಹೂಡಿಕೆಗೆ ಮುನ್ನ ಹೂಡಿಕೆ ಸಮಿತಿಯ ಅನುಮೋದನೆ ಪಡೆದ ಬಗ್ಗೆ ಹಾಗೂ ಹೂಡಿಕೆ ವಿವರಗಳನ್ನು ಸಿಂಡಿಕೇಟ್‌ನ ಅವಗಾಹನೆಗೆ ತಂದಿರುವ ಬಗ್ಗೆ ಮಾಹಿತಿ/ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

3. ವಿಶ್ವವಿದ್ಯಾನಿಲಯವು 2023–24ನೇ ಸಾಲಿನಲ್ಲಿ ರೂ.100.00 ಲಕ್ಷ ಮೀರಿದ ಘಟಕಗಳಲ್ಲಿ ಒಟ್ಟು ರೂ.480.27 ಕೋಟಿಗಳನ್ನು ಹೂಡಿಕೆ ಮಾಡಿದ್ದು, ಸರ್ಕಾರದ ಮಾರ್ಗಸೂಚಿಗಳನುಸಾರ ರೂ.100.00 ಲಕ್ಷ ಮೀರಿದ ಹೂಡಿಕೆಗಳಿಗೆ ವಿದ್ಯುನ್ಮಾನ ಸಂಗ್ರಹಣಾ ವೇದಿಕೆಯಲ್ಲಿ ಇ–ಬಿಡ್ ಮುಖಾಂತರ ಬ್ಯಾಂಕುಗಳಿಂದ ಬಡ್ಡಿ ದರ ಆಹ್ವಾನಿಸಿರುವ ಬಗ್ಗೆ ಹಾಗೂ ರೂ.100.00 ಲಕ್ಷದೊಳಗಿನ ಮೊತ್ತಕ್ಕೆ ಸ್ಪರ್ಧಾತ್ಮಕ ದರಪಟ್ಟಿ ಕರೆದು ಹೂಡಿಕೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

4. 2023–24ನೇ ಸಾಲಿನಲ್ಲಿ ರೂ.408.49 ಕೋಟಿಗಳನ್ನು ಸರ್ಕಾರದ ಮಾರ್ಗಸೂಚಿಗಳಿಗೆ ವ್ಯತಿರಿಕ್ತವಾಗಿ ಇ–ಬಿಡ್ ಪ್ರಕ್ರಿಯೆ ಕೈಗೊಳ್ಳದೇ ನೇರವಾಗಿ ಬ್ಯಾಂಕ್‌ಗಳಲ್ಲಿ ಹೊಸದಾಗಿ ಹೂಡಿಕೆ ಮಾಡಲಾಗಿದೆ ಹಾಗೂ ರೂ.108.78 *ಕೋಟಿಗಳನ್ನು, ಒಂದು ವರ್ಷದ ಅವಧಿಗೆ ಮಾತ್ರ ಠೇವಣಿ ಇಟ್ಟು, ನಂತರ ವಾಪಸ್ ಪಡೆದು ಹೊಸದಾಗಿ* ಇ–ಬಿಡ್ ಪ್ರಕ್ರಿಯೆ ಮೂಲಕ ದರಪಟ್ಟಿ ಆಹ್ವಾನಿಸಿ ಹೂಡಿಕೆ ಮಾಡಬೇಕೆನ್ನುವ *ನಿಯಮಗಳನ್ನು ಉಲ್ಲಂಘಿಸಿ* ನವೀಕರಿಸಲಾಗಿದೆ.

5. ಹೂಡಿಕೆ ಮಾಡಿರುವ ಬ್ಯಾಂಕುಗಳಿಂದ ಪ್ರತಿ ತ್ರೈಮಾಸಿಕ/ಅರ್ಧವಾರ್ಷಿಕ/ವಾರ್ಷಿಕವಾಗಿ ಶಿಲ್ಕು ಧೃಡೀಕರಣ ಪತ್ರಗಳನ್ನು ಪಡೆದಿರುವುದಿಲ್ಲ ಹಾಗೂ ಲೆಕ್ಕಪರಿಶೋಧನೆಗೆ ಇವುಗಳನ್ನು ಪೂರ್ಣ ಪ್ರಮಾಣದಲ್ಲಿ ಹಾಜರುಪಡಿಸಿರುವುದಿಲ್ಲ.

6. ಬ್ಯಾಂಕ್‌ನಿಂದ ಪಡೆದ ನಿಶ್ಚಿತ ಠೇವಣಿ ಖಾತೆಗಳ ಡೆಬಿಟ್–ಕ್ರೆಡಿಟ್ ವಿವರವುಳ್ಳ ತಃಖ್ತೆಗಳನ್ನು ಪೂರ್ಣ ಪ್ರಮಾಣದಲ್ಲಿ ಹಾಜರುಪಡಿಸಿರುವುದಿಲ್ಲ.

7. ಆದಾಯ ತೆರಿಗೆ ಟಿಡಿಎಸ್ ಕಟಾವಣೆಗೆ ಸಂಬಂಧಿಸಿದಂತೆ ಬ್ಯಾಂಕುಗಳಿಂದ ಪಡೆದ ನಮೂನೆ–16ಎ ಹಾಗೂ ಟಿಡಿಎಸ್ ಮರುಭರಿಕೆ/ಹಿಂಪಾವತಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆಯಿಂದ ಪಡೆದ 26–ಎಎಸ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

8. ಕೆಲವು ನಿಶ್ಚಿತ ಅವಧಿಯ ಠೇವಣಿಗಳನ್ನು ಪಕ್ವತೆಗೂ ಮುನ್ನ ಹಿಂತೆಗೆಯಲಾಗಿದೆ.

ಮೇಲ್ಕಂಡ ಈ ಎಲ್ಲಾ ನ್ಯೂನತೆಗಳಿಗೆ ಸೂಕ್ತ ವಿವರಣೆ ನೀಡುವಂತೆ ಕೋರಿ ಆಡಿಟ್ ವಿಚಾರಣೆ ಪತ್ರ ಸಂಖ್ಯೆ:203/19.02.2025ನ್ನು ನೀಡಲಾಗಿದ್ದು, ವಿಶ್ವವಿದ್ಯಾನಿಲಯದಿಂದ ಇದಕ್ಕೆ ಯಾವುದೇ ಅನುಪಾಲನಾ ವರದಿ ಸಲ್ಲಿಸಿರುವುದಿಲ್ಲ.

ಹೂಡಿಕೆ ಮಾಡುವಾಗ ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸುತ್ತಿರುವ ಬಗ್ಗೆ ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ಆಕ್ಷೇಪಿಸಿ, ಸರ್ಕಾರದ ನಿರ್ದೇಶನಗಳನುಸಾರ ಹೂಡಿಕೆ ಮಾಡಲು ಸೂಚಿಸಲಾಗಿದ್ದರೂ ಸಹ ವಿಶ್ವವಿದ್ಯಾನಿಲಯದ ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳು ಹೂಡಿಕೆ ಸಂಬಂಧದ ಸರ್ಕಾರದ ಮಾರ್ಗಸೂಚಿಗಳನ್ನು ಹಣಕಾಸು ಸಮಿತಿ ಹಾಗೂ ವ್ಯವಸ್ಥಾಪನಾ ಮಂಡಳಿಯ ಗಮನಕ್ಕೆ ತರದೆಯೇ ಮನಸೋ ಇಚ್ಛೆ ಹೂಡಿಕೆ ಮಾಡುವ, ಪಕ್ವತಾವಧಿಗೂ ಮುನ್ನ ಹಿಂಪಡೆಯುವ ಮೂಲಕ ಸರ್ಕಾರದ ನಿರ್ದೇಶನಗಳನ್ನು ಉಲ್ಲಂಘಿಸುವುದನ್ನು ಮುಂದುವರೆಸಿರುತ್ತಾರೆ. ಹೀಗಾಗಿ ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ವಿಶ್ವವಿದ್ಯಾನಿಲಯಕ್ಕೆ ನಷ್ಟವುಂಟು ಮಾಡಿರುವ ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳ ವಿರುದ್ಧ ಸೂಕ್ತ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ.

11.4 ನಿಶ್ಚಿತ ಠೇವಣಿಗಳಲ್ಲಿ ಕಟಾವಣೆಯಾದ ಆದಾಯ ತೆರಿಗೆ ಟಿ.ಡಿ.ಎಸ್ ಮೊತ್ತವನ್ನು ಹಿಂಭರಿಕೆ ಮಾಡಿಕೊಳ್ಳದಿರುವುದು.

ಹೂಡಿಕೆಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯವು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಹಣಕಾಸು ವರ್ಷ 2023–24ರಲ್ಲಿ ಪಕ್ವತೆಗೊಂಡ ನಿಶ್ಚಿತ ಠೇವಣಿಗಳಿಂದ ರೂ.43,91,772/–ಗಳು ಆದಾಯ ತೆರಿಗೆ ಟಿಡಿಎಸ್ ಆಗಿ ಕಟಾವಣೆಗೊಂಡಿರುವುದು ಕಂಡು ಬಂದಿದ್ದು, ವಿವರಗಳನ್ನು ಈ ಕೂಡ ಲಗತ್ತಿಸಿರುವ **ಅನುಬಂಧ–8(ಎ)ರಲ್ಲಿ ನೀಡಿದೆ**. ವಿಶ್ವವಿದ್ಯಾನಿಲಯಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್–12ಎ ಅನುಸಾರ ತೆರಿಗೆ ಪಾವತಿಯಿಂದ ವಿನಾಯಿತಿ ಇದ್ದರೂ ಕೂಡ 2023–24 ಮತ್ತು ಈ ಹಿಂದಿನ ಸಾಲುಗಳಲ್ಲಿ ಕಟಾಯಿಸಲಾಗಿರುವ ಟಿಡಿಎಸ್ ಮೊತ್ತವನ್ನು ಆದಾಯ ತೆರಿಗೆ ಇಲಾಖೆಯಿಂದ ಹಿಂಭರಿಕೆ ಮಾಡಿಕೊಳ್ಳಲು ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಿ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿರುವ ಮಾಹಿತಿಯನ್ನು ಹಾಗೂ ಟಿ.ಡಿ.ಎಸ್ ಕಟಾವಣೆಗೆ ಸಂಬಂಧಿಸಿದಂತೆ ಬ್ಯಾಂಕುಗಳಿಂದ ನಮೂನೆ–16ಎ ಹಾಗೂ ಹಿಂಭರಿಕೆಗೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆಯಿಂದ ನಮೂನೆ–26 ಎ.ಎಸ್‌ಗಳನ್ನು ಪಡೆದು ಈವರೆಗೂ ಸಲ್ಲಿಸಿರುವುದಿಲ್ಲ. ಈ ಬಗ್ಗೆ ಸೂಕ್ತ ವಿವರಣೆ ನೀಡುವಂತೆ ಕೋರಿ ಆಡಿಟ್ ವಿಚಾರಣೆ ಪತ್ರ ಸಂಖ್ಯೆ:204/19.02.205 ರಂದು ನೀಡಲಾಗಿತ್ತು. ಇದಕ್ಕೆ ವಿಶ್ವವಿದ್ಯಾನಿಲಯದವರು 2023–24ನೇ ಸಾಲಿನ ನಿಶ್ಚಿತ ಅವಧಿ ಠೇವಣಿಗಳಿಂದ ಟಿಡಿಎಸ್ ಕಟಾಯಿಸಿರುವ ಮೊತ್ತ ಮತ್ತು ಇತರೆ ಮೂಲದಲ್ಲಿ ಟಿಡಿಎಸ್ ಕಟಾಯಿಸಿರುವ ಮೊತ್ತವನ್ನು ವಿಶ್ವವಿದ್ಯಾನಿಲಯದ PAN ಗೆ ಇ–ಟಿಡಿಎಸ್

ಮೂಲಕ ಅಪ್ಲೋಡ್ ಮಾಡಿ 2024–25ನೇ ಹಣಕಾಸು ವರ್ಷದ ಆದಾಯ ತೆರಿಗೆ ರಿಟರ್ನ್ಸ್ ಫೈಲ್ ಮಾಡಲಾಗಿದೆ. ಆದಾಯ ತೆರಿಗೆ ಮರು ಪಾವತಿ ಮೊತ್ತ ರೂ.26,44,360/–ಗಳು ಹಿಂಭರಿಕೆಯಾಗಬೇಕಾಗಿದ್ದು, ಹಿಂಪಾವತಿಯನ್ನು ನಿರೀಕ್ಷಿಸಲಾಗಿದೆ ಎಂದು ಉತ್ತರಿಸಿ ಹಣಕಾಸು ವರ್ಷ 2023–24ರ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಕೆ ಸ್ವೀಕೃತಿ ಪ್ರತಿಗಳನ್ನು ಅನುಪಾಲನಾ ವರದಿಯೊಂದಿಗೆ ಸಲ್ಲಿಸಿರುತ್ತಾರೆ. ಆದರೆ ಹಣಕಾಸು ವರ್ಷ 2023–24ರ ಟಿಡಿಎಸ್ ಕಟಾವಣೆ ಮೊತ್ತ ರೂ.43,91,772/–ಗಳ ಪೈಕಿ ರೂ.26,44,360/–ಗಳನ್ನು ಹೊರತುಪಡಿಸಿದಂತೆ ಇನ್ನುಳಿದ ಮೊತ್ತ ರೂ.17,47,412/–ಗಳಿಗೆ ಯಾವುದೇ ಮಾಹಿತಿ ನೀಡದ ಕಾರಣ ಈ ಬಗ್ಗೆ ಸಂಪೂರ್ಣ ದಾಖಲಾತಿಗಳನ್ನು ಹಾಜರುಪಡಿಸುವವರೆಗೂ ಒಟ್ಟು ಆದಾಯ ತೆರಿಗೆ ಕಟಾವಣೆ ಮೊತ್ತ ರೂ.**43,91,772/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

11.5 ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಒಂದು ವರ್ಷಕ್ಕೂ ಹೆಚ್ಚಿನ ಅವಧಿಗೆ ಠೇವಣಿಗಳನ್ನು ಹೂಡಿಕೆ ಮಾಡಿ ವಿಶ್ವವಿದ್ಯಾನಿಲಯಕ್ಕೆ ಬಡ್ಡಿ ನಷ್ಟ ಉಂಟುಮಾಡಿರುವುದು.

2023–24ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ನಿಶ್ಚಿತ ಠೇವಣಿಗಳ ತಃಖ್ತೆಯನ್ನು ಪರಿಶೀಲಿಸಲಾಗಿ ಹೂಡಿಕೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಸುತ್ತೋಲೆ ಸಂಖ್ಯೆ:ಎಫ್.ಡಿ 91 ಟಿಎಆರ್ 2022, ದಿನಾಂಕ:02.07.2022 ರ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ, ಪಿಂಚಣಿ ನಿಧಿ, ಪರೀಕ್ಷಾ ನಿಧಿ ಹಾಗೂ SD/EMD ನಿಧಿಗಳಲ್ಲಿ ಒಂದು ವರ್ಷಕ್ಕೂ ಹೆಚ್ಚಿನ ಅವಧಿಗೆ ರೂ.23.91 ಕೋಟಿಗಳನ್ನು ನಿಶ್ಚಿತ ಅವಧಿ ಠೇವಣಿಗಳಲ್ಲಿ ಹೂಡಿಕೆ ಮಾಡಲಾಗಿದ್ದು, ಇದರ ಪರಿಣಾಮ ವಿಶ್ವವಿದಾಯನಿಲಯಕ್ಕೆ ರೂ.17,43,315/–ಗಳಷ್ಟು ಬಡ್ಡಿ ನಷ್ಟವಾಗಿರುತ್ತದೆ. ವಿವರಗಳನ್ನು **ಅನುಬಂಧ–9**ರಲ್ಲಿ ನೀಡಿದೆ. ಠೇವಣಿಗಳನ್ನು ಗರಿಷ್ಠ 1 ವರ್ಷದ ಅವಧಿಗೆ ಹೂಡಿಕೆ ಮಾಡಿ ನಂತರ ಹಿಂಪಡೆದು ಮತ್ತೆ ಹೊಸದಾಗಿ ಹೂಡಿಕೆ ಮಾಡಿದಿದ್ದರೆ ವಿಶ್ವವಿದಾಯನಿಲಯಕ್ಕೆ ಆ ಅವಧಿಗೆ ಭಾರತೀಯ ಸ್ಟೇಟ್ ಬ್ಯಾಂಕ್ ಹಾಗೂ ಕೆ.ಜಿ.ಬಿ ಬ್ಯಾಂಕುಗಳಲ್ಲಿ ಚಾಲ್ತಿಯಲ್ಲಿದ್ದ ಗರಿಷ್ಠ ಬಡ್ಡಿ ದರ ಶೇ 7.60ರ ದರದಲ್ಲಿ ರೂ.17,43,315/–ಗಳಷ್ಟು ಅಧಿಕ ಬಡ್ಡಿ ಪ್ರಾಪ್ತವಾಗುತ್ತಿತ್ತು. ಆದರೆ ವಿಶ್ವವಿದ್ಯಾನಿಲಯವು ಈ ನಿಯಮ ಪಾಲಿಸದ ಕಾರಣ ಬಡ್ಡಿ ನಷ್ಟವಾಗಿದ್ದು, ಈ ಬಗ್ಗೆ ಸೂಕ್ತ ವಿವರಣೆ ಕೋರಿ ಆಡಿಟ್ ವಿಚಾರಣೆ ಪತ್ರ ಸಂಖ್ಯೆ:207/19.02.2025ರಂದು ನೀಡಲಾಗಿತ್ತು. ಇದಕ್ಕೆ ಅನುಪಾಲನಾ ವರದಿ ಸಲ್ಲಿಸಿರುವ ವಿಶ್ವವಿದ್ಯಾನಿಲಯದವರು ರಾಜ್ಯ ಸರ್ಕಾರದ ಆರ್ಥಿಕ ಇಲಾಖೆ ಸುತ್ತೋಲೆ ಸಂಖ್ಯೆ:ಆಇ/53/ಇಸಾಂಹ/212 ದಿನಾಂಕ:10.07.2012ರನ್ವಯ ವಿಶ್ವವಿದ್ಯಾನಿಲಯದ ಹೆಚ್ಚುವರಿ ಹಣವನ್ನು ನಿಧಿಯನ್ನು ಆಯಾಯ ಮಾಹೆಗಳಲ್ಲಿ ಚಾಲ್ತಿಯಲ್ಲಿದ್ದ ಗರಿಷ್ಠ ಬಡ್ಡಿ ದರಗಳಲ್ಲಿ ಮಾನ್ಯ ಕುಲಪತಿಯವರ ಅನುಮೋದನೆಯೊಂದಿಗೆ ಕೆ.ಜಿ.ಬಿ, ಇಂಡಸ್ ಇಂಡ್ ಬ್ಯಾಂಕ್ ಮತ್ತು ಭಾರತೀಯ ಸ್ಟೇಟ್ ಬ್ಯಾಂಕ್‌ಗಳಲ್ಲಿ ಹೂಡಿಕೆ/ನವೀಕರಣ ಮಾಡಲಾಗಿದ್ದು ವಿಶ್ವವಿದ್ಯಾನಿಲಯಕ್ಕೆ ಗರಿಷ್ಠ ಬಡ್ಡಿ ಲಭ್ಯವಾಗಿರುತ್ತದೆ. ಹಾಗೂ ವಿಶ್ವವಿದ್ಯಾನಿಲಯದ ನಿಧಿಯ ಸುರಕ್ಷತೆಯ ದೃಷ್ಟಿಯಿಂದ ಸರ್ಕಾರದ ಮಾರ್ಗಸೂಚಿಗಳನುಸಾರ ಶೇಕಡ 75 ರಷ್ಟು ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕು ಎಸ್.ಬಿ.ಐನಲ್ಲಿ ಲಭ್ಯವಿದ್ದ ಗರಿಷ್ಠ ಬಡ್ಡಿ ದರದಲ್ಲಿ ಹೂಡಿಕೆ ಮಾಡಲಾಗಿದ್ದು, ವಿಶ್ವವಿದ್ಯಾನಿಲಯಕ್ಕೆ ಬಡ್ಡಿ ನಷ್ಟವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆದರೆ ವಾಸ್ತವವಾಗಿ ಈ ಮೇಲಿನ ಅನುಬಂಧದಲ್ಲಿ ವಿವರಿಸಿರುವಂತೆ ಹೂಡಿಕೆ ವರ್ಷ 2022ರಲ್ಲಿ ಕೆಜಿಬಿ ಬ್ಯಾಂಕಿನಲ್ಲಿ ಲಭ್ಯವಿದ್ದ ಗರಿಷ್ಠ ಬಡ್ಡಿ ದರ

5.65 ರಿಂದ 7 ಆಗಿದ್ದರೆ 2023ರಲ್ಲಿ ಶೇ 7.60 ಆಗಿರುತ್ತದೆ. ಅದೇ ರೀತಿ ಎಸ್.ಬಿ.ಐ ಬ್ಯಾಂಕಿನಲ್ಲಿ ಹೂಡಿಕೆ ವರ್ಷ 2022ರಲ್ಲಿ ಗರಿಷ್ಠ ಬಡ್ಡಿ ಶೇ 5.10 ಆಗಿದ್ದರೆ 2023ರಲ್ಲಿ ಲಭ್ಯವಿದ್ದ ಗರಿಷ್ಠ ಬಡ್ಡಿ ಶೇ 7.60 (ಕೆ.ಜಿ.ಬಿ) ಹಾಗೂ ಇಂಡಸ್ ಇಂಡ್ ಬ್ಯಾಂಕಿನಲ್ಲಿ ಹೂಡಿಕೆ ವರ್ಷ 2021ರಲ್ಲಿ ಗರಿಷ್ಠ ಬಡ್ಡಿ ಶೇ 6.35 ಲಭ್ಯವಿದ್ದರೆ 2022ರಲ್ಲಿ ಲಭ್ಯವಿದ್ದ ಗರಿಷ್ಠ ಬಡ್ಡಿ ಶೇ 7 ಆಗಿರುತ್ತದೆ ಆದ್ದರಿಂದ ಇದು ವಿಶ್ವವಿದ್ಯಾನಿಲಯದ ಸಮರ್ಥನೆಗೆ ಪೂರಕವೆನಿಸುವುದಿಲ್ಲ. ಅಲ್ಲದೇ ಹೂಡಿಕೆಗೆ ಸಂಬಂಧಿಸಿದಂತೆ ಮೇಲ್ಕಂಡ ಸರ್ಕಾರದ ಸುತ್ತೋಲೆ ಸಂಖ್ಯೆ: ಎಫ್.ಡಿ 91 ಟಿ.ಎ.ಆರ್ 2022 ದಿನಾಂಕ02.07.2022ರ ಮಾರ್ಗಸೂಚಿ 6(II)(i)ರಂತೆ ಹೂಡಿಕೆ ಸಂಸ್ಥೆಯು ತನ್ನಲ್ಲಿರುವ ಹೆಚ್ಚುವರಿ ನಿಧಿಯ ಕನಿಷ್ಠ ಶೇ 60 ರಷ್ಟು ಮೊತ್ತವನ್ನು ಅನುಸೂಚಿತ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳೂ ಸೇರಿದಂತೆ ಸಾರ್ವಜನಿಕ ವಲಯದ ವಾಣಿಜ್ಯ ಬ್ಯಾಂಕುಗಳಲ್ಲಿ ಹೂಡಿಕೆ ಮಾಡಬಹುದಾಗಿರುತ್ತದೆ. ಉಳಿದಂತೆ ಶೇ 40ಕ್ಕೆ ಮೀರದ ಮೊತ್ತವನ್ನು ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗಿಂತಲೂ ಅಧಿಕ ಬಡ್ಡಿ ನೀಡುವ ಖಾಸಗಿ ವಲಯದ ಅನುಸೂಚಿತ ವಾಣಿಜ್ಯ ಬ್ಯಾಂಕುಗಳಲ್ಲಿ ಹೂಡಿಕೆ ಮಾಡಬಹುದಾಗಿದೆ ಮತ್ತು ಒಂದು ವೇಳೆ ಖಾಸಗಿ ಬ್ಯಾಂಕುಗಳಿಂದ ಗರಿಷ್ಠ ಸ್ಪರ್ಧಾತ್ಮಕ ಬಡ್ಡಿ ಲಭ್ಯವಿಲ್ಲದೇ ಇದ್ದ ಪಕ್ಷದಲ್ಲಿ ಆಗ ಆ ಮೊತ್ತವನ್ನೂ ಕೂಡ ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಹೂಡಿಕೆ ಮಾಡಬಹುದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯವು ಶೇ 75ರಷ್ಟು ಮೊತ್ತವನ್ನು ಸಾರ್ವಜನಿಕ ವಲಯದ ಎಸ್.ಬಿ.ಐ ಬ್ಯಾಂಕ್ ಒಂದರಲ್ಲೇ ಹೂಡಿಕೆ ಮಾಡುವ ಬದಲಿಗೆ ಅಧಿಕ ಬಡ್ಡಿ ನೀಡುವ ಕೆ.ಜಿ.ಬಿ ಯಂತಹ ಇತರೆ ಅನುಸೂಚಿತ ವಾಣಿಜ್ಯ ಬ್ಯಾಂಕುಗಳಲ್ಲಿ ಹೂಡಿಕೆ ಮಾಡಿದ್ದಿದ್ದರೆ ಅಧಿಕ ಬಡ್ಡಿ ಗಳಿಸಬಹುದಾಗಿತ್ತು ಎಂದು ಅಭಿಪ್ರಾಯಿಸುತ್ತಾ ಈ ಮೇಲ್ಕಾಣಿಸಿದ ಒಟ್ಟು ಬಡ್ಡಿ ನಷ್ಟದ ಮೊತ್ತ **ರೂ.17,43,315/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ** ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದೆ.

11.6 ತೇವಣಿಗಳು ಪಕ್ವವಾಗುವುದಕ್ಕೂ ಮೊದಲೇ ನಗದೀಕರಿಸಿ ವಿಶ್ವವಿದ್ಯಾನಿಲಯಕ್ಕೆ ಆದಾಯ ನಷ್ಟ ಉಂಟುಮಾಡಿರುವುದು.

2023–24ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ನಿಶ್ಚಿತ ಠೇವಣಿಗಳ ತಃಖ್ತೆಯನ್ನು ಪರಿಶೀಲಿಸಲಾಗಿ **ಅನುಬಂಧ–10ರಲ್ಲಿ** ವಿವರಿಸಿರುವ ನಿಶ್ಚಿತ ಅವಧಿ ಠೇವಣಿಗಳನ್ನು ಅವು ಪಕ್ವವಾಗುವುದಕ್ಕೂ ಮೊದಲೇ ನಗದೀಕರಿಸಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ರೂ.13,51,197/–ಗಳ ಬಡ್ಡಿ ನಷ್ಟವಾಗಿದ್ದು, ಈ ಬಗ್ಗೆ ಸೂಕ್ತ ವಿವರಣೆ ನೀಡುವಂತೆ ಕೋರಿ ಆಡಿಟ್ ವಿಚಾರಣೆ ಪತ್ರ ಸಂಖ್ಯೆ:208/20.02.2025ನ್ನು ನೀಡಲಾಗಿತ್ತು. ಇದಕ್ಕೆ ವಿಶ್ವವಿದ್ಯಾನಿಲಯದವರು ಅನುಪಾಲನಾ ವರದಿ ಸಲ್ಲಿಸಿದ್ದು, ಮಾನ್ಯ ಕುಲಪತಿಯವರ ನಿರ್ದೇಶನದ ಮೇರೆಗೆ ಕೆ.ಜಿ.ಬಿ, ಕೆನೆರಾ ಬ್ಯಾಂಕುಗಳಲ್ಲಿನ ಠೇವಣಿಗಳನ್ನು ಹಿಂಪಡೆದು 2023 ಏಪ್ರಿಲ್ ಮತ್ತು ಮೇ ಮಾಹೆಗಳಲ್ಲಿ ಶೇ 7.87ರಷ್ಟು ಗರಿಷ್ಠ ಬಡ್ಡಿ ಲಭ್ಯವಿದ್ದ ಎಸ್.ಬಿ.ಐ ಮಾನಸಗಂಗೋತ್ರಿ ಶಾಖೆಯಲ್ಲಿ ಕಾರ್ಪಸ್ ಮತ್ತು ಪರೀಕ್ಷಾ ನಿಧಿ ಖಾತೆಗಳಲ್ಲಿ ಹೂಡಿಕೆ ಮಾಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಸದರಿ ಏಪ್ರಿಲ್ ಮತ್ತು ಮೇ 2023ರ ಮಾಹೆಗಳಲ್ಲಿ ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಶೇ 6.80ರಷ್ಟು ಬಡ್ಡಿ ಮಾತ್ರ ಜಾರಿಯಲ್ಲಿದ್ದು, ಶೇ 7.87 ರಷ್ಟು ಬಡ್ಡಿ ದರದೊಂದಿಗೆ ಏಪ್ರಿಲ್ & ಮೇ ಮಾಹೆಗಳಲ್ಲಿ ಹೂಡಿಕೆ ಮಾಡಿರುವುದಕ್ಕೆ ಪೂರಕವಾಗಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಮತ್ತು ಹೀಗೆ ಹಿಂಪಡೆದ ಠೇವಣಿ ಒಟ್ಟು ಮೊತ್ತ ರೂ.2,46,09,331/–ಗಳಿಗೆ ಹೂಡಿಕೆ ಸಮಿತಿಯಿಂದ ಪೂರ್ವಾನುಮೋದನೆ ಪಡೆದಿರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ

ಠೇವಣಿಗಳು ಪಕ್ವಾಗುವುದಕ್ಕೂ ಮೊದಲೇ ಹಿಂಪಡೆದು ನಷ್ಟವಾದ ಒಟ್ಟು ಬಡ್ಡಿ ಮೊತ್ತ **ರೂ.13,51,197/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದೆ.**

11.7 ಕಡಿಮೆ ಬಡ್ಡಿ ದರಗಳಿಗೆ ಠೇವಣಿಗಳನ್ನು ನವೀಕರಿಸಿ ವಿಶ್ವವಿದ್ಯಾನಿಲಯಕ್ಕೆ ರೂ.9,07,138/–ಗಳ ಆದಾಯ ನಷ್ಟ ಉಂಟುಮಾಡಿರುವ ಬಗ್ಗೆ.

ವಿಶ್ವವಿದ್ಯಾನಿಲಯವು ಹೂಡಿಕೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಸುತ್ತೋಲೆ ಸಂಖ್ಯೆ:ಎಫ್.ಡಿ 91 ಟಿಎಆರ್ 2022, ದಿನಾಂಕ:02.07.2022ರ ಮಾರ್ಗಸೂಚಿಗಳನ್ನು ಉಲ್ಲಂಘಿಸಿ 2023–24ನೇ ಸಾಲಿನಲ್ಲಿ ಪಕ್ವಗೊಂಡ ಠೇವಣಿಗಳನ್ನು ಕಡಿಮೆ ಬಡ್ಡಿ ದರಗಳಿಗೆ ಈ ಹಿಂದಿನ ಬ್ಯಾಂಕುಗಳಲ್ಲಿಯೇ ಪುನಃ ನವೀಕರಿಸಿರುವುದು/ಮರು ಹೂಡಿಕೆ ಮಾಡಿರುವುದು ಕಂಡುಬಂದಿರುತ್ತದೆ.

ಉದಾಹರಣೆಗೆ ಸಾಮಾನ್ಯ ನಿಧಿಯಲ್ಲಿನ ಠೇವಣಿ ಸಂಖ್ಯೆ:37744658697 ಅನ್ನು 1 ವರ್ಷದ ಅವಧಿಗೆ ಶೇ 6.80 ರ ದರಕ್ಕೆ ದಿನಾಂಕ:08.06.2023 ರಂದು ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ನವೀಕರಿಸಲಾಗಿದೆ ಹಾಗೂ ಠೇವಣಿ ಸಂಖ್ಯೆ:12001201800093 ಅನ್ನು 1 ವರ್ಷದ ಅವಧಿಗೆ ಶೇ 7.60 ರ ದರಕ್ಕೆ ದಿನಾಂಕ:11.06.2023 ರಂದು ಕೆ.ಜಿ.ಬಿ ಬ್ಯಾಂಕಿನಲ್ಲಿ ನವೀಕರಿಸಲಾಗಿದೆ. ಹೀಗೆ ವಿಶ್ವವಿದ್ಯಾನಿಲಯವು ಒಂದೇ ಅವಧಿಯಲ್ಲಿ (ಕಡಿಮೆ ದಿನಗಳ ಅಂತರದಲ್ಲಿ) ಪ್ರತ್ಯೇಕ ದರಗಳಿಗೆ ಪ್ರತ್ಯೇಕ ಬ್ಯಾಂಕುಗಳಲ್ಲಿ ಠೇವಣಿಗಳನ್ನು ಹೂಡಿಕೆ ಮಾಡಿ ಅಧಿಕ ಬಡ್ಡಿ ಗಳಿಸುವ ಅವಕಾಶದಿಂದ ವಂಚಿತವಾಗಿರುವ ಬಗ್ಗೆ ವಿವರಣೆ ಕೋರಿ ಆಡಿಟ್ ವಿಚಾರಣೆ ಪತ್ರ ಸಂಖ್ಯೆ:209/20.02.2025ರಂದು ನೀಡಲಾಗಿತ್ತು. ಇದಕ್ಕೆ ಪ್ರತಿಕ್ರಿಯಿಸಿರುವ ವಿಶ್ವವಿದ್ಯಾನಿಲಯದವರು ಭಾರತೀಯ ಸ್ಟೇಟ್ ಬ್ಯಾಂಕ್ ಹಾಗೂ ಕರ್ನಾಟಕ ಗ್ರಾಮೀಣ ಬ್ಯಾಂಕುಗಳಲ್ಲಿ ಪಕ್ವಗೊಂಡ ಠೇವಣಿಗಳನ್ನು ಆಯಾ ಮಾಹೆಗಳಲ್ಲಿ ಜಾರಿಯಲ್ಲಿದ್ದ ಗರಿಷ್ಠ ಬಡ್ಡಿ ದರದಲ್ಲಿ ಮಾನ್ಯ ಕುಲಪತಿಗಳ ಅನುಮೋದನೆಯೊಂದಿಗೆ ನವೀಕರಿಸಿ ಹಣಕಾಸು ಸಮಿತಿ ಹಾಗೂ ವ್ಯವಸ್ಥಾಪನಾ ಮಂಡಳಿಯಿಂದ ಅನುಸಮರ್ಥನೆ ಪಡೆಯಲಾಗಿದೆ ಎಂದು ತಮ್ಮ ಅನುಪಾಲನಾ ವರದಿಯಲ್ಲಿ ಉತ್ತರಿಸಿರುತ್ತಾರೆ. ಆದರೆ ವಿಶ್ವವಿದ್ಯಾನಿಲಯವು ಹಾಜರುಪಡಿಸಿದ ನಿಶ್ಚಿತ ಠೇವಣಿಗಳ ತಃಖ್ತೆಯಲ್ಲಿನ ಠೇವಣಿ ದರಗಳನ್ನು ಅವಲೋಕಿಸಿದಾಗ ವಿಶ್ವವಿದ್ಯಾನಿಲಯದವರು ನೀಡಿರುವ ಸಮರ್ಥನೆ ಪೂರಕ ಮತ್ತು ಸಮಂಜಸ ಎನಿಸುವುದಿಲ್ಲ. ಕಾರಣ ಸದರಿ ಸಾಲಿನಲ್ಲಿ ಎಸ್.ಬಿ.ಐ, ಕೆನೆರಾ ಬ್ಯಾಂಕ್ ಮತ್ತು ಐ.ಸಿ.ಐ.ಸಿ.ಐ ಬ್ಯಾಂಕುಗಳಲ್ಲಿ ಒಟ್ಟು ರೂ.18,17,77,354/–ಮೌಲ್ಯದ ಠೇವಣಿಗಳು ನವೀಕರಿಸಲ್ಪಟ್ಟಿದ್ದು, ಆಗ ಈ ಬ್ಯಾಂಕುಗಳಲ್ಲಿ ಲಭ್ಯವಿದ್ದ ಗರಿಷ್ಠ ಬಡ್ಡಿ ದರ ಶೇ 5.25 ರಿಂದ 7.35 ಆಗಿರುತ್ತದೆ ಮತ್ತು ಕೆ.ಜಿ.ಬಿ ಬ್ಯಾಂಕಿನಲ್ಲಿ ಲಭ್ಯವಿದ್ದ ಗರಿಷ್ಠ ಬಡ್ಡಿ ದರ ಶೇ 7.60 ಗೆ ಹೋಲಿಸಿದರೆ ಇದು ಶೇ 0.25 ರಿಂದ 0.80 ರಷ್ಟು ಕಡಿಮೆ ಇರುತ್ತದೆ. ವಿವರಗಳನ್ನು **ಅನುಬಂಧ–11ರಲ್ಲಿ** ನೀಡಿದೆ.

ವಿಶ್ವವಿದ್ಯಾನಿಲಯವು ಹಾಜರುಪಡಿಸಿದ ನಿಶ್ಚಿತ ಠೇವಣಿಗಳ ತಃಖ್ತೆಯಲ್ಲಿನ ಠೇವಣಿ ದರಗಳ ಮಾಹಿತಿಯನ್ನು ಕ್ರೋಢೀಕರಿಸಿದ ಮಾಹೆವಾರು ತುಲನಾತ್ಮಕ ಪಟ್ಟಿಯನ್ನು ಈ ಕೆಳಗೆ ನೀಡಿದೆ.

FD Interest rates offered by the Banks in the FY 2023-24 (as per FD Statement produced to the Audit) (in %)

Month	Kaveri Gramina Bank	SBI	Canara Bank	ICICI	HDFC	Ujjivan Small Finance Bank	Fincare Small Finance Bank Ltd.,
May-23	7.60	-	6.90 & 7.00	-	-	-	-
Jun-23	7.60	6.80	6.90	-	-	8.45	-
Jul-23	7.60	5.75	-	7.35	-	-	-
Aug-23	7.60	6.80	-	-	-	-	-
Sep-23	7.60	-	-	-	-	-	-
Oct-23	7.60	-	-	-	-	-	-
Nov-23	7.60	-	-	-	-	-	8.70
Dec-23	-	5.25	-	-	-	-	-
Jan-24	7.50	-	-	-	7.55	-	-
Feb-24	7.50	-	-	-	-	-	-
Mar-24	6.85	7.80 & 6.80	-	-	-	-	-

ಹೀಗಾಗಿ ಠೇವಣಿಗಳು ಪಕ್ವಗೊಂಡ ನಂತರ ಅದೇ ಬ್ಯಾಂಕುಗಳಲ್ಲಿ ನವೀಕರಿಸುವ ಬದಲು ಆ ಅವಧಿಯಲ್ಲಿ ಗರಿಷ್ಠ ಬಡ್ಡಿ ದರ (ಶೇ.7.60) ಲಭ್ಯವಿದ್ದ ಅನುಸೂಚಿತ ವಾಣಿಜ್ಯ ಬ್ಯಾಂಕಾದ ಕರ್ನಾಟಕ ಗ್ರಾಮೀಣ ಬ್ಯಾಂಕಿನಲ್ಲಿ ಹೂಡಿಕೆ ಮಾಡಿದ್ದಿದ್ದರೆ ಶೇ 0.25 ರಿಂದ 0.80ರಷ್ಟು ಅಧಿಕ ಬಡ್ಡಿ ದರದೊಂದಿಗೆ ಒಟ್ಟು ರೂ.9,07,138/-ಗಳಷ್ಟು ಅಧಿಕ ಬಡ್ಡಿಗಳಿಸಬಹುದಾಗಿದ್ದು, ಈ ಅದಾಯ ನಷ್ಟಕ್ಕೆ ಕಾರಣಕರ್ತರಾದ ಅಧಿಕಾರಿ ವರ್ಗದವರಿಂದ ಈ ಒಟ್ಟು ಮೊತ್ತ **ರೂ.9,07,138/-ಗಳನ್ನು ವಸೂಲಿಸಿ** ವರದಿ ಸಲ್ಲಿಸಲು ಸೂಚಿಸಿದೆ.

11.8 ಸಂಕೀರ್ಣ ಖಾತೆಯ ನಗದು ಪುಸ್ತಕವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.

2023-24ನೇ ಸಾಲಿನ ವಾರ್ಷಿಕ ಲೆಕ್ಕಗಳಲ್ಲಿ ನಮೂದಿಸಿರುವಂತೆ ಸಂಕೀರ್ಣ ಖಾತೆಯ ನಗದು ಪುಸ್ತಕವನ್ನು ಲೆಕ್ಕಪರಿಶೋಧನೆ ಹಾಜರುಪಡಿಸುವಂತೆ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:61/13.12.2024ರಲ್ಲಿ ಕೋರಲಾಗಿದ್ದರೂ ನಗದು ಪುಸ್ತಕವನ್ನು ಹಾಜರುಪಡಿಸಿರುವುದಿಲ್ಲ. ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 329(1)ರ ಪ್ರಕಾರ ಕಛೇರಿಯ ಎಲ್ಲಾ ವ್ಯವಹಾರವನ್ನು ನಗದು ಪುಸ್ತಕದಲ್ಲಿ ದಾಖಲಿಸುವುದು ಬಟವಾಡೆ ಅಧಿಕಾರಿಯ ಕರ್ತವ್ಯವಾಗಿರುತ್ತದೆ. ಮತ್ತು ಅನುಚ್ಛೇದ 57ರ ಪ್ರಕಾರ ಕಛೇರಿಯ ಎಲ್ಲಾ ದಾಖಲೆಗಳು ಮಹತ್ವದ ದಸ್ತಾವೇಜುಗಳಾಗಿದ್ದು, ಸದರಿ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸವುದು ಬಟವಾಡೆ ಅಧಿಕಾರಿಯ ಕರ್ತವ್ಯವಾಗಿದ್ದರೂ ಸಂಕೀರ್ಣ ಖಾತೆಯ ನಗದು ಪುಸ್ತಕವನ್ನು ಹಾಜರುಪಡಿಸಿರುವುದಿಲ್ಲ. ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಈ ಬಗ್ಗೆ ಆಕ್ಷೇಪಿಸಿದ್ದರೂ ವಿಶ್ವವಿದ್ಯಾನಿಲಯದಿಂದ ಯಾವುದೇ ಕ್ರಮವಾಗಿರುವುದಿಲ್ಲ. ಈ ಬಗ್ಗೆ ಕುಲಸಚಿವರು ವೈಯಕ್ತಿಕವಾಗಿ ಗಮನಹರಿಸಿ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 03ರಪ್ರಕಾರ ವಿಷಯ ನಿರ್ವಹಕರು, ಅಧೀಕ್ಷಕರು, ಸಹಾಯಕ ಹಣಕಾಸು ಅಧಿಕಾರಿಗಳು ಮೇಲೆ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ.

11.9 ಅನಗತ್ಯವಾಗಿ ಸಂಕೀರ್ಣ ಬ್ಯಾಂಕ್ ಖಾತೆ ನಿರ್ವಹಣೆ ಹಾಗೂ ಈ ಖಾತೆಯಲ್ಲಿರುವ ಕಟಾವಣೆಗಳ ಮೊತ್ತ ರೂ.1,00,48,804/-ಗಳನ್ನು ಸಂಬಂಧಿಸಿದ ಲೆಕ್ಕಶೀರ್ಷಿಕೆಗೆ/ಸಕ್ಷಮ ಪ್ರಾಧಿಕಾರಕ್ಕೆ ಪಾವತಿಸದಿರುವುದು.

ಮುಕ್ತ ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ ಹಾಗೂ ಇನ್ನಿತರೆ ಖಾತೆಗಳಿಂದ ವಿಶ್ವವಿದ್ಯಾನಿಲಯದ ಅಧಿಕಾರಿ/ಸಿಬ್ಬಂದಿ ವರ್ಗದವರ ವೇತನದಿಂದ ಕಟಾಯಿಸುವ ಶಾಸನಬದ್ಧ ಕಟಾವಣೆಗಳು, ವಿಮೆ, ಮುಂಗಡ ಹಣ ಹಾಗೂ ಇತ್ಯಾದಿ ಮೊತ್ತವನ್ನು ಸರಕಾರದ ಲೆಕ್ಕಶೀರ್ಷಿಕೆಗೆ/ಸಕ್ಷಮ ಪ್ರಾಧಿಕಾರಕ್ಕೆ ಅದೇ ಖಾತೆಯಿಂದ ನೇರವಾಗಿ ಜಮೆ ಮಾಡುವ ಬದಲಿಗೆ ಸಂಕೀರ್ಣ ಬ್ಯಾಂಕ್ ಖಾತೆಯೆಂದು ಮತ್ತೊಂದು ನಿರ್ವಹಿಸಿ, ಅದಕ್ಕೆ ಸದರಿ ಮೊತ್ತಗಳನ್ನು ವರ್ಗಾವಣೆ ಮಾಡಿಕೊಳ್ಳಲಾಗುತ್ತಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಆನಂತರ ಸಂಕೀರ್ಣ ಖಾತೆಯಿಂದ ಸಂಬಂಧಪಟ್ಟ ಸರ್ಕಾರದ ಲೆಕ್ಕಶೀರ್ಷಿಕೆಗಳಿಗೆ ಕಟಾವಣೆಗಳನ್ನು ಜಮೆಮಾಡಲಾಗುತ್ತಿದೆ. ಈ ಬಗ್ಗೆ ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ಆಕ್ಷೇಪಿಸಿ ಶಾಸನಬದ್ಧ ಕಟಾವಣೆಯನ್ನು ಕಟಾವಣೆ ಮಾಡಲಾದ ಬ್ಯಾಂಕ್ ಖಾತೆಗಳಿಂದಲೇ ನೇರವಾಗಿ ಸರಕಾರದ ಲೆಕ್ಕಶೀರ್ಷಿಕೆಗೆ/ಸಕ್ಷಮ ಪ್ರಾಧಿಕಾರಕ್ಕೆ ಜಮೆ ಮಾಡಲು ತಿಳಿಸಿದ್ದಾಗ್ಯೂ, ವಿಶ್ವವಿದ್ಯಾನಿಲಯದಲ್ಲಿ ಲೆಕ್ಕಪರಿಶೋಧನೆಯಲ್ಲಿ ಸೂಚಿಸಿದ ಕ್ರಮವನ್ನು ಅನುಸರಿಸುತ್ತಿರುವುದಿಲ್ಲ. ಇದರಿಂದಾಗಿ ಶಾಸನಬದ್ಧ ಕಟಾವಣೆಯನ್ನು ಸರಕಾರಕ್ಕೆ ಜಮೆ ಮಾಡಲು ವಿಳಂಬ ಹಾಗೂ ವಿಶ್ವವಿದ್ಯಾನಿಲಯದ ಹಣಕಾಸು ತಃಖ್ತೆಗಳಲ್ಲಿ ಉತ್ಪ್ರೇಕ್ಷಿತ ಸ್ವೀಕೃತಿ ಮತ್ತು ಪಾವತಿ ಅಂಕ ಅಂಶಗಳನ್ನು ಬಿಂಬಿಸಿದಂತಾಗುತ್ತದೆ. ಆದ್ದರಿಂದ, ಈ ಕುರಿತು ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳುವಂತೆ ಸೂಚಿಸಿದೆ. ಸದರಿ ಖಾತೆಯ ಜಮಾ ಮತ್ತು ವೆಚ್ಚದ ಸಂಪೂರ್ಣ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ, ವಿಚಾರಣಾ ಪತ್ರ ಸಂಖ್ಯೆ:32/12.11.2024, 97/01.01.2025, 122/17.01.2025 ಮತ್ತು 187/15–02–2025ನ್ನು ನೀಡಿದ್ದರೂ ಸಹ ಹಾಜರುಪಡಿಸಿರುವುದಿಲ್ಲ.

2023–24ನೇ ಆರ್ಥಿಕ ಸಾಲಿನ ಅಂತ್ಯಕ್ಕೆ ಸಂಕೀರ್ಣ ಬ್ಯಾಂಕ್ ಖಾತೆಯಲ್ಲಿ (ಖಾತೆ ಸಂಖ್ಯೆ: 54035421315)ಯ ಅಯ್ಯೆರು ಶಿಲ್ಕು ರೂ.1,00,48,804/–ಗಳಿರುತ್ತದೆ. ಅಂತಿಮ ಶಿಲ್ಕಿನ ಈ ಇಡೀ ಮೊತ್ತವು ಸರ್ಕಾರದ ವಿವಿಧ ಇಲಾಖೆ/ಸಂಸ್ಥೆಗಳಿಗೆ ಪಾವತಿಸಬೇಕಾದ ಹೊಣೆಗಾರಿಕೆ ಆಗಿರುವುದರಿಂದ ಅಂತಿಮ ಶಿಲ್ಕಿನಲ್ಲಿರುವ ಮೊತ್ತದ ವರ್ಗೀಕೃತ ಹೊಣೆಗಾರಿಕೆಯ ವಿವರ ಹಾಗೂ ಅದಕ್ಕೆ ವಿವರಣೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:188/2024–25 ನ್ನು ದಿ:15–02–2025 ರಂದು ನೀಡಲಾಗಿತ್ತು. ಆದರೆ ವಿಶ್ವವಿದ್ಯಾನಿಲಯದವರು ಸಂಕೀರ್ಣ ಬ್ಯಾಂಕ್ ಖಾತೆಯ ಅಂತಿಮ ಶಿಲ್ಕಿಗೆ ಸಂಬಂಧಿಸಿದಂತೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಹೀಗಾಗಿ ಸದರಿ ಶಿಲ್ಕಿನ ಹೊಣೆಗಾರಿಕೆಯ ವರ್ಗೀಕೃತ ವಿವರಗಳನ್ನು ನೀಡುವವರೆಗೆ ಮತ್ತು ಶಿಲ್ಕಿನ ಮೊತ್ತವನ್ನು ಸಂಬಂಧಪಟ್ಟ ಲೆಕ್ಕ ಶೀರ್ಷಿಕೆ/ ಸಕ್ಷಮ ಪ್ರಾಧಿಕಾರಗಳಿಗೆ ಜಮೆಗೊಳಿಸಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುವವರೆಗೆ ಅಂತಿಮ ಶಿಲ್ಕಿನ ಮೊತ್ತ **ರೂ.1,00,48,804/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

11.10 ಮುಕ್ತ ವಿಶ್ವವಿದ್ಯಾನಿಲಯದ ದೃಶ್ಯ ಸ್ಟುಡಿಯೋ ಹೆಸರಿನಲ್ಲಿ ಐಸಿಐಸಿ ಬ್ಯಾಂಕ್, ಇನ್ಫೋಸಿಸ್ ಶಾಖೆ, ಮೈಸೂರು ಇಲ್ಲಿ ತೆರೆದಿರುವ ಬ್ಯಾಂಕ್ ಖಾತೆಯ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ದೃಶ್ಯ ಸ್ಟುಡಿಯೋ ಹೆಸರಿನಲ್ಲಿ ಐ ಸಿ ಐ ಸಿ ಬ್ಯಾಂಕ್, ಇನ್ಫೋಸಿಸ್ ಶಾಖೆ, ಮೈಸೂರು ಇಲ್ಲಿ ಬ್ಯಾಂಕ್ ಖಾತೆಯನ್ನು (ಖಾತೆ ಸಂ–055801001170) ಹೊಂದಿದ್ದು, ಈ

ಖಾತೆಯ ಆರ್ಥಿಕ ವಿವರಗಳು ವಾರ್ಷಿಕ ಲೆಕ್ಕಪತ್ರಗಳಲ್ಲಾಗಲೀ ಅಥವಾ ವಿಶ್ವವಿದ್ಯಾನಿಲಯದಿಂದ ದೃಢೀಕರಿಸಿ ನೀಡಿರುವ ಎಲ್ಲಾ ಬ್ಯಾಂಕ್ ಖಾತೆಗಳದ್ದೆಂದು ಹೇಳಲಾದ ತಃಖ್ತೆಯಲ್ಲಾಗಲೀ ಇರುವುದಿಲ್ಲ. ಆದ್ದರಿಂದ ಸದರಿ ಬ್ಯಾಂಕ್ ಖಾತೆಗೆ ಸಂಬಂಧಿಸಿದಂತೆ ಬ್ಯಾಂಕ್ ಖಾತೆಯನ್ನು ತೆರೆದಿರುವ ಉದ್ದೇಶ ಹಾಗೂ ಅಗತ್ಯತೆ, ಬ್ಯಾಂಕ್ ಖಾತೆಯನ್ನು ಯಾವ ದಿನಾಂಕ ಮತ್ತು ಖಾತೆ ತೆರೆಯಲು ಸಕ್ಷಮ ಪ್ರಾಧಿಕಾರದಿಂದ ಪಡೆದ ಅನುಮತಿ, ಬ್ಯಾಂಕ್ ಖಾತೆಗೆ ಸಂಬಂಧಿಸಿದ ನಗದು ಪುಸ್ತಕ ಮತ್ತು ಧನಾದೇಶ ವಿತರಣಾ ವಹಿ ಹಾಗೂ ಖಾತೆ ತೆರೆದಂದಿನಿಂದ ಇಂದಿನವರೆಗಿನ ವ್ಯವಹರಣೆಯ ಬ್ಯಾಂಕ್ ಪಾಸ್ ಶೀಟ್ ಇವುಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:147/01.02.2025ನ್ನು ನೀಡಲಾಗಿತ್ತು.

ಕರಾಮುವಿಯಿಂದ ದೃಶ್ಯವಾಹಿನಿ ಯುಟ್ಯೂಬ್ ಚಾನೇಲ್‌ನ್ನು ತೆರೆಯಲಾಗಿದ್ದು, ವಿದ್ಯಾರ್ಥಿಗಳ ವೀಕ್ಷಣೆ ಹೆಚ್ಚಾದಂತೆಲ್ಲಾ ಯುಟ್ಯೂಬ್ ನಿಂದ ಬ್ಯಾಂಕ್ ಖಾತೆಗೆ ಹಣ ಸಂದಾಯವಾಗಬಹುದು ಎಂಬ ದೃಷ್ಟಿಯಿಂದ ಮಾನ್ಯ ಕಲಪತಿಗಳ ಅನುಮತಿಯನ್ನು ಪಡೆದು ಬ್ಯಾಂಕ್ ಖಾತೆಯನ್ನು ತೆರೆಯಲಾಗಿದೆ. ಈ ಬ್ಯಾಂಕ್ ಖಾತೆಗೆ ಯಾವುದೇ ಹಣವು ಜಮೆಯಾಗಿರುವುದಿಲ್ಲ ಎಂದು ಅನುಪಾಲನಾ ವರದಿಯನ್ನು 2022–23ನೇ ಸಾಲಿನಲ್ಲಿ ಸಲ್ಲಿಸಿದ್ದು, ಪ್ರಸಕ್ತ ಸಾಲಿನ ವಿಚಾರಣಾ ಪತ್ರಕ್ಕೆ ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿರುವುದಿಲ್ಲ. ಸರ್ಕಾರದ ಆದೇಶ ಸಂ:ಎಫ್‌ಡಿ 5 ಟಿಎಆರ್ 2017, ದಿನಾಂಕ:30.01.2017ರ ಅನುಬಂಧ–ಬಿ ನಲ್ಲಿನ ಮಾರ್ಗಸೂಚಿಗಳ ಕ್ರ.ಸಂ.1ರ ಅನುಸಾರ ನಿರ್ದಿಷ್ಟ ಉದ್ದೇಶಕ್ಕೋಸ್ಕರ ಹೊಸದಾಗಿ ಬ್ಯಾಂಕ್ ಖಾತೆ ತೆರೆಯುವ ಅನಿವಾರ್ಯತೆ ಇರುವುದರ ಬಗ್ಗೆ ಖಚಿತಪಡಿಸಿಕೊಂಡು ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿಯು ನಿರ್ಣಯದ ಮೂಲಕ ಇದಕ್ಕೆ ಒಪ್ಪಿಗೆ ಸೂಚಿಸಬೇಕು ಹಾಗೂ ಸದರಿ ನಿರ್ಣಯದನುಸಾರ ಕುಲಸಚಿವರು ಬ್ಯಾಂಕ್ ಖಾತೆ ತೆರೆಯಲು ಅನುಮತಿ ನೀಡಬೇಕಾಗಿರುತ್ತದೆ. ಆದರೆ ಈ ಬ್ಯಾಂಕ್ ಖಾತೆಯ ನಿರ್ವಹಣೆ ಸಂಬಂಧ ಈ ಯಾವುದೇ ಮಾರ್ಗಸೂಚಿಗಳ ಪಾಲನೆ ಆಗಿರುವುದಿಲ್ಲ.

11.11 ಬ್ಯಾಂಕ್ ಖಾತೆಯಿಂದ ಪಾವತಿಸುವ ಎಲ್ಲಾ ಮೊತ್ತಗಳನ್ನು ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ/ ಐ.ಎಮ್.ಪಿ.ಎಸ್ ಪಾವತಿಸದೇ, ಧನಾದೇಶ ಮೂಲಕ ಪಾವತಿಸುತ್ತಿರುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿದ ನಗದು ಪುಸ್ತಕ ಹಾಗೂ ಬ್ಯಾಂಕ್ ಪುಸ್ತಕಗಳನ್ನು ಪರಿಶೀಲಿಸಿದಾಗ, ಪಾವತಿಗಳನ್ನು ಧನಾದೇಶಗಳ ಮೂಲಕ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ:ಆಇ5ಟಿಎಆರ್2017, ದಿನಾಂಕ:30.01.2017ರ ಭಾಗ–ಎನಲ್ಲಿನ ಮಾರ್ಗಸೂಚಿಗಳ ಬ್ಯಾಂಕ್ ಖಾತೆಗಳ ನಿರ್ವಹಣೆಯ ಮಾರ್ಗಸೂಚಿಗಳ ಕ್ರ.ಸಂ–1ರಲ್ಲಿ ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ.

1. **"All fund transfers from bank accounts shall be through the electronic mode (Bar coded RTGS, NEFT, IMPS, etc). Account Payee Cheques may be issued only in exceptional cases and all such payments shall be specially approved by the Head of the Department / Managing Director as payments made on Account Payee Cheques with reasons duly recorded in writing".**

ಹೀಗಾಗಿ ಬ್ಯಾಂಕ್ ಖಾತೆಯಿಂದ ಪಾವತಿಸುವ ಎಲ್ಲಾ ಮೊತ್ತಗಳನ್ನು ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ/ ಐ.ಎಮ್.ಪಿ.ಎಸ್ ಮೂಲಕ ಪಾವತಿಬೇಕಾಗಿರುತ್ತದೆ. ಈ ಬಗ್ಗೆ ಹಿಂದಿನ ಆರ್ಥಿಕ ವರ್ಷಗಳ ಲೆಕ್ಕಪರಿಶೋಧನೆಯಲ್ಲಿ ಪ್ರಸ್ತಾಪಿಸಿ ಆಕ್ಷೇಪಿಸಲಾಗಿದ್ದರೂ ಸಹ ಗುತ್ತಿಗೆದಾರರಿಗೆ /ಸಂಸ್ಥೆಗಳಿಗೆ ಧನಾದೇಶಗಳ ಮೂಲಕ ಪಾವತಿಸಲಾಗಿರುವುದು ಕಂಡು ಬಂದಿರುತ್ತದೆ. ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ಆಕ್ಷೇಪಿಸಿದ್ದರೂ ಹಾಗೂ ಮೇಲೆ ಪ್ರಸ್ತಾಪಿಸಿದ ಸರ್ಕಾರದ ಆದೇಶ ಹೊರಡಿಸಿ 8 ವರ್ಷಗಳಾಗಿದ್ದರೂ, ಈಗಲೂ ಕೂಡ ಸರ್ಕಾರದ ನಿರ್ದೇಶನಗಳನ್ನು ಧಿಕ್ಕರಿಸಿ ಧನಾದೇಶಗಳ ಮೂಲಕ ಹಣ ಪಾವತಿಸುತ್ತಿರುವವರ ವಿರುದ್ಧ ಆಡಳಿತಾತ್ಮಕ ಕ್ರಮ ಜರುಗಿಸಿ, ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

11.12 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಸ್ತಿಗಳ ವಿವರ

ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳನ್ನೊಳಗೊಂಡಂತೆ ವಿಶ್ವವಿದ್ಯಾನಿಲಯದ ಸ್ವಾಧೀನದಲ್ಲಿರುವ ಒಟ್ಟು ಸ್ಥಿರ ಆಸ್ತಿ, ಒತ್ತುವರಿಯಾಗಿರುವ ಭೂಮಿ ಹಾಗೂ ಒತ್ತುವರಿ ತೆರವಿಗೆ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಗಳನ್ನು/ಮಾಹಿತಿಯನ್ನು, ಅಗತ್ಯ ದಾಖಲಾತಿಗಳೊಂದಿಗೆ (ಸರ್ವೆ ನಂ, ಹಕ್ಕುಪತ್ರ, ಸ್ವಾಧೀನ ಪತ್ರ, ಖಾತಾ ಎಕ್ಷ್‌ಟ್ರಾಕ್ಟ್/ಖಾತಾ ಉದ್ಧರಣಾ ಪ್ರತಿ ಇತ್ಯಾದಿ) ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:80/30.12.2024ನ್ನು ನೀಡಲಾಗಿತ್ತು. ವಿಶ್ವವಿದ್ಯಾನಿಲಯದವರು ಸ್ಥಿರಾಸ್ತಿಗಳ ವಿವರಗಳ ಪಟ್ಟಿ ಮಾತ್ರ ಸಿದ್ಧಪಡಿಸಿ ಹಾಜರುಪಡಿಸಿದ್ದು, ವಿವರಗಳನ್ನು **ಅನುಬಂಧ–12ರಲ್ಲಿ** ನೀಡಲಾಗಿದೆ. ಆದರೆ ಚರ ಆಸ್ತಿಗಳ ವಿವರಗಳನ್ನು ಹಾಗೂ ಸ್ಥಿರ ಆಸ್ತಿಗೆ ಸಂಬಂಧಿಸಿದಂತೆ ಮೇಲಿನ ಅಂಶಗಳಿಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

11.13 ಮುಕ್ತ ವಿಶ್ವವಿದ್ಯಾನಿಲಯದ ಆಸ್ತಿಗಳ ಮೇಲೆ ನ್ಯಾಯಾಲಯದಲ್ಲಿ ದಾವೆ ಹೂಡಿರುವ ಕುರಿತು.

2023–23ನೇ ಸಾಲಿನಲ್ಲಿ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ಪ್ರಕರಣಗಳು, ಇಲಾಖಾ ವಿಚಾರಣೆಗಳು, ಹಣ ದುರುಪಯೋಗ ಪ್ರಕರಣ ಹಾಗೂ ಆಸ್ತಿ ವಿಷಯಗಳ ದಾವೆಗಳ ಕುರಿತು ಕಡತ ಹಾಗೂ ಪೂರಕ ಲೆಕ್ಕಪತ್ರ ದಾಖಲೆಗಳೊಂದಿಗೆ ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:41/20.11.2024 ನೀಡಲಾಗಿತ್ತು. ವಿಶ್ವವಿದ್ಯಾನಿಲಯದವರು ಅನುಪಾಲನಾ ವರದಿಯಲ್ಲಿ ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.

ದಿನಾಂಕ:01.04.2023 ರಂದು ಉಳಿಕೆ ಪ್ರಕರಣ	ದಿನಾಂಕ:01.04.2024 ರಿಂದ 31.03.2025 ರಲ್ಲಿ ಹೊಸ ಮುಕದ್ದಮೆಗಳು	ಒಟ್ಟು ಪ್ರಕರಣಗಳು	ದಿನಾಂಕ:01.04.2024 ರಿಂದ 31.03.2025 ರಲ್ಲಿ ವಿಲೇವಾರಿಯಾದ ಮುಕದ್ದಮೆಗಳು	ದಿ: 31.03.2025 ರಲ್ಲಿ ಉಳಿದಿರುವ ಮುಕದ್ದಮೆಗಳು
185	45	230	68	162

ಮೇಲಿನ ಕೋಷ್ಟಕದ ವಿವರಗಳಂತೆ ಪ್ರಸ್ತುತ ಒಟ್ಟು 162 ನ್ಯಾಯಾಲಯ ಪ್ರಕರಣಗಳು ವಿವಿಧ ನ್ಯಾಯಾಲಯಗಳು ಮತ್ತು ಪ್ರಾಧಿಕಾರಗಳಲ್ಲಿ ಬಾಕಿ ಇರುವುದಾಗಿ ಮಾಹಿತಿ ನೀಡಿರುತ್ತಾರೆ. ವಿವರವನ್ನು **ಅನುಬಂಧ–13ರಲ್ಲಿ** ನೀಡಲಾಗಿದೆ. ಹಾಗೂ ಕಾನೂನು ಘಟಕಕ್ಕೆ ಒಳಪಟ್ಟಂತೆ ವಿಶ್ವವಿದ್ಯಾನಿಲಯದ ವಿವಿಧ

ಅಧಿಕಾರಿಗಳ ವಿರುದ್ಧ ಪೋಲೀಸ್ ಠಾಣೆ, ಲೋಕಾಯುಕ್ತ ಹಾಗೂ ಸಿ.ಬಿ.ಐಗಳಲ್ಲಿ ದಾಖಲಾಗಿರುವ 7 ಎಫ್.ಐ.ಆರ್.ಗಳ ವಿವರಗಳು ಕೆಳಕಂಡಂತಿರುತ್ತದೆ.

ಕ್ರ ಸಂ	ಎಫ್.ಐ.ಆರ್./ಅಪರಾಧ ಸಂಖ್ಯೆ/ದಿನಾಂಕ	ವಿಷಯ	ಮೊತ್ತ
1	0042/2016, ದಿನಾಂಕ:20.08.2016	ಕರ್ನಾಟಕ ರಾಜ್ಯಪಾಲರ ಸಚಿವಾಲಯದ ಪತ್ರ ಸಂಖ್ಯೆ:ಜಿ.ಎಸ್.13.ಕ.ಓ.ಎಂ.2014(ಪಿ), ದಿ:22.07.2016 ರಲ್ಲಿ 2012–13 ಮತ್ತು 2013–14 ನೇ ಸಾಲಿನ ವಿಷೇಶ ಆಡಿಟ್ ವರದಿಯಲ್ಲಿ ಗಣಕಯಂತ್ರ ಮತ್ತು ಪಿಠೋಪಕರಣಗಳನ್ನು ಖರೀದಿಸುವಾಗ ಹಾಗೂ ಸಾಫ್ಟವೇರ್ ಸಿದ್ಧಪಡಿಸಲು ಗುತ್ತಿಗೆ ನೀಡುವಾಗ ಪ್ರೋ.ಕೆ.ಎಸ್.ರಂಗಪ್ಪ, ಪ್ರೋ.ಟಿ.ಡಿ.ದೇವೇಗೌಡ, ಡಾ. ರಾಮನಾಥಮ್ ನಾಯ್ಡು, ಪ್ರೋ.ಪಿ.ಎಸ್.ವಿಶ್ವನಾಥ, ಡಾ.ಕಮಲೇಶ್, ಪ್ರೋ.ಎಮ್.ಜಿ.ಕೃಷ್ಣ ಹಾಗೂ ಪ್ರೋ.ಪಿ.ಎಸ್. ನಾಯ್ಕ ಇವರುಗಳು ನಿಯಮ ಉಲ್ಲಂಘನೆ ಮಾಡಿ ವಿಶ್ವವಿದ್ಯಾನಿಲಯಕ್ಕೆ ನಂಬಿಕೆ ದ್ರೋಹ ಮತ್ತು ದುರುಪಯೋಗವೆಸಗಿರುವ ಬಗ್ಗೆ ತನಿಖೆ ನಡೆಸಲು ದೂರು.	
2	20/2022, ದಿನಾಂಕ:11.08.2022	ಯಾವುದೇ ಶಾಸನಗಳಿಲ್ಲದೇ ವಿಶ್ವವಿದ್ಯಾನಿಲಯದ 21 ಪ್ರಾದೇಶಿಕ ಕೇಂದ್ರಗಳ ಸ್ಥಾಪನೆ ಮತ್ತು ಅವುಗಳಿಗೆ ಪ್ರಾದೇಶಿಕ ನಿರ್ದೇಶಕರುಗಳ ನೇಮಕ ಹಾಗೂ ಅವರುಗಳ ಸಂಬಳವನ್ನು ಮಾಸಿಕ ರೂ.20,000/– ಗಳಿಂದ ರೂ.36,200/– ಗಳಿಗೆ ಹೆಚ್ಚಿಸಿರುವುದು ಕಾನೂನು ಬಾಹಿರವಾಗಿರುತ್ತದೆ. ಈ ಸಂಬಂಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 ರಿತ್ಯಾ ಪ್ರಕರಣ ದಾಖಲಿಸಿದೆ.	
3	12/2022, ದಿನಾಂಕ:12.05.2022	ಮೆ: ಮದ್ದಾಲ ಇಂಡಸ್ಟ್ರೀಸ್, ಗುಂಟೂರ್, ಆಂದ್ರ ಪ್ರದೇಶ್ ಇವರಿಂದ 20 ಲಕ್ಷ ಅಂಕ ಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಕುಲಪತಿಗಳ ಹಾಗೂ ಸಮ ಕುಲಾಧಿಪತಿಗಳ ಒಪ್ಪಿಗೆಯನ್ನು ಪಡೆಯದೇ ಖರೀದಿ ಮಾಡಿರುವ ಸಂಬಂಧ ಪ್ರೋ. ಎಂ.ಜಿ. ಕೃಷ್ಣನ್, ನಿವೃತ್ತ ಉಪಕುಲಪತಿಗಳು, ಶ್ರೀ. ರಾಜಶೇಖರಯ್ಯ, ನಿವೃತ್ತ ಹಣಕಾಸು ಅಧಿಕಾರಿ ಪ್ರೋ. ಪಿ.ಎಸ್.ನಾಯ್ಕ, ನಿವೃತ್ತ ರಿಜಿಸ್ಟರ್, ಪ್ರೋ. ಕೆ.ಜೆ.ಸುರೇಶ್, ರಿಜಿಸ್ಟರ್ (ಮೌಲ್ಯಮಾಪನ) ಇವರುಗಳ ವಿರುದ್ಧ ಭ್ರಷ್ಟಾಚಾರ ಪ್ರತಿಬಂಧ ಕಾಯ್ದೆ 1988 ರಿತ್ಯಾ ಪ್ರಕರಣ ದಾಖಲಿಸಿದೆ.	ರೂ. 6.30 ಕೋಟ
4	21/2022, ದಿನಾಂಕ:11.08.2022	ವಿದ್ಯಾಲಯದ ಮಾನ್ಯತೆ ಸಂಬಂಧ ಯು.ಜಿ.ಸಿ. ಪತ್ರ ಸಂ:ಎಫ್.ನಂ/ಡಿ.ಇ.ಸಿ.ಕೆ.ಎಸ್.ಓ.ಯು/2–14, ದಿ:22.01.2014 ರ ರೀತ್ಯಾ ಕರೆದಿದ್ದ ಸಭೆಗೆ ಹಾಜರಾಗದೇ, ಸಿರ್ಲಕ್ಷ್ಯತೆ ತೋರಿಸಿದ್ದು, ನಂತರ ಯು.ಜಿ.ಸಿಯು ಕರಾಮುವಿಗೆ ನೀಡಿದ್ದ ಮಾನ್ಯತೆಯನ್ನು ಹಿಂತೆಗೆದುಕೊಂಡಿದ್ದು, ದಿ:07.04.2013 ರಲ್ಲಿ ಕರಾಮುವಿಯ ಮಾನ್ಯತೆ ಮುಗಿದಿದ್ದು, ಸದರಿ ಮಾನ್ಯತೆಯ ನವೀಕರಣದ ಸಂಬಂಧ ವಿಶ್ವವಿದ್ಯಾಲಯವು ಯಾವುದೇ ರೀತಿಯ ಪ್ರಯತ್ನಗಳನ್ನು ಕೈಗೊಳ್ಳದೇ ಸಾವಿರಾರು ವಿದ್ಯಾರ್ಥಿಗಳು ತೊಂದರೆಗೊಳಗಾಗುವಂತಾಗಿರುತ್ತದೆ. ಈ ಆರೋಪದಲ್ಲಿ ಪ್ರೋ. ಎಂ.ಜಿ. ಕೃಷ್ಣನ್, ನಿವೃತ್ತ ಉಪಕುಲಪತಿಗಳು, ಪ್ರೋ. ಪಿ.ಎಸ್.ನಾಯ್ಕ, ನಿವೃತ್ತ ರಿಜಿಸ್ಟರ್, ಪ್ರೋ. ಕೆ.ಜೆ.ಸುರೇಶ್, ರಿಜಿಸ್ಟರ್ (ಮೌಲ್ಯಮಾಪನ) ಇವರುಗಳ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 ರೀತ್ಯಾ ಪ್ರಕರಣ ದಾಖಲಿಸಿದೆ.	
5	17/2022, ದಿನಾಂಕ:13.07.2022	ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ(ಡಿ.ಇ.ಸಿ) ಇವರ ಎಫ್.ನಂ./ಡಿ.ಇ.ಸಿ./ಕೆಎಸ್.ಓ.ಯು/ಕೆ.ಎ.ಆರ್/11/5880, ದಿ:10.06.2011 ರ ಷೋಕಾಸ್ ನೋಟೀಸ್‌ನ್ನು ನೀಡಿದ್ದು ಎಂ.ಫಿಲ್, ಪಿ.ಹೆಚ್.ಡಿ, ಬಿ.ಇ, ಬಿ.ಟೆಕ್, ಎಂ.ಇ, ಎಂ.ಟೆಕ್, ಡಿಪ್ಲೂಮಾ ಇನ್ ಇಂಜಿನಿಯರಿಂಗ್ ಮತ್ತು ಇತರೇ ಟೆಕ್ನಿಕಲ್ ಕೋರ್ಸಗಳಿಗೆ ಡಿ.ಇ.ಸಿ ಇಂದ ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣಗಳಿಗೆ ಅನುಮತಿ ಪಡೆಯದೇ ಕೆ.ಎಸ್.ಓ.ಯು. ಕಾರ್ಯ ನಿರ್ವಹಿಸಿರುವುದಕ್ಕೆ ಯು.ಜಿ.ಸಿ ಯು ದಿ:16.05.2015 ರ ನೋಟೀಸ್ ರಲ್ಲಿ ಕ.ರಾ.ಮು.ವಿ.ಗೆ ನೀಡಿ ಮಾನ್ಯತೆ ಹಿಂತೆಗೆದುಕೊಂಡಿದ್ದರಿಂದ ಸಾವಿರಾರು	

		ವಿದ್ಯಾರ್ಥಿಗಳು ಕಷ್ಟಕ್ಕೆ ಗುರಿಯಾಗಿರುತ್ತಾರೆ. ಈ ಸಂಬಂಧ ಪ್ರೋ. ಕೆ.ಎಸ್. ರಂಗಪ್ಪ, ಪ್ರೋ. ಎಂ.ಜಿ. ಕೃಷ್ಣನ್, ಇಬ್ಬರು ನಿವೃತ್ತ ಉಪಕುಲಪತಿಗಳು, ಪ್ರೋ.ಪಿ.ಎಸ್. ವಿಶ್ವನಾಥ್, ಪ್ರೋ. ಪಿ.ಎಸ್.ನಾಯ್ಕ್, ನಿವೃತ್ತ ರಿಜಿಸ್ಟ್ರರ್, ಪ್ರೋ. ಕೆ.ಜೆ.ಸುರೇಶ್, ರಿಜಿಸ್ಟ್ರರ್(ಮೌಲ್ಯಮಾಪನ) ಇವರುಗಳ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 ರೀತ್ಯಾ ಪ್ರಕರಣ ದಾಖಲಿಸಿದೆ.	
6	0054/2019, ದಿನಾಂಕ:17.12.2019	ಇಗ್ನೋ ಕಾಯ್ದೆ 1985 ರ ಕಲಂ 5 ರಂತೆ ನಿಯಮಗಳನ್ನು ಉಲ್ಲಂಘಿಸಿ ಕೆ.ಎಸ್.ಓ.ಯು. 255 ಖಾಸಗಿ ಸಂಸ್ಥೆಗಳು, ಕಂಪನಿಗಳು, ಸಂಘ ಸಂಸ್ಥೆಗಳೊಂದಿಗೆ ಎಂ.ಓ.ಯುಗಳನ್ನು ಮಾಡಿಕೊಂಡು ತಾಂತ್ರಿಕ, ಪ್ಯಾರಾಮೆಡಿಕಲ್, ಬಿ.ಇ, ಬಿ.ಟೆಕ್, ಎಂ.ಟೆಕ್, ನರ್ಸಿಂಗ್, ರೆಡಿಯೇಷನ್ ಮುಂತಾದವುಗಳ ಪ್ರವೇಶಾತಿಯನ್ನು ಆಹ್ವಾನಿಸಲಾಗಿರುತ್ತದೆ. ಯುಜಿಸಿಯ ನಿಯಮಾವಳಿಗಳನ್ನು ಉಲ್ಲಂಘಿಸಿರುವ ಕಾರಣ ಅನ್ಯಾಯಕ್ಕೊಳಗಾದ ವಿದ್ಯಾರ್ಥಿಗಳ ಪರವಾಗಿ ಶೈಕ್ಷಣಿಕ ಸಹಭಾಗಿತ್ವ ಸಂಸ್ಥೆಗಳ ವಿರುದ್ಧ ಹಾಗೂ ಪ್ರೋ.ಕೆ. ಸುಧಾರಾವ್, ಮಾಜಿ ಕುಲಪತಿಗಳು ಇವರ ವಿರುದ್ಧ ಪ್ರಥಮ ವರದಿ ದಾಖಲಿಸಿದೆ.	
7	ಸರ್ಕಾರದ ಪತ್ರ ಸಂಖ್ಯೆ:ಇಡಿ 20 ಯುಓವಿ 2022, ದಿನಾಂಕ:03.05.2023 ರಲ್ಲಿ ಸಿ.ಬಿ.ಐ. ಗೆ ವಹಿಸಲಾಗಿದೆ.	ವಿಶ್ವವಿದ್ಯಾನಿಲಯದ 167ನೇ ವ್ಯವಸ್ಥಾಪನಾ ಮಂಡಳಿಯಲ್ಲಿ 2009 ರಿಂದ 2016 ರ ವರೆಗಿನ ಶೈಕ್ಷಣಿಕ ಸಾಲುಗಳಲ್ಲಿ ಸಹಭಾಗಿತ್ವ ಸಂಸ್ಥೆಗಳಿಂದ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಪ್ರವೇಶಾತಿ, ಪರೀಕ್ಷಾ ಹಾಗೂ ಇತರೆ ಸೇವೆಗಳ ಮೊತ್ತ ಸುಮಾರು ರೂ.300.00 ಕೋಟಿಗಳಿಗೂ ಹೆಚ್ಚು ಮೊತ್ತದ ಆರ್ಥಿಕ ನಷ್ಟವಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಸದರಿ ವಿಷಯವನ್ನು ಸಿ.ಬಿ.ಐ. ಅಥವಾ ಎನ್.ಐ.ಎ ಯಿಂದ ತನಿಖೆ ಮಾಡಿಸಲು ಶಿಫಾರಸ್ಸು ಮಾಡಲು ಒಪ್ಪಿರುತ್ತದೆ. ಅದರಂತೆ ರಾಜ್ಯಪಾಲರ ಕಾರ್ಯಾಲಯದಿಂದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಇವರಿಗೆ ಪತ್ರ ಸಂಖ್ಯೆ:ಜಿಎಸ್ 17 ಕೆಒಎಮ್ 2022, ದಿನಾಂಕ:07.04.2022. ರಲ್ಲಿ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಶುಲ್ಕಗಳಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಸಿ.ಬಿ.ಐ. ಯಿಂದ ತನಿಖೆ ನಡೆಸಲು ಸೂಚಿಸಿರುವಂತೆ ಉನ್ನತ ಶಿಕ್ಷಣ ಇಲಾಖೆಯ ಪತ್ರ ದಿನಾಂಕ:03.05.2023 ರಲ್ಲಿ ಸಿ.ಬಿ.ಐ. ಗೆ ಪ್ರಕರಣವನ್ನು ವಹಿಸಲಾಗಿದೆ.	ರೂ. 300.00 ಕೋಟಿ

ಸದರಿ ನ್ಯಾಯಾಲಯ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ವಿಶ್ವವಿದ್ಯಾನಿಲಯ ಕ್ರಮ ಕೈಗೊಳ್ಳಲು ಸೂಚಿಸಿದೆ.

ವಿಶ್ವವಿದ್ಯಾನಿಲಯದ ಆಸ್ತಿಗೆ ಸಂಬಂಧಿಸಿದ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಹೊಸ ಆಡಳಿತ ಕಟ್ಟಡದ ಹಿಂಬದಿಯಲ್ಲಿ 176*150ಅಡಿ ಅಳತೆಯ ಮಂಗಳೂರು ಹೆಂಚಿನ ಮನೆ ಮತ್ತು 06 ಚದರಡಿ ಅಳತೆಯ ಆರ್.ಸಿ.ಸಿ ಸ್ವತ್ತಿಗೆ ಸಂಬಂಧಿಸದಂತೆ ಶ್ರೀ ಎಂ.ಕೆ ಪೋತರಾಜು ಇವರು ವಿಶ್ವವಿದ್ಯಾನಿಲಯದ ವಿರುದ್ಧ ದಾವೆ ಹೂಡಿದ್ದು ಪ್ರಕರಣವು ಪ್ರಸ್ತುತ ಮೈಸೂರಿನ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಬಾಕಿ ಇರುವುದಾಗಿ ಮಾಹಿತಿ ನೀಡಿರುತ್ತಾರೆ.

12. ವೆಚ್ಚಗಳ ಮೇಲೆ ನಿಯಂತ್ರಣ

ಕರ್ನಾಟಕ ಬಜೆಟ್ ಕೈಪಿಡಿಯ ನಿಯಮಗಳು,1958ರ ಕಂಡಿಕೆ 229–232ರಲ್ಲಿ ತಿಳಿಸಿರುವಂತೆ ಪ್ರತಿ ಮಾಹೆ ಅನುದಾನದ ಉಳಿತಾಯ, ಹೆಚ್ಚುವರಿ ವೆಚ್ಚ ಹಾಗೂ ಹಂಚಿಕೆ ಇವುಗಳ ಬಗ್ಗೆ ನಿಗಾವಹಿಸುವುದು ವಿಶ್ವವಿದ್ಯಾನಿಲಯದ ನಿಯಂತ್ರಣಾಧಿಕಾರಿಗಳ ಹಾಗೂ ಹಣ ಡ್ರಾ ಮಾಡುವ ಮತ್ತು ಬಟವಾಡೆ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಈ ಉದ್ದೇಶಕ್ಕಾಗಿ ವೆಚ್ಚಗಳ ನಿಗಾ ವಹಿಯನ್ನು (Watch Register) ನಿರ್ವಹಣೆ ಮಾಡಿ ಅದರಲ್ಲಿ ಅನುದಾನದ ವಿವರಗಳನ್ನು ಹಾಗೂ ವೆಚ್ಚದ ವಿವರಗಳನ್ನು ನಮೂದಿಸುವ ಕ್ರಮ

ಅನುಸರಿಸುವುದರಿಂದ ಅನುದಾನದ ಲಭ್ಯತೆಗೆ ಅನುಸಾರವಾಗಿ ವೆಚ್ಚ ಮಾಡಲು ಸಹಕಾರಿಯಾಗುತ್ತದೆ. ಹಾಗೆಯೇ ವಿಶ್ವವಿದ್ಯಾನಿಲಯದ ವಿಭಾಗಗಳು ಹಾಗೂ ಪ್ರಾದೇಶಿಕ ಕೇಂದ್ರಗಳಿಂದ ಮಾಸಿಕ ಲೆಕ್ಕಗಳನ್ನು (Monthly Accounts) ಪಡೆದು ಪರಿಶೀಲಿಸುವ ಕ್ರಮ ಅನುಸರಿಸುವುದರಿಂದ ವಿಶ್ವವಿದ್ಯಾನಿಲಯದ ವಿವಿಧ ಘಟಕಗಳ ವೆಚ್ಚಗಳ ಮೇಲೆ ನಿಯಂತ್ರಣ ಸಾಧಿಸಬಹುದೆಂದು ಅಭಿಪ್ರಾಯಿಸಲಾಗಿದೆ.

12.1 ಹಣಕಾಸು ಅಧಿಕಾರ ಪ್ರತ್ಯಾಯೋಜನೆಯ ವಿವರಗಳನ್ನು ಹಾಜರುಪಡಿಸದಿರುವುದು.

ವಿಶ್ವವಿದ್ಯಾನಿಲಯದ ವೇತನ ಬಿಲ್ಲು, ಸಾದಿಲ್ವಾರು ಬಿಲ್ಲು, ವಿದ್ಯುತ್ ಕಾಮಗಾರಿ ಬಿಲ್ಲು, ಸಿವಿಲ್ ಕಾಮಗಾರಿ ಬಿಲ್ಲುಗಳು, ಎ.ಸಿ/ಎನ್.ಡಿ.ಸಿ ಬಿಲ್ಲುಗಳು ಹಾಗೂ ಇತರೇ ಪಾವತಿ ಬಿಲ್ಲುಗಳನ್ನು ಪರಿಶೀಲಿಸಲಾಗಿ, ಸದರಿ ಬಿಲ್ಲುಗಳಿಗೆ ಮೇಲು ಸಹಿ ಮಾಡಲು ಹಾಗೂ ವಿಶ್ವವಿದ್ಯಾನಿಲಯದ ವಿವಿಧ ಬಾಬ್ತುಗಳಿಗಾಗಿ ವೆಚ್ಚ ಭರಿಸಲು ವಿಶ್ವವಿದ್ಯಾಲಯದ ಅಧಿಕಾರಿಗಳಾದ ಕುಲಸಚಿವರು, ಹಣಕಾಸು ಅಧಿಕಾರಿಗಳು, ಕಾರ್ಯಪಾಲಕ ಅಭಿಯಂತರರು ಹೊಂದಿರುವ ಆರ್ಥಿಕ/ ತಾಂತ್ರಿಕ/ಆಡಳಿತಾತ್ಮಕ ಅಧಿಕಾರಗಳ ಪ್ರತ್ಯಾಯೋಜನೆಯ (Delegation of Financial Powers) ಆದೇಶದ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿದ ವಿಚಾರಣಾ ಪತ್ರ ಸಂಖ್ಯೆ:06/29.10.2024ಕ್ಕೆ ವಿಶ್ವವಿದ್ಯಾನಿಲಯದಿಂದ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಆದ್ದರಿಂದ, ಈ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಅಧಿಸೂಚನೆ ಹೊರಡಿಸಲು ಅಗತ್ಯ ಕ್ರಮವಹಿಸಲು ಸೂಚಿಸಿದೆ.

13. ಹಣ ದುರುಪಯೋಗದ ಪ್ರಕರಣಗಳು

13.1ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವರದಿಯಾಗಿರುವ ಹಣ ದುರುಪಯೋಗ ಪ್ರಕರಣಗಳು, ಇಲಾಖಾ ವಿಚಾರಣೆ ಪ್ರಕರಣಗಳ ವಿವರಗಳು .

ವಿಶ್ವವಿದ್ಯಾನಿಲಯದಲ್ಲಿ ವರದಿಯಾಗಿರುವ ಹಣ ದುರುಪಯೋಗದ ಪ್ರರಣಗಳು, ಬೋಧಕ, ಬೋಧಕೇತರ ಮತ್ತು ಅಧಿಕಾರಿ/ಸಿಬ್ಬಂದಿಗಳ ಇಲಾಖಾ ವಿಚಾರಣೆಗಳು ಹಾಗೂ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆ ಪ್ರಕರಣಗಳ ವಿವರಗಳನ್ನು, ಸಂಪೂರ್ಣ ಕಡತಗಳನ್ನು ಪೂರಕ ದಾಖಲೆಗಳೊಂದಿಗೆ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:55/04.12.2024 ಮತ್ತು 76/24.12.2024ರಲ್ಲಿ ಕೋರಲಾಗಿತ್ತು. ವಿಶ್ವವಿದ್ಯಾನಿಲಯದವರು "2023-24ನೇ ಸಾಲಿಗೆ ಮುಕ್ತ ವಿಶ್ವವಿದ್ಯಾನಿಲಯದ ಬೋಧಕ, ಬೋಧಕೇತರ ಮತ್ತು ಅಧಿಕಾರಿ/ಸಿಬ್ಬಂದಿಗಳ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ, ಬೋಧಕೇತರ ಮತ್ತು ಅಧಿಕಾರಿ/ಸಿಬ್ಬಂದಿಗಳಿಗೆ ಸಂಬಂಧಪಟ್ಟಂತೆ ಅನಧಿಕೃತ ಗೈರು ಹಾಜರಿಯ ಸಂಬಂಧ ಶ್ರೀಮತಿ ನಾಗರತ್ನ, ಪ್ರದಗು ಹಾಗೂ ಶ್ರೀ ಶಿವರಾಮಕೃಷ್ಣ ಹಿರಿಯ ಸಹಾಯಕ ಇವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಿ ಕ್ರಮವಹಿಸಲಾಗಿರುತ್ತದೆ. ಶ್ರೀ ಬಸನಗೌಡ ಗೌಡರ್ ಪ್ರದಗು ಇವರಿಗೆ ಅಶಿಸ್ತಿನ ಸಂಬಂಧ ಷೋಕಾಸ್ ನೋಟಿಸ್ ನೀಡಲಾಗಿತ್ತು ಆದರೆ ಸದರಿ

ನೋಟಿಸ್‌ಗೆ ಸಮಂಜಸವಾದ ಉತ್ತರವನ್ನು ನೀಡದೇ ಇರುವ ಸಂಬಂಧ ಸತ್ಯಾಸತ್ಯತೆಯನ್ನು ಅರಿಯುವ ದೃಷ್ಟಿಯಿಂದ ಇಲಾಖಾ ವಿಚಾರಣೆಯನ್ನು ನಡೆಸಲು ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿ ಇಲಾಖಾ ವಿಚಾರಣೆಯನ್ನು ನಡೆಸಲು ಕ್ರಮಕ್ಕೈಗೊಳ್ಳಲಾಗುವುದು ಎಂದು ಮಾಹಿತಿ ನೀಡಿರುತ್ತಾರೆ. ಮೇಲಿನ ಇಲಾಖಾ ವಿಚಾರಣೆಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಲೆಕ್ಕಪರಿಶೋಧನೆ ಅಭಿಪ್ರಾಯಿಸುತ್ತದೆ.

13.2 ವಿಶ್ವವಿದ್ಯಾನಿಲಯವು ನಿರ್ವಹಿಸುತ್ತಿರುವ ಬ್ಯಾಂಕ್ ಖಾತೆಗಳ ವಿವರಗಳನ್ನು ವಾರ್ಷಿಕ ಲೆಕ್ಕಗಳಲ್ಲಿ ಬಹಿರಂಗಪಡಿಸದಿರುವುದು ಹಾಗೂ ಆಕ್ಸಿಸ್ ಬ್ಯಾಂಕ್‌ನಲ್ಲಿನ ಬ್ಯಾಂಕ್ ಖಾತೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸದಿರುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಾನಸಗಂಗೋತ್ರಿ ಶಾಖೆ, ಮೈಸೂರು ಇಲ್ಲಿರುವ ಬ್ಯಾಂಕ್ ಖಾತೆಯ (ಖಾತೆ ಸಂ–39732252222) ವಿವರಗಳು, ಸಂಯೋಜಕರು, ಬಾಹ್ಯ ಪರೀಕ್ಷೆಗಳು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಇವರ ಪದನಾಮದಲ್ಲಿ ಆಕ್ಸಿಸ್ ಬ್ಯಾಂಕ್, ಕುವೆಂಪುನಗರ ಶಾಖೆ ಇಲ್ಲಿರುವ ಬ್ಯಾಂಕ್ ಖಾತೆಯ ವಿವರಗಳು ಹಾಗೂ ಪ್ರಾದೇಶಿಕ ಕೇಂದ್ರಗಳಲ್ಲಿ ನಿರ್ವಹಣೆಯಾಗುತ್ತಿರುವ ಬ್ಯಾಂಕ್ ಖಾತೆಗಳ ವಿವರಗಳನ್ನು ವಿಶ್ವವಿದ್ಯಾನಿಲಯದವರು ವಾರ್ಷಿಕ ಲೆಕ್ಕಪತ್ರಗಳಲ್ಲಿ ಸೇರಿಸಿರುವುದಿಲ್ಲ. ಅಲ್ಲದೆ ಮೇಲೆ ಪ್ರಸ್ತಾಪಿಸಿದ ಬ್ಯಾಂಕ್ ಖಾತೆಗಳ ವಿವರಗಳು ವಿಶ್ವವಿದ್ಯಾನಿಲಯದವರು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 5 ಟಿಎಆರ್ 2017 ದಿನಾಂಕ:30.01.2017ರ ಅನುಸಾರ ದೃಢೀಕರಿಸಿ ನೀಡಿದ ಅನುಬಂಧ–ಇ ನಮೂನೆಯಲ್ಲಿ ಕೂಡ ಇರುವುದಿಲ್ಲ. ಈ ಹಿಂದಿನ 2022–23ನೇ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ:13.2ರಲ್ಲಿ ಆಕ್ಷೇಪಿಸಿದ್ದರೂ ಮತ್ತು 2023–24ನೇ ಸಾಲಿನ ಲೆಕ್ಕಪರಿಶೋಧನೆ ಸದರಿ ಬ್ಯಾಂಕ್ ಖಾತೆಯ ದಾಖಲೆಗಳನ್ನು ಹಾಜರುಪಡಿಸುವಂತೆ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:161/03.02.2025ನ್ನು ನೀಡಲಾಗಿದ್ದೂ, ವಿಶ್ವವಿದ್ಯಾನಿಲಯದಿಂದ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

14. ಫಲದಾಯಕವಲ್ಲದ/ಅಳತೆ ಮೀರಿದ ವೆಚ್ಚಗಳು

14.1 2023–24ನೇ ಸಾಲಿನಲ್ಲಿ ಡಿಜಿಟಲ್ ಮಾರ್ಕೆಟಿಂಗ್ ಸೇವೆಗಳನ್ನು ಪಡೆದು ರೂ.58,55,574/-ಗಳನ್ನು ಪಾವತಿಸಿರುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 2023–24ನೇ ಸಾಲಿನಲ್ಲಿ ಡಿಜಿಟಲ್ ಮಾರ್ಕೆಟಿಂಗ್ ಸೇವೆಗಳನ್ನು ಪಡೆಯುವ ಸಲುವಾಗಿ ಮೆ. ಎನ್ ಪಿ ಯು ಸೊಲ್ಯೂಷನ್ಸ್ ಮತ್ತು ಸರ್ವೀಸಸ್, ಬೆಂಗಳೂರು ರವರೊಂದಿಗೆ ದಿನಾಂಕ:17.08.2023 ರಲ್ಲಿ ಮೂರು ವರ್ಷಗಳ ಅವಧಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ದಿನಾಂಕ 17.08.2023ರ ಕಾರ್ಯಾದೇಶ ಸಂಖ್ಯೆ: KSOU/Digital Marketing–85/2022–23ರಲ್ಲಿ ಕಾರ್ಯಾದೇಶ ನೀಡಲಾಗಿರುತ್ತದೆ. ಸದರಿ ಒಡಂಬಡಿಕೆಯ ಅನುಬಂಧ–ಎ ರಂತೆ ವಿಶ್ವವಿದ್ಯಾನಿಲಯವು ಡಿಜಿಟಲ್ ಮಾರ್ಕೆಟಿಂಗ್ ಸೇವೆಯಿಂದಾಗಿ ವಿಶ್ವವಿದ್ಯಾನಿಲಯಕ್ಕೆ ಪ್ರವೇಶಾತಿಯು ಗಣನೀಯ ಪ್ರಮಾಣದಲ್ಲಿ ಸುಧಾರಿಸುವುದರ ಜೊತೆಗೆ ಡಿಜಿಟಲ್ ಮಾರ್ಕೆಟಿಂಗ್ ಅಭಿಯಾನದ ಲೀಡ್‌ಗಳ ಯಶಸ್ವಿ ಪರಿವರ್ತನೆಯನ್ನು ಖಚಿತಪಡಿಸಿಕೊಂಡ ನಂತರ ಬಿಲ್ ಪಾವತಿಸುವ ಷರತ್ತನ್ನೂ, ಅನುಬಂಧ–ಬಿ:–ಕಾರ್ಯ ವ್ಯಾಪ್ತಿಯಲ್ಲಿ, ಬಿಡ್‌ದಾರನು ಅವಶ್ಯಕ ಮಾನವ ಸಂಪನ್ಮೂಲಗಳನ್ನು ನಿಯೋಜಿಸಿ, ಸೇವೆಯ ಯೋಜನೆ

ಮುಕ್ತಾಯಗೊಳ್ಳುವವರೆಗೆ Resident Software Engineer (both Technical & Operations) ರವರು ವಿಶ್ವವಿದ್ಯಾನಿಲಯದಲ್ಲಿ ಹಾಜರಿರುವುದರ ಜೊತೆಗೆ ಯೋಜನೆಗೆ ಸಂಬಂಧಿಸಿದ ಸಿಬ್ಬಂದಿ ವಿವರಗಳನ್ನು ಕುಲಸಚಿವರಿಗೆ ಸಲ್ಲಿಸುವಂತೆ ಮತ್ತು ವೈಶಿಷ್ಟ ಸಂಖ್ಯೆ 31 ರನ್ವಯ ಸಹಾಯವಾಣಿ (Helpdesk)ನ್ನು ಸ್ಥಾಪಿಸಿ ಮಾಸಿಕ ಸರಿಸುಮಾರು ಕನಿಷ್ಠ 4000 ರಿಂದ 5000ಗಳ ವಿಚಾರಣೆ/ಲೀಡ್ಸಗಳನ್ನು ಉದ್ಭವವಾಗಿರಬೇಕು ಮತ್ತು ಸದರಿ ಕಾರ್ಯನಿರ್ವಹಣೆಯ ವರದಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕಾಗಿರುತ್ತದೆ. ವಿಶ್ವವಿದ್ಯಾನಿಲಯದ ಜುಲೈ–2023ರ ಪ್ರವೇಶಾತಿ ಆವೃತ್ತಿಗಾಗಿ ಡಿಜಿಟಲ್ ಮಾರ್ಕೆಟಿಂಗ್ ಸೇವೆ ಒದಗಿಸಿರುವ ಮೆ. ಎನ್ ಪಿ ಯು ಸೊಲ್ಯೂಷನ್ಸ್ ಮತ್ತು ಸರ್ವೀಸಸ್ ಸಂಸ್ಥೆಗೆ ವೋಚರ್ ಸಂಖ್ಯೆ: 04ರ ಧನಾದೇಶ ಸಂಖ್ಯೆ:000094/11.01.2024ರಲ್ಲಿ ರೂ.22,85,000/–ಗಳನ್ನು ಪಾವತಿ ಮಾಡಲಾಗಿರುತ್ತದೆ.

ವಿಶ್ವವಿದ್ಯಾನಿಲಯದ ಕಾರ್ಯಕ್ರಮಗಳನ್ನು ಪ್ರಚುರಪಡಿಸುವ ಸಲುವಾಗಿ ಕಾರ್ಯಾದೇಶ ಸಂಖ್ಯೆ: ಕರಾಮುಪ /ಪ್ರವಿ/ಎ.ಡಿ.ಎಂ.–1/119/ಅಹೊಸಕ/2023–24 ದಿನಾಂಕ:04.07.2023ರಲ್ಲಿ ವಿಶ್ವವಿದ್ಯಾನಿಲಯದ ಕಾರ್ಯಕ್ರಮಗಳ ಜುಲೈ–2023 ರ ಆವೃತ್ತಿಯ ಪ್ರವೇಶಾತಿಗಾಗಿ ವೃತ್ತಪತ್ರಿಕೆಗಳನ್ನು ಜಾಹೀರಾತಿಗಾಗಿ M/s. Avanti Advertising Pvt. Ltd. ಬೆಂಗಳೂರು ಇವರಿಗೆ ಸರ್ಕಾರ ನಿಗಧಿಪಡಿಸಿರುವ ದರದಲ್ಲಿ ಕಾರ್ಯಾದೇಶ ನೀಡಿ ಧನಾದೇಶ ಸಂಖ್ಯೆ: 924221/07.11.2023 ರಲ್ಲಿ ರೂ.35,70,574/– ಗಳನ್ನು ಪಾವತಿ ಮಾಡಲಾಗಿರುತ್ತದೆ. ಮುಂದುವರೆದು, ಮೆ. ಎನ್ ಪಿ ಯು ಸೊಲ್ಯೂಷನ್ಸ್ ಮತ್ತು ಸರ್ವೀಸಸ್ ರವರೊಂದಿಗಿನ ಒಡಂಬಡಿಕೆಯಲ್ಲಿಯೂ ಮುದ್ರಣ/ವೃತ್ತಪತ್ರಿಕೆ ಮಾಧ್ಯಮದಲ್ಲಿ ಪ್ರವೇಶಾತಿಗಾಗಿ ಜಾಹೀರಾತನ್ನು ಒದಗಿಸುವ ಸೇವೆಯನ್ನು ಡಿಜಿಟಲ್ ಮಾರ್ಕೆಟಿಂಗ್ ಸೇವೆಯ ಯೋಜನೆಯಡಿಯಲ್ಲಿಯೂ ಪಡೆಯಲಾಗಿರುತ್ತದೆ.

ಡಿಜಿಟಲ್ ಮಾರ್ಕೆಟಿಂಗ್ ಸೇವೆಯನ್ನು ಪಡೆಯಲು ಟೆಂಡರ್ ಆಹ್ವಾನಿಸುವಲ್ಲಿ ಪೂರ್ವ ಅರ್ಹತಾ ಷರತ್ತಾಗಿ "Bidder should be a company registered and incorporated in Karnataka as their headquarters" ಎಂಬ ಷರತ್ತು ಪೂರೈಕೆದಾರರ ಭಾಗವಹಿಸುವಿಕೆಯನ್ನು ನಿರ್ಬಂಧಿಸಿದ್ದು, ಇದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000ರ ನಿಯಮ 27(1) ರಲ್ಲಿ ಟೆಂಡರ್ ಆಹ್ವಾನ ಪ್ರಾಧಿಕಾರವು ಟೆಂಡರುದಾರರ ಹಿಂದಿನ ಅನುಭವ & ಕಾರ್ಯಕ್ಷಮತೆ, ಸಿಬ್ಬಂದಿ, ಉಪಕರಣ, ಮತ್ತು ನಿರ್ಮಾಣ ಅಥವಾ ಉತ್ಪಾದನಾ ಸೌಲಭ್ಯಗಳ ಸಾಮರ್ಥ್ಯತೆ ಮತ್ತು ಆರ್ಥಿಕ ಸ್ಥಿತಿ ಮತ್ತು ಸಾಮರ್ಥ್ಯಗಳ ಆಧಾರಗಳಲ್ಲಿ ಪೂರ್ವ – ಅರ್ಹತಾ ಷರತ್ತುಗಳನ್ನು ನಿಗಧಿಗೊಳಿಸುವಂತೆ ನಿಯಮಿಸಲಾಗಿದ್ದು, ಸರ್ಕಾರದ ಸುತ್ತೋಲೆ ಸಂಖ್ಯೆ: PWD 1359 SO/FC 2001(P–2) ದಿನಾಂಕ: 30.06.2003ರ ಕ್ರ.ಸಂ.(iii)ರಂತೆ ಅರ್ಹತಾ ಮಾನದಂಡಗಳು ಮತ್ತು ತಾಂತ್ರಿಕ ಅವಶ್ಯಕತೆಗಳು ನಿರ್ಬಂಧಿತ/ತಾರತಮ್ಯವಾಗಿರಬಾರದು ಎಂದು ಉಲ್ಲೇಖಿಸಿದ್ದರೂ ವಿಶ್ವವಿದ್ಯಾನಿಲಯವು ವಿಧಿಸಿರುವ ಅರ್ಹತ ಷರತ್ತುಗಳು ಕೆ.ಟಿ.ಪಿ.ಪಿ ನಿಯಮ 27(1)ಕ್ಕೆ ವಿರುದ್ಧವಾಗಿದೆ.

ಮೆ. ಎನ್ ಪಿ ಯು ಸೊಲ್ಯೂಷನ್ಸ್ ಮತ್ತು ಸರ್ವೀಸಸ್, ಬೆಂಗಳೂರು ರವರೊಂದಿಗಿನ ಒಡಂಡಿಕೆಯ ಅನುಸಾರ Resident Software Engineer (both Technical & Operations) ರವರು

ವಿಶ್ವವಿದ್ಯಾನಿಲಯದಲ್ಲಿ ಹಾಜರಿರುವ ಕುರಿತು. ಕನಿಷ್ಠ 4000 ರಿಂದ 5000 ಲೀಡ್ಸ್‌ಗಳ ಯಶಸ್ವಿ ಪರಿವರ್ತನೆಯ ಬಗ್ಗೆ ಹಾಗೂ ಬಿಲ್ ಪಾವತಿಗೂ ಮುನ್ನ ಡಿಜಿಟಲ್ ಮಾರ್ಕೆಟಿಂಗ್ ಸೇವೆಯಿಂದಾಗಿ ವಿಶ್ವವಿದ್ಯಾನಿಲಯಕ್ಕೆ ಪ್ರವೇಶಾತಿಯು ಗಣನೀಯ ಪ್ರಮಾಣದಲ್ಲಿ ಸುಧಾರಿಸುವುದರ ಜೊತೆಗೆ ಡಿಜಿಟಲ್ ಮಾರ್ಕೆಟಿಂಗ್ ಅಭಿಯಾನದ ಲೀಡ್ಸ್‌ಗಳ ಯಶಸ್ವಿ ಪರಿವರ್ತನೆಯನ್ನು ಖಚಿತಪಡಿಸಿಕೊಳ್ಳಲು ಅನುಸರಿಸಿರುವ ಮಾನದಂಡಗಳು ಮತ್ತು ಕ್ರಮಗಳ ದಾಖಲೆಗಳು ಲೆಕ್ಕಪರಿಶೋಧನೆಗೆ ಲಭ್ಯವಾಗಿರುವುದಿಲ್ಲ ಹಾಗೂ ಈಗಾಗಲೇ ಸರ್ಕಾರ ನಿಗಧಿಪಡಿಸಿರುವ ದರದಲ್ಲಿ ಪ್ರವೇಶಾತಿ ಜಾಹೀರಾತನ್ನು ವೃತ್ತಪತ್ರಿಕೆಗಳಲ್ಲಿ ಬಿತ್ತರಿಸಲು ಪ್ರತ್ಯೇಕವಾಗಿ M/s. Avanti Advertising Pvt. Ltd. ಬೆಂಗಳೂರು ರವರಿಗೆ ಕಾರ್ಯಾದೇಶ ನೀಡಿದ್ದರೂ ಸಹ ಮೆ. ಎನ್ ಪಿ ಯು ಸೊಲ್ಯೂಷನ್ಸ್ ಮತ್ತು ಸರ್ವೀಸಸ್ ರವರೊಂದಿಗಿನ ಒಡಂಬಡಿಕೆಯಲ್ಲಿಯೂ ಮುದ್ರಣ/ವೃತ್ತಪತ್ರಿಕೆ ಮಾಧ್ಯಮದಲ್ಲಿ ಪ್ರವೇಶಾತಿಗಾಗಿ ಜಾಹೀರಾತನ್ನು ಒದಗಿಸುವ ಸೇವೆಯನ್ನು ಡಿಜಿಟಲ್ ಮಾರ್ಕೆಟಿಂಗ್ ಸೇವೆಯ ಯೋಜನೆಯಡಿಯಲ್ಲಿಯೂ ಪಡೆಯುತ್ತಿರುವುದು ಕರ್ನಾಟಕ ಆರ್ಥಿಕ ಸಂಹಿತೆ, 1958ರ ಅನುಚ್ಛೇಧ 16ನ್ನು ಕಡೆಗಣಿಸಿದಂತಾಗುತ್ತದೆ. ಈ ಕುರಿತು ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 180/10.02.2025ಕ್ಕೆ ವಿಶ್ವವಿದ್ಯಾನಿಲಯದವರು ವಿಚಾರಣಾ ಪತ್ರದಲ್ಲಿ ಕೋರಿರುವ ಅಂಶಗಳಿಗೆ ಉತ್ತರಿಸದೆ ದಿನಾಂಕ:18.12.2023ರಂದು ನಡೆದ ವಿವಿಯ ಪರಿಣಿತರ ಸಮಿತಿ ಸಭೆಯ ನಡವಳಿ ಮಾತ್ರ ಹಾಜರುಪಡಿಸಿರುತ್ತಾರೆ. ಇದು ಅಮೂರ್ಣ ಮಾಹಿತಿಯಾಗಿರುತ್ತದೆ. ಈ ಪ್ರಕ್ರಿಯೆಯಿಂದ ಒಂದೇ ತರನಾದ ಸೇವೆಗೆ ಪುನರಾವರ್ತಿತವಾಗಿ ಪಾವತಿ ಮಾಡಿದಂತಾಗುವುದಲ್ಲದೇ ವಿಶ್ವವಿದ್ಯಾನಿಲಯಕ್ಕೆ ಅನಗತ್ಯ ನಷ್ಟ ಉಂಟಾಗಿರುವುದನ್ನು ಲೆಕ್ಕಪರಿಶೋಧನೆಯು ಆಕ್ಷೇಪಿಸುತ್ತಾ ಮೆ. ಎನ್ ಪಿ ಯು ಸೊಲ್ಯೂಷನ್ಸ್ ಮತ್ತು ಸರ್ವೀಸಸ್ ಸಂಸ್ಥೆಗೆ ಪಾವತಿಸಲಾಗಿರುವ ಮೊತ್ತ ರೂ.22,85,000/– ಮತ್ತು M/s. Avanti Advertising Pvt. Ltd. ಬೆಂಗಳೂರು ರವರಿಗೆ ಪಾವತಿಸಿರುವ ಮೊತ್ತ ರೂ.35,70,574/–ಗಳು ಸೇರಿ ಒಟ್ಟು **ರೂ.58,55,574/–ಗಳನ್ನು ಆಕ್ಷೇಪಣೆಯಲ್ಲಿ ಇರಿಸಲಾಗಿದೆ.**

14.2 ಆನ್ ಲೈನ್ ಕಾರ್ಯಕ್ರಮಗಳನ್ನು ಯು.ಜಿ.ಸಿ./ಕೆ.ಎಫ್.ಸಿ./ಕೆ.ಟಿ.ಪಿ.ಪಿ ನಿಯಮಗಳು ಮತ್ತು ವಿಶ್ವವಿದ್ಯಾನಿಲಯದ ಕಾಯಿದೆಯನ್ನು ಉಲ್ಲಂಘಿಸಿ ಹೊರಗುತ್ತಿಗೆ ನೀಡಿ ರೂ.18,08,300/–ಗಳನ್ನು ಪಾವತಿಸಿರುವುದು

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಡಿಸ್ಟೆನ್ಸ್ ಎಜುಕೇಷನ್ ಬ್ಯೂರೋನ ಪತ್ರ ಸಂಖ್ಯೆ: ಎಫ್.ನಂ. 39–2/2023(ಡಿಇಬಿ–I) ದಿನಾಂಕ: 17.08.2023 ರಲ್ಲಿ "ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ (ಮುಕ್ತ ಮತ್ತು ದೂರ ಶಿಕ್ಷಣ ಕಾರ್ಯಕ್ರಮಗಳು ಮತ್ತು ಆನ್ ಲೈನ್ ಕಾರ್ಯಕ್ರಮಗಳು) ನಿಯಮಾವಳಿಗಳು, 2020" ರಂತೆ ಕರ್ನಾಟಕ ರಾಜ್ಯ ಮಕ್ತ ವಿಶ್ವವಿದ್ಯಾನಿಲಯಕ್ಕೆ 2023–24ನೇ ಸಾಲಿನಿಂದ ಆನ್ ಲೈನ್ ಮೂಲಕ ಪದವಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಮಾನ್ಯತೆ ದೊರಕಿದ್ದು, ಸದರಿ ಮಾನ್ಯತೆಯನ್ನು ನವೆಂಬರ್, 2024ರ ಪತ್ರ ಸಂಖ್ಯೆ; ಎಫ್.ನಂ. 2–1/2024(ಡಿಇಬಿ–II)ರಲ್ಲಿ ನವೀಕರಿಸಿರುತ್ತದೆ.

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ (ಮುಕ್ತ ಮತ್ತು ದೂರ ಶಿಕ್ಷಣ ಕಾರ್ಯಕ್ರಮಗಳು ಮತ್ತು ಆನ್ ಲೈನ್ ಕಾರ್ಯಕ್ರಮಗಳು) ನಿಯಮಾವಳಿಗಳು, 2020 ರಲ್ಲಿ ಆನ್‌ಲೈನ್ ಕಾರ್ಯಕ್ರಮಗಳಿಗೆ ಅನುಷ್ಠಾನ ಮತ್ತು ಕಾರ್ಯಗತಗೊಳಿಸುವಿಕೆಗೆ ಸಂಬಂಧಿಸಿ ಈ ಕೆಳಗಿನ ನಿಯಮಗಳನ್ನು ನಿಬಂಧಿಸಿದೆ.

- ಭಾಗ IIIರ ನಿಯಮ 8(2)ರಂತೆ ಮುಕ್ತ ವಿಶ್ವವಿದ್ಯಾನಿಲಯವು ಆನ್‌ಲೈನ್ ಕಲಿಕಾ ವಿಧಾನಕ್ಕಾಗಿ ವಿಶ್ವವಿದ್ಯಾನಿಲಯದ ಅಧ್ಯಯನ ವಿಭಾಗಗಳ ಶೈಕ್ಷಣಿಕ ಮಂಡಳಿಗಳು ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಿದ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಸಹ ಪ್ರಾಧ್ಯಾಪಕ ಹುದ್ದೆಗಿಂತ ಕಡಿಮೆಯಿಲ್ಲದ ಪೂರ್ಣಕಾಲಿಕ ನಿರ್ದೇಶಕರ ನೇತೃತ್ವದಲ್ಲಿನ ಆನ್‌ಲೈನ್ ಶಿಕ್ಷಣ ಕೇಂದ್ರ (COE) ನ್ನು ಹೊಂದಿದ್ದು, ಸದರಿ ನಿಯಮಾವಳಿಗಳ ಅನುಬಂಧ–IV ರಲ್ಲಿ ನಿರ್ದಿಷ್ಟಪಡಿಸಿರುವಂತೆ ಸೂಕ್ತ ಮತ್ತು ಸಮರ್ಪಕ ಶೈಕ್ಷಣಿಕ, ತಾಂತ್ರಿಕ, ಆಡಳಿತ ಸಿಬ್ಬಂದಿ ಮತ್ತು ಮೂಲಭೂತ ಸೌಕರ್ಯಗಳನ್ನು ಹೊಂದಿರಬೇಕು.
- ನಿಯಮ 13(C)(ii)ರಂತೆ ಆನ್‌ಲೈನ್ ಕಾರ್ಯಕ್ರಮಗಳಿಗೆ ಅವಶ್ಯಕವಿರುವ ಇ–ಕಲಿಕಾ ಸಾಮಗ್ರಿಗಳಲ್ಲಿ ಕನಿಷ್ಟ ಶೇ. 60 ರಷ್ಟನ್ನು ವಿಶ್ವವಿದ್ಯಾನಿಲಯದ ಆಂತರಿಕ ಬೋಧಕರುಗಳು ಸಿದ್ಧಪಡಿಸಬೇಕಿದ್ದು, ಉಳಿದದ್ದನ್ನು ಬಾಹ್ಯ ಮೂಲಗಳಿಂದ ಸಿದ್ಧಪಡಿಸುವಂತೆ ಸೂಚಿಸಲಾಗಿರುತ್ತದೆ ಹಾಗೂ ನಿಯಮ 13(C)(iii)ರಲ್ಲಿ ಆನ್‌ಲೈನ್ ಕಾರ್ಯಕ್ರಮಗಳನ್ನು SWAYAM ಪೋರ್ಟಲ್ ಮೂಲಕ ಅಥವಾ ಸದರಿ ನಿಯಮಾವಳಿಗಳಂತೆ ಆಯೋಗದ ತಾಂತ್ರಿಕ ತಜ್ಞರು ಅನುಬಂಧ-IXರ ಲಕ್ಷಣಗಳನ್ವಯ ಶಿಫಾರಸ್ಸು ನೀಡಿ, ಯು.ಜಿ.ಸಿ.ಯು ಅನುಮೋದಿಸಿದ ಯಾವುದೇ ಇತರ ಕಲಿಕಾ ಪೋರ್ಟಲ್‌ನಲ್ಲಿ ವಿತರಿಸುವಂತೆ ಸೂಚಿಸಿರುತ್ತದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಅನುಚ್ಛೇದ 6ಬಿ ರಲ್ಲಿ GeM ಪೊರ್ಟಲ್ ಮೂಲಕ ಸರ್ಕಾರವು ಅಧಿಸೂಚಿಸಿರುವ ನಿಯಮಗಳ ಪಾಲನೆಗೆ ಒಳಪಟ್ಟು ಸರಕು ಮತ್ತು ಸೇವೆಗಳನ್ನು ಸಂಗ್ರಹಿಸಲು ಅವಕಾಶ ಕಲ್ಪಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000 ರ ನಿಯಮ 27(1)ರಲ್ಲಿ ಟೆಂಡರ್ ಆಹ್ವಾನ ಪ್ರಾಧಿಕಾರವು ಟೆಂಡರುದಾರರ ಹಿಂದಿನ ಅನುಭವ & ಕಾರ್ಯಕ್ಷಮತೆ, ಸಿಬ್ಬಂದಿ, ಉಪಕರಣ, ಮತ್ತು ನಿರ್ಮಾಣ ಅಥವಾ ಉತ್ಪಾದನಾ ಸೌಲಭ್ಯಗಳ ಸಾಮರ್ಥ್ಯತೆ ಮತ್ತು ಆರ್ಥಿಕ ಸ್ಥಿತಿ ಮತ್ತು ಸಾಮರ್ಥ್ಯಗಳ ಆಧಾರಗಳಲ್ಲಿ ಪೂರ್ವ-ಅರ್ಹತಾ ಷರತ್ತುಗಳನ್ನು ನಿಗಧಿಗೊಳಿಸುವಂತೆ ನಿಯಮಿಸಲಾಗಿದ್ದು, ಸರ್ಕಾರದ ಸುತ್ತೋಲೆ ಸಂಖ್ಯೆ: PWD 1359 SO/FC 2001(P–2) ದಿನಾಂಕ:30.06.2003ರ ಕ್ರ.ಸಂ.(iii)ರಂತೆ ಅರ್ಹತಾ ಮಾನದಂಡಗಳು ಮತ್ತು ತಾಂತ್ರಿಕ ಅವಶ್ಯಕತೆಗಳು ನಿರ್ಬಂಧಿತ/ ತಾರತಮ್ಯವಾಗಿರಬಾರದು. ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ 09 ಪಿಸಿಎಲ್ 2004(1) ದಿನಾಂಕ: 06.08.2005ರಲ್ಲಿ ನಿಗಧಿಪಡಿಸಿರುವ ಮಾದರಿ ಟೆಂಡರ್ ದಾಖಲೆಯಂತೆ ಭದ್ರತಾ ಠೇವಣಿ ಷರತ್ತಿನನ್ವಯ ಕಾರಾರು ಮೊತ್ತದ ಶೇ.5ರ ಭದ್ರತಾ ಠೇವಣಿ ಪಡೆಯಬೇಕಾಗಿರುತ್ತದೆ.

ಕರ್ನಾಟಕ ಆರ್ಥಿಕ ಸಂಹಿತೆ, 1958 ರ ಅನುಚ್ಛೇದ 4(ಎ) ರನ್ವಯ ಯಾವುದೇ ಸರ್ಕಾರಿ ನೌಕರನು ತನ್ನ ಅಧಿಕೃತ ಸಾಮರ್ಥ್ಯದಡಿಯ ವಹಿವಾಟನ್ನು ಯಾವುದೇ ಪೂರ್ವಾಪೇಕ್ಷಿತವಿಲ್ಲದೆ ಲೆಕ್ಕಕ್ಕೆ

ದಾಖಲೀಕರಿಸಬೇಕಿರುತ್ತದೆ. ಸರ್ಕಾರದ ಆದೇಶ: FD 5 TAR 2017 ದಿನಾಂಕ: 30.01.2017 ರಂತೆ ಭಾಗ (1) ರ ಕಂಡಿಕೆ 8 ನ್ನು ಓದಲಾದಂತೆ, ಅನುಬಂಧ–ಬಿ ರಲ್ಲಿನ ಕ್ರ.ಸಂ. 1, 4 ಮತ್ತು 5 ರಲ್ಲಿ ನಿರ್ದಶಿಸರುವಂತೆ ವಿಶೇಷ ಬ್ಯಾಂಕಿಂಗ್ ಸೇವೆಯ ಅಗತ್ಯತೆಯಿದ್ದಲ್ಲಿ ನಿರ್ಧಿಷ್ಟ ಬ್ಯಾಂಕು ಖಾತೆಯನ್ನು ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯ ಮತ್ತು ಹಣಕಾಸು ಇಲಾಖೆಯ ಮಂಜೂರಾತಿ ಅವಶ್ಯಕತೆಯಿರುತ್ತದೆ. ವಿಶ್ವವಿದ್ಯಾನಿಲಯವು ತನ್ನ ಎಲ್ಲಾ ಸ್ವೀಕೃತಿಗಳನ್ನು ಸಾಮಾನ್ಯ ನಿಧಿ ಖಾತೆಯ ಮೂಲಕವೇ ರವಾನಿಸಿ, ತದನಂತರದಲ್ಲಿ ನಿರ್ಧಿಷ್ಟ ಉದ್ದೇಶದ ಬ್ಯಾಂಕು ಖಾತೆಗೆ ವೆಚ್ಚ/ಮುಂಗಡದ ರೂಪದಲ್ಲಿ ವರ್ಗಾಯಿಸುವಂತೆ ಆದೇಶಿಸಿರುತ್ತದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಾಯಿದೆ, 1992ರ ಅಧ್ಯಾಯ IIರ ಅನುಚ್ಛೇದ 5(xix) ರಲ್ಲಿ ವಿಶ್ವವಿದ್ಯಾನಿಲಯಕ್ಕೆ ಆರ್ಡಿನೆನ್ಸ್‌ಗಳಿಂದ ನಿಗದಿಪಡಿಸಬಹುದಾದ ಶುಲ್ಕಗಳು ಮತ್ತು ಇತರ ಶುಲ್ಕಗಳನ್ನು ಕೋರಲು ಮತ್ತು ಸ್ವೀಕರಿಸಲು ಅಧಿಕಾರವನ್ನು ಕಲ್ಪಿಸಲಾಗಿದೆ. ಅದರಂತೆ ಕಾಯ್ದೆ ಎರಡನೇ ಶೆಡ್ಯೂಲ್‌ನ ಅನುಚ್ಛೇದ 10(c) ಓದಲಾದಂತೆ, ಅನುಚ್ಛೇಧ 24 ರಂತೆ ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳಿಂದ ಸಂಗ್ರಹಿಸುವ ಶುಲ್ಕಗಳನ್ನು ಆರ್ಡಿನೆನ್ಸ್ ಮೂಲಕ ನಿಗಧಿಪಡಿಸುತ್ತದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ದಿನಾಂಕ:08.01.2024ರಂದು ಬಿಡ್ ದಾಖಲೆ ಸಂಖ್ಯೆ: GEM/2024/B/4453679 ರ ಮೂಲಕ ವಿಶ್ವವಿದ್ಯಾನಿಲಯದ ಆನ್‌ಲೈನ್ ಕಾರ್ಯಕ್ರಮಗಳಿಗೆ ತಾಂತ್ರಿಕ ಎಲೆಕ್ಟ್ರಾನಿಕ್ ಮೂಲಸೌಕರ್ಯ ಸೇವೆಗಳನ್ನು ಸಿದ್ಧಪಡಿಸಿ ನಿರ್ವಹಿಸುವ ಸೇವೆಗೆ ಬಿಡ್ ಮೌಲ್ಯ ರೂ.500.00 ಲಕ್ಷಗಳಿಗೆ ಅಂದಾಜಿಸಿ, GEM ಪೋರ್ಟಲ್ ಮುಖೇನ ಶುಲ್ಕ ಹಂಚಿಕೆ ಮಾದರಿ (Fee Sharing Model) ವ್ಯವಸ್ಥೆಯಲ್ಲಿ ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್ ಪ್ರಕ್ರಿಯೆಗೆ ಕೇವಲ ಮೆ. ತಲಿಸ್ಮಾ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ರವರು ಭಾಗವಹಿಸಿ ರೂ.350.00 ಲಕ್ಷಗಳಿಗೆ ಟೆಂಡರನ್ನು ಸಲ್ಲಿಸಿರುತ್ತಾರೆ. ಬಿಡ್ ದಾಖಲೆಗಳನ್ನು ಪರಿಶೀಲಿಸಲಾಗಿ ಪೂರ್ವ ಅರ್ಹತಾ ಮಾನದಂಡಗಳ ಕ್ರ.ಸಂ. 5 ರಲ್ಲಿ "The bidder should have a registered office in Karnataka" ಎಂಬ ನಿಬಂಧನೆಯನ್ನು ವಿಧಿಸಲಾಗಿರುತ್ತದೆ. ಮುಂದುವರೆದು ಅರ್ಹ ಟೆಂಡರುದಾರರಾದ ಮೆ. ತಲಿಸ್ಮಾ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ರವರೊಂದಿಗೆ ದಿನಾಂಕ:29.02.2024ರಲ್ಲಿ ಕರಾರು ಒಪ್ಪಂದ ಮಾಡಕೊಂಡು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: KSOU/IT/CW–2/OP/93/2023–24 ದಿನಾಂಕ: 30.01.2024ರಲ್ಲಿ ಕಾರ್ಯಾದೇಶವನ್ನು ನೀಡಿ, ಕರಾರು ಮೊತ್ತ ರೂ.350.00 ಲಕ್ಷಗಳಿಗೆ ಶೇ.3 ರ ದರದಲ್ಲಿ ಕಾರ್ಯ ಕ್ಷಮತೆ ಬ್ಯಾಂಕು ಗ್ಯಾರಂಟಿಯನ್ನು ಹೆಚ್.ಡಿ.ಎಫ್.ಸಿ. ಬ್ಯಾಂಕು ಬಿ.ಜಿ. ಸಂಖ್ಯೆ: 0090GT0224277011 ದಿನಾಂಕ: 03.10.2024 ರಲ್ಲಿ ಪಡೆಯಲಾಗಿರುತ್ತದೆ.

ಕರಾರು ಒಪ್ಪಂದದ ಕ್ರ.ಸಂ.13 ರಲ್ಲಿ ವಿಶ್ವವಿದ್ಯಾನಿಲಯದ ಆಂತರಿಕ ಬೋಧಕರು ಮತ್ತು ವಿಷಯ ತಜ್ಞರುಗಳು ಮೆ. ತಲಿಸ್ಮಾ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್ ರವರು ಸಿದ್ಧಪಡಿಸುವ ಇ–ಕಲಿಕಾ ಸಾಮಗ್ರಿಗಳ ವೀಡಿಯೋ ತಯಾರಿಕೆಯ ಕರ್ತವ್ಯಕ್ಕೆ ಬಾಹ್ಯ ತಜ್ಞರುಗಳಿಗೆ 60 ನಿಮಿಷಗ ಅವಧಿಗೆ ರೂ.2,000 + ದಿನಭತ್ಯೆ + ಪ್ರಯಾಣಭತ್ಯೆ ಮತ್ತು ಆಂತರಿಕ ಬೋಧಕರುಗಳಿಗೆ 160 ನಿಮಿಷಗಳ ಅವಧಿಗೆ ರೂ.2,000 ರಂತೆ ಸಂಭಾವನೆಯನ್ನು ಸೇವಾದಾರರೇ ಪಾವತಿಸಲು ಸೂಚಿಸಲಾಗಿರುತ್ತದೆ. ಕರಾರು ಒಪ್ಪಂದದ ಅನುಬಂಧ–ಎ ರಲ್ಲಿ ಪಾವತಿ ವಿಧಾನವನ್ನು ಶುಲ್ಕ ಹಂಚಿಕೆ ಅನುಪಾತ 30:70 (ವಿಶ್ವವಿದ್ಯಾನಿಲಯ : ಮೆ. ತಲಿಸ್ಮಾ ಕಾರ್ಪೊರೇಷನ್

ಪ್ರೈವೇಟ್ ಲಿಮಿಟೆಡ್) ರಂತೆ ಮತ್ತು ಸದರಿ ಪಾವತಿಯು ESCROW ಖಾತೆ ವ್ಯವಸ್ಥೆಯಡಿ ನಿಗಧಿಸಿದ ಅನುಪಾತದಂತೆ ಇಬ್ಬರೂ ಪಾರ್ಟಿಗಳಿಗೆ ಪಾವತಿ ಹಂತದಲ್ಲಿಯೇ ಆಯಾ ಬ್ಯಾಂಕು ಖಾತೆಗಳಿಗೆ ನೇರವಾಗಿ ಜಮೆಯಾಗುವಂತೆ ಮತ್ತು ಅನುಬಂಧ–ಸಿ ರಲ್ಲಿ ಶೈಕ್ಷಣಿಕ ಮಂಡಳಿ ಮತ್ತು ಪರೀಕ್ಷಾ ಮಂಡಳಿ ಸಭೆಗಳಿಗೆ ಸಂಬಂಧಿಸಿ ಸಂಭಾವನೆ ಮತ್ತು ಭತ್ಯೆಗಳನ್ನು ಮೆ. ತಲಿಸ್ಮಾ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್ ರವರೇ ಪಾವತಿಸಲು ಕರಾರಿಸಲಾಗಿದೆ.

ಮುಂದುವರೆದು, ದಿನಾಂಕ:15.10.2024 ರ ಸೇರ್ಪಡೆ ಕರಾರು ಒಪ್ಪಂದದ ಕ್ರ.ಸಂ. 03 ರಲ್ಲಿ ಸೇವಾ ಶುಲ್ಕ, ನೋಂದಣಿ ಶುಲ್ಕ, ಗ್ರಂಥಾಲಯ ಶುಲ್ಕ, ಬೋಧನಾ ಶುಲ್ಕ, ಪರೀಕ್ಷಾ ಶುಲ್ಕ, ಎಂ.ಪಿ.ಪಿ & ಇತರೆ ಶುಲ್ಕ (ಯಾವುದಾದರೂ ಇದ್ದಲ್ಲಿ) ಗಳನ್ನು 30:70 ರ ಅನುಪಾತದಲ್ಲಿ ಹಂಚಿಕೆ ಮಾಡಿ ಹಾಗೂ ಹಿರಿಯ ವಿದ್ಯಾರ್ಥಿ ಶುಲ್ಕ, ಅಂತರಾಷ್ಟ್ರೀಯ ಅರ್ಹತಾ ಶುಲ್ಕ, ಘಟಿಕೋತ್ಸವ ಶುಲ್ಕ, ವಿದ್ಯಾರ್ಥಿ ಹೆಸರು ಬದಲಾವಣೆ ಶುಲ್ಕಗಳನ್ನು ಪೂರ್ಣ ಪ್ರಮಾಣದಲ್ಲಿ ವಿಶ್ವವಿದ್ಯಾನಿಲಯಕ್ಕೆ ಜಮೆಯಾಗುವಂತೆ ನಿಗಧಿಸಿ, ಕ್ರ.ಸಂ. 06 ರಲ್ಲಿ ವಿಶ್ವವಿದ್ಯಾನಿಲಯದ ಬೋಧಕರು ಇ–ಕಲಿಕಾ ಸಾಮಗ್ರಿ ವೀಡಿಯೋ ತಯಾರಿಕೆಯಲ್ಲಿ ಭಾಗವಹಿಸಿದ್ದಕ್ಕಾಗಿ ಈಗಾಗಲೇ ದಿನಾಂಕ:29.02.2024ರ ಕರಾರು ಪತ್ರದಲ್ಲಿ ನಿಗಧಿಪಡಿಸಿದ್ದ 160 ನಿಮಿಷಗಳಿಗೆ ರೂ.2,000 ರಂತೆ ಎಂಬುದನ್ನು 60 ನಿಮಿಷಗಳಿಗೆ ರೂ.2,000 ಎಂದು ತಿದ್ದುಪಡಿ ಮಾಡಲಾಗಿದೆ.

ವಿಶ್ವವಿದ್ಯಾನಿಯದ 2023–24ನೇ ಸಾಲಿನ ಆನ್‌ಲೈನ್ ಕಾರ್ಯಕ್ರಮಗಳ ಹೊರಗುತ್ತಿಗೆ ಕಡತದ ಪರಿಶೀಲನೆಯಲ್ಲಿ ಕಂಡುಬಂದಂತೆ, ವಿಶ್ವವಿದ್ಯಾನಿಲಯದ ಪರಿಷ್ಕೃತ ಕಛೇರಿ ಆದೇಶ ಸಂಖ್ಯೆ: KSOU/IT/CW–02/ OP/93/2023–24 ದಿನಾಂಕ:23.10.2024ರಲ್ಲಿ ಪ್ರಸ್ತುತ ESCROW ಖಾತೆ ತೆರೆಯುವಿಕೆಯು ಪ್ರಕ್ರಿಯೆಯಲ್ಲಿದ್ದು, 2023–24ನೇ ಸಾಲಿಗೆ ಆನ್‌ಲೈನ್ ಕಾರ್ಯಕ್ರಮಗಳಿಗೆ ದಾಖಲಾದ ವಿದ್ಯಾರ್ಥಿಗಳಿಂದ ಪೂರ್ಣ ಪ್ರಮಾಣದಲ್ಲಿ ವಿಶ್ವವಿದ್ಯಾನಿಲಯದ ಸಾಮಾನ್ಯ ಖಾತೆಗೆ ಜಮೆಯಾಗಿದ್ದು, ಸದರಿ ಮೊತ್ತದಲ್ಲಿ ಕರಾರು ಒಪ್ಪಂದದಲ್ಲಿ ನಿಯಮಿಸಿರುವ ಶುಲ್ಕಗಳ ಶೇ. 70 ರಷ್ಟು ಮೊತ್ತ ರೂ.18,08,300/– ಗಳನ್ನು ಮೆ. ತಲಿಸ್ಮಾ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್ ರವರಿಗೆ ಪಾವತಿಸಲು ಆದೇಶ ಹೊರಡಿಸಿದ್ದು, ಅದರಂತೆ ಸರಬರಾಜುದಾರರ ಬಿಲ್ ಸಂಖ್ಯೆ: INV2425134 ದಿನಾಂಕ:07.08.2024ಕ್ಕೆ 2024–25ನೇ ಸಾಲಿನ ವೋಚರ್ ಸಂಖ್ಯೆ: 115ರ ಧನಾದೇಶ ಸಂಖ್ಯೆ:637967/ 20.11.2024ರಲ್ಲಿ ರೂ.18,08,300/–ಗಳನ್ನು ಮೆ. ತಲಿಸ್ಮಾ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್ ರವರಿಗೆ ಪಾವತಿಸಲಾಗಿರುತ್ತದೆ.

ಆನ್‌ಲೈನ್ ಕಾರ್ಯಕ್ರಮಗಳಿಗೆ ತಾಂತ್ರಿಕ ಎಲೆಕ್ಟ್ರಾನಿಕ್ ಮೂಲಸೌಕರ್ಯ ಸೇವೆಗಳನ್ನು ಸಿದ್ಧಪಡಿಸಿ ನಿರ್ವಹಿಸುವ ಸೇವೆಗೆ ಪೂರ್ವ ಅರ್ಹತಾ ಷರತ್ತಾಗಿ "The bidder should have a registered office in Karnataka" ಎಂಬ ನಿಬಂಧನೆಯು ಸೇವಾದಾರರ ಭಾಗವಹಿಸುವಿಕೆಯನ್ನು ನಿರ್ಬಂಧಿಸಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000ರ ನಿಯಮ 27(1)ಕ್ಕೆ ವಿರುದ್ಧವಾಗಿರುವುದಲ್ಲದೇ, ಕರಾರು ಒಪ್ಪಂದದ ಶೇ.5ರ ಬದಲಾಗಿ ಶೇ.3ರ ದರದಲ್ಲಿ ರೂ. 7.00 ಲಕ್ಷ ಕಡಿಮೆ ಮೊತ್ತಕ್ಕೆ ಭದ್ರತಾ ಠೇವಣಿಯಾಗಿ ಬ್ಯಾಂಕು ಗ್ಯಾರಂಟಿಯನ್ನು ಪಡೆದಿರುವುದು ಸರ್ಕಾರದ ಆದೇಶದ

ಉಲ್ಲಂಘನೆಯಾಗಿದೆ. ಶಾಸನಬದ್ಧವಾಗಿ ಶುಲ್ಕಗಳನ್ನು ಸ್ವೀಕರಿಸಲು ಪ್ರದತ್ತವಾದ ಅಧಿಕಾರದಿಂದ ಸ್ವೀಕರಿಸಲಾದ ಶುಲ್ಕಗಳನ್ನು ವಿಶ್ವವಿದ್ಯಾನಿಲಯದ ಖಾತೆಗೆ ಕರ್ನಾಟಕ ಆರ್ಥಿಕ ಸಂಹಿತೆ, 1958 ರ ಅನುಚ್ಛೇದ-4(ಎ)ರನ್ವಯ ಸ್ವೀಕೃತಿ ನೀಡದೆ ಮತ್ತು ಮೇಲೆ ಉಲ್ಲೇಖಿಸಲಾದ ಸರ್ಕಾರಿ ಆದೇಶದ ಮಾರ್ಗಸೂಚಿಯಂತೆ ಕ್ರಮವಹಿಸದೆ ESCROW ಖಾತೆಯ ಮೂಲಕ ನೇರವಾಗಿ ಖಾಸಗಿ ಸಂಸ್ಥೆಗೆ ಪಾವತಿಸಲು ಕರಾರು ಒಪ್ಪಂದ ಮಾಡಿಕೊಂಡಿರುವುದು ನಿಯಮಬಾಹಿರವಾಗಿದೆ.

ವಿಶ್ವವಿದ್ಯಾನಿಲಯವು ಯು.ಜಿ.ಸಿ.ಯ ಮಾನ್ಯತೆಯಡಿ ಆನ್ ಲೈನ್ ಕಾರ್ಯಕ್ರಮಗಳನ್ನು ನಡೆಸುತ್ತಿರುವುದರಿಂದ ಮೇಲೆ ಉಲ್ಲೇಖಿಸಲಾದ ನಿಯಮಾವಳಿಗಳಂತೆ ಸೂಕ್ತ ಮತ್ತು ಸಮರ್ಪಕ ಶೈಕ್ಷಣಿಕ, ತಾಂತ್ರಿಕ, ಆಡಳಿತ ಸಿಬ್ಬಂದಿ ಮತ್ತು ಮೂಲಭೂತ ಸೌಕರ್ಯಗಳನ್ನು ಹೊಂದಿರುವುದಲ್ಲದೇ. ವಿಶ್ವವಿದ್ಯಾನಿಲಯದ ಆಂತರಿಕ ಬೋಧಕರೇ ಇ-ಕಲಿಕಾ ಸಾಮಗ್ರಿಯ ಕನಿಷ್ಟ ಶೇ. 60 ರಷ್ಟನ್ನು ಸಿದ್ಧಪಡಿಸಬೇಕಿದ್ದರೂ ಕೇವಲ ತಾಂತ್ರಿಕ ಸೇವೆ ಒದಗಿಸುವ ಸಂಸ್ಥೆಗೆ ಬೋಧನಾ ಶುಲ್ಕದ ಶೇ. 70 ರಷ್ಟನ್ನು ಪಾವತಿಸಲು ಒಪ್ಪಂದ ಮಾಡಿಕೊಂಡಿರುವುದು ಅನುಚಿತವಾಗಿದ್ದು SWAYAM ಯೇತರ ಪೋರ್ಟಲ್ ಮೂಲಕ ಆನ್ ಲೈನ್ ಕಾರ್ಯಕ್ರಮಗಳನ್ನು ವಿತರಿಸಲು ಯು.ಜಿ.ಸಿ.ಯ ತಾಂತ್ರಿಕ ತಜ್ಞರ ಸಮಿತಿಯ ಶಿಫಾರಸ್ಸಿನನ್ವಯ ಆಯೋಗದ ಅನುಮೋದನೆ ಅಗತ್ಯತೆಯಿದ್ದು ಸದರಿ ನಿಯಮಗಳ ಪಾಲನೆಯಲ್ಲಿ ವಿಫಲವಾಗಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ಈ ಕುರಿತು ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:197/18.02.2025ಕ್ಕೆ ವಿಶ್ವವಿದ್ಯಾನಿಲಯವು ಪ್ರತಿಕ್ರಿಯಿಸಿ ಟೆಂಡರ್ ರಚನಾ ಸಲಹಾ ಮತ್ತು ಪರಿಶೀಲನಾ ಸಮಿತಿಯಲ್ಲಿ ಹಾಗೂ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಬಿಡ್ ಡಾಕ್ಯಾಮೇಂಟ್ ಮತ್ತು ಭದ್ರತಾ ಠೇವಣಿಯನ್ನು ಶೇ3%ರಷ್ಟನ್ನು ಅಂತಿಮಗೊಳಿಸಲಾಗಿದೆ ಎಂದು ಅನುಪಾಲನಾ ವರದಿಯನ್ನು ಸಲ್ಲಿಸಿರುತ್ತಾರೆ. ಮೇಲಿನ ಸಂಪೂರ್ಣ ಪ್ರಕ್ರಿಯೆಯಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಆನ್‌ಲೈನ್ ಕಾರ್ಯಕ್ರಮಗಳನ್ನು ಯು.ಜಿ.ಸಿ.ಯ ನಿಯಮಾವಳಿಗಳಂತೆ ಸಮರ್ಪಕವಾಗಿ ಅನುಷ್ಠಾನಗೊಳಿಸಿ ಕಾರ್ಯಗತಗೊಳಿಸುವುದು ವಿಶ್ವವಿದ್ಯಾನಿಲಯದ ಶಾಸನಬದ್ಧ ಕರ್ತವ್ಯ ಹಾಗೂ ಜವಾಬ್ದಾರಿಯಾಗಿರುತ್ತದೆ. ಆನ್‌ಲೈನ್ ಮೂಲಕ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಅಗತ್ಯವಿರುವ ತಾಂತ್ರಿಕ ವ್ಯವಸ್ಥೆಯನ್ನು ತಾಂತ್ರಿಕ ಸೇವಾ ಶುಲ್ಕ ಪಾವತಿ ಆಧಾರದಲ್ಲಿ ಪಡೆದು, ಕಾರ್ಯಕ್ರಮದ ಶೈಕ್ಷಣಿಕ ಜವಾಬ್ದಾರಿಗಳನ್ನು ನಿಯಮಾನುಸಾರ ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವ ಸೂಕ್ತ ಮತ್ತು ಸಮರ್ಪಕ ಶೈಕ್ಷಣಿಕ, ತಾಂತ್ರಿಕ, ಆಡಳಿತ ಸಿಬ್ಬಂದಿ ಮತ್ತು ಮೂಲಭೂತ ಸೌಕರ್ಯಗಳಿಂದ ನಿರ್ವಹಿಸಿದಲ್ಲಿ ವಿಶ್ವವಿದ್ಯಾನಿಲಯಕ್ಕೆ ಉಂಟಾಗುವ ಆರ್ಥಿಕ ನಷ್ಟವನ್ನು ತಡೆಗಟ್ಟಬಹುದು ಎಂದು ಲೆಕ್ಕಪರಿಶೋಧನೆಯು ಅಭಿಪ್ರಾಯಿಸುತ್ತದೆ.

14.3 ಗ್ರಂಥಾಲಯದ ಇ-ಪುಸ್ತಕ ಸೇವಾ ಸೌಲಭ್ಯವು ನಿರೀಕ್ಷಿತ ಮಟ್ಟದಲ್ಲಿ ಬಳಕೆಯಾಗದಿರುವುದು.

ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2021-22ನೇ ಸಾಲಿನಿಂದ Knimbus remote access management ಮುಖಾಂತರ ವಿದ್ಯಾರ್ಥಿಗಳಿಗೆ ಇ-ಲೈಬ್ರರಿ ಸೇವಾ ಸೌಲಭ್ಯ ಒದಗಿಸುತ್ತಿದ್ದು, 2023-24ನೇ

ಸಾಲಿನಲ್ಲಿ ವಿವಿಧ ಸಂಸ್ಥೆಗಳಿಂದ ಸಂಗ್ರಾಹಕರುಗಳೆಂದು ರೂ.1,73,10,372/–ಗಳ ವೆಚ್ಚದಲ್ಲಿ ಇ–ಪುಸ್ತಕಗಳನ್ನು ಖರೀದಿಸಲಾಗಿದ್ದು, ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

Sl. No	Voucher no	Cheque no./Date	Name of Aggregator	Publisher Product	Total Count of distinct E-Books	Bill Amount	GST TDS	IT TDS	Net Amt
1	09	000074/09.11.2023	Veda Library Solutions, Greater Noida, Uttar Pradesh	Humanities and Social Sciences & Technology Packag	1068	6640881	126493	126493	6387895
2	10	0000075/09.11.2023	Allied Publishers Subscription Agency, Bnagalore	Science package	845	6661683	63445	63445	6407904
3	11	0000075/09.11.2023	Balani Infotech Pvt.Ltd.	Chemistry,Biochemistry, Microbiology and many more	1686	4007808	76339	76339	3855130
			Total		**3599**	**17310372**	**266277**	**266277**	**16650929**

ಈ ಸಂಬಂಧ ಒಟ್ಟು 3599 ಇ–ಪುಸ್ತಕಗಳನ್ನು ಖರೀದಿಸಿರುವ ಗ್ರಂಥಾಲಯದ ವಿಭಾಗದ ಇ–ಪುಸ್ತಕಗಳ ಖರೀದಿ ಸಂಬಂಧ ಕಡತ ಹಾಗೂ ಸೇರ್ಪಡೆ ವಹಿ (Accession Register) ಪರಿಶೀಲಿಸಿದಾಗ 12ನೇ ಗ್ರಂಥಾಲಯ ಸಲಹಾ ಸಮಿತಿ ಸಭೆಯ ನಿರ್ಣಯದನ್ವಯ ಹಾಗೂ 2ನೇ E-Resources Negotiation Committee ಯ ತೀರ್ಮಾನದಂತೆ Outright Purchase Perpetual Access and Unlimited Multiuser Access Model ಅನ್ವಯ ಇ–ಪುಸ್ತಕಗಳನ್ನು ಖರೀದಿಸಿಕೊಳ್ಳಲು ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವಂತೆ ಮೇಲಿನ ಸಂಗ್ರಹಗಾರರಿಂದ ಇ–ಪುಸ್ತಕಗಳನ್ನು ಖರೀದಿಸಲಾಗಿದೆ. ಆದರೇ, 2ನೇ E-Resources Negotiation Committee ಯ ಕಡತದಲ್ಲಿ ವಿವಿಧ ವಿಭಾಗದಿಂದ ವಿಷಯವಾರು ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ಒಟ್ಟು ಪುಸ್ತಕಗಳ ಬೇಡಿಕೆ ಪಟ್ಟಿ ಲಭ್ಯವಾಗಿರುವುದಿಲ್ಲ. ಆದುದರಿಂದ ಮೇಲಿನಂತೆ ಖರೀದಿಸಿರುವ ಒಟ್ಟು ಪುಸ್ತಕ 3599 ಗಳು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಅವಶ್ಯಕವಾಗಿರುವ ಪುಸ್ತಕಗಳೇ ಎಂಬುದರ ಬಗ್ಗೆ ಮಾಹಿತಿಯು ಲಭ್ಯವಾಗಿರುವುದಿಲ್ಲ. ಕಾರಣ ಇ–ಪುಸ್ತಕಗಳನ್ನು ವೀಕ್ಷಿಸಿರುವ, ಡೌನ್ಲೋಡ್ ಮಾಡಿಕೊಂಡಿರುವ ಹಾಗೂ ನೋಂದಣಿಯಾಗಿ ಬಳಸಿಕೊಂಡಿರುವ ವಿದ್ಯಾರ್ಥಿಗಳ ವಿವರ ಹಾಜರುಪಡಿಸುವಂತೆ ಹಾಗೂ ಇ–ಪುಸ್ತಕಗಳನ್ನು ಅಂತರಾಷ್ಟ್ರೀಯ ಪ್ರಕಾಶಕರುಗಳು ಪುಸ್ತಕಗಳನ್ನು ಖರೀದಿಸಿರುವುದರಿಂದ ಗುಡ್ ಆಫೀಸ್ ಕಮೀಟಿಯು ದಿನಾಂಕ:01–02–2023 ಕ್ಕೆ ಅನ್ವಯವಾಗುವಂತೆ ಯು.ಎಸ್. ಡಾಲರ್ ದರಗಳನ್ನು ಭಾರತದಲ್ಲಿ ಚಲಾವಣೆಯಲ್ಲಿರುವ ಕರೆನ್ಸಿಗೆ ಪರಿವರ್ತಿಸಿ ಸೂಚಿಸಿರುವ ಮೊತ್ತ ರೂ.85.20 ಗಳನ್ವಯ ಪಾವತಿಸಲಾಗಿದೆ. ಆದರೇ, ಗುಡ್ ಆಫೀಸ್ ಕಮೀಟಿಯು ಸದರಿ ದರಗಳು ಸೂಚಕವಾಗಿರುತ್ತವೆ ಕಡ್ಡಾಯವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆದುದರಿಂದ ವಿಶ್ವವಿದ್ಯಾನಿಲಯದವರು ಇ–ಪುಸ್ತಕಗಳನ್ನು ಖರೀದಿಸುವಾಗ ಮಾರುಕಟ್ಟೆಯಿಂದ ಸ್ಪರ್ಧಾತ್ಮಕ ದರ ಪಡೆದು ಸಂಗ್ರಹಗಾರರೊಂದಿಗೆ ದರ ಸಂಧಾನ ಮಾಡಿ ಇ–

ಪುಸ್ತಕಗಳನ್ನು ಖರೀದಿಸಬಹುದಾಗಿದ್ದು, ಈ ಬಗ್ಗೆ ಸೂಕ್ತ ಸ್ಪಷ್ಟೀಕರಣ ನೀಡಲು ಕೋರಿ ಆಡಿಟ್ ವಿಚಾರಣೆ ಪತ್ರ ಸಂಖ್ಯೆ:192/15.02.2025ನ್ನು ನೀಡಲಾಗಿತ್ತು. ಮುಕ್ತ ವಿಶ್ವವಿದ್ಯಾನಿಲಯದ ಗ್ರಂಥಪಾಲಕರು ದಿನಾಂಕ:27.02.2024ರಂದು ವರದಿ ಸಲ್ಲಿಸಿದ್ದು, ವಿವರ ಈ ಕೆಳಗಿನಂತಿದೆ.

Sl.No	Description	2021-22 (Access commence date:28.03.2022)	2022-23	2023-24 (Access commence date:01.08.2023)	Total (Till date)
1	Number of e-books purchased	6,022	-	3,599	9,621
2	Number of Registered users	2	20,213	45,569	65782
3	Number of search and download of e-books	3	8,211	5,171	13,431

ಮೇಲಿನ ವಿವರಗಳನ್ವಯ, ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು ಕರಾಮುವಿವಿ IP ವಿಳಾಸ ಹಾಗೂ Google, Yahoo ಇತ್ಯಾದಿ ಸರ್ಚ್ ಇಂಜಿನ್‌ಗಳ ಮುಖಾಂತರ ಇ–ಪುಸ್ತಕಗಳ ಸೇವೆ ಬಳಸಿಕೊಂಡಿರುತ್ತಾರೆ. ಇ–ಗ್ರಂಥಾಲಯವನ್ನು ಬಳಕೆಗೆ ತಂದಾಗಿನಿಂದ ಸಂಚಿತವಾಗಿ 65,782 ಬಳಕೆದಾರರು ಮಾತ್ರ ನೋಂದಾಯಿತರಾಗಿ, 13,431 ಇ–ಪುಸ್ತಕಗಳ ಸೇವೆ ಬಳಸಿಕೊಂಡಿರುವುದು ವ್ಯಕ್ತವಾಗುತ್ತಿದೆ. ಮೇಲಿನ ಅಂಶಗಳನ್ನು ಗಮನಿಸಿದಾಗ ಇಷ್ಟೊಂದು ಬೃಹತ್ ಮೊತ್ತವನ್ನು ವೆಚ್ಚ ಮಾಡಿ ಖರೀದಿಸಿರುವ ಇ–ಪುಸ್ತಕಗಳು ತಮ್ಮ ಉದ್ದೇಶವನ್ನು ಸಾಧಿಸದಿರುವುದು ಸ್ಪಷ್ಟವಾಗುತ್ತದೆ. ಖರೀದಿಸಿರುವ ಪುಸ್ತಕಗಳ ಬಗ್ಗೆ ಅವಲೋಕಿಸಿದಾಗ ಅವುಗಳು ವಿಶ್ವವಿದ್ಯಾನಿಲಯದವರು ನೀಡುತ್ತಿರುವ ಕೋರ್ಸುಗಳ ವಿಷಯಗಳಿಗೆ ಅಥವಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದವುಗಳೇ ಎಂಬುದು ಖಚಿತವಾಗಿ ಸ್ಪಷ್ಟವಾಗುವುದಿಲ್ಲ. ಈ ಬಗ್ಗೆ ವರ್ಗೀಕರಣವು ಗ್ರಂಥಾಲಯ ಸಮಿತಿಯ ಸಭಾ ನಡವಳಿಗಳಲ್ಲಿ ಇರುವುದಿಲ್ಲ. ಇ–ಗ್ರಂಥಾಲಯದ ಸೌಲಭ್ಯವು ನಿರೀಕ್ಷಿತ ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ತಲುಪಿಲ್ಲವೆಂಬುದು ಸುಸ್ಪಷ್ಟವಾಗುತ್ತದೆ ಹಾಗೂ ಸದರಿ 2023–24ನೇ ಸಾಲಿನಲ್ಲಿ ಇ–ಪುಸ್ತಕಗಳನ್ನು ಖರೀದಿಸಿ ಭರಿಸಲಾಗಿರುವ ರೂ.1,73,10,372/– ವೆಚ್ಚ ಫಲಪ್ರದವಾಗಿಲ್ಲದಿರುವುದು ವ್ಯಕ್ತವಾಗುತ್ತಿದೆ. ಆದ್ದರಿಂದ ಸದರಿ ಇ–ಲೈಬ್ರರಿ ಸೌಲಭ್ಯವನ್ನು ಗರಿಷ್ಠ ಪ್ರಮಾಣದಲ್ಲಿ ವಿದ್ಯಾರ್ಥಿಗಳಿಗೆ ತಲುಪಿಸುವ ಬಗ್ಗೆ ವಿಶ್ವವಿದ್ಯಾನಿಲಯದವರು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.

15. ಅನುದಾನಗಳ ಮಾರ್ಗಪಲ್ಲಟ

ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ ಅನುದಾನವನ್ನು ನಿಯಮಾನುಸಾರ ಆ ಖಾತೆಯಲ್ಲಿಯೇ ವೆಚ್ಚ ಭರಿಸಬೇಕಾಗುತ್ತದೆ ಅನುದಾನವನ್ನು ಒಂದು ಖಾತೆಯಿಂದ ಮತ್ತೊಂದು ಖಾತೆಗೆ ವರ್ಗಾವಣೆ ಮಾಡಿಕೊಳ್ಳುವಂತಿಲ್ಲ. ಆದರೂ ವಿಶ್ವವಿದ್ಯಾನಿಲಯವು ನಿಯಮವನ್ನು ಉಲ್ಲಂಘಿಸಿ 2023–24ನೇ ಸಾಲಿನಲ್ಲಿ ರೂ.96,90,54,550/–ಗಳಷ್ಟು ಮೊತ್ತವನ್ನು **ಅನುಬಂಧ–14ರಲ್ಲಿ** ವಿವರಿಸಿರುವಂತೆ ಒಂದು ಖಾತೆಯಿಂದ ಮತ್ತೊಂದು ಖಾತೆಗೆ ಹಣ ವರ್ಗಾವಣೆ ಮಾಡಿರುವುದನ್ನು ಗಮನಿಸಲಾಗಿದೆ. ಹೀಗೆ ಅನುದಾನವನ್ನು ವರ್ಗಾವಣೆ ಮಾಡಿಕೊಳ್ಳಲು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಂಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ 04/28.10.2024ನ್ನು ನೀಡಲಾಗಿದ್ದು, ಇದಕ್ಕೆ ವಿಶ್ವವಿದ್ಯಾನಿಲಯದವರು ಭಾಗಶಃ ದಾಖಲೆಗಳನ್ನು ಮಾತ್ರ ಹಾಜರುಪಡಿಸಿರುತ್ತಾರೆ. ಆದ್ದರಿಂದ ಇನ್ನು ಮುಂದೆ ಅನುದಾನ ಮಂಜೂರಾದ ಖಾತೆಯಲ್ಲಿಯೇ ವೆಚ್ಚ ಭರಿಸಲು ಕ್ರಮವಹಿಸುವಂತೆ ಸೂಚಿಸಲಾಗಿದೆ.

16. ಬ್ಲಾಕ್ ಗ್ರಾಂಟ್

ವಿಶ್ವವಿದ್ಯಾನಿಲಯದವರು ಲೆಕ್ಕಪರಿಶೋಧನೆಗೆ ನೀಡಿರುವ ಮಾಹಿತಿಯಂತೆ ವಿಶ್ವವಿದ್ಯಾನಿಲಯಕ್ಕೆ 2023–24ನೇ ಸಾಲಿನಲ್ಲಿ ಯಾವುದೇ ಬ್ಲಾಕ್ ಗ್ರಾಂಟ್ ಸ್ವೀಕೃತವಾಗಿರುವುದಿಲ್ಲ.

17. ಕೇಂದ್ರ ಸರ್ಕಾರ ಮತ್ತು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಅನುದಾನಗಳು

17.1 ದೂರ ಶಿಕ್ಷಣ ಮಂಡಳಿ (Distance Education Council) ಖಾತೆಯಲ್ಲಿ ಬಳಕೆಯಾಗದೇ ಉಳಿದ ಸಹಾಯಾನುದಾನ ಮತ್ತು ಸಂಗ್ರಹಣೆಗೊಂಡಿರುವ ಬಡ್ಡಿ ಮೊತ್ತವನ್ನು ಯು.ಜಿ.ಸಿ ಖಾತೆಗೆ ಜಮೆ ಮಾಡದೇ ಉಳಿಸಿಕೊಂಡಿರುವುದು.

ದೂರ ಶಿಕ್ಷಣ ಮಂಡಳಿ ಖಾತೆಯ (ಸಂಖ್ಯೆ:54035421235) ನಗದು ಪುಸ್ತಕ ಮತ್ತು ಬ್ಯಾಂಕ್ ಸ್ಟೇಟ್‌ಮೆಂಟ್‌ಗಳನ್ನು ಪರಿಶೀಲಿಸಲಾಗಿ, 2023–24ರ ಆರ್ಥಿಕ ವರ್ಷದ ಅಂತ್ಯಕ್ಕೆ ಬಳಕೆಯಾಗದೇ ಉಳಿದ ಅನುದಾನ ರೂ.12,78,536/–ಗಳು ಮತ್ತು ಸಂಗ್ರಹಣೆಗೊಂಡಿರುವ ಬಡ್ಡಿ ಮೊತ್ತ ರೂ.3,32,466/–ಗಳು ಹೀಗೆ ಒಟ್ಟು ರೂ.16,11,002/–ಗಳ ಶಿಲ್ಕು ಖಾತೆಯಲ್ಲಿ ಉಳಿದಿದ್ದು, ಸದರಿ ಯು.ಜಿ.ಸಿ ಅನುದಾನ ಬಿಡುಗಡೆ ಆದೇಶಗಳ ಮಾರ್ಗಸೂಚಿಗಳನ್ವಯ (ನಿರ್ದೇಶನಗಳನುಸಾರ) ಲೆಕ್ಕಪತ್ರಗಳು ಅಂತಿಮಗೊಂಡ ನಂತರ (after finalization of accounts) ಬಳಕೆಯಾಗದೇ ಉಳಿದ ಅನುದಾನ ಮತ್ತು ಆರ್ಜಿತ ಬಡ್ಡಿ ಮೊತ್ತವನ್ನು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಲೆಕ್ಕಶೀರ್ಷಿಕೆಗೆ ಹಿಂಪಾವತಿಸಬೇಕಿರುತ್ತದೆಯಾದರೂ ಹಿಂಪಾವತಿಸದೇ ಖಾತೆಯಲ್ಲಿ ಉಳಿಸಿಕೊಂಡಿದ್ದು, ಅನುದಾನ ಉಳಿಕೆ ಮತ್ತು ಬಡ್ಡಿ ಜಮೆ ವಿವರ ಈ ಕೆಳಗಿನಂತಿದೆ.

ದಿನಾಂಕ:01.04.2023ರ ಆರಂಭಕ್ಕೆ ಬಳಕೆಯಾಗದೇ ಉಳಿದ ಅನುದಾನ ಮತ್ತು ಆರ್ಜಿತ	15,68,140

ಬಡ್ಡಿ ಮೊತ್ತ	
(+) 2023–24ನೇ ಸಾಲಿನಲ್ಲಿ ಸಂಗ್ರಹಣೆಯಾದ ಬಡ್ಡಿ ಮೊತ್ತ	42,862
ಒಟ್ಟು	16,11,002
(–) ಪಾವತಿಗಳು	–
ದಿನಾಂಕ:31.03.2024ರ ಅಂತ್ಯಕ್ಕೆ ಬಳಕೆಯಾಗದೆ ಉಳಿದ ಸಹಾಯಾನುದಾನ ಮತ್ತು ಬಡ್ಡಿ ಸಂಗ್ರಹಣೆ ಮೊತ್ತ ರೂ.(ನಗದು ಪುಸ್ತಕ ಮತ್ತು ಬ್ಯಾಂಕ್ ಸ್ಟೇಲ್ ನಂತೆ)	**16,11,002**

ಈ ಕುರಿತು ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಆಕ್ಷೇಪಿಸಲಾಗಿದ್ದರೂ ಇದರ ಹಿಂಪಾವತಿಗೆ ಹಣಕಾಸು ಅಧಿಕಾರಿಗಳು ಯಾವುದೇ ಕ್ರಮ ವಹಿಸಿಲ್ಲದಿರುವುದರಿಂದ ಈ ಮೇಲ್ಕಾಣಿಸಿದ ಉಳಿಕೆ ಅನುದಾನ ಮತ್ತು ಬಡ್ಡಿ ಮೊತ್ತ ರೂ.16,11,002/–ಗಳನ್ನು ಸಂಬಂಧಪಟ್ಟ ಯುಜಿಸಿ ಖಾತೆಗೆ ಶೀಘ್ರ ಹಿಂಪಾವತಿಸಿ ವರದಿ ಸಲ್ಲಿಸುವಂತೆ ಹಾಗೂ ಕೋರ್ಸ್ ಸಾಮಗ್ರಿಗಳ ಬಲವರ್ಧನೆ ಮತ್ತು ಅಭಿವೃದ್ಧಿ, ಹೊಸ ತಂತ್ರಜ್ಞಾನದ ಅಭಿವೃದ್ಧಿ ಮತ್ತು ಅನ್ವಯಿಕೆಗಳು, MOOC ಗಳ ಅಭಿವೃದ್ಧಿ, ಗಣಕೀಕರಣ, ಐಸಿಟಿ ಮತ್ತು ಗುಣಮಟ್ಟ ಭರವಸೆ ಕ್ರಮಗಳು, ದೂರ ಶಿಕ್ಷಣ ವ್ಯವಸ್ಥೆಯ ನೆಟ್‌ವರ್ಕಿಂಗ್ ಇತ್ಯಾದಿಗಳಿಗಾಗಿ ಬಿಡುಗಡೆಯಾದ ಸದರಿ ಅಭಿವೃದ್ಧಿ ಅನುದಾನದ ಮೊತ್ತವನ್ನು ಬಳಕೆ ಮಾಡಿಕೊಳ್ಳದೆ ಉಳಿಸಿಕೊಂಡಿರುವುದಕ್ಕೆ ಸೂಕ್ತ ವಿವರಣೆ ನೀಡಲು ಕೋರಿ ಆಡಿಟ್ ವಿಚಾರಣೆ ಪತ್ರ ಸಂಖ್ಯೆ:189/15.02.2025ರಂದು ನೀಡಲಾಗಿತ್ತು. ಇದಕ್ಕೆ ಪ್ರತಿಕ್ರಿಯಿಸಿರುವ ವಿಶ್ವವಿದ್ಯಾನಿಲಯದವರು 2023–24ರ ಅಂತ್ಯಕ್ಕೆ ದೂರ ಶಿಕ್ಷಣ ಮಂಡಳಿ ಖಾತೆ(ಸಂಖ್ಯೆ:54035421235)ಯಲ್ಲಿ ಬಳಕೆಯಾಗದೆ ಉಳಿದ ಅನುದಾನದ ಮೊತ್ತ ರೂ.12,78,536/–ಗಳಲ್ಲಿ ರೂ.12,50,000/–ಗಳು 2021–22ನೇ ಸಾಲಿನ ಸಹಾಯಾನುಧಾನದ ಮೊತ್ತವಾಗಿದ್ದು, ಇದು ಸದರಿ ಸಾಲಿನ ಅಂತ್ಯಕ್ಕೆ (31.03.2022ರಂದು) ಬಿಡುಗಡೆಯಾಗಿದ್ದರಿಂದ ಬಳಸಿಕೊಳ್ಳಲು ಸಾಧ್ಯವಾಗದೇ ಸದರಿ ಖಾತೆಯಲ್ಲಿಯೇ ಉಳಿಸಿಕೊಂಡಿದ್ದು ದಿನಾಂಕ:15.01.2025ರಂದು ರೂ.15,77,228/–ಗಳನ್ನು ಯು.ಜಿ.ಸಿ ಸೆಕ್ರೆಟರಿಯವರ ಖಾತೆ ಸಂಖ್ಯೆ: 86271010020511ಗೆ ಆರ್.ಟಿ.ಜಿ.ಎಸ್ ಮುಖಾಂತರ ಹಿಂಪಾವತಿಸಲಾಗಿದೆ ಎಂದು ತಿಳಿಸಿರುತ್ತಾರೆ. ಈ ಮೊತ್ತವನ್ನು ಯುಜಿಸಿ ಖಾತೆಗೆ ಜಮೆ ಮಾಡಿರುವ ಬಗ್ಗೆ ದಿನಾಂಕ:28.02.2025ರಂದು ವಿಶ್ವವಿದ್ಯಾನಿಲಯದವರು ಅನುಪಾಲನಾ ವರದಿಯೊಂದಿಗೆ ಸಲ್ಲಿಸಿರುವ ಬ್ಯಾಂಕ್ ಹಾಗೂ ಹಣಕಾಸು ಅಧಿಕಾರಿರವರಿಂದ ದೃಢೀಕರಿಸಲ್ಪಟ್ಟ ವಹಿವಾಟು ದೃಢೀಕರಣ ಮತ್ತು ಬ್ಯಾಂಕ್ ಸ್ಟೇಲ್‌ಅನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳಲಾಗಿದೆಯಾದರೂ ಉಳಿದ ಸಹಾಯಾನುದಾನ ಮತ್ತು ಬಡ್ಡಿ ಮೊತ್ತ ರೂ.28,536/–ಗಳನ್ನು ಖಾತೆಯಲ್ಲಿ ಉಳಿಸಿಕೊಂಡಿರುವ ಬಗ್ಗೆ ವಿವರಣೆ ನೀಡಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಹಣಕಾಸು ಅಧಿಕಾರಿಯವರು ಶೀಘ್ರ ಕ್ರಮವಹಿಸಿ ಅನುಪಾಲನಾ ವರದಿ ಸಲ್ಲಿಸುವಂತೆ ಸೂಚಿಸಿದೆ.

18. ಇತರೆ ಪ್ರಾಧಿಕಾರಗಳಿಂದ ಅನುದಾನಗಳು

2023–24ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಕೇಂದ್ರ ಸರಕಾರ ಮತ್ತು ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದ ಅನುದಾನಕ್ಕೆ ಸಂಬಂಧಿಸಿದಂತೆ ಯಾವುದೇ ಕಂಡಿಕೆಗಳಿರುವುದಿಲ್ಲ.

19. ರಾಜ್ಯ ಸರ್ಕಾರದ ಅನುದಾನಗಳು

2022–23ನೇ ಸಾಲಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನಗಳ ವಿವರಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರಸಂಖ್ಯೆ:05/29.10.2024 ಕೋರಲಾಗಿ, ವಿಶ್ವವಿದ್ಯಾನಿಲಯದವರು ಯಾವುದೇ ವಿವರವನ್ನು ಲೆಕ್ಕಪರಿಶೋಧನೆಗೆ ನೀಡಿರುವುದಿಲ್ಲ. ಬ್ಯಾಂಕ್ ಖಾತೆಯ ವಿವರವನ್ನು ಪರಿಶೀಲಿಸಲಾಗಿ ಇಂಡಿಯನ್ ಕೌನ್ಸಿಲ್ ಆಫ್ ಸೋಶಿಯಲ್ ಸೈನ್ಸ್ ರಿಸರ್ಚ್ (ICSSR) ರವರಿಂದ ರೂ.7,05,000/–ಗಳ ಅನುದಾನ ಬಿಡುಗಡೆಯಾಗಿರುವುದು ಕಂಡು ಬಂದಿದೆ.

19.1 ಕರ್ನಾಟಕ ಸರ್ಕಾರದ ವಿಷನ್ ಗ್ರೂಪ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ (VGST) ಯೋಜನೆಯಲ್ಲಿ ಮಂಜೂರಾಗಿರುವ ಸಂಶೋಧನಾ ಕಾರ್ಯಕ್ರಮದ ಅನುಷ್ಠಾನಗೊಳಿಸುವ ಕುರಿತು.

ಕರ್ನಾಟಕ ರಾಜ್ಯ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿಯವರ ವಿಷನ್ ಗ್ರೂಪ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ (VGST) ರವರ KFIST(L1)(Karnataka Fund for Infrastructure Strengthening in Science and Technology) ಯೋಜನೆಯಡಿ ಸೂಕ್ಷ್ಮಜೀವಶಾಸ್ತ್ರ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ಸಲ್ಲಿಸಲಾದ " Photo-Biopolymers for Inducing Resistance against Pearl Millet Downy Mildew Disease and Transcript profiling of Defense Gene Expression" ಎಂಬ ಪ್ರಸ್ತಾವನೆಯನ್ನು ಆಯ್ಕೆಮಾಡಿ ಈ ಯೋಜನೆಗೆ ಒಟ್ಟು ರೂ.15 ಲಕ್ಷಗಳು ಮಂಜೂರಾಗಿದ್ದು, ಈ ಯೋಜನೆಯ ಅನುದಾನಕ್ಕೆ ಸಂಬಂಧಿಸಿದ ಹಣಕಾಸು ವ್ಯವಹಾರಗಳನ್ನು ಎಸ್.ಬಿ. ಖಾತೆ ಸಂ:41120040270ರಲ್ಲಿ Principal Investigator VGST ರವರ ಹೆಸರಿನಲ್ಲಿ ಬ್ಯಾಂಕ್ ಖಾತೆ ನಿರ್ವಹಿಸುತ್ತಿದ್ದು, ಸದರಿ ಸಾಲಿಗೆ ಯಾವುದೇ ಅನುದಾನ ಬಿಡಗಡೆಯಾಗಿರುವುದಿಲ್ಲ. ಖಾತೆಯಲ್ಲಿ ಲಭ್ಯವಿರುವ ಮೊತ್ತಕ್ಕೆ ರೂ.17.075.50/–ಗಳ ಬಡ್ಡಿ ಸ್ವೀಕೃತಿಯಾಗಿರುತ್ತದೆ. ವಿವರಗಳು ಕೆಳಗಿನಂತಿದೆ.

ವಿವರ	ಮೊತ್ತ (ರೂ ಗಳಲ್ಲಿ)
ಆರಂಭಿಕ ಶಿಲ್ಕು (01.04.2023)	7,60,516.50
ಸ್ವೀಕೃತಿಗಳು	17,075.50
ಒಟ್ಟು	7,77,592.00
ಪಾವತಿಗಳು	1,63,379.00
ಅಂತಿಮ ಶಿಲ್ಕು (31.3.2024)	**6,14,213.00**

19.2 ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿಯವರ ವಿಷನ್ ಗ್ರೂಪ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ (VGST) ರವರಿಂದ ಮಂಜೂರಾಗಿರುವ ಸಂಶೋಧನಾ ಕಾರ್ಯಕ್ರಮದ ಅನುಷ್ಠಾನದಲ್ಲಿ ಕಂಡುಬಂದ ನ್ಯೂನತೆಗಳು.

ಮುಕ್ತ ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಹಾಜರುಪಡಿಸಲಾದ ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಲಾಗಿ, ಸದರಿ ಯೋಜನೆಯ ಅನುದಾನ ಬಿಡುಗಡೆ ಪತ್ರ ಸಂ: KSTeS/VGST/2020-21/K-FIST(L1)/GRD-960/19/2021-22/779, ದಿನಾಂಕ:28.10.2021ರಲ್ಲಿ ಮೊದಲನೇ ಕಂತಿನ ಅನುದಾನ ರೂ.7,50,000/-ಗಳು ಧನಾದೇಶ ಸಂಖ್ಯೆ-888520/01.10.2021ರಲ್ಲಿ ಬಿಡುಗಡೆಯಾಗಿದ್ದು, ಸದರಿ ಸಾಲಿಗೆ ರೂ.1,63,379/-ಗಳನ್ನು ಮಾತ್ರ ಸಂಶೋಧನಾ ಕಾರ್ಯಕ್ರಮಕ್ಕೆ ಬಳಕೆಮಾಡಿಕೊಳ್ಳಲಾಗಿದೆ. ಆದರೆ VGST ರವರು ವಿಧಿಸಲಾಗಿರುವ 'ಷರತ್ತು ಮತ್ತು ನಿಬಂಧನೆ'ಗಳ ಕ್ರಮ ಸಂ(ಖ)ರಲ್ಲಿ ಸೂಚಿಸಿರುವಂತೆ ಅನುದಾನ ಬಿಡುಗಡೆಯಾದ ದಿನದಿಂದ ಉದ್ದೇಶಿತ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಂಡು ಒಂದು ವರ್ಷದ ಕಾಲಮಿತಿಯೊಳಗೆ ಅನುದಾನವನ್ನು **ಕಡ್ಡಾಯವಾಗಿ ನಿಯಮಾನುಸಾರ ಬಳಸಿಕೊಳ್ಳಲು ಸೂಚಿಸಿದ್ದರೂ ಇದುವರೆವಿಗೂ** ಉದ್ದೇಶಿತ ಸಂಶೋಧನಾ ಕಾರ್ಯವನ್ನು ಪೂರ್ಣಗೊಳಿಸಿ ಅನುದಾನವನ್ನು ಬಳಸುವುದರಲ್ಲಿ ವಿಶ್ವವಿದ್ಯಾನಿಲಯವು ವಿಫಲವಾಗಿರುತ್ತದೆ.

ಮುಂದುವರೆದು 'ಷರತ್ತು ಮತ್ತು ನಿಬಂಧನೆಗಳ ಕ್ರಮ ಸಂ(ಉ) ಮತ್ತು (ಏ)ರನ್ವಯ ಉದ್ದೇಶಿತ ಯೋಜನೆಯ ಅನುಷ್ಠಾನಕ್ಕೆ ಬಿಡುಗಡೆಯಾಗಿರುವ ಅನುದಾನಕ್ಕೆ ಈ ಕೆಳಗೆ ವಿವರಿಸಿರುವಂತೆ ಬ್ಯಾಂಕಿನಿಂದ ಕ್ರೋಢೀಕೃತವಾಗಿರುವ ಬಡ್ಡಿಯ ಒಟ್ಟು ಮೊತ್ತ ರೂ.29,238/-ಗಳನ್ನು ಅನುದಾನಿತ ಸಂಸ್ಥೆಗೆ ಹಿಂದಿರುಗಿಸಿರುವ ವಿವರಗಳು ಹಾಗೂ ಸಂಬಂಧಿಸಿದ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:190/15.02.2025ರಲ್ಲಿ ಕೋರಲಾಗಿ, ವಿಶ್ವವಿದ್ಯಾನಿಲಯದವರು ವಿಚಾರಣಾ ಪತ್ರಕ್ಕೆ ಯಾವುದೇ ಅನುಪಾಲನಾ ವರದಿ ಸಲ್ಲಿಸಿರುವುದಿಲ್ಲ. ಯೋಜನೆಯ ಪ್ರಧಾನ ಸಂಶೊಧಕರು ಮಾರ್ಗಸೂಚಿಯನ್ವಯ ಸೂಕ್ತ ಕ್ರಮ ಕೈಗೊಂಡು ಬಡ್ಡಿ ಮೊತ್ತವನ್ನು ಮರುಪಾವತಿಸಿ ವಿವರಗಳೊಂದಿಗೆ ಅನುಪಾಲನಾವರದಿಯನ್ನು ಸಲ್ಲಿಸಲು ಸೂಚಿಸಿದೆ.

1. 2022-23 ರೂ. 12605/-
2. 2023-24 ರೂ. 17075/-

ಒಟ್ಟು ರೂ. 29680/-

ವಿಶ್ವವಿದ್ಯಾನಿಲಯಗಳ ಮೂಲ ಆಶಯಗಳಲ್ಲಿ ಶೈಕ್ಷಣಿಕ ಹಾಗೂ ಸಂಶೋಧನಾ ಕಾರ್ಯಗಳು ಪ್ರಮುಖವಾದವುಗಳಾಗಿದ್ದು, ಈ ನಿಟ್ಟಿನಲ್ಲಿ ವಿವಿಧ ಅನುದಾನ ಒದಗಿಸುವ ಸಂಸ್ಥೆಗಳ ಸಹಾಯದಿಂದ ಕೈಗೊಳ್ಳುವ ಪ್ರಾಯೋಜಿತ ಕಾರ್ಯಕ್ರಮಗಳ ಪಾತ್ರ ಮಹತ್ವಪೂರ್ಣವಾಗಿರುತ್ತದೆ. ವಿಶ್ವವಿದ್ಯಾನಿಲಯಕ್ಕೆ ಮಂಜೂರಾಗುವ ಪ್ರಾಯೋಜಿತ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಬಳಸಿಕೊಂಡು ಸಂಶೋಧನಾ ಅಧ್ಯಯನ ಮತ್ತು ಕಾರ್ಯಚಟುವಟಿಕೆಗಳಲ್ಲಿ ಸರಿಯಾಗಿ ನಿರ್ವಹಿಸದೇ ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳಿಗೆ ಬರಬಹುದಾದ ಆರ್ಥಿಕ ನೆರವು ಕೈತಪ್ಪಿ ಹೋಗುವ ಸಂಭವವಿರುತ್ತದೆ. ಆದ್ದರಿಂದ ಪ್ರಾಯೋಜಿತ ಕಾರ್ಯಕ್ರಮದ ಅನುಷ್ಠಾನದಲ್ಲಿ

ಪ್ರಮುಖ ಪಾತ್ರವಹಿಸಿರುವ ಪ್ರಧಾನ ಸಂಶೋಧಕರು ಮಾರ್ಗಸೂಚಿಯ ಅನುಸಾರ ಸಮಯಕ್ಕೆ ಸರಿಯಾಗಿ ಯೋಜನೆಯನ್ನು ಪೂರ್ಣಗೊಳಿಸಲು ಕ್ರಮ ವಹಿಸಲು ಸೂಚಿಸಿದೆ.

20. ಅಧಿಕಾರಿ ಮತ್ತು ಬೋಧಕ ವರ್ಗದವರ ವೇತನ ಮತ್ತು ಭತ್ಯೆಗಳು

20.1 ವೃತ್ತಿ ಪ್ರಗತಿ ಯೋಜನೆಯಡಿ (ಸಿ.ಎ.ಎಸ್) ಪದೋನ್ನತಿ ನೀಡಿದ ಬೋಧಕರಿಗೆ ಆರ್ಥಿಕ ಸೌಲಭ್ಯವನ್ನು ವಿಶ್ವವಿದ್ಯಾನಿಲಯದ ಆದೇಶದ ದಿನಾಂಕದಿಂದ ಪಾವತಿಸದೇ, ಅರ್ಹತಾ ದಿನಾಂಕದಿಂದ ಪಾವತಿಸಿ ವಿಶ್ವವಿದ್ಯಾನಿಲಯಕ್ಕೆ ರೂ.1,00,53,204/–ಗಳ ಆರ್ಥಿಕ ನಷ್ಟ ಉಂಟುಮಾಡಿರುವುದು.

ವಿಶ್ವವಿದ್ಯಾನಿಲಯದ ಕಛೇರಿ ಆದೇಶ ಸಂಖ್ಯೆ:KSOU/AB/EST–1/598/2023–24, ದಿನಾಂಕ: 08.05.2023ರಲ್ಲಿ 21 ಮಂದಿ ಸಹಾಯಕ ಪ್ರಾಧ್ಯಾಪಕರಿಗೆ Academic Level–11 ರಿಂದ Academic Level–12 ಕ್ಕೆ 03 ಮಂದಿ ಸಹಾಯಕ ಪ್ರಾಧ್ಯಾಪಕರಿಗೆ Academic Level–12 ರಿಂದ ಸಹ ಪ್ರಾಧ್ಯಾಪಕರ Academic Level–13A ಕ್ಕೆ, 05 ಮಂದಿ ಸಹಾಯಕ ಪ್ರಾಧ್ಯಾಪಕರಿಗೆ Academic Level–10 ರಿಂದ Academic Level–11 ಕ್ಕೆ ಡಾ.ಬಿ.ಎಂ.ಗೀತಾಂಜಲಿ ರವರಿಗೆ ಸಹ ಪ್ರಾಧ್ಯಾಪಕ Academic Level–13A ರಿಂದ ಪ್ರಾಧ್ಯಾಪಕ Academic Level–14A ಕ್ಕೆ ಎಂ.ಗೋಪಾಲಸ್ವಾಮಿ ರವರಿಗೆ ಉಪ ಗ್ರಂಥಪಾಲಕ Academic Level–13A ರಿಂದ Academic Level–14A ಕ್ಕೆ ಮತ್ತು ವಿ.ಶೀಲಾ ರವರಿಗೆ ಸಹಾಯಕ ಗ್ರಂಥಪಾಲಕ Academic Level–11 ರಿಂದ Academic Level–12 ಕ್ಕೆ ವೃತ್ತಿ ಪ್ರಗತಿ ಯೋಜನೆಯಡಿ (ಸಿ.ಎ.ಎಸ್) ಪದೋನ್ನತಿ ನೀಡಲಾಗಿದೆ.

ಮೇಲ್ಕಂಡ ಪದೋನ್ನತಿ ಆದೇಶದನ್ವಯ ಸಹ ಪ್ರಾಧ್ಯಾಪಕರಿಗೆ ಸಹಾಯಕ ಪ್ರಾಧ್ಯಾಪಕರಾಗಿ, ಉಪ ಗ್ರಂಥಪಾಲಕರಿಗೆ ಮತ್ತು ಸಹಾಯಕ ಗ್ರಂಥಪಾಲಕರಾಗಿ ಪದೋನ್ನತಿ ಅನ್ವಯವಾಗುವ ಅರ್ಹತಾ ದಿನಾಂಕದಿಂದ ಮೂಲ ವೇತನವನ್ನು ನಿಗದಿಪಡಿಸಿ, ಅರ್ಹತಾ ದಿನಾಂಕದಿಂದಲೇ ವೇತನ ವ್ಯತ್ಯಾಸದ ಬಾಕಿಯನ್ನು ಲೆಕ್ಕಾಚಾರ ಮಾಡಿ ಒಟ್ಟು 31 ಬೋಧಕರಿಗೆ ವೋಚರ್ ಸಂಖ್ಯೆ:09/01.12.2023ರಲ್ಲಿ ಧನಾದೇಶ ಸಂಕ್ಯೆ:925559/925560/925561, ದಿನಾಂಕ:01.12.2023ರಲ್ಲಿ ಬಿಲ್ಲಿನ ಒಟ್ಟು ಮೊತ್ತ ರೂ.1,06,32,056/–ಗಳನ್ನು ಪಾವತಿಸಲಾಗಿದೆ.

ಯು.ಜಿ.ಸಿ ನಿಬಂಧನೆಗಳು ಹಾಗೂ 7ನೇ ಪರಿಷ್ಕೃತ ಯು.ಜಿ.ಸಿ ವೇತನ ಶ್ರೇಣಿ ಆದೇಶ ಸಂಖ್ಯೆ:ಇಡಿ/483/ಯುಎನ್ಇ/2017, ದಿನಾಂಕ:16.03.2019ರನ್ವಯ ವೃತ್ತಿ ಪ್ರಗತಿ ಯೋಜನೆಯಡಿಯಲ್ಲಿ ಪದೋನ್ನತಿ ನೀಡುವ ಸಂದರ್ಭಗಳಲ್ಲಿ ವೃತ್ತಿ ಪ್ರಗತಿ ಯೋಜನೆ ಪದೋನ್ನತಿ ಸಮಿತಿಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದುಕೊಂಡ ಬೋಧಕರುಗಳ ಅರ್ಹತಾ ದಿನಾಂಕಕ್ಕೆ ಕಾಲ್ಪನಿಕವಾಗಿ ವೇತನವನ್ನು ನಿಗದಿಪಡಿಸಬೇಕಾಗಿರುತ್ತದೆ. ಹಾಗೂ ಪದೋನ್ನತಿ ಆದೇಶ ಹೊರಡಿಸಿದ ದಿನಾಂಕದಿಂದ ಆರ್ಥಿಕ ಸೌಲಭ್ಯವನ್ನು ನೀಡಬೇಕಾಗಿರುತ್ತದೆ.

ಸರ್ಕಾರದ ಪತ್ರ ಸಂಖ್ಯೆ:ಇಡಿ/46/ಯು.ಎಂ.ಎ.2021/ದಿನಾಂಕ:19.07.2021 ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ–1) ಬೆಂಗಳೂರು ರವರ ಸುತ್ತೋಲೆ ಸಂಖ್ಯೆ:ಇಡಿ/55/ಯು.ಜಿ.ಸಿ/2021/ದಿನಾಂಕ:29.10.2022ರನ್ವಯ ಪದೋನ್ನತಿಯ ಅರ್ಹತಾ ದಿನಾಂಕದಿಂದ ಮೂಲ ವೇತನವನ್ನು ಕಾಲ್ಪನಿಕವಾಗಿ ನಿಗದಿಪಡಿಸಿ ನಂತರ ಆರ್ಥಿಕ ಸೌಲಭ್ಯವನ್ನು ವಿಶ್ವವಿದ್ಯಾನಿಲಯವು ಪದೋನ್ನತಿಗೆ ಆದೇಶ ಹೋರಡಿಸಿದ ದಿನಾಂಕದಿಂದ ಜಾರಿಗೊಳಿಸಬೇಕಾಗಿರುತ್ತದೆ.

ವಿಶ್ವವಿದ್ಯಾನಿಲಯವು ಒಟ್ಟು 31 ಬೋಧಕರಿಗೆ ಆರ್ಥಿಕ ಸೌಲಭ್ಯವನ್ನು ಪದೋನ್ನತಿಗೆ ಆದೇಶ ಹೋರಡಿಸಿದ ದಿನಾಂಕ:08.08.2023 ರಿಂದ ಪಾವತಿಸದೇ ಅರ್ಹತಾ ದಿನಾಂಕದಿಂದ ಪೂರ್ವಾನ್ವಯವಾಗುವಂತೆ ಪಾವತಿಸಿರುವುದರಿಂದ ಮೇಲ್ಕಂಡ ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿದಂತಾಗಿದ್ದು, ಈ ಸಂಬಂಧ ವಿವರಣೆಯನ್ನು ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:125/18.01.2025ನ್ನು ನೀಡಲಾಗಿದ್ದು, ಇದಕ್ಕೆ ವಿಶ್ವವಿದ್ಯಾನಿಲಯವು ಯಾವುದೇ ಪ್ರತಿಕ್ರಿಯೆ ನೀಡದಿರುವುದರಿಂದ ಹಾಗೂ ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿ ಪಾವತಿಸಿರುವ **ರೂ.1,00,53,204/–ಗಳನ್ನು ಸಂಬಂಧಿಸಿದವರಿಂದ ವಸೂಲಿಸಿ** ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದೆ. ವಿವರವನ್ನು **ಅನುಬಂಧ–15** ರಲ್ಲಿ ನೀಡಲಾಗಿದೆ.

20.2 ವಾರ್ಷಿಕ ವೇತನ ಬಡ್ತಿ ದಿನಾಂಕವನ್ನು ತಪ್ಪಾಗಿ ನಿಗದಿಪಡಿಸಿ ಆರ್ಥಿಕ ಸೌಲಭ್ಯಗಳನ್ನು ಹೆಚ್ಚುವರಿಯಾಗಿ ಪಾವತಿಸಿರುವುದು.

ವಿಶ್ವವಿದ್ಯಾನಿಲಯದ ಕಛೇರಿ ಆದೇಶ ಸಂಖ್ಯೆ: KSOU/AB/EST–1/598/2023–24, ದಿನಾಂಕ: 08.05.2023ರಲ್ಲಿ ಡಾ.ಹೆಚ್.ಆರ್. ಜಯಪಾಲ್, ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ ಮತ್ತು ಡಾ. ಆರ್.ಹೆಚ್.ಪವಿತ್ರ, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಇವರುಗಳಿಗೆ ಸಹಾಯಕ ಪ್ರಾಧ್ಯಾಪಕರು (Academic Level–12) ಹುದ್ದೆಯಿಂದ ಸಹ ಪ್ರಾಧ್ಯಾಪಕರ (Academic Level–13A) ಹುದ್ದೆಗೆ ವೃತ್ತಿ ಪದೋನ್ನತಿ(ಸಿ.ಎ.ಎಸ್) ನೀಡಿದ್ದು, ವಿಶ್ವವಿದ್ಯಾನಿಲಯದ ಕಛೇರಿ ಆದೇಶ ಸಂಖ್ಯೆ: KSOU/AB/EST–1/598/2023–24, ದಿನಾಂಕ:02.09.2023ರಲ್ಲಿ ಕ್ರಮವಾಗಿ ದಿನಾಂಕ:18.03.2020 ಮತ್ತು ದಿನಾಂಕ:16.03.2021 ರಿಂದ ಅನ್ವಯವಾಗುವಂತೆ Academic Level–13Aರ Pay Band ರಡಿ ಕನಿಷ್ಟ ಮೂಲ ವೇತನವನ್ನು ರೂ.1,31,400/–ಗಳಿಗೆ (13/1) ನಿಗದಿಪಡಿಸಿದೆ.

ನಂತರ ಡಾ.ಹೆಚ್.ಆರ್.ಜಯಪಾಲ್ ರವರಿಗೆ ವಾರ್ಷಿಕ ವೇತನ ಬಡ್ತಿಯನ್ನು ದಿನಾಂಕ:01.01.2021ಕ್ಕೆ ನಿಗದಿಪಡಿಸುವ ಬದಲು ದಿನಾಂಕ:01.07.2020ಕ್ಕೆ ಅಂದರೆ ಆರು ತಿಂಗಳು ಮೊದಲೇ ನಿಗದಿಪಡಿಸಿರುವುದು ಮತ್ತು ಮುಂದಿನ ವಾರ್ಷಿಕ ವೇತನ ಬಡ್ತಿ ದಿನಾಂಕವನ್ನು ಈ ರೀತಿಯೇ ಮುಂದುವರೆಸಲಾಗಿದೆ.

ಹಾಗೆಯೇ ಡಾ.ಆರ್.ಹೆಚ್.ಪವಿತ್ರರವರಿಗೆ ವಾರ್ಷಿಕ ವೇತನ ಬಡ್ತಿಯನ್ನು ದಿನಾಂಕ:01.01.2022ಕ್ಕೆ ನಿಗದಿಪಡಿಸುವ ಬದಲು ದಿನಾಂಕ:01.07.2021ಕ್ಕೆ ಅಂದರೆ ಆರು ತಿಂಗಳು ಮೊದಲೇ ನಿಗದಿಪಡಿಸಿರುವುದು ಮತ್ತು ಮುಂದಿನ ವಾರ್ಷಿಕ ವೇತನ ಬಡ್ತಿ ದಿನಾಂಕವನ್ನು ಈ ರೀತಿಯೇ ಮುಂದುವರೆಸಲಾಗಿದೆ.

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು, ನಿಯಮ–42 (ಬಿ)(1)ರ ಪ್ರಕಾರ ವೇತನವನ್ನು ನಿಗದಿಪಡಿಸಿದಾಗ ಪದೋನ್ನತಿ ಪೂರ್ವ ಹುದ್ದೆಯಲ್ಲಿ ಪಡೆಯುತ್ತಿದ್ದ ವೇತನದ ಮುಂದಿನ ಹಂತವು ಪದೋನ್ನತಿ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ಹಂತಕ್ಕಿಂತ ಕಡಿಮೆಯಾಗಿದ್ದಲ್ಲಿ ಪದೋನ್ನತಿ ಹುದ್ದೆಯಲ್ಲಿ ವೇತನವನ್ನು ಕನಿಷ್ಠ ಹಂತಕ್ಕೆ ನಿಗದಿಪಡಿಸಲಾಗುವುದು ಮತ್ತು ವೇತನದಲ್ಲಾದ ಹೆಚ್ಚಳವು ಒಂದು ಹಂತದ ದರಕ್ಕಿಂತ ಹೆಚ್ಚಾದಲ್ಲಿ ನೌಕರನ ಮುಂದಿನ ವಾರ್ಷಿಕ ವೇತನ ಬಡ್ತಿಯು ಪದೋನ್ನತಿ ಹುದ್ದೆಯಲ್ಲಿ ವೇತನ ನಿಗದಿಗೊಳಿಸಿದ ದಿನಾಂಕದಿಂದ ಒಂದು ವರ್ಷದ ನಂತರದ ದಿನಾಂಕದಲ್ಲಿ ಲಭಿಸುವುದಾಗಿರುತ್ತದೆ.

ಮೇಲ್ಕಂಡ ಈ ನಿಯಮದನ್ವಯ ಡಾ.ಹೆಚ್.ಆರ್.ಜಯಪಾಲ್, ಸಹ ಪ್ರಾಧ್ಯಾಪಕರಿಗೆ ದಿನಾಂಕ:18.03.2020 ರಂದು ಮೂಲ ವೇತನವನ್ನು ರೂ.1,31,400/–ಗಳಿಗೆ ನಿಗದಿಪಡಿಸಿದ ನಂತರ ಮುಂದಿನ ವಾರ್ಷಿಕ ವೇತನ ಬಡ್ತಿ ದಿನಾಂಕವು:01.01.2021ಕ್ಕೆ ನೀಡಬೇಕಾಗಿರುತ್ತದೆ. ದಿನಾಂಕ:01.07.2020 ಕ್ಕೆ ವಾರ್ಷಿಕ ವೇತನ ಬಡ್ತಿಯನ್ನು ಮಂಜೂರು ಮಾಡಿ ದಿನಾಂಕ:01.07.2020ಕ್ಕೆ ವಾರ್ಷಿಕ ವೇತನ ಬಡ್ತಿಯನ್ನು ಮಂಜೂರು ಮಾಡಿ ಮೂಲ ವೇತವನ್ನು ರೂ.1,35,300/–ಗಳಿಗೆ ನಿಗದಿಪಡಿಸಿರುವುದು ಹಾಗೂ ಈ ರೀತಿಯಲ್ಲಿಯೇ ವಾರ್ಷಿಕ ವೇತನ ಬಡ್ತಿ ದಿನಾಂಕವನ್ನು ಮುಂದುವರೆಸಿರುವುದು ತಪ್ಪಾಗಿರುತ್ತದೆ.

ಹಾಗೆಯೇ ಡಾ.ಆರ್.ಹೆಚ್.ಪವಿತ್ರಾ, ಸಹಪ್ರಾಧ್ಯಾಪಕರಿಗೆ ದಿನಾಂಕ:18.03.2021 ರಂದು ಮೂಲ ವೇತನವನ್ನು ರೂ.1,31,400/–ಗಳಿಗೆ ನಿಗದಿಪಡಿಸಿದ ನಂತರ ಮುಂದಿನ ವಾರ್ಷಿಕ ವೇತನ ಬಡ್ತಿ ದಿನಾಂಕವು 01.01.2022 ಆಗಬೇಕಾಗಿದ್ದು, ದಿನಾಂಕ:01.07.2021ಕ್ಕೆ ವಾರ್ಷಿಕ ವೇತನ ಬಡ್ತಿಯನ್ನು ಮಂಜೂರು ಮಾಡಿ, ಮೂಲವೇತನವನ್ನು ರೂ.1,35,300/–ಗಳಿಗೆ ನಿಗದಿಪಡಿಸಿರುವುದು ಹಾಗೂ ಈ ರೀತಿಯಲ್ಲಿಯೇ ವಾರ್ಷಿಕ ವೇತನ ಬಡ್ತಿ ದಿನಾಂಕವನ್ನು ಮುಂದುವರೆಸಿರುವುದು ತಪ್ಪಾಗಿರುತ್ತದೆ. (ಅರ್ಹತಾ ದಿನಾಂಕದಿಂದ ಪಾವತಿಸಿರುವುದನ್ನು ಇದೇ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ:20.1ರಲ್ಲಿ ವಸೂಲಾತಿಗೆ ಸೂಚಿಸಿದೆ.)

ಮೇಲೆ ವಿವರಿಸಿದಂತೆ, ಕರ್ನಾಟಕ ನಾಗರೀಕ ಸೇವಾ ನಿಯಮ 42(ಬಿ)(1) ಅನ್ನು ಉಲ್ಲಂಘಿಸಿದಂತಾಗಿದ್ದು, ವಾರ್ಷಿಕ ವೇತನ ಬಡ್ತಿ ದಿನಾಂಕವನ್ನು ಪರಿಷ್ಕರಿಸಿ, ಮೂಲ ವೇತನವನ್ನು ಮರುನಿಗದಿಗೊಳಿಸುವಂತೆ ವಿಚಾರಣಾ ಪತ್ರ ಸಂಖ್ಯೆ:107/02.01.2025ನ್ನು ನೀಡಿದರೂ ವಿಶ್ವವಿದ್ಯಾನಿಲಯವು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಈ ಬಗ್ಗೆ ವಿಶ್ವವಿದ್ಯಾನಿಲಯವು ಆಡಳಿತಾತ್ಮಕ ಕ್ರಮ ಕೈಗೊಂಡು ವಾರ್ಷಿಕ ವೇತನ ಬಡ್ತಿ ದಿನಾಂಕವನ್ನು ಪರಿಷ್ಕರಿಸಿ, ಮೂಲ ವೇತನವನ್ನು ಮರುನಿಗದಿಗೊಳಿಸಿ ಅನುಪಾಲನಾ ವರದಿ ಸಲ್ಲಿಸಲು ತಿಳಿಸಿದೆ.

20.3 ನಿಗದಿತ ಅವಧಿಗೂ ಪೂರ್ವದಲ್ಲಿಯೇ ಅರ್ಹತಾ ದಿನಾಂಕ ನಿಗದಿಪಡಿಸಿ, ಸಿ.ಎ.ಎಸ್ ಪದೋನ್ನತಿಯ ಹಿಂಬಾಕಿಯನ್ನು ಪಾವತಿಸಿರುವುದು.

ದಿನಾಂಕ:30.06.2023ರಂದು ನಿರ್ವಹಣಾ ಶಾಸ್ತ್ರ ಪರಿಶೀಲನಾ ಸಮಿತಿಯ ಸಭೆ ಸೇರಿ ವೃತ್ತಿ ಪದೋನ್ನತಿಗಾಗಿ ಡಾ.ಪಿ.ಸವಿತಾ, ಸಹಾಯಕ ಪ್ರಾಧ್ಯಾಪಕರು, ನಿರ್ವಹಣಾ ಶಾಸ್ತ್ರ ಅಧ್ಯಯನ ವಿಭಾಗ ಇವರು ಸಲ್ಲಿಸಿರುವ ಅರ್ಜಿಯನ್ನು Academic Level–11 ರಿಂದ Academic Level–12 ಯು.ಜಿ.ಸಿ

ನಿಗದಿಪಡಿಸಿರುವ ಅರ್ಹತಾ ಮಾನದಂಡಗಳನ್ನು (Eligibility Criteria) ಪೂರೈಸಿರುವುದನ್ನು ಪರಿಶೀಲಿಸಿ, ಪದೋನ್ನತಿಗೆ ದಿನಾಂಕ:28.12.2022 ರಿಂದ ಅರ್ಹತೆ ಹೊಂದಿರುತ್ತಾರೆ ಎಂದು ಶಿಫಾರಸ್ಸು ಮಾಡಲಾಗಿರುತ್ತದೆ.

ಈ ಸಂಬಂಧ ಇವರ ಸೇವಾವಹಿ ಹಾಗೂ ವೈಯಕ್ತಿಕ ಕಡತವನ್ನು ಪರಿಶೋಧಿಸಲಾಗಿ, ಇವರಿಗೆ Academic Level–10 ರಿಂದ Academic Level–11 ವೃತ್ತಿ ಪದೋನ್ನತಿಗೆ ದಿನಾಂಕ:28.12.2017 ರಂದು ಅರ್ಹತಾ ದಿನಾಂಕವೆಂದು ಪರಿಗಣಿಸಿರುವುದರಿಂದ Academic Level–11 ರಿಂದ Academic Level–12 ವೃತ್ತಿ ಪದೋನ್ನತಿಗೆ ದಿನಾಂಕ:28.12.2022ಕ್ಕೆ ಅರ್ಹತಾ ದಿನಾಂಕವಾಗಿ ಪರಿಶೀಲನಾ ಸಮಿತಿಯ ಸಭೆ ಶಿಫಾರಸ್ಸು ಮಾಡಿರುವುದು ಸೂಕ್ತವಾಗಿರುತ್ತದೆ.

ಆದರೆ, ವಿಶ್ವವಿದ್ಯಾನಿಲಯದ ಕಛೇರಿ ಆದೇಶ ಸಂಖ್ಯೆ: KSOU/AB/EST-1/598/2023-24, ದಿನಾಂಕ:02.09.2023 ರಲ್ಲಿ ದಿನಾಂಕ:28.12.2022ಕ್ಕೆ ಬದಲಾಗಿ ದಿನಾಂಕ:05.12.2021 ಎಂದು ನಿಗದಿತ ಅವಧಿಗೂ ಪೂರ್ವದಲ್ಲಿಯೇ ಅರ್ಹತಾ ದಿನಾಂಕ ನಿಗದಿಪಡಿಸಿರುವುದು ಹಾಗೂ ಆ ದಿನದಿಂದಲೇ ವೃತ್ತಿ ಪದೋನ್ನತಿಯ ಹಿಂಬಾಕಿಯನ್ನು ಪಾವತಿಸಿರುವುದು ಕಂಡುಬಂದಿದ್ದು, (ಅರ್ಹತಾ ದಿನಾಂಕದಿಂದ ಪಾವತಿಸಿರುವುದನ್ನು ಇದೇ ಲೆಕ್ಕಪರಿಶೋಧನಾ ವರದಿಯ ಕಂಡಿಕೆ 20.1ರಲ್ಲಿ ವಸೂಲಾತಿಗೆ ಸೂಚಿಸಿದೆ) ಇವರ ಸೇವಾ ವಿವರಗಳನ್ನು ಮತ್ತೊಮ್ಮೆ ಪರಿಶೀಲಿಸಿ ನೈಜವಾದ ಅರ್ಹತಾ ದಿನಾಂಕಕ್ಕೆ ಮೂಲ ವೇತನವನ್ನು ನಿಗದಿಪಡಿಸಿ ಪರಿಷ್ಕರಿಸಲು ತಿಳಿಸಿದೆ ಹಾಗೂ ಈ ಕುರಿತು ವಿವರ ಕೋರಿ ವಿಚಾರಣಾ ಪತ್ರ ಸಂಖ್ಯೆ:100/01.01.2025ನ್ನು ನೀಡಿದರೂ ವಿಶ್ವವಿದ್ಯಾನಿಲಯವು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಈ ಬಗ್ಗೆ ವಿಶ್ವವಿದ್ಯಾನಿಲಯವು ಆಡಳಿತಾತ್ಮಕ ಕ್ರಮ ಕೈಗೊಂಡು ಅವಧಿಗೂ ಪೂರ್ವದಲ್ಲಿಯೇ ನೀಡಿರುವ ಸಿ.ಎ.ಎಸ್ ಪದೋನ್ನತಿಯನ್ನು ಹಿಂಪಡೆದು ಪರಿಷ್ಕರಿಸಿ ವೇತನ ನಿಗದಿಪಡಿಸಲು ವೇತನ ಬಡ್ತಿಯನ್ನು ಲೆಕ್ಕಚಾರ ಮಾಡಿ ವಸೂಲಿಸಿ ಅನುಪಾಲನಾ ವರದಿ ಸಲ್ಲಿಸಲು ತಿಳಿಸಿದೆ.

20.4 ಸಹಾಯಕ ಪ್ರಾಧ್ಯಾಪಕರಿಗೆ ವೇತನ ವ್ಯತ್ಯಾಸದ ಬಾಕಿ ಪಾವತಿಸುವಾಗ ರೂ.45,738/–ಗಳನ್ನು ಹೆಚ್ಚುವರಿಯಾಗಿ ಪಾವತಿಸಿರುವುದು.

ವಿಶ್ವವಿದ್ಯಾನಿಲಯದ ಕಛೇರಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–1/587/2023–24, ದಿನಾಂಕ: 16.09.2023ರಲ್ಲಿ 21 ಮಂದಿ ಸಹಾಯಕ ಪ್ರಾಧ್ಯಾಪಕರುಗಳಿಗೆ ದಿನಾಂಕ:01.07.2023ರ ಆದೇಶದಲ್ಲಿ ತಡೆಹಿಡಿಯಲಾಗಿದ್ದ ಜೂನ್ ಮಾಹೆಯ ವೇತನದೊಂದಿಗೆ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ಬಟವಾಡೆ ಮಾಡಲು ಆದೇಶಿಸಲಾದ ಹಿನ್ನೆಲೆಯಲ್ಲಿ ಇವರುಗಳಿಗೆ 6/2023, 7/2023 ಮತ್ತು 8/2023 ರ ಮಾಹೆಯ ವೇತನ ವ್ಯತ್ಯಾಸದ ಬಾಕಿ ಮೊತ್ತ ರೂ.40,30,677/–ಗಳನ್ನು ವೋಚರ್ ಸಂಖ್ಯೆ:110ರ ಧನಾದೇಶ ಸಂಖ್ಯೆ:925699 ಮತ್ತು 925700 ದಿನಾಂಕ:22.09.2023ರಲ್ಲಿ ಪಾವತಿಸಿದೆ.

ಈ ವೋಚರನ್ನು ಪೂರಕ ದಾಖಲೆಗಳೊಂದಿಗೆ ಪರಿಶೋಧಿಸಲಾಗಿ, ಸಹಾಯಕ ಪ್ರಾಧ್ಯಾಪಕರಾದ ಸಿರಾಜ್ ಬಾಷಾ, ಹೆಚ್.ಎಂ.ನಂದಿನಿ ಮತ್ತು ಡಿ.ಎಂ.ಮಹೇಶ್ ರವರಿಗೆ ಮೂಲ ವೇತನವನ್ನು ತಪ್ಪಾಗಿ ನಮೂದಿಸಿ ವೇತನ ವ್ಯತ್ಯಾಸದ ಬಾಕಿಯನ್ನು ಪಾವತಿಸಿರುವುದರಿಂದ, ಸಿರಾಜ್ ಬಾಷಾ ರವರಿಗೆ ರೂ.22,638/–ನ್ನು ಹೆಚ್.ಎಂ.ನಂದಿನಿ

ರವರಿಗೆ ರೂ.11,550/-ನ್ನು ಮತ್ತು ಡಿ.ಎಂ.ಮಹೇಶ್ ರವರಿಗೆ ರೂ.11,550/-ನ್ನು ಹೆಚ್ಚುವರಿಯಾಗಿ ಪಾವತಿಸಿದಂತಾಗಿರುತ್ತದೆ. ವಿವರಗಳನ್ನು **ಅನುಬಂಧ-16 ರಲ್ಲಿ** ವಿವರಿಸಿದೆ. ಹೆಚ್ಚುವರಿಯಾಗಿ ಪಾವತಿಸಿರುವ ಒಟ್ಟು ಮೊತ್ತ ರೂ.45,738/-ಗಳನ್ನು ಸಂಬಂಧಿಸಿದವರಿಂದ ವಸೂಲಿಸಲು ಸೂಚಿಸಿ ವಿವರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:124/18.01.2025 ರಂದು ನೀಡಲಾಗಿದ್ದು, ಇದಕ್ಕೆ ವಿಶ್ವವಿದ್ಯಾನಿಲಯದಿಂದ ಯಾವುದೇ ಪ್ರತಿಕ್ರಿಯೆ ನೀಡರುವುದಿಲ್ಲ. ಹಾಗಾಗಿ, ಹೆಚ್ಚುವರಿ ಪಾವತಿ ಒಟ್ಟು ಮೊತ್ತ **ರೂ.45,738/-ನ್ನು ಸಂಬಂಧಿಸಿದವರಿಂದ ವಸೂಲಿಸಿ,** ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿ, ಅನುಪಾಲನಾ ವರದಿಯನ್ನು ಸಲ್ಲಿಸಲು ತಿಳಿಸಿದೆ.

20.5 ಸಹಾಯಕ ಪ್ರಾಧ್ಯಾಪಕರು ಮುಕ್ತ ವಿಶ್ವವಿದ್ಯಾನಿಲಯಕ್ಕೆ ನೇಮಕಗೊಳ್ಳುವ ಪೂರ್ವದಲ್ಲಿ ಅನ್ಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಸೇವಾವಧಿಯನ್ನು ಪರಿಗಣಿಸಿ ಸಿ.ಎ.ಎಸ್ ಪದೋನ್ನತಿ ಮತ್ತು ರೂ.59,778/-ಗಳ ಆರ್ಥಿಕ ಸೌಲಭ್ಯಗಳನ್ನು ನೀಡಿರುವ ಪೂರಕ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.

ಬೋಧಕರ ಸೇವಾವಹಿಗಳನ್ನು ಪರಿಶೋಧಿಸಲಾಗಿ ಈ ಕೆಳಕಂಡ ಸಹಾಯಕ ಪ್ರಾಧ್ಯಾಪಕರುಗಳಿಗೆ ಸಿ.ಎ.ಎಸ್ ಪದೋನ್ನತಿ ದಿನಾಂಕವನ್ನು ಪರಿಷ್ಕರಿಸಿ, ಪದೋನ್ನತಿಯ ದಿನಾಂಕಕ್ಕೆ ಅನುಗುಣವಾಗಿ ವೇತನವನ್ನು ನಿಗದಿಪಡಿಸಿದೆ. ವಿವರಗಳು ಈ ಕೆಳಕಂಡಂತಿದೆ.

ಅ) ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-1/598/2023-24, ದಿನಾಂಕ:06.11.2023 ರಲ್ಲಿ ಕುಂದು ಕೊರತೆ ಸಮಿತಿ ಸಭೆಯ ಶಿಫಾರಸ್ಸಿನನ್ವಯ, ಕುಲಪತಿಯವರ ಅನುಮೋದನೆ ಮೇರೆಗೆ ಡಾ.ಎಸ್.ನಿರಂಜನ್‌ರಾಜ್, ಸಹಾಯಕ ಪ್ರಾಧ್ಯಾಪಕರು, ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ವಿಭಾಗ, ಇವರಿಗೆ ಈ ಹಿಂದೆ ಅನ್ವಯಿಕ ಸಸ್ಯಶಾಸ್ತ್ರ ಮತ್ತು ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿ Indian Council & Agriculture Research ಕೇಂದ್ರದಲ್ಲಿ ತಾತ್ಕಾಲಿಕವಾಗಿ ಸಹಾಯಕ ಪ್ರಾಧ್ಯಾಪಕರಾಗಿ ದಿನಾಂಕ:03.11.2005 ರಿಂದ 05.12.2012ರವರೆಗೆ ಕರ್ತವ್ಯ ನಿರ್ವಹಿಸಿರುತ್ತಾರೆಂದು, ಈ ಕರ್ತವ್ಯ ನಿರ್ವಹಿಸಿದ ಸೇವೆಯನ್ನು ಯು.ಜಿ.ಸಿ ಮಾರ್ಗಸೂಚಿ 2018ರ Section 10.0 ರನ್ವಯ ಪರಿಗಣಿಸಿ ಮೊದಲನೇ ಹಂತದ ಪದೋನ್ನತಿಯನ್ನು ದಿನಾಂಕ:03.11.2009 ರಿಂದ ಕಾಲ್ಪನಿಕವಾಗಿ (Nationality) ಪರಿಗಣಿಸಿ, ಮುಂದಿನ ಹಂತದ ಎ.ಜೆ.ಪಿ 7,000/-ರಿಂದ 8,000/- ರ ಪದೋನ್ನತಿಯನ್ನು ದಿನಾಂಕ:03.11.2014 ರಿಂದ ಜಾರಿಗೆ ಬಂದಂತೆ ಪರಿಷ್ಕರಿಸಿ ಆದೇಶಿಸಿದ್ದು, ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕರಾಮು.ವಿ/ಆವಿ/ಸಿಬ್ಬಂದಿ-1/598/2023-24, ದಿನಾಂಕ:05.01.2024 ರಲ್ಲಿ ಪದೋನ್ನತಿಯ ದಿನಾಂಕಕ್ಕೆ ಅನುಗುಣವಾಗಿ ವೇತನವನ್ನು ನಿಗದಿಪಡಿಸಿ ಆದೇಶಿಸಿದ್ದು, ಇದರನ್ವಯ ಫೆಬ್ರವರಿ-2024ರ ಮಾಹೆಯಲ್ಲಿ ಮೂಲವೇತನವನ್ನು ರೂ.95,300/- ರಿಂದ ರೂ.1,10,400/- ರಂತೆ ಹೆಚ್ಚಿಸಿ ಇದರಂತೆ ವೇತನವನ್ನು ಪಾವತಿಸಿದೆ.

ಆ) ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-1/598/2023-24, ದಿನಾಂಕ:06.11.2023 ರಲ್ಲಿ ಕುಂದುಕೊರತೆ ಸಮಿತಿ ಸಭೆಯ ಶಿಫಾರಸ್ಸಿನನ್ವಯ, ಕುಲಪತಿಯವರ

ಅನುಮೋದನೆ ಮೇರೆಗೆ ಡಾ.ಎನ್.ಜಿ.ರಾಜು, ಸಹಾಯಕ ಪ್ರಾಧ್ಯಾಪಕರು, ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ, ಇವರಿಗೆ ಈ ಹಿಂದೆ St. George College of Management & Science, Bangalore, ಇಲ್ಲಿನ Department of Genetics ವಿಭಾಗದಲ್ಲಿ ಅಧ್ಯಾಪಕರಾಗಿ ಹಾಗೂ ವಿಭಾಗದ ಮುಖ್ಯಸ್ಥರಾಗಿ ದಿನಾಂಕ:09.08.2004 ರಿಂದ 05.12.2012 ರವರೆಗೆ ಕರ್ತವ್ಯ ನಿರ್ವಹಿಸಿರುತ್ತಾರೆಂದು ಈ ಕರ್ತವ್ಯ ನಿರ್ವಹಿಸಿದ ಸೇವೆಯನ್ನು ಯು.ಜಿ.ಸಿ ಮಾರ್ಗಸೂಚಿ–2018ರ ಸೆಕ್ಷನ್–10.0 ರನ್ವಯ ಪರಿಗಣಿಸಿ ಮೊದಲನೇ ಹಂತದ ಪದೋನ್ನತಿಯನ್ನು ದಿನಾಂಕ:09.08.2008 ರಿಂದ ಕಾಲ್ಪನಿಕವಾಗಿ (Notionally) ಪರಿಗಣಿಸಿ, ಮುಂದಿನ ಹಂತದ ಎ.ಜಿ.ಪಿ 7,000/– ರಿಂದ 8,000/–ರ ಪದೋನ್ನತಿಯನ್ನು ದಿನಾಂಕ:09.08.2013 ರಿಂದ ಜಾರಿಗೆ ಬಂದಂತೆ ಪರಿಷ್ಕರಿಸಿ, ಆದೇಶಿಸಿದ್ದು, ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕರಾಮುವಿ/ಆಏ/ಸಿಬ್ಬಂದಿ–1/598/2023–24 ದಿನಾಂಕ:05.01.2024ರಲ್ಲಿ ಪದೋನ್ನತಿಯ ದಿನಾಂಕಕ್ಕೆ ಅನುಗುಣವಾಗಿ ವೇತನವನ್ನು ನಿಗದಿಪಡಿಸಿ, ಆದೇಶಿಸಿದ್ದು, ಇದರನ್ವಯ ಫೆಬ್ರವರಿ–2024ರ ಮಾಹೆಯಲ್ಲಿ ಮೂಲ ವೇತನವನ್ನು ರೂ.95,300/– ರಿಂದ ರೂ.1,17,100/–ರಂತೆ ಹೆಚ್ಚಿಸಿ ಇದರಂತೆ ವೇತನವನ್ನು ಪಾವತಿಸಿದೆ.

ii) ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕರಾಮುವಿ/ಆಏ/ಸಿಬ್ಬಂದಿ–1/614/2023–24, ದಿನಾಂಕ:19.02.2024 ರಲ್ಲಿ ಕುಂದು ಕೊರತೆ ಸಮಿತಿ ಸಭೆಯ ಶಿಫಾರಸ್ಸಿನನ್ವಯ, ಕುಲಪತಿಯವರ ಅನುಮೋದನೆ ಮೇರೆಗೆ ಡಾ.ಎಂ.ಉಮಾಶಂಕರ್, ಸಹಾಯಕ ಪ್ರಾಧ್ಯಾಪಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಇವರಿಗೆ Dr. D.S.Kothari, Fellowship at the department of Molecular Physics, Indian Institute of Science (IISC) ಇಲ್ಲಿ Higher Post doctoral fellowship ಆಗಿ ದಿನಾಂಕ:01.07.2010 ರಿಂದ 05.12.2012 ರವರೆಗೆ ಕರ್ತವ್ಯ ನಿರ್ವಹಿಸಿರುತ್ತಾರೆಂದು ಈ ಕರ್ತವ್ಯ ನಿರ್ವಹಿಸಿದ ಸೇವೆಯನ್ನು ಯು.ಜಿ.ಸಿ ಮಾರ್ಗಸೂಚಿ–2018ರ ಸೆಕ್ಷನ್–10.0 ರನ್ವಯ ಪರಿಗಣಿಸಿ ಮೊದಲನೇ ಹಂತದ ಪದೋನ್ನತಿಯನ್ನು ದಿನಾಂಕ:06.07.2014 ರಿಂದ ಕಾಲ್ಪನಿಕವಾಗಿ (Notionally) ಪರಿಗಣಿಸಿ, ಮುಂದಿನ ಹಂತದ ಎ.ಜಿ.ಪಿ ರೂ.7,000/– ರಿಂದ 8,000/–ರ ಪದೋನ್ನತಿಯನ್ನು ದಿನಾಂಕ:06.07.2019 ರಿಂದ ಜಾರಿಗೆ ಬಂದಂತೆ ಪರಿಷ್ಕರಿಸಿ ಆದೇಶಿಸಿದ್ದು, 2024–25ನೇ ಆರ್ಥಿಕ ಸಾಲಿನಲ್ಲಿ ಪದೋನ್ನತಿಯ ದಿನಾಂಕಕ್ಕೆ ಅನುಗುಣವಾಗಿ ಮೂಲವೇತನವನ್ನು ನಿಗದಿಪಡಿಸಿ ಆದೇಶಿಸಿದೆ.

ಮೇಲ್ಕಂಡ ಪದೋನ್ನತಿ ಹಾಗೂ ವೇತನ ನಿಗದಿಪಡಿಸಿದ ಸಂಬಂಧ ಈ ಕೆಳಕಂಡ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:175/10.02.2025ನ್ನು ನೀಡಲಾಗಿತ್ತು.

1. ವಿಶ್ವವಿದ್ಯಾನಿಲಯದ ನೇಮಕಾತಿ ಅಧಿಸೂಚನೆ.
2. ಮೇಲ್ಕಂಡವರು ಸಮೂಚಿತ ಮಾರ್ಗದಲ್ಲಿ ಸಲ್ಲಿಸಿರುವ ಕೋರಿಕೆ ಅರ್ಜಿಗಳು.

3. ಕರ್ನಾಟಕ ನಾಗರೀಕ ಸೇವಾ ನಿಯಮಗಳು–ನಿಯಮ 252 (ಬಿ) ರನ್ವಯ ವಹಿಸಿರುವ ಕ್ರಮಗಳು.

4. ವಿಶ್ವವಿದ್ಯಾನಿಲಯಕ್ಕೆ ನೇಮಕಗೊಳ್ಳುವ ಪೂರ್ವದಲ್ಲಿ ಅನ್ಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿರುವುದಕ್ಕೆ ಅಲ್ಲಿನ ನೇಮಕಾತಿ ಪ್ರಾಧಿಕಾರದಿಂದ ಪಡೆದ ಕಾರ್ಯನಿರ್ವಹಣಾ ದೃಢೀಕರಣ ಪತ್ರ (work done certificate) ಮತ್ತು ವೇತನ ಪಾವತಿ ದಾಖಲೆಗಳು.

5. ಕುಂದು ಕೊರತೆ ನಿವಾರಣಾ ಸಮಿತಿಯ ಶಿಫಾರಸ್ಸಿನ ವರದಿ.

6. Screening–Cum-Evaluation Committee & Selection Committee ಸಭೆಯ ನಡಾವಳಿಗಳು.

7. ನೇಮಕಾತಿ ಆದೇಶಗಳು ಮತ್ತು ಪಿ.ಹೆಚ್.ಡಿ ಘೋಷಣಾ ದಾಖಲೆಗಳು.

8. ಪದೋನ್ನತಿ ಆದೇಶಗಳು ಮತ್ತು ವೇತನ ನಿಗದಿ ಆದೇಶಗಳು ಮತ್ತು

9. ಯು.ಜಿ.ಸಿ ಮಾರ್ಗಸೂಚಿ–2018ರ ಸೆಕ್ಷನ್ 10.0 ರ (a), (b), (c), (d), (e), (f), (i), (ii), (iii) ಮತ್ತು (g) ರ ಎಲ್ಲಾ ಷರತ್ತುಗಳು ಮತ್ತು ನಿಬಂಧನೆಗಳನ್ನು ಸಂಪೂರ್ಣವಾಗಿ ಪೂರೈಸಿರುವ ಸಂಬಂಧದ ಎಲ್ಲಾ ಮೂಲ ದಾಖಲೆಗಳು.

ಮೇಲಿನ ಅಂಶಗಳಿಗೆ ವಿಶ್ವವಿದ್ಯಾನಿಲಯವು ಯಾವುದೇ ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲ. ಆದುದರಿಂದ **ಅನುಬಂಧ–17ರಲ್ಲಿ** ವಿವರಿಸಿರುವಂತೆ ಪಾವತಿಸಿರುವ ಒಟ್ಟು ಮೊತ್ತ **ರೂ.59,778/–ಗಳನ್ನು ವಸೂಲಿಸಲು** ಸೂಚಿಸಿದೆ ಹಾಗೂ ಈ ಕುರಿತು ಅನುಪಾಲನಾ ವರದಿಯನ್ನು ಸಲ್ಲಿಸಲು ತಿಳಿಸಿದೆ.

20.6 ಬೋಧಕ ಮತ್ತು ಬೋಧಕೇತರರ ವೇತನ ಮತ್ತು ಪೂರಕ ವೇತನ ಬಿಲ್ಲುಗಳಲ್ಲಿ ಕಟಾಯಿಸಲಾದ ರೂ.6,27,41,388/–ಗಳನ್ನು ಸಂಬಂಧಪಟ್ಟ ಲೆಕ್ಕಶೀರ್ಷಿಕೆ ಜಮೆ ಮಾಡಿರುವ ಮೂಲ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.

2023–24ನೇ ಸಾಲಿನಲ್ಲಿ ಬೋಧಕರು ಮತ್ತು ಬೋಧಕೇತರ ವರ್ಗದವರಿಗೆ ಪಾವತಿಸಿರುವ ವೇತನ ಮತ್ತು ಪೂರಕ ವೇತನ ಬಿಲ್ಲುಗಳಲ್ಲಿ ಕಟಾಯಿಸಲಾದ LIC, Birla Sunlife Insurance, Computer Advance, Solar Advance, Festival Advance, LIC Housing Finance, Group Insurance linked scheme, Professional Tax, Income Tax, EGIS (FO), GPF (FO), Non teaching Association fee, HRA (AEE, PWD, Mysuru), Audit Recovery, GSLISREG, TAF (REG), NPS (Prof KLN Murthy), UOM–GIS ಮತ್ತು Excess DA Recovery of 7th UGC Pay Scale & 3 Lecturers Salary recovery ಈ ಕಟಾವಣೆಗಳ ಜಮಾ ಸಂಬಂಧದ ಮೂಲ ಜಮಾ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:13/05.11.2024, 111/22.01.2025 ಮತ್ತು 140/01.02.2025, 151/01.02.2025 ಹಾಗೂ 162/03.02.2025ನ್ನು ಹೀಗೆ ಲೆಕ್ಕಪರಿಶೋಧನಾ

ಅವಧಿಯಲ್ಲಿ ಆರು ವಿಚಾರಣಾ ಪತ್ರಗಳನ್ನು ನೀಡಲಾಗಿ, ವಿಶ್ವವಿದ್ಯಾನಿಲಯದವರು ದಿನಾಂಕ:11.02.2025 ರಂದು ನೀಡಲಾಗಿರುವ ಅನುಪಾಲವಾ ವರದಿಯಲ್ಲಿ 2023–24ನೇ ಸಾಲಿನ ಬೋಧಕೇತರ ನೌಕರರ ವೇತನ ಮೂರಕ ಪಾವತಿಗಳಲ್ಲಿನ ಕಟಾವಣೆಗಳನ್ನು ಜಮಾ ಮಾಡಿರುವ ಸಂಬಂಧದ ಲೆಕ್ಕಪತ್ರ ದಾಖಲೆಗಳ (2023–24ನೇ ಸಾಲಿನ ವೃತ್ತಿ ತೆರಿಗೆ ಹಾಗೂ ಡಿಸೆಂಬರ್–2023ರ ಮಾಹೆಯ ಕಟಾವಣೆಗಳ ದಾಖಲಾತಿಗಳನ್ನು ಹೊರತುಪಡಿಸಿ) ನಕಲು ಪ್ರತಿಗಳನ್ನು ಲೆಕ್ಕತಪಾಸಣೆಗೆ ಒದಗಿಸಲಾಗಿದೆ ಎಂದು ಅಸಮಂಜಸ ಉತ್ತರ ನೀಡಿರುತ್ತಾರೆ ಮೂಲ ಜಮಾ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದ ಕಾರಣ **ಅನುಬಂಧ–18ರಲ್ಲಿ** ವಿವರಿಸಿರುವಂತೆ ಒಟ್ಟು ಮೊತ್ತ **ರೂ.6,27,41,388/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ** ಹಾಗೂ ಈ ಕುರಿತು ಅನುಪಾಲನಾ ವರದಿಯನ್ನು ಸಲ್ಲಿಸಲು ತಿಳಿಸಿದೆ.

20.7 ಡಿಸೆಂಬರ್–2023ರ ಮಾಹೆಯ ವೇತನದಲ್ಲಿ ಕಟಾಯಿಸಲಾದ ಕಟಾವಣೆಗಳ ಜಮಾ ಸಂಬಂಧದ ಧನಾದೇಶವನ್ನು ಖಾತೆಗೆ ವಿಳಂಬವಾಗಿ ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.

ಬೋಧಕ ಮತ್ತು ಬೋಧಕೇತರ ವರ್ಗದವರ ಡಿಸೆಂಬರ್–2023ರ ಮಾಹೆಯ ವೇತನದಲ್ಲಿ ಕಟಾಯಿಸಲಾದ ಕಟಾವಣೆಗಳನ್ನು ಜಮಾ ಮಾಡುವ ಸಂಬಂಧ ಧನಾದೇಶ ಸಂಖ್ಯೆ:264923, ದಿನಾಂಕ:31.12.2023 ರೂ.60,57,004/–ಗಳನ್ನು ಎಸ್.ಬಿ.ಐ ಬ್ಯಾಂಕಿನ ಖಾತೆ ಸಂಖ್ಯೆ:54035420117 ರಿಂದ ವಿತರಿಸಿದ್ದು, ಈ ಧನಾದೇಶವು ಎಸ್.ಬಿ.ಐ ಖಾತೆ ಸಂಖ್ಯೆ:54035420117 ರಿಂದ ವಿತರಿಸಿದ್ದು, ಈ ಧನಾದೇಶವು ಎಸ್.ಬಿ.ಐ ಖಾತೆ ಸಂಖ್ಯೆ:54035421315ಗೆ ದಿನಾಂಕ:15.03.2024ರಂದು ಅಂದರೆ 76 ದಿನಗಳ ನಂತರ ವಿಳಂಬವಾಗಿ ಜಮೆ ಮಾಡಿದ್ದು, ಈ ವಿಳಂಬ ಜಮೆಗೆ ಸೂಕ್ತ ಸ್ಪಷ್ಟೀಕರಣವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಮತ್ತು ಡಿಸೆಂಬರ್–2023ರ ಮಾಹೆಯ ಎಲ್ಲ ಕಟಾವಣೆಗಳನ್ನು ಜಮೆ ಮಾಡಿರುವ ಸಂಬಂಧದ ಎಲ್ಲಾ ಮೂಲ ಜಮಾ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:150/01.02.2025, 132/22.01.2025 ಮತ್ತು 139/01.02.2025ನ್ನು ಹೀಗೆ ಮೂರು ವಿಚಾರಣಾ ಪತ್ರಗಳನ್ನು ನೀಡಿದ್ದರೂ ಇದ್ದಕೆ ವಿಶ್ವವಿದ್ಯಾನಿಲಯವು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಆದುದರಿಂದ ಕಟಾವಣೆಯ ಮೊತ್ತ **ರೂ.60,57,004/–ಗಳನ್ನು ಸಂಬಂಧಿಸಿದವರೆಲ್ಲರ ಹೊಣೆಗಾರಿಕೆ ಮೇಲೆ ಆಕ್ಷೇಪಣೆಯಲ್ಲಿಡಲಾಗಿದೆ.**

20.8 ವೇತನ ಕಟಾವಣೆಯ "Recovery" ಕಾಲಂಗೆ ಸಂಬಂಧಿಸಿದ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.

2023–24ನೇ ಸಾಲಿನ ಬೋಧಕ ವರ್ಗದವರ ಮಾಹೆಯಾನ ವೇತನ ಪಾವತಿಯ ವಿವರ ಪಟ್ಟಿಯನ್ನು ಪರಿಶೋಧಿಸಲಾಗಿ, ವೇತನ ಕಟಾವಣೆ ಕಾಲಂನಲ್ಲಿ "Recovery" ಎಂದು ಹಲವು ಬೋಧಕರ ವೇತನದಲ್ಲಿ ಕಟಾಯಿಸಲಾಗಿದ್ದು, ಮಾಹೆಯಾನ ಕಟಾವಣೆಯ ಮೊತ್ತದ ವಿವರಗಳು ಈ ಕೆಳಕಂಡಂತಿದೆ

ಕ್ರ.ಸಂ	ಮಾಹೆ	ಕಟಾವಣೆಯ ಮೊತ್ತ (ರೂ.ಗಳಲ್ಲಿ)
1	3/2023	2,51,866
2	4/2023	2,51,866
3	5/2023	2,51,866

4	6/2023	2,51,866
5	7/2023	2,51,866
6	8/2023	2,51,866
7	9/2023	3,25,210
	ಒಟ್ಟು	**18,36,406**

ಮೇಲ್ಕಂಡ ಕಟಾವಣೆಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ಹಾಗೂ ಪೂರಕ ದಾಖಲೆಗಳನ್ನು ಮತ್ತು ಇವುಗಳ ಜಮೆಗೆ ಸಂಬಂಧಿಸಿದ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:148/01.02.2025ರಂದು ನೀಡಲಾಗಿದ್ದು, ಇದಕ್ಕೆ ವಿಶ್ವವಿದ್ಯಾನಿಲಯದಿಂದ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಹಾಗಾಗಿ ಈ ಕಟಾವಣೆಯ ದಾಖಲೆಗಳನ್ನು ಲೆಕ್ಕಪರಿಶೋಧಿಸಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ಕಟಾವಣೆಯ ಒಟ್ಟು ಮೊತ್ತ **ರೂ.18,36,406/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

20.09 ಬೋಧಕ ವರ್ಗದವರ ಹಬ್ಬದ ಮುಂಗಡದ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.

2023–24ನೇ ಸಾಲಿನಲ್ಲಿ ಬೋಧಕ ವರ್ಗದವರಿಗೆ ಬಕ್ರೀದ್ ಹಬ್ಬಕ್ಕಾಗಿ ರೂ.50,000/–ಗಳು ಹಾಗೂ ಮಹಾಶಿವರಾತ್ರಿ ಹಬ್ಬದ ಆಚರಣೆಗಾಗಿ ಹೀಗೆ ಒಟ್ಟು 1,25,000/–ಗಳ ಹಬ್ಬದ ಮುಂಗಡವನ್ನು ಪಾವತಿಸಿದ್ದು, ಈ ಸಾಲಿನಲ್ಲಿ ಬೋಧಕ ವರ್ಗದವರ ಮಾಹೆಯಾನ ವೇತನದಲ್ಲಿ ಒಟ್ಟು ರೂ.2,21,600/–ಗಳ ಹಬ್ಬದ ಮುಂಗಡವನ್ನು ಕಟಾಯಿಸಿ, ಹೊಂದಾಣಿಕೆ ಮಾಡಿಕೊಳ್ಳಲಾಗಿದೆ.

2023–24ನೇ ಸಾಲಿನ ಪ್ರಾರಂಭಿಕ ಶಿಲ್ಕು (ಹಿಂದಿನ ಸಾಲುಗಳ ಬಾಕಿ ಮೊತ್ತ) ಹಾಗೂ ಅಂತಿಮ ಶಿಲ್ಕು (ದಿನಾಂಕ:31.03.2024ರ ಅಂತ್ಯಕ್ಕೆ ಹೊಂದಾಣಿಕೆಯಾಗಲು ಬಾಕಿ ಇರುವ ಮೊತ್ತ.) ವಿವರಗಳನ್ನು ಪೂರಕ ದಾಖಲೆಗಳೊಂದಿಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:16/06.11.2024ರಂದು ನೀಡಿದರೂ, ವಿಶ್ವವಿದ್ಯಾನಿಲಯದವರು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಕರ್ನಾಟಕ ಆರ್ಥಿಕ ಸಂಹಿತೆ, 1958ರ ಅನುಚ್ಛೇದ–238 (3) (i) ರಿಂದ (vi) ರವರೆಗೆ ಹಬ್ಬದ ಮುಂಗಡದ ಲೆಕ್ಕಗಳನ್ನು ನಿರ್ವಹಿಸುವ ಕಾರ್ಯವಿಧಾನವನ್ನು ವಿವರಿಸಿದ್ದು, ಈ ಕಾರ್ಯ ವಿಧಾನದಂತೆ ಹಬ್ಬದ ಮುಂಗಡದ ಲೆಕ್ಕಗಳನ್ನು ನಿರ್ವಹಿಸಲು ಲೆಕ್ಕಪರಿಶೋಧನೆಯಲ್ಲಿ ಸೂಚಿಸಿದೆ.

20.10 ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಸಾಮಾನ್ಯ ಮತ್ತು ಸಾಮಾಜಿಕ ವಲಯಗಳ ವರದಿಯಲ್ಲಿ ಆಕ್ಷೇಪಿಸಲಾಗಿರುವ ಸಹ ಪ್ರಾಧ್ಯಾಪಕರು ಹಾಗೂ ಗ್ರಂಥಪಾಲಕರನ್ನು ಸೇವೆಯಲ್ಲಿ ಮುಂದುವರಿಸಿ ವೇತನ ಪಾವತಿಸಿರುವುದು.

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಸಾಮಾನ್ಯ ಮತ್ತು ಸಾಮಾಜಿಕ ವಲಯಗಳ ವರದಿಯ ಕಂಡಿಕೆ ಸಂಖ್ಯೆ 4.1.3.2 (ಎ)/2016–17ರಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ ಸಹ ಪ್ರಾಧ್ಯಾಪಕರ ನೇರ ನೇಮಕಾತಿಗೆ ಕನಿಷ್ಠ 300 ಎಪಿಐ ಅಂಕಗಳನ್ನು ಪಡೆದಿರಬೇಕು ಎಂದು

ಯು.ಜಿ.ಸಿ ನಿಗದಿಪಡಿಸಿರುವ ಮಾನದಂಡಕ್ಕೆ ವಿರುದ್ಧವಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಡಾ. ಮಹದೇವ ಮೂರ್ತಿ, ಡಾ. ಕವಿತ ರೈ, ಡಾ.ಎಂ.ಎಸ್. ರಮಾನಂದ, ಡಾ.ತೇಜಸ್ವಿ ನವಿಲೂರು ಮತ್ತು ಡಾ. ಶಂಕರನಾರಾಯಣಪ್ಪ ಎಂಬ ಐವರು ಸಹ ಪ್ರಾಧ್ಯಾಪಕರುಗಳನ್ನು ಇವರುಗಳು ಸಂದರ್ಶನದಲ್ಲಿ ನಿಗದಿತ 300 ಎ.ಪಿ.ಐ ಅಂಕಗಳನ್ನು ಪಡೆದಿರದಿದ್ದರೂ ಆಯ್ಕೆ ಮಾಡಿರುವುದನ್ನು ಆಕ್ಷೇಪಿಸಲಾಗಿರುತ್ತದೆ.

ಸಿ.ಎ.ಜಿ ಕಂಡಿಕೆ:4.1.3.2(ಎ)(ಡಿ)ರಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಸಹ ಪ್ರಾಧ್ಯಾಪಕರ ಐದು ಹುದ್ದೆಗಳಿಗೆ 2012ರ ಮಾರ್ಚ್/ನವೆಂಬರ್ ತಿಂಗಳಲ್ಲಿ ಅರ್ಜಿಗಳನ್ನು ಆಹ್ವಾನಿಸಿ, ನವೆಂಬರ್–ಡಿಸೆಂಬರ್–2012ರಲ್ಲಿ ಭರ್ತಿ ಮಾಡಲಾಗಿರುತ್ತದೆ. ಆದರೆ ಆಯ್ಕೆಯಾದ ಐವರಲ್ಲಿ ಇಬ್ಬರು ಅಭ್ಯರ್ಥಿಗಳು ಸಹ ಪ್ರಾಧ್ಯಾಪಕರಾಗಿ ಆಯ್ಕೆಗೊಳ್ಳಲು ಅಗತ್ಯವಿದ್ದ ಕನಿಷ್ಠ ಎಂಟು ವರ್ಷಗಳ ಬೋಧನಾ ಅನುಭವವನ್ನೇ ಹೊಂದಿರಲಿಲ್ಲ. ಸಮಾನಾಂತರ ದರ್ಜೆಯಲ್ಲಿನ ಹಿಂದಿನ ಕ್ರಮಬದ್ಧ ಸೇವೆಯನ್ನು ಮಾತ್ರ ಹಿಂದಿನ ಸೇವೆಯನ್ನಾಗಿ ಪರಿಗಣಿಸಬಹುದು ಎಂದು ಯು.ಜಿ.ಸಿ ನಿಯಮಗಳು 2009 ನಿಗದಿಪಡಿಸಿದ್ದು, ಅರೆಕಾಲಿಕ/ಅತಿಥಿ ಉಪನ್ಯಾಸಕರ ಅನುಭವವನ್ನು ಬೋಧನಾ ಅನುಭವವನ್ನಾಗಿ ಪರಿಗಣಿಸಬಾರದೆಂದು ಯುಜಿಸಿಯು ಜನವರಿ 2003 ಮತ್ತು ಜೂನ್ 2010ರಲ್ಲಿ ನೀಡಿದ ತನ್ನ ಸ್ಪಷ್ಟೀಕರಣದಲ್ಲಿ ತಿಳಿಸಿದ್ದರೂ ವಿಶ್ವವಿದ್ಯಾನಿಲಯವು ಮೇಲಿನ ಷರತ್ತುಗಳನ್ನು ಉಲ್ಲಂಘಿಸಿ ಅರೆಕಾಲಿಕ/ಅತಿಥಿ ಉಪನ್ಯಾಸಕರು ಮತ್ತು ತಾತ್ಕಾಲಿಕ ಉಪನ್ಯಾಸಕರ ಅನುಭವವನ್ನು ಬೋಧನಾ ಅನುಭವವನ್ನಾಗಿ ಪರಿಗಣಿಸಿರುತ್ತದೆ.

ಸಿ.ಎ.ಜಿ ಕಂಡಿಕೆ:4.1.3.2(ಡಿ)ರಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಗ್ರಂಥಪಾಲಕರ ಒಂದು ಹುದ್ದೆಗೆ ಅರ್ಜಿಯನ್ನು ಆಹ್ವಾನಿಸಿ, ಸದರಿ ಹುದ್ದೆಗೆ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಗ್ರಂಥಪಾಲಕರಾಗಿ 13 ವರ್ಷಗಳು ಅಥವಾ ಕಾಲೇಜು ಗ್ರಂಥಪಾಲಕರಾಗಿ 18 ವರ್ಷಗಳ ಅನುಭವ ಹೊಂದಿರಬೇಕೆಂಬ ಯು.ಜಿ.ಸಿ ನಿಯಮಾವಳಿಗೆ ವಿರುದ್ಧವಾಗಿ ವಿಶ್ವವಿದ್ಯಾನಿಲಯವು 10 ವರ್ಷಗಳ ಅನುಭವದ ಅರ್ಹತೆಯನ್ನು ನಿಗದಿಪಡಿಸಿಕೊಂಡಿರುತ್ತದೆ. ಆದರೆ ಈ ಹುದ್ದೆಗೆ ಅಂತಿಮವಾಗಿ ಆಯ್ಕೆಯಾದ ಡಾ.ಕೆ.ಪ್ರಕಾಶ್ ಎಂಬುವವರು ಕೇವಲ 05 ವರ್ಷ ಮತ್ತು ಎಂಟು ತಿಂಗಳ ಅನುಭವವನ್ನು ಮಾತ್ರ ಹೊಂದಿದ್ದು, ಇದು ವಿಶ್ವವಿದ್ಯಾನಿಲಯವು ನಿರ್ದಿಷ್ಟಪಡಿಸಿದ್ದ 10 ವರ್ಷಗಳ ಅನುಭವಕ್ಕೂ ಕಡಿಮೆಯಿದ್ದುದನ್ನು ಗಮನಿಸಿ, ಈ ನೇಮಕಾತಿಯು ಯು.ಜಿ.ಸಿಯ ಅರ್ಹತಾ ಮಾನದಂಡಗಳಿಗೆ ವಿರುದ್ಧ ಹಾಗೂ ನಿಯಮಬಾಹಿರವಾಗಿರುತ್ತದೆ ಎಂದು ಆಕ್ಷೇಪಿಸಿರುತ್ತಾರೆ.

ಮೇಲ್ಕಂಡ ಸಹ ಪ್ರಾಧ್ಯಾಪಕರು ಮತ್ತು ಗ್ರಂಥಪಾಲಕರ ನೇಮಕಾತಿ ಸಂಬಂಧದ ಸಂಪೂರ್ಣ ಲೆಕ್ಕಪತ್ರ ದಾಖಲೆಗಳನ್ನು ಹಾಗೂ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಸಾಮಾನ್ಯ ಮತ್ತು ಸಾಮಾಜಿಕ ವಲಯಗಳ ವರದಿಯನ್ವಯ ಆಕ್ಷೇಪಿತ ಕಂಡಿಕೆ 4.1/2016–17ಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯವು ಅಗತ್ಯ ಕ್ರಮಕ್ಕೈಗೊಂಡು ಸರ್ಕಾರಕ್ಕೆ ಸಲ್ಲಿಸಿರುವ ವರದಿಗಳನ್ನು ಮತ್ತು ಪೂರಕ ದಾಖಲೆಗಳನ್ನು ಹಾಗೂ ಈ ಸಂಬಂಧ ನ್ಯಾಯಾಲಯದ ಪ್ರಕರಣಗಳಿದ್ದಲ್ಲಿ 2023–24ನೇ ಸಾಲಿನ ಅಂತ್ಯಕ್ಕೆ ನ್ಯಾಯಾಲಯದ ವಸ್ತುಸ್ಥಿತಿ ಮತ್ತು ನ್ಯಾಯಾಲಯದ ತೀರ್ಪಾಗಿದ್ದಲ್ಲಿ ಅದರ ದೃಢೀಕೃತ ಪ್ರತಿಗಳು, ನ್ಯಾಯಾಲಯದ ತೀರ್ಮ ವಿಶ್ವವಿದ್ಯಾನಿಲಯದ ವಿರುದ್ಧವಾಗಿದ್ದಲ್ಲಿ ಮೇಲಿನ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿರುವ ದಾಖಲೆಗಳು ಹಾಗೂ

ಪ್ರಸ್ತುತದವರೆವಿಗಿನ ನ್ಯಾಯಾಲಯದ ವಸ್ತುಸ್ಥಿತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:152/01.02.2025ರಲ್ಲಿ ಕೋರಲಾಗಿತ್ತು.

ವಿಶ್ವವಿದ್ಯಾನಿಲಯವು ಪ್ರತಿಕ್ರಿಯಿಸಿ ದಿನಾಂಕ:27.02.2025 ರಂದು "ಸಿ.ಎ.ಜಿ ಕಂಡಿಕೆ ಸಂಖ್ಯೆ: 4.1.3.1/2016–17ರಲ್ಲಿ ಪ್ರಸ್ತಾಪಿಸಿದ 22 ಮಂದಿ ತಾತ್ಕಾಲಿಕ ಉಪನ್ಯಾಸಕರನ್ನು ಸಕ್ರಮಗೊಳಿಸಿದ ಸಂಬಂಧ ಉಚ್ಛ ನ್ಯಾಯಾಲಯದಲ್ಲಿ ದಾಖಲಿಸಿದ್ದ ಪ್ರಕರಣ ಸಂಖ್ಯೆ:49437/2019/ದಿನಾಂಕ:18.02.2024ರಂದು ಮತ್ತು ಪ್ರಕರಣ ಸಂಖ್ಯೆ:51877/2019 (ದಿನಾಂಕ:22.03.2024) ರಂದು ಇತ್ಯರ್ಥಗೊಂಡಿರುತ್ತದೆ. ಹಾಗಾಗಿ ಈ ಸಹಾಯಕ ಪ್ರಾಧ್ಯಾಪಕರಿಗೆ ಎಲ್ಲಾ ಆರ್ಥಿಕ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ.

ಕಂಡಿಕೆ ಸಂಖ್ಯೆ:4.1.3.2(ಎ)(ಡಿ)ಕ್ಕೆ ವಿಶ್ವವಿದ್ಯಾನಿಲಯದ ದಿನಾಂಕ:18.10.2019ರ ಷೋಕಾಸ್ ನೋಟೀಸ್‌ಗೆ ಮೂವರು ಸಹ ಪ್ರಾಧ್ಯಾಪಕರುಗಳು ಲಿಖಿತ ಹೇಳಿಕೆಯನ್ನು ಸಲ್ಲಿಸದೇ (1) W.P.No 52225/2019 (S–RES) (2). W.P.No.52302/2019/(S–RES) & (3) W.P.No. 52325/2019 (S–RES)ರ ಪ್ರಕಾರ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ದಾಖಲಿಸಿರುತ್ತಾರೆ.

ಸಿ.ಎ.ಜಿ ಕಂಡಿಕೆ ಸಂಖ್ಯೆ:4.1.3.2(ಡಿ)ಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:12.09.2023ರ ಆದೇಶದಲ್ಲಿ "..... I am there fore of the view that the impluged orders and the subsequent show cause notices cannot be sustained and the same are therefore, set aside. The writ petitions are accordingly allowed...." ಎಂದು ಆದೇಶಿಸಿರುತ್ತದೆ.

ಮಾನ್ಯ ಉಚ್ಚನ್ಯಾಯಾಲಯದ ಆದೇಶ ಹಾಗೂ ವಕೀಲರ ಕಾನೂನು ಅಭಿಪ್ರಾಯದ ಮೇರೆಗೆ ಸದರಿ ಮೂವರು ಸಹ ಪ್ರಾಧ್ಯಾಪಕರುಗಳಿಗೆ ಮತ್ತು ಗ್ರಂಥಪಾಲಕರಿಗೆ ತಡೆಹಿಡಿಯಲಾಗಿದ್ದ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–1/183/2023–24, ದಿನಾಂಕ:05.02.2024 ರನ್ವಯ ಬಿಡುಗಡೆಗೊಳಿಸಲಾಗಿರುತ್ತದೆ.

ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನ ಹಾಗೂ ಕುಲಪತಿಗಳ ಅನುಮೋದನೆ ಮೇರೆಗೆ ಮೂವರು ಸಹ ಪ್ರಾಧ್ಯಾಪಕರುಗಳಿಗೆ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–1/598/2023–24. ದಿನಾಂಕ:19.02.2024 ರನ್ವಯ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡಲಾಗಿರುತ್ತದೆ ಎಂದು ಉತ್ತರ ನೀಡಿರುತ್ತಾರೆ ಹಾಗೂ ಮೊದಲನೇ ಪ್ರಕರಣಕ್ಕೆ ಸಂಬಂಧಿಸಿದಂತೆ ದೃಢೀಕರಿಸದ ನ್ಯಾಯಾಲಯದ ಅಪೂರ್ಣ ನೆರಳಚ್ಚು ಪ್ರತಿಯನ್ನು ಲಗತ್ತಿಸಿದ್ದು, ಇನ್ನೆರಡು ಪ್ರಕರಣಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಲಗತ್ತಿಸಿರುವುದಿಲ್ಲ.

ಮೊದಲನೇ ಪ್ರಕರಣದಲ್ಲಿ ನ್ಯಾಯಾಲಯದ ತೀರ್ಮ ವಿಶ್ವವಿದ್ಯಾನಿಲಯದ ವಿರುದ್ಧವಾಗಿರುವುದಾಗಿ ತಿಳಿದು ಬಂದಿದ್ದು, ಮೇಲಿನ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸುವಂತೆ ಲೆಕ್ಕಪರಿಶೋಧನೆಯು ಸೂಚಿಸುತ್ತದೆ. ಹಾಗೂ ಇನ್ನೆರಡು ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಪ್ರಸ್ತುತದ ವಸ್ತು ಸ್ಥಿತಿಯ ವಿವರಗಳನ್ನು ಅನುಪಾಲನಾ ವರದಿಯೊಂದಿಗೆ ಸಲ್ಲಿಸಲು ತಿಳಿಸಿದೆ.

20.11 ಆಡಳಿತಾತ್ಮಕ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ ಬೋಧಕ ವರ್ಗದವರ ಸೇವೆಯನ್ನು ಬಿಡುವು ರಹಿತ ಸೇವೆಯೆಂದು ಪರಿವರ್ತಿತ ರಜೆಯ ಸೌಲಭ್ಯವನ್ನು ವಿಸ್ತರಿಸಿರುವ ಸಂಬಂಧ ಪೂರಕ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :

ಕುಲಪತಿಯವರ ದಿನಾಂಕ:25.05.2023ರ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ಕಛೇರಿ ಆದೇಶ ಸಂಖ್ಯೆ:ಕರಾಮುವಿ/ಆಪ/ಸಿಬ್ಬಂದಿ-1/191/2023-24, ದಿನಾಂಕ: 15.06.2023ರಲ್ಲಿ ವಿವಿಧ ಅಧ್ಯಯನ ವಿಭಾಗಗಳ ಅಧ್ಯಾಪಕರುಗಳು ವಿಭಾಗದ ಶೈಕ್ಷಣಿಕ ಕಾರ್ಯದ ಜೊತೆಗೆ ಹೆಚ್ಚುವರಿಯಾಗಿ ಆಡಳಿತಾತ್ಮಕ/ವಿಶೇಷಾಧಿಕಾರಿ/ ನೋಡಲ್/ಸಂಯೋಜನಾಧಿಕಾರಿಗಳಾಗಿ ಯಾವುದೇ ಮಧ್ಯಂತರ ಹಾಗೂ ಬೇಸಿಗೆ ರಜೆಯನ್ನು ಉಪಯೋಗಿಸಿಕೊಳ್ಳದೇ ಕರ್ತವ್ಯ ನಿರ್ವಹಿಸಿರುವ ಹಾಗೂ ನಿರ್ವಹಿಸುತ್ತಿರುವ ನಿಯೋಜಿತ ಅವಧಿಗೆ ಪರಿವರ್ತಿತ ರಜೆಯನ್ನು **ಅನುಬಂಧ-19 ರಲ್ಲಿ** ವಿವರಿಸಿರುವಂತೆ ಒಟ್ಟು 28 ಬೋಧಕರಿಗೆ ಮಂಜೂರು ಮಾಡಿ ಆದೇಶಿಸಿದೆ.

ಈ ಮಂಜೂರಾತಿ ಆದೇಶದಂತೆ ಬೋಧಕರ ಸೇವಾವಹಿಗಳಲ್ಲಿ ಪರಿವರ್ತಿತ ರಜೆಯನ್ನು ಅವರ ರಜಾ ಲೆಕ್ಕಕ್ಕೆ ಜಮೆ ತೆಗೆದುಕೊಳ್ಳಲಾಗಿದ್ದು, ಈ ಸಂಬಂಧ ಈ ಕೆಳಕಂಡ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:94/01.01.2025ರಲ್ಲಿ ಕೋರಲಾಗಿತ್ತು.

ಅ) ನಿಯೋಜನಾ ಆದೇಶಗಳು.

ಆ) ಕರ್ತವ್ಯಕ್ಕೆ ವರದಿ ಮಾಡಿಕೊಂಡ ಪತ್ರಗಳು.

ಇ) ಹಾಜರಾತಿ ವಹಿಗಳು.

ಈ) ಸಂಬಂಧಪಟ್ಟ ಮೇಲಧಿಕಾರಿಗಳಿಂದ ಪಡೆದ ಕಾರ್ಯ ನಿರ್ವಹಣಾ ವರದಿ. (Work done Report)

ಉ) ಕರ್ತವ್ಯದಿಂದ ಬಿಡುಗಡೆಗೊಳಿಸಿದ ಆದೇಶದ ಪ್ರತಿಗಳು.

ಊ) ಸೇವಾವಹಿಗಳು ಮತ್ತು

ಋ) ವಿಶ್ವವಿದ್ಯಾನಿಲಯದಿಂದ ನಿಯೋಜನಾ ಆದೇಶವಾದಾಗಲೇ ಸೇವಾವಹಿಯಲ್ಲಿ ದಾಖಲಿಸದಿರುವ ಬಗ್ಗೆ ಸೂಕ್ತ ಸ್ಪಷ್ಟೀಕರಣಗಳು.

ಮೇಲ್ಕಂಡ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ನೀಡಿದರೂ ಸಹ ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ದಿನಾಂಕ:27.02.2025ರಂದು ಈ ಸಂಬಂಧ ದಿನಾಂಕ:20.01.2025 ರಂದು ಸುತ್ತೋಲೆ ಹೊರಡಿಸಿದ್ದು, ಹೆಚ್ಚುವರಿಯಾಗಿ ಕರ್ತವ್ಯ ನಿರ್ವಹಿಸಿರುವ ಸಂಬಂಧ ಮುಖ್ಯಸ್ಥರ ಸಹಿಯೊಂದಿಗೆ ಹಾಜರಾತಿ ಮತ್ತು ಕಾರ್ಯ ನಿರ್ವಹಣಾ ವರದಿಯನ್ನು ಸಂಗ್ರಹಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗುವುದು ಎಂದು ಉತ್ತರ ನೀಡಿರುತ್ತಾರೆ. ಪರಿವರ್ತಿತ ರಜೆಯನ್ನು ರಜಾ ಲೆಕ್ಕಕ್ಕೆ ಜಮೆ ತೆಗೆದುಕೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದ್ದು, ಮೇಲೆ ತಿಳಿಸಲಾದ ಎಲ್ಲಾ ಮೂಲ ದಾಖಲೆಗಳನ್ನು ಅನುಪಾಲನಾ ವರದಿಯೊಂದಿಗೆ ಸಲ್ಲಿಸಲು ತಿಳಿಸಿದೆ.

20.12 ಪ್ರೊ. ಶಂಕರನಾರಾಯಣಪ್ಪ, ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ಇವರ ಸಿಂಧುತ್ವ ಪ್ರಮಾಣ ಪತ್ರವನ್ನು ಹಾಜರುಪಡಿಸದಿರುವುದು.

ಮಾನ್ಯ ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ:KSAAD/AUD 3/MYSR (UNIV)/1/2021/1769/24.10.2024ರಲ್ಲಿ ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು), ಕರ್ನಾಟಕ ಸರ್ಕಾರ ಇವರ ಕಛೇರಿ ಪತ್ರ ಸಂಖ್ಯೆ:ಆಇ/235/ರಾಲೆಪ 2024, ದಿನಾಂಕ:23.10.2024ರಲ್ಲಿ ಶ್ರೀ ರವಿಕುಮಾರ್.ಎನ್, ಬಳ್ಳಾರಿ ರವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರೊ. ಶಂಕರನಾರಯಣಪ್ಪ ಇವರು ನೇಮಕಾತಿ ಸಮಯದಲ್ಲಿ ಸಿಂಧುತ್ವ ಪ್ರಮಾಣ ಪತ್ರವನ್ನು ನೀಡದಿರುವ ಬಗ್ಗೆ ದೂರಿನಲ್ಲಿ ಪ್ರಸ್ತಾಪಿಸಿರುತ್ತಾರೆ, ಈ ಸಂಬಂಧ ಲೆಕ್ಕಪರಿಶೋಧನೆಯಲ್ಲಿ ಪ್ರೊ.ಶಂಕರನಾರಾಯಣಪ್ಪ ಇವರ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:75/17.12.2024, 106/17.12.2024 ಮತ್ತು 106/02.01.2025, 178/10.02.2025ರಲ್ಲಿ ಕೋರಲಾಗಿತ್ತು.

1. ಯು.ಜಿ.ಸಿ–2010ರ ಮಾರ್ಗಸೂಚಿಯನ್ವಯ ವಿಶ್ವವಿದ್ಯಾನಿಲಯದಲ್ಲಿ ನೇಮಕಾತಿಗಾಗಿ ಹೊರಡಿಸಿದ ಅಧಿಸೂಚನೆಗಳು ಹಾಗೂ ಜಾಹೀರಾತು ದಾಖಲೆಗಳು.
2. ನೇಮಕಾತಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿದ್ದ ರೋಸ್ಟರ್ ನಿಯಮಗಳು.
3. ರೋಸ್ಟರ್‌ನ್ವಯ ನೇಮಕಾತಿ ಮಾಡಿದ ಪೂರಕ ದಾಖಲೆಗಳು.
4. ಪ್ರೊ. ಶಂಕರನಾರಾಯಣಪ್ಪ ರವರು ನೇಮಕಾತಿಗಾಗಿ ಸಲ್ಲಿಸಿದ್ದ ಮೂಲ ಜಾತಿ ಪ್ರಮಾಣ ಪತ್ರ ಮತ್ತು ಸಿಂಧುತ್ವ ಪ್ರಮಾಣ ಪತ್ರ.
5. ಪ್ರೊ. ಶಂಕರನಾರಾಯಣಪ್ಪ ರವರ ಸೇವಾವಹಿ ಹಾಗೂ ವೈಯಕ್ತಿಕ ಕಡತ.

ಆದರೆ ವಿಶ್ವವಿದ್ಯಾನಿಲಯದವರು ದಿನಾಂಕ:27.02.2025ರಂದು ನೀಡಿರುವ ತಮ್ಮ ಉತ್ತರದಲ್ಲಿ ಪ್ರೊ. ಶಂಕರನಾರಾಯಣಪ್ಪ ಇವರ ನೇಮಕಾತಿ ಸಮಯದಲ್ಲಿ ಸಲ್ಲಿಸಿರುವ ಅರ್ಜಿ ಹಾಗೂ ವೈಯಕ್ತಿಕ ದಾಖಲೆಗಳನ್ನು ಪರಿಶೀಲಿಸಲಾಗಿ ಮೂಲ ಸಿಂಧುತ್ವ ಪ್ರಮಾಣ ಪತ್ರ/ನಕಲು ಪ್ರತಿಯು ಲಭ್ಯವಿರುವುದಿಲ್ಲ. ಸದರಿಯವರಿಗೆ ದಿನಾಂಕ:27.01.2025 ರಂದು ಮತ್ತು ದಿನಾಂಕ:20.02.2025 ರಂದು ಟಿಪ್ಪಣಿಯನ್ನು ನೀಡಿ ತುರ್ತಾಗಿ ಮೂಲ ಸಿಂಧುತ್ವ ಪ್ರಮಾಣ ಪತ್ರವನ್ನು ಸಲ್ಲಿಸುವಂತೆ ತಿಳಿಸಲಾಗಿದ್ದರೂ ಪ್ರಸ್ತುತದವರೆವಿಗೂ ಸಿಂಧುತ್ವ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ ಎಂದು ಉತ್ತರ ನೀಡಿ, ಪರಿಶಿಷ್ಟ ಪಂಗಡ (ಕಣಿಯನ್) ಜಾತಿಯ ನಕಲು ಪ್ರಮಾಣ ಪತ್ರ ಪ್ರತಿಯನ್ನು ಲಗತ್ತಿಸಿರುತ್ತಾರೆ.

ವಿಶ್ವವಿದ್ಯಾನಿಲಯ ಹುದ್ದೆಗೆ ಆಯ್ಕೆಯಾದ ನಂತರ ನೇಮಕಾತಿ ಪೂರ್ವದಲ್ಲಿ ಅಭ್ಯರ್ಥಿಯ ಸಿಂಧುತ್ವ ಪ್ರಮಾಣ ಪತ್ರ ಸ್ವೀಕೃತಗೊಂಡ ನಂತರವೇ ನೇಮಕಾತಿ ಆದೇಶ ನೀಡಬೇಕಾಗಿದ್ದು, ವಿಶ್ವವಿದ್ಯಾನಿಲಯದ ನೇಮಕಾತಿ ಪ್ರಾಧಿಕಾರದ ಕರ್ತವ್ಯ ಹಾಗೂ ಜವಾಬ್ದಾರಿಯಾಗಿರುತ್ತದೆ. ಹಾಗಾಗಿ ಲೆಕ್ಕಪರಿಶೋಧನಾ ಅವಧಿಯಲ್ಲಿ ಮೂರು ವಿಚಾರಣಾ ಪತ್ರಗಳನ್ನು ನೀಡಿದರೂ ಸಹ ಸಿಂಧುತ್ವ ಪ್ರಮಾಣ ಪತ್ರವನ್ನು ಹಾಜರುಪಡಿಸದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ತೀವ್ರವಾಗಿ ಆಕ್ಷೇಪಿಸಲಾಗಿರುತ್ತದೆ. ಆದುದರಿಂದ, ಕೂಡಲೇ ಕ್ರಮವಹಿಸಿ, ಪ್ರೊ. ಶಂಕರನಾರಾಯಣಪ್ಪ ರವರಿಂದ ಅವರ ಸಿಂಧುತ್ವ ಪ್ರಮಾಣ ಪತ್ರವನ್ನು ಪಡೆದು ಅನುಪಾಲನಾ ವರದಿಯೊಂದಿಗೆ ಸಲ್ಲಿಸಲು ತಿಳಿಸಿದೆ.

20.13 ಬೋಧಕ ವರ್ಗದವರ ಬೋಧನಾ ಅವಧಿಯ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.

ವೇತನ ಪಾವತಿಯ ವಿವರ ಪಟ್ಟಿಯಂತೆ 2023–24ನೇ ಸಾಲಿನಲ್ಲಿ ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರು ಹೀಗೆ ಒಟ್ಟು 79 ಸಂಖ್ಯೆಗಳ ವಿವಿಧ ವಿಷಯವಾರು ಬೋಧನಾ ವರ್ಗದವರು ಕಾರ್ಯನಿರ್ವಹಿಸಿದ್ದು, ಇವರುಗಳಿಗೆ ನಿಗದಿಪಡಿಸಿದ ಬೋಧನೆಯ ಅವಧಿಗಳು ಹಾಗೂ ವಿವರಗಳನ್ನು ಸಂಬಂಧಿಸಿದ ವಿಶ್ವವಿದ್ಯಾನಿಲಯದ ಆದೇಶಗಳು ಹಾಗೂ ಪೂರಕ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:21/07.11.2024ರಂದು ನೀಡಲಾಗಿತ್ತು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ "Draft Statue relating to direct recruitment and Career advancement Scheme to Teachers and Librarians in the Karnataka State Open University" ಈ ಪರಿನಿಯಮಕ್ಕೆ ಮಾನ್ಯ ಕುಲಾಧಿಪತಿಯವರು ದಿನಾಂಕ:20.02.2019 ರಂದು ಅನುಮೋದನೆ ನೀಡಿದ್ದು, ಈ ಪರಿನಿಯಮದ ಕ್ರಮ ಸಂಖ್ಯೆ:20, 21, 21.1, 21.2 ಮತ್ತು 21.3 ರಲ್ಲಿ ಮತ್ತು 2006 ರ ಯುಜಿಸಿ ನಿಯಮಾವಳಿಯ ನಿಯಮ 15.1 ಮತ್ತು 15.2 ಗಳನ್ವಯ ಸಹಾಯಕ ಪ್ರಾಧ್ಯಾಪಕರಿಗೆ ವಾರಕ್ಕೆ 16 ಗಂಟೆ ಬೋಧನಾ ಅವಧಿಗಳನ್ನು ಹಾಗೂ ಸಹ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರುಗಳಿಗೆ ವಾರಕ್ಕೆ 14 ಗಂಟೆಗಳ ಬೋಧನಾ ಅವಧಿಗಳನ್ನು ನಿಗದಿಪಡಿಸಲಾಗಿದೆ ಮತ್ತು ಸರ್ಕಾರಿ ಆದೇಶ ಸಂಖ್ಯೆ:ಇಡಿ/333/ಯು.ಎನ್.ಇ/2016/ ಬೆಂಗಳೂರು, ದಿನಾಂಕ:18.01.2017ರಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಪತಿಗಳು ಒಂದು ತಿಂಗಳಲ್ಲಿ ಕನಿಷ್ಠ 8 ಗಂಟೆಗಳ ಕಾಲಾವಧಿಯನ್ನು ಹಾಗೂ ಕುಲಸಚಿವರು (ಆಡಳಿತ ಮತ್ತು ಮೌಲ್ಯಮಾಪನ)ಗಳು ಒಂದು ತಿಂಗಳಲ್ಲಿ ಕನಿಷ್ಠ 16 ಗಂಟೆಗಳ ಕಾಲಾವಧಿಯನ್ನು ಬೋಧನೆಗಾಗಿ ಮೀಸಲಿಡಿಸಲು ಆದೇಶಿಸಲಾಗಿರುತ್ತದೆ.

ಮೇಲ್ಕಂಡ ಎಲ್ಲಾ ನಿರ್ದೇಶನಗಳನ್ವಯ ಕುಲಪತಿಯವರು, ಕುಲಸಚಿವರು (ಆಡಳಿತ ಮತ್ತು ಮೌಲ್ಯಮಾಪನ), ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರುಗಳಿಗೆ ನಿಗದಿಪಡಿಸಿರುವ ಬೋಧನಾ ಅವಧಿ ಹಾಗೂ ನಿರ್ವಹಿಸಿದ ಕಾರ್ಯಭಾರದ ದಾಖಲೆಗಳನ್ನು ಹಾಗೂ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದ ಕಾರಣ ಯುಜಿಸಿ ನಿಯಮಾವಳಿಗಳಂತೆ ಬೋಧಕರು

ಕಾರ್ಯನಿರ್ವಹಿಸಿರುವ ಬಗ್ಗೆ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ಈ ಸಂಬಂಧದ ಎಲ್ಲಾ ದಾಖಲೆಗಳನ್ನು ಅನುಪಾಲನಾ ವರದಿಯೊಂದಿಗೆ ಸಲ್ಲಿಸಲು ತಿಳಿಸಿದೆ.

20.14 ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿರುವ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿನ ನ್ಯೂನತೆಗಳು.

2023–24ನೇ ಸಾಲಿನಲ್ಲಿ 58 ಸಹಾಯಕ ಪ್ರಾಧ್ಯಾಪಕರನ್ನು ಗುತ್ತಿಗೆ ಆಧಾರದ ಮೇಲೆ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಗಳಿಗೆ ನೇಮಕ ಮಾಡಿಕೊಳ್ಳಲಾಗಿದ್ದು, ನೇಮಕಾತಿ ಪ್ರಕ್ರಿಯೆಯಲ್ಲಿ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತವೆ.

01. ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ145ಯು.ಎನ್.ಇ.2021,ದಿನಾಂಕ:06.04.2021ರಂತೆ ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ತಾತ್ಕಾಲಿಕವಾಗಿ/ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಭರ್ತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯ ಅನುಮತಿಯನ್ನು ಪಡೆಯುವುದು ಕಡ್ಡಾಯವಾಗಿದ್ದು, ಈ ನೇಮಕಾತಿಗೆ ಆರ್ಥಿಕ ಇಲಾಖೆಯ ಅನುಮತಿ ಪಡೆದಿರುವುದಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

02. ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ ಸಹಾಯಕ ಪ್ರಾಧ್ಯಾಪಕರ ಹುದ್ದೆ, ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ವಿವರಗಳು ಹಾಗೂ ಖಾಲಿಯಿರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಎದುರಾಗಿ ಇವರುಗಳನ್ನು ನೇಮಕ ಮಾಡಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸಿರುವುದಿಲ್ಲ.

03. 18 ಜುಲೈ 2018ರ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದವರ ಅಧಿಸೂಚನೆ ಸಂ: ಎಫ್1–2/2017/ಇಸಿಪಿಎಸ್‌ದಲ್ಲಿ ಸೂಚಿಸಿರುವ ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳ ಬೋಧಕರು ಮತ್ತು ಇತರೆ ಶೈಕ್ಷಣಿಕ ಸಿಬ್ಬಂದಿಗಳ ನೇಮಕಾತಿಗೆ ಕನಿಷ್ಠ ಅರ್ಹತೆಗಳು ಮತ್ತು ಉನ್ನತ ಶಿಕ್ಷಣದಲ್ಲಿ ಗುಣಮಟ್ಟ ಸಂರಕ್ಷಣೆಯ ನಿಯಮಾವಳಿಗಳನ್ನು ಅನುಸರಿಸಿ ನೇಮಕಾತಿ ಮಾಡಿರುವ ಬಗ್ಗೆ ದಾಖಲೆಗಳನ್ನು ಲೆಕ್ಕತಪಸಣೆಗೆ ಹಾಜುಪಡಿಸಿರುವುದಿಲ್ಲ.

04. ನೇಮಕಗೊಂಡ ಬೋಧಕರುಗಳಿಗೆ ಮಾಹೆಯಾನ ರೂ.50,000/–ಗಳ ವೇತನ ನಿಗದಿಪಡಿಸಿದ್ದು, ವೇತನ ನಿಗದಿಗೆ ಅನುಸರಿಸಿರುವ ಮಾನದಂಡದ ವಿವರಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸಿರುವುದಿಲ್ಲ.

05. ನೇಮಕಾತಿಯಲ್ಲಿ ರೋಸ್ಟರ್ ನಿಯಮಗಳನ್ನು ಅನುಸರಿಸಿರುವ ಬಗ್ಗೆ ದಾಖಲೆಗಳನ್ನು ಲೆಕ್ಕ ತಪಾಸಣೆಗೆ ಹಾಜುಪಡಿಸಿರುವುದಿಲ್ಲ

ಮೇಲಿನ ಅಂಶಗಳಿಗೆ ವಿವರಣೆ ಕೋರಿ ನೀಡಿದ ಎಚ್ಚಾರಣಾ ಪತ್ರದ ಸಂಖ್ಯೆ.77/26.12.2024ಕ್ಕೆ, ವಿಶ್ವವಿದ್ಯಾನಿಲಯದವರು ಉತ್ತರಿಸಿ ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗ ಅವಶ್ಯವಿರುವ ಸಹಾಯಕ ಪ್ರಾಧ್ಯಾಪಕರುಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗಿರುತ್ತದೆ. ಯು.ಜಿ.ಸಿ, ಓ.ಡಿ.ಎಲ್ ಮತ್ತು ಓ.ಎಲ್ ಮಾರ್ಗಸೂಚಿಯಲ್ಲಿ ಪ್ರತಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಲು ಸಂಬಂಧಪಟ್ಟ ವಿಭಾಗದಲ್ಲಿ ಇಂತಿಷ್ಟೇ ಬೋಧಕ ಸಿಬ್ಬಂದಿಗಳು ಇರಬೇಕು ಎಂಬ ನಿಯಮವಿರುತ್ತದೆ. ಈ ಸಂಬಂಧ ವಿಶ್ವವಿದ್ಯಾನಿಲಯದ ಡೀನ್(ಶೈಕ್ಷಣಿಕ)ರವರು ವಿಭಾಗದ ಮುಖ್ಯಸ್ಥರುಗಳಿಂದ ಅವಶ್ಯವಿರುವ ಸಿಬಂದಿಗಳ ಮಾಹಿತಿಯನ್ನು ಪಡೆದು ದಿನಾಂಕ:25.06.2021ರಂದು ನಡೆದ ಶೈಕ್ಷಣಿಕ ಮಂಡಳಿಯ ಸಭೆಯಲ್ಲಿ ಹಾಗೂ ದಿನಾಂಕ:03.07.2021 ರಂದು ನಡೆದ 165ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸಹಾಯಕ ಪ್ರಾಧ್ಯಾಪಕರುಗಳನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿರುತ್ತದೆ ಎಂದು ಅನುಪಾಲನಾ ವರದಿಯಲ್ಲಿ ತಿಳಿಸಿರುತ್ತಾರೆ. ವಿಶ್ವವಿದ್ಯಾನಿಲಯಕ್ಕೆ 99 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 65 ಸಹಾಯಕ ಪ್ರಾಧ್ಯಾಪಕರು ಕರ್ತವ್ಯ ನಿರ್ವಹಿಸುತ್ತಿದ್ದು, 34 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು ಮಾತ್ರ ಖಾಲಿ ಉಳಿದಿರುತ್ತವೆ. ಆದರೆ ವಿಶ್ವವಿದ್ಯಾನಿಲಯದವರು 58 ಸಹಾಯಕ ಪ್ರಾಧ್ಯಾಪಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ" ಎಂದು ತಿಳಿಸಿರುತ್ತಾರೆ. ಹೀಗೆ 34 ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ 58 ಹುದ್ದೆಗಳಿಗೆ ನೇಮಕ ಮಾಡುವ ಮೂಲಕ 24 ಹುದ್ದೆಗಳನ್ನು ಹೆಚ್ಚುವರಿಯಾಗಿ ನೇಮಕ ಮಾಡಿಕೊಂಡಿರುವುದು ಕಂಡು ಬಂದಿರುತ್ತದೆ. ಇದಲ್ಲದೆ ನೇಮಕ ಮಾಡಿರುವ ಎಲ್ಲಾ ಕೋರ್ಸ್‌ಗಳು 2023–24ನೇ ಸಾಲಿನಲ್ಲಿ ಪ್ರಾರಂಭವಾಗಿರುವುಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ವಿಶ್ವವಿದ್ಯಾನಿಲಯದವರು ಹಾಜರುಪಡಿಸಿರುವುದಿಲ್ಲ.

ವಿಶ್ವವಿದ್ಯಾನಿಲಯವು ದೂರ ಶಿಕ್ಷಣದ ಮೂಲಕ ಕೋರ್ಸುಗಳನ್ನು ನಡೆಸುತ್ತಿದ್ದು, ಎಲ್ಲಾ ಶೈಕ್ಷಣಿಕ ವರ್ಷಗಳಲ್ಲಿ ವಿದ್ಯಾರ್ಥಿಗಳ ಪ್ರವೇಶದ ಸಂಖ್ಯೆ ಏಕಪ್ರಕಾರವಾಗಿರುವುದಿಲ್ಲವಾದ್ದರಿಂದ ಕೋರ್ಸುಗಳು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ನೇಮಕ ಮಾಡಿಕೊಳ್ಳುವ ಬದಲಿಗೆ ಆಯಾ ವರ್ಷಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಕಾರ್ಯಭಾರವನ್ನು ಲೆಕ್ಕಹಾಕಿ ಅಗತ್ಯ ಸಿಬ್ಬಂದಿಯನ್ನು ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ ಹುದ್ದೆಗಳ ಸಂಖ್ಯೆಯ ಮಿತಿಯೊಳಗೆ ನೇಮಕ ಮಾಡಿಕೊಂಡಿದ್ದಲ್ಲಿ ವಿಶ್ವವಿದ್ಯಾನಿಲಯಕ್ಕೆ ಆಗಿರುವ ಈ ಅನಗತ್ಯ ವೆಚ್ಚವನ್ನು ತಪ್ಪಿಸಬಹುದಾಗಿತ್ತು ಎಂದು 2022–23ನೇ ಸಾಲಿನ ಕಂಡಿಕೆ ಸಂಖ್ಯೆ:20.13ರಲ್ಲಿ ರಲ್ಲಿಯೂ ಆಕ್ಷೇಪಿಸಿದ್ದರೂ ಯಾವುದೇ ಕ್ರಮವಹಿಸದೇ 2023–24ನೇ ಸಾಲಿಗೆ 58 ಸಹಾಯಕ ಪ್ರಾಧ್ಯಾಪಕರಿಗೆ ಪಾವತಿಸಿರುವ ವೇತನದ ಒಟ್ಟು ಮೊತ್ತ **ರೂ.3,19,94,119/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ವಿವರವನ್ನು **ಅನುಬಂಧ–20ರಲ್ಲಿ** ವಿವರಿಸಿದೆ.

21. ಬೋಧಕೇತರ ಸಿಬ್ಬಂದಿಗಳ ವೇತನ ಮತ್ತು ಭತ್ಯೆಗಳು

21.1 ಕ.ರಾ.ಮು.ವಿ ದೃಶ್ಯ ವಿಭಾಗದಲ್ಲಿ ವಿಡೀಯೋ ಚಿತ್ರೀಕರಣಕ್ಕಾಗಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿರುವ ತಾತ್ಕಾಲಿಕ ನೌಕರರ ನೇಮಕಾತಿಯಲ್ಲಿನ ನ್ಯೂನತೆಗಳು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ದೃಶ್ಯ ವಿಭಾಗಕ್ಕೆ ವಿವಿಧ ವೃಂದದ 09ಹಾಗೂ ಶ್ರವ್ಯ ವಿಭಾಗಕ್ಕೆ 02 ಸಿಬ್ಬಂದಿಗಳನ್ನು ಗುತ್ತಿಗೆ (Contract) ಆಧಾರದ ಮೇಲೆ ನೇಮಕಮಾಡಿಕೊಂಡು **ಅನುಬಂಧ–21**ರಲ್ಲಿ ವಿವರಿಸಿರುವಂತೆ 2023–24ನೇ ಸಾಲಿನಲ್ಲಿ ವೇತನ ಒಟ್ಟು ರೂ.37,28,414/– ವೇತನವನ್ನು ಪಾವತಿಸಲಾಗಿರುತ್ತದೆ.

ಸದರಿ ನೇಮಕಾತಿಗೆ ಸಂಬಂಧಿಸಿದಂತೆ ಹಾಜರುಪಡಿಸಲಾದ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ನ್ಯೂನತೆಗಳು ಕಂಡು ಬಂದಿರುತ್ತದೆ.

1. ಮುಕ್ತ ವಿಶ್ವವಿದ್ಯಾನಿಲಯದ ದೃಶ್ಯ ವಿಭಾಗಕ್ಕೆ ಗುತ್ತಿಗೆ ಆಧಾರದ ಮೇಲೆ ನೇಮಕಮಾಡಿಕೊಂಡಿರುವ ಹುದ್ದೆಗಳು ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮಂಜೂರಾದ ಹುದ್ದೆಗಳಾಗಿರುವುದಿಲ್ಲ.

2. ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ145ಯುಎನ್‌ಇ2021 ಬೆಂಗಳೂರು ದಿ:06.04.2021 ರಂತೆ ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ತಾತ್ಕಾಲಿಕವಾಗಿ/ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಮೂಲಕ ಆರ್ಥಿಕ ಇಲಾಖೆಯ ಅನುಮತಿಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೆ ಈ ನೇಮಕಾತಿಗೆ ಸರ್ಕಾರದಿಂದ ಅನುಮತಿ ಪಡೆದಿರುವುದಿಲ್ಲ.

3. ದೃಶ್ಯ ವಿಭಾಗಕ್ಕೆ ಗುತ್ತಿಗೆ(Contract) ಆಧಾರದ ಮೇಲೆ ನೇಮಕಗೊಂಡಿರುವ ಸಿಬ್ಬಂದಿಗಳು ವಿಶ್ವವಿದ್ಯಾನಿಲಯದಿಂದ ನಿಗದಿಪಡಿಸಿರುವ ವಿದ್ಯಾರ್ಹತೆ ಹೊಂದಿರುವುದಕ್ಕೆ ಸಂಬಂಧಿಸಿದ ಪೂರ್ಣ ಪ್ರಮಾಣದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

4. ಗುತ್ತಿಗೆ(Contract) ಆಧಾರದ ಮೇಲೆ ನೇಮಕಗೊಂಡಿರುವ ಸಿಬ್ಬಂದಿಗಳಿಗೆ ಮಾಹೆಯಾನ ವೇತನ ನಿಗದಿಗೆ ಅನುಸರಿಸಿರುವ ಮಾನದಂಡದ ವಿವರಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸಿರುವುದಿಲ್ಲ.

5. ಗುತ್ತಿಗೆ(Contract)ಆಧಾರದ ಮೇಲೆದೃಶ್ಯ ವಿಭಾಗಕ್ಕೆ ನೇಮಕಗೊಂಡಿರುವ ಸಿಬ್ಬಂದಿಗಳಿಗೆ ಕಾರ್ಯಕ್ರಮಗಳ ಗುರಿ (Target) ನಿಗದಿಪಡಿಸಿರುವುದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಿರುವುಲ್ಲ.

ಮೇಲಿನ ಅಂಶಗಳಿಗೆ ಸಂಬಂಧಿಸಿದಂತೆ ವಿವರಣೆಯೊಂದಿಗೆ ದಾಖಲೆಗಳನ್ನು ಹಾಜರುಪಡಿಸಲು ಕೋರಿ ನೀಡಲಾದ ಲೆಕ್ಕತಪಾಸಣಾ ವಿಚಾರಣಾ ಪತ್ರಸಂಖ್ಯೆ:89/31.12.2024ಗೆ ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿರುವುದಿಲ್ಲ. ಆದುದರಿಂದ ನೇಮಕಾತಿ ಮಾಡಿರುವ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ 2023–24ನೇ ಸಾಲಿನಲ್ಲಿ ಪಾವತಿಸಿರುವ ವೇತನ ಮೊತ್ತ (ದೃಶ್ಯ ವಿಭಾಗ) ರೂ.33,82,248/– ಹಾಗೂ (ಶ್ರವ್ಯ ವಿಭಾಗ) ರೂ.3,46,166/– ಒಟ್ಟಾರೆ **ರೂ.37,28,414/–ಗಳನ್ನು** ನೇಮಕಾತಿ ಪ್ರಕ್ರಿಯೆಗೆ ಕಾರಣರಾದ ಕುಲಪತಿಗಳು, ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳಿಂದ **ವಸೂಲಿಸಲು ಸೂಚಿಸಿದೆ.**

21.2 ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಖಾಲಿಯಿರದ ಬೋಧಕೇತರ ಹುದ್ದೆಗಳಿಗೆ ತಾತ್ಕಾಲಿಕ ನೌಕರರುಗಳನ್ನು ನೇಮಕ ಮಾಡಿಕೊಂಡು ರೂ.10,37,85,322/–ಗಳಷ್ಟು ವೇತನ ಪಾವತಿಸಿರುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಸಾಮಾನ್ಯ ರೆವಿನ್ಯೂ ಖಾತೆಯ ವೆಚ್ಚಕ್ಕೆ ಸಂಬಂಧಿಸಿದ ವೋಚರ್‌ಗಳನ್ನು ಪರಿಶೀಲಿಸಲಾಗಿ ತಾತ್ಕಾಲಿಕ ಆಧಾರದ ಮೇಲೆ 722 ಬೋಧಕೇತರ ನೌಕರರನ್ನು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ನೇಮಕ ಮಾಡಿಕೊಂಡು ಒಟ್ಟು ರೂ.**10,37,85,322/–**ಗಳ ವೇತನ ಪಾವತಿಸಲಾಗಿರುವುದು ಕಂಡು ಬಂದಿರುತ್ತದೆ. ತಾತ್ಕಾಲಿಕ ನೌಕರರಿಗೆ ಪಾವತಿಸಿರುವ ವೇತನದ ವಿವರಗಳನ್ನು **ಅನುಬಂಧ–22** ರಲ್ಲಿ ನೀಡಿದೆ. ವಿಶ್ವವಿದ್ಯಾನಿಲಯದವರು ಸಲ್ಲಿಸಿದ ಮಾಹಿತಿಯನುಸಾರ ವಿಶ್ವವಿದ್ಯಾನಿಲಯಕ್ಕೆ ಮಂಜೂರಾಗಿರುವ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿಯಿರುವ ಬೋಧಕೇತರ ಹುದ್ದೆಗಳ ವಿವರಗಳನ್ನು **ಅನುಬಂಧ–22** (ಎ) ರಲ್ಲಿ ವಿವರಿಸಲಾಗಿದೆ. ಅದರ ಘೋಷ್ವಾರೆಯ ವಿವರ ಈ ಕೆಳಕಂಡಂತಿದೆ.

ಮಂಜೂರಾದ ಹುದ್ದೆಗಳು	ಭರ್ತಿಯಾಗಿರುವ ಹುದ್ದೆಗಳು	ಖಾಲಿ ಇರುವ ಹುದ್ದೆಗಳು
575	**272**	**303**

ಮೇಲಿನ ಕೋಷ್ಟಕವನ್ನು ಅವಲೋಕಿಸಿದಾಗ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 145 ಯುಎನ್‌ಇ 2021 ಬೆಂಗಳೂರು ದಿ:06.04.2021ರಂತೆ ಖಾಲಿ ಇರುವ 303 ಬೋಧಕೇತರ ಹುದ್ದೆಗಳಲ್ಲಿ 248 ಗ್ರೂಪ್ ಸಿ ಮತ್ತು ಡಿ ಹುದ್ದೆಗಳಿಗೆ ಮಾತ್ರ ಆರ್ಥಿಕ ಇಲಾಖೆಯಿಂದ ಅನುಮತಿಯನ್ನು ಪಡೆದು ತಾತ್ಕಾಲಿಕವಾಗಿ ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಳ್ಳಬೇಕಾಗಿರುತ್ತದೆ. ಆದರೆ 2023–24ನೇ ಸಾಲಿನ ಮಾರ್ಚ್ ಅಂತ್ಯಕ್ಕೆ ಆರ್ಥಿಕ ಇಲಾಖೆಯ ಅನುಮತಿಯನ್ನು ಪಡೆಯದೇ 722 ತಾತ್ಕಾಲಿಕ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ.

ಮುಂದುವರೆದು ಈ ಕೆಳಗೆ ವಿವರಿಸಿರುವಂತೆ ವಿಶ್ವವಿದ್ಯಾನಿಲಯಕ್ಕೆ ಮಂಜೂರಾಗಿರುವ ಹುದ್ದೆಗಳಲ್ಲದೇ ಹಾಗೂ ವ್ಯಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅನುಮೊಧನೆಯಾಗದ ಹುದ್ದೆಗಳಿಗೆ ಸರ್ಕಾರದಿಂದ ಮಂಜೂರಾತಿ ಪಡೆಯದೇ ಹೋಸದಾಗಿ ಹುದ್ದೆಗಳನ್ನು ಸೃಜಿಸಿ ತಾತ್ಕಾಲಿಕವಾಗಿ ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಂಡು ವೇತನ ಪಾವತಿಸಲಾಗಿದೆ, ಹೀಗಾಗಿ ಮಂಜೂರಾದ ಹುದ್ದೆಗಳಿಗಿಂತ ಹೆಚ್ಚುವರಿ ಹುದ್ದೆಗಳನ್ನು ನೇಮಕ ಮಾಡಿಕೊಳ್ಳುವ ಮೂಲಕ ವಿಶ್ವವಿದ್ಯಾನಿಲಯಕ್ಕೆ ಅನಗತ್ಯ ಆರ್ಥಿಕ ಹೊರೆಯನ್ನುಂಟು ಮಾಡಲಾಗಿದೆ.

ಎಸ್ಟೇಟ್ ಅಧಿಕಾರಿಯ ಸಲಹೆಗಾರರು	1
ಸಹಾಯಕ ಇಂಜಿನಿಯರ್ (ವಾಹನ ಉಸ್ತುವಾರಿ)	1
ಕ್ಯಾಮರಾ ವ್ಯಕ್ತಿ	1
ಸಲಹೆಗಾರರು (ಅನೌನ್ಸರ್–ಕಂ–ತಾಂತ್ರಿಕ ಸಹಾಯಕರು)	2
ಸಂಪಾದಕರು (ಸಿ.ಜಿ.ವರ್ಕ್)	1
ಸಂಪಾದಕರು (ವಿಡಿಯೋ ಸಂಪಾದಕರು) (ಕಂಪ್ಯೂಟರ್ ಅನಿಮೇಟರ್)	1
ಎಸ್ಟೇಟ್ ಸಹಾಯಕರು	1
ವ್ಯಾಯಾಮ ಬೋಧಕರು	1

ಗಣಕಯಂತ್ರ ಪ್ರಯೋಗಾಲಯದ ಬೋಧಕರು	1
ಪ್ರಯೋಗಾಲಯದ ಸಹಾಯಕರು	8
ಸಾರ್ವಜನಿಕ ಸಂಪರ್ಕ ಅಧಿಕಾರಿ	1
ತೋಟಗಾರರು	25
ತಾಂತ್ರಿಕ ಸಹಾಯಕರು	23
ತಾಂತ್ರಿಕ ವ್ಯಕ್ತಿ	1

ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 145 ಯುಎನ್‌ಇ 2021 ಬೆಂಗಳೂರು, ದಿನಾಂಕ: 06.04.2021ರಂತೆ ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ತಾತ್ಕಾಲಿಕ ಆಧಾರದ ಮೇಲೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರದ ಅನುಮತಿಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಅಲ್ಲದೆ ಇಂತಹ ನೇಮಕಾತಿಗಳನ್ನು ಖಾಲಿ ಹುದ್ದೆಗಳಿಗೆ ಎದುರಾಗಿ ನಿಯಮಾನುಸಾರ ಖಾಯಂ ಹುದ್ದೆಗಳಿಗೆ ಅನುಸರಿಸುವ ನೇಮಕಾತಿ ಪ್ರಕ್ರಿಯೆಯನ್ನು ಅನುಸರಿಸಿ ನೇಮಕ ಮಾಡಬೇಕಾಗಿರುತ್ತದೆ. ಆದರೆ ನೇಮಕಾತಿ ನಿಯಮವನ್ನು ಅನುಸರಿಸಿದೆ ಹಾಗೂ ಸರ್ಕಾರದ ಅನುಮತಿಯನ್ನು ಪಡೆದು ತಾತ್ಕಾಲಿಕ ಬೋಧಕೇತರ ನೌಕರರನ್ನು ನೇಮಕಾತಿ ಮಾಡಿರುವ ಹಾಗೂ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿರುವ ಸಿಬ್ಬಂದಿಗಳಿಗೆ ಕಾರ್ಯಭಾರ ಹಂಚಿಕೆ ಮಾಡಿರುವ ಆದೇಶವನ್ನು ಮತ್ತು ವೇತನ ನಿಗದಿ ಪಡಿಸಲು ಅನುಸರಿಸಿರುವ ಮಾನದಂಡದ ವಿವರಗಳ ಬಗ್ಗೆ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:99/01.01.2024ರಲ್ಲಿ ನೀಡಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಕೋರಿರುವ ವಿವರಗಳ ಬಗ್ಗೆ ಯಾವುದೇ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ಆದರೆ ವಿಶ್ವವಿದ್ಯಾನಿಲಯದಿಂದ ನೀಡಲಾದ ಅನುಪಾಲನಾ ವರದಿಯಲ್ಲಿ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಅಗತ್ಯ ತಾತ್ಕಾಲಿಕ ಸಿಬ್ಬಂದಿಗಳನ್ನು ಕರಾಮುವಿ ಕಾಯ್ದೆ–1992ರ ಎರಡನೇ ಅನುಸೂಚಿಯ ಮೊದಲನೇ ಪರಿನಿಯಮ–2(9)(iii) ರಲ್ಲಿ ಮಾನ್ಯ ಕುಲಪತಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಆರು ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಅಥವಾ ಇವೆರಡರಲ್ಲಿ ಯಾವುದು ಮೊದಲು ಘಟಿಸುವುದೊ ಅಲ್ಲಿಯವರೆಗೆ ಸದರಿ ತಾತ್ಕಾಲಿಕ ನೇಮಕಾತಿಯನ್ನು ಮಾಡಲಾಗಿರುತ್ತದ. ಹಾಗೂ ಸದರಿಯವರುಗಳನ್ನು ಯಾವುದೇ ಮಂಜೂರಾದ ಖಾಯಂ ಹುದ್ದೆಗಳಿಗೆ ಎದುರಾಗಿ ನೇಮಕ ಮಾಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದಾಯನಿಲಯ ಕಾಯ್ದೆಯ ಪ್ರಕರಣ–23ರ ಅನ್ವಯ ಹೊರಡಿಸಲಾದ ಪರಿನಿಯಮಗಳ ಅನುಸೂಚಿ–2ರಲ್ಲಿನ ಪರಿನಿಯಮ–2(9)(iii)ರಲ್ಲಿ ಉಪಕುಲಪತಿಗಳು ವಿಶ್ವವಿದ್ಯಾನಿಲಯದ ಕಾರ್ಯ ನಿರ್ವಹಣೆಗೆ ಅವಶ್ಯಕವೆಂದು ಪರಿಗಣಿಸಬಹುದಾದ ಅಂಥ ವ್ಯಕ್ತಿಗಳನ್ನು ಒಂದು ಬಾರಿಗೆ ಆರು ತಿಂಗಳಿಗೆ ಮೀರದ ಅವಧಿಗೆ ಅಲ್ಪಾವಧಿ ನೇಮಕಾತಿಗಳನ್ನು ಮಾಡುವುದು ಎಂದಿರುತ್ತದೆ. ಅಂದರೆ ನಿರ್ದಿಷ್ಟ ಕಾರ್ಯ ನಿರ್ವಹಣೆಗಾಗಿ ಸೀಮಿತವಾದ 6 ತಿಂಗಳ ಅವಧಿಗೆ ಮಾತ್ರ ನೇಮಕಾತಿ ಮಾಡಿಕೊಳ್ಳಬಹುದೆಂದು ಇರುವ ಪರಿನಿಯಮದ ಆಶಯವನ್ನು ಇಲ್ಲಿ ತಪ್ಪಾಗಿ ಅರ್ಥೈಸಲಾಗಿರುತ್ತದೆ. ವಿಶ್ವವಿದ್ಯಾನಿಲಯವು ದೂರ ಶಿಕ್ಷಣ ಪದ್ಧತಿಯಲ್ಲಿ ಕೋರ್ಸುಗಳನ್ನು ನಡೆಸುತ್ತಿರುವುದರಿಂದ ಹೆಚ್ಚು ಸಿಬ್ಬಂದಿಯ ಅವಶ್ಯಕತೆ ಇರುವುದಿಲ್ಲ. ಯಾವ

ಕಾರ್ಯನಿರ್ವಹಣೆಗೆ ಈ ನೇಮಕಾತಿಯ ಅವಶ್ಯಕತೆಯಿತ್ತು ಎಂಬುದಕ್ಕೆ ಕೂಡ ವಿಶ್ವವಿದ್ಯಾನಿಲಯದವರು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಅಲ್ಲದೆ 6 ತಿಂಗಳು ಮುಗಿದ ನಂತರವೂ ಅದೇ ಅಭ್ಯರ್ಥಿಗಳನ್ನು ಮುಂದುವರೆಸುವ ಮೂಲಕ ಮತ್ತು ಹೊಸದಾಗಿ ಸಿಬ್ಬಂದಿಗಳನ್ನು ನೇಕಮಾಡಿಕೊಳ್ಳೂವ ಮೂಲಕ ವಿಶ್ವವಿದ್ಯಾನಿಲಯಕ್ಕೆ ಅನಗತ್ಯವಾದ ಆರ್ಥಿಕ ಹೊರೆಯನ್ನು ಉಂಟು ಮಾಡಲಾಗುತ್ತಿದೆ. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 145ಯುಎನ್ಇ 2021 ಬೆಂಗಳೂರು ದಿ:06.04.2021ರಂತೆ ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ತಾತ್ಕಾಲಿಕವಾಗಿ/ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರದ ಅನುಮತಿಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೆ ಈ ನೇಮಕಾತಿಗೆ ಸರ್ಕಾರದಿಂದ ಅನುಮತಿ ಪಡೆದಿರುವುದಿಲ್ಲ. ಅಲ್ಲದೆ ಸರ್ಕಾರದ ಪತ್ರ ಸಂ: ಇಡಿ 145 ಯುಎನ್ಇ 2021, ದಿನಾಂಕ:02–09–2021ರಲ್ಲಿ ವಿಶ್ವವಿದ್ಯಾನಿಲಯಗಳು ಸರ್ಕಾರದ ಪೂರ್ವಾನುಮೋದನೆ ಪಡೆಯದೆ ಹಾಗೂ ಮಂಜೂರಾದ ಹುದ್ದೆಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ತಾತ್ಕಾಲಿಕ/ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಂಡಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ಕೂಡಲೇ ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸುವಂತೆ ಸೂಚಿಸಿದ್ದರೂ ಕೂಡ ವಿಶ್ವವಿದ್ಯಾನಿಲಯದಿಂದ ಸರ್ಕಾರದ ನಿರ್ದೇಶನ ಪಾಲನೆಯಾಗಿರುವುದಿಲ್ಲ. ಈ ಬಗ್ಗೆ ಹಿಂದಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ:23.20ರಲ್ಲಿ ಆಕ್ಷೇಪಿಸಿದ್ದೂ ವಿಶ್ವವಿದ್ಯಾನಿಲಯವು ಯಾವುದೇ ಕ್ರಮ ವಹಿಸಿರುವುದಿಲ್ಲ.

ಹೀಗಾಗಿ ಸರ್ಕಾರದ ಅನುಮತಿಯನ್ನು ಪಡೆಯದೆ ಮತ್ತು ಹುದ್ದೆಗಳು ಖಾಲಿ ಇರದಿದ್ದರೂ ತಾತ್ಕಾಲಿಕ ನೌಕರರುಗಳ ನೇಮಕಾತಿಯನ್ನು ಮಾಡಿಕೊಂಡು ಪಾವತಿಸಿರುವ ವೇತನದ ಮೊತ್ತ **ರೂ.10,37,85,322/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

21.3 ವಿಲೀನಗೊಂಡ 75 ಬೋಧಕೇತರ ನೌಕರರಿಗೆ ವೈದ್ಯಕೀಯ ವೆಚ್ಚ ರೂ. 5,08,298/–ಗಳನ್ನು ಮರು ಪಾವತಿ ಮಾಡಿರುವುದು.

ದಿನಾಂಕ:01–06–2022 ರಿಂದ 75 ಮಂದಿ ಕಾಲಿಕ ವೇತನ ಶ್ರೇಣಿಯಡಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳನ್ನು ಖಾಯಂಗೊಳಿಸಿರುವುದನ್ನು 2022–23ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ:21.3 ಆಕ್ಷೇಪಿಸಲಾಗಿದೆ ಹಾಗೂ ಕಂಡಿಕೆ 21.10ರಲ್ಲಿ ವೈದ್ಯಕೀಯ ವೆಚ್ಚ ಮರುಪಾವತಿಸಿರುವುದನ್ನು ಆಕ್ಷೇಪಿಸಲಾಗಿದ್ದರೂ ಸಹ, 2023–24ನೇ ಸಾಲಿನಲ್ಲಿ ವೈದ್ಯಕೀಯ ವೆಚ್ಚ ಮರು ಪಾವತಿ ಮಾಡಲಾಗಿರುತ್ತದೆ. ಸದರಿ ನೌಕರರಿಗೆ ವೈದ್ಯಕೀಯ ವೆಚ್ಚ ಮರು ಪಾವತಿ ಮಾಡಿರುವ ರೂ.5,08,298/–ಗಳ ಮೊತ್ತವನ್ನು ವಸೂಲಿಸಿ, ಬ್ಯಾಂಕ್‌ಗೆ ಜಮಾ ಮಾಡಿ ಮೂಲ ಚಲನ್‌ನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:196/18.02.2025ನ್ನು ನೀಡಲಾಗಿತ್ತು. ಆದರೆ ವಿಶ್ವವಿದ್ಯಾನಿಲಯದವರು ಯಾವುದೇ ಉತ್ತರವನ್ನು ನೀಡಿರುವುದಿಲ್ಲವಾದ್ದರಿಂದ ವೈದ್ಯಕೀಯ ವೆಚ್ಚ ಮರು ಪಾವತಿ ಮಾಡಿರುವ **ರೂ.5,08,298/–ಗಳ ಮೊತ್ತವನ್ನು ವಸೂಲಿಸಲು ಸೂಚಿಸಿದೆ.** ವಿವರಗಳನ್ನು **ಅನುಬಂಧ–23ರಲ್ಲಿ** ವಿರಿಸಲಾಗಿದೆ.

21.4 ಮಾನ್ಯ ಕುಲಾಧಿಪತಿಗಳ ನಿರ್ದೇಶನಗಳಿಗೆ ವಿರುದ್ಧವಾಗಿ ತಾತ್ಕಾಲಿಕ/ಕಾಲಿಕ ವೇತನ ಶ್ರೇಣಿಯ ಪ್ರಾದೇಶಿಕ ನಿರ್ದೇಶಕರುಗಳ ವೇತನ ಹೆಚ್ಚಿಸಿ ಮುಂದುವರೆಸಿರುವುದು ಹಾಗೂ ಮಂಜೂರಾಗಿರದ ಹುದ್ದೆಗಳಿಗೆ ಹೊಸದಾಗಿ ನೇಮಕ ಮಾಡಿಕೊಂಡು ರೂ.3,61,36,155/–ಗಳನ್ನು ಪಾವತಿಸಿರುವುದು.

2022–23ನೇ ಸಾಲಿನಲ್ಲಿ ಒಟ್ಟು 17 ಸಂಖ್ಯೆಗಳ ಪ್ರಾದೇಶಿಕ ಕೇಂದ್ರದ ನಿರ್ದೇಶಕರುಗಳಿಗೆ ವಿಶ್ವವಿದ್ಯಾನಿಲಯದ ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/859/2022–23, ದಿನಾಂಕ:03–08–2022ರಲ್ಲಿ ಶ್ರೀ ಗಿರೀಶ್ ಹೆಚ್.ಎನ್, ಶ್ರೀ ರೋಹಿತ್ ಹೆಚ್.ಎಸ್, ಡಾ.ಕೆ.ಪಿ. ಮಹಾಲಿಂಗಯ್ಯ, ಶ್ರೀ ಹೆಚ್.ಎಲ್.ಮೋಹನ್‌ರಾಜ್, ಶ್ರೀ ಮಹದೇವ ಎಸ್, ಶ್ರೀ ದಿಲೀಪ ಡಿ, ಶ್ರೀ ಸುಧಾಕರ ಎಂ, ಶ್ರೀ ಜಗದೀಶ ಪಿ ಹಾಗೂ ಡಾ. ಲೋಕೇಶ. ಆರ್ ಎಂಬ 9 ಮಂದಿ ಪ್ರಾದೇಶಿಕ ನಿರ್ದೇಶಕರುಗಳಿಗೆ ಮೂಲ ವೇತನವನ್ನು ರೂ.48,200/– ರಿಂದ ರೂ.67,450/– ಎಂದು ನಿಗದಿಪಡಿಸಿ ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ, ಗ್ರೇಡೆಡ್ ಪೇ ಮತ್ತು ಇತರೆ ಸೌಲಭ್ಯಗಳನ್ನು ಮಂಜೂರು ಮಾಡುವುದರ ಜೊತೆಗೆ 10 ಸಾಂದರ್ಭಿಕ ರಜೆ, 2 ನಿರ್ಬಂಧಿತ ರಜೆ, ಅರ್ಧ ವೇತನ ರಜೆ, ಸೇವಾ ಪುಸ್ತಕ ನಿರ್ವಹಣೆ ಹಾಗೂ ಗ್ರಾಚ್ಯುಯಿಟಿ ಸೌಲಭ್ಯವನ್ನು ವಿಸ್ತರಿಸುತ್ತಾ ಈ ಸೌಲಭ್ಯವನ್ನು ದಿನಾಂಕ:01–06–2022 ರಿಂದ ಪೂರ್ವಾನ್ವಯವಾಗುವಂತೆ ಅನ್ವಯಿಸಿ ಜಾರಿಗೊಳಿಸಿರುತ್ತಾರೆ. ಪುನಃ ವಿಶ್ವವಿದ್ಯಾನಿಲಯದ ಕಛೇರಿ ಆದೇಶ ಸಂಖ್ಯೆ ಕರಾಮುವಿ/ಆವಿ/ಸಿಬ್ಬಂದಿ–2/859/2022–23, ದಿನಾಂಕ: 27–09–2022ರಲ್ಲಿ ಡಾ. ಬಸವರಾಜು ಬಿ, ಡಾ.ಕೆ.ನಂದಕುಮಾರಿ, ಡಾ.ಕೆ.ಸಂಗಮೇಶ ಹಿರೇಮಠ, ಡಾ.ವಿಜಯಪ್ರಕಾಶ್, ಮಂಜುನಾಥ ಎಸ್.ಜೆ, ಡಾ.ಗೋಪಾಲ್ ಪಿ, ಡಾ.ಪಿ ಹರೀಶ ಹಾಗೂ ಡಾ.ಹೆಚ್.ಮಲ್ಲಿಕಾರ್ಜುನ ಎಂಬ 8 ಮಂದಿ ಪ್ರಾದೇಶಿಕ ನಿರ್ದೇಶಕರುಗಳಿಗೆ ಇದೇ ರೀತಿಯ ಸೌಲಭ್ಯಗಳನ್ನು ಮಂಜೂರು ಮಾಡಿ ದಿನಾಂಕ: 12–09–2022ರಿಂದ ಪೂರ್ವಾನ್ವಯವಾಗುವಂತೆ ಅನ್ವಯಿಸಿ ಜಾರಿಗೊಳಿಸಿರುತ್ತಾರೆ. ಈ ಸೌಲಭ್ಯವನ್ನು ದಿನಾಂಕ: 15–10–2020ರಿಂದ ಜಾರಿಗೆ ಬರುವಂತೆ ಪೂರ್ವಾನ್ವಯವಾಗಿ ವಿಸ್ತರಿಸಿ ಆದೇಶ ಹೊರಡಿಸಿರುವ ಕುರಿತು 2022–23ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 21.11ರಲ್ಲಿ ಆಕ್ಷೇಪಿಸಿ ವಸೂಲಾತಿಗೆ ಸೂಚಿಸಲಾಗಿದೆ. 2023–24ನೇ ಸಾಲಿನಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಸೂಕ್ತ ಪೂರಕ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:102/01.01.2025ರಲ್ಲಿ ಕೋರಲಾಗಿದ್ದು, ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿ ಈ ಕೆಳಗಿನಂತೆ ವಿವರಣೆಯನ್ನು ನೀಡಿರುತ್ತಾರೆ.

1. *ದಿನಾಂಕ:07.09.2018ರಂದು ನಡೆದ ವ್ಯವಸ್ಥಾಪನ ಮಂಡಳಿಯ 151ನೇ ಸಭೆಯ ತೀರ್ಮಾನದನ್ವಯ 18 ಮಂದಿ ಪ್ರಾದೇಶಿಕ ನಿರ್ದೇಶಕರುಗಳಾಗಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿದ್ದ ಇವರುಗಳಿಗೆ ಪ್ರಾದೇಶಿಕ ನಿರ್ದೇಶಕ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ಹಂತಕ್ಕೆ ನಿಗದಿಪಡಿಸುವ ಬಗ್ಗೆ ಸಮಿತಿ ರಚಿಸಿದ್ದು. ಸದರಿ ಸಮಿತಿಯು ದಿನಾಂಕ:03.03.2019 ರಂದು ನೀಡಿರುವ ಶಿಫಾರಸ್ಸುಗಳನ್ನು ದಿನಾಂಕ:05.03.2019 ರಂದು ನಡೆದ ಹಣಕಾಸು ಸಮಿತಿಯ 76ನೇ ಸಭೆಯು ಅಂಗೀಕರಿಸಿದ್ದು,*

ಇದನ್ನು ವ್ಯವಸ್ಥಾಪನಾ ಮಂಡಳಿಯ 155ನೇ ಸಭೆಯು ಅನುಮೋದಿಸಿರುವ ಹಿನ್ನೆಲೆಯಲ್ಲಿ ದಿನಾಂಕ:07.03.2019 ರಂದು ಹೊರಡಿಸಲಾಗಿರುವ ಕಚೇರಿ ಆದೇಶದಲ್ಲಿ ಪ್ರಾದೇಶಿಕ ನಿರ್ದೇಶಕರುಗಳು ಪರಿಷ್ಕೃತ ವೇತನ ಪಾವತಿಸಲು ಅದೇಶಿಸಲಾಗಿರುತ್ತದೆ.

2. *ಮಾನ್ಯ ಕುಲಪತಿಗಳ ಆದೇಶದ ಮೇರೆಗೆ, 18 ಪ್ರಾದೇಶಿಕ ನಿರ್ದೇಶಕರುಗಳಲ್ಲಿ 09 ಮಂದಿಗೆ ಪ್ರಾದೇಶಿಕ ಹುದ್ದೆಯ ಮೂಲ ವೇತನ ರೂ. 67,550/– ಗಳಲ್ಲಿ ರೂ.100/– ಕಡಿತಗೊಳಿಸಿ ರೂ 67,450/– ಮತ್ತು ಇತರೆ ಭತ್ಯೆಗಳನ್ನು ವಿಸ್ತರಿಸಿ ದಿನಾಂಕ:03.08.2022 ರಂದು ಕಚೇರಿ ಆದೇಶ ಹೊರಡಿಸಲಾಗಿರುತ್ತದೆ. ಅದನ್ನು ದಿನಾಂಕ:25.08.2022 ನಡೆದ ಹಣಕಾಸು ಸಮಿತಿಯ 85ನೇ ಸಭೆಯಲ್ಲಿ ಅನುಸಮರ್ಥನೆ ಪಡೆಯಲಾಗಿರುತ್ತದೆ ಹಾಗೂ ದಿನಾಂಕ:26.08.2022 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 169ನೇ ಸಭೆಯು ಅನುಮೋದಿಸಿರುತ್ತದೆ. ಅದರಂತೆ ದಿನಾಂಕ:27.09.2022 ರಂದು ಹೊರಡಿಸಲಾಗಿರುವ ಕಚೇರಿ ಆದೇಶದಲ್ಲಿ ಉಳಿದ 08 ಮಂದಿಗೆ ತಾತ್ಕಾಲಿಕ ಪ್ರಾದೇಶಿಕ ನಿರ್ದೇಶಕರುಗಳಿಗೂ ಸಹ ಮೇಲಿನಂತೆ ವೇತನ ಮತ್ತು ಇತರೆ ಭತ್ಯೆಗಳನ್ನು ವಿಸ್ತರಿಸಲಾಗಿರುತ್ತದೆ.*

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ (ಪ್ರಾದೇಶಿಕ ನಿರ್ದೇಶಕರ ಹುದ್ದೆಗಳ ವ್ಯಂದ ಮತ್ತು ನೇಮಕಾತಿ) ಪರಿನಿಯಮಗಳು, 2011ರಲ್ಲಿ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇದ್ದ 7 ಉಪ ಕುಲಸಚಿವರ ಹುದ್ದೆಗಳನ್ನು ಪ್ರಾದೇಶಿಕ ನಿರ್ದೇಶಕರ ಹುದ್ದೆಗಳನ್ನಾಗಿ ಮಾರ್ಪಡಿಸಿ, 3 ಹೊಸ ಹುದ್ದೆಗಳನ್ನು ಸೃಜಿಸುವ ಮೂಲಕ ಒಟ್ಟು 10 ಪ್ರಾದೇಶಿಕ ನಿರ್ದೇಶಕರ ಹುದ್ದೆಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ. ಈ ಪರಿನಿಯಮಕ್ಕೆ ವಿಶ್ವವಿದ್ಯಾನಿಲಯದ ಕುಲಾಧಿಪತಿಗಳೂ ಆದ ಮಾನ್ಯ ರಾಜ್ಯಪಾಲರು ದಿನಾಂಕ:24–12–2011ರಂದು ಅಂಕಿತ ಹಾಕಿರುತ್ತಾರೆ.

ಹೀಗೆ ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ 10 ಹುದ್ದೆಗಳಿಗೆ ಎದುರಾಗಿ ಪರಿನಿಯಮ ರೂಪಿಸುವುದಕ್ಕೆ ಮುಂಚೆಯೇ 08 ಹುದ್ದೆಗಳು ಹಾಗೂ ಪರಿನಿಯಮಕ್ಕೆ ಮಾನ್ಯ ಕುಲಾಧಿಪತಿಗಳು ಅಂಕಿತ ಹಾಕಿದ ನಂತರ 09 ಹುದ್ದೆಗಳನ್ನು ನೇಮಕ ಮಾಡುವ ಮೂಲಕ ಮಂಜೂರಾದ ಹುದ್ದೆಗಳಿಗಿಂತಲೂ 07 ಹೆಚ್ಚುವರಿ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಪ್ರಾದೇಶಿಕ ನಿರ್ದೇಶಕರ ನೇಮಕಾತಿಯ ಆದೇಶಗಳಲ್ಲಿ ಈ ನೇಮಕಾತಿಗಳನ್ನು ವಿಶ್ವವಿದ್ಯಾನಿಲಯದ ಕುಲಪತಿಗಳು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ, 1992ರ ಕಲಂ–22ರನ್ವಯ ರಚಿತವಾದ ಪರಿನಿಯಮದ ಖಂಡ–2(9)(iii)ರಲ್ಲಿ ಕುಲಪತಿಯವರಿಗೆ ಪ್ರದತ್ತವಾದ ಅಧಿಕಾರದನ್ವಯ ಮಾಡಿರುವುದಾಗಿ ಹೇಳಲಾಗಿದೆ. **ಅದರನುಸಾರ ಈ ನೇಮಕಾತಿಗಳು 6 ತಿಂಗಳಿಗೆ ಮೀರದ ಅವಧಿಯ ಅಲ್ಪಾವಧಿ ನೇಮಕಾತಿಗಳಾಗಿರುತ್ತವೆ**. ಆದರೆ ಕ್ರ.ಸಂ.1 ರಿಂದ 3 ರವರೆಗಿನ ನೇಮಕಾತಿಗಳ ಅಧಿಕೃತ ಜ್ಞಾಪನಾದಲ್ಲಿ ರೂ.20,000/–ಗಳ ಗೌರವ ಸಂಭಾವನೆಯ ಮೇಲೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿರುವುದಾಗಿ ತಿಳಿಸಿದ್ದರೆ, ಕ್ರ.ಸಂ.1 ರಿಂದ 3ರವರೆಗಿನ ನೇಮಕಾತಿಗಳ ಅಧಿಕೃತ ಜ್ಞಾಪನಾದಲ್ಲಿ ಪ್ರಾದೇಶಿಕ ನಿರ್ದೇಶಕರ ಹುದ್ದೆಗೆ ಅನ್ವಯಿಸುವ ಮೂಲ ವೇತನ ರೂ.36,300/–ಗಳಲ್ಲಿ ರೂ.100 ಕಡಿತಗೊಳಿಸಿ ಮಾಹೆಯಾನ ರೂ.36,200/–ಗಳನ್ನು ಪಾವತಿಸುವ ಆಧಾರದ ಮೇಲೆ ನೇಮಕ ಮಾಡಲಾಗಿರುತ್ತದೆ.

ಈ ಮಧ್ಯೆ ವಿಶ್ವವಿದ್ಯಾನಿಲಯದಲ್ಲಿ ನಡೆದಿದೆ ಎನ್ನಲಾದ ಹಗರಣಗಳ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ನೀಡಲು ವಿಶ್ವವಿದ್ಯಾನಿಲಯದ ಮಾನ್ಯ ಕುಲಾಧಿಪತಿಗಳೂ ಆದ ಕರ್ನಾಟಕದ ಮಾನ್ಯ ರಾಜ್ಯಪಾಲರು ನ್ಯಾ.ಭಕ್ತವತ್ಸಲ ಏಕಸದಸ್ಯ ಸತ್ಯ ಶೋಧನಾ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯ ಶಿಫಾರಸ್ಸಿನನ್ವಯ ಪ್ರಾದೇಶಿಕ ನಿರ್ದೇಶಕರುಗಳನ್ನು ಸೇವೆಯಿಂದ ವಿಮುಕ್ತಿಗೊಳಿಸುವ ಬಗ್ಗೆ ಮಾನ್ಯ ಕುಲಾಧಿಪತಿಗಳು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಅಧಿನಿಯಮ, 1992ರ ಕಲಂ–8(8)ರ ಅನುಸಾರ ನಿರ್ದೇಶನ ನೀಡಿದ್ದು, ಇದರಲ್ಲಿ ತಾವು ಕಲಂ–8(6)ರ ಅಡಿ ನೀಡಿರುವ ಸಲಹೆಯಲ್ಲಿ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕೆಂದು ತಿಳಿಸಿರುತ್ತಾರೆ. ಈ ವಿಷಯವನ್ನು ರಿಟ್ ಅರ್ಜಿ ಸಂ.17068/2018(ಜಿ.ಎಂ–ಆರ್.ಇ.ಎಸ್)–ಪಿಐಎಲ್ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುವಾಗ ವಿಶ್ವವಿದ್ಯಾನಿಲಯದ ಕುಲಾಧಿಪತಿಗಳು ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಮಾನ್ಯ ನ್ಯಾಯಾಲಯಕ್ಕೆ ತಿಳಿಸಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯವು ನೀಡಿದ ದಿನಾಂಕ:04–03–2020ರ ಆದೇಶದಲ್ಲಿ ವಿಶ್ವವಿದ್ಯಾನಿಲಯದ ಕುಲಪತಿಗಳು ಮಾನ್ಯ ಕುಲಾಧಿಪತಿಗಳು ಅಧಿನಿಯಮ 1992ರ ಕಲಂ–8(8)ರ ಅಡಿ ನೀಡಿದ ನಿರ್ದೇಶನಗಳನ್ನು ಪಾಲಿಸುವುದಾಗಿ ಪ್ರಮಾಣ ಮಾಡಿರುವುದನ್ನು ದಾಖಲಿಸಲಾಗಿರುತ್ತದೆ. ಹಾಗೂ ಅದರನ್ವಯ ಮಾನ್ಯ ನ್ಯಾಯಾಲಯವು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ವಿಲೇ ಮಾಡಿರುತ್ತದೆ. ತದನಂತರ ಮಾನ್ಯ ಕುಲಾಧಿಪತಿಗಳ ನಿರ್ದೇಶನದನ್ವಯ ವಿಶ್ವವಿದ್ಯಾನಿಲಯವು ಪ್ರಾದೇಶಿಕ ನಿರ್ದೇಶಕರುಗಳಿಗೆ ನೀಡಿದ್ದ ಕಾರಣ ಕೇಳಿ ನೋಟೀಸಿನ ವಿರುದ್ಧ ಡಾ.ಬಸವರಾಜು ಮತ್ತು ಇತರರು ಹಾಗೂ ಶ್ರೀ ಗಿರೀಶ್ ಹೆಚ್.ಎನ್ ಮತ್ತು ಇತರರು ಸಲ್ಲಿಸಿದ್ದ ಪ್ರತ್ಯೇಕ ರಿಟ್ ಅರ್ಜಿಗಳ ಆಧಾರದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ: 26–11–2019ರಂದು ವಿಶ್ವವಿದ್ಯಾನಿಲಯವು ಈ ಸಂಬಂಧ ಯಾವುದೇ ಮುಂದಿನ ಕ್ರಮ ಕೈಗೊಳ್ಳುವುದಕ್ಕೆ ತಡೆ ನೀಡಿರುವುದು ಕಂಡು ಬಂದಿರುತ್ತದೆ.

ಇದಾದ ನಂತರವೂ ಕೂಡ 2021–22, 2022–23 ಮತ್ತು 2023–24ನೇ ಸಾಲುಗಳಲ್ಲಿ ಒಟ್ಟು 24 ಜನ ತಾತ್ಕಾಲಿಕ ಪ್ರಾದೇಶಿಕ ನಿರ್ದೇಶಕರನ್ನು ಪುನಃ ನೇಮಕ ಮಾಡಿಕೊಳ್ಳಲಾಗಿರುವುದನ್ನು **ಅನುಬಂಧ–24**ರಲ್ಲಿ ವಿವರಿಸಲಾಗಿದೆ. ಹೀಗೆ ನೇಮಕ ಮಾಡಿರುವ ಕುರಿತು ಲೆಕ್ಕಪರಿಶೋಧನಾ ವಿಚಾರಣಾ ಸಂಖ್ಯೆ:79/2024–25ನ್ನು ದಿ:30–12–2024 ರಂದು ನೀಡಲಾಗಿತ್ತು. ವಿಶ್ವವಿದ್ಯಾನಿಲಯದವರು ಅನುಪಾಲನಾ ವರದಿಯಲ್ಲಿ ಪ್ರಾದೇಶಿಕ ಕೇಂದ್ರಗಳ ಆಡಳಿತ ನಿರ್ವಹಣೆಯ ದೃಷ್ಟಿಯಿಂದ 31 ಹೆಚ್ಚುವರಿಯಾಗಿ ಪ್ರಾದೇಶಿಕ ನಿರ್ದೇಶಕರುಗಳನ್ನು ಕರಾಮುವಿ ಕಾಯ್ದೆ–1992ರ 2 ನೇ ಅನುಸೂಚಿಯ ಮೊದಲನೇ ಪರಿನಿಯಮದ ನಿಯಮ 2(9)(iii) ಮತ್ತು (iv) ರಲ್ಲಿ ರಡಿಯಲ್ಲಿ ಪ್ರದತ್ತವಾದ ಅಧಿಕಾರದನ್ವಯ 6 ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಈವರೆಡರಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ತಾತ್ಕಾಲಿಕವಾಗಿ ನೇಮಕ ಮಾಡಲಾಗಿದ್ದು, ಸದರಿಯವರುಗಳನ್ನು ಯಾವುದೇ ಮಂಜೂರಾದ ಖಾಲಿ ಹುದ್ದೆಗಳಿಗೆ ಎದುರಾಗಿ ನೇಮಕ ಮಾಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

ಈ ನೇಮಕಾತಿಗಳೂ ಸೇರಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ನೇಮಕ ಮಾಡಿಕೊಂಡ ಪ್ರಾದೇಶಿಕ ನಿರ್ದೇಶಕರುಗಳ ಹುದ್ದೆಗಳ ಸಂಖ್ಯೆ 41 ಆಗುತ್ತದೆ. ಇದು ಮಂಜೂರಾದ ಹುದ್ದೆಗಳಿಗಿಂತ 31 ಹುದ್ದೆಗಳ ಹೆಚ್ಚುವರಿಯಾಗಿರುತ್ತದೆ. ಹೀಗೆ ಮಾನ್ಯ ನ್ಯಾ.ಭಕ್ತವತ್ಸಲ ನೇತೃತ್ವದ ಏಕಸದಸ್ಯ ಸತ್ಯಶೋಧನಾ ಸಮಿತಿಯ ಶಿಫಾರಸ್ಸಿನ

ಮೇಲೆ ಮಾನ್ಯ ಕುಲಾಧಿಪತಿಗಳು ನೀಡಿದ್ದ ನಿರ್ದೇಶನವನ್ನು ಕೂಡ ಅಲಕ್ಷಿಸಿ ಈ ಬಗೆಯಲ್ಲಿ ನೇಮಕಾತಿ ಮಾಡಿಕೊಂಡಿರುವುದು ಕಂಡು ಬರುತ್ತದೆ. ಅಲ್ಲದೆ ಈ ನೇಮಕಾತಿಗಳ ಸಂಬಂಧದ ಅಧಿಸೂಚನೆಯ ಜಾಹಿರಾತು ಹೊರಡಿಸಿದ ಹಾಗೂ ನೇಮಕಾತಿ ಸಮಿತಿಯು ಸಂದರ್ಶನ ನಡೆಸಿದ ಯಾವುದೇ ದಾಖಲಾತಿಗಳನ್ನು 2022–23 ಮತ್ತು 2023–24 ನೇ ಸಾಲುಗಳಲ್ಲಿ ಲೆಕ್ಕಪರಿಶೋಧನೆಗೆ ವಿಶ್ವವಿದ್ಯಾನಿಲಯವು ಹಾಜರುಪಡಿಸಿರುವುದಿಲ್ಲ.

ಈ ರೀತಿ ನಿಯಮಬಾಹಿರವಾದ ಆದೇಶಗಳನ್ನು ಹೊರಡಿಸುವ ಮೂಲಕ ತಾತ್ಕಾಲಿಕ ಪ್ರಾದೇಶಿಕ ನಿರ್ದೇಶಕರನ್ನು ನೇಮಕ ಮಾಡಿಕೊಂಡಿರುವ ಬಗ್ಗೆ ಈಗಾಗಲೇ ಹಿಂದಿನ ಸಾಲುಗಳಲ್ಲಿ ಮತ್ತು 2022–23ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿರುವುದನ್ನು ಮುಂದುವರೆಸುತ್ತಾ, ಸದರಿ ನೌಕರರಿಗೆ ಪಾತಿಸಿರುವ ವೇತನ **ರೂ.3,61,36,155/– ಗಳನ್ನು** ಡ್ರಾ ಮಾಡಿ ಪಾವತಿಸುವ ಮೂಲಕ ವಿಶ್ವವಿದ್ಯಾನಿಲಯಕ್ಕೆ ನಷ್ಟವನ್ನುಂಟು ಮಾಡಿರುತ್ತಾರೆ. ಈ ನಷ್ಟಕ್ಕೆ ಕಾರಣರಾದ ಕುಲಪತಿಗಳು, ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳಿಂದ ಈ ಮೊತ್ತವನ್ನು **ವಸೂಲಿಸಲು ಸೂಚಿಸಿದೆ. ಪಾವತಿ ವಿವರವನ್ನು ಅನುಬಂಧ–24ರಲ್ಲಿ ವಿವರಿಸಲಾಗಿದೆ.**

21.5 ಗ್ರೇಡೆಡ್ ಪೇ (ಕಾಲಿಕ ವೇತನ ಶ್ರೇಣಿ) ಪ್ರಾದೇಶಿಕ ನಿರ್ದೇಶಕರುಗಳಿಗೆ ಡಿ.ಎ. ಹಿಂಬಾಕಿ ರೂ.98,74,702/–ಗಳ ಮೊತ್ತವನ್ನು ಪಾವತಿಸಿರುವುದು

2023–24ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯ ಕಛೇರಿ ಆದೇಶ ಸಂಖ್ಯೆ: ಕ.ರಾ.ಮು.ವಿ.ವಿ/ಆವಿ/ಸಿಬ್ಬಂದಿ–2/859/2022–23, ದಿನಾಂಕ:07–07–2023ರಲ್ಲಿ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಪ್ರಾದೇಶಿಕ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 17 ಮಂದಿ ಗ್ರೇಡೆಡ್ ಪೇ (ಕಾಲಿಕ ವೇತನ ಶ್ರೇಣಿ) ಪ್ರಾದೇಶಿಕ ನಿರ್ದೇಶಕರುಗಳಿಗೆ ದಿ:01–01–2013 ರಿಂದ ದಿ:31–03–2018ರ ವರೆಗೆ ಸ್ಥಗಿತಗೊಳಿಸಲಾದ ಡಿ.ಎ. ಹಿಂಬಾಕಿ ಮೊತ್ತವನ್ನು ಪಾವತಿಸಲು ಆದೇಶಿಸಿರುವ" ಹಿನ್ನಲೆಯಲ್ಲಿ ಒಟ್ಟು ರೂ.98,74,702/–ಗಳನ್ನು **ವೋಚರ್ ಸಂಖ್ಯೆ:**29/07–07–2023, **ಧನಾದೇಶ ಸಂಖ್ಯೆ:**925425 ಮತ್ತು 426, **ದಿನಾಂಕ:** 07–07–2023 ರಂದು ಪಾವತಿಸಲಾಗಿದೆ. 17 ಮಂದಿ ಗ್ರೇಡೆಡ್ ಪೇ (ಕಾಲಿಕ ವೇತನ ಶ್ರೇಣಿ) ತಾತ್ಕಾಲಿಕ ಪ್ರಾದೇಶಿಕ ನಿರ್ದೇಶಕರುಗಳಿಗೆ **ತುಟ್ಟಿಭತ್ಯೆ ಬಾಕಿ ಪಾವತಿಸಿರುವ** ಸಂಬಂಧಿಸಿದಂತೆ ಈ ಕೆಳಕಂಡ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:66/16.12.2024ನ್ನು ನೀಡಲಾಗಿತ್ತು.

1. ವ್ಯಂದ ಮತ್ತು ನೇಮಕಾತಿ ನಿಯಮಗಳ ರೀತ್ಯಾ ಕ.ರಾ.ಮು.ವಿ.ವಿ. ಗೆ ಮಂಜೂರಾಗಿರುವ ಪ್ರಾದೇಶಿಕ ಕೇಂದ್ರದ ನಿರ್ದೇಶಕರ ಹುದ್ದೆಗಳು ಮತ್ತು ದಿನಾಂಕ:01–01–2023ರ ಪ್ರಾರಂಭಕ್ಕೆ ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳು
2. ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾದೇಶಿಕ ಕೇಂದ್ರದ ನಿರ್ದೇಶಕರುಗಳ ನೇಮಕಾತಿಗೆ ಸಂಬಂಧಿಸಿದಂತೆ ಅನುಸರಿಸಿರುವ ಮಾನದಂಡದ ವಿವರಗಳು ಮತ್ತು ಕಡತ.
3. ಈ ತಾತ್ಕಾಲಿಕ ಒಟ್ಟು 17 ಮಂದಿ ಗ್ರೇಡೆಡ್ ಪೇ (ಕಾಲಿಕ ವೇತನ ಶ್ರೇಣಿ) ನೌಕರರಿಗೆ ತುಟ್ಟಿಭತ್ಯೆ ಪಾವತಿಸುವ ಸಂಬಂಧ ಅಂಕಿತಗೊಂಡ ಪರಿನಿಯಮ.

4. ಮೇಲ್ಕಂಡ ಪಾವತಿ ಸಂಬಂಧ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿಯಲ್ಲಿ ಕೈಗೊಂಡ ತೀರ್ಮಾನಗಳು.

ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿ ಮಾನ್ಯ ಕುಲಪತಿಗಳ ಆದೇಶ ಮೇರೆಗೆ, ದಿನಾಂಕ:07.07.2023 ರಂದು ಹೊರಡಿಸಲಾಗಿರುವ ಕಛೇರಿ ಆದೇಶದಲ್ಲಿ 17 ಮಂದಿ ಗ್ರೇಡೆಡ್ ಪೇ (ಕಾಲಿಕ ವೇತನ ಶ್ರೇಣಿ) ಪ್ರಾದೇಶಿಕ ನಿರ್ದೇಶಕರುಗಳಿಗೆ ತುಟ್ಟಿಭತ್ಯೆ ಬಾಕಿ ಮೊತ್ತವನ್ನು ಪಾವತಿಸಿಲಾಗಿದೆ. ಪ್ರಾದೇಶಿಕ ನಿರ್ದೇಶಕರನ್ನು ಕರಾಮುವಿ ಕಾಯ್ದೆ–1992ರ 2ನೇ ಅನುಸೂಚಿಯ ಮೊದಲನೇ ಪರಿನಿಯಮದ ನಿಯಮ 2(9)(iii) ಮತ್ತು (iv)ರಲ್ಲಿ ರಡಿಯಲ್ಲಿ ಪ್ರದತ್ತವಾದ ಅಧಿಕಾರದನ್ವಯ ತಾತ್ಕಾಲಿಕವಾಗಿ ನೇಮಕಾತಿ ಮಾಡಲಾಗಿರುತ್ತದೆ.

17 ಮಂದಿ ಗ್ರೇಡೆಡ್ ಪೇ **(ಕಾಲಿಕ ವೇತನ ಶ್ರೇಣಿ)** ತಾತ್ಕಾಲಿಕ ಪ್ರಾದೇಶಿಕ ನಿರ್ದೇಶಕರುಗಳ ನೇಮಕಾತಿಯನ್ನು 2022–23ನೇ ಸಾಲಿನ ಲೆಕ್ಕಪರಿಶೋಧನಾ ವರರದಿಯ ಕಂಡಿಕೆ ಸಂಖ್ಯೆ:21.11ರಲ್ಲಿ ನೇಮಕಾತಿಯನ್ನು ಆಕ್ಷೇಪಿಸಿ ಸದರಿ ಸಿಬ್ಬಂದಿಗಳಿಗೆ ಪಾವತಿಸಿರುವ ವೇತನ ಭತ್ಯೆಗಳನ್ನು ವಸೂಲಾತಿಗೆ ಸೂಚಿಸಲಾಗಿದ್ದರೂ 2023–24ನೇ ಸಾಲಿನಲ್ಲಿ **ದಿನಾಂಕ:01–01–2013 ರಿಂದ ದಿ:31–03–2018ರ ವರೆಗೆ ತುಟ್ಟಿಭತ್ಯೆ ಬಾಕಿ ರೂ.98,74,702/–ಗಳನ್ನು ಪಾವತಿಸಲು ಆದೇಶ ಹೋರಡಿಸಿರುವುದು** ನಿಯಮಬಾಹಿರವಾಗಿರುತ್ತದೆ. ಆದುದ್ದರಿಂದ 17 ಮಂದಿ ಗ್ರೇಡೆಡ್ ಪೇ **(ಕಾಲಿಕ ವೇತನ ಶ್ರೇಣಿ)** ತಾತ್ಕಾಲಿಕ ಪ್ರಾದೇಶಿಕ ನಿರ್ದೇಶಕರುಗಳ ಪಾವತಿಸಿರುವ ತುಟಿಭತ್ಯ **ರೂ. 98,74,702/–ಗಳನ್ನು ಪಾವತಿಸಿರುವುದು ವಿಶ್ವವಿದ್ಯಾನಿಲಯಕ್ಕೆ ನಷ್ಟವುಂಟಾಗಿರುತ್ತದೆ. ಈ ನಷ್ಟಕ್ಕೆ** ಕಾರಣರಾದ ವಿಶ್ವವಿದ್ಯಾನಿಲಯದ ಕುಲಪತಿಗಳು, ಕುಲಸಚಿವರುಗಳು ಮತ್ತು ಹಣಕಾಸು ಅಧಿಕಾರಿಗಳಿಂದ ವಸೂಲಿಸಲು. ಪಾವತಿ ವಿವರ ಈ ಕೆಳಗಿನಂತಿರುತ್ತದೆ.

ಕ್ರ.ಸಂ.	ಹೆಸರು	ಮೊತ್ತ
1	ಸಂಗಮೇಶ್ ಹರೀಮಠ್	6,01,147
2	ಕೆ. ನಂದಕುಮಾರಿ	6,01,389
3	ರೋಹಿತ್ ಹೆಚ್.ಎಸ್.	6,00,425
4	ಎಸ್. ಮಹದೇವ್	5,95,573
5	ಪಿ.ಜಗದೀಶ	6,01,147
6	ಡಾ. ವಿಜಯಪ್ರಕಾಶ	6,01,389
7	ಡಾ. ಹೆಚ್. ಮಲ್ಲಿಕಾರ್ಜುನ	6,01,389
8	ಪಿ. ಹರೀಶ್	6,01,389
9	ಪಿ. ಗೋಪಾಲ	6,01,389
10	ಎಸ್.ಜೆ. ಮಂಜುನಾಥ	5,94,418
11	ಬಿ. ಬಸವರಾಜು	6,01,389
12	ಕೆ.ಪಿ. ಮಹಾಲಿಂಗಯ್ಯ	6,01,389
13	ಸುಧಾಕರ ಎಂ.	5,26,259
14	ಗಿರೀಶ್ ಹೆಚ್.ಎನ್.	6,01,389

15	ಹೆಚ್.ಎಲ್. ಮೋಹನ್‌ರಾಜ್	6,01,389
16	ಲೋಕೇಶ್ ಆರ್.	6,00,863
17	ದಿಲೀಪ	3,42,369
	ಒಟ್ಟು	**98,74,702**

21.6 ಹೈದ್ರಾಬಾದ್–ಕರ್ನಾಟಕ 371(ಜೆ) ಅಡಿ ನೇರ ನೇಮಕಾತಿಗೆ ಮೀಸಲಿಡಬೇಕಾದ ಹುದ್ದೆಗಳಿಗೆ ಸಾಮಾನ್ಯ ಅಭ್ಯರ್ಥಿಗಳಿಗೆ ಪದೋನ್ನತಿ ನೀಡಿರುವುದರಿಂದ ಹೆಚ್ಚವರಿಯಾಗಿ ಪಾವತಿಸಿರುವ ವೇತನ ಭತ್ಯೆಗಳ ಮೊತ್ತ ರೂ.8,24,010/–ಗಳನ್ನು ವಸೂಲಿಸುವುದು.

2022–23ನೇ ಸಾಲಿನಲ್ಲಿ ಬೋಧಕೇತರ ನೌಕರರುಗಳಿಗೆ ಪ್ರ.ದ.ಗು. ಹುದ್ದೆಯಿಂದ ಮುಂಬಡ್ತಿ ನೀಡುವಾಗ ಸಾಮಾನ್ಯ ವರ್ಗದ ಸಿಬಂದಿಗಳಿಗೆ 371 (ಜೆ) ಮೀಸಲಿರಿಸಿರುವ ಹಿರಿಯ ಸಹಾಯಕ ಹುದ್ದೆಗಳಿಗೆ ವಿಶ್ವವಿದ್ಯಾನಿಲಯದ ಕಛೇರಿ ಆದೇಶ ಸಂ:ಕರಾಮುವಿ/ಆವಿ/ಸಿಬ್ಬಂದಿ–2/950/2022–23, ದಿನಾಂಕ:28–10–2022ರಲ್ಲಿ 8 ನೌಕರರಿಗೆ ಸಂಖ್ಯೆ:. ಕರಾಮುವಿ/ಆವಿ/ಸಿಬ್ಬಂದಿ–2/776/2022–23, ದಿನಾಂಕ:31.10.2022ರಲ್ಲಿ2 ನೌಕರರಿಗೆ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆಗೊಂಡ ಪರಿನಿಯಮ ಅಥವಾ ಸರ್ಕಾರದ ಅನುಮೋದನೆ ಯಾವುದೂ ಇಲ್ಲದೆಯೇ ಹಿರಿಯ ಸಹಾಯಕರ ಹುದ್ದೆಗಳಿಗೆ ಪದೋನ್ನತಿ ನೀಡಿ ಆದೇಶಿಸಲಾಗಿದೆ ಈ ಪದೋನ್ನತಿ ಆದೇಶಕ್ಕೆ ಸಂಬಂಧಿಸಿದಂತೆ 2022–23 ನೇ ಸಾಲಿನ ಲೆಕ್ಕಪರಿಶೋಧನೆ ವರದಿಯ ಕಂಡಿಕೆ 21.5ರಲ್ಲಿ ಆಕ್ಷೇಪಿಸಿ ವಸೂಲಾತಿಗೆ ಸೂಚಿಸಲಾಗಿದೆ.

ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಪದೋನ್ನತಿ ನೀಡಿರುವುದನ್ನು ಪರಿಶೀಲಿಸುವ ಸಂಬಂಧ ರಚಿಸಲಾಗಿದ್ದ ಪರಿಶೀಲನಾ ಸಮಿತಿಯು ದಿನಾಂಕ:09–03–2023ರ ನಡಾವಳಿಯಲ್ಲಿ ವಿಶ್ವವಿದ್ಯಾನಿಲಯದ ಪರಿನಿಯಮ–36ರ ಅನ್ವಯ ಹಿರಿಯ ಸಹಾಯಕರ ಹುದ್ದೆಗೆ ಮುಂಬಡ್ತಿ ನೀಡಲು ಪ್ರಥಮ ದರ್ಜೆ ಸಹಾಯಕರ ಹುದ್ದೆಯಲ್ಲಿ ಕನಿಷ್ಠ 3 ವರ್ಷಗಳ ಸೇವೆ ಸಲ್ಲಿಸಬೇಕಿದ್ದು, ದಿನಾಂಕ:28–10–2022ರ ಕಛೇರಿ ಆದೇಶದಲ್ಲಿ 8 ನೌಕರರಿಗೆ ಹಾಗೂ ದಿನಾಂಕ:31–10–2022ರ ಕಛೇರಿ ಆದೇಶದಲ್ಲಿ 2 ನೌಕರರಿಗೆ ನೀಡಲಾಗಿರುವ ಪದೋನ್ನತಿಯು ನಿಯಮಗಳಿಗೆ ವಿರುದ್ಧವಾಗಿರುವುದಾಗಿ ಹೇಳಿ, ಪದೋನ್ನತಿಯನ್ನು ಹಿಂಪಡೆಯಲು ಶಿಫಾರಸ್ಸು ಮಾಡಿರುತ್ತದೆ. ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಯ 171ನೇ ಸಾಮಾನ್ಯ ಸಭೆಯ ನಡವಳಿಗಳ ಮಟ ಸಂ.26ರಲ್ಲಿ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳಲ್ಲಿ ಈ ಪದೋನ್ನತಿಯು ಕಾನೂನಿಗೆ ವಿರುದ್ಧವಾಗಿರುವುದರಿಂದ ಪದೋನ್ನತಿಯನ್ನು ಹಿಂಪಡೆಯಲು ಮಂಡಳಿಯ ಸದಸ್ಯರು ಅಭಿಪ್ರಾಯಿಸಿರುತ್ತಾರೆ.

ಈ ಸಂಬಂಧ 371(ಜೆ)ಅನ್ವಯ **ಹೈದ್ರಾಬಾದ್–ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಅನ್ವಯವಾಗುವಂತೆ ಉನ್ನತ ಶಿಕ್ಷಣ ಇಲಾಖೆಯಿಂದ ಅನುಮೋದನೆಗೊಂಡ ಮೀಸಲಾತಿ ಆದೇಶದ ಪ್ರತಿ**, ದಿ:01.01.2022ರಂದು ಇದ್ದಂತೆ **ಹಿರಿಯ ಸಹಾಯಕ ಮತ್ತು ಪ್ರ.ದ.ಗು ಹುದ್ದೆಗಳ ಜೇಷ್ಠತಾಪಟ್ಟಿ**, 371(ಜೆ)ಅಡಿ **ಹೈದ್ರಾಬಾದ್–ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಅನ್ವಯವಾಗುವ ಮೀಸಲಾತಿ ಹುದ್ದೆಗಳನ್ನು ಮುಂಬಡ್ತಿಗೆ**

ಪರಿವರ್ತಿಸಲು ಅವಕಾಶವಿರುವ ನಿಯಮಾವಳಿಗಳ ಪ್ರತಿಗಳು. ಮುಂದೆ ಆಕ್ಷೇಪಣೆಗಳು ಬಂದಲ್ಲಿ ಪದೋನ್ನತಿಯನ್ನು ಹಿಂಪಡೆಯುವ ಮುಚ್ಚಳಿಕೆ ಬರೆಸಿಕೊಂಡುಪದೋನ್ನತಿ ನೀಡಲು ಅವಕಾಶವಿರು ಸರ್ಕಾರದ ನಿಯಮಾವಳಿಗಳು ಅಥವಾ ಆದೇಶದ ಪ್ರತಿಗಳನ್ನು ಹಾಗೂ ಹಿಂದಿನ ಲೆಕ್ಕಪರಿಶೋಧನೆಯ ಕಂಡಿಕೆ ಸಂಖ್ಯೆ:21.5ಕ್ಕೆ ವಿಶ್ವವಿದ್ಯಾನಿಲಯದಿಂದ ಕೈಗೊಂಡಿರುವ ಕ್ರಮದ ಬಗ್ಗೆ ವಿವರವನ್ನು ಪೂರಕ ದಾಖಲೆಗಳೊಂದಿಗೆ ಹಾಜರುಪಡಿಸುವಂತೆ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:82/30.12.2024ನ್ನು ನೀಡಲಾಗಿತ್ತು. ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿ 2022–23ನೇ ಸಾಲಿನಲ್ಲಿ ಬೋಧಕೇತರ ನೌಕರರುಗಳಿಗೆ ಪ್ರ.ದ.ಗು ಹುದ್ದೆಯಿಂದ ಮುಂಬಡ್ತಿ ನೀಡುವಾಗ ಸಾಮಾನ್ಯ ವರ್ಗದ ಸಿಬ್ಬಂದಿಗಳಿಗೆ 371 (ಜೆ) ಮೀಸಲಿರಿಸಿರುವ ಹುದ್ದೆಗಳಿಗೆ ಪದೋನ್ನತಿ ನೀಡಿರುವುದು ವಿಶ್ವವಿದ್ಯಾನಿಲಯದ ಪ್ರಕ್ರಿಯೆ ವಿಷಯವಾಗಿ ವಿಶ್ವವಿದ್ಯಾನಿಲಯದ ಬೋದಕೇತರ ನೌಕರರುಗಳ ಕುಂದು ಕೊರತೆ ಸಮಿತಿ ಸಭೆಯಲ್ಲಿನ ತೀರ್ಮಾನದಂತೆ ಕ್ರಮವಹಿಸಲು ವಿಶ್ವವಿದ್ಯಾನಿಲಯದ 174ನೇ ವ್ಯವಸ್ಥಾಪನಾ ಮಂಡಳಿ ಸಭೆಯು ದಿನಾಂಕ:15.09.2023 ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಸದರಿ ವಿವಿಧ ಹುದ್ದೆಗಳಿಗೆ ಪದೋನ್ನತಿ ನೀಡಿರುವುದನ್ನು ವಿ.ವಿ ನಿಲಯವು ಕಛೇರಿ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–02/776/2023–24, ದಿನಾಂಕ:20.10.2023ರಂದು ಕ್ರಮಬದ್ಧಗೊಳಿಸಿ ಆದೇಶವಾಗಿರುತ್ತದೆ ಎಂದು ಅನುಪಾಲನಾ ವರದಿ ಸಲ್ಲಿಸಿರುತ್ತಾರೆ.

371 (ಜೆ) ಮೀಸಲಿರಿಸಿರುವ ಹುದ್ದೆಗಳಿಗೆ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆಗೊಂಡ ಪರಿನಿಯಮ ಅಥವಾ ಸರ್ಕಾರದ ಅನುಮೋದನೆ ಯಾವುದೂ ಇಲ್ಲದೆಯೇ ಸಾಮಾನ್ಯ ವರ್ಗದ 10 ನೌಕರರಿಗೆ ನಿಯಮಬಾಹಿರವಾಗಿ ನೀಡಲಾಗಿರುವ ಬಡ್ತಿಯನ್ನು ಹಿಂಪಡೆದು, ಸದರಿ ನೌಕರರಿಗೆ ಬಡ್ತಿಯಿಂದ ನೀಡಲಾದ ಹಣಕಾಸು ಸೌಲಭ್ಯಗಳ ಹೆಚ್ಚವರಿ ಮೊತ್ತವನ್ನು **ರೂ.8,24,010/–ಗಳನ್ನು** ಕುಲಸಚಿವರು, ಹಣಕಾಸು ಅಧಿಕಾರಿಗಳು ಹಾಗೂ ಕುಲಪತಿಗಳಿಂದ ವಸೂಲಿಸಲು ಹಾಗೂ ಇವರುಗಳ ವಿರುದ್ಧ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ. ನಿಯಮಬಾಹಿರವಾಗಿ ಪದೋನ್ನತಿ ನೀಡಿರುವುದರಿಂದ ಹೆಚ್ಚವರಿಯಾಗಿ ಪಾವತಿಮಾಡಿರುವ ಮೊತ್ತದ ವಿವರವನ್ನು **ಅನುಬಂಧ–25ರಲ್ಲಿ** ನೀಡಲಾಗಿದೆ.

21.7 ವಿ.ವಿ.ನಿಲಯದಲ್ಲಿ ತಾತ್ಕಾಲಿಕವಾಗಿ ನೇಮಕವಾಗಿದ್ದ ನೌಕರರಲ್ಲಿ 207 ಜನ ನೌಕರರ ಪದನಾಮ ಬದಲಾವಣೆ ಮಾಡಿ ಕಾಲಿಕ ವೇತನ ಶ್ರೇಣಿಯಲ್ಲಿ (Graded Pay) ಎಂದು ನೇಮಕಾತಿ ಆದೇಶ ನೀಡಿ ರೂ.7,51,51,177/– ಪಾವತಿಸಿರುವುದು.

2023–24ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ವೇತನ ಪಾವತಿ ದಾಖಲೆಗಳನ್ನು ಪರಿಶೋಧಿಸಿದಾಗ 207 *(2022–23ನೇ ಸಾಲಿನಲ್ಲಿ ನೇಮಕಗೊಂಡಿದ್ದ 189, 23–24 ನೇ ಸಾಲಿನಲ್ಲಿ 9 ಹೊಸದಾಗಿ ನೇಮಕ ಮಾಡಿಕೊಳ್ಳಲಾಗಿರುತ್ತದೆ ಹಾಗೂ ಹಿಂದಿನ ಸಾಲುಗಳಲ್ಲಿ ಈಗಾಗಲೇ ನೇಮಕಗೊಂಡಿದ್ದ 9 ಜನ ಸೇರಿ ಒಟ್ಟು 207)* ತಾತ್ಕಾಲಿಕ ನೌಕರರನ್ನು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–2/999/2022–23 ದಿನಾಂಕ: 20.06.2022ರ 15 ಪ್ರತ್ಯೇಕ ಆದೇಶಗಳಲ್ಲಿ ತಾತ್ಕಾಲಿಕ ನೌಕರರ ಪದನಾಮ ಬದಲಾವಣೆ ಮಾಡಿ ಕಾಲಿಕ ವೇತನ ಶ್ರೇಣಿಯಲ್ಲಿ (Graded Pay) ದ್ವಿತೀಯ ದರ್ಜೆ ಗುಮಾಸ್ತ, ಡಾಟ ಎಂಟ್ರಿ

ಆಪರೇಟರ್, ಅಟೆಂಡರ್, ವಾಟರ್‌ಮನ್, ಗಾರ್ಡನರ್, ಎಲೆಕ್ಟ್ರೀಷಿಯನ್, ಕಾವಲುಗಾರ, ಸ್ವೀಪರ್ ಮತ್ತು ಎಸ್ಟೇಟ್ ಆಫೀಸರ್ ಇತ್ಯಾದಿ ಹುದ್ದೆಗಳಿಗೆ ನೇಮಕ ಮಾಡಿಕೊಂಡು, ದಿನಾಂಕ:01-06-2022 ರಿಂದ ಪೂರ್ವಾನ್ವಯವಾಗಿ ಜಾರಿಗೊಳಿಸಿ ಸರ್ಕಾರಿ ನೌಕರರ ಹುದ್ದೆಯ ಕನಿಷ್ಠ ವೇತನಕ್ಕೆ ರೂ.10/- ಕಡಿಮೆ ಮಾಡಿ ವೇತನ, ತುಟ್ಟಿ ಭತ್ಯೆ, ಮನೆಬಾಡಿಗೆ ಭತ್ಯೆ, 10 ಸಾಂದರ್ಭಿಕ ರಜೆ, 2 ನಿರ್ಬಂಧಿತ ರಜೆ, ಸೇವಾವಹಿ ನಿರ್ವಹಣೆ, ರಜೆ ಸೌಲಭ್ಯ ಮತ್ತು ಉಪಧನ ಸೌಲಭ್ಯಗಳನ್ನು ಮಂಜೂರು ಮಾಡಿ ವೇತನ ಪಾವತಿಸಲಾಗಿದೆ. ಈ ಸಂಬಂಧ 2022-23ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ:21.4 ರಲ್ಲಿ ಆಕ್ಷೇಪಿಸಿ ಪಾವತಿಸಿರುವ ವೇತನವನ್ನು ವಸೂಲಾತಿಗೆ ಸೂಚಿಸಲಾಗಿತ್ತು. ಈ ಕುರಿತು ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮಗಳ ಬಗ್ಗೆ ಸೂಕ್ತ ವಿವರಣೆಯೊಂದಿಗೆ ಪೂರಕ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:87/30.12.2024ನ್ನು ನೀಡಲಾಗಿತ್ತು.

ವಿಶ್ವವಿದ್ಯಾನಿಲಯದವರು ಇದಕ್ಕೆ ಪ್ರತಿಕ್ರಿಯಿಸಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆಯ ಅನುಸೂಚಿ-2ರ ಪರಿನಿಯಮ-2(9)(iii)ರಡಿ ಕುಲಪತಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಮಾಡಿಕೊಳ್ಳಲಾಗಿದ್ದು, ಈ ನೇಮಕಾತಿಗಳನ್ನು ಯಾವುದೇ ಖಾಯಂ ಹುದ್ದೆಗಳಿಗೆ ಎದುರಾಗಿ ಮಾಡಿರುವುದಿಲ್ಲ. ದಿನಾಂಕ:08-03-2021ರಂದು ನಡೆದ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಯ 164ನೇ ಸಭೆಯಲ್ಲಿ 200 ತಾತ್ಕಾಲಿಕ ನೌಕರರ ಸೇವಾ ನ್ಯೂನತೆಗಳನ್ನು ಪರಿಶೀಲಿಸಿ ವರದಿ ನೀಡಲು ರಚಿಸಿದ್ದ ಬೋಧಕೇತರ ನೇಮಕಾತಿ ಮಂಡಳಿಯ ಸದಸ್ಯರ ಅಧ್ಯಕ್ಷತೆಯ ಸಮಿತಿಯ ಶಿಫಾರಸ್ಸಿನನ್ವಯ ಕ್ರಮವಹಿಸುವ ಅಧಿಕಾರವನ್ನು ಕುಲಪತಿಗಳಿಗೆ ನೀಡಲಾಗಿರುತ್ತದೆ. ಸದರಿ ಸಮಿತಿಯು ದಿನಾಂಕ:29.01.2022ರಂದು ಸಲ್ಲಿಸಿದ ವರದಿಯನ್ನು ಪರಿಶೀಲಿಸಿ ಕ್ರಮ ಜರುಗಿಸುವ ಅಧಿಕಾರವನ್ನು ದಿನಾಂಕ:05.02.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 167ನೇ ಸಭೆಯಲ್ಲಿ ಕುಲಪತಿಗಳಿಗೆ ನೀಡಲಾಗಿರುತ್ತದೆ. ದಿನಾಂಕ:19.03.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 56ನೇ ವಿಶೇಷ ಸಭೆಯಲ್ಲಿ 07 ವರ್ಷಗಳ ಕಾಲ ನಿರಂತರ ಸೇವೆಯನ್ನು ಸಲ್ಲಿಸಿರುವ ನೌಕರರುಗಳಿಗೆ ಗ್ರೇಡೆಡ್ ಪೇ ನೀಡಲು ತೀರ್ಮಾನಿಸಿ, ಈ ಬಗ್ಗೆ ಕ್ರಮ ಜರುಗಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಿರುವ ಹಿನ್ನಲೆಯಲ್ಲಿ ನೌಕರರ ವಿದ್ಯಾರ್ಹತೆ ಮತ್ತು ಸೇವಾ ಅನುಭವದ ಆಧಾರದ ಮೇಲೆ ಒಂದು ಬಾರಿಗೆ ಪದನಾಮ ಬದಲಾವಣೆ ಮಾಡಿ, ಸದರಿ ನೌಕರರು ಸಲ್ಲಿಸಿರುವ ಕನಿಷ್ಠ ನಿರಂತರ ಸೇವಾ ಅವಧಿಯನ್ನು ಪರಿಗಣಿಸಿ ಎ, ಬಿ ಸಿ ಎಂದು ಮೂರು ಭಾಗಗಳಾಗಿ ವರ್ಗೀಕರಿಸಿ ಗ್ರೇಡೆಡ್ ಪೇ ಮತ್ತು ಇತರೆ ಸೌಲಭ್ಯಗಳನ್ನು ದಿನಾಂಕ:01.06.2022 ರಿಂದ ಪೂರ್ವಾನ್ವಯವಾಗಿ ಜಾರಿಗೊಳಿಸಲಾಗಿರುತ್ತದೆ. 197 ತಾತ್ಕಾಲಿಕ ನೌಕರರ ಪೈಕಿ 189 ಮಂದಿಗೆ ಅವರ ಸೇವಾವಧಿಯನ್ನು ಪರಿಗಣಿಸಿ ಗ್ರೇಡೆಡ್ ಪೇ ಮತ್ತು ಇತರೆ ಸೌಲಭ್ಯಗಳನ್ನು ನೀಡಲಾಗಿರುವ ಪ್ರಕ್ರಿಯೆಗೆ ಅನುಸಮರ್ಥನೆ ನೀಡಲಾಗಿರುತ್ತದೆ. ಇದಕ್ಕೆ ದಿನಾಂಕ:25.08.2022ರಂದು ನಡೆದ 85ನೇ ಹಣಕಾಸು ಸಮಿತಿಯ ಸಭೆ ಹಾಗೂ ದಿನಾಂಕ:26.08.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 169ನೇ ಸಭೆಯು ಒಪ್ಪಿಗೆ ನೀಡಿರುತ್ತದೆ ಎಂದು 2022-23ನೇ ಸಾಲಿನ ಲೆಕ್ಕ ಪರಿಶೋಧನೆಗೆ ನೀಡಿರುವ ಉತ್ತರವನ್ನೇ 2023-24ನೇ ಸಾಲಿನ ಲೆಕ್ಕ ಪರಿಶೋಧನೆಗೂ ಉತ್ತರಿಸಿರುತ್ತಾರೆ.

ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ರವರು ಹೊರಡಿಸಿರುವ ಸುತ್ತೋಲೆ ಸಂಖ್ಯೆ:ಇಡಿ 54 ಯುಎಸ್‌ಎ 2022 ದಿ:12–09–2022ರಲ್ಲಿ "ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ಹುದ್ದೆಗಳನ್ನು ಸೃಜಿಸಲು ಹಾಗೂ ಭರ್ತಿ ಮಾಡಿಕೊಳ್ಳಲು ಸರ್ಕಾರದ ಅನುಮತಿಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೆ, ಕೆಲವು ವಿಶ್ವವಿದ್ಯಾನಿಲಯಗಳು ಸರ್ಕಾರದ ಅನುಮತಿ ಪಡೆಯದೇ ಹಾಗೂ ಪರಿನಿಯಮಗಳನ್ನು ರಚಿಸಿಕೊಳ್ಳದೇ ನೇಮಕಾತಿ, ಬಡ್ತಿ, ಹುದ್ದೆಗಳನ್ನು ಉನ್ನತೀಕರಿಸುತ್ತಿರುವುದು ಹಾಗೂ ಹೆಚ್ಚುವರಿ ಬಡ್ತಿಗಳನ್ನು ನೀಡುತ್ತಿರುವುದರಿಂದ ಸರ್ಕಾರ ಹಾಗೂ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗುತ್ತಿರುವ ಕುರಿತು ಸರ್ಕಾರದಲ್ಲಿ ದೂರುಗಳು ಸ್ವೀಕೃತವಾಗುತ್ತಿರುವುದರಿಂದ, ಇಂತಹ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಹಾಗೂ ಆರ್ಥಿಕ ಶಿಸ್ತನ್ನು ಪಾಲಿಸುವುದು ಅತ್ಯವಶ್ಯಕವಾಗಿರುತ್ತದೆ" ಎಂದು ತಿಳಿಸಿದ್ದರೂ ಕೂಡ ಸರ್ಕಾರದ ಅನುಮೋದನೆ ಅಥವಾ ಮಾನ್ಯ ಕುಲಾಧಿಪತಿಗಳಿಂದ ಅನುಮೋದಿತ ಪರಿನಿಯಮವೂ ಇಲ್ಲದೆಯೇ ಸರ್ಕಾರದ ಮೀಸಲಾತಿ ಕಾರ್ಯ ನೀತಿಯನ್ನು ಉಲ್ಲಂಘಿಸುವುದರ ಜೊತೆಗೆ ಮಂಜೂರಾಗಿರದ ಹುದ್ದೆಗಳಿಗೆ ತಾತ್ಕಾಲಿಕ ನೌಕರರನ್ನು ನೇಮಕಾತಿ ಮಾಡಿಕೊಂಡು ಸರ್ಕಾರದ ನಿರ್ದೇಶನವನ್ನು ಉಲ್ಲಂಘಿಸಿರುವುದು ಕಂಡುಬರುತ್ತದೆ.

ಆದುದರಿಂದ ಸರ್ಕಾರದ ನಿರ್ದೇಶನಗಳನ್ನು ಉಲ್ಲಂಘಿಸಿ 207 ಮಂದಿ ತಾತ್ಕಾಲಿಕ ನೌಕರರನ್ನು ಕಾಲಿಕ ವೇತನ ಶ್ರೇಣಿ ನೌಕರರುಗಳೆಂದು ನೇಮಕಾತಿ ಮಾಡಿಕೊಂಡಿರುವ ವಿಶ್ವವಿದ್ಯಾನಿಲಯದ ಕುಲಪತಿ, ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳ ವಿರುದ್ಧ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ ಹಾಗೂ ಮಾರ್ಚ್–23 ರಿಂದ ಫೆಬ್ರವರಿ–2024 ರವರೆಗೆ ಪಾವತಿಸಿರುವ ವೇತನ ರೂ.7,38,45,960/–ಗಳು ಮತ್ತು ತುಟ್ಟಿ ಭತ್ಯೆ ಬಾಕಿ ರೂ.13,05,217/– ಸೇರಿ ಒಟ್ಟು **ರೂ.7,51,51,177/–ಗಳನ್ನು** ವಿಶ್ವವಿದ್ಯಾನಿಲಯದ ಕುಲಪತಿ, ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳಿದ ವಸೂಲಿಸಲು ಸೂಚಿಸಿದೆ ವಿವರಗಳನ್ನು **ಅನುಬಂಧ–26** ರಲ್ಲಿ ನೀಡಲಾಗಿದೆ.

21.8 ರಜೆ ವಂತಿಕೆ ಮತ್ತು ಪಿಂಚಣಿ ವಂತಿಕೆ ಜಮೆ ಸಂಬಂಧದ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.

2023–24ನೇ ಸಾಲಿನಲ್ಲಿ ವಾರ್ಷಿಕ ಲೆಕ್ಕಪತ್ರದನ್ವಯ ರಜೆ ವಂತಿಕೆ ಮತ್ತು ಪಿಂಚಣಿ ವಂತಿಕೆ ಲೆಕ್ಕ ಶೀರ್ಷಿಕೆ ಸಂಖ್ಯೆ:324ರಲ್ಲಿ ರೂ.9,79,012/–ಗಳ ವೆಚ್ಚ ತೋರಿಸಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ಮತ್ತು ನೌಕರರ ವೈಯಕ್ತಿಕ ಕಡತಗಳು, ಪಾವತಿ ವೋಚರ್, ಹಾಗೂ ಜಮಾ ಸಂಬಂಧದ ಎಲ್ಲಾ ಮೂಲ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:19/07.11.2024ನ್ನು ನೀಡಲಾಗಿತ್ತು. ಆದರೆ ವಿಶ್ವವಿದ್ಯಾನಿಲಯದವರು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಆದುದರಿಂದ ರಜೆ ವಂತಿಕೆ ಮತ್ತು ಪಿಂಚಣಿ ವಂತಿಕೆಗೆ ಸಂಬಂಧಪಟ್ಟ ಇಲಾಖೆಗೆ ಜಮೆ ಮಾಡಿರುವ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವವರೆಗೂ **ರೂ.9,79,012/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.**

21.9 ಶ್ರೀ ಲೋಕೇಶ್ ಜಿ.ಎಸ್. (ತಾತ್ಕಾಲಿಕ) ಇವರನ್ನು ಕಾಲಿಕ ವೇತನ ಶ್ರೇಣಿಯಡಿ (Graded Pay) ಎಸ್ಟೇಟ್ ಆಫೀಸರ್ ಹುದ್ದೆಗೆ ನೇಮಕ ಮಾಡಿ ಇಂಜಿನಿಯರಿಂಗ್ ವಿಭಾಗಕ್ಕೆ ನಿಯೋಜಿಸಿರುವುದು.

ಲೋಕೇಶ್ ಜಿ.ಎಸ್, ಸಂಯೋಜನಾಧಿಕಾರಿ(ತಾತ್ಕಾಲಿಕ) ಇವರನ್ನು ವಿಶ್ವವಿದ್ಯಾನಿಲಯದ ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/977/2022-23 ದಿನಾಂಕ:27-09-2022ರಲ್ಲಿ ಪದನಾಮ ಬದಲಾವಣೆ ಮಾಡಿ ಕಾಲಿಕ ವೇತನ ಶ್ರೇಣಿ (Graded Pay) ಅಡಿ ಎಸ್ಟೇಟ್ ಆಫೀಸರ್ ಹುದ್ದೆಗೆ ನೇಮಕ ಮಾಡಿ ಇಂಜಿನಿಯರಿಂಗ್ ವಿಭಾಗಕ್ಕೆ ನಿಯೋಜಿಸಿ ಮಾಹೆಯಾನ ಮೂಲ ವೇತನ ರೂ.67,540/-ಗಳ ಜೊತೆಗೆ ಇತರೆ ಸೌಲಭ್ಯಗಳನ್ನು (ಡಿಎ, ವಾರ್ಷಿಕ 10 ಸಾಂದರ್ಭಿಕ ರಜೆಗಳು, 02 ನಿರ್ಬಂಧಿತ ರಜೆಗಳು) ಹಾಗೂ ಕಛೇರಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/977/2022-23, ದಿನಾಂಕ:02-02-2023ರಲ್ಲಿ ಅರ್ಧ ವೇತನ ರಜೆ, ಉಪಧನ ಮತ್ತು ಸೇವಾವಹಿ ಸೌಲಭ್ಯಗಳನ್ನು ಮಂಜೂರು ಮಾಡಿ ಆದೇಶಿಸಿರುವುದನ್ನು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ 21.15 ರಲ್ಲಿ ಆಕ್ಷೇಪಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ 2023-24ನೇ ಸಾಲಿನಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಸೂಕ್ತ ಪೂರಕ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ: 103/01.01.2025ರಂದು ನೀಡಲಾಗಿತ್ತು.

ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿ ದಿನಾಂಕ:26.08.2022 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 169ನೇ ಸಭೆಯ ತೀರ್ಮಾನದನ್ವಯ ಹಾಗೂ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಲೋಕೇಶ್.ಜಿ.ಎಸ್, ಇವರನ್ನು ಎಸ್ಟೇಟ್ ಆಫೀಸರ್(ಕಾ.ವೇ.ಶ್ರೇ) ಆಗಿ ನೇಮಕ ಮಾಡಿ ಮಾಹೆಯಾನ ಮೂಲ ವೇತನ ರೂ.67,540/-ಗಳ ಜೊತೆಗೆ ಇತರೆ ಸೌಲಭ್ಯಗಳನ್ನು ಜಾರಿಗೊಳಿಸಲಾಗಿದೆ. ಮತ್ತು ದಿನಾಂಕ:21.01.2023 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 170ನೇ ಸಭೆಯ ತೀರ್ಮಾನದನ್ವಯ ಹಾಗೂ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಮಾಹೆಯಾನ ವೇತನ ಮತ್ತು ಇತರೆ ಸೌಲಭ್ಯಗಳ ಜೊತೆಗೆ ಅರ್ಧವೇತನ ರಜೆ, ಗ್ರಾಜುಯಿಟಿ ಹಾಗೂ ಸೇವಾ ಪುಸ್ತಕ ಸೌಲಭ್ಯಗಳನ್ನು ಜಾರಿಗೊಳಿಸಲಾಗಿರುತ್ತದೆ ಎಂದು ಅನುಪಾಲನಾ ವರದಿ ಸಲ್ಲಿಸಿರುತ್ತಾರೆ. ಆದರೆ ವಿಚಾರಣಾ ಪತ್ರದಲ್ಲಿ ಕೋರಿರುವ ದಾಖಲೆಗಳನ್ನು ಮತ್ತು ಹಿಂದಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ:21.15ರಲ್ಲಿ ಆಕ್ಷೇಪಿಸಿರುವ ನ್ಯೂನತೆಗಳಿಗೆ ಕೈಗೊಂಡ ಕ್ರಮದ ಬಗ್ಗೆ ಯಾವುದೇ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ದಿನಾಂಕ:26-08-2022ರಂದು ನಡೆದಿರುವ 169ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ನ್ಯಾ.ಡಾ.ಭಕ್ತವತ್ಸಲ ಸಮಿತಿಯ ವಿಚಾರಣೆ ನಂತರದ ಅವಧಿಯಲ್ಲಿ ನೇಮಕಗೊಂಡಿರುವ ತಾತ್ಕಾಲಿಕ ನೌಕರರುಗಳಿಗೂ ಸಹ ವಿದ್ಯಾರ್ಹತೆಗೆ ತಕ್ಕಂತೆ ಹುದ್ದೆಯ ಪದನಾಮಗೊಳಿಸಲು ಮಂಡಳಿಯ ಸದಸ್ಯರು ಸಲಹೆ ನೀಡಿದ್ದು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಾಯ್ದೆ-1992ರ ಎರಡನೇ ಅನುಸೂಚಿಯ ಪರಿನಿಯಮದ ನಿಯಮ-2(9)(iii)ರನ್ವಯ ವಿಶ್ವವಿದ್ಯಾನಿಲಯದ ಕಾರ್ಯನಿರ್ವಹಣೆಗೆ ಅವಶ್ಯಕವೆಂದು ಪರಿಗಣಿಸಬಹುದಾದ ಅಂಥ ವ್ಯಕ್ತಿಗಳನ್ನು ಒಂದು ಬಾರಿಗೆ ಆರು ತಿಂಗಳಿಗೆ ಮೀರದ ಅವಧಿಗೆ ಮಾತ್ರ ನೇಮಕಾತಿಯನ್ನು ಮಾಡುವುದಾಗಿದ್ದು, ಈ ರೀತಿ ಹುದ್ದೆಯಲ್ಲಿ ಮುಂದುವರೆಸುವ ಮತ್ತು ವೇತನ ಹೆಚ್ಚಳ ಮಾಡುವುದಕ್ಕೆ ಅಧಿನಿಯಮ ಮತ್ತು ಸರ್ಕಾರದ ಸ್ಥಾಯಿ ಆದೇಶಗಳ ಅನುಸಾರ ಅವಕಾಶವಿಲ್ಲದಿರುವ ಬಗ್ಗೆ ಮಂಡಳಿಯ ಸದಸ್ಯರಿಗೆ ವಿಶ್ವವಿದ್ಯಾನಿಲಯದ ಕುಲಪತಿಗಳು, ಕುಲಸಚಿವರು ಮನವರಿಕೆ ಮಾಡಿಕೊಟ್ಟಿರುವುದಕ್ಕೆ ಯಾವುದೇ ದಾಖಲೆಗಳು ಇರುವುದಿಲ್ಲ. ಅದಕ್ಕೆ ಬದಲಾಗಿ ನಿಯಮಗಳನ್ನು ಉಲ್ಲಂಘಿಸಿ ಕಾಲಿಕ ವೇತನ, ನಿಗದಿಪಡಿಸಿ ತುಟ್ಟಿ

ಭತ್ಯೆ, ವಾರ್ಷಿಕ 10 ದಿನಗಳ ಸಾಂದರ್ಭಿಕ ರಜೆ, ಅರ್ಧ ವೇತನ ರಜೆ, 02 ದಿನಗಳ ನಿರ್ಬಂಧಿತ ರಜೆ ಹಾಗೂ ಉಪಧನ ಸೌಲಭ್ಯಗಳನ್ನು ಮಂಜೂರು ಮಾಡುವುದರ ಜೊತೆಗೆ ಸೇವಾ ವಹಿ ತೆರೆಯಲು ಸೂಚಿಸಿ ಆದೇಶ ಹೊರಡಿಸಿರುವುದು ಕಾನೂನು ಬಾಹಿರ ಕ್ರಮವಾಗಿದ್ದು, ನಿಯಮಬಾಹಿರವಾಗಿ ನೇಮಕ ಮಾಡಿರುವ ಶ್ರೀ ಲೋಕೇಶ್ ಜಿ.ಎಸ್. ಇವರನ್ನು ಸೇವೆಯಿಂದ ಬಿಡುಗಡೆ ಮಾಡಿ, ಎಸ್ಟೇಟ್ ಆಫೀಸರ್ ಹುದ್ದೆಯನ್ನು ನೇರ ನೇಮಕಾತಿ ಅಥವಾ ಮರು ನಿಯೋಜನೆ ಮೇಲೆ ನೇಮಕಾತಿ ಮಾಡಲು. ಹಾಗೂ ಈ ಬಗೆಯ ನಿಯಮಬಾಹಿರ ಆದೇಶ ಹೊರಡಿಸಿರುವುದಕ್ಕೆ ಕಾರಣರಾದ ವಿಶ್ವವಿದ್ಯಾನಿಲಯದ ಕುಲಪತಿಗಳು, ಕುಲಸಚಿವರುಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಿದೆ.

ಮಂಜೂರಾತಿಯೇ ಇಲ್ಲದ ಸಂಯೋಜನಾಧಿಕಾರಿ ಹಾಗೂ ನಿಯಮಬಾಹಿರವಾಗಿ ನೇಮಿಸಿದ ಎಸ್ಟೇಟ್ ಆಫೀಸರ್ ಹುದ್ದೆಗಳಲ್ಲಿ ಶ್ರೀ ಲೋಕೇಶ್ ಜಿ.ಎಸ್. ಇವರಿಗೆ ಪಾವತಿಸಿರುವ ವೇತನದ ವಿವರಗಳು ಕೆಳಕಂಡಂತಿರುತ್ತದೆ.

ಮಾಹೆ	ಮೂಲ ವೇತನ	ತುಟ್ಟಿ ಭತ್ಯೆ	ಒಟ್ಟು ಪಾವತಿ
ತುಟ್ಟಿ ಭತ್ಯೆ ಬಾಕಿ		21,354	21,354
ಮಾರ್ಚ್–23	67,540	20,937	88,477
ಏಪ್ರಿಲ್–2023	67,540	20,937	88,477
ಮೇ–2023	67,540	20,937	88,477
ಜೂನ್–2023	67,540	20,937	88,477
ಜುಲೈ–2023	67,540	20,937	88,477
ಆಗಸ್ಟ್–2023	67,540	20,937	88,477
ಸೆಪ್ಟೆಂಬರ್–2023	67,540	23,639	91,179
ಅಕ್ಟೋಬರ್–2023	67,540	26,172	93,712
ನವೆಂಬರ್–2023	67,540	26,172	93,712
ಡಿಸೆಂಬರ್–2023	67,540	26,172	93,712
ಜನವರಿ–2024	67,540	26,172	93,712
ಫೆಬ್ರವರಿ–2024	67,540	26,172	93,712
		ಒಟ್ಟು	**12,05,667**

ಮಂಜೂರಾತಿಯೇ ಇಲ್ಲದ ಸಂಯೋಜನಾಧಿಕಾರಿ ಹಾಗೂ ನಿಯಮಬಾಹಿರವಾಗಿ ನೇಮಿಸಿದ ಎಸ್ಟೇಟ್ ಆಫೀಸರ್ ಹುದ್ದೆಗಳಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಾಯ್ದೆ–1992ರ ಎರಡನೇ ಅನುಸೂಚಿಯ ಪರಿನಿಯಮದ ನಿಯಮ–2(9)(iii)ರ ಅವಕಾಶಗಳಿಗೆ ವಿರುದ್ಧವಾಗಿ ಶ್ರೀ ಲೋಕೇಶ್.ಜಿ.ಎಸ್. ಇವರನ್ನು ನೇಮಕಾತಿ ಮಾಡಿಕೊಂಡು 2023–24ನೇ ಸಾಲಿನಲ್ಲಿ ಪಾವತಿಸಿರುವ ಒಟ್ಟು ಮೊತ್ತ **ರೂ.12,05,667/–ಗಳನ್ನು**

ಇದಕ್ಕೆ ಕಾರಣರಾದ ವಿಶ್ವವಿದ್ಯಾನಿಲಯದ ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳಿಂದ **ವಸೂಲಿಸಲು** ಸೂಚಿಸಿದೆ.

21.10 ನೇರ ನೇಮಕಾತಿ ಹುದ್ದೆಗಳನ್ನು ಪದೋನ್ನತಿ ಮೂಲಕ ಭರ್ತಿ ಮಾಡಿ ರೂ.7,46,145/–ಗಳನ್ನು ಪಾವತಿಸಿರುವುದು.

ವಿಶ್ವವಿದ್ಯಾನಿಲಯದ ಪರಿನಿಯಮ XXXVI ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಉಪ ಕುಲಸಚಿವರು/ ಸಹಾಯಕ ಕುಲಸಚಿವರು/ಅಧೀಕ್ಷಕರು/ಹಿರಿಯ ಸಹಾಯಕರ/ಪ್ರಥಮ ದರ್ಜೆ ಗುಮಾಸ್ತರ ವಿದ್ಯಾರ್ಹತೆ ಮತ್ತು ನೇಮಕಾತಿ ವಿಧಾನಗಳ ಪರಿನಿಯಮಗಳ ಕೋಷ್ಟಕದಲ್ಲಿನ ಕ್ರ.ಸಂ–5ರಲ್ಲಿ ಪ್ರಥಮ ದರ್ಜೆ ಗುಮಾಸ್ತರ ವೃಂದ ಬಲದ ಶೇ.50ರಷ್ಟು ನೇಮಕಾತಿಯನ್ನು ನೇರ ನೇಮಕಾತಿಯ ಮೂಲಕ, ಉಳಿದ ಶೇ.50ರಷ್ಟು ನೇಮಕಾತಿಯನ್ನು ಪದೋನ್ನತಿಯ ಮೂಲಕ ಮಾಡಬೇಕಾಗಿರುತ್ತದೆ.

ಆದರೆ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/776/2022–23, ದಿನಾಂಕ:25–10–2022ರಲ್ಲಿ 30 ಜನ ದ್ವಿತೀಯ ದರ್ಜೆ ಗುಮಾಸ್ತ, ಬೆರಳಚ್ಚುಗಾರ ಕಮ್ ಗುಮಾಸ್ತ ಹಾಗೂ ಡಾಟಾ ಎಂಟ್ರಿ ಆಪರೇಟರ್‌ಗಳಿಗೆ ಪ್ರಥಮ ದರ್ಜೆ ಗುಮಾಸ್ತರ ಹುದ್ದೆಗೆ ಮುಂಬಡ್ತಿ ನೀಡಲಾಗಿದೆ. ಸದರಿ ಕಛೇರಿ ಆದೇಶದ ಪ್ರಸ್ತಾವನೆಯ ಭಾಗದಲ್ಲಿ 32 ನೇರ ನೇಮಕಾತಿಯ ಹುದ್ದೆಗಳಲ್ಲಿ 30 ಹುದ್ದೆಗಳನ್ನು ಪದೋನ್ನತಿಯ ಹುದ್ದೆಗಳಾಗಿ ಪರಿವರ್ತಿಸಿ ನೇರ ನೇಮಕಾತಿಯ ಹುದ್ದೆಗಳನ್ನು ನಿಯಮಬಾಹಿರವಾಗಿ ಪದೋನ್ನತಿ ಮೂಲಕ ಭರ್ತಿ ಮಾಡಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ 27 ಮಂದಿ ನೌಕರರಿಗೆ ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡಿ ಆದೇಶಿಸಿರುವುದನ್ನು 2022–23ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ 21.06ರಲ್ಲಿ ಆಕ್ಷೇಪಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ 2023–24ನೇ ಸಾಲಿನಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಸೂಕ್ತ ಪೂರಕ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ: 86/30.12.2024ನ್ನು ನೀಡಲಾಗಿತ್ತು.

ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿ ಬೋಧಕೇತರ 30 ಮಂದಿ ನೌಕರರುಗಳಿಗೆ ಪ್ರಥಮ ದರ್ಜೆ ಗುಮಾಸ್ತರಿಗೆ ಮುಂಬಡ್ತಿ ನೀಡುವಾಗ ನೇರ ನೇಮಕಾತಿಯಡಿ ಭರ್ತಿ ಮಾಡಬೇಕಾದ ಹುದ್ದೆಗಳಿಗೆ ಪದೋನ್ನತಿ ನೀಡಿರುವ ವಿಶ್ವವಿದ್ಯಾನಿಲಯದ ಪ್ರಕ್ರಿಯೆ ವಿಷಯವಾಗಿ ವಿಶ್ವವಿದ್ಯಾನಿಲಯದ ಬೋಧಕೇತರ ನೌಕರರುಗಳ ಕುಂದು ಕೊರತೆ ಸಮಿತಿ ಸಭೆಯಲ್ಲಿನ ತೀರ್ಮಾನದಂತೆ ಕ್ರಮವಹಿಸಲು ವಿಶ್ವವಿದ್ಯಾನಿಲಯದ 174ನೇ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಸದರಿ ವಿವಿಧ ಹುದ್ದೆಗಳಿಗೆ ಪದೋನ್ನತಿ ನೀಡಿರುವುದನ್ನು ವಿ.ವಿ ನಿಲಯವು ಕಛೇರಿ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–02/776/2023–24, ದಿನಾಂಕ: 20.10.2023ರಂದು ಆದೇಶವಾಗಿರುತ್ತದೆ. ಮಾಹಿತಿಗಾಗಿ 174ನೇ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನ ಹಾಗೂ ಕ್ರಮಬದ್ಧಗೊಳಿಸಿದೆ ಎಂದು ಅನುಪಾಲನಾ ವರದಿ ಸಲ್ಲಿಸಿರುತ್ತಾರೆ.

ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಪದೋನ್ನತಿ ನೀಡಿರುವುದನ್ನು ಪರಿಶೀಲಿಸುವ ಸಂಬಂಧ ರಚಿಸಲಾಗಿದ್ದ ಪರಿಶೀಲನಾ ಸಮಿತಿಯು ದಿನಾಂಕ:09–03–2023ರ ನಡಾವಳಿಯಲ್ಲಿ ವಿಶ್ವವಿದ್ಯಾನಿಲಯದ ದಿನಾಂಕ:25–10–2022ರ ಆದೇಶದಲ್ಲಿ ನೇರ ನೇಮಕಾತಿಗೆ ಮೀಸಲಿರಿಸಿರುವ ಹುದ್ದೆಗಳು

ನೇರ ನೇಮಕಾತಿಗೆ ಮಾತ್ರ ಸೀಮಿತವಾಗಿದ್ದು, ಪದೋನ್ನತಿಗೆ ಪರಿಗಣಿಸುವುದು ನಿಯಮಗಳಿಗೆ ವಿರುದ್ಧವಾಗಿರುತ್ತದೆ ಹಾಗೂ ಈ ಸಂಬಂಧ ವಿಶ್ವವಿದ್ಯಾನಿಲಯವು ಯಾವುದೇ ಪರಿನಿಯಮವನ್ನು ರಚಿಸಿಕೊಂಡಿರುವುದಿಲ್ಲ. ಹೀಗಾಗಿ ದಿನಾಂಕ: 25–10–2022ರ ಆದೇಶದನ್ವಯ ಪ್ರಥಮ ದರ್ಜೆ ಗುಮಾಸ್ತರ ಹುದ್ದೆಗೆ ನೀಡಲಾಗಿರುವ ಪದೋನ್ನತಿಗೆ ನಿಯಮಗಳಲ್ಲಿ ಅವಕಾಶವಿರುವುದಿಲ್ಲವೆಂದು ಹೇಳಿ, ಪದೋನ್ನತಿಯನ್ನು ಹಿಂಪಡೆಯಲು ಶಿಫಾರಸ್ಸು ಮಾಡಿರುತ್ತದೆ. ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಯ 171ನೇ ಸಾಮಾನ್ಯ ಸಭೆಯ ನಡವಳಿಗಳ ಮುಟ ಸಂ.26ರಲ್ಲಿ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳಲ್ಲಿ ಈ ಪದೋನ್ನತಿಯು ಕಾನೂನಿಗೆ ವಿರುದ್ಧವಾಗಿರುವುದರಿಂದ ಪದೋನ್ನತಿಯನ್ನು ಹಿಂಪಡೆಯಲು ಮಂಡಳಿಯ ಸದಸ್ಯರು ಅಭಿಪ್ರಾಯಿಸಿರುತ್ತಾರೆ.

ಆದರೆ ಈ ಬಗ್ಗೆ ಈವರೆಗೂ ವಿಶ್ವವಿದ್ಯಾನಿಲಯವು ನಿಯಮಬಾಹಿರವಾಗಿ ನೀಡಿರುವ ಬಡ್ತಿಯನ್ನು ಹಿಂಪಡೆಯಲು ಯಾವುದೇ ಕ್ರಮ ವಹಿಸಿರುವುದಿಲ್ಲ. ಈ ಮುಂಬಡ್ತಿ ಆದೇಶಕ್ಕೆ ಸಂಬಂಧಿಸಿದಂತೆ ದಿ: 01–01–2022 ರಲ್ಲಿದ್ದಂತೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ಜೇಷ್ಠತಾ ಪಟ್ಟಿ, ಹುದ್ದೆವಾರು ನೇರ ನೇಮಕಾತಿಗೆ ಪರಿಗಣಿಸಿ ಅನುಮೋದನೆಗೊಂಡಿರುವ ಪಟ್ಟಿ, ಸರ್ಕಾರದಿಂದ ಪೂರ್ವಾನುಮೋದನೆ ಪಡೆದ ಪತ್ರದ ಪ್ರತಿ ಅಥವಾ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆಯನ್ನು ಪಡೆದಿರುವ ಪತ್ರದ ಪ್ರತಿ ಹಾಜರುಪಡಿಸಿರುವುದಿಲ್ಲ. ಹಾಗೂ ನೇರನೇಮಕಾತಿ ಹುದ್ದೆಗಳಿಗೆ ಬಡ್ತಿಯನ್ನು ನೀಡಲು ಅಧಿನಿಯಮ ಮತ್ತು ಸರ್ಕಾರದ ಸ್ಥಾಯಿ ಆದೇಶಗಳ ಅನುಸಾರ ಅವಕಾಶವಿಲ್ಲದಿರುವ ಬಗ್ಗೆ 174ನೇ ವ್ಯವಸ್ಥಾಪನಾ ಮಂಡಳಿಯ ಸದಸ್ಯರಿಗೆ ವಿಶ್ವವಿದ್ಯಾನಿಲಯದ ಕುಲಪತಿಗಳು, ಕುಲಸಚಿವರು ಮನವರಿಕೆ ಮಾಡಿಕೊಟ್ಟಿರುವುದಕ್ಕೆ ಯಾವುದೇ ದಾಖಲೆಗಳು ಇರುವುದಿಲ್ಲ. ಅದಕ್ಕೆ ಬದಲಾಗಿ ನಿಯಮಗಳನ್ನು ಉಲ್ಲಂಘಿಸಿ ಬಡ್ತಿ ನೀಡಿರುವುದನ್ನು ಕ್ರಮಬದ್ಧಗೊಳಿಸಿತ್ತಾರೆ. ಹೀಗಾಗಿ ನಿಯಮಬಾಹಿರವಾಗಿ ನೀಡಲಾಗಿರುವ ಬಡ್ತಿಯನ್ನು ಹಿಂಪಡೆದು, ಸದರಿ ನೌಕರರಿಗೆ ಬಡ್ತಿಯಿಂದ ನೀಡಲಾದ ಹಣಕಾಸು ಸೌಲಭ್ಯಗಳ ಮೊತ್ತ **ರೂ.7,46,145/–ಗಳನ್ನು ಕುಲಸಚಿವರು**, ಹಣಕಾಸು ಅಧಿಕಾರಿಗಳು ಹಾಗೂ ಕುಲಪತಿಗಳಿಂದ **ವಸೂಲಿಸಲು** ಹಾಗೂ ಇವರುಗಳ ವಿರುದ್ಧ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ. ನೇರ ನೇಮಕಾತಿ ಹುದ್ದೆಗಳಿಗೆ ಪದೋನ್ನತಿ ನೀಡಿರುವ ವಿವರವನ್ನು **ಅನುಬಂಧ–27ರಲ್ಲಿ** ನೀಡಲಾಗಿದೆ.

21.11 ಶ್ರೀಮುನಿಸ್ವಾಮಿ, ದ್ವಿತೀಯ ದರ್ಜೆ ಗುಮಾಸ್ತರು ಇವರನ್ನು ನೇರ ನೇಮಕಾತಿ ಹುದ್ದೆಗೆದುರಾಗಿ ನಿಯಮಬಾಹಿರವಾಗಿ ಸಹಾಯಕ ನಿರ್ದೇಶಕರ ಹುದ್ದೆಗೆ ನೇಮಕ ಮಾಡಿ ರೂ.13,07,431/–ಗಳನ್ನು ಪಾವತಿಸಿರುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಛೇರಿ ಆದೇಶ ಸಂ:ಕರಾಮುವಿ/ಆವಿ/ಸಿಬ್ಬಂದಿ–2/992/2020–21. ದಿನಾಂಕ:31–01–2023ರಲ್ಲಿ ಶ್ರೀ ಮುನಿಸ್ವಾಮಿ. ದ್ವಿತೀಯ ದರ್ಜೆ ಗುಮಾಸ್ತರು ಇವರನ್ನು ಸಹಾಯಕ ನಿರ್ದೇಶಕರು, ಪ್ರಸಾರಾಂಗ ಹುದ್ದೆಗೆ ನೇಮಕ ಮಾಡಿ ಆದೇಶಿಸಲಾಗಿದೆ.

ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ (ಗ್ರೂಪ್–ಬಿ,ಸಿ,ಡಿ ಹುದ್ದೆಗಳಿಗೆ ವಿಲೀನ) ವಿಶೇಷ ಪರಿನಿಯಮ, 2022ರ ಕರಡನ್ನು ರಚಿಸಿ ಅನುಮೋದನೆ ಕೋರಿ ಸರ್ಕಾರಕ್ಕೆ ಸಲ್ಲಿಸಿದ್ದ

ಪ್ರಸ್ತಾವನೆಯನ್ನು ಸರ್ಕಾರವು ತನ್ನ ಪತ್ರ ಸಂ: ಇಡಿ 16 ಯುಒಎ 2022, ದಿನಾಂಕ:11-05-2022ರಲ್ಲಿ ಕರ್ನಾಟಕ ಸರ್ಕಾರ ವರ್ಸಸ್ ಉಮಾದೇವಿ ಮತ್ತು ಇತರರ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವ ವಿಧಿ ವಿಧಾನಗಳನ್ನು ಅನುಸರಿಸಿ ಸಾರ್ವಜನಿಕವಾಗಿ ಅರ್ಜಿ ಆಹ್ವಾನಿಸಿ ಅರ್ಹ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ ಎಂದು ಹೇಳಿ ರಾಜ್ಯ ಸರ್ಕಾರದ ಕಾರ್ಯ ನೀತಿಯಂತೆ ಲಂಬತಲ, ಸಮತಲ ಮೀಸಲಾತಿಯನ್ನು ರೋಸ್ಟರ್ ಬಿಂದುಗಳ ಅನ್ವಯ ನಿಗದಿಪಡಿಸಿ ನೇಮಕ ಮಾಡಿಕೊಳ್ಳುವಂತೆ ತಿಳಿಸಿ ಅನುಮೋದಿಸಲು ಸಾಧ್ಯವಿಲ್ಲವೆಂದು ತಿಳಿಸಿ ಹಿಂದಿರುಗಿಸಿರುತ್ತದೆ.

ಸರ್ಕಾರವು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ (ಗ್ರೂಪ್-ಬಿ,ಸಿ,ಡಿ ಹುದ್ದೆಗಳಿಗೆ ವಿಲೀನ) ವಿಶೇಷ ಪರಿನಿಯಮ, 2022ರ ಕರಡನ್ನು ಒಪ್ಪದೇ ಹಿಂದಿರುಗಿಸಿದ ನಂತರವೂ ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಸಂ:ಕರಾಮುವಿ/ಆವಿ/ಸಿಬ್ಬಂದಿ-2/1001/2022-23, ದಿನಾಂಕ:01-08-2022ರಲ್ಲಿ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡುತ್ತಿದ್ದ 10ವರ್ಷ ಪೂರೈಸಿರುವ 75 ತಾತ್ಕಾಲಿಕ ನೌಕರರನ್ನು ದಿನಾಂಕ:01-06-2022 ರಿಂದ ಅನ್ವಯವಾಗುವಂತೆ ನಿಯಮಗಳನ್ನು ಉಲ್ಲಂಘಿಸಿ ಖಾಯಂ ಮಾಡಿ ವಿಶ್ವವಿದ್ಯಾನಿಲಯದ ಪ್ರಭಾರ ಕುಲಸಚಿವರು ಆದೇಶ ಹೊರಡಿಸಿರುತ್ತಾರೆ. ಹೀಗೆ ಸರ್ಕಾರದ ನಿರ್ದೇಶನಗಳನ್ನು ಉಲ್ಲಂಘಿಸಿ, ವಿಶ್ವವಿದ್ಯಾನಿಲಯದವರು ಖಾಯಂಗೊಳಿಸಿರುವ ವಿಶ್ವವಿದ್ಯಾನಿಲಯದ 75 ತಾತ್ಕಾಲಿಕ ನೌಕರರುಗಳಲ್ಲಿ ವಿಶ್ವವಿದ್ಯಾನಿಲಯದ ಕಛೇರಿ ಆದೇಶ ಸಂ:ಕರಾಮುವಿ/ಆವಿ ಸಿಬ್ಬಂದಿ-2/992/2020-21, ದಿನಾಂಕ:31-01-2023ರಲ್ಲಿ ಸಹಾಯಕ ನಿರ್ದೇಶಕರು, ಪ್ರಸಾರಾಂಗ ಹುದ್ದೆಗೆ ನೇಮಕ ಮಾಡಿರುವ ಶ್ರೀ ಮುನಿಸ್ವಾಮಿ, ದ್ವಿತೀಯ ದರ್ಜೆ ಗುಮಾಸ್ತರು ಇವರು ಸಹ ಸೇರಿರುತ್ತಾರೆ. ಇವರ ನೇಮಕಾತಿಗೆ ಸಂಬಂಧಿಸಿದಂತೆ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ:21.7ರಲ್ಲಿ ಈ ಕೆಳಕಂಡ ಕಾರಣಗಳಿಂದ ಸದರಿಯವರ ನೇಮಕಾತಿಯನ್ನು ಆಕ್ಷೇಪಿಸಿ ಪಾವತಿಸಿರುವ ವೇತನವನ್ನು ವಸೂಲಾತಿಗೆ ಸೂಚಿಸಲಾಗಿತ್ತು. ಮುಕ್ತ ವಿಶ್ವವಿದ್ಯಾನಿಲಯವು 2023-24ನೇ ಸಾಲಿನಲ್ಲಿ ಕೈಗೊಂಡ ಕ್ರಮಗಳ ಕುರಿತು ಸೂಕ್ತ ಪೂರಕ ದಾಖಲಾತಿಗಳನ್ನು ಈ ಕೂಡಲೇ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:90/31.12.2024ರಲ್ಲಿ ಕೋರಲಾಗಿತ್ತು. ಇದಕ್ಕೆ ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿ ಈ ಕೆಳಗಿನಂತೆ ಉತ್ತರಿಸಿರುತ್ತಾರೆ.

"ವಿಶ್ವವಿದ್ಯಾನಿಲಯದ ಸಹಾಯಕ ನಿರ್ದೇಶಕರು, ಪ್ರಸಾರಂಗ ಹುದ್ದೆಗೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ 163ನೇ ವ್ಯವಸ್ಥಾಪನಾ ಮಂಡಳಿಯ ತೀರ್ಮಾನದಂತೆ ಸಮಿತಿಯನ್ನು ರಚಿಸಲಾಗಿತ್ತು ಸಮಿತಿಯ ತೀರ್ಮಾನದಂತೆ ಅಧಿಸೂಚನೆ ಹೊರಡಿಸಿ ಅರ್ಜಿ ಸ್ವೀಕರಿಸಿ ಸಮಿತಿ ಅರ್ಜಿಗಳನ್ನು ಪರಿಶೀಲಿಸಿ ಸೂಕ್ತ ಅರ್ಹ ಅಭ್ಯರ್ಥಿಯನ್ನು ಆಯ್ಕೆ ಮಾಡಿ ನಡಾವಳಿಯನ್ನು 170ನೇ ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಲಾಗಿತ್ತು. ಸಮಿತಿಯು ಆಯ್ಕೆ ಮಾಡಿದ್ದ ಶ್ರೀ ಮುನಿಸ್ವಾಮಿ, ಇವರನ್ನು ನೇಮಕ ಮಾಡಲು 170ನೇ ವ್ಯವಸ್ಥಾಪನಾ ಮಂಡಳಿ ಸಭೆಯು ತೀರ್ಮಾನಿಸಿದ ಹಿನ್ನೆಲೆಯಲ್ಲಿ ಸದರಿ ತೀರ್ಮಾನವನ್ನು ಅನುಷ್ಠಾನಗೊಳಿಸುವ ಸಂಬಂಧ ಕಛೇರಿ ಆದೇಶ ಸಂ. ಕರಾಮುವಿ/ಆವಿ/ಸಿಬ್ಬಂದಿ-02/992/2020-21, ದಿನಾಂಕ: 31.01.2023ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ ಎಂದು ಅನುಪಾಲನಾ ವರದಿ ಸಲ್ಲಿಸಿರುತ್ತಾರೆ.

ವಿಶ್ವವಿದ್ಯಾನಿಲಯದವರು ಸಲ್ಲಿಸಿರುವ ಅನುಪಾಲನಾ ವರದಿಯನ್ನು ಈ ಕೆಳಗಿನ ಕಾರಣಗಳಿಂದ ವಿಶ್ವವಿದ್ಯಾನಿಲಯದ ಗ್ರೂಪ್–ಬಿ ವೃಂದದ ಹುದ್ದೆಗೆ ಅರ್ಹರಲ್ಲದವರನ್ನು ನೇಮಕಾತಿ ಮಾಡಿರುವುದಕ್ಕೆ ಕಾರಣರಾದ ವಿಶ್ವವಿದ್ಯಾನಿಲಯದ ಕುಲಪತಿಗಳು, ಮರುನಿಯೋಜನೆ (Redeployment) ಮಾಡಲು ರಚಿಸಿರುವ ಸಮಿತಿಯ ಅಧ್ಯಕ್ಷರು, ಸದಸ್ಯರು ಹಾಗೂ ಕುಲಸಚಿವರನ್ನು ನೇರ ಹೊಣೆಗಾರರನ್ನಾಗಿಸಿ ಸದರಿಯವರಿಗೆ 2022–23 ಮತ್ತು 2023–24ನೇ ಸಾಲಿನಲ್ಲಿ ಪಾವತಿಸಿರುವ ಒಟ್ಟು **ರೂ.13,07,431/-ವೇತನ ಮತ್ತು ಭತ್ಯೆಗಳನ್ನು ವಸೂಲಿಸಲು** ಹಾಗೂ ಸದರಿ ನೇಮಕಾತಿಯನ್ನು ರದ್ದುಪಡಿಸಿ ಆ ಬಗ್ಗೆ ಅನುಪಾಲನಾ ವರದಿಯನ್ನು ನೀಡಲು ಸೂಚಿಸಿದೆ. ವಿವರವನ್ನು **ಅನುಬಂಧ–28 ರಲ್ಲಿ** ವಿವರಿಸಲಾಗಿದೆ.

1. ಸರ್ಕಾರದ ಅಧಿಸೂಚನೆ ಸಂಖ್ಯೆ :ಇಡಿ/10/ಯುಒಪಿ/2001,ದಿನಾಂಕ:25.04.2001ರಲ್ಲಿ ಪ್ರಸ್ತಾಪಿಸಿರುವ ಮೈಸೂರು ವಿಶ್ವವಿದ್ಯಾನಿಲಯದ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸಹಾಯಕ ನಿರ್ದೇಶಕರು, ಪ್ರಸಾರಾಂಗ ಹುದ್ದೆಯು ನೇರ ನೇಮಕಾತಿಯ ಹುದ್ದೆಯಾಗಿದ್ದು, ಇದಕ್ಕೆ ಕನ್ನಡ ವಿಷಯದಲ್ಲಿ ಪ್ರಥಮ ಅಥವಾ ದ್ವಿತೀಯ ದರ್ಜೆಯ ಸ್ನಾತಕೋತ್ತರ ಪದವಿಯ ವಿದ್ಯಾರ್ಹತೆಯನ್ನು ಹಾಗೂ ಗ್ರಂಥ ಸಂಪಾದನೆಯಲ್ಲಿ 5 ವರ್ಷಗಳ ಅನುಭವದ ಅರ್ಹತಾ ಮಾನದಂಡವನ್ನು ನಿಗದಿಪಡಿಸಲಾಗಿದೆ. ಇದರನ್ವಯ ನೇಮಕಾತಿಯ ಅಧಿಸೂಚನೆಯನ್ನು ವೃತ್ತ ಪತ್ರಿಕೆಗಳಲ್ಲಿ ಸಾರ್ವಜನಿಕರ ಮಾಹಿತಿಗೆ ವ್ಯಾಪಕವಾಗಿ ಪ್ರಚುರಪಡಿಸಿ ಅಗತ್ಯ ವಿದ್ಯಾರ್ಹತೆ ಮತ್ತು ಅನುಭವವಿರುವ ಎಲ್ಲಾ ಅರ್ಹ ಅಭ್ಯರ್ಥಿಗಳಿಗೂ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಬೇಕು. ಸೀಮಿತ ಸಂಖ್ಯೆಯ ಮಂದಿ ಗಮನಿಸುವ ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎನ್ನುವುದು ಪಾರದರ್ಶಕವಾದ ಕ್ರಮವಾಗಿರುವುದಿಲ್ಲ. ಅಲ್ಲದೇ ಮುಕ್ತ ವಿಶ್ವವಿದ್ಯಾನಿಲಯದ 5 ವರ್ಷಗಳ ಅನುಭವದ ಮಾನದಂಡವನ್ನು ಅಧಿಸೂಚನೆಯಲ್ಲಿ ಅದನ್ನು 3 ವರ್ಷಕ್ಕೆ ನಿಗದಿಪಡಿಸಲಾಗಿದೆ.

2. ನೇಮಕಾತಿಯ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಖಾಯಂ ಅಧ್ಯಾಪಕೇತರ ನೌಕರರಾಗಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳು ಅರ್ಜಿ ಸಲ್ಲಿಸಬಹುದು ಎಂದಿದ್ದು, ಅಧಿಸೂಚನೆಯಲ್ಲಿ ಬೇರೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದೆ? ಇಲ್ಲವೆ ಎಂಬುದರ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ಇದು ಸಾರ್ವಜನಿಕ ಸಂಸ್ಥೆಗಳ ಉದ್ಯೋಗಗಳಿಗೆ ಅರ್ಜಿ ಸಲ್ಲಿಸುವ ನಾಗರಿಕರ ಸಂವಿಧಾನಾತ್ಮಕ ಹಕ್ಕುಗಳನ್ನು ನಿರ್ಬಂಧಿಸಿದಂತಾಗುತ್ತದೆ.

3. ನೇರ ನೇಮಕಾತಿ ಮೂಲಕ ಹುದ್ದೆಯನ್ನು ಭರ್ತಿ ಮಾಡಲು ಕಾಲಾವಕಾಶ ಬೇಕಿದ್ದು, ಹುದ್ದೆಯ ತುರ್ತು ಅಗತ್ಯವಿದ್ದಾಗ ಮರುನಿಯೋಜನೆ(Redeployment) ಮೇಲೆ ಸದರಿ ಹುದ್ದೆಯ ಸಮಾನ ವೇತನ ಶ್ರೇಣಿಯ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ನೌಕರರನ್ನು ತಾತ್ಕಾಲಿಕವಾಗಿ ನಿಯುಕ್ತಿಗೊಳಿಸುವುದಕ್ಕಾಗಿ ಮಾತ್ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಖಾಯಂ ಅಧ್ಯಾಪಕೇತರ ನೌಕರರಾಗಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳು ಅರ್ಜಿ ಸಲ್ಲಿಸಬಹುದು ಎಂದು ಸೀಮಿತಗೊಳಿಸಬಹುದೇ ವಿನಃ ಖಾಯಂ ಆಗಿ ನೇಮಿಸುವ ಹುದ್ದೆಗಳಿಗಲ್ಲ. ಗ್ರೂಪ್–ಬಿ ವೃಂದದ

ಹುದ್ದೆಯಾಗಿರುವ ಸಹಾಯಕ ನಿರ್ದೇಶಕರು. ಪ್ರಸಾರಾಂಗ ಹುದ್ದೆಗೆ ಸಮಾನ ವೇತನ ಶ್ರೇಣಿ ಹೊಂದಿಲ್ಲದ ದ್ವಿತೀಯ ದರ್ಜೆ ನೌಕರರಾಗಿ ಕಾರ್ಯ ನಿರ್ವಹಿಸುತ್ತಿರುವವರನ್ನು (ಅವರ ಖಾಯಮಾತಿಯೂ ಪ್ರಶ್ನಾರ್ಹವಾಗಿರುವಾಗ) ಪರಿಗಣಿಸಲು ಬರುವುದಿಲ್ಲ

4. ಮುಕ್ತ ವಿಶ್ವವಿದ್ಯಾನಿಲಯದವರು ಸಹಾಯಕ ನಿರ್ದೇಶಕರು, ಪ್ರಸಾರಾಂಗ ಹುದ್ದೆಗೆ ನೇಮಿಸಿರುವ ಶ್ರೀ ಮುನಿಸ್ವಾಮಿ, ದ್ವಿತೀಯ ದರ್ಜೆ ಗುಮಾಸ್ತರು ಇವರು ತಮ್ಮ ನೇಮಕಾತಿಗಾಗಿ ಅರ್ಜಿಯೊಡನೆ ಮೈಸೂರಿನ ಶ್ರೀ ರಾಜೇಂದ್ರ ಪ್ರಿಂಟರ್ಸ್ ಆಂಡ್ ಪಬ್ಲಿಷರ್ಸ್ ಇವರಲ್ಲಿ 2006ರ ಜನವರಿ 3ರಿಂದ 2009ರ ಡಿಸೆಂಬರ್ 30ರವರೆಗೆ ಕರಡು ಪರಿಶೀಲಕರಾಗಿ ಸೇವೆ ಸಲ್ಲಿಸುತ್ತಿದ್ದುದಕ್ಕೆ ಸೇವಾ ಪ್ರಮಾಣ ಪತ್ರವನ್ನು ಪಡೆದು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ. ವಿಶ್ವವಿದ್ಯಾನಿಲಯದ 75 ತಾತ್ಕಾಲಿಕ ನೌಕರರನ್ನು ಸರ್ಕಾರದ ನಿರ್ದೇಶನಗಳನ್ನು ನಿರ್ಲಕ್ಷಿಸಿ ಖಾಯಂಗೊಳಿಸಿರುವ ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಸಂ:ಕರಾಮುವಿ/ಆವಿ/ಸಿಬ್ಬಂದಿ-2/1001/2022-23,ದಿನಾಂಕ:01-08-2022ರಲ್ಲಿ ಶ್ರೀ ಮುನಿಸ್ವಾಮಿಯವರು ದಿನಾಂಕ:19-02-2003ರಂದು ತಾತ್ಕಾಲಿಕ ಸೇವೆಗೆ ವರದಿ ಮಾಡಿಕೊಂಡಿರುವುದಾಗಿ ನಮೂದಾಗಿರುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಾ ಮುದ್ರಣಾಲಯದಲ್ಲಿ ಕರಡು ಪರಿಶೀಲನೆ ಮಾಡುತ್ತಿರುವುದಾಗಿ ಪ್ರಮಾಣ ಪತ್ರ ಸಲ್ಲಿಸಿರುವುದು ವಂಚನೆಯ ಪ್ರಕರಣದಂತೆ ಕಂಡು ಬರುತ್ತದೆ

5. ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಉದ್ದೇಶಿಸಿದ ಸಹಾಯಕ ನಿರ್ದೇಶಕರು, ಪ್ರಸಾರಾಂಗ ಹುದ್ದೆಗೆ ಅರ್ಜಿ ಸಲ್ಲಿಸಲು ವಿಶ್ವವಿದ್ಯಾನಿಲಯದ ಅಧಿಸೂಚನೆಯಲ್ಲಿ ವಯೋಮಿತಿಯನ್ನೇ ನಿಗದಿಪಡಿಸಿರುವುದಿಲ್ಲ. ಸದರಿ ಹುದ್ದೆಗೆ ನೇಮಕ ಮಾಡಿರುವ ಶ್ರೀ ಮುನಿಸ್ವಾಮಿ, ದ್ವಿತೀಯ ದರ್ಜೆ ಗುಮಾಸ್ತರು ಇವರು ಹುಟ್ಟಿದ ದಿನಾಂಕ:15-06-1972 ಇದ್ದು, ಇವರನ್ನು ಇವರ 50ನೇ ವಯಸ್ಸಿನಲ್ಲಿ ವಿಶ್ವವಿದ್ಯಾನಿಲಯದ ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಯಲ್ಲಿ ನಿಯಮಗಳನ್ನು ಉಲ್ಲಂಘಿಸಿ ಖಾಯಂ ಮಾಡಲಾಗಿದ್ದು, ಅರ್ಹತಾ ಮಾನದಂಡಗಳನ್ನು ಸೂಕ್ತ ರೀತಿಯಲ್ಲಿ ನಿಗದಿಪಡಿಸದೆ ಇವರನ್ನು ಇವರ ವಯಸ್ಸು ಸಹಾಯಕ ನಿರ್ದೇಶಕರ ಹುದ್ದೆಯ ನೇಮಕಾತಿಯ ಆದೇಶದ ದಿನಾಂಕ:31-01-2023ಕ್ಕೆ 50 ವರ್ಷ 07 ತಿಂಗಳು 16 ದಿನಗಳು ಆಗಿರುವಾಗ ನೇರ ನೇಮಕಾತಿಯ ಹುದ್ದೆಗೆ ಪರಿಗಣಿಸಿ ಖಾಯಂ ಆಗಿ ನೇಮಿಸುವ ಮೂಲಕ ಸರ್ಕಾರದ ನಿಯಮಾವಳಿಗಳನ್ನು ಉಲ್ಲಂಘಿಸಲಾಗಿರುತ್ತದೆ.

6. ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಮರು ನಿಯುಕ್ತಿ ಮಾಡಲು ವಿಶ್ವವಿದ್ಯಾನಿಲಯದ ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/992/2022-23,ದಿನಾಂಕ:26-12-2022ರ ಕಛೇರಿ ಆದೇಶದಲ್ಲಿ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳು, ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ.ಸುಬ್ರಹ್ಮಣ್ಯ ಯಡಪಡಿತ್ತಾಯ, ಮೈಸೂರು ವಿಶ್ವವಿದ್ಯಾನಿಲಯದ ಹಾಸನ ಸ್ನಾತ್ತಕೋತ್ತರ ಕೇಂದ್ರದ ಪ್ರಾದ್ಯಾಪಕರಾದ ಪ್ರೊ.ಎಂ.ಜಿ.ಮಂಜುನಾಥರವರನ್ನು ಒಳಗೊಂಡ ಸಮಿತಿಯು ಸ್ವೀಕೃತಗೊಂಡ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಯನ್ನು ಅಯ್ಕೆ ಮಾಡಿ ಮುಚ್ಚಿದ

ಲಕೋಟೆಯಲ್ಲಿ ಸಲ್ಲಿಸಿದ ವರದಿಯನ್ನು ದಿನಾಂಕ:21–01–2023ರಂದು ನಡೆದ 170ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ನೇಮಕಾತಿ ಮಾಡಲು ತೀರ್ಮಾನ ಕೈಗೊಳ್ಳಲಾಗಿದೆ ಎಂದು ನೇಮಕಾತಿ ಆದೇಶದ ಪ್ರಸ್ತಾವನೆಯಲ್ಲಿ ತಿಳಿಸಿದ್ದು, ಸದರಿ ಸಮಿತಿಯು ಈ ನ್ಯೂನತೆಗಳನ್ನು ಪರಿಶೀಲಿಸಿ ಶಿಫಾರಸ್ಸು ಮಾಡಿದೆಯೇ ಎಂಬುದನ್ನು ಪರಿಶೀಲಿಸಲು ಸಮಿತಿಯ ಶಿಫಾರಸ್ಸುಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

21.12 ಶ್ರೀ ಸಿ.ಎಸ್. ಸುಧೀರ್‌ರವರಿಗೆ ಸಹಾಯಕ ಇಂಜಿನಿಯರ್ ಹುದ್ದೆಯಿಂದ ಸಹಾಯಕ ಕಾರ್ಯಪಾಲಕ ಅಭಿಯಂತರ ಹುದ್ದೆಗೆ ಮುಂಬಡ್ತಿ ನೀಡಿರುವುದು.

2022–23 ನೇ ಅಧಿಕೃತ ಜ್ಞಾಪನ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–2/1001/2022–23 ದಿನಾಂಕ:01–08–2022 ರಲ್ಲಿ ಕಾಲಿಕ ವೇತನ ಶ್ರೇಣಿಯಲ್ಲಿ 10 ವರ್ಷಗಳ ಸೇವೆಯನ್ನು ಪೂರೈಸಿರುವ 75 ಅರ್ಹ ನೌಕರರನ್ನು ದಿನಾಂಕ:01–06–22 ರಿಂದ ಪೂರ್ವಾನ್ವಯವಾಗುವಂತೆ ಷರತ್ತಿಗೊಳಪಟ್ಟು ಸೇವೆಯಲ್ಲಿ ವಿಲೀನಗೊಳಿಸಿ ಆದೇಶಿಸಿರುವುದನ್ನು ಹಾಗೂ ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/1001/2022–23 ದಿನಾಂಕ:03–10–2022ರಲ್ಲಿ ದಿನಾಂಕ:01–07–2011 ರಿಂದ ವೇತನವನ್ನು ಕಾಲ್ಪಾನಿಕವಾಗಿ ನಿಗಧಿಪಡಿಸಿರುವುದನ್ನು ಈಗಾಗಲೇ 2022–23ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಲಾಗಿದೆ. ಈ 75 ಸಿಬ್ಬಂದಿಗಳಲ್ಲಿ ಶ್ರೀ ಸಿ.ಎಸ್. ಸುಧೀರ್‌ರವರು ಕೂಡ ಒಬ್ಬರಾಗಿರುತ್ತಾರೆ.

2023–24ನೇ ಸಾಲಿನಲ್ಲಿ ಈ 75 ಮಂದಿ ಕಾಲಿಕ ವೇತನ ಶ್ರೇಣಿಯ ನೌಕರರಿಗೆ ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/1041/2022–23 ದಿನಾಂಕ:28–03–2023ರಲ್ಲಿ ಐದು ವರ್ಷಗಳ ಖಾಯಂ ಪೂರ್ವ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುವರೆಂದು ಘೋಷಿಸಲಾಗಿದೆ ಮತ್ತು ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/1041/2022–23 ದಿನಾಂಕ:28–03–2023ರಲ್ಲಿ ಶ್ರೀ ಸಿ.ಎಸ್. ಸುಧೀರ್‌ರವರಿಗೆ ಸಹಾಯಕ ಇಂಜಿನಿಯರ್ ಹುದ್ದೆಯಿಂದ ಸಹಾಯಕ ಕಾರ್ಯಪಾಲಕ ಅಭಿಯಂತರ ಹುದ್ದೆಗೆ ವೇತನ ಶ್ರೇಣಿ 52650–97100ರಲ್ಲಿ ಮುಂಬಡ್ತಿ ನೀಡಿರುವ ಬಗ್ಗೆ ಸೇವಾವಹಿಯ ಪುಟ 16ರಲ್ಲಿ ನಮೂದಿಸಿರುತ್ತಾರೆ. ಇವರ ವೈಯಕ್ತಿಕ ಕಡತವನ್ನು ಪರಿಶೀಲಿಸಲಾಗಿ, ಅಧಿಕೃತ ಜ್ಞಾಪನಾ ಸಂಖ್ಯೆ:ಕರಾಮುವಿ/ಆವಿ/ ಸಿಬ್ಬಂದಿ–2/228/2009–10/43/ಸಿ, ದಿನಾಂಕ:25–01–2010 ರ ಪ್ರಕಾರ ಗುತ್ತಿಗೆ ಆಧಾರದ ಮೇಲೆ 'ಸಿ' ಸೇವೆಗೆ ತಾತ್ಕಾಲಿಕವಾಗಿ ಮಾಹೆಯಾನ ಸಂಚಿತ ಸಂಭಾವನೆ ರೂ.5000/–ಗಳನ್ನು ನಿಗಧಿಪಡಿಸಿ ಕರಾಮುವಿ ಕಾಯ್ದೆಯ 2 ನೇ ಅನುಸೂಚಿಯ ಮೊದಲನೇ ಕ್ಲಾಸ್ 2(9)(iii) ರನ್ವಯ ನೇಮಕಗೊಂಡಿರುತ್ತಾರೆ ಮತ್ತು ಅಧಿಕೃತ ಜ್ಞಾಪನಾ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/793/2009–10/38/ಗ್ರಾ.ಇಂ. ದಿನಾಂಕ:05–05–2010ರಲ್ಲಿ ಸದರಿಯವರನ್ನು ಗುತ್ತಿಗೆ ಆಧಾರದ ಮೇಲೆ ಗ್ರಾಜ್ಯೂಯೇಟ್ ಇಂಜಿನಿಯರ್ ಸೇವೆಗೆ ತಾತ್ಕಾಲಿಕವಾಗಿ ನೇಮಕಗೊಂಡಿರುತ್ತಾರೆ. ಸೇವಾ ದೃಢೀಕರಣ ಪತ್ರ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/521(ಟಿಎಸ್86)/2007–08 ದಿನಾಂಕ:17–05–2007ರಲ್ಲಿ ಶ್ರೀ ಸಿ.ಎಸ್. ಸುಧೀರ್‌ರವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಗುತ್ತಿಗೆ ಆಧಾರದ ಮೇಲೆ ಆರು ತಿಂಗಳ ಅವಧಿಗೊಮ್ಮೆ ನೇಮಕಾತಿಯಾಗುವ ಷರತ್ತಿಗೊಳಪಟ್ಟು ಗ್ರಾಜ್ಯೂಯೇಟ್ ಇಂಜಿನಿಯರ್ ಆಗಿ

ದಿನಾಂಕ:19–01–2000 ರಿಂದ 04–11–2005 ರವರೆಗೆ ತಾತ್ಕಾಲಿಕವಾಗಿ ಸೇವೆ ಸಲ್ಲಿಸಿರುತ್ತಾರೆಂದು ದೃಢೀಕರಿಸಿರುತ್ತಾರೆ. ಹಾಗೂ ಇವರನ್ನು ವಿ.ವಿ ಅಧಿಕೃತ ಜ್ಞಾಪನ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–2/1001/2022–23 ದಿನಾಂಕ:01–08–2022ರನ್ವಯ ಸಹಾಯಕ ಅಭಿಯಂತರ ಹುದ್ದೆ ಎಂದು ವಿಲೀನಗೊಳಿಸಲಾಗಿದೆ.

ದಿನಾಂಕ:18.03.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 171 ನೇ ಸಾಮಾನ್ಯ ಸಭೆಯಲ್ಲಿ ಶ್ರೀ ಸಿ.ಎಸ್. ಸುಧೀರ್‌ರವರಿಗೆ ಹಿಂದಿನ ಸೇವೆಯನ್ನು ಪರಿಗಣಿಸಿ ಸಹಾಯಕ ಇಂಜಿನಿಯರ್ ಹುದ್ದೆಯಿಂದ ಸಹಾಯಕ ಕಾರ್ಯಪಾಲಕ ಅಭಿಯಂತರ ಹುದ್ದೆಗೆ ವೇತನ ಶ್ರೇಣಿ 52650–97100 ರಲ್ಲಿ ಮುಂಬಡ್ತಿ ನೀಡಲು ತೀರ್ಮಾನಿಸಿರುವುದರಿಂದ ವಿವಿ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/1041/2022–23 ದಿನಾಂಕ:28–03–2023 ಪದೋನ್ನತಿ ನೀಡಿ ಆದೇಶಿಸಲಾಗಿದೆ ಹಾಗೂ ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/776/2020–21 ದಿನಾಂಕ:18–04–2023 ರಲ್ಲಿ ಕೆ.ಸಿ.ಎಸ್.ಆರ್. ನಿಯಮ 42 ರನ್ವಯ ವೇತನವನ್ನು ನಿಗಧಿಪಡಿಸಲಾಗಿದೆ. ಸದರಿಯವರಿಗೆ ಸಹಾಯಕ ಇಂಜಿನಿಯರ್ ಹುದ್ದೆಯಿಂದ ಸಹಾಯಕ ಕಾರ್ಯಪಾಲಕ ಅಭಿಯಂತರ ಹುದ್ದೆಗೆ ಮುಂಬಡ್ತಿ ನೀಡಿರುವ ಸಂಬಂಧ ಈ ಕೆಳಕಂಡ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:118/15.01.2025ನ್ನು ನೀಡಲಾಗಿತ್ತು.

1) ಕಾಲಿಕ ವೇತನ ಶ್ರೇಣಿಯಲ್ಲಿ 10 ವರ್ಷಗಳ ಸೇವೆಯನ್ನು ಪೂರೈಸಿರುವ 75 ನೌಕರರನ್ನು ದಿನಾಂಕ: 01–06–2022ರಿಂದ ಪೂರ್ವಾನ್ವಯವಾಗುವಂತೆ ಷರತ್ತಿಗೊಳಪಟ್ಟು ಸೇವೆಯಲ್ಲಿ ವಿಲೀನಗೊಳಿಸಿ ಆದೇಶಿಸಿರುವುದಕ್ಕೆ ಪರಿನಿಯಮವನ್ನು ರಚಿಸಿಕೊಂಡು ಮಾನ್ಯ ಕುಲಾಧಿಪತಿಗಳಿಂದ ಅಂಕಿತ ಪಡೆದಿದ್ದಲ್ಲಿ ಆದೇಶ ಪ್ರತಿ.

2) ಗ್ರಾಜ್ಯೂಯೇಟ್ ಇಂಜಿನಿಯರ್ ಎಂದು ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿದ್ದ ಇವರನ್ನು ಸಹಾಯಕ ಇಂಜಿನಿಯರ್ ಎಂದು ವಿಲೀನಗೊಳಿಸಿರುವ ಬಗ್ಗೆ ಪೂರಕ ದಾಖಲೆಗಳೊಂದಿಗೆ ಸ್ಪಷ್ಟೀಕರಣ ನೀಡುವುದು.

3) ವಿಲೀನಗೊಂಡ ದಿನಾಂಕ:01–06–2022ರಂದು ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮಂಜೂರಾದ, ಕಾರ್ಯನಿರ್ವಹಿಸುತ್ತಿದ್ದ ಮತ್ತು ಖಾಲಿ ಇರುವ ಸಹಾಯಕ ಇಂಜಿನಿಯರ್ ಹುದ್ದೆಗಳ ವಿವರ ಪಟ್ಟಿ. ಹಾಗೂ ಈ ದಿನದಂದು ಸಹಾಯಕ ಇಂಜಿನಿಯರ್ ಹುದ್ದೆಗೆ ನಿಗಧಿಪಡಿಸಿದ್ದ ವಿದ್ಯಾರ್ಹತೆಗಳು ಮತ್ತು ಸದರಿಯವರು ಹೊಂದಿದ್ದ ವಿದ್ಯಾರ್ಹತೆಗೆ ಸಂಬಂಧಿಸಿದ ಎಲ್ಲಾ ಮೂಲ ದಾಖಲಾತಿಗಳು.

4) ಶ್ರೀ ಸಿ.ಎಸ್. ಸುಧೀರ್‌ರವರ ಹಿಂದಿನ ಸೇವೆಯನ್ನು ಪರಿಗಣಿಸಿ ಸಹಾಯಕ ಇಂಜಿನಿಯರ್ ಹುದ್ದೆಯಿಂದ ನಿಯೋಜನೆಗೆ ಗುರುತಿಸಲಾಗಿರುವ ಸಹಾಯಕ ಕಾರ್ಯಪಾಲಕ ಅಭಿಯಂತರ ಹುದ್ದೆಗೆ ಪದೋನ್ನತಿ ನೀಡಲು ಸರ್ಕಾರದಿಂದ ಪಡೆದ ಅನುಮೋದನಾ ಆದೇಶದ ಪ್ರತಿ.

5) ಅಧಿಸೂಚನೆ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/883/2013–14/ಸಿ.ನಂ:1308, ದಿನಾಂಕ: 27–01–2017ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರ 02 ಹುದ್ದೆಗಳಿದ್ದು, ಒಂದು ಪದೋನ್ನತಿಗೆ ಮತ್ತೊಂದು ನಿಯೋಜನೆಗೆ ನಿಗಧಿಪಡಿಸಲಾಗಿದೆ. ಪದೋನ್ನತಿಗೆ ಮೀಸಲಿಟ್ಟಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರ ಒಂದು ಹುದ್ದೆಯನ್ನು ಶ್ರೀ ವಿನೋದ ಎಂ.ಪಿ. ರವರಿಗೆ ಪದೋನ್ನತಿ ನೀಡಲಾಗಿದ್ದು, ಪ್ರಸ್ತುತ ಖಾಲಿ ಇರುವ ಮತ್ತೊಂದು ಹುದ್ದೆಯನ್ನು (ಗುರುತಿಸಲಾಗಿರುವ) ನಿಯೋಜನೆಯ ಮೂಲಕ ತುಂಬಬೇಕಾಗಿರುತ್ತದೆ. ಆದರೆ ಸದರಿ ನಿಯೋಜನಾ ಹುದ್ದೆಯನ್ನು ಪದೋನ್ನತಿ ಮೂಲಕ ತುಂಬಿರುವುದು ಮೇಲ್ಕಂಡ ಅಧಿಸೂಚನೆಯ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಹಾಗೂ ಸದರಿ ಅಧಿಸೂಚನೆಗೆ ಸಂಬಂಧಿಸಿದ ವಿಷಯ ಸಂಖ್ಯೆ:171.08 ನ್ನು ದಿನಾಂಕ: 18–03–2023ರ 171 ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿದ್ದು ಈ ವಿಷಯದಲ್ಲಿ ಯಾವುದೇ ಸ್ಪಷ್ಟ ತೀರ್ಮಾನವಾಗಿರುವುದಿಲ್ಲ.

ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿ ದಿನಾಂಕ:06.01.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳನ್ನೊಳಗೊಂಡ ನೇಮಕಾತಿ ಮಂಡಳಿಯು ನೀಡಿದ ವರದಿಯನ್ನು, ದಿನಾಂಕ:05.02.2022 ರಂದು ನಡೆದ ಮಾನ್ಯ 167ನೇ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಚರ್ಚಿಸಿದ್ದು, ಸಮಿತಿಯ ವರದಿಯನ್ನು ಪರಿಶೀಲಿಸಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಿರುವುದಾಗಿ ತೀರ್ಮಾನಿಸಲಾಗಿರುತ್ತದೆ, ಆದರಂತೆ ಮಾನ್ಯ ಕುಲಪತಿಗಳ ವಿಶ್ವವಿದ್ಯಾನಿಲಯದಲ್ಲಿ ಕಾಲಿಕ ವೇತನ ಶ್ರೇಣಿಯಲ್ಲಿ 10 ವರ್ಷಗಳ ಸೇವೆಯನ್ನು ಪೂರೈಸಿರುವ ಅರ್ಹ ನೌಕರರನ್ನು ಸೇವೆಗೆ ಸೇರಿದ ದಿನಾಂಕದಿಂದ "ಸೇವಾ ಜೇಷ್ಠತೆಯ" ಆಧಾರದ ಮೇಲೆ ವಿಶ್ವವಿದ್ಯಾನಿಲಯದಲ್ಲಿ ನೇರ ನೇಮಕಾತಿಗೆ ಚಾಲ್ತಿಯಲಿರುವ ಪರಿನಿಯಮಗಳನ್ವಯ ಅವರುಗಳ ವಿದ್ಯಾರ್ಹತೆಯನ್ನು ಪರಿಗಣಿಸಿ ಹಾಗೂ ಮೀಸಲಾತಿ ನಿಯಮಗಳನ್ನು ಅನುಸರಿಸಿ, ವಿಶ್ವವಿದ್ಯಾನಿಲಯಕ್ಕೆ ಸರ್ಕಾರದಿಂದ ಮಂಜೂರಾಗಿ ನೇರ ನೇಮಕಾತಿಗೆ ಪ್ರಸ್ತುತ ಖಾಲಿ ಇರುವ ಸಮಾನ ಖಾಯಂ ಹುದ್ದೆಗಳಲ್ಲಿ ದಿನಾಂಕ:01.06.2022 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದಂತೆ ಷರತ್ತಿಗೊಳಪಟ್ಟು ಸೇವೆಯಲ್ಲಿ ವಿಲೀನಗೊಳಿಸಿ ಆಯಾ ಹುದ್ದೆಗಳಿಗೆ ಜಾರಿಯಲ್ಲಿರುವ ವೇತನ ಶ್ರೇಣಿಯಲ್ಲಿ ನಿಯಮಾನುಸಾರ ಲಭ್ಯವಾಗುವ ಭತ್ಯೆಗಳು ಮತ್ತು ಇನ್ನಿತರೆ ಸೌಲಭ್ಯಗಳನ್ನು ಪಡೆಯಲು ಅರ್ಹರಾಗಿರುತ್ತಾರೆಂದು ಅಧಿಕೃತ ಜ್ಞಾಪನ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–02/1001/2022–23, ದಿನಾಂಕ: 01.08.2022ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ.

ಮುಂದುವರಿದಂತೆ, ಶ್ರೀ ಸಿ.ಎಸ್. ಸುಧೀರ್, ಸಹಾಯಕ ಅಭಿಯಂತರ ಇವರ ಮನವಿಯನುಸಾರ ಸದರಿ ವಿಷಯವನ್ನು ದಿನಾಂಕ:18.03.2023 ರಂದು ನಡೆದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 171ನೇ ಸಾಮಾನ್ಯ ಸಭೆಗೆ ಮಂಡಿಸಲಾಗಿ ಅನುಮೋದನೆ ಪಡದು ಇವರಿಗೆ ಸಹಾಯಕ ಅಭಿಯಂತರ ಹುದ್ದೆಯಿಂದ ಸಹಾಯಕ ಕಾರ್ಯಪಾಲಕ ಅಭಿಯಂತರ ಹುದ್ದೆಗೆ ಪದೋನ್ನತಿ ನೀಡಿ ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/1041/2022–23 ದಿನಾಂಕ: 28.03.2023ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ.

ವಿಶ್ವವಿದ್ಯಾನಿಲಯದವರೇ ನೇಮಿಸಿಕೊಂಡ ಸಮಿತಿಯ ವರದಿ ಆಧರಿಸಿ 10 ವರ್ಷ ಸೇವೆಯನ್ನು ಪೂರ್ಣಗೊಳಿಸಿದವರನ್ನು ಖಾಯಂಗೊಳಿಸಲು ಹಾಗೂ 10 ವರ್ಷ ಸೇವೆ ಪೂರೈಸದಿರುವವರನ್ನು 10ವರ್ಷಗಳ ಸೇವೆ ಪೂರೈಸಿದ ನಂತರ ಖಾಯಂ ಮಾಡಲು ಪರಿನಿಯಮಗಳನ್ನು ರೂಪಿಸಿ ಮಾನ್ಯ ಕುಲಾಧಿಪತಿಗಳ ಅನುಮೋದನೆ ದೊರಕಿಸಿಕೊಡಲು ಸರ್ಕಾರಕ್ಕೆ ಕಳುಹಿಸಿದ ಪ್ರಸ್ತಾವನೆ ತಿರಸ್ಕೃತಗೊಂಡಿದ್ದರೂ, ಪರಿನಿಯಮವು ತಿರಸ್ಕೃತಗೊಂಡ ಪತ್ರ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:20-05-2022ರಂದು ಸ್ವೀಕೃತಿಗೊಂಡಿದ್ದರೂ, ದಿನಾಂಕ: 01-08-2022 ರಂದು 75 ನೌಕರರನ್ನು ಖಾಯಂಗೊಳಿಸಿ ವಿಶ್ವವಿದ್ಯಾನಿಲಯದ ಪ್ರಭಾರ ಕುಲಸಚಿವರು ಅಧಿಕೃತ ಜ್ಞಾಪನ ಹೊರಡಿಸಿರುವುದು ಕಾನೂನುಬಾಹಿರ ಕ್ರಮವಾಗಿರುತ್ತದೆ ಎಂದು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಿಸಿದೆ ಹಾಗೂ ಸರ್ಕಾರದ ಮೀಸಲಾತಿ ನಿಯಮಗಳನ್ನು ಉಲ್ಲಂಘಿಸಿ ನೇಮಕಾತಿ ಮಾಡಿರುವ ಇವರುಗಳ ವಿರುದ್ಧ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದ್ದರೂ ಶ್ರೀ ಸಿ.ಎಸ್. ಸುಧೀರ್, ಸಹಾಯಕ ಅಭಿಯಂತರರವರನ್ನು ಸಹಾಯಕ ಕಾರ್ಯಪಾಲಕ ಅಭಿಯಂತರ ಹುದ್ದೆಗೆ ಪದೋನ್ನತಿ ನೀಡಲು ಸರ್ಕಾರದಿಂದ ಪಡೆದಿರುವ ಪೂರ್ವಾನುಮೋದಿತ ಆದೇಶದ ಪ್ರತಿ ಮತ್ತು ಮಾನ್ಯ ಕುಲಾಧಿಪತಿಗಳಿಂದ ಅಂಕಿತಗೊಂಡಿರುವ ಪರಿನಿಯಮ ಪ್ರತಿಯನ್ನು ಹಾಜರುಪಡಿಸದಿರುವುದು ಸದರಿಯವರಿಗೆ ನೀಡಿರುವ ಪದೋನ್ನತಿಯನ್ನು ಹಿಂಪಡೆದು, ಅನುಪಾಲನಾ ವರದಿಯನ್ನು ಸಲ್ಲಿಸುವುದು.

21.13 2023-24ನೇ ಸಾಲಿನಲ್ಲಿ 71 ಮಂದಿ ಬೋಧಕೇತರ ಸಿಬ್ಬಂದಿಗಳಿಗೆ ಪರೀಕ್ಷಿತಾವಧಿ ಘೋಷಿಸಿರುವ ಮತ್ತು 10 ವರ್ಷಗಳ ಕಾಲಬದ್ಧ ಮುಂಬಡ್ತಿ ಮಂಜೂರು ಮಾಡಿ ರೂ.4,01,09,693/-ಗಳು ಪಾವತಿಸಿರುವುದು.

ವಿಶ್ವವಿದ್ಯಾನಿಲಯದವರೇ ನೇಮಿಸಿಕೊಂಡ ಸಮಿತಿಯ ವರದಿ ಆಧರಿಸಿ 10 ವರ್ಷ ಸೇವೆಯನ್ನು ಪೂರ್ಣಗೊಳಿಸಿದವರನ್ನು ಖಾಯಂಗೊಳಿಸಲು ಹಾಗೂ 10 ವರ್ಷ ಸೇವೆ ಪೂರೈಸದಿರುವವರನ್ನು 10ವರ್ಷಗಳ ಸೇವೆ ಪೂರೈಸಿದ ನಂತರ ಖಾಯಂ ಮಾಡಲು ಪರಿನಿಯಮಗಳನ್ನು ರೂಪಿಸಿ ಮಾನ್ಯ ಕುಲಾಧಿಪತಿಗಳ ಅನುಮೋದನೆ ದೊರಕಿಸಿಕೊಡಲು ಸರ್ಕಾರಕ್ಕೆ ಕಳುಹಿಸಿದ ಪ್ರಸ್ತಾವನೆ ತಿರಸ್ಕೃತಗೊಂಡಿದ್ದರೂ, ಪರಿನಿಯಮವು ತಿರಸ್ಕೃತಗೊಂಡ ಪತ್ರ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:20-05-2022ರಂದು ಸ್ವೀಕೃತಿಗೊಂಡಿದ್ದರೂ, ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/1001/2022-23 ದಿನಾಂಕ: 01-08-2022ರಲ್ಲಿ ಕಾಲಿಕ ವೇತನ ಶ್ರೇಣಿಯಲ್ಲಿ 10 ವರ್ಷಗಳ ಸೇವೆಯನ್ನು ಪೂರೈಸಿರುವ 75 ಅರ್ಹ ನೌಕರರನ್ನು ದಿನಾಂಕ:01-06-2022ರಿಂದ ಪೂರ್ವಾನ್ವಯವಾಗುವಂತೆ ಷರತ್ತಿಗೊಳಪಟ್ಟು ಸೇವೆಯಲ್ಲಿ ವಿಲೀನಗೊಳಿಸಿ ಆದೇಶಿಸಿರುವುದನ್ನು ಹಾಗೂ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/1001/2022-23 ದಿನಾಂಕ:03-10-2022ರಲ್ಲಿ ದಿನಾಂಕ:01-07-2011ರಿಂದ ವೇತನವನ್ನು ಕಾಲ್ಪಾನಿಕವಾಗಿ ನಿಗಧಿಪಡಿಸಿ ಪಾವತಿಸಿರುವ ವೇತನ ಮತ್ತು ಭತ್ಯೆಗಳನ್ನು 2022-23ನೇ ಸಾಲಿನ ಲೆಕ್ಕಪರಿಶೋಧನೆ ವರದಿಯ ಕಂಡಿಕೆ ಸಂಖ್ಯೆ:21.3ರಲ್ಲಿ ಆಕ್ಷೇಪಿಸಿದೆ ಹಾಗೂ ಸರ್ಕಾರದ ಮೀಸಲಾತಿ ನಿಯಮಗಳನ್ನು ಉಲ್ಲಂಘಿಸಿ ನೇಮಕಾತಿ ಮಾಡಿರುವ ಇವರುಗಳ ವಿರುದ್ಧ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ.

2023–24ನೇ ಸಾಲಿನಲ್ಲಿ ಈ 75 ಮಂದಿ ಕಾಲಿಕ ವೇತನ ಶ್ರೇಣಿಯ ನೌಕರರಿಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/1041/2022–23 ದಿನಾಂಕ:28–03–2023ರಲ್ಲಿ ಐದು ವರ್ಷಗಳ ಪಾಯಂ ಪೂರ್ವ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುವರೆಂದು ಘೋಷಿಸಲಾಗಿದೆ ಮತ್ತು ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/1124/2022–23 ದಿನಾಂಕ:26–07–2023ರಲ್ಲಿ 71 ಮಂದಿ ವಿವಿಧ ಹುದ್ದೆಗಳಿಗೆ ವಿಲೀನಗೊಳಿಸಿರುವ ನೌಕರರಿಗೆ ಒಂದೇ ಹುದ್ದೆಯಲ್ಲಿ 10 ವರ್ಷಗಳ ಸೇವೆಯನ್ನು ಯಾವುದೇ ಪದೋನ್ನತಿ ಹೊಂದದೇ ಅವಿಚ್ಛಿನ್ನವಾಗಿ ಸೇವೆಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ ಪ್ರಯುಕ್ತ 'The Karnataka Civil Services (Time–Bound Advancement) Rules, 1983 ರಂತೆ ಹಾಗೂ ವಿಶ್ವವಿದ್ಯಾನಿಲಯದ ಪರಿನಿಯಮದ ಪ್ರಕಾರ ಕಾಲಬದ್ಧ ವೇತನ ಬಡ್ತಿಯನ್ನು ಮಂಜೂರು ಮಾಡಿ ವೇತನವನ್ನು ಪುನರ್ ನಿಗಧಿಪಡಿಸಿ ರೂ.7,36,501/–ಗಳ ವೇತನ ಬಾಕಿಯನ್ನು ವೋಚರ್ ನಂ.197/24–08–2023 ಧನಾದೇಶ ಸಂಖ್ಯೆ:24–08–2023ರಲ್ಲಿ ಪಾವತಿಸಲಾಗಿದೆ.

75 ಮಂದಿ ಸಿಬ್ಬಂದಿಯವರ ಸೇವೆ ವಿಲೀನಗೊಳಿಸಿರುವ, ಪರಿಕ್ಷೀತಾವಧಿ ಘೋಷಣೆ ಮತ್ತು 10 ವರ್ಷಗಳ ಕಾಲಬದ್ಧ ಮುಂಬಡ್ತಿ ಮಂಜೂರು ಮಾಡಿರುವ ಸಬಂಧ ಈ ಕೆಳಕಂಡ ಮೂಲ ದಾಖಲೆಗಳನ್ನು ಕೂಡಲೇ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 67/16.12.2024ನ್ನು ನೀಡಲಾಗಿದೆ.

1. 75 ಮಂದಿ ಸಿಬ್ಬಂದಿಯವರ ಸೇವೆ ವಿಲೀನಗೊಳಿಸಿರುವ ಬಗ್ಗೆ ಮಾನ್ಯ ಕುಲಾಧಿಪತಿಗಳಿಂದ ಅಂಕಿತಗೊಂಡ ಪರಿನಿಯಮ. ವೃಂದ ಮತ್ತು ನೇಮಕಾತಿ ನಿಯಮಗಳು
2. ದಿನಾಂಕ:01–04–2023ರ ಪ್ರಾರಂಭಕ್ಕೆ ವೃಂದವಾರು ಮಂಜೂರಾದ ಹುದ್ದೆಗಳು, ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಪಟ್ಟಿ.
3. 75 ಮಂದಿ ಬೋಧಕೇತರ ಸಿಬ್ಬಂದಿಗಳನ್ನು ಖಾಲಿ ಹುದ್ದೆಗೆ ವಿಲೀನಗೊಳಿಸಿರುವ ಸಂಬಂಧ ಸರ್ಕಾರಿ ಆದೇಶಗಳು. ಮೂಲ ಕಡತಗಳು ಹಾಗೂ ದಾಖಲಾತಿಗಳು.
4. ನೇಮಕಾತಿ ಸಂಬಂಧ ಸರ್ಕಾರದಿಂದ ಪಡೆಯಲಾದ ಪೂರ್ವಾನುಮತಿ ಆದೇಶದ ಪ್ರತಿಗಳು.
5. ವ್ಯವಸ್ಥಾಪನಾ ಮಂಡಳಿಯ ಅನುಮೋದನೆ.

ವಿಶ್ವವಿದ್ಯಾನಿಲಯದವರು ಮೇಲ್ಕಂಡ ಯಾವುದೇ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದೇ ಈ ಕೆಳಗಿನಂತೆ ಉತ್ತರ ನೀಡಿರುತ್ತಾರೆ.

- ಕರ್ನಾಟಕ ರಾಜ್ಯದ ಘನತವೆತ್ತ ರಾಜ್ಯಪಾಲರು ಮತ್ತು ವಿಶ್ವವಿದ್ಯಾನಿಲಯದ ಕುಲಾಧಿಪತಿಗಳು ವಿ.ವಿ.ನಿಲಯದಲ್ಲಿ ಕೆಲವು ಹಗರಣಗಳು ನಡೆದಿದೆ ಎಂಬ ದೂರುಗಳನ್ನಾಧರಿಸಿ ತನಿಖೆ ನಡೆಸಿ ವರದಿ ನೀಡಲು ದಿನಾಂಕ:19.12.2014ರ ಆದೇಶದಲ್ಲಿ ಡಾ.ನ್ಯಾಯಮೂರ್ತಿ ಕೆ ಭಕ್ತವತ್ಸಲ. ಮಾನ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಧೀಶರು, ಬೆಂಗಳೂರು ಇವರ ಏಕ ಸದಸ್ಯ ಸತ್ಯ ಶೋಧನಾ

ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಗೆ ವಹಿಸಲಾದ ಹಗರಣಗಳ ಪೈಕಿ ತಾತ್ಕಾಲಿಕ ನೇಮಕಾತಿಗೆ ಸಂಬಂಧಿಸಿದಂತೆ, ಸಮಿತಿಯು ದಿನಾಂಕ:14.10.2015 ರಂದು ಸಲ್ಲಿಸಲಾಗಿರುವ ತನಿಖಾ ವರದಿಯಲ್ಲಿ ಕೆಳಕಂಡಂತೆ ಉಲ್ಲೇಖಿಸಲಾಗಿರುತ್ತದೆ (Terms of reference No.3 & 12 consider under Chapter-IV).

I. "In the light of the decisions rendered by the Apex Court in the Cases of *Umarani, Umadevi and Renu,Supra,* I am of the view that the appointments of 88 persons (with Graded Pay) more than 171 Posts of Group-C/D Category, 29 Cleaning Staff, 26 DEO's(OACIs,), 4 security Guards, 1 Garden Supervisor and 1 Co-Ordinator on a temporary basis, are illegal and contrary to the KSOU General Recruitment Statutes, 2004, and Reservation Policy of the Government.

However, Keeping in view the age factor and the temporary employees who have served the University for a continuous period of 10 years, they may be considered for absorption as against the sanctioned posts, which are vacant.

Views and advise of His Excellency the Chancellor :

Necessary steps may be taken as per law against the persons who have been appointed. Further, appointments shall be made strictly by following the rules and reservation policy of Government.

- ದಿನಾಂಕ: 06.03.2021 ರಂದು ನಡೆದ 164ನೇ ಸಭೆಯ (ವಿಷಯ ಸಂಖ್ಯೆ: 164.06) ತೀರ್ಮಾನ (b)ನಲ್ಲಿ, ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ನೌಕರರುಗಳ ಪೈಕಿ ಅವರುಗಳ ವಯೋಮಿತಿಯನ್ನು ಆಧರಿಸಿ, ನ್ಯಾಯಾಮೂರ್ತಿ ಡಾ.ಕೆ ಭಕ್ತವತ್ಸಲ, ಏಕ ಸದಸ್ಯ ಸತ್ಯ ಶೋಧನಾ ಸಮಿತಿ ವರದಿಯ ಶಿಫಾರಸ್ಸಿನನ್ವಯ, ವಿ.ವಿ.ನಿಲಯದಲ್ಲಿ ನಿರಂತರವಾಗಿ 10 ವರ್ಷಗಳ ಕಾಲ ಸೇವೆ ಸಲ್ಲಿಸಿರುವ ನೌಕರರುಗಳನ್ನು ಮಂಜೂರಾದ ಹುದ್ದೆಗೆ ಎದುರಾಗಿ ಖಾಲಿ ಇರುವ ಹುದ್ದೆಗಳಿಗೆ may be considered for absorption" ಎಂಬುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ, ಅವರುಗಳನ್ನು "absorb" ಮಾಡುವುದು ಸೂಕ್ತವೆಂದು ತೀರ್ಮಾನಿಸಿ, ಈ ಸಂಬಂಧ ಈಗಾಗಲೇ ಸರ್ಕಾರದಿಂದ ನಿಯಮಾನುಸಾರ ರಚಿತವಾಗಿರುವ ಅಧ್ಯಾಪಕೇತರ ನೇಮಕಾತಿ ಮಂಡಳಿಯ ಸದಸ್ಯರ ಪೈಕಿ ಒಬ್ಬರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ, ಸಮಿತಿಯ ಶಿಫಾರಸ್ಸಿನನ್ವಯ ಕ್ರಮ ಜರುಗಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಗಿರುತ್ತದೆ.

- ಅದರಂತೆ, ರಚಿಸಲಾದ ಸಮಿತಿಯು ಕಾಲಿಕ ವೇತನ ಶ್ರೇಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಸಂಬಂಧಿಸಿದಂತೆ ವಸ್ತು ಸ್ಥಿತಿಗಳನ್ನು (Facts and Findings) ಪರಿಶೀಲನೆ ಮಾಡಿ ಶಿಫಾರಸ್ಸುಗಳೊಂದಿಗೆ ಅಂತಿಮ ವರದಿಯನ್ನು ದಿನಾಂಕ:06.01.2022ರಂದು ವಿ.ವಿ.ನಿಲಯಕ್ಕೆ ಸಲ್ಲಿಸಿದ್ದು, ಸದರಿ ವರದಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಆರ್ಥಿಕ ಹೊರೆಯಾಗದಂತೆ, ಕಾಲಿಕ ವೇತನ ಶ್ರೇಣಿ ನೌಕರರಾಗಿ 10(ಹತ್ತು) ವರ್ಷಗಳ ಸೇವೆ ಪೂರೈಸಿರುವ ಮಾನದಂಡದ ಆಧಾರದ ಮೇಲೆ ಅಂತಹ ನೌಕರರನ್ನು ಸರ್ಕಾರದಿಂದ ಮಂಜೂರಾಗಿರುವ ಖಾಲಿ ಹುದ್ದೆಗಳಿಗೆ ಎದುರಾಗಿ

ಸರ್ಕಾರದ ಮೀಸಲಾತಿಯನ್ನು ಗಣನೆಗೆ ತೆಗೆದುಕೊಂಡು ಖಾಯಂ ಮಾತಿಗೆ ಪರಿಗಣಿಸುವುದು ಹಾಗೂ ಕಾಲಿಕ ವೇತನ ಶ್ರೇಣಿ (ಗ್ರೇಡೆಡ್ ಪೇ ಸ್ಕೇಲ್)ಯಲ್ಲಿ ಹತ್ತು ವರ್ಷಗಳ ಸೇವೆ ಪೂರೈಸದ ನೌಕರರನ್ನು ಹತ್ತು ವರ್ಷಗಳ ಸೇವೆ ಪೂರೈಸಿದ ನಂತರ ಖಾಯಂ ಮಾತಿಗೆ ಪರಿಗಣಿಸಬಹುದೆಂದು ಶಿಫಾರಸ್ಸು ಮಾಡಲಾಗಿರುತ್ತದೆ.

- ಈ ಹಿನ್ನೆಲೆಯಲ್ಲಿ, ಕಾಲಿಕ ವೇತನ ಶ್ರೇಣಿ/ತಾತ್ಕಾಲಿಕ ನೌಕರರನ್ನು ಸರ್ಕಾರದಿಂದ ಮಂಜೂರಾಗಿರುವ ಖಾಲಿ ಹುದ್ದೆಗಳಿಗೆ ಖಾಯಂಗೊಳಿಸುವ ಸಂಬಂಧದಲ್ಲಿ ದಿನಾಂಕ:06.03.2021 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 164ನೇ ಸಾಮಾನ್ಯ ಸಭೆಯಲ್ಲಿ ಹಾಗೂ ದಿನಾಂಕ:05.02.2022 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 167ನೇ ಸಾಮಾನ್ಯ ಸಭೆಯಲ್ಲಿ ಕೈಗೊಂಡಿರುವ ತೀರ್ಮಾನದಲ್ಲಿ ಮಾನ್ಯ ಕುಲಪತಿಗಳಿಗೆ ಕ್ರಮ ಜರುಗಿಸುವ ಅಧಿಕಾರವನ್ನು ನೀಡಲಾಗಿರುವ ಹಿನ್ನೆಲೆಯಲ್ಲಿ, ಮಾನ್ಯ ಕುಲಪತಿಗಳು ಮೇಲಿನ ಎಲ್ಲಾ ಪ್ರಕ್ರಿಯೆಗಳನ್ನು ಪರಾಮರ್ಶಿಸಿ, ಡಾ.ನ್ಯಾಯಮರ್ತಿ ಕೆ ಭಕ್ತವತ್ಸಲ, ಮಾನ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಧೀಶರು, ಬೆಂಗಳೂರು ಇವರ ಏಕ ಸದಸ್ಯ ಸತ್ಯ ಶೋಧನಾ ಸಮಿತಿಯು, ದಿನಾಂಕ:14.10.2015 ರಂದು ಸಲ್ಲಿಸಲಾಗಿರುವ ತನಿಖಾ ವರದಿಯಲ್ಲಿ ಎಲ್ಲಾ ತಾತ್ಕಾಲಿಕ ನೇಮಕಾತಿಗಳು ಕಾನೂನು ಬಾಹಿರವೆಂದು, ಕರಾಮುವಿ ಸಾಮಾನ್ಯ ನೇಮಕಾತಿ ಪರಿನಿಯಮ–2004 ಹಾಗೂ ಸರ್ಕಾರದ ರೋಸ್ಟರ್ ಪಾಲಿಸಿಗೆ ವಿರುದ್ಧವಾಗಿರುತ್ತದೆಂದು, ಆದಾಗ್ಯೂ ಸದರಿ ನೌಕರರುಗಳ ವಯಸ್ಸನ್ನು ಗಮನದಲ್ಲಿರಿಸಿಕೊಂಡು ವಿಶ್ವವಿದ್ಯಾನಿಲಯದಲ್ಲಿ 10 ವರ್ಷಗಳಿಗೂ ಹೆಚ್ಚು ನಿರಂತರ ಸೇವೆ ಸಲ್ಲಿಸಿರುವವರನ್ನು ಮಂಜೂರಾದ ಖಾಲಿಯಿರುವ ಹುದ್ದೆಗಳಿಗೆ ಎದುರಾಗಿ ಸೇವೆಯಲ್ಲಿ ವಿಲೀನಗೊಳಿಸಲು ಪರಿಗಣಿಸುವಂತೆ ಮಾಡಿರುವ ಶಿಫಾರಸ್ಸಿನನ್ವಯ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಾಲಿಕ ವೇತನ ಶೇಣಿ ನೌಕರರು ವಿ.ವಿ.ನಿಲಯದಲ್ಲಿ ತಾತ್ಕಾಲಿಕ ಸೇವೆಗೆ 1997 ರಿಂದ 2003 ಅವಧಿಯಲ್ಲಿ ನೇಮಕಗೊಂಡವರಾಗಿದ್ದು, ವಿ.ವಿ ನಿಲಯದಲ್ಲಿ ಹಲವು ವರ್ಷಗಳಿಂದ ತಾತ್ಕಾಲಿಕ ಸೇವೆ ಸಲ್ಲಿಸಿದ್ದು, ಸದರಿಯವರಿಗೆ ದಿನಾಂಕ:25.07.2011 ರಿಂದ ಕಾಲಿಕ ವೇತನ ಶ್ರೇಣಿಯನ್ನು ಜಾರಿಗೊಳಿಸಲಾಗಿರುವ ಹಿನ್ನೆಲೆಯಲ್ಲಿ ಹಾಗೂ ಈ ಸಂಬಂಧ ರಚಿಸಲಾಗಿದ್ದ ಸಮಿತಿಯ ಶಿಫಾರಸ್ಸಿನನ್ವಯ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಆರ್ಥಿಕ ಹೊರೆಯಾಗದಂತೆ, ಕಾಲಿಕ ವೇತನ ಶ್ರೇಣಿ (ಗ್ರೇಡೆಡ್ ಪೇ ಸ್ಕೇಲ್) ನೌಕರರಾಗಿ 10(ಹತ್ತು) ವರ್ಷಗಳ ಸೇವೆ ಪೂರೈಸಿರುವ ಮಾನದಂಡದ ಆಧಾರದ ಮೇಲೆ ಅಂತಹ ನೌಕರರನ್ನು ಮಂಜೂರಾಗಿ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಸರ್ಕಾರದ ಮೀಸಲಾತಿಯನ್ನು ಗಣನೆಗೆ ತೆಗೆದುಕೊಂಡು ಖಾಯಾಂತಿ ಪರಿಗಣಿಸುವುದು ಸೂಕ್ತವಾಗಿರುತ್ತದೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದು, ಪ್ರಸ್ತುತ ಕಾಲಿಕ ವೇತನ ಶ್ರೇಣಿ ನೌಕರರಾಗಿ ಹತ್ತು ವರ್ಷಗಳಿಗೂ ಹೆಚ್ಚು ಸೇವೆ ಸಲ್ಲಿಸಿರುವ ಒಟ್ಟು 75 ಅರ್ಹ ನೌಕರರನ್ನು ಅವರುಗಳು ವಿಶ್ವವಿದ್ಯಾನಿಲಯದ ತಾತ್ಕಾಲಿಕ ಸೇವೆಗೆ ವರದಿ ಮಾಡಿಕೊಂಡಿರುವ ದಿನಾಂಕದಿಂದ "ಸೇವಾ ಜೇಷ್ಠತೆಯ" ಆಧಾರದ ಮೇಲೆ ವಿಶ್ವವಿದ್ಯಾನಿಲಯದಲ್ಲಿ ನೇರ ನೇಮಕಾತಿಗೆ ಪ್ರಸ್ತುತ ಚಾಲ್ತಿಯಲ್ಲಿರುವ ಪರಿನಿಯಮಗಳನ್ವಯ ಅವರುಗಳ ವಿದ್ಯಾರ್ಹತೆಯನ್ನು ಹಾಗೂ ಮೀಸಲಾತಿ ನಿಯಮಗಳನ್ನು

ಅನುಸರಿಸಿ, ಸರ್ಕಾರದಿಂದ ಮಂಜೂರಾಗಿ ನೇರ ನೇಮಕಾತಿಗೆ ಕೋಟಾದಡಿ ಪ್ರಸ್ತುತ ಖಾಲಿ ಇರುವ ಸಹಾಯಕ ಅಭಿಯಂತರ, ದ್ವಿತೀಯ ದರ್ಜೆ ಗುಮಾಸ್ತ, ಚಾಲಕ, ಪರಿಚಾರಕ, ಸೇವಕ ಹಾಗೂ ಸ್ವೀಪರ್ ಹುದ್ದೆಗಳಿಗೆ ಅಂದರೆ ಪ್ರಸ್ತುತ ಅವರು ಕಾರ್ಯನಿರ್ವಹಿಸುತ್ತಿರುವ ಸಮಾನ ಖಾಯಂ ಹುದ್ದೆಗಳಿಗೆ ದಿನಾಂಕ:01.06.2022 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದಂತೆ ಅವರ ಸೇವೆಯನ್ನು ವಿಲೀನಗೊಳಿಸುವಂತೆ, ಮಾನ್ಯ ಕುಲಪತಿಗಳು ನೀಡಿರುವ ಆದೇಶದ ಮೇರೆಗೆ, ದಿನಾಂಕ:01.08.2022ರ ಅಧಿಕೃತ ಜ್ಞಾಪನದಲ್ಲಿ ಒಟ್ಟು 75 ಅರ್ಹ ನೌಕರರನ್ನು ಸೇವೆಯಲ್ಲಿ ವಿಲೀನಗೊಳಿಸಲಾಗಿರುತ್ತದೆ.

- ಮುಂದುವರಿದು, ದಿನಾಂಕ:26.08.2022 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 169ನೇ ಸಾಮಾನ್ಯ ಸಭೆಯಲ್ಲಿ ಮಾನ್ಯ ಕುಲಪತಿಗಳು ವಿಶ್ವವಿದ್ಯಾನಿಲಯದ ಸುಸೂತ್ರ ಆಡಳಿತ ನಿರ್ವಹಣೆ ದೃಷ್ಟಿಯಿಂದ ಕೈಗೊಂಡಿರುವ ಕೆಲವು ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ಮಂಡಿಸಲಾಗಿರುವ ವರದಿಗಳಲ್ಲಿ ಕ್ರ. ಸಂ. 02 ರಲ್ಲಿ ಕಾಲಿಕ ವೇತನ ಶ್ರೇಣಿಯಲ್ಲಿ 10 ವರ್ಷಗಳ ಸೇವೆಯನ್ನು ಪೂರೈಸಿರುವ ನೌಕರರುಗಳನ್ನು ಮಂಜೂರಾದ ಖಾಲಿ ಹುದ್ದೆಗಳಲ್ಲಿ ವಿಲೀನಗೊಳಿಸಿರುವ ಪ್ರಕ್ರಿಯೆಗೆ ಸಭೆಯು ಇದುವರೆವಿಗೂ ಕೈಗೊಂಡಿರುವ ಕ್ರಮವನ್ನು ಸರ್ವಾನುಮತದಿಂದ ಒಪ್ಪಿಗೆ ನೀಡಿರುತ್ತದೆ. (ಪ್ರತಿ ಲಗತ್ತಿಸಿದೆ)
- ದಿನಾಂಕ:18.03.2023 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 171ನೇ ಸಭೆಯ ತೀರ್ಮಾನದಲ್ಲಿ ದಿನಾಂಕ:01.08.2022 ರ ಅಧಿಕೃತ ಜ್ಞಾಪನದಲ್ಲಿ ಸೇವೆಯಲ್ಲಿ ವಿಲೀನಗೊಳಿಸಿರುವ ಎಲ್ಲಾ ನೌಕರರಿಗೂ ಹಿಂದಿನ ಸೇವೆಯನ್ನು ಪರಿಗಣಿಸಿ ಖಾಯಂ ಪೂರ್ವ ಅವಧಿಯನ್ನು ಘೋಷಣೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿರುವ ಹಿನ್ನಲೆಯಲ್ಲಿ (ಪ್ರತಿ ಲಗತ್ತಿಸಿದೆ), ಈ ಸಂಬಂಧ ದಿನಾಂಕ:28.03.2023 ರಂದು ಕಚೇರಿ ಆದೇಶ ಹೊರಡಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯದವರು ನೀಡಿರುವ ಉತ್ತರದಲ್ಲಿ ವಿಶ್ವವಿದ್ಯಾನಿಲಯದಿಂದ ನಡೆಸಿರುವ ಪ್ರಕ್ರಿಯೆಗಳನ್ನು ಮಾತ್ರ ತಿಳಿಸಿರುತ್ತಾರೆ. 75 ಸಿಬ್ಬಂದಿಗಳನ್ನು ವಿಲೀನಗೊಳಿಸುವ ಕುರಿತು ಸರ್ಕಾರದಿಂದ ಅನುಮೋದನೆಯನ್ನಾಗಲೀ ಅಥವಾ ಮಾನ್ಯ ಕುಲಾಧಿಪತಿಗಳಿಂದಾಗಲೀ ಅಂಕಿತ ಪಡೆಯುವ ಯಾವ ಪ್ರಯತ್ನವನ್ನು ಮಾಡದಿರುವುದನ್ನು ಗಮನಿಸಿದರೆ ಉದ್ದೇಶ ಪೂರ್ವಕವಾಗಿ ಸಕ್ಷಮ ಪ್ರಾಧಿಕಾರಗಳ ಗಮನಕ್ಕೆ ಬರುವುದನ್ನು ತಪ್ಪಿಸುತ್ತಿರುವುದು ಲೆಕ್ಕಪರಿಶೋಧನೆಯು ಗಮನಿಸಿರುತ್ತದೆ.

ವಿಶ್ವವಿದ್ಯಾನಿಲಯದ ಕುಲಾಧಿಪತಿಗಳು ವಿ.ವಿ.ನಿಲಯದಲ್ಲಿ ಹಗರಣ ನಡೆದಿದೆ ಎಂಬ ದೂರುಗಳನ್ನಾಧರಿಸಿ ತನಿಖೆ ನಡೆಸಿ ವರದಿ ನೀಡಲು ನೇಮಿಸಿದ್ದ ಡಾ.ನ್ಯಾಯಮೂರ್ತಿ ಕೆ ಭಕ್ತವತ್ಸಲ, ಏಕ ಸದಸ್ಯ ಸತ್ಯ ಶೋಧನಾ ಸಮಿತಿಯು ದಿನಾಂಕ:14.10.2015 ರಂದು ಸಲ್ಲಿಸಿದ ವರದಿಯಲ್ಲಿ ಉಮಾದೇವಿ ಮತ್ತು ರೇಣು ಪ್ರಕರಣಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನನ್ವಯ ನೋಡುವುದಾದರೆ ಕಾಲಿಕ ವೇತನ ಶ್ರೇಣಿಯಡಿ ನೇಮಕ ಮಾಡಿಕೊಂಡಿರುವ 88 ಹುದ್ದೆಗಳು, ಗ್ರೂಪ್-ಸಿ ಮತ್ತು ಡಿ ವರ್ಗಗಳ 171

ಹುದ್ದೆಗಳು. 29 ಸ್ವಚ್ಛತಾ ಸಿಬ್ಬಂದಿ. 26 ಡಾಟಾ ಎಂಟ್ರಿ ಆಪರೇಟರ್. 4 ಭದ್ರತಾ ಸಿಬ್ಬಂದಿ. ಒಬ್ಬರು ಗಾರ್ಡನ್ ಸೂಪರ್ವೈಸರ್ ಹಾಗೂ ಒಬ್ಬರು ಸಂಯೋಜಕರ ನೇಮಕಾತಿಯು ಕಾನೂನು ಬಾಹಿರ ಹಾಗೂ ಮುಕ್ತ ವಿಶ್ವವಿದ್ಯಾನಿಲಯದ ನೇಮಕಾತಿ ನಿಯಮಗಳು, 2004 ಮತ್ತು ಸರ್ಕಾರದ ಮೀಸಲಾತಿ ಕಾರ್ಯನೀತಿಗೆ ವಿರುದ್ಧವಾಗಿರುತ್ತದೆ ಎಂದಿರುತ್ತದೆ. ಮಾನ್ಯ ಕುಲಾಧಿಪತಿಗಳು ಇದರ ಮೇಲಿನ ತಮ್ಮ ಅಭಿಪ್ರಾಯ ಮತ್ತು ಸಲಹೆಯಲ್ಲಿ ನೇಮಕಾತಿ ಹೊಂದಿರುವ ವ್ಯಕ್ತಿಗಳ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಸರ್ಕಾರದ ಮೀಸಲಾತಿ ಕಾರ್ಯನೀತಿಯನ್ನು ಅನುಸರಿಸಿ ನೇಮಕಾತಿಗಳನ್ನು ಮಾಡುವಂತೆ ವಿಶ್ವವಿದ್ಯಾನಿಲಯಕ್ಕೆ ಸೂಚಿಸಿರುತ್ತಾರೆ. ಹಾಗೂ ಯಾವುದೇ ರೀತಿಯ ನೇಮಕಾತಿ ಅಥವಾ ವಿಲೀನಗೊಳಿಸುವುದಕ್ಕೆ ಮುಂಚೆ ಸರ್ಕಾರದ ಪೂರ್ವಾನುಮೋದನೆ ಮತ್ತು ಮಾನ್ಯ ಕುಲಾಧಿಪತಿಗಳಿಂದ ಅಂಕಿತಗೊಂಡ ನಿಯಮವನ್ನು ಅನುಸರಿಸಬೇಕಾಗಿದ್ದು ವಿಶ್ವವಿದ್ಯಾನಿಲಯದ ಕರ್ತವ್ಯವಾಗಿರುತ್ತದೆ.

ನಂತರ ವಿಶ್ವವಿದ್ಯಾನಿಲಯದವರೇ ನೇಮಿಸಿಕೊಂಡ ಸಮಿತಿಯ ವರದಿ ಆಧರಿಸಿ 10 ವರ್ಷ ಸೇವೆಯನ್ನು ಪೂರ್ಣಗೊಳಿಸಿದವರನ್ನು ಖಾಯಂಗೊಳಿಸಲು ಹಾಗೂ 10 ವರ್ಷ ಸೇವೆ ಪೂರೈಸದಿರುವವರನ್ನು 10ವರ್ಷಗಳ ಸೇವೆ ಪೂರೈಸಿದ ನಂತರ ಖಾಯಂ ಮಾಡಲು ಪರಿನಿಯಮಗಳನ್ನು ರೂಪಿಸಿ ಮಾನ್ಯ ಕುಲಾಧಿಪತಿಗಳ ಅನುಮೋದನೆ ದೊರಕಿಸಿಕೊಡಲು ಸರ್ಕಾರಕ್ಕೆ ಕಳುಹಿಸಿದ ಪ್ರಸ್ತಾವನೆ ತಿರಸ್ಕೃತಗೊಂಡಿದ್ದರೂ, ಪರಿನಿಯಮವು ತಿರಸ್ಕೃತಗೊಂಡ ಪತ್ರ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:20–05–2022ರಂದು ಸ್ವೀಕೃತಿಗೊಂಡಿದ್ದರೂ, ದಿನಾಂಕ: 01–08–2022 ರಂದು 75 ನೌಕರರನ್ನು ಖಾಯಂಗೊಳಿಸಿ ವಿಶ್ವವಿದ್ಯಾನಿಲಯದ ಪ್ರಭಾರ ಕುಲಸಚಿವರು ಅಧಿಕೃತ ಜ್ಞಾಪನ ಹೊರಡಿಸಿರುವುದು ಕಾನೂನುಬಾಹಿರ ಕ್ರಮವಾಗಿರುತ್ತದೆ.

ದಿನಾಂಕ:01–08–2022ರಂದು 75 ನೌಕರರನ್ನು ವಿಲೀನಗೊಳಿಸಿರುವುದನ್ನು 2022–23ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದ್ದರೂ ಸಹ 2023–24ನೇ ಸಾಲಿನಲ್ಲಿ ಈ 75 ಮಂದಿ ಕಾಲಿಕ ವೇತನ ಶ್ರೇಣಿಯ ನೌಕರರಿಗೆ ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/1041/2022–23 ದಿನಾಂಕ:28–03–2023ರಲ್ಲಿ ಐದು ವರ್ಷಗಳ ಖಾಯಂ ಪೂರ್ವ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುವರೆಂದು ಘೋಷಿಸಲಾಗಿದೆ ಮತ್ತು ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/1124/2022–23 ದಿನಾಂಕ:26–07–2023 ರಲ್ಲಿ 71 ಮಂದಿ ವಿವಿಧ ಹುದ್ದೆಗಳಿಗೆ ವಿಲೀನಗೊಳಿಸಿರುವ ನೌಕರರಿಗೆ ಒಂದೇ ಹುದ್ದೆಯಲ್ಲಿ 10 ವರ್ಷಗಳ ಸೇವೆಯನ್ನು ಯಾವುದೇ ಪದೋನ್ನತಿ ಹೊಂದದೇ ಅವಿಚ್ಛಿನ್ನವಾಗಿ ಸೇವೆಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ ಪ್ರಯುಕ್ತ "The Karnataka Civil Services (Time-Bound Advancement) Rules, 1983 ರಂತೆ ಹಾಗೂ ವಿಶ್ವವಿದ್ಯಾನಿಲಯದ ಪರಿನಿಯಮದ ಪ್ರಕಾರ ಕಾಲಬದ್ಧ ವೇತನ ಬಡ್ತಿಯನ್ನು ಮಂಜೂರು ಮಾಡಿ ವೇತನವನ್ನು ಪುನರ್ ನಿಗಧಿಪಡಿಸಿರುವುದು ನಿಯಮಬಾಹಿರವಾಗಿರುವುದರಿಂದ, ಪಾವತಿಸಿರುವ ವೇತನ ರೂ.**3,93,73,192**/– ಮತ್ತು ಕಾಲಬದ್ಧ ಮುಂಬಡ್ತಿ ವೇತನ ಬಾಕಿ ರೂ.7,36,501/– ಸೇರಿ ಒಟ್ಟು **ರೂ.4,01,09,693**/–ಗಳನ್ನು ವಿಶ್ವವಿದ್ಯಾನಿಲಯದ ಕುಲಪತಿ, ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳಿಂದ **ವಸೂಲಿಸಲು** ಸೂಚಿಸಿದೆ. ಹಾಗೂ ಸರ್ಕಾರದ ಮೀಸಲಾತಿ ನಿಯಮಗಳನ್ನು ಉಲ್ಲಂಘಿಸಿ ನೇಮಕಾತಿ ಮಾಡಿರುವ ಇವರುಗಳ ವಿರುದ್ಧ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದೆ. ವಿವರವನ್ನು **ಅನುಬಂಧ–29** ರಲ್ಲಿ ವಿವರಿಸಲಾಗಿದೆ.

21.14 ಬೋಧಕೇತರ ನೌಕರರಾದ ಶ್ರೀ ವಿ. ಶ್ರೀನಿವಾಸ, ಡೇಟಾ ಎಂಟ್ರಿ ಆಪರೇಟರ್ ರವರಿಗೆ ವೃಂದ ಮತ್ತು ನೇಮಕಾತಿ ನಿಯಮ ಉಲ್ಲಂಘಿಸಿ ಶೀಘ್ರಲಿಪಿಗಾರರಾಗಿ ಪದೋನ್ನತಿ ನೀಡಿರುವುದು.

2022–23 ನೇ ಸಾಲಿನಲ್ಲಿ ಬೋಧಕೇತರ ನೌಕರರಾದ ಶ್ರೀ ವಿ. ಶ್ರೀನಿವಾಸ, ಡೇಟಾ ಎಂಟ್ರಿ ಆಪರೇಟರ್‌ರವರಿಗೆ ಕಛೇರಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–2/776/2021–22, ದಿನಾಂಕ:29–10–2022 ರಲ್ಲಿ ಶೀಘ್ರಲಿಪಿಗಾರರಾಗಿ (ವೇತನ ಶ್ರೇಣಿ 30350–58250) ಪದೋನ್ನತಿ ನೀಡಿರುವ ಬಗ್ಗೆ ಸೇವಾವಹಿಯ ಪುಟ ಸಂಖ್ಯೆ:20 ರಲ್ಲಿ ನಮೂದಿಸಲಾಗಿದೆ. ಮುಂಬಡ್ತಿ ನೀಡಿರುವ ಕಡತವನ್ನು ಪರಿಶೀಲಿಸಲಾಗಿ ಸದರಿ ಕಛೇರಿ ಆದೇಶದಲ್ಲಿ "ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಡೇಟಾ ಎಂಟ್ರಿ ಆಪರೇಟರ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ವಿ. ಶ್ರೀನಿವಾಸ, ಇವರಿಗೆ ಖಾಲಿ ಇರುವ ಶೀಘ್ರಲಿಪಿಗಾರ ಹುದ್ದೆಗೆ ಎದುರಾಗಿ (ಶೀಘ್ರಲಿಪಿಗಾರ ಹುದ್ದೆಯ ಪರಿನಿಯಮ ಭಾಗಶ: ತಿದ್ದುಪಡಿ) ಪರಿನಿಯಮ–2022 ಕ್ಕೆ ಅಂಕಿತ ದೊರಕುವ ಷರತ್ತಿಗೊಳಪಟ್ಟು ರೂ.30350–58250 ರ ವೇತನ ಶ್ರೇಣಿಯಲ್ಲಿ ಪದೋನ್ನತಿ ನೀಡಿ ಆದೇಶಿಸಲಾಗಿದೆ"

ಕರಾಮುವಿಯ ವೃಂದ ಮತ್ತು ನೇಮಕಾತಿ ನಿಯಮ–29 ರಲ್ಲಿ ಶೀಘ್ರಲಿಪಿಗಾರರಾಗಿ ಪದೋನ್ನತಿ ನೀಡಲು ಕಲಂ 4 ರ (ಬಿ) ರಲ್ಲಿ "Senior Typewriting and Senior Shorthand Examination in Kannada conducted by the Department of Public Instruction or is a holder of a Diploma in Secretarial Practice with Kannada Shorthand and Kannada Typewriting as optional (elective) subjects granted by the Board of Technical Education in Karntatka or possedsses an equivalent qualification and ಮತ್ತು ಕಲಂ 4 ರ (ಸಿ) ರಲ್ಲಿ Senior Typewriting and Senior Shorthand examination of Public Instruction or is a holder of a Diploma in Secretarial practice with English Shorthand and English Typewriting as optional (elective) subjects granted by the Board of Technical Education in Karntatka or possedsses an equivalent qualification ಎಂದಿರುತ್ತದೆ.

ಶ್ರೀ ವಿ. ಶ್ರೀನಿವಾಸ ಇವರ ಸೇವಾವಹಿಯಲ್ಲಿ Kannada Typewriting Senior, Kannada *Shorthand* Junior ಮತ್ತು Kannada *Senior* Shorthand ಪರೀಕ್ಷೆಗಳಲ್ಲಿ ಉತ್ತೀರ್ಣಗೊಂಡಿರುವುದಕ್ಕೆ ನಮೂದಿಸಿ, ಪ್ರಮಾಣ ಪತ್ರಗಳ ನಕಲನ್ನು ಕಡತದಲ್ಲಿರಿಸಿದೆ. ಬೋಧಕೇತರ ನೌಕರರಾದ ಶ್ರೀ ವಿ. ಶ್ರೀನಿವಾಸ, ಡೇಟಾ ಎಂಟ್ರಿ ಆಪರೇಟರ್‌ರವರಿಗೆ ಶೀಘ್ರಲಿಪಿಗಾರರಾಗಿ ಪದೋನ್ನತಿ ನೀಡಿರುವ ಬಗ್ಗೆ ಈ ಕೆಳಕಂಡ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:109/ ದಿನಾಂಕ:13–01–2025 ನ್ನು ನೀಡಲಾಗಿತ್ತು.

ಲೆಕ್ಕಪರಿಶೋಧನಾ ವಿಚಾರಣಾ ಪತ್ರಕ್ಕೆ ವಿಶ್ವವಿದ್ಯಾನಿಲಯದವರು ಪತ್ರ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–2/985/ 2024–25, ದಿನಾಂಕ:22–01–2025 ರಂದು ಈ ಕೆಳಗಿನಂತೆ ಉತ್ತರಿಸಿರುತ್ತಾರೆ. "ವಿಶ್ವವಿದ್ಯಾನಿಲಯವು ರಾಜ್ಯ ಸರ್ಕಾರವು ಹೊರಡಿಸಿರುವ ದಿನಾಂಕ:10/07/2019ರ ರಾಜ್ಯಪತ್ರ ಹಾಗೂ ದಿನಾಂಕ:24/03/2021ರ ಅಧಿಸೂಚನೆಯಲ್ಲಿ ಶೀಘ್ರಲಿಪಿಗಾರ ಹುದ್ದೆಯ ನೇರನೇಮಕಾತಿ ಹಾಗೂ ಪದೋನ್ನತಿಗೆ ಮಾನದಂಡ ಹಾಗೂ

ವಿದ್ಯಾರ್ಹತೆಯನ್ನು ಅಳವಡಿಸಿಕೊಳ್ಳುವ ಸಂಬಂಧ ಕಛೇರಿ ಪತ್ರ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–2/1018/2022–23 ದಿನಾಂಕ:21/10/2022ರ ಪತ್ರ ಮುಖೇನಾ ಶೀಘ್ರಲಿಪಿಗಾರ ಹುದ್ದೆಯ ವಿದ್ಯಾರ್ಹತೆ ಭಾಗಶಃ ತಿದ್ದುಪಡಿ ಮಾಡುವಂತೆ ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಶೀಘ್ರಲಿಪಿಗಾರ ಹುದ್ದೆಯ ಪರಿನಿಯಮ ಭಾಗಶಃ ತಿದ್ದುಪಡಿಗೆ (ಶೀಘ್ರಲಿಪಿಗಾರ ಪರಿನಿಯಮ–2022) ಅಂಕಿತ ದೊರಕುವ ಷರತ್ತಿಗೊಳಪಟ್ಟು ಡೇಟಾ ಎಂಟ್ರಿ ಆಪರೇಟರ್‌ಆಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ. ವಿ.ಶ್ರೀನಿವಾಸ, ಇವರಿಗೆ ಖಾಲಿ ಇರುವ ಶೀಘ್ರಲಿಪಿಗಾರ ಹುದ್ದೆಗೆ ಪದೋನ್ನತಿ ನೀಡಿ (ಕಛೇರಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–02/2021–22, ದಿನಾಂಕ:29/10/2022) ಆದೇಶ ಹೊರಡಿಸಲಾಗಿರುತ್ತದೆ, ಎಂದು ಹಾಗೂ ಕೇಳಲಾದ ದಾಖಲಾತಿಗಳಿಗೆ ವಿಶ್ವವಿದ್ಯಾನಿಲಯದವರು ದಾಖಲಾತಿಗಳನ್ನು ಲಗತ್ತಿಸಿರುತ್ತಾರೆ.

ಲೆಕ್ಕಪರಿಶೋಧನೆಯಲ್ಲಿ ಕೋರಲಾದ ದಾಖಲಾತಿಗಳು	ವಿಶ್ವವಿದ್ಯಾನಿಲಯದವರು ನೀಡಿರುವ ಉತ್ತರ
1) ಶ್ರೀ ವಿ. ಶ್ರೀನಿವಾಸರವರು English Senior Typewriting ಮತ್ತು English Senior Shorthand ಪರೀಕ್ಷೆಗಳಲ್ಲಿ ಉತ್ತೀರ್ಣಗೊಂಡ ಮೂಲ ಪ್ರಮಾಣ ಪತ್ರಗಳು	I. ಶ್ರೀ ವಿ. ಶ್ರೀನಿವಾಸರವರು English Senior typewriting ಮತ್ತು English Senior Shorthand ಪರೀಕ್ಷೆಗಳಲ್ಲಿ ಉತ್ತೀರ್ಣಗೊಂಡ ಪ್ರಮಾಣ ಪತ್ರಗಳು ಸಲ್ಲಿಕೆಯಾಗಿರುವುದಿಲ್ಲ, ಸೇವಾವಹಿಯಲ್ಲಿ ದಾಖಲಿಸಿರುವ Kannada Typewriting Senior, Kannada Shorthand Junior ಮತ್ತು Kannada Senior Shorthand ಪರೀಕ್ಷೆಗಳಲ್ಲಿ ಉತ್ತೀರ್ಣಗೊಂಡ ಪ್ರಮಾಣ ಪತ್ರಗಳನ್ನು ಲಗತ್ತಿಸಿದೆ.
2) ಶೀಘ್ರಲಿಪಿಗಾರರಾಗಿ ಪದೋನ್ನತಿ ಸಂಬಂಧ ವೇತನ ನಿಗಧಿಪಡಿಸಿರುವ ಆದೇಶದ ಪ್ರತಿಗಳು.	1) ಶೀಘ್ರಲಿಪಗಾರ ಹುದ್ದೆಯ ಪರಿನಿಯಮ ಭಾಗಶಃ ತಿದ್ದುಪಡಿಗೆ ಅಂಕಿತ ದೊರಕುವ ಷರತ್ತಿಗೊಳಪಟ್ಟು ಶೀಘ್ರಲಿಪಿಗಾರ ಹುದ್ದೆಗೆ ಪದೋನ್ನತಿಯನ್ನು ನೀಡಿರುವುದರಿಂದ ಇನ್ನೂ ಅಂಕಿತ ದೊರಕದೇ ಇರುವ ಸಂಬಂಧ ವೇತನ ನಿಗಧಿಪಡಿಸಿರುವುದಿಲ್ಲ.
3) ಅಂಕಿತಗೊಂಡ ವೃಂದ ಮತ್ತು ನೇಮಕಾತಿ ನಿಯಮಗಳ ಪರಿನಿಯಮಗಳನ್ವಯ ಮಂಜೂರಾಗಿರುವ ಒಟ್ಟು ಶೀಘ್ರಲಿಪಿಗಾರರ ಹುದ್ದೆಗಳು.	1) ಅಂಕಿತಗೊಂಡ ವೃಂದ ಮತ್ತು ನೇಮಕಾತಿ ನಿಯಮಗಳ ಪರಿನಿಯಮಗಳನ್ವಯ ಮಂಜೂರಾಗಿರುವ ಒಟ್ಟು ಶೀಘ್ರಲಿಪಿಗಾರರ ಹುದ್ದೆಗಳು=08
4) ದಿನಾಂಕ:01–04–2022 ರ ಪ್ರಾರಂಭಕ್ಕೆ ಖಾಲಿ ಇರುವ ಶೀಘ್ರಲಿಪಿಗಾರರ ಹುದ್ದೆಗಳು (ಈ ಹುದ್ದೆಗಳನ್ನು ನೇರ ನೇಮಕಾತಿ ಮತ್ತು ಪದೋನ್ನತಿ ಎದುರಾಗಿ ಹುದ್ದೆಗೆ ತುಂಬಬೇಕಾದ ವಿವರ ಪಟ್ಟಿ)	4) ದಿನಾಂಕ:01/04/2022 ರ ಪ್ರಾರಂಭಕ್ಕೆ ಖಾಲಿ ಇರುವ ಶೀಘ್ರಲಿಪಿಗಾರರ ಹುದ್ದೆಗಳು=08 (ಈ ಹುದ್ದೆಗಳನ್ನು ನೇರ ನೇಮಕಾತಿ=04 ಮತ್ತು ಪದೋನ್ನತಿ=04 ಹುದ್ದೆಗಳು ವಿವರ (ಪಟ್ಟಿ ಲಗತ್ತಿಸಿದೆ)
5) ನೇರ ನೇಮಕಾತಿ ಹಾಗೂ ಪದೋನ್ನತಿ ಎದುರಾಗಿ 2022–23ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿದ ಶೀಘ್ರಲಿಪಿಗಾರರ ಹುದ್ದೆಗಳ ವಿವರ ಪಟ್ಟಿ.	5) 2022–23ನೇ ಸಾಲಿನಲ್ಲಿ ಶೀಘ್ರಲಿಪಿಗಾರ ಹುದ್ದೆಯ ಪರಿನಿಯಮ ಭಾಗಶಃ ತಿದ್ದುಪಡಿಗೆ (ಶೀಘ್ರಲಿಪಿಗಾರ ಪರಿನಿಯಮ–2022) ಅಂಕಿತದೊರಕುವ ಷರತ್ತಿಗೊಳಪಟ್ಟು, ಡೇಟಾ ಎಂಟ್ರಿ ಆಪರೇಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ವಿ.ಶ್ರೀನಿವಾಸ, ಇವರಿಗೆ ಖಾಲಿ ಇರುವ ಶೀಘ್ರಲಿಪಿಗಾರ ಹುದ್ದೆಗೆ ಪದೋನ್ನತಿ ನೀಡಲಾಗಿರುತ್ತದೆ, ಇನ್ನೂಳಿದಂತೆ 07 ಹುದ್ದೆಗಳು ಖಾಲಿ ಇರುತ್ತವೆ.
6) ದಿನಾಂಕ:01–04–2022 ರ ಪ್ರಾರಂಭಕ್ಕೆ	6) ದಿನಾಂಕ:01/04/2022 ರ ಪ್ರಾರಂಭಕ್ಕೆ, ಶೀಘ್ರಲಿಪಿಗಾರರ ಜೇಷ್ಠತಾ ಪಟ್ಟಿ

ಶೀಘ್ರಲಿಪಿಗಾರರ ಜೇಷ್ಠತಾ ಪಟ್ಟಿ	ಇರುವುದಿಲ್ಲ ಸದರಿ ಅವಧಿಯಲ್ಲಿ ಎಲ್ಲಾ ಹುದ್ದೆಗಳು ಖಾಲಿ ಇರುತ್ತವೆ
7) ಡೇಟಾ ಎಂಟ್ರಿ ಆಪರೇಟರ್ ಹುದ್ದೆಯಿಂದ ಶೀಘ್ರಲಿಪಿಗಾರರ ಹುದ್ದೆಗೆ ಪದೋನ್ನತಿ ನೀಡಲು ಪರಿನಿಯಮದಂತೆ ನಿಗಧಿಪಡಿಸಿರುವ ಮೂಲ ದಾಖಲೆಗಳು	7) ಡೇಟಾ ಎಂಟ್ರಿ ಆಪರೇಟರ್ ಹುದ್ದೆಯಿಂದ ಶೀಘ್ರಲಿಪಿಗಾರರ ಹುದ್ದೆಗೆ ಪದೋನ್ನತಿ ಹುದ್ದೆಯಿಂದ ಶೀಘ್ರಲಿಪಿಗಾರರ ಹುದ್ದೆಗೆ ಪದೋನ್ನತಿ ನೀಡಲು ರಚಿತಗೊಂಡಿರುವ ಪರಿನಿಯಮದ ಪ್ರತಿ ಲಗತ್ತಿಸಿದೆ.
8) ಶೀಘ್ರಲಿಪಿಗಾರ ಹುದ್ದೆಯ ಪರಿನಿಯಮ ಭಾಗಶ: ತಿದ್ದುಪಡಿ ಪರಿನಿಯಮ–2022 ರ ಪ್ರತಿ ಹಾಗೂ ಸದರಿ ಪರಿನಿಯಮವು ಅಂಕಿತಗೊಂಡಿದ್ದಲ್ಲಿ ಅವುಗಳ ದೃಢೀಕೃತ ಪ್ರತಿಗಳು.	8) ಸರ್ಕಾರಕ್ಕೆ ಶೀಘ್ರಲಿಪಿಗಾರ ಹುದ್ದೆಯ ಪರಿನಿಯಮ ಭಾಗಶಃ ತಿದ್ದುಪಡಿ ಪರಿನಿಯಮ–2022 ಅನ್ನು ಅಂಕಿತಕ್ಕಾಗಿ ಸಲ್ಲಿಸಲಾಗಿದೆ. ಸದರಿ ಪರಿನಿಯಮವು ಅಂಕಿತಗೊಳ್ಳುವಹಂತದಲ್ಲಿ ಇರುವುದನ್ನು ಈ ಮೂಲಕ ಗಮನಕ್ಕೆ ತರಲಾಗಿದೆ.

ವಿಶ್ವವಿದ್ಯಾನಿಲಯದವರು ನೀಡಿರುವ ಉತ್ತರವನ್ನು ಈ ಕೆಳಕಂಡ ಕಾರಣಗಳಿಗಾಗಿ ಒಪ್ಪಲು ಸಾಧ್ಯವಾಗುವುದಿಲ್ಲ.

1. ಶೀಘ್ರಲಿಪಿಗಾರ ಹುದ್ದೆಯ ಪರಿನಿಯಮ ಭಾಗಶಃ ತಿದ್ದುಪಡಿಗೆ (ಶೀಘ್ರಲಿಪಿಗಾರ ಪರಿನಿಯಮ–2022) ಅಂಕಿತ ದೊರಕುವ ಮೊದಲೇ ಅಂಕಿತ ದೊರಕುವ ಷರತ್ತಿನೊಂದಿಗೆ ಮುಂಬಡ್ತಿ ನೀಡಿರುವುದು

2. ವೃಂದ ಮತ್ತು ನೇಮಕಾತಿ ನಿಯಮದಲ್ಲಿ ನಿಗಧಿಪಡಿಸಿರುವ ಅರ್ಹತೆಗಳನ್ನು ಪೂರೈಸದೇ ಇರುವ ಅಭ್ಯರ್ಥಿಗೆ ಪದೋನ್ನತಿ ನೀಡಿರುವುದು.

3. ದಿನಾಂಕ:01/04/2022 ರ ಪ್ರಾರಂಭಕ್ಕೆ, ಶೀಘ್ರಲಿಪಿಗಾರರ ಜೇಷ್ಠತಾ ಪಟ್ಟಿ ಸಿದ್ದಪಡಿಸಿರುವುದಿಲ್ಲ ಸದರಿ ಅವಧಿಯಲ್ಲಿ ಎಲ್ಲಾ ಹುದ್ದೆಗಳು ಖಾಲಿ ಇರುತ್ತವೆ.

4. ಶ್ರೀ ವಿ. ಶ್ರೀನಿವಾಸರವರು, ಡೇಟಾ ಎಂಟ್ರಿ ಆಪರೇಟರ್‌ರವರಾಗಿದ್ದು, ಇನ್ನು ಎಷ್ಟು ಜನ ಡೇಟಾ ಎಂಟ್ರಿ ಆಪರೇಟರ್‌ರವರುಗಳಿದ್ದಾರೆ ಎಂದು ಸ್ಪಷ್ಟ ಪಡಿಸದಿರುವುದು.

5. ಬೇರೆ ಡೇಟಾ ಎಂಟ್ರಿ ಆಪರೇಟರ್‌ರವರುಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮನುಸಾರ ಅರ್ಹತೆ ಪಡೆದಿದ್ದಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಮಾಹಿತಿ ನೀಡದಿರುವುದು.

ಮೇಲಿನ ಎಲ್ಲಾ ಅಂಶಗಳನ್ನು ಪರಾಮರ್ಶಿಸಿದರೆ ಶ್ರೀ ವಿ. ಶ್ರೀನಿವಾಸರವರು, ಡೇಟಾ ಎಂಟ್ರಿ ಆಪರೇಟರ್‌ರವರಿಗೆ ವೃಂದ ಮತ್ತು ನೇಮಕಾತಿ ನಿಯಮವನ್ನು ಉದ್ದೇಶಪೂರ್ವಕವಾಗಿಯೇ ಉಲ್ಲಂಘಿಸಿ ಶೀಘ್ರಲಿಪಿಗಾರರಾಗಿ ಪದೋನ್ನತಿ ನೀಡಿರುವುದು ಸ್ಪಷ್ಟವಾಗುತ್ತದೆ. ಆದುದರಿಂದ ಸದರಿಯವರಿಗೆ ನೀಡಿರುವ ಮಂಬಡ್ತಿಯನ್ನು ಕೂಡಲೇ ಹಿಂಪಡೆದು, ವೇತನವನ್ನು ಪಾವತಿಸಿದ್ದಲ್ಲಿ ಮರುಪಾವತಿಸಿಕೊಳ್ಳುವುದು. ಹಾಗೂ ಈ ರೀತಿ ವೃಂದ ಮತ್ತು ನೇಮಕಾತಿ ನಿಯಮವನ್ನು ಉಲ್ಲಂಘಿಸಿ ಶೀಘ್ರಲಿಪಿಗಾರರಾಗಿ ಪದೋನ್ನತಿ ನೀಡಿ ಆದೇಶ ಹೊರಡಿಸಲು ಕಾರಣರಾದ ಕುಲಸಚಿವರು ಮತ್ತು ಕುಲಪತಿಗಳ ವಿರುದ್ಧ ಶಿಸ್ತು ಕ್ರಮಜರುಗಿಸುವುದು.

21.15 ಆರೋಗ್ಯ ಕೇಂದ್ರದ ನಿರ್ವಹಣೆ ಮತ್ತು ವೈದ್ಯಕೀಯ ಸಿಬ್ಬಂದಿಗಳ ನೇಮಕಾತಿಗೆ ಅನುಸರಿಸುತ್ತಿರುವ ಮಾನದಂಡಗಳ ಬಗ್ಗೆ ಮಾಹಿತಿ ಹಾಜರುಪಡಿಸದಿರುವುದು.

2023–24ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಆರೋಗ್ಯ ಕೇಂದ್ರದ ಔಷಧಿಗಳ ದಾಸ್ತಾನು ಸ್ವೀಕೃತಿ ಮತ್ತು ವಿತರಣೆ ವಹಿಯನ್ನು ಪರಿಶೀಲಿಸಲಾಗಿ ವಿಶ್ವವಿದ್ಯಾನಿಲಯದ ಅಧಿಕಾರಿ ಮತ್ತು ನೌಕರ ವರ್ಗದವರು ಸದರಿ ಆರೋಗ್ಯ ಕೇಂದ್ರದಲ್ಲಿನ ವೈದ್ಯರ ಬಳ ತಪಾಸಣೆ/ಚಿಕಿತ್ಸೆ ಪಡೆಯದೆ ಹೊರಗಿನ ವೈದ್ಯರಿಂದ ಸಲಹಾ ಚೀಟಿ ಪಡೆದು ತಂದು ಆರೋಗ್ಯ ಕೇಂದ್ರದಿಂದ ಔಷಧಿಗಳನ್ನು ಪಡೆದು ತೆರಳುತ್ತಿರುವುದನ್ನು ಗಮನಿಸಲಾಗಿದೆ ಹಾಗೂ ಕೆಲವು ಔಷಧಿಗಳನ್ನು ಬೇಡಿಕೆಗೂ ಮೀರಿ ಖರೀದಿ ಮಾಡಿ ವಿತರಣೆಯಾಗದೇ ಎಕ್ಸ್‌ಪೈರಿಯಾಗಿದ್ದು, ಈ ನ್ಯೂನತೆಗಳ ಬಗ್ಗೆ ಸೂಕ್ತ ವಿವರಣೆ ನೀಡುವುದರೊಂದಿಗೆ ಸದರಿ ಆರೋಗ್ಯ ಕೇಂದ್ರದ ನಿರ್ವಹಣೆ ಮತ್ತು ವೈದ್ಯಕೀಯ ಸಿಬ್ಬಂದಿಗಳ ನೇಮಕಾತಿಗೆ ವಿಶ್ವವಿದ್ಯಾನಿಲಯವು ಅನುಸರಿಸುತ್ತಿರುವ ಮಾನದಂಡಗಳ ಬಗೆಗಿನ ವಿವರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ವಿಚಾರಣೆ ಪತ್ರ ಸಂಖ್ಯೆ:205/19.02.2025 ರಂದು ನೀಡಲಾಗಿತ್ತಾದರೂ ವಿಶ್ವವಿದ್ಯಾನಿಲಯದವರು ಈ ಬಗ್ಗೆ ಯಾವುದೇ ವಿವರಣೆ ನೀಡಿರುವುದಿಲ್ಲ. ವಿಶ್ವವಿದ್ಯಾನಿಲಯದ ಅಧಿಕಾರಿ ಮತ್ತು ನೌಕರರಿಗೆ ಉಚಿತ ಮತ್ತು ಉತ್ತಮ ಆರೋಗ್ಯ ಸೇವೆಯನ್ನು ನೀಡುವ ಸಲುವಾಗಿ ಪ್ರಾರಂಭಿಸಲಾದ ಆರೋಗ್ಯ ಕೇಂದ್ರವು ಒಬ್ಬ ಜನರಲ್ ಫಿಸಿಶಿಯನ್ (ಎಂಬಿಬಿಎಸ್), ಸ್ಟಾಫ್ ನರ್ಸ್, ಡ್ರಗ್ಗಿಸ್ಟ್ ಮತ್ತು ಸಹಾಯಕರನ್ನೊಳಗೊಂಡಿದ್ದರೂ ಸಹ ವಿಶ್ವವಿದ್ಯಾನಿಲಯದ ಅಧಿಕಾರಿ ಮತ್ತು ಸಿಬ್ಬಂದಿಗಳು ಇದರ ಸೇವೆ ಪಡೆಯದೇ ಹೊರಗಿನ ಖಾಸಗಿ ಆಸ್ಪತ್ರೆ ಮತ್ತು ವೈದ್ಯರಲ್ಲಿ ಸಮಾಲೋಚನೆ/ಚಿಕಿತ್ಸೆ ಪಡೆದು ಅವರಿಂದ ಪಡೆದ ಸಲಹಾ ಚೀಟಿಗಳನ್ನು ಆರೋಗ್ಯ ಕೇಂದ್ರಕ್ಕೆ ನೀಡಿ ಔಷಧಿ ಪಡೆದು ಹೋಗುತ್ತಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಅಲ್ಲದೇ ಅಗತ್ಯಕ್ಕೂ ಮೀರಿ ಹೆಚ್ಚಿನ ಪ್ರಮಾಣದಲ್ಲಿ ಕೆಲವೊಂದು ಔಷಧಿಗಳನ್ನು ಖರೀದಿಸಿ ಅವು ವಿತರಣೆಯಾಗದೇ ಎಕ್ಸ್ ಪೈರಿಯಾಗಿದ್ದು, ವಿಶ್ವವಿದ್ಯಾನಿಲಯಕ್ಕೆ ಇದು ಫಲದಾಯಕವಲ್ಲದ ಅನಗತ್ಯ ವೆಚ್ಚವಾಗಿ ಪರಿಣಮಿಸಿದೆ ಹಾಗೂ ವಿಶ್ವವಿದ್ಯಾನಿಲಯವು ಈ ಆರೋಗ್ಯ ಕೇಂದ್ರದ ನಿರ್ವಹಣೆಗೆ ಅನುಸರಿಸುತ್ತಿರುವ ನಿರ್ದಿಷ್ಟ ಮಾನದಂಡಗಳ ಬಗ್ಗೆ ಯಾವುದೇ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದ ಕಾರಣ ಈ ಬಗ್ಗೆ ಸಂಪೂರ್ಣ ಲೆಕ್ಕಪರಿಶೋಧಿಸಲು ಸಾಧ್ಯವಾಗಿರುವುದಿಲ್ಲ.

22. ಪ್ರಯಾಣ ಭತ್ಯೆಗಳು

22.1 <u>ವಿಶ್ವವಿದ್ಯಾನಲಯದ ಶಾಸನಬದ್ಧ ಅಧಿಕಾರಿಗಳ ವಿದೇಶ ಪ್ರಯಾಣದ ಸಂಬಂಧ ಹೋಟೆಲ್‌ನ ವಾಸ್ತವ್ಯದ ಮತ್ತು ದಿನಭತ್ಯೆ ರೂ.6,22,260/–ಗಳು ಪಡೆದ ವೋಚರ್‌ಗಳನ್ನು, ಹಾಗೂ ಸರ್ಕಾರದ ಮಂಜೂರಾತಿ ಪತ್ರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.</u>

Surbonne University Paris ಹಾಗೂ European International University Operations head Quarters, Bangkok, Thailand ಇವರುಗಳೊಂದಿಗೆ ಶೈಕ್ಷಣಿಕ ಒಡಂಬಡಿಕೆಗಳು ಹಾಗೂ ಇನ್ನಿತರೇ ವಿಷಯಗಳ ಬಗ್ಗೆ ಚರ್ಚಿಸಲು ಕ್ರಮವಾಗಿ ದಿನಾಂಕ:22.08.2023 ರಿಂದ 25.08.2023 ರವರೆಗೆ ಕುಲಪತಿಗಳು ಹಾಗೂ CIQA ನಿರ್ದೇಶಕರು ಹಾಗೆಯೇ ದಿನಾಂಕ:26.08.2023 ರಿಂದ 28.08.2023 ರವರೆಗೆ ಕುಲಪತಿಗಳು, ಕುಲಸಚಿವರು, ಹಣಕಾಸು ಅಧಿಕಾರಿಗಳು ಹಾಗೂ CIQA ನಿರ್ದೇಶಕರು ಇವರುಗಳು Best Western Hotel Du Point Wilson, Lyon–France, Hotel tourism Avenue, Paris–France, ಈ ಹೋಟೆಲ್‌ಗಳಲ್ಲಿ ವಾಸ್ತವ್ಯ ಹೂಡಿದ ಸಂಬಂಧ (40,850 + 52,350,+,40,850 +

52,350) ಒಟ್ಟು ರೂ.1,86,400/-ಗಳನ್ನು Travel Destination. Bangalore ರವರಿಗೆ ಧನಾದೇಶ ಸಂಖ್ಯೆ: 925711/26.09.2023ರಲ್ಲಿ ಪಾವತಿಸಿದ್ದು, ಹೋಟೆಲ್‌ಗಳ ಮೂಲ ಬಿಲ್ಲುಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ದಿನ ಭತ್ಯ ಪಾವತಿ ವಿವರಗಳು.

ಕ್ರ.ಸಂ	ಪ್ರಯಾಣದ ದಿನಾಂಕ	ಹೆಸರ & ಹುದ್ದೆ	ಪಡೆದ ದಿನ ಭತ್ಯ	ಮೊತ್ತ	ವೋಚರ್ ಸಂಖ್ಯೆ
1	22.08.2023 ರಿಂದ 25.08.2023	ಪ್ರೊ.ಶರಣಪ್ಪ.ವಿ. ಹಲಸೆ ಕುಲಪತಿಗಳು	250 EURO x 95/- 23,750/Per day x 4 days	95,000	103/16.08.2023 ಮತ್ತು 104/16.08.2023
	26.08.2023 ರಿಂದ 28.08.2023		200 Dollar x 82.65/- = 16,530/- Per day x 3 days	49,590	
2	26.08.2023 ರಿಂದ 28.08.2023	ಡಾ.ಕೆ.ಎಲ್.ಎನ್ ಮೂರ್ತಿ, ಕುಲಸಚಿವರು	200 Dollar x 82.65/- = 16530/- Per day x 3 days	49,590	103/16.08.2023 ಮತ್ತು 104/16.08.2023
3	20.08.2023 ರಿಂದ 25.08.2023	ಡಾ.ನಿರಂಜನ್ ರಾಜ್.ಎಸ್, ನಿರ್ದೇಶಕರು CIQA	ಎಂದು 250 EURO x95/-= 23,750/Per day x 6 days	1,42,500	
4	26.08.2023 ರಿಂದ 28.08.2023	ಡಾ.ಎ.ಖಾದರ್ ಪಾಷ, ಹಣಕಾಸು ಅಧಿಕಾರಿ	200 Dollar x 82.65/- = 16530/- Per day x 3 days	49,590	
5	26.08.2023 ರಿಂದ 28.08.2023	ಡಾ.ನಿರಂಜನ್ ರಾಜ್.ಎಸ್, ನಿರ್ದೇಶಕರು CIQA	200 Dollar x 82.65/- = 16530/- Per day x 3 days	49,590	
			ಒಟ್ಟು	4,35,860	

ಮೇಲೆ ವಿವರಿಸಿರುವಂತೆ ದಿನಭತ್ಯೆಯನ್ನು ವಿದೇಶಿ ಕರೆನ್ಸಿಗಳಾದ EURO ಮತ್ತು Dollar ದರಗಳಂತೆ ಒಟ್ಟು ರೂ.4,35,860/- ಗಳನ್ನು ಪಾವತಿಸಿದ್ದು, ಈ ಪಾವತಿ ಸಂಬಂಧ ಸರ್ಕಾರದ ಆದೇಶಗಳಾಗಲೀ, ವಾಸ್ತವಿಕವಾಗಿ ಭರಿಸಲಾದ ವೆಚ್ಚದ ವೋಚರ್‌ಗಳನ್ನಾಗಲೀ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಕರ್ನಾಟಕ ನಾಗರೀಕ ಸೇವಾ ನಿಯಮಗಳು-ನಿಯಮ-64 ರಂತೆ ಭಾರತದ ಹೊರಗೆ ತೆರಳಲು ಸರ್ಕಾರದ ನಿರ್ದಿಷ್ಟ ಮಂಜೂರಾತಿ ಪಡೆಯುವುದು ಅವಶ್ಯಕವಿದ್ದು, ಈ ದಾಖಲೆಯನ್ನು ಸಹ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ಮೇಲ್ಕಂಡ ಎಲ್ಲಾ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:71/16.12.2024ರಂದು ನೀಡಲಾಗಿ, ವಿಶ್ವವಿದ್ಯಾನಿಲಯವು ದಿನಾಂಕ:27.02.2025 ರಂದು "LYON

FRANCE ಮತ್ತು PARIS, FRANCE ನಲ್ಲಿ ವಾಸ್ತವ್ಯ ಹೂಡಿದ್ದ ಹೋಟೆಲ್‌ನ ಬಿಲ್ಲುಗಳು ಲಭ್ಯವಿರುವುದಿಲ್ಲ. ದಿನಭತ್ಯೆಯನ್ನು ಎದೇತಿ ಕರೆನ್ಸಿ EURO & DOLLAR ವೆಚ್ಚದಂತೆ ಒಟ್ಟು ರೂ.4,35,860/-ಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ದಿನಾಂಕ:27.07.2023 ರಂದು ನಡೆದ 173ನೇ ವ್ಯವಸ್ಥಾಪನಾ ಮಂಡಳಿ ತೀರ್ಮಾನದನ್ವಯ ಪಾವತಿಸಿದೆ. ಮತ್ತು ವಿದೇಶಕ್ಕೆ ತೆರಳುವ ಸಂಬಂಧ ಮಾನ್ಯ ರಾಜ್ಯಪಾಲರಿಂದ ಅನುಮತಿ ದೊರಕಿಸಿಕೊಡಬೇಕೆಂದು ದಿನಾಂಕ:07.08.2023 ರಂದು ಪತ್ರವನ್ನು ಸಲ್ಲಿಸಲಾಗಿದ್ದು, ಮತ್ತೊಮ್ಮೆ ದಿನಾಂಕ;19.11.2024ರಲ್ಲಿಯೇ ಮಾನ್ಯ ರಾಜ್ಯಪಾಲರಿಂದ ಅನುಮೋದನೆ ದೊರಕಿಸಿ ಕೊಡಬೇಕೆಂದು ಪತ್ರದಲ್ಲಿ ಕೋರಲಾಗಿದ್ದು, ಸದ್ಯದಲ್ಲಿಯೇ ಅನುಮೋದನೆಯ ಪತ್ರವನ್ನು ಪಡೆದು ಲೆಕ್ಕಪರಿಶೋಧನಾ ಕಛೇರಿಗೆ ಸಲ್ಲಿಸಲಾಗುವುದು" ಎಂದು ಉತ್ತರವನ್ನು ನೀಡಿರುತ್ತಾರೆ. ಹಾಗಾಗಿ, ಹೋಟೆಲ್ ವಾಸ್ತವ್ಯದ (Accommodation charges) ವೋಚರ್‌ಗಳನ್ನು ಮತ್ತು ದಿನಭತ್ಯೆಯ ಪಾವತಿಯ ಸಂಬಂಧ ಸರ್ಕಾರದ ಅನುಮತಿ ಪಡೆದು ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೆ ರೂ.1,86,400/- ಮತ್ತು 4,35,860/- ಒಟ್ಟು ಮೊತ್ತ **ರೂ.6,22,260/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

22.2 ಬೋಧಕೇತರ ವರ್ಗದವರಿಗೆ ಕೆ.ಸಿ.ಎಸ್.ಆರ್ ನಿಯಮವನ್ನು ಉಲ್ಲಂಘಿಸಿ ರೂ.11,56,734/-ಗಳ ಪ್ರಯಾಣಭತ್ಯೆ ಹಾಗೂ ದಿನಭತ್ಯೆ ದರಗಳನ್ನು ಹೆಚ್ಚುವರಿಯಾಗಿ ಪಾವತಿಸಿರುವುದು.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ-2000 ಹಾಗೂ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಇಡಿ/99/ಯುಎನ್‌ಇ/99, ದಿನಾಂಕ:15.11.1999, ಆದೇಶ ಸಂಖ್ಯೆ:ಇಡಿ/100/ಯುಎನ್‌ಇ/99, ದಿನಾಂಕ: 15.11.1999 ಹಾಗೂ ಆದೇಶ ಸಂಖ್ಯೆ:ಇಡಿ/188/ಆಇ/99, ದಿನಾಂಕ:15.11.1999 ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಗಳು-1958 ನಿಯಮ-28ರ ಉಪನಿಯಮಗಳಲ್ಲಿ ಸೂಚಿಸಿರುವಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಆಇ1/ಸನಿತಿ/2019, ಬೆಂಗಳೂರು, ದಿನಾಂಕ:11.01.2019ರಲ್ಲಿನ ದರಗಳನ್ನು ಮೀರಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಕೆಲಸ ಕಾರ್ಯಗಳಿಗೆ ಹಾಜರಾದ ಬೋಧಕೇತರ ಸಿಬ್ಬಂದಿಗಳಿಗೆ ಹೆಚ್ಚುವರಿಯಾಗಿ ಪ್ರಯಾಣಭತ್ಯೆ ಹಾಗೂ ದಿನಭತ್ಯೆಯನ್ನು ಪಾವತಿಸಲಾಗಿರುತ್ತದೆ. ಈ ಬಗ್ಗೆ ಸ್ಪಷ್ಟೀಕರಣ ಕೋರಿ ನೀಡಿದ ವಿಚಾರಣೆ ಪತ್ರ ಸಂಖ್ಯೆ:93/01.01.2025 ಮತ್ತು 1561/03.02.2025ನ್ನು ನೀಡಲಾಗಿದ್ದು, ವಿಶ್ವವಿದ್ಯಾನಿಲಯದವರು ದಿನಾಂಕ: 24.02.2025 ರಂದು ನೀಡಿರುವ ಉತ್ತರದಲ್ಲಿ ವಿಶ್ವವಿದ್ಯಾನಿಲಯದ ಸ್ಥಾಯಿ ಆದೇಶದಂತೆ ಕ್ರಮವಹಿಸಲಾಗಿದ್ದು, ಲೆಕ್ಕಪರಿಶೋಧನೆಯಲ್ಲಿ ವಸೂಲಿಸಲು ಸೂಚಿಸಿರುವುದನ್ನು ಕಡತದಲ್ಲಿ ಮಂಡಿಸಿ ನಂತರದಲ್ಲಿ ಮಾಹಿತಿಯನ್ನು ಒದಗಿಸಲಾಗುವುದು ಎಂದು ಹಣಕಾಸು ಅಧಿಕಾರಿಗಳು ಅನುಪಾಲನಾ ವರದಿ ಸಲ್ಲಿಸಿರುತ್ತಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ:ಕರಾಮುವಿ/ಯುಎ-11/446/2010-11/01, ದಿನಾಂಕ:14.12.2020ರಲ್ಲಿ ಕೆ.ಸಿ.ಎಸ್.ಆರ್, ಕೆ.ಎಫ್.ಸಿ ಮತ್ತು ಎಂ.ಸಿ.ಇ ನಿಯಮಾವಳಿಗಳನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳುವ ಸಂಬಂಧ ಪರಿನಿಯಮ, "ಕೆಎಸ್ಒಯು (ರಾಜ್ಯ ಸರ್ಕಾರದ ಸೇವಾ ನಿಯಮ ಅಳವಡಿಕೆ) ಪರಿನಿಯಮಗಳು, 2009"ನ್ನು ಅಧಿಸೂಚಿಸಿರುತ್ತದೆ. ಸದರಿ

ಪರಿನಿಯಮಗಳಂತೆ ಕೆ.ಸಿ.ಎಸ್.ಆರ್ ನಿಯಮಗಳಡಿಯಲ್ಲಿಯೇ ದಿನಭತ್ಯೆ, ಪ್ರಯಾಣಭತ್ಯೆ ಮತ್ತಿತರ ಭತ್ಯೆಗಳನ್ನು ಪಾವತಿಸಬೇಕಾಗಿರುತ್ತದೆ. ಇದನ್ನು ಉಲ್ಲಂಘಿಸಿ ವಿಶ್ವವಿದ್ಯಾನಿಲಯದ ಸಮಿತಿಗಳಲ್ಲಿ ತೀರ್ಮಾನ ತೆಗೆದುಕೊಳ್ಳಲು ಅವಕಾಶ ಇರುವುದಿಲ್ಲವಾದ್ದರಿಂದ **ಅನುಬಂಧ–30** ರಲ್ಲಿ ವಿವರಿಸಿರುವಂತೆ ಹೆಚ್ಚುವರಿಯಾಗಿ ಪಾವತಿಸಿರುವ ಪ್ರಯಾಣಭತ್ಯೆ ಹಾಗೂ ದಿನಭತ್ಯೆಯ ಒಟ್ಟು ಮೊತ್ತ ರೂ.9,53,136/–ಗಳನ್ನು ಹಾಗೂ **ಅನುಬಂಧ–30(ಎ)** ರಲ್ಲಿ ವಿವರಿಸಿರುವ ಮೊತ್ತ ರೂ.2,03,598/–ಸೇರಿ ಒಟ್ಟು **ರೂ.11,56,734/–ಗಳನ್ನು** ಕುಲಸಚಿವರು ಮತ್ತು ಹಣಕಾಸು ಅಧಿಕಾರಿಯವರಿಂದ **ವಸೂಲಿಸಲು ಸೂಚಿಸಿದೆ.**

23. ಸಾದಿಲ್ವಾರು ವೆಚ್ಚಗಳು

23.1 ಪಿ.ಹೆಚ್.ಡಿ. ಕಾರ್ಯಕ್ರಮದ ಪ್ರಶ್ನೆಪತ್ರಿಕೆ ಮುದ್ರಣದಲ್ಲಿ ಉಂಟಾಗಿರುವ ಅನಗತ್ಯ ವಿಳಂಬದಿಂದ ವಿಶ್ವವಿದ್ಯಾನಿಲಯಕ್ಕೆ ರೂ.2,87,901/–ಗಳ ಆರ್ಥಿಕ ನಷ್ಟವಾಗಿರುವುದು.

2023–24ನೇ ಸಾಲಿನ ವಿವಿಧ ಅಧ್ಯಯನ ವಿಭಾಗಗಳಲ್ಲಿ ಪಿ.ಹೆಚ್.ಡಿ. ಕಾರ್ಯಕ್ರಮಕ್ಕೆ ಪ್ರವೇಶಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ದಿನಾಂಕ:04.07.2023ರಲ್ಲಿ ಪರಿಷ್ಕೃತ ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ:ಕರಾಮುವಿ/ಡೀನ್(ಶೈ)/ಡಿಎಸಿ–07/ಪಿಹೆಚ್.ಡಿ/2023–24ನ್ನು ಹೊರಡಿಸಲಾಗಿತ್ತು. ಸದರಿ ಅಧಿಸೂಚನೆಯಲ್ಲಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ದಿನಾಂಕ:19.06.2023 ರಿಂದ 30.06.2023ರವರೆಗೆ ದಂಡ ಶುಲ್ಕವಿಲ್ಲದೆ ಮತ್ತು ದಿನಾಂಕ:15.07.2023 ರವರೆಗೆ ದಂಡ ಶುಲ್ಕದೊಂದಿಗೆ ಕಾಲಮಿತಿಯನ್ನು ನಿಗಧಿಪಡಿಸಿ, ಸಾಮಾನ್ಯ ಪ್ರವೇಶಾತಿ ಪರೀಕ್ಷೆಯನ್ನು ದಿನಾಂಕ:20.08.2023 ರಂದು ನಡೆಸಲು ಉದ್ದೇಶಿಸಲಾಗಿತ್ತು. ಸದರಿ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ಬಾಹ್ಯ ವಿಷಯ ತಜ್ಞರಿಂದ ಸಿದ್ಧಪಡಿಸಿ ಮುದ್ರಕರಾದ ಮೆ: ವೈ ಎಸ್ ಹೈಟೆಕ್ ಸೆಕ್ಯೂರ್ ಪ್ರಿಂಟ್ (ಪ್ರೈ) ಲಿಮಿಟೆಡ್, ಹೈದರಾಬಾದ್ ಇವರಿಗೆ ತ್ವರಿತ ಅಂಚೆಯ ಮೂಲಕ ದಿನಾಂಕ:07.08.2023ರಂದು ರವಾನಿಸಲಾಗಿರತ್ತದೆ. ಮುಂದುವರೆದು, ಪ್ರಶ್ನೆಪತ್ರಿಕೆ ಮುದ್ರಣಕ್ಕೆ ಸಂಬಂಧಿಸಿದಂತೆ ಮುದ್ರಕರಿಗೆ ಉದ್ಭವಿಸಿದ ಸಂದೇಹಗಳನ್ನು ವಿಶ್ವವಿದ್ಯಾನಿಲಯವು ದಿನಾಂಕ:11.08.2023ರಂದು ನಿವಾರಿಸಿದ್ದು, ದಿನಾಂಕ 18.08.2023 ರಂದು ಪ್ರಶ್ನೆಪತ್ರಿಕೆಗಳನ್ನು ವಿಶ್ವವಿದ್ಯಾನಿಲಯಕ್ಕೆ ಸರಬರಾಜು ಮಾಡಿರುವ ತತ್ಸಂಬಂಧ ರೂ.17,03,801/–ಗಳನ್ನು ಧನಾದೇಶ ಸಂಖ್ಯೆ: 234431/10.10.23 ರಲ್ಲಿ ತೆರಿಗೆ ಕಟಾವಣೆ ಮೊತ್ತ ರೂ.57,756/– (ಆದಾಯ ತೆರಿಗೆ (2%) ರೂ. 28,878/– & ಜಿ.ಎಸ್.ಟಿ. (2%) ರೂ. 28,878)ಗಳನ್ನು ಕಟಾಯಿಸಿ ರೂ.16,46,045/– ಗಳನ್ನು ಮೆ: ವೈ ಎಸ್ ಹೈಟೆಕ್ ಸೆಕ್ಯೂರ್ ಪ್ರಿಂಟ್ (ಪ್ರೈ) ಲಿಮಿಟೆಡ್, ಹೈದರಾಬಾದ್ ಇವರಿಗೆ ಪಾವತಿ ಮಾಡಲಾಗಿರುತ್ತದೆ.

ಮುದ್ರಕರೊಂದಿಗಿನ ದಿನಾಂಕ:28.07.2023ರ ಒಡಂಬಡಿಕೆಯ ಅನುಬಂಧ–Iರ ವಿಶೇಷಣ 3 ರಂತೆ ವಿಶ್ವವಿದ್ಯಾನಿಲಯಕ್ಕೆ ಮುದ್ರಕರು ಕಾರ್ಯಾದೇಶ ಸ್ವೀಕರಿಸಿದ ದಿನಾಂಕ/ಕೇಂದ್ರವಾರು ಪ್ಯಾಕಿಂಗ್ ಪಟ್ಟಿ/ಸಂದೇಹ ನಿವಾರಣೆ/ಅಂತಿಮ ಪುರಾವೆ ಅನುಮೋದನೆ ಇವುಗಳಲ್ಲಿ ಯಾವುದು ಅಂತಿಮವಾಗಿ ಗತಿಸುತ್ತದೆಯೋ ಆ ದಿನಾಂಕದಿಂದ 15 ದಿನಗಳ ಒಳಗಾಗಿ ಪ್ರಶ್ನೆಪತ್ರಿಕೆಗಳನ್ನು ಸರಬರಾಜು ಮಾಡಿದರೆ ಸದರಿ ಸರಬರಾಜನ್ನು ತುರ್ತು ಎಂದು ಪರಿಗಣಿಸಿ ಒಡಂಬಡಿಕೆಯಲ್ಲಿ ನಿರ್ಧರಿಸಲಾದ ದರಗಳಿಗೆ ಹೆಚ್ಚುವರಿ ಶೇ. 20 ರಷ್ಟನ್ನು ಪಾವತಿ ಮಾಡುವ ಷರತ್ತಿಗೆ ವಿಶ್ವವಿದ್ಯಾನಿಲಯವು ಒಳಪಟ್ಟಿರುತ್ತದೆ.

2023ನೇ ಸಾಲಿನಲ್ಲಿ ಪಿ.ಹೆಚ್.ಡಿ. ಕಾರ್ಯಕ್ರಮದ ಪ್ರವೇಶಾತಿಗಾಗಿ ಅಧಿಸೂಚಿಸಿದ ಸಂದರ್ಭದಲ್ಲಿಯೇ ದಿನಾಂಕ:20.08.2023 ರಂದು ಸಾಮಾನ್ಯ ಪ್ರವೇಶಾತಿ ಪರೀಕ್ಷೆಯನ್ನು ನಡೆಸಲು ಪೂರ್ವ ನಿರ್ಧಾರಿತವಾಗಿರುವುದರ ಜೊತೆ ಅರ್ಜಿ ಸಲ್ಲಿಕೆಗೆ 15.07.2023 ಕಡೆಯ ದಿನಾಂಕವಾಗಿದೆ. ಅದರಂತೆ ಬಾಹ್ಯ ವಿಷಯ ತಜ್ಞರಿಂದ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮುದ್ರಕರಿಗೆ ಕಾರ್ಯಾದೇಶ ನೀಡಲು ವಿಶ್ವವಿದ್ಯಾನಿಲಯಕ್ಕೆ ಒಟ್ಟು 47 ದಿನಗಳ (04.07.2023 ರಿಂದ 19.08.2023 ರವರೆಗೆ) ಕಾಲಾವಕಾಶ ಲಭ್ಯತೆಯಿದ್ದರೂ ಸಹ ಮೇಲ್ಕಾಣಿಸಿದ ವಿಶೇಷಣವನ್ನು ಗಮನದಲ್ಲಿಟ್ಟುಕೊಳ್ಳದೇ ಅನಗತ್ಯ ವಿಳಂಬ ನೀತಿ ಅನುಸರಿಸಿ ಮುದ್ರಕರಿಕೆ ತಡವಾಗಿ ಕಾರ್ಯಾದೇಶವನ್ನು ದಿನಾಂಕ:07.08.2023 ರಂದು ಹೊರಡಿಸಲಾಗಿರುವುದರಿಂದ ಈ ಕೆಳಗಿನಂತೆ ಹೆಚ್ಚುವರಿ ಮೊತ್ತವನ್ನು ಪಾವತಿಸಲಾಗಿರುತ್ತದೆ.

ವಾಸ್ತವವಾಗಿ ಪಾವತಿ ಮಾಡಲಾದ ಮೊತ್ತ	ಸಾಮಾನ್ಯವಾಗಿ ಪಾವತಿ ಮಾಡಬೇಕಾಗಿದ್ದ ಮೊತ್ತ	ವಿಳಂಬ ಕ್ರಮದಿಂದ ಪಾವತಿ ಮಾಡಲಾದ ಹೆಚ್ಚುವರಿ ಮೊತ್ತ
17,27,401	14,39,500	2,87,901

ಈ ಕುರಿತು ವಿಶ್ವವಿದ್ಯಾನಿಲಯಕ್ಕೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 83/02.01.2025ರಲ್ಲಿ ಸೂಕ್ತ ವಿವರಣೆಯನ್ನು ಕೋರಲಾಗಿ, ವಿಶ್ವವಿದ್ಯಾನಿಲಯವರು ತಮ್ಮ ಅನುಪಾಲನಾ ವರದಿಯಲ್ಲಿ ಮಾನ್ಯ ಕುಲಸಚಿವರು (ಪರೀಕ್ಷಾಂಗ) ಇವರು ಪಿ.ಹೆಚ್.ಡಿ. ಸಾಮಾನ್ಯ ಪ್ರವೇಶ ಪರೀಕ್ಷೆಯ ಕರ್ತವ್ಯಗಳನ್ನು ನಿರ್ವಹಿಸಲು ಸಂಯೋಜನಾಧಿಕಾರಿಯನ್ನು ನೇಮಿಸುವಲ್ಲಿ ಮತ್ತು ಬಾಹ್ಯ ಪರೀಕ್ಷಕರಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸುವಿಕೆಯ ಆದೇಶವನ್ನು ಅಂಚೆ ಮೂಲಕ ರವಾನಿಸುವಲ್ಲಿ ವಿಳಂಬವಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಸದರಿ ವಿಳಂಬಕ್ಕೆ ಅವಕಾಶ ಮಾಡಿಕೊಡದೇ ಅಧಿಸೂಚಿಸಿದ ದಿನಾಂಕ:27.06.203 ರಿಂದ 04.07.2023 ರೊಳಗೆ ಮೇಲ್ಕಾಣಿಸಿದ ಪ್ರಕ್ರಿಯೆಯನ್ನು ಪೂರ್ಣಗೊಳಿಸಿಕೊಂಡಿದ್ದಲ್ಲಿ ಮುದ್ರಕರಿಗೆ ಕಾರ್ಯಾದೇಶ ನೀಡುವಲ್ಲಿ ವಿಳಂಬವಾಗುತ್ತಿರಲಿಲ್ಲ. ಹಾಗಾಗಿ ಸದರಿ ವಿಳಂಬ ಪ್ರಕ್ರಿಯೆಯಿಂದ ಮುದ್ರಕರಿಗೆ ರೂ.2,87,901/–ಗಳ ಹೆಚ್ಚುವರಿ ಪಾವತಿಯಾಗಿದ್ದು, ವಿಶ್ವವಿದ್ಯಾನಿಲಯಕ್ಕೆ ಸಮಾನ ಮೊತ್ತದ ಆರ್ಥಿಕ ನಷ್ಟ ಉಂಟಾಗಿರತ್ತದೆ. ಈ ವಿಳಂಬ ಕ್ರಮವು ಕರ್ನಾಟಕ ಆರ್ಥಿಕ ಸಂಹಿತೆ, 1958ರ ಅನುಚ್ಛೇದ–15ರಲ್ಲಿ ಆರ್ಥಿಕ ಔಚಿತ್ಯತೆಯನ್ನು ವಿಧಿಸುತ್ತದೆ ಹಾಗೂ ಅನುಚ್ಛೇದ 16 ರಂತೆ ಪ್ರತಿಯೊಬ್ಬ ಸರ್ಕಾರಿ ನೌಕರನೂ ಹಣಕಾಸಿನ ವಿಷಯಗಳಲ್ಲಿ ಕೇವಲ ಸಂಪೂರ್ಣ ಸಮಗ್ರತೆಯನ್ನು ಕಾಪಾಡಿಕೊಳ್ಳುವುದು ಮಾತ್ರವಲ್ಲದೇ, ತಾನು ಅಥವಾ ತನ್ನ ನಿಯಂತ್ರಣದಲ್ಲಿನ ಸಿಬ್ಬಂದಿಗಳು ಸಾರ್ವಜನಿಕ ಹಣದ ವೆಚ್ಚವನ್ನು ಸಾಧ್ಯವಾದಷ್ಟು ಉತ್ಕೃಷ್ಟ ಮೌಲ್ಯವನ್ನು ಪಡೆಯುವುದನ್ನು ಜಾಗರೂಕತೆಯಿಂದ ಗಮನಿಸುತ್ತಾ, ಸಾರ್ವಜನಿಕ ಹಣದಿಂದ ಯಾವುದೇ ರೀತಿಯಾದ ವ್ಯರ್ಥದಾಯಕ ವೆಚ್ಚಗಳು ಸಂಭವಿಸದಂತೆ ಸಾರ್ವಜನಿಕ ನಿಧಿಯನ್ನು ರಕ್ಷಿಸಬೇಕಾಗಿದ್ದು, ವಿಶ್ವವಿದ್ಯಾನಿಲಯವು ಸದರಿ ಅನುಚ್ಛೇದ–15 ಮತ್ತು 16ಕ್ಕೆ ವ್ಯತಿರಿಕ್ತವಾಗಿದ್ದು, ಹಣಪಾವತಿಸಿರುವುದರಿಂದ ಈ ನಷ್ಟಕ್ಕೆ ಕಾರಣರಾದ ಕುಲಸಚಿವರು (ಪರೀಕ್ಷಾಂಗ) ರವರನ್ನು ಹೊಣೆಗಾರರನ್ನಾಗಿಸಿ ಆರ್ಥಿಕ ನಷ್ಟದ ಮೊತ್ತ ರೂ.**2,87,901/–ಗಳನ್ನು ವಸೂಲಿಸಲು ಸೂಚಿಸಿದೆ.**

23.2 ಸ್ವಯಂ ಕಲಿಕಾ ಸಾಮಗ್ರಿಗಳನ್ನು (SLM) ಬಾಹ್ಯ ಬರಹಗಾರರಿಂದ ಹೆಚ್ಚುವರಿಯಾಗಿ ಸಿದ್ಧಪಾಠಗಳನ್ನು ಬರೆಸಿ ರೂ.1,74,27,000/–ಗಳನ್ನು ಪಾವತಿಸಿರುವುದು.

ವಿಶ್ವವಿದ್ಯಾನಿಲಯದವರು ಸ್ವಯಂ ಕಲಿಕಾ ಸಾಮಗ್ರಿಗಳನ್ನು ವಿಶ್ವವಿದ್ಯಾನಿಲಯ ಅನುದಾನ ಆಯೋಗ (ಯುಜಿಸಿ)ದ ಅಧಿಸೂಚನೆ ಸಂಖ್ಯೆ; No. F. 1–1/2020(DEB–I)/ 04.09.2020 ಯ ಭಾಗ–III ರ ಕ್ರ.ಸಂ.13(B)(ii) ರನ್ವಯ At least 60 per cent of Self Learning Materials shall be developed by the in–house faculty of the Higher Educational Institution and the remaining per cent of the materials can be sourced from available resources such as other Higher Educational Institutions, Open Educational Resources (OER), and SWAYAM, duly approved by the statutory authorities of the Higher Educational Institution ಎಂದು ಅಧಿಸೂಚಿಸಿರುತ್ತದೆ ಇದರನ್ವಯ ಸ್ವಯಂ ಕಲಿಕಾ ಸಾಮಗ್ರಿಗಳನ್ನು (SLM) ಸಿದ್ಧಪಡಿಸಬೇಕಾಗಿರುತ್ತದೆ.

ಅದರಂತೆ ವಿಶ್ವವಿದ್ಯಾನಿಲಯದವರು ಸ್ವಯಂ ಕಲಿಕಾ ಸಾಮಗ್ರಿಗಳನ್ನು **ಕನಿಷ್ಠ ಶೇಕಡ 60** ರಷ್ಟನ್ನು ಆಂತರಿಕ ಭೋಧಕರಿಂದ ಸಿದ್ಧಪಡಿಸುವುದು ಹಾಗೂ ಉಳಿಕೆ (ಶೇಕಡ 40)ರಷ್ಟ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಬಾಹ್ಯ ಮೂಲಗಳು ಮತ್ತು ಇನ್ನಿತರ ಮೂಲಗಳಿಂದ ಸಿದ್ಧಪಡಿಸಬೇಕಾಗಿರುತ್ತದೆ. ಆದರೆ, ವಿಶ್ವವಿದ್ಯಾನಿಲಯವು ಸದರಿ ನಿಯಮವನ್ನು ಉಲ್ಲಂಘಿಸಿ, **2022–23 ಮತ್ತು 2023–24**ನೇ ಆರ್ಥಿಕ ವರ್ಷಗಳಲ್ಲಿ ಒಟ್ಟು 32 ವಿಭಾಗಗಳಿದ್ದು, ಇದರಲ್ಲಿ 04 (ತೆಲಗು, ರಾಜ್ಯಶಾಸ್ತ್ರ, ಸಸ್ಯ ಶಾಸ್ತ್ರ ಮತ್ತು ಕನ್ನಡ) ವಿಭಾಗಗಳು ಅಂತರಿಕ ಬೋಧಕರಿಂದ ಮೇಲೆ ತಿಸಳಿಸಿರುವ ಯುಜಿಸಿ ಅಧಿಸೂಚನೆಯ ಅನಯಸಾರ ಸ್ವಯಂ ಕಲಿಕ ಸಾಮಾಗ್ರಿಗಳ ಬರವಣಿಯಗೆಯಾಗಿರುತ್ತದೆ, (SLM) **ಅನುಬಂಧ–31 ರಲ್ಲಿ** ವಿವರಿಸಿರುವಂತೆ ಒಟ್ಟು 22 ವಿಭಾಗಗಳು ಕನಿಷ್ಠ ಶೇ 60 ಕ್ಕಿಂತ ಕಡಿಮೆ ಸ್ವಯಂ ಕಲಿಕಾ ಸಾಮಗ್ರಿಗಳನ್ನು (SLM) ಆಂತರಿಕ ಬೋಧಕರಿಂದ ಸಿದ್ಧಪಡಿಸಿರುವುದು ಹಾಗೂ **ಶೇ 40**ಕ್ಕಿಂತ ಅಧಿಕ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಬಾಹ್ಯ ಬರಹಗಾರರಿಂದ ಸಿದ್ಧಪಡಿಸಿರುವುದರಿಂದ ಹೆಚ್ಚುವರಿಯಾಗಿ ಮೊತ್ತ **ರೂ.1,74,27,000/–ಗಳನ್ನು** ಪಾವತಿಯಾಗಿರುವುದು ಲೆಕ್ಕಪರಿತೋಧನೆಯಲ್ಲಿ ಕಂಡುಬಂದಿರುತ್ತದೆ. ಹೀಗೆ ವಿಶ್ವವಿದ್ಯಾನಿಲಯದ ಅನುದಾನ ಆಯೋಗ (ಯುಜಿಸಿ)ದ ಅಧಿಸೂಚನೆಯನ್ನು ಉಲ್ಲಂಘಿಸಿ ಹೆಚ್ಚುವರಿಯಾಗಿ ಪಾವತಿಸಿರುವುದಕ್ಕೆ ಸಂಬಂಧಿಸಿದಂತೆ ವಿವರಣೆಯನ್ನು ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ **ಸಂಖ್ಯೆ:181/10.02.2025ಕ್ಕೆ ವಿಶ್ವವಿದ್ಯಾನಿಲಯದಿಂದ ಪ್ರತಿಕ್ರಿಯಿಸಿರುವುದಿಲ್ಲ.**

ಮುಂದುವರಿದು ಸ್ವಯಂ ಕಲಿಕಾ ಸಾಮಗ್ರಿಗಳನ್ನು (SLM) ಸಿದ್ಧಪಡಿಸುವುದು ಆಂತರಿಕ ಬೋಧಕರ ಆದ್ಯ ಕರ್ತವ್ಯವಾಗಿದ್ದು, ಮೇಲಿನ ವಿಶ್ವವಿದ್ಯಾನಿಲಯದ ಅನುದಾನ ಆಯೋಗ (ಯುಜಿಸಿ)ದ ಅಧಿಸೂಚನೆಯನ್ವಯ **ಕನಿಷ್ಠ ಶೇಕಡ 60ರಷ್ಟನ್ನಾದರು** ಸಿದ್ಧಪಡಿಸಬೇಕಾಗಿರುತ್ತದೆ. ಆದರೆ ಕನಿಷ್ಠ ಶೇಕಡ 60 ರಷ್ಟನ್ನೂ ಸಿದ್ಧಪಡಿಸದೇ ಬಾಹ್ಯ ಬರಹಗಾರರಿಂದ ಹೆಚ್ಚುವರಿಯಾಗಿ ಸಿದ್ಧಪಡಿಸಿಕೊಂಡಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಒಟ್ಟು **ರೂ.1,74,27,000/–**ಗಳ ಆರ್ಥಿಕ ನಷ್ಟವಾಗಿರುತ್ತದೆ. ವಿಶ್ವವಿದ್ಯಾನಿಲಯಕ್ಕೆ ನಷ್ಟವಾಗಿರುವ ಮೊತ್ತವನ್ನು ಈ ನಷ್ಟಕ್ಕೆ

ಕಾರಣರಾದ ಡೀನ್ (ಶೈಕ್ಷಣಿಕ)ರವರನ್ನು ಹೊಣೆಗಾರರನ್ನಾಗಿಸಿ ವಸೂಲಿ ಮಾಡಿ ವಿಶ್ವವಿದ್ಯಾನಿಲಯಕ್ಕೆ ಜಮೆ ಮಾಡಲು ಸೂಚಿಸಿದೆ.

23.3 ಎಂ.ಎ ಶಿಕ್ಷಣಶಾಸ್ತ್ರದ ಪ್ರಥಮ ಮತ್ತು ದ್ವಿತೀಯ ಸೆಮಿಸ್ಟರ್‌ಗಳ ಸ್ವಯಂ–ಕಲಿಕಾ ಸಾಮಗ್ರಿಗಳ ಭಾಷಾಂತರಕ್ಕೆ ಹೆಚ್ಚುವರಿಯಾಗಿ ರೂ.3,95,000/–ಗಳನ್ನು ಪಾವತಿಸಿರುವುದು.

ವಿಶ್ವವಿದ್ಯಾಲಯದ ಪರಿಷ್ಕೃತ ಕಚೇರಿ ಆದೇಶ ಸಂಖ್ಯೆ: ಕರಾಮುವಿ/ಡೀನ್(ಶೈಕ್ಷಣಿಕ)/03/ಅಧ್ಯಯನ ಸಾಮಗ್ರಿಗಳ ಸಂಭಾವನೆ/525/2022–23, ದಿನಾಂಕ:06–07–2022, ಕ್ರಮ ಸಂಖ್ಯೆ 4ರ ಪ್ರಕಾರ ಒಂದು ಯೂನಿಟ್‌ನ ಭಾಷಾಂತರಕ್ಕೆ ರೂ.6,000/– ದರದಂತೆ ಪಾವತಿಸಲು ಆದೇಶಿಸಲಾಗಿರುತ್ತದೆ.

2022–23 ಮತ್ತು 2023–24ನೇ ಆರ್ಥಿಕ ವರ್ಷಗಳಲ್ಲಿ ಎಂ.ಎ ಶಿಕ್ಷಣಶಾಸ್ತ್ರದ ಪ್ರಥಮ ಮತ್ತು ದ್ವಿತೀಯ ಸೆಮಿಸ್ಟರ್‌ನ ಸ್ವಯಂ–ಕಲಿಕಾ ಸಾಮಗ್ರಿಗಳ ಭಾಷಾಂತರಕ್ಕೆ ರೂ.6,000/– ದ ಬದಲಾಗಿ ರೂ.8,500/– ದರದಂತೆ ಪಾವತಿಯಾಗಿರುವುದರಿಂದ ಒಟ್ಟು ರೂ**3,95,000/–ಗಳು ಹೆಚ್ಚುವರಿಯಾಗಿ ಪಾವತಿಯಾಗಿರುವುದು** ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ವಿವರ ಈ ಕೆಳಕಂಡ ಕೋಷ್ಟಕದಲ್ಲಿರುವಂತೆ.

ಕ್ರ ಸಂ	ಆರ್ಥಿಕ ವರ್ಷ	ಭಾಷಾಂತರಿಸಿದ ಯುನಿಟ್‌ಗಳ ಸಂಖ್ಯೆ	ಒಂದು ಯೂನಿಟ್‌ಗೆ ರೂ.6000 ರಂತೆ ಪಾವತಿಸಬೇಕಾದ ಒಟ್ಟು ಮೊತ್ತ ರೂಗಳಲ್ಲಿ	ಒಂದು ಯೂನಿಟ್‌ಗೆ ರೂ.8500 ರಂತೆ ಪಾವತಿಯಾಗಿರುವ ಒಟ್ಟು ಮೊತ್ತ ರೂಗಳಲ್ಲಿ	ಹೆಚ್ಚುವರಿಯಾಗಿ ಪಾವತಿಯಾಗಿರುವ ಮೊತ್ತ ರೂಗಳಲ್ಲಿ
1	2022–23	**82**	**4,92,000**	**6,97,000**	**2,05,000**
2	2023–24	**76**	**4,56,000**	**6,46,000**	**1,90,000**
	ಒಟ್ಟು	**158**	**9,48,000**	**13,43,000**	**3,95,000**

ವಿಶ್ವವಿದ್ಯಾನಿಲಯದ ಆದೇಶಕ್ಕೆ ವಿರುದ್ಧವಾಗಿ ಪಾವತಿಸಿರುವುದಕ್ಕೆ ವಿವರಣೆ ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ:195/17.02.2025ಕ್ಕೆ ವಿಶ್ವವಿದ್ಯಾನಿಲಯದವರು ಅನುಪಾಲನಾ ವರದಿಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ **ಅನುಬಂಧ–32 ರಲ್ಲಿ** ವಿವರಿಸಿರುವಂತೆ ಹೆಚ್ಚುವರಿಯಾಗಿ ಪಾವತಿಯಾಗಿರುವ ಮೊತ್ತ **ರೂ.3,95,000/–ಗಳನ್ನು** ಭಾಷಾಂತರಕಾರರಿಂದ **ವಸೂಲಿಸಿ** ವಿಶ್ವವಿದ್ಯಾನಿಲಯದ ಜಿ.ಆರ್.ಎ ಖಾತೆಗೆ ಜಮೆ ಮಾಡಲು ಸೂಚಿಸಿದೆ. ತಪ್ಪಿದಲ್ಲಿ ಈ ಪಾವತಿಗೆ ಕಾರಣರಾದ ಭಾಷಾಂತರಿಸಲು ಆದೇಶಿಸಿರುವ ಡೀನ್ (ಶೈಕ್ಷಣಿಕ)ರವರನ್ನು ಹೊಣೆಗಾರರನ್ನಾಗಿಸಿ ವಸೂಲಿಸಲು ಲೆಕ್ಕಪರಿಶೋಧನೆಯಲ್ಲಿ ಸೂಚಿಸಿದೆ.

23.4 ಮೆ:ವೈ.ಎಸ್. ಹೈಟೆಕ್ ಸೆಕ್ಯೂರ್ ಪ್ರಿಂಟ್ (ಪ್ರೈ) ಲಿಮಿಟೆಡ್, ಹೈದಾರಾಬಾದ್ ಹಾಗೂ ಪ್ರಿಂಟೆಕ್ ಸಿಸ್ಟಮ್ಸ್, ಹೈದಾರಾಬಾದ್ ರವರೊಂದಿಗೆ ಪ್ರಶ್ನೆಪತ್ರಿಕೆ ಹಾಗೂ ಒ.ಎಮ್.ಆರ್ ಗಳ ಮುದ್ರಣದ ಒಂದೇ ಕಾರ್ಯಕ್ಕೆ ಪ್ರತ್ಯೇಕ ಕರಾರುಗಳನ್ನು ಮಾಡಿಕೊಂಡು ರೂ.22,95,623/–ಗಳನ್ನು ಪಾವತಿಸಿರುವುದು.

ವಿಶ್ವವಿದ್ಯಾನಿಲಯಗಳಿಗೆ ಪ್ರಶ್ನೆಪತ್ರಿಕೆಗಳ ಮುದ್ರಣ ಕಾರ್ಯದಲ್ಲಿ ಗೌಪ್ಯತೆಯನ್ನು ಕಾಪಾಡುವ ಉದ್ದೇಶದಿಂದ ಪ್ರಶ್ನೆಪತ್ರಿಕೆಗಳ ಮುದ್ರಣಕ್ಕಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಹಾಗೂ ಸ್ಪರ್ಧಾತ್ಮಕತೆ ತರುವ ನಿಟ್ಟಿನಲ್ಲಿ ಜಾರಿಯಾದ ಕೆಟಿಪಿಪಿ ಕಾಯ್ದೆ 1999 ಹಾಗೂ ನಿಯಮಗಳು 2000 ಗಳ ಅಡಿಯಲ್ಲಿ ಬರುವ ಅನುಚ್ಛೇದ 4(ಜಿ) ಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ:19.08.2003ರ ಸರ್ಕಾರದ ಆದೇಶ ಸಂಖ್ಯೆ: PWD/433/FC–3/2003ರಲ್ಲಿ ಕೆಟಿಪಿಪಿಯಿಂದ ವಿನಾಯಿತಿ ನೀಡಲಾಗಿದೆ.

ವಿಶ್ವವಿದ್ಯಾನಿಲಯವು ದಿನಾಂಕ;28.07.2023 ರಂದು ವೈ.ಎಸ್. ಹೈಟೆಕ್ ಸೆಕ್ಯೂರ್ ಪ್ರಿಂಟ್ (ಪ್ರೈ) ಲಿಮಿಟೆಡ್, ಹೈದಾರಾಬಾದ್ ರವರೊಂದಿಗೆ ಪ್ರಶ್ನೆಪತ್ರಿಕೆ ಹಾಗೂ ಒ.ಎಮ್.ಆರ್‌ಗಳ ಮುದ್ರಣಕ್ಕಾಗಿ ಕರಾರು ಒಪ್ಪಂದವನ್ನು ನವೀಕರಿಸಿಕೊಂಡಿದ್ದು, ಸದರಿ ಒಪ್ಪಂದವು ಮುಂದಿನ 2 ವರ್ಷಗಳ ಅವಧಿಗೆ (28.07.2023 ರಿಂದ 27.07.2025ರವರೆಗೆ) ಚಾಲ್ತಿಯಲ್ಲಿರುವಾಗಲೇ, ದಿನಾಂಕ:11.08.2023 ರಂದು ಮತ್ತೋರ್ವ ಮುದ್ರಕರಾದ ಪ್ರಿಂಟೆಕ್ ಸಿಸ್ಟಮ್ಸ್, ಹೈದಾರಾಬಾದ್ ರವರೊಂದಿಗೆ ಹೆಚ್ಚುವರಿಯಾಗಿ ಕರಾರು ಒಪ್ಪಂದ ಮಾಡಿಕೊಂಡಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ್ದಿರುತ್ತದೆ. ಈ ಕ್ರಮವನ್ನು ಪ್ರಶ್ನಿಸಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:96/01.01.2025ಕ್ಕೆ ವಿಶ್ವವಿದ್ಯಾನಿಲಯದವರು ದಿನಾಂಕ:23.01.2025ರಂದು ಸಲ್ಲಿಸಿರುವ ಅನುಪಾಲನಾ ವರದಿಯಲ್ಲಿ ತುರ್ತು ಸಂದರ್ಭಗಳಲ್ಲಿ ಪ್ರಶ್ನೆಪತ್ರಿಕೆ ಹಾಗೂ ಒ.ಎಮ್.ಆರ್‌ಗಳ ಮುದ್ರಣ ಮಾಡಲು ಇಬ್ಬರು ಮುದ್ರಕರೊಂದಿಗೆ ಪ್ರತ್ಯೇಕ ಕರಾರು ಒಪ್ಪಂದ ಮಾಡಿಕೊಂಡಿರುವುದಾಗಿ ಅನುಪಾಲನಾ ವರದಿ ಸಲ್ಲಿಸಿರುತ್ತಾರೆ. ಆದರೆ ದ್ವಿಕರಾರು ಮಾಡಿಕೊಳ್ಳುವುದರಿಂದ ಗೌಪ್ಯತೆ ಕ್ಷೀಣಿಸುವುದಲ್ಲದೇ ಸರ್ಕಾರವು ಗೌಪ್ಯತಾ ಉದ್ದೇಶದಿಂದ ವಿಶ್ವವಿದ್ಯಾನಿಲಯಗಳಿಗೆ ನೀಡಿರುವ 4(ಜಿ) ಅಡಿಯಲ್ಲಿ ಕೆಟಿಪಿಪಿ ಅನ್ವಯಿಕೆಯಿಂದ ವಿನಾಯಿತಿಯ ಉದ್ದೇಶವನ್ನು ಪಾಲಿಸುವಲ್ಲಿ ವಿಫಲವಾಗುವುದಲ್ಲದೇ, ಉದ್ದೇಶಪೂರ್ವಕವಾಗಿ ಪಾರದರ್ಶಕತೆ ಮತ್ತು ಸ್ಪರ್ಧಾತ್ಮಕತೆಯ ಅನುಪಸ್ಥಿತಿಯನ್ನು ಸೃಷ್ಟಿಸಿದಂತಾಗುವುದರಿಂದ, ಹಾಗೂ ಹಿಂದಿನ ಕರಾರಿನ ಅನುಬಂಧ–I ರ 10ನೇ ವಿಶೇಷಣದಂತೆ ವಾರ್ಷಿಕ ಶೇಕಡ 10%ರ ದರದಲ್ಲಿ ಹೆಚ್ಚಿಸಿದ ದರಕ್ಕೆ (ಕೋಷ್ಟಕ–I ರ 'C' ಕಾಲಂ) ಅಥವಾ ಅಂದಿನ ಸೂಚ್ಯಂಕ ಪರಿಗಣಿತ ಮಾರುಕಟ್ಟೆ ದರಗಳಿಗೆ ಸಮಾನವಾಗುವ ದರಗಳಿಗೆ ದರಸಂಧಾನ ಮಾಡಿಕೊಳ್ಳದೆ ಅಧಿಕ ಪ್ರಮಾಣದ ಅಂದರೆ ಕನಿಷ್ಠ ಶೇ 50 ಗರಿಷ್ಠ ಶೇ 60 ಕಿಂತ ಹೆಚ್ಚಿನ ದರದಲ್ಲಿ ಕರಾರು ಒಪ್ಪಂದ ಮಾಡಿಕೊಂಡು ಪ್ರಿಂಟೆಕ್ ಸಿಸ್ಟಮ್ಸ್, ಹೈದಾರಾಬಾದ್ ರವರಿಗೆ ಧನಾದೇಶ ಸಂಖ್ಯೆ:235155/22.03.2024ರಲ್ಲಿ ಪಾವತಿಯಾಗಿರುವ ಮೊತ್ತ ರೂ.**22,95,623**/–ಗಳಲ್ಲಿ **ರೂ.17,30,587**/–ಗಳನ್ನು **ಆಕ್ಷೇಪಣೆಯಲ್ಲಿರಿಸಿದೆ** ಹಾಗೂ ಅಧಿಕ ಪ್ರಮಾಣದ ದರ ಮಾಡಿಕೊಂಡು ಪಾವತಿಸಿರುವ ಮೊತ್ತ **ರೂ.5,65,036**/–ಗಳನ್ನು ವಸೂಲಾತಿಗೆ ಸೂಚಿಸಿದೆ.

23.5 2022–2023ನೇ ಸಾಲಿನ ಸಿಬಿಸಿಎಸ್ ಹಾಗೂ ಕೊರತೆಯಿರುವ ಹಳೆಯ ಪಠ್ಯಕ್ರಮದ ಅಧ್ಯಯನ ಸಾಮಗ್ರಿಗಳ ಮುದ್ರಣದ ಟೆಂಡರ್‌ನಲ್ಲಿ ಕೆ.ಟಿ.ಪಿ.ಪಿ ನಿಯಮವನ್ನು ಉಲ್ಲಂಘಿಸಿರುವುದು.

ಕೆ.ಟಿ.ಪಿ.ಪಿ ನಿಯಮಗಳು, 2000ದ ನಿಯಮ 11ರ ಉಪನಿಯಮ 2(a)ಯು ಬ್ರಾಂಡ್ ಹೆಸರುಗಳು ಮತ್ತು ಕ್ಯಾಟ್ ಲಾಗ್ ಸಂಖ್ಯೆಗಳ ಬಳಕೆಯನ್ನು ತಪ್ಪಿಸತಕ್ಕದ್ದು ಮತ್ತು ಅವುಗಳ ಬಳಕೆಯನ್ನು ತಪ್ಪಿಸಲು ಸಾಧ್ಯವಿಲ್ಲದಿರುವಾಗ ಬ್ರಾಂಡ್ ಹೆಸರಿನೊಂದಿಗೆ "ಅಥವಾ ತತ್ಸಮಾನ" ಎಂಬ ಪದಾವಳಿಯನ್ನು ಸೇರಿಸತಕ್ಕದ್ದು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ,

2022–2023ನೇ ಸಾಲಿನ ಸಿಬಿಸಿಎಸ್ ಹಾಗೂ ಕೊರತೆಯಿರುವ ಹಳೆಯ ಪಠ್ಯಕ್ರಮದ ಅಧ್ಯಯನ ಸಾಮಗ್ರಿಗಳ ಮುದ್ರಣದ ಟೆಂಡರ್‌ಗಳನ್ನು ದಿನಾಂಕ:13.03.2023 ರಂದು 4 ಕೋಟಿ ಮೊತ್ತಕ್ಕೆ ಮತ್ತು ದಿನಾಂಕ:10.07.2023 ರಂದು 8 ಕೋಟಿ ಮೊತ್ತಕ್ಕೂ Gem portalನಲ್ಲಿ ಆಹ್ವಾನಿಸುವಾಗ Upload ಮಾಡಿರುವ ಬಿಡ್ ಡಾಕ್ಯುಮೆಂಟ್‌ನ ಅರ್ಹತಾ ಷರತ್ತುಗಳಲ್ಲಿ *"The bidder must have experience of printing 'SLM" for Distance Learning (Design and learning) of any University or similar institution of University level during the last three year"* ಎಂದು ನಮೂದಿಸಲಾಗಿದೆ. ಕೆ.ಟಿ.ಪಿ.ಪಿ ನಿಯಮಗಳು, 2000ದ ನಿಯಮ 11ರ ಉಪನಿಯಮ 2(a)ರಲ್ಲಿ ಬ್ರಾಂಡ್ ಹೆಸರುಗಳು ಮತ್ತು ಕ್ಯಾಟ್ ಲಾಗ್ ಸಂಖ್ಯೆಗಳ ಬಳಕೆಯನ್ನು ತಪ್ಪಿಸತಕ್ಕದ್ದು, ಮತ್ತು ಅವುಗಳ ಬಳಕೆಯನ್ನು ತಪ್ಪಿಸಲು ಸಾಧ್ಯವಿಲ್ಲದಿರುವಾಗ ಬ್ರಾಂಡ್ ಹೆಸರಿನೊಂದಿಗೆ "ಅಥವಾ ತತ್ಸಮಾನ" ಎಂಬ ಪದಾವಳಿಯನ್ನು ಸೇರಿಸತಕ್ಕದ್ದು ಎಂದು ಉಲ್ಲೇಖಿಸಿದ್ದರೂ ವಿಶ್ವವಿದ್ಯಾನಿಲಯದವರು ಮೇಲೆನಂತೆ ಟೆಂಡರ್ ನಿಬಂಧನೆಗೊಳಿಸಿರುವುದಕ್ಕೆ ಸಂಬಂಧಿಸಿದಂತೆ ವಿವರಣೆ ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 176 ಹಾಗೂ 177/10.02.2025ಕ್ಕೆ ವಿಶ್ವವಿದ್ಯಾನಿಲಯದವರು ಸಲ್ಲಿಸಿರುವ ಅನುಪಾಲನಾ ವರದಿಯಲ್ಲಿ, ವಿಶ್ವವಿದ್ಯಾನಿಲಯವು ತನ್ನ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಉತ್ತಮ ಗುಣಮಟ್ಟದ ಸಿದ್ಧಪಾಠಗಳನ್ನು ಮುದ್ರಿಸಿ ಸರಬರಾಜು ಮಾಡಲು ಸದರಿ ನಿಯಮವನ್ನು ಅಳವಡಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಮೇಲಿನ ನಿಯಮದ ಪ್ರಕಾರ ಬ್ರಾಂಡ್ ಹೆಸರು ಬಳಕೆಯನ್ನು ತಪ್ಪಿಸಲು ಸಾಧ್ಯವಿಲ್ಲದಿರುವಾಗ ಬ್ರಾಂಡ್ ಹೆಸರಿನೊಂದಿಗೆ ***'SLM'/EQUIVALENT*** ಎಂದು ನಮೂದಿಸಿದ್ದರೆ ಇನ್ನು ಹೆಚ್ಚಿನ ಬಿಡ್‌ದಾರರು ಭಾಗವಹಿಸಿ ಅತ್ಯುತ್ತಮ ಸ್ಪರ್ಧಾತ್ಮಕ ದರಗಳಲ್ಲಿ ಆರ್ಥಿಕ ಬಿಡ್‌ಗಳನ್ನು ಸಲ್ಲಿಸುವ ಸಂಭಾವನೀಯತೆಗಳು ಅಧಿಕವಾಗಿರುತ್ತಿದ್ದವು. ಆದರೆ **'SLM'** ಎಂದು ಮಾತ್ರ ನಮೂದಿಸಿರುವುದರಿಂದ ಅಂತಹ ಸಂಭಾವನೀಯತೆಗಳು ಕ್ಷೀಣಿಸಿರುವುದಲ್ಲದೇ, ಕೆ.ಟಿ.ಪಿ.ಪಿ ನಿಯಮಗಳು, 2000ದ ನಿಯಮ 11ರ ಉಪನಿಯಮ 2(a)ರ ನಿಯಮದ ಉಲ್ಲಂಘನೆಯಾಗಿರುತ್ತದೆ.

23.6 ಪದವಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ಮುದ್ರಣಕ್ಕೆ ಮಾಡಿಕೊಂಡಿರುವ ಒಪ್ಪಂದದ ಅನುಬಂಧಗಳಲ್ಲಿರುವ ವಿಶೇಷಣಗಳಿಗೆ ದರ ನಿಗಧಿ ಪಡಿಸುವಾಗ ಉಲ್ಲೇಖಿಸಿರುವ ಯುಕ್ತೋಚಿತ ಮಾನದಂಡಗಳನ್ನು ಅನುಸರಿಸದೆ ರೂ.25,51,090/–ಗಳನ್ನು ಹೆಚ್ಚವರಿಯಾಗಿ ಪಾವತಿಸಿರುವುದು.

ವಿಶ್ವವಿದ್ಯಾನಿಲಯದ ವಿವಿಧ ಪದವಿ ಪರೀಕ್ಷೆಗಳಿಗೆ ಪ್ರಶ್ನೆಪತ್ರಿಕೆಗಳನ್ನು ಮುದ್ರಣ ಮಾಡಿಕೊಡಲು ಗೌಪ್ಯತೆ ಕಾರಣಗಳಿಗಾಗಿ ಮೆ: ವೈ.ಎಸ್.ಹೈಟೆಕ್ ಸೆಕ್ಯುರ್ ಪ್ರಿಂಟ್. ಪ್ರೈ.ಲಿ. ಹೈದರಾಬಾದ್ ಇವರೊಂದಿಗೆ 28 ಜುಲೈ 2023 ರಂದು ಕರಾರು ಒಪ್ಪಂದ ಮಾಡಿಕೊಳ್ಳಲಾಗಿದ್ದು, ಸದರಿ ಒಪ್ಪಂದದ ಅನುಬಂಧ 2 ಮತ್ತು 3 ರಲ್ಲಿ ನಮೂದಿಸಿರುವ ಎಲ್ಲಾ ವಿಶೇಷಣಗಳಿಗೆ ದರ ನಿಗದಿಪಡಿಸುವಾಗ ಅನುಸರಿಸುವ ಮಾನದಂಡಗಳು ಅಥವಾ ಆಧಾರಗಳು ಯಾವುವು ಎಂಬುದಕ್ಕೆ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಆಡಿಟ್ ವಿಚಾರಣಾ ಪತ್ರಸಂಖ್ಯೆ:72/17.12.2024ರಲ್ಲಿ ಹಾಗೂ ಕರಾರು ಒಪ್ಪಂದ ಮಾಡಿಕೊಳ್ಳುವಾಗ ದರ ಸಂದಾನ ಮಾಡಿಕೊಳ್ಳದೆ ಅಧಿಕ ಪ್ರಮಾಣದ ಅಂದರೆ ಕನಿಷ್ಠ ಶೇ 50 ಗರಿಷ್ಠ ಶೇ 60 ಕಿಂತ ಹೆಚ್ಚಿನ ದರದಲ್ಲಿ ಕರಾರು ಒಪ್ಪಂದ ಮಾಡಿಕೊಂಡಿರುವ ಬಗ್ಗೆ ವಿವರಣೆ ಕೋರಿ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:104/01.01.2025ನ್ನು ನೀಡಲಾಗಿತ್ತು. ವಿಶ್ವವಿದ್ಯಾನಿಲಯದವರು ದಿನಾಂಕ:23.12.2024 ಮತ್ತು 16.01.2025ರಂದು ನೀಡಿರುವ ಅನುಪಾಲನಾ ವರದಿಯಲ್ಲಿ ಮೆ:ವೈ.ಎಸ್. ಹೈಟೆಕ್ ಸೆಕ್ಯುರ್ ಪ್ರಿಂಟ್. ಪ್ರೈ.ಲಿ. ಹೈದರಾಬಾದ್ ರವರು ದಿನಾಂಕ:24.07.2023ರಂದು ಸಲ್ಲಿಸಿರುವ ದರ ಪಟ್ಟಿಯೊಂದಿಗೆ ಕಾಗದ, ಇಂಕ್, ಪ್ಯಾಕಿಂಗ್ ಮೆಟೀರಿಯಲ್, ಸಾರಿಗೆ ವೆಚ್ಚಗಳು ಹಾಗೂ ಕಚ್ಚಾ ಸಾಮಗ್ರಿಗಳ ಬೆಲೆ ಏರಿಕೆಯಾಗಿರುವುದನ್ನು ಪರಿಗಣಿಸುವಂತೆ ಕೋರಿರುವುದನ್ನು ವಿ.ವಿಯ ಕುಲಪತಿಗಳು ಹಾಗೂ ಕುಲಸಚಿವರು(ಪರೀಕ್ಷಾಂಗ) ಅನುಮೋದಯಂತೆ ಕರಾರು ಮಾಡಿಕೋಳ್ಳಲಾಗಿದೆ ಎಂದು ಉತ್ತರಿಸಿರುತ್ತಾರೆ. ಏಕಮೇವ ಕಾರಣಕ್ಕಾಗಿ ಯುಕ್ತೋಚಿತ ಮಾನದಂಡಗಳನ್ನು ಅನುಸರಿಸದೇ ಹಾಗೂ ಅಂದಿನ ಮಾರುಕಟ್ಟೆ ದರಗಳನ್ನು ಖಚಿತಪಡಿಸಿಕೊಳ್ಳದೆ ಮುದ್ರಕರು ಸಲ್ಲಿಸಿರುವ ದರಗಳನ್ನೇ ಆಧಾರವಾಗಿ ಪರಿಗಣಿಸಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ನಷ್ಟ ಉಂಟಾಗಬಹುದಾಗಿದ್ದು, ಕರ್ನಾಟಕ ಆರ್ಥಿಕ ಸಂಹಿತೆ–1958ರ ಅನುಚ್ಛೇದ–15ರ ಪ್ರಕಾರ ವಿವೇಚನಾಯುಕ್ತವಾಗಿ ಕ್ರಮವಹಿಸದೇ ಇರುವುದು ಕಂಡುಬಂದಿದೆ. ದಿನಾಂಕ:28.07.2023 ರಂದು ಕರಾರು ಒಪ್ಪಂದ ನವೀಕರಿಸುವಾಗ ಹಾಗೂ ದಿನಾಂಕ: 11.08.2023 ರಂದು ಪ್ರಿಂಟೆಕ್ ಸಿಸ್ಟಮ್ಸ್, ಹೈದರಾಬಾದ್ ರವರೊಂದಿಗೆ ಹೆಚ್ಚುವರಿ ಒಪ್ಪಂದ ಮಾಡಿಕೊಳ್ಳುವಾಗ ಅಂದಿನ ಮಾರುಕಟ್ಟೆ ದರಗಳನ್ನು ಹಾಗೂ ಅಂದಿನ ಬೆಲೆ ಸೂಚ್ಯಾಂಕ (ಸಗಟು ಬೆಲೆ ಸೂಚ್ಯಾಂಕ)ವನ್ನು ಪರಿಗಣಿಸದೇ, ಹಾಗೂ ಸದರಿ ದರ/ಸೂಚ್ಯಾಂಕದ ಆದಾರದಲ್ಲಿ ದರಸಂಧಾನ ಮಾಡಿಕೊಳ್ಳದೇ ಅಥವಾ ಪೂರ್ವ ಕರಾರಿನ ಅನುಬಂಧ–1 ರ 10ನೇ ವಿಶೇಷಣದಂತೆ ಪ್ರತಿ ವರ್ಷವೂ ಶೇ. 10%ರ ದರದಲ್ಲಿ ವಿಶೇಷಣಗಳ ದರಗಳನ್ನು ಹೆಚ್ಚಿಸಿದ್ದರೂ ಸಹ ಕೋಷ್ಟಕ–1 ರ C ಯಲ್ಲಿ ನಮೂದಿಸಿರುವ ದರಗಳಷ್ಟಾಗುತ್ತಿತ್ತು. ಆದರೆ ದಿನಾಂಕ:18–07–23 ರಿಂದ 28–07–23ರ ಅಂತರದಲ್ಲಿಯೇ ಹಿಂದಿನ ದರಗಳಿಗಿಂತ, ಕೆಳಗಿನ ಕೋಷ್ಟಕದಲ್ಲಿನ B ಯಲ್ಲಿ ನಮೂದಿಸಿರುವ ದರಗಳಂತೆ ಹೆಚ್ಚಿನ ದರಗಳಲ್ಲಿ ನವೀಕೃತ ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ.

ಕೋಷ್ಟಕ-1

MOU Comparative Statement of Question Papers and Other Exams Related						
Sl. No	Annexure-2	Charges and Rates				
		A	B	C	D	E
1	**Types setting Charages per Page**	19th July 2021-18th July	28th July 2022 to 27th July 2025 & 11th Aug	**IF 10% Increased on YoY**	**Extra Charges % (B-C/C*10**	**Increased compared to Previous Agreement**

		2023	2023 to 10th Aug 2025	basis price as on 28-07-2023 (A*20 %)	0)-100	
		Rate	Rate			
	For Matter in English Only	175	275	210	30.95	157.143
	For matter other than english(Hindi,Marathi,Sanskrit,Kannada,Malayalam,Tamil,Telugu and Bilingual papers)	215	340	258	31.78	158.140
	For Mathematical/Engineering Papers(Having mathematical symbols/Equations in more than 5 lines in a page, having sketches/Tables more than 1 in a page	215	340	258	31.78	158.140
2	Proof reading charges per page:For each of the afore said languages	30	45	36	25.00	150.000
3	Processing Charges per page:Butter paper output charges to enable printing	35	55	42	30.95	157.143
4	Plate/Master making charges per page: To enable printing	72	115	86.4	33.10	159.722
5	Printing charges per page For First 1000 copies or part thereoff	145	230	174	32.18	158.621
	For Every additional 1000 copies or part there off	145	230	174	32.18	158.621
6	Folding charges per every 100 copies or part there off form consisting of 3 to 4 pages	25	40	30	33.33	160.000
	Form consisting of 5 or more pages	30	45	36	25.00	150.000
7	Gathering charges for form consisting more thant 4 pages for every such 100 copies or part there off	12	20	14.4	38.89	166.667
8	Pinning charges for form consisting more than 4 pages,For every such 100 copies or part there off	20	30	24	25.00	150.000
9	numbering charges per every 100 copies or part there off	35	55	42	30.95	157.143
10	Binding Charges			0		0.000
	1.(Inner cover) per Opaque polypet envelop including counting, inserting, label pasting, Alfa numeric heat sealing	25	40	30	33.33	160.000
	2.(outer cover) per Opaque polypet envelop including counting, inserting, label pasting, Alfa numeric heat sealing	25	40	30	33.33	160.000
11	centre wise packing per Opaque polypet	25	40	30	33.33	160.000
12	Bundling charges Per bundle covered with plastic shrink wrapping	180	285	216	31.94	158.333
13	Daywise packing Cost of labour operations for packing of day wise packing	180	285	216	31.94	158.333
14	Session wise packing Cost of labour operations for packing of session wise packing	180	285	216	31.94	158.333
15	Paper cost(60 GSM cream wove paper manufactured by A grade size=2000 sheets of Dy1/4 size) as and when pringing order is placed, peinter shall purchase suited local market/paper mill as per prevailig market price 10% handling charges added on the market price and 5% spoilage will be added to the consumed. subject to a minimum of 1000 pages for jobs of quantity less than 1000	1800	2830	2160	31.02	157.222
16	Transportation and Delivery charges will be added extra,	40000	60000	48000	25.00	150.000

	Average				**32.65**	
	Annexure-3					
Sl. No	**Description**					
1	Processing Charges Scanning of OMR Sheets-in one place results processing and declaring the rank preparing the statement as per your requirement.(Work execution will be KSOU/Designated place, necessary arrangements like UPS Power,Air contioned Room to scan should be provided by KSOU. Guest house accommodation also should be provided by KSOU)	25	40	30	33.33	160.000
2	OMR in Two/Three parts original printed in 2 colour on front side, single color on back side 100 GSM/Carbonless coatin on the back side and Duplicate will be printed on 70/60 GSM paper carbonless coation on front and backside-Triplicate will be printed 70/60 GSM Carbonless coating front side	25	40	30	33.33	160.000
3	Envelop'S:			0		0.000
	Envelope for inserting university copy in (Blue Colour cover size:12x9 1/2 GSM:140	20	30	24	25.00	150.000
4	Envelope for insertingAnswers filled copy in (Blue Colour cover size:12x7 GSM:120	20	30	24	25.00	150.000
5	Envelope for inserting Student Information filled copy in (Blue Colour cover size:12x5 GSM:120	20	30	24	25.00	150.000
	Average				**28.33**	

Department For Promotion of Industry and Iinternal Trade O/o Economic Advisor ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ, ಭಾರತ ಸರ್ಕಾರ ರವರು 14 ಜುಲೈ, 2023 ರಂದು ಪ್ರಕಟಿಸಿರುವ ಸಗಟು ಬೆಲೆ ಸೂಚ್ಯಾಂಕವನ್ನು ಪರಿಶೀಲಿಸಿದಾಗ, ವಿಚಾರಣಾ ಪತ್ರಕ್ಕೆ ನೀಡಿರುವ ಅನುಪಾಲನೆಯಲ್ಲಿ ನಮೂದಿಸುವ ವಸ್ತುಗಳ ಬೆಲೆಗಳು ಋಣಾತ್ಮಕ (ಹಣದುಬ್ಬರವಿಳಿತ) ಬೆಳವಣಿಗೆಯಾಗಿರುವುದು ಈ ಕೆಳಕಂಡ ಕೋಷ್ಟಕದಂತೆ ಇರುತ್ತದೆ.

All India Wholesale Price Indices and Rates of Inflation (Base Year: 2011-12=100) for June, 2023

Commodities/Major Groups/Groups/Sub-Groups/Items	Weight	Index (June-23)*	Latest month over month		Cumulative Inflation (YoY)		WPI Based rate of Inflation (YoY)	
			2022-2023	2023-2024*	2022-2023	2023-2024*	June-22	June-23*
II. FUEL & POWER	13.15	146.0	2.14	-1.75	46.30	-7.18	**50.95**	**-12.63**
LPG	0.64	114.0	-5.23	-2.65	45.60	-19.08	**51.24**	**-22.29**
Petrol	1.60	155.9	7.38	-0.76	69.25	-8.59	**75.42**	**-16.32**
HSD	3.10	169.0	1.62	-0.29	80.55	-12.22	**81.31**	**-18.59**
III. MANUFACTURED PRODUCTS								
Mf/o Paper and Paper Products	1.11	144.3	-0.32	-1.43	16.92	-5.99	**17.14**	**-7.38**
Mf/o Chemicals and Chemical Products	6.47	138.3	0.88	-1.36	14.63	-4.85	**15.59**	**-6.74**

ಆದಾಗ್ಯೂ, ಹಿಂದಿನ ಕರಾರಿನ ಅನುಬಂಧ–I ರ 10ನೇ ವಿಶೇಷಣದಂತೆ ವಾರ್ಷಿಕ ಶೇಕಡ 10%ರ ದರದಲ್ಲಿ ಹೆಚ್ಚಿಸಿದ ದರಕ್ಕೆ (ಕೋಷ್ಟಕ–I ರ 'C' ಕಾಲಂ) ಅಥವಾ ಅಂದಿನ ಸೂಚ್ಯಾಂಕ ಪರಿಗಣಿತ ಮಾರುಕಟ್ಟೆ ದರಗಳಿಗೆ ಸಮಾನವಾಗುವ ದರಗಳಿಗೆ ದರಸಂಧಾನ ಮಾಡಿಕೊಳ್ಳದೆ ಅತ್ಯಧಿಕ ದರಗಳಿಗೆ ಪೂರ್ವ ಸರಬರಾಜುದಾರರೊಂದಿಗೆ ಕರಾರು ನವೀಕರಿಸಿದುವುದರಿಂದ ವಿಶ್ವವಿದ್ಯಾನಿಲಯಕ್ಕೆ **ರೂ.25,51,090/–ಗಳ** (ಕೆಳಗಿನ ಕೋಷ್ಟಕ) ಆರ್ಥಿಕ ನಷ್ಟ ಉಂಟಾಗಿದ್ದು, ಸದರಿ ಮೊತ್ತವನ್ನು **ವಸೂಲಾತಿಗೆ ಸೂಚಿಸಿದೆ.**

ನವೀಕೃತ ಕರಾರಿನ ದರಗಳಲ್ಲಿ ಪಾವತಿಸಿರುವ ಹುಂಡಿಗಳ ಮೊತ್ತ

ಕ್ರ ಸಂ	ಸರಬರಾಜುದಾರರ ಹೆಸರು	ಬಿಲ್ಲು ಸಂಖ್ಯೆ/ದಿನಾಂಕ	ಬಿ.ಆರ್. ಸಂಖ್ಯೆ	ಒಟ್ಟು ಮೊತ್ತ(20 % ಹೆಚ್ಚುವರಿ ಮೊತ್ತ ಒಳಗೊಂಡು	ಧನಾದೇಶ ಸಂಖ್ಯೆ	ಹೆಚ್ಚುವರಿ %	ಒಟ್ಟು ಮೊತ್ತ(20% ಹೆಚ್ಚುವರಿ ಮೊತ್ತ ಒಳಗೊಳ್ಳದೆ	ಪಾವತಿಸಬೇಕಾಗಿದ್ದ ಮೊತ್ತ	ಹೆಚ್ಚುವರಿ ಪಾವತಿ
01	M/s Hitech Secure Print(P) ltd. Hyderabad	009/07.09.2023	1925/09.10.2023	1703801	234431 10.10.2023	28.33	1419834	1106393	**313441**
02	M/s Hitech Secure Print(P) ltd. Hyderabad	010/21.10.2023	2353/13-11-2023	2437473	235102 29.11.2023	32.65	2031228	1531268	**499959**
03	M/s Hitech Secure Print(P) ltd. Hyderabad	012/30.10.2023	2573/02-12-2023	1794183	235110 13.12.2023	32.65	1495153	1127141	**368012**
04	M/s Hitech Secure Print(P) ltd. Hyderabad	014/15.12.2023	2834/05-01-2024	1640018	000024 18.01.2024	32.65	1640018	1236350	**403668**
05	M/s Hitech Secure Print(P) ltd. Hyderabad	011/25.10.2023	2542/29-11-2023	1308661	000024 18.01.2024	32.65	1090551	822127	**268424**
06	M/s Hitech Secure Print(P) ltd. Hyderabad	013/03.11.2023	2693/19-12-2023	1442531	000024 18.01.2024	32.65	1202109	906226	**295883**
07	M/s Hitech Secure Print(P) ltd. Hyderabad	015/19.12.2023	2834/29-01-2024	1958439	235139 22.02.2024	32.65	1632033	1230330	**401703**
	ಮೊತ್ತ						**10510926**	**7959835**	**2551090**

23.7 ಪರೀಕ್ಷಾಂಗ ವಿಭಾಗದಿಂದ ವಿವಿಧ ಕೋರ್ಸಗಳ ಪ್ರಶ್ನೆಪತ್ರಿಕೆ ಹಾಗೂ ಒ.ಎಮ್.ಆರ್ ಮುದ್ರಣಕ್ಕೆ ಸಂಬಂಧಿಸಿದಂತೆ ಮೆ: ವೈ.ಎಸ್. ಹೈಟೆಕ್ ಸೆಕ್ಯೂರ್ ಪ್ರಿಂಟ್ (ಪ್ರೈ) ಲಿಮಿಟೆಡ್, ಹೈದಾರಾಬಾದ್ ರವರಿಗೆ ರೂ.36,18,811/–ಗಳನ್ನು ಹೆಚ್ಚವರಿಯಾಗಿ ಪಾವತಿಸಿರುವುದು.

2023–24 ನೇ ಸಾಲಿನಲ್ಲಿ ಪ್ರಶ್ನೆಪತ್ರಿಕೆ ಮುದ್ರಣಾ ಕಾರ್ಯಕ್ಕೆ ಮೆ: ವೈ.ಎಸ್. ಹೈಟೆಕ್ ಸೆಕ್ಯೂರ್ ಪ್ರಿಂಟ್ (ಪ್ರೈ) ಲಿಮಿಟೆಡ್ ಹೈದಾರಾಬಾದ್ ರವರಿಗೆ ತುರ್ತು ಸಂದರ್ಭದ ಕಾರಣ ನೀಡಿ ಶೇ 20 ಹೆಚ್ಚಿಸಿ ಮಾಡಲಾಗಿರುವುದು ಕಂಡುಬಂದಿರುತ್ತದೆ. ಮುಂದುವರೆದು, ಸದರಿ ಪ್ರಿಂಟರ್ಸ ರವರೊಂದಿಗೆ 08.07.2019 ರಿಂದ 07.07.2021, 19.07.2021 ರಿಂದ 18.07.2023 ಮತ್ತು 28.07.2023 ರಿಂದ 27.07.2025ರ ವರೆಗೆ ಕರಾರು ಒಪ್ಪಂದವನ್ನು ಮಾಡಿಕೊಂಡಿದ್ದು, ಸದರಿ ಕರಾರಿನ ಅನುಬಂಧ–I ರ ವಿಶೇಷಣ 3 ರಲ್ಲಿ ಶೇ20) ಅಧಿಕ ಪಾವತಿ

ಮಾಡಲು ಒಪ್ಪಂದ ಮಾಡಿಕೊಂಡಿರುವುದನ್ನು 2021–22ರ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ:23.12ರಲ್ಲಿ ರೂ.22,95,752/– ಮತ್ತು 2022–23ರ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ:23.14ರಲ್ಲಿ ರೂ.19,84,206/– ವಸೂಲಿಸಲು ಸೂಚಿಸಲಾಗಿರುತ್ತದೆ, ಆದಾಗ್ಯೂ 2023–24 ನೇ ಸಾಲಿನ ಪಾವತಿಗಳಲ್ಲಿಯೂ ಶೇ 20 ಅಧಿಕ ಪಾವತಿಯಾಗಿರುವುದಕ್ಕೆ ವಿವರಣೆ ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 116/13.01.2025ಕ್ಕೆ ನೀಡಲಾಗಿರುತ್ತದೆ. ಇದಕ್ಕೆ ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿ ಪರೀಕ್ಷಾ ಕೇಂದ್ರಗಳನ್ನು ನಿಗದಿಪಡಿಸುವಲ್ಲಿ ಹಾಗೂ ಪ್ರಶ್ನೆಪತ್ರಿಕೆ ಸಿದ್ದಪಡಿಸುವಲ್ಲಿನ ವಿಳಂಬ ಹಾಗೂ ಇತರೆ ಕಾರಣಗಳಿಂದಾಗಿ ನಿಗದಿತ ಸಮಯದಲ್ಲಿ ಪ್ರಶ್ನೆಪತ್ರಿಕೆಗಳನ್ನು ಮುದ್ರಣಕ್ಕೆ ಕಳುಹಿಸಲಾಗದ ಕೆಲವು ಸಂದರ್ಭಗಳಲ್ಲಿ ತುರ್ತಾಗಿ ಮುದ್ರಿಸಲು ಆದೇಶವನ್ನು ನೀಡಲಾಗಿರುತ್ತದೆ ಹಾಗೂ ಪ್ರಸ್ತುತ ಮಾಡಿಕೊಂಡಿರುವ ಕರಾರು ದಿನಾಂಕ: 27.07.2025ಕ್ಕೆ ಅಂತ್ಯಗೊಳ್ಳುವುದರಿಂದ ಮುಂದಿನ ಕರಾರು ಮಾಡಿಕೊಳ್ಳುವಾಗ ಕರಾರಿನ ಅನುಬಂಧ–I ರ ವಿಶೇಷಣ 3 ರಲ್ಲಿರುವ 20% ಅಧಿಕ ಪಾವತಿ ವಿಶೇಷಣವನ್ನು ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟವಾಗದಂತೆ ಮಾರ್ಪಾಡು ಮಾಡಿಕೊಳ್ಳಲಾಗುವುದೆಂದು ಅನುಪಾಲನಾ ವರದಿ ಸಲ್ಲಿಸಿರುತ್ತಾರೆ.

ಮುಂದುವರೆದು ಹಿಂದಿನ ಆರ್ಥಿಕ ವರ್ಷಗಳಲ್ಲಿ ಸದರಿ ವಿಶೇಷಣದಿಂದ ಆರ್ಥಿಕ ನಷ್ಟ ಉಂಟಾಗಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಉಲ್ಲೇಖಿಸಿದ್ದರೂ ದಿನಾಂಕ:18.07.2023 ರಂದು ಮುಕ್ತಾಯವಾದ ಕರಾರು ಒಪ್ಪಂದವನ್ನು ದಿನಾಂಕ:28.07.2023ರಂದು ನವೀಕರಿಸುವ ಸಂದರ್ಭದಲ್ಲಿ ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ಆಕ್ಷೇಪಣೆ/ವಸೂಲಾತಿಗೆ ಸೂಚಿಸಿರುವುದನ್ನು ನಿರ್ಲಕ್ಷಿಸಿ ಸದರಿ ವಿಶೇಷಣವನ್ನು ಕರಾರು ಒಪ್ಪಂದದಲ್ಲಿ ಮುಂದುವರೆಸಿರುವುದು ಹಾಗೂ 2019ರ ಆರ್ಥಿಕ ವರ್ಷದಿಂದಲೂ ಮುಕ್ತಾಯವಾದ ಕರಾರನ್ನು ನವೀಕರಿಸುವಾಗ ಆರ್ಥಿಕ ಮಿತಿಗೊಳಪಟ್ಟ ಮಾರುಕಟ್ಟೆ ದರಗಳನ್ನು ಪರಿಗಣಿಸದೇ, ಮುದ್ರಣಕಾರರನ್ನು ಬದಲಾಯಿಸದೇ ಹಾಗೂ ಸದರಿ ಮುದ್ರಣದಾರರೊಂದಿಗೆ ದರಸಂಧಾನವನ್ನೂ ಮಾಡಿಕೊಳ್ಳದೇ, ಮುದ್ರಣಗಾರರು ಸಲ್ಲಿಸಿರುವ ದರಪಟ್ಟಿಯನ್ನೇ ಒಪ್ಪಿಕೊಂಡು ಕರಾರನ್ನು ಮುಂದುವರೆಸಿರುವುದು ಪರೋಕ್ಷವಾಗಿ ಹಾಗೂ ಉದ್ದೇಶ ಪೂರ್ವಕವಾಗಿ ಮುದ್ರಣಗಾರರಿಗೆ ಅನುಕೂಲ ಮಾಡಿಕೊಡಲು ಒಳಒಪ್ಪಂದ ಮಾಡಿಕೊಂಡಿರುವಂತೆ ಮೇಲ್ನೋಟಕ್ಕೆ ಕಂಡುಬಂದಿರುತ್ತದೆ ಹಾಗೂ ಶೈಕ್ಷಣಿಕ ಸಂಸ್ಥೆಗಳಿಗೆ ಪರೀಕ್ಷಾ ಕಾರ್ಯವು ಸಾಮಾನ್ಯ/ಸಾರ್ವಕಾಲಿಕ ಕರ್ತವ್ಯವಾಗಿದ್ದು, ಹಾಗೂ ಸಂಸ್ಥೆಯು ಪರೀಕ್ಷಾ ಕಾರ್ಯನಿರ್ವಹಿಸಲು ಪ್ರತ್ಯೇಕ ವಿಭಾಗವನ್ನು ಹೊಂದಿದ್ದರೂ ಪೂರ್ವಯೋಜಿತವಾಗಿ ಮತ್ತು ಕಾಲಮಿತಿಯಲ್ಲಿ ನಿರ್ವಹಿಸಲು ಸದಾವಕಾಶಗಳಿದ್ದರೂ, ಸದರಿ ಕರ್ತವ್ಯವನ್ನು ಸಂಕೀರ್ಣ/ಜಟಿಲ ಗೊಳಿಸಿಕೊಂಡಿರುವುದರಿಂದ, ತುರ್ತು ಸಂದರ್ಭಗಳು ಸೃಷ್ಟಿಯಾಗುವುದನ್ನು ನಿಯಂತ್ರಿಸುವಲ್ಲಿ ವಿಫಲವಾಗಿರುವುದು ಸ್ಪಷ್ಟವಾಗಿರುತ್ತದೆ, ಇದರಿಂದಾಗಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿರುತ್ತದೆ. ಆದ್ದರಿಂದ, ಅನಾವಶ್ಯಕವಾಗಿ 2023–24ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಪಾವತಿಯಾಗಿರುವ ಶೇ 20ರಷ್ಟು ಮೊತ್ತ **ರೂ.36,18,811/–ಗಳನ್ನು** ಈ ಪಾವತಿಗೆ ಕಾರಣರದವರನ್ನು ಹೊಣೆಗಾರರನ್ನಾಗಿಸಿ **ವಸೂಲಿಸಲು** ಸೂಚಿಸಿದೆ. ವಿವರಗಳನ್ನು **ಅನುಬಂಧ–33 ರಲ್ಲಿ** ವಿವರಿಸಲಾಗಿದೆ.

23.8 ಟೆಂಡರ್ ಆಹ್ವಾನಿಸದೇ ದರಪಟ್ಟಿ ಮೂಲಕ ಸರಕು ಹಾಗೂ ಸೇವೆಯನ್ನು ಪಡೆದು ರೂ.12,94,721/– ಗಳನ್ನು ಪಾವತಿಸಿರುವದು.

ಸಾಮಾನ್ಯ ನಿಧಿ ಖಾತೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಅವಶ್ಯಕವಿರುವ ವಿವಿಧ ಬಗೆಯ ಸರಕುಗಳ ಸಂಗ್ರಹಣೆಯಲ್ಲಿ ರೂ.5.00ಲಕ್ಷ ಮೀರದ ಮೊತ್ತಗಳಿಗೆ ಟೆಂಡರ್ ಕರೆಯದೆ ದರಪಟ್ಟಿ ಮೂಲಕ ಮೆ. ಪೂರ್ಣಿಮಾ ಪ್ರಿಂಟರ್ಸ್, M/S ಕೆಂಬ್ರಿಡ್ಜ್ ಪಬ್ಲಿಷಿಂಗ್ ಕಂ. ಬೆಂಗಳೂರು ಮತ್ತು M/S ಡೆಟಾಕಾನ್ ಟೆಕ್ ಇಂಡಿಯ ಲೀ. ಬೆಂಗಳೂರು ರವರಿಂದ ಮುದ್ರಣ ಸೇವೆ ಪಡೆದು ಒಟ್ಟು ಮೊತ್ತ ರೂ.**12,94,721/–**ಗಳನ್ನು ಪಾವತಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ವಿವರವನ್ನು **ಅನುಬಂಧ–34 ರಲ್ಲಿ** ವಿವರಿಸಲಾಗಿದೆ. ಈ ಬಗ್ಗೆ ವಿವರಣೆ ಕೋರಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:157/03.02.2025ಕ್ಕೆ ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿ ಅಧ್ಯಯನ ಸಾಮಗ್ರಿಗಳನ್ನು ನಿಯಮಾನುಸಾರ ರಾಜ್ಯಪತ್ರ ಸಂಖ್ಯೆ: ಸಂವ್ಯಶಾಇ 25 ಶಾಸನ 2019, ಬೆಂಗಳೂರು ದಿನಾಂಕ : 27.04.2020 ರ ಅಧ್ಯಯ–2 ರ ಉಪಬಂಧಗಳ 4(ಇ)(i) ರ ಅನ್ವಯ ರೂ.1. ರಿಂದ 5. ಲಕ್ಷ ದವರೆಗೆ ದರಪಟ್ಟಿ ಆಹ್ವಾನದ ಮೊತ್ತವನ್ನು ಹೆಚ್ಚಿಸಿಕೊಳ್ಳಲು ನೀಡಿದ ಆದೇಶದ ಅನ್ವಯ ವಿ.ವಿ ನಿಲಯದ ಆಡಳಿತ ವಿಭಾಗದಿಂದ ಹೊರಡಿಸಿರುವ ಆದೇಶ ಸಂಖ್ಯೆ : ಕರಾಮುವಿ/ಆವಿ/ಜೆಲ್–2/ಇತರೆ/2009–10, ದಿ: 17.12.2020 ರ ಸ್ಥಾಯಿ ಆದೇಶದನ್ವಯ ದರಪಟ್ಟಿ ಆಹ್ವಾನಿಸಿ ಕನಿಷ್ಠತಮ ನಮೂದಿಸಿದ್ದ ಮುದ್ರಕರಿಂದ ವಿವಿಧ ಪರಿಕರಗಳನ್ನು ಡಿಜಿಟಲ್ ಪ್ರಿಂಟ್ ಮಾಡಿಸಿಕೊಳ್ಳಲು ಕ್ರಮವಹಿಸಲಾಗಿದೆ ಹಾಗೂ ಇನ್ನು ಮುಂದೆ 2024–25ನೇ ಸಾಲಿನಲ್ಲಿ ರೂ.1 ಲಕ್ಷಕ್ಕೆ ಮೀರಿದ ಟೆಂಡರ್ ಮೊತ್ತಕ್ಕೆ ಬಾಕ್ಸ್ ಟೆಂಡರ ಮೂಲಕ ದರಪಟ್ಟಿಯನ್ನು ಆಹ್ವಾನಿಸಲು ಕ್ರಮವಹಿಸಲಾಗುವುದೆಂದು ಅನುಪಾಲನೆಯನ್ನು ನೀಡಿರುತ್ತಾರೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ, 1999ರ ಪ್ರಕರಣ ಸಂಖ್ಯೆ 4 ರಲ್ಲಿ ಸದರಿ ಕಾಯ್ದೆಯ ಅನ್ವಯಿಸುವಿಕೆಗೆ ಅಪವಾದಗಳಲ್ಲಿರುವಂತೆ ಪ್ರಕರಣ 4(e)ರಲ್ಲಿ ತಿಳಿಸಿರುವ ಸಂಗ್ರಹಣೆಗಳಿಗೆ ಸದರಿ ಕಾಯ್ದೆಯ ಅಧ್ಯಾಯ–2 ರಿಂದ ಮಾತ್ರ ವಿನಾಯಿತಿಯನ್ನು ನೀಡಲಾಗಿರುತ್ತದೆ. ಆದರೆ ಕಾಯ್ದೆಯ ಭಾಗ 3 ರ ಪ್ರಕರಣ 26 ರಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ ಮತ್ತು ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮ ಅಥವಾ ರಚಿಸಲಾದ ಯಾವುದೇ ನಿಯಮ, ಅಧಿಸೂಚನೆ ಅಥವಾ ಆದೇಶದ ಮೂಲಕ ರದ್ದುಗೊಳಿಸಲಾಗಿದ್ದ ಹೊರತು ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ಮಾಡಲಾಗಿದ್ದರೆ ಹೇಗೋ ಹಾಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಪರಿಣಾಮಕಾರಿಯಾಗಿರತಕ್ಕದ್ದು ಎಂದು ತಿಳಿಸಿದ್ದು, ಸದರಿ ವಿನಾಯಿತಿಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯು ಸ್ಪಷ್ಟೀಕರಣವನ್ನು ಅಧಿಸೂಚನೆ ಸಂಖ್ಯೆ: ***No. PWD/513/FC–III/2001 Bangalore: Dated: 29th October 2001*** *ರ ಕಂಡಿಕೆ ಸಂಖ್ಯೆ 6 ರಲ್ಲಿ* ***Therefore wherever the KTPP Act does not apply the provisions of already practiced procedure in force before coming in to force of the Act shall continue to be followed and for procurement of goods and services below Rs. 5 lakh normal tender procedure needs to be followed.***" **ಮತ್ತು** ಸುತ್ತೋಲೆ ಸಂಖ್ಯೆ: ಸಂ:ಲೋಇ:513:ಆಕೋ 3:2001 ದಿನಾಂಕ 19.11.2001ರ ಕಂಡಿಕೆ ಸಂಖ್ಯೆ 5 ರಲ್ಲಿ

ಕೆ.ಟಿ.ಪಿ.ಪಿ ಕಾಯ್ದೆಯ *"ಕಲಂ 4(i) ರಲ್ಲಿರುವ ಐದು ಲಕ್ಷ ರೂಪಾಯಿಗಳ ಒಳಗಿನ ಮೊತ್ತದ ಸರಕು ಖರೀದಿ ಅಥವಾ ಸೇವೆಗಳನ್ನು ಪಡೆಯುವಾಗ ಟೆಂಡರ್ ನಿಯಮಗಳನ್ನು ಪಾಲಿಸಬೇಕು. ತಿದ್ದುಪಡಿ ಕಾಯ್ದೆಯಲ್ಲಿ ತಿಳಿಸಿರುವ ಪ್ರಕರಣಗಳ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ, 1999 ಹಾಗೂ ನಿಯಮಗಳು, 2000 ಉಪಬಂಧಗಳನ್ನು ಮಾತ್ರ ಪಾಲಿಸಬೇಕಾಗಿಲ್ಲ. ಇಂಥ ಸಂದರ್ಭಗಳಲ್ಲಿ ಟೆಂಡರ್ ಪ್ರಕ್ರಿಯೆಯಂತೆಯೆ ಕ್ರಮ ಕೈಗೊಳ್ಳಬೇಕು ಹಾಗೂ ಕಾಯ್ದೆಯ ಕಲಂ 26 ರಲ್ಲಿ ಕಾಣಿಸಿರುವ ಇಲಾಖಾ ಸಂಹಿತೆ, ನಿಯಮಗಳು, ಸರ್ಕಾರಿ ಆದೇಶಗಳಂತೆ ಕ್ರಮ ಜರುಗಿಸಬೇಕು"* ಎಂದು ಆದೇಶಿಸಲಾಗಿದೆ. ಹಾಗೂ ಸರಕು ಸಾಮಗ್ರಿ ಖರೀದಿ ಸಂಬಂಧವಾಗಿ ಸಾದಿಲ್ವಾರು ವೆಚ್ಚ ಕೈಪಿಡಿಯ ನಿಯಮ 55(49)(ಎ) ರಲ್ಲಿನ ಮಿತಿಯನ್ನು ಸರ್ಕಾರಿ ಆದೇಶ ಸಂಖ್ಯೆ: ಆಇ:01 ಟಿಸಿಇ 2019, ಬೆಂಗಳೂರು, ದಿನಾಂಕ: 04.05.2019 ರಲ್ಲಿ ರೂ. 10000/- ಗಳಿಗೆ ಹೆಚ್ಚಿಸಲಾಗಿರುತ್ತದೆ. ರೂ. 10,000/- ಗಳಿಗೆ ಮೀರಿದ ಖರೀದಿಗಳಿಗೆ ಕೆ.ಟಿ.ಪಿ.ಪಿ. ನಿಯಮ ಅನ್ವಯವಾಗುವುದೆಂದು ಆದೇಶಿಸಲಾಗಿರುತ್ತದೆ. ಆದಾಗ್ಯೂ ವಿಶ್ವವಿದ್ಯಾನಿಯಲವು ಮೇಲ್ಕಂಡಂತೆ ಉಲ್ಲೇಖಿಸಿದ ಕಾಯ್ದೆ, ನಿಯಮ, ಆದೇಶ ಹಾಗೂ ಸುತ್ತೋಲೆಗಳನ್ನು ನಿರ್ಲಕ್ಷಿಸಿ ತನ್ನದೇ ಸ್ಥಾಯಿ ಆದೇಶವನ್ನು ಮಾಡಿಕೊಂಡು ಸಂಗ್ರಹಣೆಯನ್ನು ಮಾಡಲಾಗಿರುತ್ತದೆ. ಆದ್ದರಿಂದ ಮೇಲಿನ ಕೋಷ್ಟಕದಲ್ಲಿರುವಂತೆ 2023-24 ನೇ ಸಾಲಿನಲ್ಲಿ ಸದರಿ ನಿಯಮಗಳನ್ನು ಉಲ್ಲಂಘಿಸಿ ಸಂಗ್ರಹಣೆ ಮಾಡಿಕೊಂಡು ಪಾವತಿಸಲಾದ ಒಟ್ಟು ಮೊತ್ತ ರೂ.**12,94,721/-**ಗಳನ್ನು **ಆಕ್ಷೇಪಣೆಯಲ್ಲಿರಿಸಿದೆ.**

23.9 ಇಲಾಖಾ ಮುಖ್ಯಸ್ಥರಿಗೆ ನಿಗಧಿಪಡಿಸಿರುವ ಆರ್ಥಿಕ ಮಿತಿಯನ್ನು ಮೀರಿ ವಿಶ್ವವಿದ್ಯಾನಿಲಯಕ್ಕೆ ರೂ.37,95,223/-ಗಳಿಗೆ ಹೊಸ ವಾಹನಗಳನ್ನು ಖರೀದಿಸಿರುವುದು.

2023-24ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಬಳಕೆಗಾಗಿ ವಾಹನಗಳನ್ನು ಖರೀದಿಸಿರುವುದು ಕಂಡು ಬಂದಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 215 ಶೀವಾನೀ2018, ಬೆಂಗಳೂರು, ದಿನಾಂಕ: 18.01.2019 ಆದೇಶದಲ್ಲಿ ವಿವರಿಸಿರುವಂತೆ, ಇಲಾಖಾ ಮುಖ್ಯಸ್ಥರಿಗೆ ವಾಹನ ಖರೀದಿಸಲು ಈ ಹಿಂದೆ ನಿಗಧಿಪಡಿಸಲಾಗಿದ್ದ ಆರ್ಥಿಕ ಮಿತಿಯನ್ನು 6.50 ಲಕ್ಷ (Ex Show Room Rate) ಗಳಿಂದ ರೂ. 9.00 ಲಕ್ಷಗಳಿಗೆ ಹಾಗೂ ಇಲಾಖಾ ಮುಖ್ಯಸ್ಥರು/ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳ ಶ್ರೇಣಿಯ ಅಧಿಕಾರಿಗಳಾಗಿದ್ದಲ್ಲಿ ಅವರಿಗೆ ನಿಗಧಿಪಡಿಸಲಾಗಿದ್ದ ಆರ್ಥಿಕ ಮಿತಿಯನ್ನು ರೂ.9.00 ಲಕ್ಷಗಳಿಂದ (ತೆರಿಗೆ ಹೊರತುಪಡಿಸಿ) ಆರ್ಥಿಕ ಮಿತಿಯನ್ನು ರೂ.14.00 ಲಕ್ಷಗಳಿಗೆ ನಿಗದಿಪಡಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಇಲಾಖಾ ಮುಖ್ಯಸ್ಥರ ಪಾತ್ರವನ್ನು ನಿರ್ವಹಿಸುತ್ತಿರುವ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಪಂಚಾಯತ್ ಹಾಗೂ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರುಗಳಿಗೆ ಮಾತ್ರ ರೂ.9.00 ಲಕ್ಷಗಳ ಆರ್ಥಿಕ ಮಿತಿಯೊಳಗೆ ವಾಹನ ಖರೀದಿಸಲು ಹಾಗೂ ಇಲಾಖಾ ಮುಖ್ಯಸ್ಥರ ಪಾತ್ರವನ್ನು ನಿರ್ಹಿಸದ ಇತರೆ ಆರ್ಹ ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ರೂ.6.50 ಲಕ್ಷಗಳ ಆರ್ಥಿಕ ಮಿತಿಯಲ್ಲಿ ವಾಹನ ಖರೀದಿಸಲು ನಿಗದಿಪಡಿಸಲಾಗಿದೆ. ಸದರಿ ಆದೇಶಗಳನ್ವಯ ಹೊಸ ವಾಹನ ಖರೀದಿಸುವ ಸಂದರ್ಭದಲ್ಲಿ ಇಂಧನ ಮಿತವ್ಯಯ ಹಾಗೂ ನಿರ್ವಹಣಾ ವೆಚ್ಚ ಕಡಿಮೆ ಹೊಂದಿರುವ ವಾಹನಗಳನ್ನು ಖರೀದಿಸಲು ಆದೇಶಿಸಲಾಗಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000ರ ಸಾಮಾನ್ಯ ಅಧ್ಯಾಯ ಕ್ರಮ ಸಂಖ್ಯೆ 03 ರಲ್ಲಿ ಸಂಗ್ರಹಣೆಯಲ್ಲಿನ ವರ್ಗೀಕರಣದ ಉಪ ಕ್ರಸಂ: 3(ಎ)(iv) ರಲ್ಲಿ "the automobiles required for the use of office may be procured directly after getting the requisite sanction from the competent authority "ಎಂದು ನಮೂದಿಸಲಾಗಿದೆ.

ಮೇಲಿನ ಕಂಡಿಕೆಗಳಲ್ಲಿ ನಮೂದಿಸಿರುವ ಆದೇಶಗಳನ್ವಯ, ಇಲಾಖಾ ಮುಖ್ಯಸ್ಥರಿಗೆ ನಿಗಧಿಪಡಿಸಿರುವ ಆರ್ಥಿಕ ಮಿತಿಯನ್ನು ಮೀರಿ ವಾಹನವನ್ನು ಖರೀದಿಸಿರುವ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಹಾಗೂ ವಾಹನ ಖರೀದಿ ಸಂಬಂಧ ಸಕ್ಷಮ ಪ್ರಾಧಿಕಾರದಿಂದ ಪಡೆದ ಅನುಮೋದನೆಯ ಪ್ರತಿಯನ್ನು ಲೆಕ್ಕತಪಾಸಣೆಗೆ ಹಾಜರುಪಡಿಸುವಂತೆ ಹಾಗೂ ವಿಶ್ವವಿದ್ಯಾನಿಲಯದ ಕುಲಪತಿ, ಕುಲಸಚಿವರು, (ಆಡಳಿತ)(ಮೌಲ್ಯಮಾಪನ), ಹಣಕಾಸು ಅಧಿಕಾರಿ ಇವರುಗಳಿಗೆ ಸರ್ಕಾರದಿಂದ ಅನುಮೋದಿಸಿರುವ ಆರ್ಥಿಕ ಪ್ರತ್ಯಾಯೋಜನೆ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 149/01.02.2025ರಲ್ಲಿ ಕೋರಲಾಗಿ, ವಿಶ್ವವಿದ್ಯಾನಿಲಯದವರು ಈ ಕುರಿತು ಯಾವುದೇ ಅನುಪಾಲನಾ ವರದಿ ನೀಡಿರುವುದಿಲ್ಲ. ಸಕ್ಷಮ ಪ್ರಾಧಿಕಾರದಿಂದ ಪಡೆದ ಅನುಮೋದನೆಯ ಪಡೆಯದೇ ಅನುಬಂಧ-35ರಲ್ಲಿ ವಿವರಿಸಿರುವಂತೆ ವಾಹನ ಖರೀದಿ ಮೊತ್ತ ರೂ.37,95,223/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

23.10 ಸರ್ಕಾರದ ಆದೇಶ ಉಲ್ಲಂಘಿಸಿ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ 150 ಗಣಕಯಂತ್ರಗಳನ್ನು ರೂ.1,63,91,250/-ಗಳಿಗೆ ಖರೀದಿಸಿರುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ ಖಾತೆಯ ವೋಚರ್‌ಗಳನ್ನು ಪರಿಶೀಲಿಸದಾಗ ವೋಚರ್ ಸಂ.118, ಚೆಕ್ ಸಂಖ್ಯೆ: 925263, ದಿನಾಂಕ:18.05.2023ರಲ್ಲಿ ಮೆ: ಬಿಗ್ ಸಿ ಟೆಕ್ನೋಲೊಜಿ ಪ್ರೈ.ಲಿ. ಇವರಿಂದ 150 ಗಣಕಯಂತ್ರಗಳನ್ನು ರೂ.1,63,91,250/-ಗಳಿಗೆ ಖರೀದಿಸಲಾಗಿದೆ. ಈ ಖರೀದಿಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೊದನೆ ನೀಡಿರುವುದು, ಟೆಂಡರ್ ಪ್ರಕ್ರೀಯೆ ಕಡತ, ಬಿಡ್ಡದಾರರು ಅಪ್‌ಲೊಡ್ ಮಾಡಿರುವ ದಾಖಲೆಗಳು ಹಾಗೂ ತುಲನಾತ್ಮಕ ಪಟ್ಟಿ, ಸಾಮಗ್ರಿಗಳನ್ನು ದಾಸ್ತಾನಿಗೆ ತೆಗೆದುಕೊಂಡ ದಾಸ್ತಾನು ವಹಿ ಹಾಗೂ ವಿಶ್ವವಿದ್ಯಾನಿಲಯಗಳ ವಿವಿಧ ವಿಭಾಗಗಳಿಂದ ಬಂದಿರುವ ಬೇಡಿಕೆ ಪತ್ರ, ಹಾಗೂ ಸರ್ಕಾರದ ಆದೇಶ ಸಂ:ಸಾಸು೫50, ಇಆಇ 2019, ಬೆಂಗಳೂರು, ದಿನಾಂಕ:06.09.2019ರ ಅನುಬಂಧದಲ್ಲಿನ ಕೋಷ್ಟಕಗಳ ತಾಂತ್ರಿಕ ವಿಶೇಷತೆಯುಳ್ಳ ಗಣಕಯಂತ್ರಗಳು, ಲ್ಯಾಪ್ ಟಾಪ್‌ಗಳು ಮತ್ತು ಪ್ರಿಂಟರ್‌ಗಳನ್ನು ಆಯಾ ಆಡಳಿತ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳ ಆಡಳಿತಾತ್ಮಕ ಅನುಮೋದನೆ ಪಡೆದು ಪ್ರತೀ ಟೆಂಡರ್‌ಗೆ ರೂ.25.00ಲಕ್ಷ ಮೀರದಂತೆ ಖರೀದಿಸಬಹುದಾಗಿರುತ್ತದೆ. ಅದಕ್ಕಿಂತ ಉನ್ನತ ತಾಂತ್ರಿಕ ವಿಶಿಷ್ಟತೆಯ ಉಪಕರಣಗಳ ಅವಶ್ಯಕತೆಯಿದ್ದಲ್ಲಿ ಸರ್ಕಾರದ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ಪಡೆದು ಖರೀದಿಸಿ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಎಫ್‌ಬಿ/205/ವೆಚ್ಚ-12/2020-21, ದಿನಾಂಕ:26.04.2021ರನ್ವಯ ಖರೀದಿಸಿದ ಸಾಮಗ್ರಿಗಳ ಗುಣಮಟ್ಟ ತಪಾಸಣೆಯನ್ನು 3ನೇ ಪಕ್ಷಕಾರರಿಂದ ಮಾಡಿಸಿರುವ ವರದಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣೆ ಪತ್ರ ಸಂಖ್ಯೆ:46/26.11.2024ರಲ್ಲಿ ಕೋರಲಾಗಿತ್ತು.

ವಿಚಾರಣಾ ಪತ್ರಕ್ಕೆ ವಿಶ್ವವಿದ್ಯಾನಿಲಯವು ಪ್ರತಿಕ್ರೀಯಿಸಿ ಗಣಕಯಂತ್ರ ಖರೀದಿ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿ ವಿಶ್ವವಿದ್ಯಾನಿಲಯದ ತಾಂತ್ರಿಕ ಸಲಹಾ ಸಮಿತಿ ಗಣಕಯಂತ್ರದ ಉಪಕರಣಗಳ ತಾಂತ್ರಿಕ ವಿಶಿಷ್ಟತೆಯನ್ನು ಅಂತಿಮಗೊಳಿಸಲಾಗಿದೆ ಎಂದು ಉತ್ತರಿಸಿರುತ್ತಾರೆ. ಹಾಗೂ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ಕಡತ ಪರಿಶೀಲಿಸಲಾಗಿ ವಿಶ್ವವಿದ್ಯಾನಿಲಯದ ವಿವಿಧ ವಿಭಾಗದಿಂದ 132 ಗಣಕಯಂತ್ರಗಳ ಬೇಡಿಕೆ ಸಲ್ಲಿಸಿರುತ್ತಾರೆ, ಆದರೇ 170ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ 150 ಗಣಕ ಯಂತ್ರಗಳ ಖರೀದಿಗೆ ಮಂಜೂರಾತಿ ನೀಡಲಾಗಿದೆ, ಹೀಗಾಗಿ 18 ಗಣಕಯಂತ್ರಗಳನ್ನು ಬೇಡಿಕೆ ಇಲ್ಲದೇ ಖರೀದಿಸಲಾಗಿದೆ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಸಾಸುಇ50,ಇಆಇ2019, ಬೆಂಗಳೂರು, ದಿನಾಂಕ:06.09.2019ರನ್ವಯ ಸರ್ಕಾರದ ಇಲಾಖಾವಾರು ನೇಮಿಸಿರುವ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ಪಡೆಯದೆ ಮೆ: ಬಿಗ್ ಸಿ ಟೆಕ್ನೋಲೊಜಿ ಪ್ರೈ.ಲಿ.ರವರಿಂದ 150 ಗಣಕ ಯಂತ್ರ ಖರೀದಿಸಿ ಪಾವತಿಸಲಾಗಿರುವ ಮೊತ್ತ **ರೂ.1,63,91,250/- ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.**

23.11 ಪ್ರಾದೇಶಿಕ ಕೇಂದ್ರ ಕಟ್ಟಡಗಳಿಗೆ ಪಿ.ಡಬ್ಲ್ಯೂ.ಡಿ ಇಂಜಿನಿಯರ್‌ರವರಿಂದ ಕಟ್ಟಡವನ್ನು ಮೌಲ್ಯಮಾಪನ ಮಾಡಿಸಿ ಬಾಡಿಗೆ ದರ ನಿಗದಿಪಡಿಸದೆ ರೂ.25,35,779/–ಗಳ ಬಾಡಿಗೆ ಪಾವತಿಸಿರುವುದು.

ಸಾಮಾನ್ಯ ನಿಧಿ ಖಾತೆಯ ವೌಚರ್‌ಗಳನ್ನು ಪರಿಶೀಲಿಸಿದಾಗ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳಾದ ಬೆಂಗಳೂರು 1,2,3 ಮತ್ತು 4, ಕಲ್ಬುರ್ಗಿ, ಮಂಗಳೂರು, ರಾಮನಗರ, ಕಾರವಾರ, ಉಡುಪಿ, ಬೆಳಗಾವಿ ಮತ್ತು ಮಡಿಕೆರಿ ಇಲ್ಲಿ ಒಟ್ಟು 11 ಖಾಸಗಿ ಕಟ್ಟಡಗಳನ್ನು ಬಾಡಿಗೆಗೆ ಪಡೆದು, ಬಾಡಿಗೆ ಮತ್ತು ಕಟ್ಟಡ ನಿರ್ವಹಣೆಗೆ ಒಟ್ಟು ರೂ.25,35,779/– ಪಾವತಿಸಿರುವುದು ಕಂಡುಬಂದಿರುತ್ತದೆ. ವಿವರಗಳನ್ನು **ಅನುಬಂಧ–36ರಲ್ಲಿ** ನೀಡಿದೆ. ಸದರಿ ಕಟ್ಟಡಗಳನ್ನು ಬಾಡಿಗೆ ಪಡೆಯಲು ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆಯ ಕಂಡಿಕೆ–22 ರಂತೆ ಒಳನಾಡು ಸಾರಿಗೆ ಮತ್ತು ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರು ಪರಿಶೀಲಿಸಿ ಮೌಲ್ಯಮಾಪನ ಮಾಡಿಸಿ ಬಾಡಿಗೆ ದರ ನಿಗದಿಪಡಿಸಬೇಕಾಗಿರುತ್ತದೆ. ಸದರಿ ನಿಯಮವನ್ನು ಪಾಲಿಸದೆ ಬಾಡಿಗೆ ಪಡೆದಿರುವುದಕ್ಕೆ ವಿವರಣೆ ನೀಡುವಂತೆ ಮತ್ತು ದರ ನಿಗದಿ ಪಡಿಸಿರುವ ಕಡತಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:50/30.11.2024ರಲ್ಲಿ ಕೋರಲಾಗಿ, ವಿಶ್ವವಿದ್ಯಾನಿಲಯದವರು ಪ್ರಾದೇಶಿಕ ಕೇಂದ್ರ ಪ್ರಾರಂಭಿಸುವ ಸಂದರ್ಭಗಳಲ್ಲಿ ತುರ್ತಾಗಿ ಅಗತ್ಯವಿದ್ದ ಸಂದರ್ಭಗಳಲ್ಲಿ ಆಯಾ ನಗರಗಳ ಪಿ.ಡಬ್ಲ್ಯೂ.ಡಿ ದರಗಳಿಗೆ ಅನುಗುಣವಾಗಿ ನಿಗದಿಪಡಿಸಿ ಪಾವತಿಸಬೇಕಾಗಿರುವುದು ವಾಸ್ತವವಾದರೂ ನಮ್ಮ ಅಗತ್ಯಕ್ಕೆ ಅನುಗುಣವಾಗಿ ಕಟ್ಟಡಗಳು ದೊರಕದೆ ಇರುವ ಹಿನ್ನೆಲೆಯಲ್ಲಿ ಖಾಸಗಿ ಕಟ್ಟಡಗಳನ್ನು ಗುರುತಿಸಿ ಬಾಡಿಗೆ ದರವನ್ನು/ನಿರ್ವಹಣಾ ವೆಚ್ಚವನ್ನು ನಿಗದಿಪಡಿಸಿ ಪಾವತಿಸಲಾಗುತ್ತಿದೆ ಹಾಗೂ ಮುಂದಿನ ದಿನಗಳಲ್ಲಿ ಪಿಡಿ .ಡಬ್ಲ್ಯೂ ದರಗಳನ್ವಯ ಬಾಡಿಗೆ ನಿಗದಿಪಡಿಸಲು ಕ್ರಮ ವಹಿಸಲಾಗುವುದು" ಎಂದು ಉತ್ತರಿಸಿರುತ್ತಾರೆ. ಖಾಸಗಿ ಕಟ್ಟಡಗಳಿಗೆ ಬಾಡಿಗೆಯನ್ನು ಒಳನಾಡು ಸಾರಿಗೆ ಮತ್ತು ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರು ಪರಿಶೀಲಿಸಿ ನಿಗದಿಪಡಿಸಬೇಕಾಗಿದ್ದು, ನಿಯಮಾನುಸಾರ ಕಟ್ಟಡವನ್ನು ಬಾಡಿಗೆಗೆ ನಿಗದಿಪಡಿಸದೇ ಪಾವತಿಸಲಾಗಿರುವ **ರೂ.25,35,779/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ಹಾಗೂ ಕಾರ್ಯಪಾಲಕ

ಅಭಿಯಂತರರು, ಒಳನಾಡು ಸಾರಿಗೆ ಮತ್ತು ಲೋಕೋಪಯೋಗಿ ಇಲಾಖೆಯವರನ್ನು ಸಂಪರ್ಕಿಸಿ ಬಾಡಿಗೆ ನಿಗದಿಪಡಿಸಿಕೊಳ್ಳಲು ಸೂಚಿಸಿದೆ.

23.12 ವಿಶ್ವವಿದ್ಯಾನಿಲಯದಲ್ಲಿ Custom built open university fee Structuring management system with platform ಸೇವೆ ಪಡೆದಿರುವುದು.

ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಪ್ರವೇಶಾತಿ, ಪರೀಕ್ಷಾ ಹಾಗೂ ಇತರೆ ಶುಲ್ಕಗಳನ್ನು ಆನ್ ಲೈನ್ ಮೂಲಕ ಪಾವತಿಸಲು ಅವಶ್ಯವಿರುವ Custom built open university fee Structuring Management System with platform ಸೇವೆಯನ್ನು ಪಡೆಯಲು ಜೆಮ್ ಪೊರ್ಟಲ್‌ನಲ್ಲಿ custom bid for service ಬಿಡ್ ಸಂಖ್ಯೆ:GEM/2024/B/4627065 ಮೂಲಕ ಆಹ್ವಾನಿಸಲಾಗಿದೆ. ಸದರಿ ಟೆಂಡರ್ ಕಡತ ಪರಿಶೀಲಿಸಿದಾಗ ಮೆ. InHawk IT solutions Pvt. Ltd. ಇವರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಈ ಸಂಬಂಧ ಕೆಳಕಂಡ ಅಂಶಗಳಿಗೆ ವಿವರಣೆ ಕೋರಿ ವಿಚಾರಣಾ ಪತ್ರ ಸಂಖ್ಯೆ:183/11.02.2025ನ್ನು ನೀಡಲಾಗಿರುತ್ತದೆ.

1. ಬಿಡ್ ಡಾಕ್ಯೂಮೆಂಡ್ ಷರತ್ತು ಅನುಬಂಧ-2ರ(b) ಪ್ರಕಾರ ಬಿಡ್‌ದಾರರು ಖಾಸಗಿ ಲಿಮಿಟೆಡ್ ನೊಂದಾಯಿತ ವ್ಯವಹಾರ ಸಂಸ್ಥೆಯಾಗಿರಬೇಕು ಎಂದು ನಮೂದಿಸಿರುವುದರಿಂದ ಸರ್ಕಾರದ ಅಂಗ ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗಿಯಾಗಲು ಸಾಧ್ಯವಾಗಿರುವುದಿಲ್ಲ. ಖಾಸಗಿ ಸಂಸ್ಥೆಗಳಿಂದಲೇ ಮೇಲಿನ ಸೇವೆ ಪಡೆಯುವ ಔಚಿತ್ಯತೆ ತಿಳಿಸುವುದು.

2. ಬಿಡ್ ಡಾಕ್ಯೂಮೆಂಡ್ ಷರತ್ತು ಅನುಬಂಧ-2 ರ (c) ಪ್ರಕಾರ ಕರ್ನಾಟಕದಲ್ಲಿ ಪ್ರಮುಖವಾಗಿ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಮೇಲಿನ ತಂತ್ರಾಂಶ ಅಳವಡಿಸಿರುವ ಅನುಭವ ಹೊಂದಿರಬೇಕು ಎಂದು ನಮೂದಿಸಲಾಗಿದೆ. ವಿದ್ಯಾರ್ಥಿಗಳ ಪ್ರವೇಶಾತಿ, ಪರೀಕ್ಷಾ ಹಾಗೂ ಇತರೆ ಶುಲ್ಕಗಳನ್ನು ಆನ್ ಲೈನ್ ಮೂಲಕ ಪಾವತಿಸಲು ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸಿರುವ ಅನುಭವದ ಔಚಿತ್ಯತೆ ತಿಳಿಸುವುದು.

3. ಪ್ರತಿ ವರ್ಷಕ್ಕೆ 75000 ವ್ಯವಹರಣೆಗೆ ರೂ.100/- ಪ್ರತಿ ವ್ಯವಹರಣೆಗಳಂತೆ ರೂ.75,00,000/- ಗಳೆಂದು ಅಂದಾಜಿಸಲಾಗಿದೆ. ಪ್ರತಿ ವ್ಯವಹರಣೆಗೆ ರೂ.100/- ಗಳೆಂದು ಯಾವ ಮಾನದಂಡಗಳನ್ನು ಆಧರಿಸಿ ನಿಗದಿಪಡಿಸಲಾಗಿದೆ ಎಂಬುದಕ್ಕೆ ಸೂಕ್ತ ದಾಖಲೆಗಳನ್ನು ನೀಡುವುದು.

4. ಸರ್ಕಾರದ ಆದೇಶ ಸಂಖ್ಯೆ FD 574(A) Exp-12/2019, Dt:07.09.2019 ರನ್ವಯ ಟೆಂಡರ್ ಅವಧಿಯನ್ನು 15 ದಿನಗಳಿಗೆ ನಿಗಧಿಪಡಿಸಬೇಕಾಗಿದ್ದು, ಮೇಲಿನ ಟೆಂಡರ್‌ಗೆ 10 ದಿನಗಳ ಕಾಲಾವಕಾಶ ನೀಡಲಾಗಿದೆ. ಈ ಬಗ್ಗೆ ಸೂಕ್ತ ಸ್ಪಷ್ಟೀಕರಣ ನೀಡುವುದು.

5. ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ:KSOU/IT/CW-02/97.2023-24 Dt:07-03-2024 ರನ್ವಯ ಮೇಲಿನ ಸೇವೆ ನೀಡಲು ಅತೀ ಕಡಿಮೆ ದರ ನಮೂದಿಸಿರುವ ಮೆ. InHawk IT solutions

Pvt. Ltd. ಇವರಿಗೆ ಕಾರ್ಯಾದೇಶ ನೀಡಲಾಗಿದೆ. ಅದರಂತೆ ದಿನಾಂಕ:30-05-2024 ರಿಂದ ಅನ್ವಯವಾಗುವಂತೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ. ಕರಾರು ಒಪ್ಪಂದದ ಪ್ರಕಾರ ಪ್ರತಿ ವ್ಯವಹಾರ ರೂ.500/- ಕ್ಕಿಂತ ಹೆಚ್ಚಿನ ಮೊತ್ತಕ್ಕೆ ಸೇವಾ ಶುಲ್ಕ ರೂ.40/- ಹಾಗೂ ರೂ.500/- ಕ್ಕಿಂತ ಕಡಿಮೆ ಮೊತ್ತಕ್ಕೆ ಸೇವಾ ಶುಲ್ಕ ರೂ.10/-ಗಳನ್ನು ವಿದ್ಯಾರ್ಥಿಗಳು ಪಾವತಿಸಬೇಕಾಗಿರುತ್ತದೆ. ಈ ರೀತಿ ವ್ಯವಹಾರಗಳಿಗೆ ಮೆ. In Hawk IT solutions Pvt. Ltd. ಇವರು HDFC, ಕುವೆಂಪುನಗರ ಶಾಖೆ ಇಲ್ಲಿ ಪ್ರತ್ಯೇಕ ಬ್ಯಾಂಕ್ ಖಾತೆ ತೆರೆದು ನಿರ್ವಹಿಸುವುದಾಗಿ ಕರಾರಿನಲ್ಲಿ ಒಪ್ಪಂದ ಮಾಡಕೋಳ್ಳಲಾಗಿದೆ. ಹೀಗಾಗಿ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಪ್ರವೇಶಾತಿ, ಪರೀಕ್ಷಾ ಇತರೆ ಶುಲ್ಕಗಳಿಗಿಂತ ಹೆಚ್ಚುವರಿಯಾಗಿ ಪಾವತಿಸಬೇಕಾಗಿರುತ್ತದೆ.

6. ವಿಶ್ವವಿದ್ಯಾಲಯವು ತಮ್ಮ ಹಣಕಾಸಿನ ವ್ಯವರಣೆಯನ್ನು ನಡೆಸುತ್ತಿರುವ ಸ್ಟೇಟ್ ಬ್ಯಾಂಕ್ ಶಾಖೆಯಲ್ಲಿಯೇ ಸ್ಟೇಟ್ ಬ್ಯಾಂಕ್ ಕಲೆಕ್ಟ (State Bank Collect) ತಂತ್ರಾಂಶದಲ್ಲಿ ಪ್ರವೇಶಾತಿ ಶುಲ್ಕಕ್ಕೆ ಸಂಬಂಧಿಸಿದಂತೆ ತಂತ್ರಾಂಶ ಅಭಿವೃದ್ಧಿಪಡಿಸಿಕೊಂಡಿದಲ್ಲಿ, ಬ್ಯಾಂಕಿನವರೇ ತಂತ್ರಾಂಶವನ್ನು ನಿರ್ವಹಿಸಿ ಪ್ರತಿ ದಿನ ವರದಿಯನ್ನು ಪಡೆಯಬಹುದಾಗಿರುತ್ತದೆ. ಈಗಾಗಲೇ ಕರ್ನಾಟಕದಲ್ಲಿ 15 ವಿಶ್ವವಿದ್ಯಾನಿಲಯಗಳು ಸ್ಟೇಟ್ ಬ್ಯಾಂಕ್ ಕಲೆಕ್ಟ ತಂತ್ರಾಂಶವನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುತ್ತಿರುತ್ತಾರೆ. KSOU ಖಾಸಗಿ ಸಂಸ್ಥೆಯವರಿಂದ ಸೇವೆ ಪಡೆದಿರುವುದಕ್ಕೆ ಸೂಕ್ತ ವಿವರಣೆ ನೀಡುವುದು.

7. ಕರಾರು ಒಪ್ಪಂದ ಪ್ರಕಾರ ರೂ.30,00,000/- ಗಳಿಗೆ ಶೇ.5 ರಂತೆ ರೂ.1,50,000/- ಗಳಿಗೆ ಭದ್ರತಾ ಠೇವಣಿ ಪಡೆಯಬೇಕಾಗಿದ್ದು ಶೇ.3 ರಂತೆ ರೂ.90,000/-ಗಳಿಗೆ ಬ್ಯಾಂಕ್ ಗ್ಯಾರಂಟಿ ಪಡೆಯಲಾಗಿದೆ.

ಮೇಲಿನ ಅಂಶಗಳಿಗೆ ವಿಶ್ವವಿದ್ಯಾನಿಲಯವು ನೀಡಿರುವ ಅನುಪಾಲನಾ ವರದಿಯಲ್ಲಿ ಸಾಂಪ್ರದಾಯಕ ವಿಶ್ವವಿದ್ಯಾನಿಲಯಗಳಿಗಿಂತ ಮುಕ್ತ ವಿಶ್ವವಿದ್ಯಾನಿಲಯವು ಪ್ರವೇಶ ಹಾಗೂ ಪರೀಕ್ಷಾ ಕಾರ್ಯಗಳು ಭಿನ್ನವಾಗಿರುವುದರಿಂದ ದಿನಾಂಕ:25.01.2024 ರಂದು ನಡೆದ ಟೆಂಡರ್ ರಚನಾ ಸಲಹಾ ಮತ್ತು ಪರಿಶೀಲನಾ ಸಮಿತಿ ಸಭೆಯಲ್ಲಿ ಅನುಮೋದಿಸಿರುವಂತೆ ಬಿಡ್ ಡಾಕ್ಯೋಮೆಂಟ್‌ಅನ್ನು ಅಂತಿಮಗೊಳಿಸಿ, ಭದ್ರತಾ ಠೇವಣಿಯನ್ನು ಶೇ.3 ನಿಗಧಿಪಡಿಸಲಾಗಿದೆ. ಹಾಗೂ ಮಾನ್ಯ ಕುಲಪತಿಗಳ ಅನುಮೋದನೆಯಂತೆ ಟೆಂಡರ್‌ಗೆ 10 ದಿನಗಳ ಕಾಲಾವಕಾಶ ನೀಡಲಾಗಿದೆ ಎಂದು ಉತ್ತರಿಸಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ:ಆಇ456ವೆಚ್ಚ-12/2022, ದಿ:10-08-2022 ರನ್ವಯ ಭದ್ರತಾ ಠೇವಣಿ ಶೇ.5 ಪಡೆಯಬೇಕಾಗಿರುತ್ತದೆ. ಆದುದರಿಂದ, ಭದ್ರತಾ ಠೇವಣಿ ವ್ಯತ್ಯಾಸದ ಮೊತ್ತ ರೂ.60,000/- ಗಳಿಗೆ ಬ್ಯಾಂಕ್ ಗ್ಯಾರಂಟಿ ಪಡೆಯಲು ಸೂಚಿಸಿದೆ.

ಸರ್ಕಾರದ ಪತ್ರ ಸಂಖ್ಯೆ:ಇಡಿ/35/ಇಜಿಒವಿ/2020, ದಿನಾಂಕ:10.04.2023ರಲ್ಲಿ ಕಡ್ಡಾಯವಾಗಿ UUCMS ತಂತ್ರಾಂಶವನ್ನು ಬಳಕೆ ಮಾಡಲು ಆದೇಶಿಸಿರುವುದನ್ನು ಉಲ್ಲಂಘಿಸಿದೆ, ಅಲ್ಲದೇ, ಸ್ಟೇಟ್

ಬ್ಯಾಂಕ್‌ನವರು ಉಚಿತವಾಗಿ ನೀಡುತ್ತಿರು. ಸ್ಟೇಟ್ ಬ್ಯಾಂಕ್ ಕಲೆಕ್ಟ (State Bank Collect) ಎಂಬ ತಂತ್ರಾಂಶವನ್ನು ವಿಶ್ವವಿದ್ಯಾಲಯವು ತಮ್ಮ ಹಣಕಾಸಿನ ವ್ಯವರಣೆಯನ್ನು ನಡೆಸುತ್ತಿರುವ ಸ್ಟೇಟ್ ಬ್ಯಾಂಕ್ ಶಾಖೆಯಲ್ಲಿಯೇ ಲಭ್ಯವಿದ್ದರೂ ಸದರಿ ತಂತ್ರಾಂಶವನ್ನು ಬಳಸಿಕೊಳ್ಳದೆ ಬಾಹ್ಯ ಸಂಸ್ಥೆಯಿಂದ ಸೇವೆ ಪಡೆದು ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟುಮಾಡಲಾಗಿರುತ್ತದೆ. ಈ ಬಗ್ಗೆ ಸಕ್ಷಮ ಪ್ರಾಧೀಕಾರವು ಆಡಳಿತಾತ್ಮಕ ಕ್ರಮ ಕೈಗೊಳ್ಳು ಹಾಗೂ InHawk IT solutions Pvt. Ltd., ಇವರಿಂದ Custom built open university fee Structuring Management System with platform ಸೇವೆಯನ್ನು ಪಡೆದಿರುವುದಕ್ಕೆ ಸರ್ಕಾರದಿಂದ ಅನುಮತಿ ಪಡೆದು ಲೆಕ್ಕಪರಿಶೋಧನೆಗೆ ಮಾಹಿತಿ ನೀಡಲು ಸೂಚಿಸಿದೆ.

23.13 ವಿಶ್ವವಿದ್ಯಾನಿಲಯದಲ್ಲಿ Digital Academic Platform ಸೇವೆ ಪಡೆದು ರೂ.2,46,84,548/–ಗಳನ್ನು ಪಾವತಿಸಿರುವುದು.

ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ಸಂಪೂರ್ಣ paperless ಮಾಡಿ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರುಗಳು ಸಮಾಲೋಚನೆ ನಡೆಸಲು ಅನುಕೂಲವಾಗುವ ಉದ್ದೇಶದಿಂದ Digital Academic Platform ಸೇವೆಯನ್ನು ಜೆಮ್ ಪೊರ್ಟಲ್‌ನಲ್ಲಿ ದಿನಾಂಕ:09.03.2023 ರಂದು ಬಿಡ್ ಆಹ್ವಾನಿಸಿ ಮೆ: Edu Easy India Pvt.Ltd. Hubballi ಇವರೊಂದಿಗೆ ಪ್ರತಿ ವಿದ್ಯಾರ್ಥಿಗೆ ರೂ.287/–ರಂತೆ ದಿನಾಂಕ:29.03.2023ರಂದು ಕರಾರು ಒಪ್ಪಂದ ಮಾಡಿಕೊಂಡು 2023–24ನೇ ಸಾಲಿನಲ್ಲಿ ಕೆಳಗಿನಂತೆ ಪಾವತಿಸಲಾಗಿದೆ.

ಕ್ರಮ.ಸಂ	ಚೆಕ್ಕ ಸಂಖ್ಯೆ/ದಿನಾಂಕ	ವೋಚರ್ ಸಂ./ದಿನಾಂಕ	ಬಿಲ್ಲು ವಿವರ	ಮೊತ್ತ ರೂ. ಗಳಲ್ಲಿ
1	HDFC 000059/08.08.2023	5/08.08.2023	60,951 ವಿದ್ಯಾರ್ಥಿಗಳ ಮಾಹಿತಿಯನ್ನು Digital Academic Platformನಲ್ಲಿ ಮಾಹಿತಿ ಅಳವಡಿಸಿರುವುದು.	1,74,92,912/–
2	924228/08.11.2023	76/08.11.2023	25058 ವಿದ್ಯಾರ್ಥಿಗಳ ಮಾಹಿತಿಯನ್ನು Digital Academic Platformನಲ್ಲಿ ಮಾಹಿತಿ ಅಳವಡಿಸಿರುವುದು.	71,91,636/–
ಒಟ್ಟು ರೂ.				**2,46,84,548/–**

ಮೇಲಿನ ಸೇವೆ ಪಡೆದಿರುವ ಸಂಬಂಧ ಕಡತ ಪರಿಶೀಲಿಸಿದಾಗ ಕೆಳಗಿನ ಅಂಶಗಳಿಗೆ ದಾಖಲೆಗಳು ನೀಡುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:168/21.02.2025ನ್ನು ನೀಡಲಾಗಿದೆ.

1. Digital Academic Platform ಸೇವೆ ಪಡೆಯುವ ಬಗ್ಗೆ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗದ ಬೋಧಕರಿಂದ ಅವಶ್ಯಕತೆ ಹಾಗೂ ಅಭಿಪ್ರಾಯ ಪಡೆದಿರುವ ದಾಖಲೆಗಳು.

2. ಸೇವೆಗಳನ್ನು ಪಡೆಯಲು ಆಯವ್ಯಯದಲ್ಲಿ ಅವಕಾಶ ಮಾಡಿಕೊಂಡಿರುವ ವಿವರ.

3. ಆಡಳಿತಾತ್ಮಕ ಅನುಮೋದನೆ ನೀಡಿರುವ ಆದೇಶ.

4. ಜೆಮ್ ಪೊರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಲು ಪ್ರತಿ ವಿದ್ಯಾರ್ಥಿಗೆ Digital Academic Platform ನ್ನು ಸಿದ್ದಪಡಿಸಲು ರೂ.250/– + ಜಿಎಸ್‌ಟಿ ದರ ನಿಗದಿಪಡಿಸಿರುವ ಮಾನದಂಡಗಳು, ಹಾಗೂ ಜೆಮ್ ಪೊರ್ಟಲ್‌ಲ್ಲಿ ಬಿಡ್‌ದಾರರು ಅಪಲೋಡ ಮಾಡಿರುವ ಟೆಂಡರ್ ದಾಖಲೆಗಳು.

5. ಸೇವೆಗಳನ್ನು ಪಡೆಯಲು ವಿಶ್ವವಿದ್ಯಾನಿಲಯದ ಕುಲಸಚಿವರಿಗೆ ಹಾಗೂ ಕುಲಪತಿಗಳಿಗೆ ಇರುವ ಆರ್ಥಿಕ ಪ್ರತ್ಯಾಯೋಜನೆ ಪರಿನಿಯಮಗಳು.

6. ಬಿಲ್ಲುಗಳನ್ನು ಪಾವತಿಸುವಾಗ ವಿಷಯವಾರು ವಿಭಾಗವಾರು ವಿದ್ಯಾರ್ಥಿಗಳಿಗೆ Digital Academic Platform ಅಳವಡಿಸಿ ಉಪಯೊಗಿಸುತ್ತಿರುವ ಬಗ್ಗೆ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರಿಂದ ದೃಢೀಕರಣ ಇರುವುದಿಲ್ಲ.

ವಿಶ್ವವಿದ್ಯಾನಿಲಯದವರು ಅನುಪಾಲನಾ ವರದಿಯಲ್ಲಿ ವಿ.ವಿ Expert committeeಯವರು ದಿನಾಂಕ:04.08.2023 ರಂದು ನಡೆದ ಸಭೆಯಲ್ಲಿ Digital Academic Platform ಸೇವೆಯ ಕಾರ್ಯ ದೃಢೀಕರಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಆದರೇ, Digital Academic Platform ಸೇವೆ ಪಡೆಯುವ ಬಗ್ಗೆ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗದ ಬೋಧಕರಿಂದ ಅವಶ್ಯಕತೆ ಹಾಗೂ ಅಭಿಪ್ರಾಯ ಪಡೆದಿರುವ ದಾಖಲೆಗಳು ಹಾಜರುಪಡಿಸಿರುವುದಿಲ್ಲ ಹಾಗೂ ಸದರಿ ಡಾಟಾವನ್ನು ಸಂರಕ್ಷಿಸುವ ಬಗ್ಗೆ ಯಾವುದೇ ವಿವರವನ್ನು ನೀಡಿರುವುದಿಲ್ಲ. ಆದುದರಿಂದ ಮೆ: Edu Easy India Pvt.Ltd. Hubballi ಇವರು 2022–23 ಹಾಗೂ 2023–24ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ಒಟ್ಟು 86,009 ವಿದ್ಯಾರ್ಥಿಗಳು Digital Academic Platform ಸೇವೆ ಪಡೆದು ಉಪಯೋಗಿಸುತ್ತಿರುವ ಬಗ್ಗೆ ಸೂಕ್ತ ದಾಖಲಾತಿಗಳೊಂದಿಗೆ ವಿವರಣೆ ನೀಡುವವರೆಗೆ ಪಾವತಿಯಾದ ಒಟ್ಟು **ರೂ.2,46,84,548/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.**

23.14 ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೌಕರರ 2017 ರಿಂದ 2022 ರವರೆಗೆ ಅವಧಿಯ ಇಎಸ್‌ಐ ವಂತಿಗೆ ಮೊತ್ತಕ್ಕೆ ಬಡ್ಡಿ ರೂ.14,69,492/–ಗಳನ್ನು ಕಾರ್ಮಿಕರ ರಾಜ್ಯ ವಿಮಾ ನಿಗಮ, ಮೈಸೂರು ಇವರಿಗೆ ಪಾವತಿಸಿರುವುದು.

ಕಾರ್ಮಿಕರ ರಾಜ್ಯ ವಿಮಾ ನಿಗಮ, ಮೈಸೂರು ಇವರು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಜೂನ್–2017 ರಿಂದ ಮೇ–2022ರವರೆಗೆ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ನೌಕರರ ವೇತನ ಪಾವತಿ ಮಾಡಿರುವ ಹುಂಡಿಗಳು, ಬಟವಾಡೆ ಪುಸ್ತಕಗಳನ್ನು ಹಾಗೂ ವೇತನ ಪಾವತಿಯಾಗಿರುವ ಪಟ್ಟಿಗಳನ್ನು ತಪಾಸಣೆ ಮಾಡಿದಾಗ ರೂ.36,96,038/– ಇಎಸ್‌ಐ ವಂತಿಗೆ ಪಾವತಿಸದೇ ಇರುವುದರಿಂದ ಇಎಸ್‌ಐ(ಸಾಮಾನ್ಯ) ಕಾಯ್ದೆ–1950ರ ನಿಯಮ 29, 31 ಮತ್ತು 33 ರನ್ವಯ ಇಎಸ್‌ಐ ವಂತಿಗೆ ಮೊತ್ತ ಪಾವತಿಸುವಂತೆ ನೋಟಿಸ್ ನೀಡಲಾಗಿರುತ್ತದೆ. ಅದರಂತೆ ವಿಶ್ವವಿದ್ಯಾನಿಲಯವು ಸಾಮಾನ್ಯ ನಿಧಿ ಖಾತೆಯಿಂದ ಜೂನ್–2023 ಮಾಹೆಯಲ್ಲಿ ವೌಚರ್ ಸಂಖ್ಯೆ:5, ಚೆಕ್ಕ ಸಂಖ್ಯೆ:925217/02.05.2023 ರಲ್ಲಿ ಕಾರ್ಮಿಕರ ರಾಜ್ಯ ವಿಮಾ ನಿಗಮ, ಮೈಸೂರು ಇವರಿಗೆ ರೂ.36,96,038/–ಗಳನ್ನು ಪಾವತಿಸಿರುತ್ತಾರೆ.

ಕಾರ್ಮಿಕರ ರಾಜ್ಯ ವಿಮಾ ನಿಗಮ, ಮೈಸೂರು ಇವರು 45(ಸಿ) ರಿಂದ 45–I ಕಾಯ್ದೆಯನ್ವಯ ವಿಳಂಬವಾಗಿ ಇಎಸ್ಐ ಮೊತ್ತ ಪಾವತಿಸಿರುವುದಕ್ಕೆ ರೂ.14,69,492/–ಗಳ ಬಡ್ಡಿಯನ್ನು ವಿಧಿಸಿ ದಿನಾಂಕ: 30–05–2023 ರಂದು ನೋಟಿಸ್ ನೀಡಿರುವುದರಿಂದ ವಿಶ್ವವಿದ್ಯಾನಿಲಯದಿಂದ ವೌಚರ್ ಸಂಖ್ಯೆ:154, ಚೆಕ್ಕ ಸಂಖ್ಯೆ:925384/27.06.2023ರಲ್ಲಿ ಕಾರ್ಮಿಕರ ರಾಜ್ಯ ವಿಮಾ ನಿಗಮ, ಮೈಸೂರು ಇವರಿಗೆ ರೂ.14,69,492/– ಗಳ ಬಡ್ಡಿಯನ್ನು ಪಾವತಿಸಲಾಗಿದೆ.

ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ನೌಕರರ ವೇತನದಲ್ಲಿ ಇಎಸ್ಐ ವಂತಿಗೆ ಮೇಲಿನಂತೆ ವಿಳಂಬವಾಗಿ ಇಎಸ್ಐ ಮೊತ್ತ ಹಾಗೂ ಬಡ್ಡಿ ಮೊತ್ತ ಪಾವತಿಸಿರುವುದಕ್ಕೆ ಸೂಕ್ತ ವಿವರಣೆ ಹಾಗೂ ಇಎಸ್ಐ ವಂತಿಗೆ ಮೊತ್ತ ರೂ.36,96,038/–ಗಳಲ್ಲಿ Employer and Employee ವಂತಿಗೆ ಎಷ್ಟು ಎಂಬ ಮಾಹಿತಿ ನೀಡಲು ವಿಚಾರಣಾ ಪತ್ರ ಸಂಖ್ಯೆ:211/24.02.2025ರಲ್ಲಿ ಕೋರಲಾಗಿತ್ತು. ಅದಕ್ಕೆ ವಿಶ್ವವಿದ್ಯಾನಿಲಯವು ಅನುಪಾಲನಾ ವರದಿ ನೀಡಿರುವುದಿಲ್ಲ. ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ–3ರ ಪ್ರಕಾರ ಸರ್ಕಾರದ ಅಧಿಕಾರಿ/ನೌಕರನ್ನು ತನ್ನ ಎಲ್ಲಾ ಆರ್ಥಿಕ ವಹಿವಾಟನ್ನು ಸರಿಯಾಗಿ ನಿರ್ವಹಿಸುವುದು ಅವನ ಮತ್ತು ಎಲ್ಲಾ ಖಾತೆಗಳು ಮತ್ತು ರಿಟರ್ನ್ಗಳನ್ನು ನಿಖರವಾಗಿ ಮತ್ತು ತ್ವರಿತವಾಗಿ ಸಲ್ಲಿಸುವುದು ಹಣ ಬಟವಾಡೆ ಅಧಿಕಾರಿಯ ಜವಾಬ್ದಾರಿಯಾಗಿರುತ್ತದೆ. ಆದರೇ ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ನಿಗದಿತ ಸಮಯದಲ್ಲಿ ಇಎಸ್ಐ ಮೊತ್ತ ಪಾವತಿಸದೇ ಇರುವುದಕ್ಕೆ ವಿಶ್ವವಿದ್ಯಾನಿಲಯದಿಂದ ಪಾವತಿಸಿರುವುದಕ್ಕೆ ಸಂಬಂಧಿಸಿದವರನ್ನು ಹೋಣೆಗಾರರನ್ನಾಗಿಸಿ ರೂ.**14,69,492/–ಗಳನ್ನು ವಸೂಲಿ** ಮಾಡಲು ಸೂಚಿಸಿದೆ.

23.15 ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೂಲಕ ಜಾಹೀರಾತು ಪ್ರಕಟಣೆ ಮಾಡದೆ ಖಾಸಗಿ ಸಂಸ್ಥೆಗಳಿಂದ ಪ್ರಕಟಣೆ ಮಾಡಿ ರೂ.8,09,552/–ಗಳನ್ನು ಪಾವತಿಸಿರುವುದು.

ಜಾಹೀರಾತು ವೆಚ್ಚಗಳ ಪಾವತಿ ವೌಚರ್ಗಳನ್ನು ಪರಿಶೀಲಿಸಲಾಗಿ, 2023–24ನೇ ಸಾಲಿನಲ್ಲಿ ಜಾಹೀರಾತುಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಮತ್ತು ಏಜೆನ್ಸೀಸ್ ಲಿಮಿಟೆಡ್ ಸಂಸ್ಥೆಯ ಮುಖಾಂತರ ಜಾಹೀರಾತು ಬಿಡುಗಡೆ ಮಾಡದೆ ಖಾಸಗಿ ಸಂಸ್ಥೆಗಳಿಂದ ಪ್ರಕಟಣೆ ಮಾಡಿ ರೂ.8,09,552/– ಗಳನ್ನು ಪಾವತಿಸಲಾಗಿದೆ. ವಿವರಗಳನ್ನು **ಅನುಬಂಧ–37ರಲ್ಲಿ** ನೀಡಲಾಗಿದೆ.

ಸರ್ಕಾರದ ಸುತ್ತೋಲೆ ಸಂಖ್ಯೆ: ವಾಪ್ರಯು/94/ವಾಪ್ರಜಾ/06 ದಿನಾಂಕ:20.11.2006 ರನ್ವಯ, ಸರಕಾರದ ಎಲ್ಲಾ ಇಲಾಖೆಗಳು ಹಾಗೂ ಎಲ್ಲಾ ಅಂಗಸಂಸ್ಥೆಗಳು ಪತ್ರಿಕೆಗಳಲ್ಲಿ ಪ್ರಕಟಿಸಬೇಕಾಗುವ ತಮ್ಮ ಎಲ್ಲಾ ಜಾಹೀರಾತುಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಮತ್ತು ಏಜೆನ್ಸೀಸ್ ಲಿಮಿಟೆಡ್ (ಒಅ & ಂ) ಸಂಸ್ಥೆಯ ಮುಖಾಂತರ ಜಾಹೀರಾತು ಬಿಡುಗಡೆ ಮಾಡಬೇಕಾಗಿರುತ್ತದೆ. ಆದರೆ, ವಿಶ್ವವಿದ್ಯಾನಿಲಯವು ಸದರಿ ಸಾಲಿನಲ್ಲಿ ಹಲವು ಸರಕು/ಸೇವೆಗಳ ಸಂಗ್ರಹಣೆಯ ಟೆಂಡರ್ ಜಾಹೀರಾತುಗಳನ್ನು ವಿವಿಧ ಖಾಸಗಿ ಸಂಸ್ಥೆಗಳ ಮೂಲಕ ಪ್ರಕಟಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಖಾಸಗಿ ಸಂಸ್ಥೆಗಳಿಂದ ಜಾಹೀರಾತು ಬಿಡುಗಡೆ ಮಾಡಿರುವುದಕ್ಕೆ ಪೂರಕ ದಾಖಲೆಗಳೊಂದಿಗೆ ಸೂಕ್ತ ವಿವರಣೆ ನೀಡುವಂತೆ, ಲೆಕ್ಕಪರಿಶೋಧನಾ ವಿಚಾರಣೆ ಪತ್ರ ಸಂಖ್ಯೆ:59/09.12.2024ರಲ್ಲಿ ಕೋರಲಾಗಿ, ಮುಕ್ತ

ವಿಶ್ವವಿದ್ಯಾನಿಲಯದವರು ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆದೇಶ ಸಂಖ್ಯೆ:DIPR-20017/50/2019/C1/CP/DIPR, Dt:19-03-2020ರಲ್ಲಿ ಮಾನ್ಯತೆ ಪಡೆದಿರುವ ಸಂಸ್ಥೆಯಾದ Avanti Advertising Pvt Ltd ಇವರಿಂದ ಸರ್ಕಾರವು ನಿಗದಿಪಡಿಸಿರುವ ಡಿಐಪಿ ದರದಲ್ಲಿಯೆ ಕನ್ನಡ ಮತ್ತು ಇಂಗ್ಲಿಷ್ ದಿನಪತ್ರಿಕೆಗಳಲ್ಲಿ ಜಾಹೀರಾತು ಪ್ರಚಾರ ಪಡಿಸಲು ಕಾರ್ಯದೇಶ ನೀಡಲಾಗಿದೆ ಎಂದು ಉತ್ತರಿಸಿರುತ್ತಾರೆ ಆದರೇ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು 2020–2021ನೇ ಕ್ಯಾಲೆಂಡರ್ ವರ್ಷಗಳಿಗೆ ಮಾತ್ರ ಅನ್ವಯಿಸಿ ಆದೇಶಿಸಿರುತ್ತದೆ. ಹಾಗೂ The Hindu Group ಮೈಸೂರು ಇವರು The Hindu career counselling 2023ರಲ್ಲಿ ನಡೆಸುತ್ತಿದ್ದ ಕಾರ್ಯಕ್ರಮಕ್ಕೆ ವಿಶ್ವವಿದ್ಯಾನಿಲಯದ ಪರವಾಗಿ ಪ್ರಚುರಪಡಿಸಲಾಗುವುದು ಎಂದು ತಿಳಿಸಿ ಪತ್ರ ನೀಡಿದ ಹಿನ್ನೆಲೆಯಲ್ಲಿ 2023–24ನೇ ಸಾಲಿನಲ್ಲಿ ದಿ ಹಿಂದೂ ಗ್ರೂಪ್‌ನ ಕೆರಿಯರ್ ಮ್ಯಾಗ್ಜಿನ್ ಗೈಡೆನ್ಸ್ ಹ್ಯಾಂಡ್ ಬುಕ್‌ನಲ್ಲಿ ಜಾಹೀರಾತು ಪಡಿಸಲು ಪ್ರಾಯೋಜಕತ್ವ ಮೊತ್ತವಾಗಿ ನೀಡಲಾಗಿರುತ್ತದೆ ಎಂದು ವಿವರಣೆ ನೀಡಿರುತ್ತಾರೆ.

ಅನುಬಂಧದಲ್ಲಿ ವಿವರಿಸಿರುವ ಬಿಲ್ಲುಗಳಲ್ಲಿರುವ ಮೊತ್ತವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ದೃಢೀಕರಿಸದೇ ಇರುವುದರಿಂದ ಇದು ಸರ್ಕಾರದ ಆದೇಶಕ್ಕೆ ವಿರುದ್ಧವಾಗಿದ್ದು, ಖಾಸಗಿ ಸಂಸ್ಥೆಗಳ ಮೂಲಕ ಜಾಹೀರಾತು ಪ್ರಕಟಣೆ ಮಾಡಿ ವೆಚ್ಚ ಭರಿಸಲಾಗಿರುತ್ತದೆ. ಆದ್ದರಿಂದ ಖಾಸಗಿ ಸಂಸ್ಥೆಯವರಿಗೆ ಪಾವತಿಸಲಾಗಿರುವ ಜಾಹೀರಾತು ಪ್ರಕಟಣೆ ಮೊತ್ತ **ರೂ.8,09,552/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

23.16 ಬಾಹ್ಯ ಪ್ರಾಧ್ಯಾಪಕರುಗಳನ್ನು ಬಳಸಿ ಆನ್‌ಲೈನ್ ಸಂಪರ್ಕ/ಸಮಾಲೋಚನಾ ಕಾರ್ಯಕ್ರಮಗಳನ್ನು ಆಯೋಜಿಸಿ ರೂ.74,67,133/–ಸಂಭಾವನೆ ಪಾವತಿಸಿರುವುದು.

ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಸಾಮಾನ್ಯ ನಿಧಿ ಖಾತೆಯ ಪಾವತಿ ವೋಚರುಗಳನ್ನು ಪರಿಶೀಲಿಸಲಾಗಿ, ವಿಶ್ವವಿದ್ಯಾನಿಲಯದ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಮತ್ತು ದ್ವೀತಿಯ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ವಿವಿಧ ಸ್ನಾತಕ, ಸ್ನಾತಕೋತ್ತರ ಪದವಿ, ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸುಗಳ ತರಗತಿಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಕಲಿಕಾ ಕೇಂದ್ರಗಳಲ್ಲಿ ಆನ್‌ಲೈನ್ ಸಂಪರ್ಕ/ಸಮಾಲೋಚನಾ ಕಾರ್ಯಕ್ರಮಗಳನ್ನು ಆಯೋಜಿಸಿ ಈ ಸಂಪರ್ಕ ಕಾರ್ಯಕ್ರಮಗಳಲ್ಲಿ ಭಾಗಿಯಾದ ಬಾಹ್ಯ ಪ್ರಾಧ್ಯಾಪಕರುಗಳಿಗೆ ಗೌರವ ಸಂಭಾವನೆಯಾಗಿ ಒಟ್ಟು ರೂ.74,67,133/–ಗಳನ್ನು ಪಾವತಿಸಲಾಗಿದ್ದು, ಪಾವತಿ ವಿವರಗಳನ್ನು **ಅನುಬಂಧ–38 ರಲ್ಲಿ** ನೀಡಲಾಗಿದೆ. ಈ ಸಂಬಂಧ ಪ್ರಸಕ್ತ ಸಾಲಿನಲ್ಲಿ ವಿಷಯವಾರು ಎಷ್ಟು ಸಂಪರ್ಕ ಕಾರ್ಯಕ್ರಮಗಳನ್ನು ನಡೆಸಲಾಗಿದೆ, ಸಂಪರ್ಕ ಕಾರ್ಯಕ್ರಮಗಳನ್ನು ನಡೆಸಲು ಯು.ಜಿ.ಸಿ. ನಿಯಮಾವಳಿಗಳು, ಆಂತರಿಕ ಅಧ್ಯಾಪಕರಿಗೆ ಹಾಗೂ ಬಾಹ್ಯ ಅಧ್ಯಾಪಕರಿಗೆ ಸಂಪರ್ಕ ಕಾರ್ಯಕ್ರಮಗಳನ್ನು ನಡೆಸಲು ನಿಗದಿಪಡಿಸಿರುವ ಅನುಪಾತ ಎಷ್ಟು, ಬಾಹ್ಯ ಅಧ್ಯಾಪಕರನ್ನು ನೇಮಕ ಮಾಡಲು ಸಮಿತಿ ರಚಿಸಿದ್ದಲ್ಲಿ ಸಮಿತಿ ಆದೇಶಗಳು, ಸಂಭಾವನೆ ನಿಗದಿ ಪಡಿಸಿರುವ ಮಾನದಂಡಗಳು ಹಾಗೂ ಸಂಭಾವನೆ ಪಾವತಿಗೆ ಅನುಮೋದಿತ ಪರಿನಿಯಮಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:52/02.12.2024ರಲ್ಲಿ ಕೋರಲಾಗಿ ವಿಶ್ವವಿದ್ಯಾನಿಲಯದ ಡೀನ್ (ಅಧ್ಯಯನ ಕೇಂದ್ರ) ರವರ

ವಿವರಣೆಯನ್ನು ನೀಡದೇ ಕರಾಮುವಿಯ 22 ವಿಭಾಗಗಳ ಮುಖ್ಯಸ್ಥರುಗಳಿಂದ ಸಂಪರ್ಕ/ಸಮಾಲೋಚನಾ ಕಾರ್ಯಕ್ರಮಗಳನ್ನು ಆಯೋಜಿಸಿರುವ ಮಾಹಿತಿಯನ್ನು ಪಡೆದು ಸಲ್ಲಿಸಿರುತ್ತಾರೆ. ಉಳಿದಂತೆ ಮೇಲಿನ ಅಂಶಗಳಿಗೆ ಯಾವುದೇ ಉತ್ತರ ನೀಡಿರುವುದಿಲ್ಲ

ಮುಂದುವರೆದು ಮುಕ್ತ ವಿಶ್ವವಿದ್ಯಾನಿಲಯವು ಪರಿಣಾಮಕಾರಿ ಮತ್ತು ಉತ್ತಮ ಗುಣಮಟ್ಟದ ದೂರ ಶಿಕ್ಷಣ ಸೌಲಭ್ಯವನ್ನು ವಿದ್ಯಾರ್ಥಿಗಳಿಗೆ ತಲುಪಿಸುವ ಸಲುವಾಗಿ ತನ್ನದೇ ಸ್ವಂತ ಸ್ಟುಡಿಯೋ ಮತ್ತು ವಿಷಯ ಪರಿಣಿತ ಪ್ರಾಧ್ಯಾಪಕರುಗಳನ್ನು ಹೊಂದಿದ್ದು ಇವರ ಸೇವೆ ಬಳಸಿಕೊಂಡು ವಿಷಯವಾರು ಥಿಯರಿ ಮತ್ತು ಪ್ರಾಯೋಗಿಕ ತರಗತಿಗಳ ವೀಡಿಯೋಗಳನ್ನು ಚಿತ್ರೀಕರಿಸಿ ಅವುಗಳನ್ನು ಮುಕ್ತ ವಿ.ವಿಯ ಯೂಟ್ಯೂಬ್ ಸಾಮಾಜಿಕ ಜಾಲತಾಣಗಳಲ್ಲಿ ಅಪ್ಲೋಡ್ ಮಾಡಿ ಕಲಿಕಾರ್ಥಿಗಳಿಗೆ ಯಾವುದೇ ಸಮಯದಲ್ಲಿ, ಎಲ್ಲಿಂದ ಬೇಕಾದರೂ ತಮ್ಮ ಪಠ್ಯಕ್ರಮಕ್ಕನುಗುಣವಾಗಿ ವಿಷಯವಾರು ತರಗತಿಗಳಿಗೆ ಸಂಬಂಧಿಸಿದ ವೀಡಿಯೋಗಳನ್ನು ವೀಕ್ಷಿಸುವ/ಡೌನ್‌ಲೋಡ್ ಮಾಡಿಕೊಳ್ಳುವ ಸೌಲಭ್ಯವನ್ನು ಕಲ್ಪಿಸಿದ್ದರೆ ಕಲಿಕಾರ್ಥಿಗಳಿಗೆ ಮತ್ತಷ್ಟು ಅನುಕೂಲಕರವಾಗುತಿತ್ತು. ಅಲ್ಲದೇ ಈ ರೀತಿ ಬಾಹ್ಯ ಪರಿಣಿತರಿಗೆ ಸಂಭಾವನೆ ರೂಪದಲ್ಲಿ ಪಾವತಿಸುತ್ತಿರುವ ಈ ಅನಗತ್ಯ ವೆಚ್ಚವನ್ನೂ ತಪ್ಪಿಸಬಹುದಾಗಿತ್ತು.

ವಿಶ್ವವಿದ್ಯಾನಿಲಯವು ಪರಿಣಾಮಕಾರಿ ಮತ್ತು ಉತ್ತಮ ಗುಣಮಟ್ಟದ ದೂರ ಶಿಕ್ಷಣ ಸೌಲಭ್ಯವನ್ನು ವಿದ್ಯಾರ್ಥಿಗಳಿಗೆ ತಲುಪಿಸುವ ಸಲುವಾಗಿ ತನ್ನದೇ ಸ್ವಂತ ಸ್ಟುಡಿಯೋ ಮತ್ತು ವಿಷಯ ಪರಿಣಿತ ಪ್ರಾಧ್ಯಾಪಕರುಗಳನ್ನು ಹೊಂದಿದ್ದು, ಇದರ ಸೇವೆಯನ್ನು ಉಪಯೋಗಿಸಿಕೊಳ್ಳದೇ ಬಾಹ್ಯ ಪ್ರಾಧ್ಯಾಪಕರನ್ನು ಬಳಸಿಕೊಂಡು ಪರಿನಿಯಮವನ್ನು ಮಾಡದೇ ಸಂಭಾವನೆ ಪಾವತಿಸಿರುವುದರ ಔಚಿತ್ಯದ ಕುರಿತು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ ಆದ್ದರಿಂದ ಮೇಲ್ಕಾಣಿಸಿದ ಮೊತ್ತ **ರೂ.74,67,133/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

23.17 ಸಂಕೀರ್ಣ ಬ್ಯಾಂಕ್ ಖಾತೆಯಿಂದ (ಖಾತೆ ಸಂಖ್ಯೆ: 54035421315) ಡ್ರಾ ಮಾಡಲಾಗಿರುವ ಮೊತ್ತ ರೂ.11,62,881/–ಕ್ಕೆ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸದಿರುವುದು.

ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದಿಂದ ನಿರ್ವಹಿಸಲ್ಪಟ್ಟಿರುವ/ಆರ್ಥಿಕ ವಹಿವಾಟು ನಡೆಸಿರುವ ಎಲ್ಲಾ ಬ್ಯಾಂಕ್ ಖಾತೆಗಳ ಬ್ಯಾಂಕ್ ಸ್ಟೇಟ್‌ಮೆಂಟ್ ಹಾಗೂ ಸಂಬಂಧಿತ ನಗದು ಪುಸ್ತಕಗಳನ್ನು ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:61/13.12.2024ರಲ್ಲಿ ಕೋರಲಾಗಿದ್ದರೂ ಸಂಕೀರ್ಣ ಖಾತೆ ಸಂಖ್ಯೆ:54035421315ರ ನಗದು ಪುಸ್ತಕ ಹಾಗೂ ಧೃಡೀಕೃತ ಬ್ಯಾಂಕ್ ಸ್ಟೇಟ್‌ಮೆಂಟ್‌ನ್ನು (ಬ್ಯಾಂಕ್ ಸ್ಟೇಟ್‌ಮೆಂಟ್ ಮಾತ್ರ soft copy mail ಮೂಲಕ ಸಲ್ಲಿಸಿರುತ್ತಾರೆ) ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಹಾಜರುಪಡಿಸಲಾಗಿರುವ ಧನಾದೇಶ ವಹಿಯನ್ನು ಪರಿಶೀಲಿಸಿದ್ದಾಗ ಈ ಕೆಳಕಂಡ ದಿನಾಂಕಗಳಂದು ಬ್ಯಾಂಕಿನಲ್ಲಿ ವೆಚ್ಚವಾಗಿರುವ ಒಟ್ಟು ಮೊತ್ತ ರೂ.11,62,881/–ಕ್ಕೆ ಸಂಬಂಧಿಸಿದಂತೆ ಯಾವುದೇ ವಿವರವನ್ನು ಸದರಿ ವಹಿಯಲ್ಲಿ ದಾಖಲಿಸಿರುವುದಿಲ್ಲ ಕೂಡಲೇ ಈ ಪಾವತಿ ಮೊತ್ತಕ್ಕೆ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸುವಂತೆ ಕೋರಿ ನೀಡಲಾದ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:105/02.01.2025ಕ್ಕೆ

ವಿಶ್ವವಿದ್ಯಾನಿಲಯದಿಂದ ಯಾವುದೇ ವಿವರಣೆ/ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಬ್ಯಾಂಕಿನಲ್ಲಿ ವೆಚ್ಚವಾಗಿರುವ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ದಿನಾಂಕ	ಬ್ಯಾಂಕಿನಲ್ಲಿ ಡ್ರಾ ಆಗಿರುವ ಮೊತ್ತ
1	17.06.2023	50.00
2	17.06.2023	4,985.00
3	28.06.2023	2,30,115.34
4	12.07.2023	1,06,215.34
5	30.10.2023	59,015.34
6	27.02.2024	7,62,500.00
	ಒಟ್ಟು	**11,62,881.02**

ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 329(1)ರ ಪ್ರಕಾರ ಕಛೇರಿಯ ಎಲ್ಲಾ ವ್ಯವಹಾರವನ್ನು ನಗದು ಪುಸ್ತಕದಲ್ಲಿ ದಾಖಲಿಸುವುದು ಬಟವಾಡೆ ಅಧಿಕಾರಿಯ ಕರ್ತವ್ಯವಾಗಿರುತ್ತದೆ ಮತ್ತು ಅನುಚ್ಛೇದ 57ರ ಪ್ರಕಾರ ಕಛೇರಿಯ ಎಲ್ಲಾ ದಾಖಲೆಗಳು ಮಹತ್ವದ ದಸ್ತಾವೇಜುಗಳಾಗಿದ್ದು, ಸದರಿ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವುದು ಬಟವಾಡೆ ಅಧಿಕಾರಿಯ ಕರ್ತವ್ಯವಾಗಿದ್ದರೂ ಸಂಕೀರ್ಣ ಬ್ಯಾಂಕ್ ಖಾತೆಯ ಪಾವತಿಯಾಗಿರುವ ರೂ.11,62,881/–ಗಳಿಗೆ ವೋಚರ್‌ಗಳನ್ನು ಹಾಜರುಪಡಿಸಿರುವುದಿಲ್ಲ. ಈ ಬಗ್ಗೆ ಕುಲಸಚಿವರು ವೈಯಕ್ತಿಕವಾಗಿ ಗಮನಹರಿಸಿ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 03ರ ಪ್ರಕಾರ ವಿಷಯ ನಿರ್ವಹಕರು, ಅಧೀಕ್ಷಕರು, ಸಹಾಯಕ ಹಣಕಾಸು ಅಧಿಕಾರಿಗಳಿಗೆ ಸೂಚಿಸಿ ಲೆಕ್ಕಪರಿಶೋಧನೆಗೆ ಮಾಹಿತಿ ನೀಡುವವರೆಗೆ **ರೂ.11,62,881/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.**

23.18 ಸರ್ಕಾರದಿಂದ ಅನುಮೋದನೆಯಾಗದ ವಿಶ್ವವಿದ್ಯಾನಿಲಯ ವ್ಯಾಜ್ಯಗಳ ಮಾರ್ಗಸೂಚಿಗಳು–2019ರನ್ವಯ ಚಾರ್ಟರ್ಡ್ ಅಕೌಂಟೆಂಟ್‌ರವರ ಸೇವೆಯನ್ನು ಪಡೆದು ರೂ.7,95,600/– ಪಾವತಿಸಿರುವುದು.

ವಿಶ್ವವಿದ್ಯಾನಿಲಯದ ಸಾಮಾನ್ಯ ಖಾತೆಯ ವೋಚರ್ಗಳನ್ನು ಪರಿಶೀಲಿಸಲಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವ್ಯಾಜ್ಯಗಳ ಮಾರ್ಗಸೂಚಿಗಳು–2019ರ ಅನುಬಂಧ–2 ಟ್ಯಾಕ್ಸ್ ಅಡವೈಸರ್ ಹಾಗೂ ಸನ್ನದ್ದು ಲೆಕ್ಕಪರಿಶೋಧಕರ ಆಯ್ಕೆವಟ್ಟರನ್ವಯ ಮೆ.ರಾಮಕೃಷ್ಣ ಸ್ವಾಮಿ ಅಂಡ್ ಕಂಪನಿ, ಮೈಸೂರು ರವರಿಗೆ ಹಾಗೂ ಬಿ.ಶ್ರೀನಿವಾಸ ಪ್ರಸಾದ ಇವರುಗಳಿಂದ ಆದಾಯ ತೆರಿಗೆ ಹಾಗೂ ವಾಣಿಜ್ಯ ತೆರಿಗೆ ರಿಟರ್ನ್ಸ್‌ಗಳ ಸಲ್ಲಿಕೆ ಹಾಗೂ ಇ–ಟಿ.ಡಿ.ಎಸ್ ಸಲಹೆಗಾರರನ್ನಾಗಿ ನೇಮಿಸಿದ ಬಾಬ್ತು ಪ್ರತಿ ಮಾಹೆ ರೂ.15,000/– ಗಳಂತೆ ಒಟ್ಟು ರೂ.3,00,000/–ಗಳನ್ನು ಪಾವತಿಸಲಾಗಿರುತ್ತದೆ. ಹಾಗೂ 2022–23ನೇ ಸಾಲಿನ ವಾರ್ಷಿಕ ಹಣಕಾಸು ತಃಖ್ತೆಗಳ ತಯಾರಿಕೆ ಕಾರ್ಯ ನಿರ್ವಹಿಸಿದ ಬಾಬ್ತು ಮೆ: ಮಹಾವೀರ ಸಿಂಘವಿ ಅಸೋಸಿಯಟ್ಸ್, ಮೈಸೂರು ಇವರಿಗೆ ರೂ.4,95,600/– ಗಳನ್ನು ಸೇರಿದಂತೆ ಒಟ್ಟು ರೂ.7,95,600/–ಗಳನ್ನು ಪಾವತಿಸಲಾಗಿರುತ್ತದೆ. ಬಿಲ್ಲುಗಳಲ್ಲಿ

ದಾಖಲಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಅಥವಾ ಕುಲಾಧಿಪತಿಗಳಿಂದ ಅನುಮೋದನೆಯಾಗಿರುವ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:101/01.01.2025ನ್ನು ನೀಡಲಾಗಿತ್ತು. ಇದಕ್ಕೆ ವಿಶ್ವವಿದ್ಯಾನಿಲಯದವರು ಯಾವುದೇ ವಿವರವನ್ನು ಹಾಜರುಪಡಿಸಿರುವುದಿಲ್ಲ. ರೂ.7,95,600/–ಗಳನ್ನು ಪಾವತಿ ವಿವರಗಳನ್ನು **ಅನುಬಂಧ–39 ರಲ್ಲಿ** ನೀಡಲಾಗಿದೆ.

2022–23ನೇ ಸಾಲಿನ ವಾರ್ಷಿಕ ಹಣಕಾಸು ತಃಖ್ತೆಗಳ ತಯಾರಿಕೆ ಕಾರ್ಯ ನಿರ್ವಹಿಸಿದ ಬಾಬ್ತು ಪಾವತಿಗೆ ಸಂಬಂಧಿಸಿದಂತೆ ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿದೆ.

1. 2022–23ನೇ ಸಾಲಿನ ಲೆಕ್ಕಪರಿಶೋಧನೆಗೊಂಡ ಗಣಕೀಕರಣದ ವಾರ್ಷಿಕ ಹಣಕಾಸು ತಃಖ್ತೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.

2. 2022–23ನೇ ಸಾಲಿನ ಲೆಕ್ಕಗಳನ್ನು ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ಶಾಸನಬದ್ಧ ಲೆಕ್ಕಪರಿಶೋಧನೆ ಮಾಡಲಾಗಿದ್ದು, ಲೆಕ್ಕಪರಿಶೋಧನೆಗೆ ನೀಡಿರುವ ವಾರ್ಷಿಕ ಲೆಕ್ಕಗಳು ಸ್ವೀಕೃತಿ ಮತ್ತು ಪಾವತಿ ತಃಖ್ತೆ, ಆದಾಯ ಮತ್ತು ವೆಚ್ಚದ ತಃಖ್ತೆ ಹಾಗೂ ಸಮತೋಲನಾ ಪಟ್ಟಿಯನ್ನು ನೀಡದೆಯೇ ಬ್ಯಾಂಕ್ ಖಾತೆವಾರು ಸ್ವೀಕೃತಿ ಮತ್ತು ವೆಚ್ಚಗಳೆಂದು ವರ್ಗೀಕರಿಸಿ ಅದನ್ನು ವಾರ್ಷಿಕ ಲೆಕ್ಕಗಳೆಂದು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುತ್ತಾರೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿನಿಯಮ–1992ರ ಕಲಂ–27ರಲ್ಲಿ ವಿಶ್ವವಿದ್ಯಾನಿಲಯವು ತನ್ನ ವಾರ್ಷಿಕ ಲೆಕ್ಕಗಳನ್ನು ಹಾಗೂ ಸಮತೋಲನಾ ಪಟ್ಟಿಯನ್ನು ತಯಾರಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಹೀಗಾಗಿ ಮೆ.ಎರ್ರಿಸ್ವಾಮಿ ಅಂಡ್ ಕಂಪನಿ, ಮೈಸೂರುರವರಿಗೆ ಯಾವ ಬಗೆಯ ಲೆಕ್ಕಪರಿಶೋಧನೆ ಮಾಡಲು ಹಾಗೂ ಯಾವ ವಾರ್ಷಿಕ ಹಣಕಾಸು ತಃಖ್ತೆಗಳ ತಯಾರಿಕೆ ಕಾರ್ಯಕ್ಕೆ ಶುಲ್ಕ ಪಾವತಿಸಲಾಗಿದೆ ಎಂಬುದು ಸ್ಪಷ್ಟವಾಗುವುದಿಲ್ಲ.

3. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಅಧಿನಿಯಮ 1999 ಹಾಗೂ ನಿಯಮಗಳು, 2000ರ ಪ್ರಕಾರ ರೂ.ಒಂದು ಲಕ್ಷ ಮೀರಿದ ಸರಕು/ ಸೇವೆಯನ್ನು ಟೆಂಡರ್ ಪ್ರಕ್ರಿಯೆ ಮೂಲಕ ಪಡೆಯಬೇಕಾಗಿರುತ್ತದೆ. ಆದರೆ ಸದರಿ ಅಧಿನಿಯಮದ ನಿರ್ದೇಶನಗಳನ್ನು ಉಲ್ಲಂಘಿಸಿ ಯಾವುದೇ ಟೆಂಡರ್ ಕರೆಯದೆಯೇ ಸನ್ನದು ಲೆಕ್ಕಿಗರ ಸೇವೆಯನ್ನು ಪಡೆದುಕೊಂಡು ರೂ.4,95,600/– ಗಳಷ್ಟು ಬೃಹತ್ ಮೊತ್ತವನ್ನು ಪಾವತಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳಿಗೆ ಸೂಕ್ತ ಸ್ಪಷ್ಟೀಕರಣ ಹಾಗೂ ನೇಮಕಾತಿ ಪ್ರಕ್ರಿಯೆ ಕಡತ ಮತ್ತು ವಿಚಾರಣಾ ಪತ್ರದಲ್ಲಿ ಕೋರಿರುವ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ನೀಡುವವರೆಗೆ ಸನ್ನದ್ದು ಲೆಕ್ಕಪರಿಶೋಧಕರಿಗೆ ಪಾವತಿಸಿರುವ ಮೊತ್ತ **ರೂ.7,95,600/– ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.**

23.19 ಟೆಂಡರ್ ಪ್ರಕ್ರಿಯೆ ನಡೆಸದೆ ರೂ.68,31,984/–ಗಳ ಮೌಲ್ಯದ ರಾಸಾಯನಿಕ ವಸ್ತುಗಳನ್ನು ಖರೀದಿಸಿರುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2023–24ನೇ ಸಾಲಿನಲ್ಲಿ ವಿಜ್ಞಾನದ ವಿಭಾಗಗಳ ಪ್ರಾಯೋಗಿಕ ತರಗತಿಗಳು & ಪರೀಕ್ಷೆಗಳಿಗೆ ಅಗತ್ಯವಾದ ರಾಸಾಯನಿಕ ವಸ್ತುಗಳನ್ನು ದರಪಟ್ಟಿ (ಕೊಟೇಷನ್) ಮೂಲಕ ಖರೀದಿಸಿ ವಿವಿಧ ಧನಾದೇಶಗಳ ಮೂಲಕ ಒಟ್ಟಾರೆ ರೂ.68,31,984/–ಗಳನ್ನು **ಅನುಬಂಧ–40**ರಲ್ಲಿ ವಿವರಿಸಿರುವಂತೆ ಸರಬರಾಜು ಸಂಸ್ಥೆಗಳಿಗೆ ಪಾವತಿಸಿರುವುದು ಲೆಕ್ಕಪರಿಶೋಧನೆಯಿಂದ ಕಂಡುಬಂದಿರುತ್ತದೆ.

ಶೈಕ್ಷಣಿಕ ವರ್ಷದಲ್ಲಿ ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಎಲ್ಲಾ ಪಾಠ ಪ್ರವಚನ ತರಗತಿಗಳು, ಪರೀಕ್ಷಾ ಚಟುವಟಿಕೆಗಳೆಲ್ಲವೂ ನಿರೀಕ್ಷಿತ ಮತ್ತು ಪೂರ್ವ ನಿರ್ಧಾರಿತವಾದವುಗಳೇ ಆಗಿರುತ್ತವೆ. ಕರಾಮುವಿಯಲ್ಲಿ 2023–24ನೇ ಸಾಲಿನಲ್ಲಿ ಖರೀದಿಸಿರುವ ರಾಸಾಯನಿಕ ವಸ್ತುಗಳ ಒಟ್ಟಾರೆ ಮೌಲ್ಯವು ರೂ.68,31,984/–ಗಳಾಗಿರುವುದರಿಂದ ಕೆ.ಟಿ.ಪಿ.ಪಿ ಕಾಯ್ದೆ 1999 ಮತ್ತು ನಿಯಮಗಳು 2000 ಪ್ರಕಾರ ಟೆಂಡರ್ ಮೂಲಕ ಖರೀದಿಸಬೇಕಿತ್ತು, ಆದರೆ ಟೆಂಡರ್ ಪ್ರಕ್ರಿಯೆ ನಡೆಸದೆ ಕೇವಲ ದರಪಟ್ಟಿ ಮೂಲಕ ಖರೀದಿಸುವ ಮೂಲಕ ಪಾರದರ್ಶಕ ಕಾಯ್ದೆ & ನಿಯಮವನ್ನು ಉಲ್ಲಂಘಿಸಲಾಗಿರುತ್ತದೆ. ಈ ಕುರಿತು ಸ್ಪಷ್ಟೀಕರಣ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:**44/22.11.2024**ರಲ್ಲಿ ಕೋರಲಾಗಿದ್ದು, ವಿಶ್ವವಿದ್ಯಾನಿಲಯದವರು ರಾಸಾಯನಿಕ ವಸ್ತುಗಳನ್ನು ನಿಯಮಾನುಸಾರ ರಾಜ್ಯಪತ್ರ ಸಂಖ್ಯೆ:ಸಂವ್ಯಶಾಇ 25 ಶಾಸನ 2019, ಬೆಂಗಳೂರು ದಿನಾಂಕ:27–04–2020ರ ಅಧ್ಯಾಯ–2ರ ಉಪಬಂಧಗಳಲ್ಲಿ "4 ಅನ್ವಯಿಸುವಿಕೆ ಅಪವಾದಗಳು (ಇ) ಸಂಗ್ರಹಣೆ ಮಾಡಿಕೊಳ್ಳಬೇಕಾದ ಸರಕುಗಳ ಅಥವಾ ಸೇವೆಗಳ ಮೌಲ್ಯವು (i) ಸರ್ಕಾರದ ಇಲಾಖೆಗಳ ಮೂಲಕವಾಗಿದ್ದರೆ ಐದು ಲಕ್ಷ ರೂಪಾಯಿಗಳನ್ನು ಮೀರತಕ್ಕದ್ದಲ್ಲ ಎಂಬ ಅಂಶದನ್ವಯ ರೂ.1.00 ರಿಂದ 5.00 ಲಕ್ಷದವರೆಗೆ ದರಪಟ್ಟಿ ಆಹ್ವಾನದ ಮೊತ್ತವನ್ನು ಹೆಚ್ಚಿಸಿಕೊಳ್ಳಲು ನೀಡಿದ ಆದೇಶದನ್ವಯ", ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದಿಂದ ಹೊರಡಿಸಿದ ಸ್ಥಾಯಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಜಿಎಲ್–2/ಇತರೆ 2009–10 ದಿ:17.12.2020ರಲ್ಲಿ ರೂ.1.00 ಲಕ್ಷದವರೆಗಿನ ವಿನಾಯಿತಿಯನ್ನು ಉಪಖಂಡ (ii)ರಲ್ಲಿ ಕೈಬಿಟ್ಟಿರುವುದರಿಂದ ರೂ.5.00 ಲಕ್ಷದವರೆಗಿನ ಸಂಗ್ರಹಣೆಗಳಿಗೆ ದರಪಟ್ಟಿ ಮೂಲಕ ಕ್ರಮವಹಿಸಲು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬಂದಂತೆ ಆದೇಶಿಸಲಾಗಿದೆ. ಆದರಂತೆ ದರಪಟ್ಟಿ ಆಹ್ವಾನಿಸಿ ಕನಿಷ್ಠ ದರ ನಮೂದಿಸಿದ ಸಂಸ್ಥೆಗಳಿಂದ ಖರೀದಿಸಲಾಗಿದೆ ಎಂದು ಅನುಪಾಲನಾ ವರದಿ ಸಲ್ಲಿಸಿರುತ್ತಾರೆ. ಆದರೆ ತಿದ್ದುಪಡಿಯಲ್ಲಿ ವಿನಾಯಿತಿಯಿರುವುದು ಇ–ಟೆಂಡರ್ ಪ್ರಕ್ರಿಯೆಯಿಂದ ಮಾತ್ರವೇ ಹೊರತು ಟೆಂಡರ್ ಪ್ರಕ್ರಿಯೆಯಿಂದ ವಿನಾಯಿತಿ ಇರುವುದಿಲ್ಲ. ಅಲ್ಲದೆ 2023–24ನೇ ಸಾಲಿನಲ್ಲಿ ಖರೀದಿಸಿರುವ ರಾಸಾಯನಿಕ ವಸ್ತುಗಳ ಮೊತ್ತ **ರೂ.68,31,984/–ಗಳಿದ್ದು, ವಿಶ್ವವಿದ್ಯಾನಿಲಯದಿಂದ ಯಾವುದೇ ಅನುಪಾಲನಾ ವರದಿ ನೀಡಿರುವುದಿಲ್ಲ/ಉತ್ತರ ಸಮರ್ಥನೀಯವಾದುದಾಗಿರುವುದಿಲ್ಲ**. ಆದ್ದರಿಂದ ಪಾರದರ್ಶಕ ನಿಯಮಗಳನ್ನು ಉಲ್ಲಂಘಿಸಿ ರಾಸಾಯನಿಕ ವಸ್ತುಗಳನ್ನು ಖರೀದಿಸಿರುವ **ಮೊತ್ತ ರೂ.68,31,984/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

23.20 ವಾಹನಗಳಿಗೆ ಹೊಸ ಟೈಯರ್ ಖರೀದಿ ಪೂರ್ವದಲ್ಲಿ ಮತ್ತು ನಂತರದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ದೃಢೀಕರಣ ಪತ್ರ ಪಡೆಯದೆ ರೂ.9,92,206/–ಗಳನ್ನು ಪಾವತಿಸಿರುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಸಾಮಾನ್ಯ ನಿಧಿ ವೋಚರ್‌ಗಳನ್ನು ಪರಿಶೀಲಿಸಲಾಗಿ ವಾಹನಗಳಿಗೆ ಹೊಸ ಟೈಯರ್ ಖರೀದಿ ಹಾಗೂ ಬಿಡಿಭಾಗಗಳನ್ನು ಅಳವಡಿಸಿ ರಿಪೇರಿ ಸಂಬಂಧ ರೂ.**9,92,206**/–ಗಳ ವೆಚ್ಚ ಭರಿಸಲಾಗಿದೆ. ವಿವರಗಳನ್ನು **ಅನುಬಂಧ–41ರಲ್ಲಿ** ನೀಡಲಾಗಿದೆ. ಈ ವೆಚ್ಚಕ್ಕೆ ಸಂಬಂಧಿಸಿದಂತೆ ಸಾರಿಗೆ ಇಲಾಖೆಯಿಂದ (RTO) ಪಡೆದ ಪ್ರಮಾಣ ಪತ್ರವನ್ನು ಹಾಗೂ ಹೊಸ ಟೈರುಗಳನ್ನು ಖರೀದಿಸಲಾಗಿರುವುದಕ್ಕೆ ಸಂಬಂಧಿಸಿದಂತೆ ದಾಸ್ತಾನು ವಹಿ, ವಾಹನಗಳ ನಿರ್ವಹಣೆ, ದುರಸ್ಥಿ ಹಾಗೂ ವಾಹನಗಳಿಗೆ ಹೊಸ ಟೈಯರ್ ಖರೀದಿಸಿ ಅಳವಡಿಸಿರುವ ವೆಚ್ಚ ಭರಿಸುವ ಪೂರ್ವದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಂದ ದುರಸ್ಥಿಯ ಮುನ್ನ ಹಾಗೂ ನಂತರ ದೃಢೀಕರಣವನ್ನು ಪಡೆಯಬೇಕಾಗಿದ್ದು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರವನ್ನು ಹಾಜರುಪಡಿಸುವಂತೆ ವಿಚಾರಣೆ ಪತ್ರ ಸಂಖ್ಯೆ:45/26.11.2024 ಮತ್ತು 68/16.12.2024ರಲ್ಲಿ ಕೋರಲಾಗಿ, ವಿಶ್ವವಿದ್ಯಾನಿಲಯದವರು ವಾಹನಗಳ ಅಧಿಕೃತ ಕಂಪನಿಯ ಸ್ಥಳೀಯ ಸರಬರಾಜು ಸಂಸ್ಥೆಗಳಿಂದ ಖರೀದಿಸಲಾಗಿದ್ದು, ಸಂದರ್ಭನುಸಾರ ವಾಹನವನ್ನು ಸುಸ್ಥಿತಿಯಲ್ಲಿಡಲು ಸದರಿ ಅಧಿಕೃತ ಸಂಸ್ಥೆಗಳ ಸರ್ವಿಸ್ ಸೆಂಟರ್‌ಗಳಿಂದಲೆ ಹೊಸ ಟೈಯರ್ ಖರೀದಿ ಹಾಗೂ ಸರ್ವೀಸ್ ಮಾಡಿಸಲಾಗಿದೆ ಹಾಗೂ ಅನೇಕ ಬಾರಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮೈಸೂರು ರವರಿಗೆ ಪತ್ರ ಬರೆದಿದ್ದಾಗ ರಿಪೇರಿ/ಸರ್ವೀಸ್ ಕಾರ್ಯಗಳನ್ನು ವಾಹನಗಳ ಅಧಿಕೃತ ಸಂಸ್ಥೆಗಳಿಂದಲೇ ನೆರವೇರಿಸುತ್ತಿರುವುದರಿಂದ ದೃಢೀಕರಣ ಅಗತ್ಯವಿಲ್ಲವೆಂದು ಮೌಖಿಕವಾಗಿ ತಿಳಿಸಿರುತ್ತಾರೆ ಎಂದು ಹಾಗೂ ಕರ್ನಾಟಕ ಸರ್ಕಾರಿ ಆದೇಶ ಸಂಖ್ಯೆ: ಎಫ್.ಡಿ 6 ಟಿಸಿಇ, ದಿನಾಂಕ:15.12.1992 ರನ್ವಯ ನಿಗದಿಪಡಿಸಲಾಗಿರುವ ಕಿಲೋ ಮೀಟರ್‌ಗಳನ್ನು ಕ್ರಮಿಸಿದ ಸಂದರ್ಭದಲ್ಲಿ ವಾಹನಗಳಿಗೆ ಸಂಧರ್ಭಾನುಸಾರ ಅಗತ್ಯ ಟೈರುಗಳನ್ನು ವಾಹನಗಳನ್ನು ವಾಹನಗಳ ಅಧಿಕೃತ ಸಂಸ್ಥೆಗಳಿಂದಲೇ ಅಳವಡಿಸಿಕೊಳ್ಳಲಾಗಿದೆ ಹಾಗೂ ಆಡಿಟ್ ಸೂಚನೆಯಂತೆ, ವಾಹನಗಳ ರಿಪೇರಿ/ಸರ್ವೀಸ್ ಇತ್ಯಾದಿ ಕಾರ್ಯಗಳನ್ನು ನೆರವೇರಿಸುವ ಸಂಬಂಧ ಆರ್.ಟಿ.ಓ ಪರಿಶೀಲನಾ ವರದಿಯ ದೃಢೀಕರಣವನ್ನು ಪ್ರಸಕ್ತ ಸಾಲಿನಿಂದ ಪಡೆಯಲಾಗುತ್ತಿದೆ ಎಂದು ಅನುಪಾಲನಾ ವರದಿ ಸಲ್ಲಿಸಿರುತ್ತಾರೆ.

ಆದರೆ ಸರ್ಕಾರಿ ವ್ಯವಹರಣೆಗಳಲ್ಲಿ ಮೌಖಿಕ ಆದೇಶಗಳು ಮಾನ್ಯವಾಗದ ಕಾರಣ ಹಾಗೂ ಪ್ರಸಕ್ತ ಸಾಲಿನಲ್ಲಿ ವಾಹನಗಳ ರಿಪೇರಿ/ಸರ್ವೀಸ್ ಇತ್ಯಾದಿ ಕಾರ್ಯಗಳನ್ನು ನೆರವೇರಿಸುವ ಸಂಬಂಧ ಆರ್.ಟಿ.ಓ ಪರಿಶೀಲನಾ ವರದಿಯ ದೃಢೀಕರಣವನ್ನು ಪಡೆಯದ ಕಾರಣ ವಿಶ್ವವಿದ್ಯಾನಿಲಯದ ವತಿಯಿಂದ ನೀಡಿರುವ ಉತ್ತರವು ಸಮರ್ಥನೀಯವಾಗಿರುವುದಿಲ್ಲ. ಆದ್ದರಿಂದ ವಾಹನಗಳಿಗೆ ರಿಪೇರಿ/ಸರ್ವೀಸ್ ಕಾರ್ಯ ಹಾಗೂ ಹೊಸ ಟೈಯರ್ ಖರೀದಿಸಿ ವೆಚ್ಚ ಭರಿಸಿರುವ ಒಟ್ಟು ಮೊತ್ತ **ರೂ.9,92,206/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

23.21 ವೈದ್ಯಕೀಯ ವೆಚ್ಚ ಮರುಪಾವತಿಸುವಾಗ ಮಾರುಕಟ್ಟೆ ದರಕ್ಕಿಂತ ಹೆಚ್ಚುವರಿಯಾಗಿ ರೂ.8,154/–ಗಳನ್ನು ಪಾವತಿಸಿರುವುದು.

ಶ್ರೀ. ಶಿವಕುಮಾರ, ಅಧೀಕ್ಷಕರು, ಇಂದ ಮತ್ತು ಗೆ ವಿಭಾಗ, (ಸಾಮಾನ್ಯ) ಕರಾಮುವಿ ಇವರಿಗೆ ವೈದ್ಯಕೀಯ ವೆಚ್ಚ ಮರುಪಾವತಿ ವೋಚರ್ ಸಂಖ್ಯೆ:91/16–05–2023, ಧನಾದೇಶ ಸಂಖ್ಯೆ:925258/16–05–2023ರ ಮೂಲಕ ರೂ.16,380/– ಗಳನ್ನು ಮರುಪಾವತಿಸಿದೆ.

ಮೇಲ್ಕಂಡ ವೋಚರ್‌ಗಳನ್ನು ಪೂರಕ ದಾಖಲೆಗಳೊಂದಿಗೆ ಪರಿಶೋಧಿಸಲಾಗಿ ವೈದ್ಯರ ವೈದ್ಯಕೀಯ ಸಲಹಾ ಪಟ್ಟಿಯಂತೆ ಶ್ರೀ ರಾಜ ರಾಜೇಶ್ವರಿ ಮೆಡಿಕಲ್ಸ್ ಮತ್ತು ಜನರಲ್ಸ್, ಮೈಸೂರು ಇವರ ಅಂಗಡಿಯ ಬಿಲ್ಲು ಸಂಖ್ಯೆ:7010/21–03–2023 ರಲ್ಲಿ Glycebind M 27 ಸ್ಟ್ರೀಪ್ ಗಳಿಗೆ ಪ್ರತಿ ಸ್ಟ್ರೀಪ್‌ಗೆ ರೂ.330/– ರಂತೆ ರೂ.8,910/– ಗಳನ್ನು ಮರುಪಾವತಿಸಲಾಗಿದೆ. ಅಂಗಡಿಯವರ ಬಿಲ್ಲು ಕೈಬರಹದಲ್ಲಿ ಇದ್ದಿದ್ದರಿಂದ ಮಾರುಕಟ್ಟೆಯಲ್ಲಿ ದರವನ್ನು ಪರಿಶೀಲಿಸಿದಾಗ 1 ಸ್ಟ್ರೀಪ್ ಗೆ ರೂ.28/– ರಂತೆ 27 ಸ್ಟ್ರೀಪ್ ಗಳಿಗೆ ರೂ.756/–ಗಳನ್ನು ಮಾತ್ರ ಪಾವತಿಸಬೇಕಾಗಿರುತ್ತದೆ. ಹೀಗೆ ಮಾರುಕಟ್ಟೆ ದರಕ್ಕಿಂತ ರೂ.8,154/–ಗಳನ್ನು ಹೆಚ್ಚುವರಿಯಾಗಿ ಮರುಪಾವತಿಸಿರುವುದನ್ನು ಸಂಬಂಧಿಸಿದವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿ, ಮೂಲ ಜಮಾ ಚಲನ್‌ನ್ನು, ಮತ್ತು ಬ್ಯಾಂಕ್ ತಃಖ್ತೆಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:130/20–01–2025 ರಂದು ನೀಡಲಾಗಿತ್ತು. ಆದರೆ ವಿಶ್ವವಿದ್ಯಾನಿಲಯದವರು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಆದುದರಿಂದ ಹೆಚ್ಚುವರಿಯಾಗಿ ವೈದ್ಯಕೀಯ ವೆಚ್ಚ ಮರುಪಾವತಿಸಿರುವ **ರೂ.8,154/–ಗಳನ್ನು ಸಂಬಂಧಿಸಿದವರಿಂದ ವಸೂಲಿಸಲು ಸೂಚಿಸಿದೆ.**

23.22 ಪ್ರಶ್ನೆಪತ್ರಿಕೆ ಮುದ್ರಕರಿಗೆ ಮುದ್ರಣ ವೆಚ್ಚ ಪಾವತಿಯಲ್ಲಿ ಎಂ.ಓ.ಯುನ ಅನುಬಂಧ 2 ರ ಕ್ರ.ಸಂ. 15ನ್ನು ಉಲ್ಲಂಘಿಸಿ ವಿಶ್ವವಿದ್ಯಾನಿಲಯಕ್ಕೆ ರೂ.27,92,302/–ಗಳ ಆರ್ಥಿಕ ನಷ್ಟ ಉಂಟಾಗಿರುವುದು.

ಮುಕ್ತ ವಿಶ್ವವಿದ್ಯಾನಿಲಯದ ಪ್ರಶ್ನೆ ಪತ್ರಿಕೆ ಮುದ್ರಣಕ್ಕೆ ಸಂಬಂಧಿಸಿದಂತೆ ವಿ.ವಿಯು ಮೆ.ವೈ.ಎಸ್ ಹೈಟೆಕ್ ಸೆಕ್ಯೂರ್ ಪ್ರಿಂಟ್ (ಪ್ರೈ) ಲಿಮಿಟೆಡ್, ಹೈದರಬಾದ್‌ರವರೊಂದಿಗೆ ಮಾಡಿಕೊಂಡಿರುವ ಕರರಾನ್ನು ಒಪ್ಪಂದವನ್ನು ಪರಿಶೀಲಿಸಿದ್ದಾಗ ಎಂ.ಓ.ಯುನ ಅನುಬಂಧ 2 ರ ಕ್ರ.ಸಂ. 15 ರಲ್ಲಿ ಮುದ್ರಣಕ್ಕೆ ಬೇಕಾದ 60 GSM Cream wove paper ನ ಖರೀದಿಯಲ್ಲಿ "subject to a minimum of 1,000 pages for jobs of quantity less than 1,000", ಎಂಬ ಷರತ್ತಿರುತ್ತದೆ. ಆದರೆ ಮುದ್ರಕರು ಪ್ರಶ್ನೆಪತ್ರಿಕೆ ಮುದ್ರಣ ಮಾಡಿ ಸರಬರಾಜು ಮಾಡಿರುವ ಬಿಲ್ಲಿನಲ್ಲಿ ಬೇಡಿಕೆ ಪಟ್ಟಿಯಲ್ಲಿನ ಬೇಡಿಕೆಯನ್ನು ಒಟ್ಟಾರೆಯಾಗಿ (IN TOTAL) ಪರಿಗಣಿಸದೇ, ಪ್ರತ್ಯೇಕವಾಗಿ ಒಂದು ಪ್ರಶ್ನೆಪತ್ರಿಕೆ ಬೇಡಿಕೆಯನ್ನು 1000ಕ್ಕಿಂತ ಕಡಿಮೆ ಎಂದು ಪರಿಗಣಿಸಿ ಪ್ರತಿ ಪ್ರಶ್ನೆಪತ್ರಿಕೆಯ ಬೇಡಿಕೆಯ ಪರಿಮಾಣವನ್ನು 1000ಕ್ಕೆ ಮಾರ್ಪಡು ಮಾಡಿಕೊಂಡಿರುವುದರಿಂದ **ಅನುಬಂಧ–42ರಲ್ಲಿ** ವಿವರಿಸಿರುವಂತೆ ವಿಶ್ವವಿದ್ಯಾನಿಲಯಕ್ಕೆ GST **ಒಳಗೊಂಡಂತೆ ರೂ.27,92,302/–ಗಳ ಆರ್ಥಿಕ ನಷ್ಟ ಉಂಟಾಗಿರುವುದು** ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ಸದರಿ ಪಾವತಿಗೆ ಸಂಬಂಧಿಸಿದಂತೆ ಸೂಕ್ತ

ವಿವರಣೆಯನ್ನು ನೀಡುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 117/15.01.2025ರಲ್ಲಿ ಕೋರಲಾಗಿತ್ತು. ಅದರಂತೆ ದಿನಾಂಕ:28.01.2025 ರಂದು ನೀಡಿರುವ ಅನುಪಾಲನಾ ವರದಿಯಂತೆ, ಹಾಲಿ ಮುದ್ರಕರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ಮಾನ್ಯ ಕುಲಪತಿಗಳು, ಮಾನ್ಯ ಕುಲಸಚಿವರು ಮತ್ತು ಮಾನ್ಯ ಕುಲಸಚಿವರು (ಪರೀಕ್ಷಾಂಗ)ರವರು ಪರಿಶೀಲನೆ ಮಾಡಿಕೊಂಡಿದ್ದು, ಸದರಿ ಒಡಂಬಡಿಕೆಯು ದಿನಾಂಕ:27.07.2025ರಂದು ಮುಕ್ತಾಯಗೊಳ್ಳುತ್ತದೆ ಹಾಗೂ ಮುಂದಿನ ಅವಧಿಗೆ ಕರಾರು ಒಪ್ಪಂದವನ್ನು ಮಾಡುವ ಸಂದರ್ಭದಲ್ಲಿ, ಲೆಕ್ಕಪರಿಶೋಧನೆಯಲ್ಲಿ ಉಲ್ಲೇಖಿಸಿರುವ ಅಂಶಗಳನ್ನು ಪರಿಗಣಿಸಿ ಸೂಕ್ತ ಕ್ರಮವಹಿಸಲಾಗುವುದು ಎಂದು ಅನುಪಾಲನಾ ವರದಿ ಸಲ್ಲಿಸಿರುತ್ತಾರೆ.

ವಿಶ್ವವಿದ್ಯಾನಿಲಯವು ನೀಡಿರುವ ಅನುಪಾಲನಾ ವರದಿಯನ್ನು ಗಮನಿಸಿದಾಗ ಮೆ: ಹೈಟೆಕ್‌ಸೆಕ್ಯೂರ್ ಪ್ರಿಂಟ್ ಪ್ರೈ.ಲಿ ಹೈದರಾಬಾದ್‌ರರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವಾಗ ಸೂಕ್ಷ್ಮತೆಗಳನ್ನು ಪರಿಶೀಲಿಸದೆ ಇರುವುದು ವ್ಯಕ್ತವಾಗುತ್ತದೆ. ಆದ್ದರಿಂದ ಮೇಲೆ ವಿವರಿಸಿರುವಂತೆ ಹೆಚ್ಚುವರಿಯಾಗಿ ಬಳಸದ ಹಾಳೆಗಳಿಗೆ ಪಾವತಿಸಿರುವ ಮೊತ್ತ **ರೂ.27,92,302/-ಗಳನ್ನು** ಸಂಬಂಧಿಸಿದ ಪರೀಕ್ಷಾ ವಿಭಾಗದವರಿಂದ **ವಸೂಲಿಸಲು** ಹಾಗೂ ಇವರ ವಿರುದ್ಧ ಆಡಳಿತಾತ್ಮಕ ಕ್ರಮಕೈಗೊಳ್ಳಲು ಸೂಚಿಸಿದೆ.

23.23 ವಿಶ್ವವಿದ್ಯಾನಿಲಯದಲ್ಲಿ ಸರ್ಕಾರವು ಒದಗಿಸಿರುವ UUCMS ತಂತ್ರಾಂಶವನ್ನು ಬಳಸಿಕೊಳ್ಳದೇ ಮೆ. ಕಿಯೋನಿಕ್ಸ್, ಬೆಂಗಳೂರು ಇವರಿಂದ ಪ್ರವೇಶಾತಿಯಿಂದ ಪರೀಕ್ಷಾವರೆಗಿನ ಕಾರ್ಯಗಳಿಗೆ ತಂತ್ರಾಂಶವನ್ನು ಸಿದ್ದಪಡಿಸಿಕೊಂಡು ನಿರ್ವಹಣಾ ವೆಚ್ಚ ರೂ.47,61,040/- ಗಳನ್ನು ಪಾವತಿಸಿರುವುದು.

ಉನ್ನತ ಶಿಕ್ಷಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಇವರ ಪತ್ರ ಸಂಖ್ಯೆ:ಇಡಿ/35/ಇಜಿಒವಿ/2020, ದಿನಾಂಕ:27.07.2021, ದಿನಾಂಕ:15.12.2022 ಹಾಗೂ ದಿನಾಂಕ:10.04.2023 ಗಳಲ್ಲಿ UUCMS ತಂತ್ರಾಂಶದ ಎಲ್ಲಾ module ಗಳನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಲು ಮತ್ತು ಯಾವುದೇ ಹೊಸ ತಂತ್ರಾಂಶ ಖರೀದಿ, ಅಭಿವೃದ್ಧಿ ಮತ್ತು ಲೈಸೆನ್ಸ ನವೀಕರಣಗಳನ್ನು ಕೈಗೆತ್ತಿಕೊಳ್ಳಬಾರದೆಂದು ಹಾಗೂ UUCMS ತಂತ್ರಾಂಶದಲ್ಲಿ 10 module ಗಳಿದ್ದು, ಹೊಸ ಶಿಕ್ಷಣ ನೀತಿ ರಡಿಯಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳಿಗೆ ಅನ್ವಯವಾಗುವಂತೆ Admission, Academic & Exam Module ಗಳನ್ನು ಒದಗಿಸಲಾಗಿದೆ. ದಿನಾಂಕ:23.03.2023 ರಂದು Financial Planning and Monitoring, Affiliation Module, Human Resource Module and Student Support System Module ಗಳನ್ನು ಲೋಕಾರ್ಪಣೆ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ Module, ಗಳನ್ನು ಕಡ್ಡಾಯವಾಗಿ ಬಳಸಬೇಕೆಂದು ನಿರ್ದೇಶಿಸಲಾಗಿದೆ. ಹಾಗೂ ಮೇಲಿನ ಆದೇಶವನ್ನು ಉಲ್ಲಂಘಿಸಿದಲ್ಲಿ ಸಂಬಂಧಪಟ್ಟ ಅಧಿಕಾರಿಯು ನೇರ ಹೊಣೆಯಾಗಿರುತ್ತಾರೆ ಮತ್ತು ವೆಚ್ಚಗಳನ್ನು ಭರಿಸಿದ್ದಲ್ಲಿ ಸದರಿಯವರಿಂದಲೇ ಭರಿಸಲಾಗಿವುದು ಎಂದು ನಿರ್ದೇಶಿಸಿರುತ್ತಾರೆ.

ಸಾಮಾನ್ಯ ನಿಧಿ ಹೆಚ್.ಡಿ.ಎಫ್.ಸಿ. ಖಾತೆಯ ಜುಲೈ-2023 ಮಾಹೆಯ ವೌಚರ್ ಸಂಖ್ಯೆ:11, ಧನಾದೇಶ ಸಂಖ್ಯೆ:000055 ದಿನಾಂಕ:27.07.2023 ರಲ್ಲಿ ವಿಶ್ವವಿದ್ಯಾನಿಲಯದ ಪ್ರವೇಶಾತಿ ಹಾಗೂ ಪರೀಕ್ಷಾ ಕಾರ್ಯಗಳಿಗೆ ಅಗತ್ಯವಾದ Admission to Examination End to End Software ನ್ನು ಮೆ. ಕಿಯೋನಿಕ್ಸ ಬೆಂಗಳೂರು

ರವರಿಂದ ಅಭಿವೃದ್ಧಿಪಡಿಸಿ ರೂ.47,61,040/–ಗಳನ್ನು ಪಾವತಿಸಲಾಗಿದೆ. ಈ ಸಂಬಂಧ ಟೆಂಡರ್ ಕಡತ ಪರಿಶೀಲಿಸಲಾಗಿ ಸದರಿ ತಂತ್ರಾಂಶದ ವಾರ್ಷಿಕ ನಿರ್ವಹಣೆಯ ಕಾರ್ಯಕ್ಕೆ ಒಟ್ಟು ಮೊತ್ತ ರೂ.95,22,080/–ಗಳಿಗೆ ದಿನಾಂಕ:13.01.2023 ರಂದು ಕಾರ್ಯಾದೇಶ ನೀಡಿ ದಿನಾಂಕ:15.02.2023 ರಂದು ಕರಾರು ಒಪ್ಪಂದ ಮಾಡಿಕೊಂಡು ಕರಾರು ಅವಧಿಯು ದಿನಾಂಕ:29–09–2022 ರಿಂದ ಮುಂದಿನ ಒಂದು ವರ್ಷದ ಅಥವಾ ಅವಧಿ ಪೂರ್ಣಗೊಳ್ಳುವ ಸಮಯದಲ್ಲಿ ನಡೆಯುತ್ತಿರುವ ಪ್ರವೇಶಾತಿ ಹಾಗೂ ಪರೀಕ್ಷಾ ಆವೃತ್ತಿಗಳು ಪೂರ್ಣಗೊಳ್ಳುವವರೆಗೆ ಯಾವುದು ನಂತರ ಘಟಿಸುವುದೋ ಅಲ್ಲಿಯವರೆಗೆ ಕಾರ್ಯಾದೇಶ ನೀಡಿ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ. ಸರ್ಕಾರದ ಆದೇಶ ಉಲ್ಲಂಘಿಸಿ ಪ್ರವೇಶಾತಿಯಿಂದ ಪರೀಕ್ಷೆಗಳವರೆಗಿನ ಎಂಡ್ ಟು ಎಂಡ್ ತಂತ್ರಾಂಶ ಅಭಿವೃದ್ಧಿಸಿಕೊಂಡಿರುವುದಕ್ಕೆ ಉನ್ನತ ಶಿಕ್ಷಣ ಇಲಾಖೆಯಿಂದ ಅನುಮತಿ ಪಡೆದಿರುವುದಕ್ಕೆ ದಾಖಲೆಗಳನ್ನು ನೀಡುವಂತೆ ಕೋರಿ **ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:206/20.02.2025**ನ್ನು ನೀಡಲಾಗಿತ್ತು. ವಿಶ್ವವಿದ್ಯಾನಿಲಯದ **ನಿರ್ದೇಶಕರು, ಐ.ಟಿ. ಇವರು ನೀಡಿರುವ ಅನುಪಾಲನಾ ವರದಿಯಲ್ಲಿ ಕರಾಮುವಿಯಲ್ಲಿ UUCMS ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ವಿವಿಯ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/190(4)/2021–22, ದಿನಾಂಕ:30.04.2021 ರಂತೆ ಇ–ಆಡಳಿತ ಘಟಕವನ್ನು ರಚಿಸಿದ್ದು** UUCMS ತಂತ್ರಾಂಶದ ಬಗ್ಗೆ E-Governance (UUCMS) ನೋಡಲ್ ಅಧಿಕಾರಿಯು ವಿಶ್ವವಿದ್ಯಾನಿಲಯದಲ್ಲಿ ODL regulation ಪ್ರಕಾರ ವರ್ಷದಲ್ಲಿ 2 ಬಾರಿ ಪ್ರವೇಶಾತಿ ಮಾಡಬೇಕಾಗಿದ್ದು UUCMS ತಂತ್ರಾಂಶ customize ಆಗಿರುವುದಿಲ್ಲ. ಆದ ಕಾರಣ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಹಾಗೂ ಪರೀಕ್ಷಾ ಕಾರ್ಯಗಳಿಗೆ ಅಗತ್ಯವಾದ Admission to Examination End to End Software ನ್ನು ಬಾಹ್ಯ ಸಂಸ್ಥೆಯಿಂದ ಸೇವೆ ಪಡೆಯಲು ದಿನಾಂಕ:01.12.2023ರ 175ನೇ ವ್ಯವಸ್ಥಾಪನಾ ಮಂಡಳಿಯಲ್ಲಿ ತೀರ್ಮಾನದಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ಉತ್ತರಿಸಿರುತ್ತಾರೆ.

ವಿಶ್ವವಿದ್ಯಾನಿಲಯದ ODL regulation ಪ್ರಕಾರ ಪ್ರವೇಶಾತಿ ಹಾಗೂ ಪರೀಕ್ಷಾ ಕಾರ್ಯಗಳಿಗೆ ಸರ್ಕಾರದ ನಿರ್ದೇಶನ ಉಲ್ಲಂಘಿಸಿ ವ್ಯವಸ್ಥಾಪನಾ ಮಂಡಳಿಯಲ್ಲಿ ತೀರ್ಮಾನದಂತೆ ಬಾಹ್ಯ ಸಂಸ್ಥೆಯಿಂದ ಪ್ರವೇಶಾತಿ ಹಾಗೂ ಪರೀಕ್ಷಾ ಕಾರ್ಯಗಳಿಗೆ ಅಗತ್ಯವಾದ ತಂತ್ರಾಂಶನ್ನು ಮೆ.ಕಿಯೋನಿಕ್ಸ್ ಬೆಂಗಳೂರು ರವರಿಂದ ಅಭಿವೃದ್ಧಿಪಡಿಸಿ **ರೂ.47,61,040/– ಗಳನ್ನು ಪಾವತಿಸಿರುವ ಮೊತ್ತ ಆಕ್ಷೇಪಣೆಗೆ ಸೂಚಿಸಿದೆ.**

24. ಪರೀಕ್ಷಕರ ಸಂಭಾವನೆ ಪಾವತಿಗಳು

24.1 ಪರೀಕ್ಷಾ ಕಾರ್ಯ ಹಾಗೂ ಶೈಕ್ಷಣಿಕ ಕಾರ್ಯ ನಿರ್ವಹಿಸಿದ ಬೋಧಕ ವರ್ಗದವರಿಗೆ ನಿಯಮ ಮೀರಿ ರೂ.26,41,943/–ಗಳ ಹೆಚ್ಚುವರಿ ಪ್ರಯಾಣ ಭತ್ಯೆ, ದಿನಭತ್ಯೆ, ಸ್ಥಳೀಯ ಭತ್ಯೆ ಪಾವತಿಸಿರುವುದು.

ಪರೀಕ್ಷಾ ಹಾಗೂ ಉತ್ತರ ಪತ್ರಿಕೆಗಳ ಮೌಲ್ಯಮಾಪನ, ಪ್ರೌಢ ಪ್ರಬಂಧಗಳ ಮೌಲ್ಯಮಾಪನ, ಪ್ರಾಯೋಗಿಕ ಪರೀಕ್ಷೆಗಳ ಮೌಲ್ಯಮಾಪನ ಕಾರ್ಯಗಳಲ್ಲಿ ಹಾಗೂ ಇತರೆ ಪರೀಕ್ಷಾ ಕರ್ತವ್ಯ ನಿರ್ವಹಿಸಿದ ಖಾಯಂ, ಬೋಧಕ/ಬೋಧಕೇತರ ಮತ್ತು ತಾತ್ಕಾಲಿಕ ನೌಕರರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ ಹಾಗೂ ಸರ್ಕಾರದ ಆದೇಶದ

ಮಾರ್ಗಸೂಚಿಗಳನ್ನು ಮೀರಿ ಪ್ರಯಾಣ ಭತ್ಯೆ/ದಿನ ಭತ್ಯೆಗಳನ್ನು ಹಾಗೂ ಇತರೆ ಭತ್ಯೆಗಳನ್ನು ಹೆಚ್ಚುವರಿಯಾಗಿ ನೀಡಿರುವುದು ಲೆಕ್ಕತಪಾಸಣೆಯಲ್ಲಿ ಕಂಡು ಬಂದಿರುತ್ತದೆ. ವಿವರವನ್ನು **ಅನುಬಂಧ–43**ರಲ್ಲಿ *ನೀಡಿದೆ.*

ವಿಶ್ವವಿದ್ಯಾನಿಲಯದ ಅಧಿಕಾರಿ/ಸಿಬ್ಬಂದಿ ವರ್ಗದವರು ಕೂಡ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯಡಿ ಕಾರ್ಯನಿರ್ವಹಿಸುವುದರಿಂದ, ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ–1958 ರ ನಿಯಮ–451ರ ಪರಿಷ್ಕೃತ ಪ್ರಯಾಣ ದರಗಳು ಸರಕಾರದ ಆದೇಶ ಸಂಖ್ಯೆ: ಆಇ 1 ಸನತಿ 2019, ಬೆಂಗಳೂರು, ದಿನಾಂಕ:11.01.2019ರಲ್ಲಿ ನಿರ್ದಿಷ್ಟಪಡಿಸಿರುವ ದರಗಳಿಗನುಗುಣವಾಗಿ ಭತ್ಯೆಗಳನ್ನು ಪಾವತಿಸಬೇಕಾಗುತ್ತದೆ. ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ನೀಡುವುದರ ಜೊತೆಗೆ ಸ್ಥಳೀಯ ಭತ್ಯೆ ಮತ್ತು ಉಪಹಾರ ವೆಚ್ಚ ಮುಂತಾದವುಗಳನ್ನು ಪಾವತಿಸಲು ಕೆ.ಸಿ.ಎಸ್.ಆರ್ ನಿಯಮಗಳು ಅಥವಾ ಸರ್ಕಾರದ ಸ್ಪಷ್ಟ ಆದೇಶಗಳಡಿ ಅವಕಾಶವಿರುವುದಿಲ್ಲ.

ಸರ್ಕಾರದ ನಿಯಮಗಳನ್ನು ಮೀರಿ ಸ್ಥಳೀಯ ಭತ್ಯೆ/ಉಪಹಾರ ವೆಚ್ಚ ಹಾಗೂ ಹೆಚ್ಚುವರಿಯಾಗಿ ಪ್ರಯಾಣ ಭತ್ಯೆ/ದಿನ ಭತ್ಯೆಗಳನ್ನು ಪಾವತಿಸಲು ಅವಕಾಶವಿರುವ ಸರ್ಕಾರದ ಆದೇಶಗಳ ಪ್ರತಿ ಅಥವಾ ದಾಖಲೆಗಳನ್ನು ಹಾಜರುಪಡಿಸುವಂತೆ ಕೋರಿ ವಿಚಾರಣೆ ಪತ್ರ ಸಂಖ್ಯೆ:84/2023–24 ದಿನಾಂಕ:30.12.2024 ರಲ್ಲಿ ಕೋರಲಾಗಿದ್ದು, ವಿಶ್ವವಿದ್ಯಾನಿಲಯದಿಂದ ದಿನಾಂಕ:10.01.2025ರಂದು ನೀಡಿರುವ ಉತ್ತರದಲ್ಲಿ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕರಾಮುವಿ/ಪವಿ/ಸಿಬ್ಬಂದಿ–1/01/ಸಂ.ನಿ.ಸ.ರ/2019–20 ದಿನಾಂಕ:12.02.2021ರನ್ವಯ ಶೈಕ್ಷಣಿಕ ಮಂಡಳಿ ಸಭೆ, ಹಣಕಾಸು ಸಮಿತಿ ಸಭೆ ಮತ್ತು ವ್ಯವಸ್ಥಾಪನ ಮಂಡಳಿ ಸಭೆಯ ತಿರ್ಮಾನದಂತೆ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸರ್ಕಾರದ ಅನುಮೋದನೆ ಕಾಯ್ದಿರಿಸಿ ಪರೀಕ್ಷಾ ಸಂಭಾವನೆ ಮತ್ತು ಭತ್ಯೆಗಳನ್ನು ಪಾವತಿಸಲಾಗುತ್ತಿದೆ ಎಂದು ಅನುಪಾಲನಾ ವರದಿಯನ್ನು ಸಲ್ಲಿಸಿರುತ್ತಾರೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಡಿ 15 ಯುಓವಿ2009 ಬೆಂಗಳೂರು ದಿನಾಂಕ:04–11–2010ರಂತೆ KSOU (Adoption of service rules of State Government) Statutes-2009ಕ್ಕೆ ಮಾನ್ಯ ಕುಲಾಧಿಪತಿಗಳು ಅಂಕಿತ ನೀಡಿದ್ದು, ವಿಶ್ವವಿದ್ಯಾನಿಲಯವು ಸದರಿ ಪರಿನಿಯಮದಂತೆ ಪ್ರಯಾಣ ಭತ್ಯೆ ಹಾಗೂ ಇತರೆ ಭತ್ಯೆಗಳನ್ನು ಪಾವತಿಸದೇ ಹೆಚ್ಚುವರಿಯಾಗಿ ಪಾವತಿಸಿರುವುದು ಪರಿನಿಯಮ ಹಾಗೂ ಸರ್ಕಾರದ ಆದೇಶಗಳ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಹೆಚ್ಚುವರಿ ಭತ್ಯೆಗಳ ಪಾವತಿಗೆ ಮಾನ್ಯ ಕುಲಾಧಿಪತಿಗಳ ಅನುಮೋದನೆ ದೊರೆತಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ವಿಶ್ವವಿದ್ಯಾನಿಲಯದವರು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಪಾಯಂ, ಬೋಧಕ/ಬೋಧಕೇತರ ಮತ್ತು ತಾತ್ಕಾಲಿಕ ನೌಕರರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮ ಹಾಗೂ ಸರ್ಕಾರದ ಆದೇಶದ ಮಾರ್ಗಸೂಚಿಗಳನ್ನು ಮೀರಿ ಪ್ರಯಾಣ ಭತ್ಯೆ/ದಿನ ಭತ್ಯೆಗಳನ್ನು ಹಾಗೂ ಇತರೆ ಭತ್ಯೆಗಳನ್ನು ಹೆಚ್ಚುವರಿಯಾಗಿ ನೀಡಿರುವ ಒಟ್ಟು ಮೊತ್ತ ರೂ.**26,41,943**/–ಗಳನ್ನು ವಿಶ್ವವಿದ್ಯಾನಿಲಯದ ಕುಲಸಚಿವರು(ಪರೀಕ್ಷಾಂಗ) ಮತ್ತು ಹಣಕಾಸು ಅಧಿಕಾರಿಗಳಿಂದ ವಸೂಲಾತಿಗೆ ಸೂಚಿಸಿದೆ.

24.2 ಪರೀಕ್ಷಾ ಕಾರ್ಯ ಹಾಗೂ ಶೈಕ್ಷಣಿಕ ಕಾರ್ಯ ನಿರ್ವಹಿಸಿದ ವಿಶ್ವವಿದ್ಯಾನಿಲಯದ ಆಂತರಿಕ ಬೋಧಕ ವರ್ಗದವರಿಗೆ ನಿಯಮ ಮೀರಿ ರೂ.32,59,772/–ಗಳ ಪರೀಕ್ಷಾ ಕರ್ತವ್ಯ ಸಂಬಂಧಿತ ಸಂಭಾವನೆ ಪಾವತಿಸಿರುವುದು.

ಪರೀಕ್ಷಾ ಕರ್ತವ್ಯ, ನಿಯೋಜಿತ ಕಾರ್ಯಗಳ ಮಲ್ಯಮಾಪನ ಹಾಗೂ ಉತ್ತರ ಪತ್ರಿಕೆಗಳ ಮೌಲ್ಯಮಾಪನ, ಪ್ರೌಢ ಪ್ರಬಂಧಗಳ ಮೌಲ್ಯಮಾಪನ, ಪ್ರಾಯೋಗಿಕ ಪರೀಕ್ಷೆಗಳ ಮೌಲ್ಯಮಾಪನ ಮತ್ತು ಪರೀಕ್ಷಾ ಮಂಡಳಿ ಸಭೆಯಲ್ಲಿ ಭಾಗವಹಿಸಿದ ಬೋಧಕ ವರ್ಗದವರಿಗೆ ನಿಯಮ ಮೀರಿ ಸಂಭಾವನೆಯನ್ನು ಪಾವತಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ವಿವರವನ್ನು **ಅನುಬಂಧ–44ರಲ್ಲಿ** ಒದಗಿಸಲಾಗಿದೆ.

ಕರ್ನಾಟಕ ಶಿಕ್ಷಣ ಅಧಿನಿಯಮ, 1983 ರ ಪ್ರಕರಣ 28 ರಲ್ಲಿ ಈ ಕೆಳಗಿನಂತೆ ಉಲ್ಲೇಖಿಸಲಾಗಿದೆ.

"28. ಪರೀಕ್ಷೆಗೆ ಸಂಬಂಧಪಟ್ಟ ಕೆಲಸಗಳನ್ನು ಮಾಡುವುದು ಶಿಕ್ಷಣ ಸಂಸ್ಥೆಗಳ ನೌಕರರ ಕರ್ತವ್ಯವಾಗಿರುವುದು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ಒಪ್ಪಂದದಲ್ಲಿ ಅಥವಾ ಯಾವುದೇ ನ್ಯಾಯಾಲಯದ ಅಥವಾ ನ್ಯಾಯಾಧಿಕರಣದ ಯಾವುದೇ ತೀರ್ಪಿನಲ್ಲಿ, ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಯಾವುದೇ ಪರೀಕ್ಷೆಯ ಸಂಬಂಧದಲ್ಲಿ ತನಗೆ ವಹಿಸಿಕೊಡಲಾದ ಯಾವುದೇ ಕೆಲಸ ಮಾಡುವುದು ಪ್ರತಿಯೊಂದು ಶಿಕ್ಷಣ ಸಂಸ್ಥೆಯ ಅಧಿಕಾರಿಯ, ಉಪಾಧ್ಯಾಯನ ಅಥವಾ ಇತರ ನೌಕರನ ಮತ್ತು ಯಾವುದೇ ಶಿಕ್ಷಣ ಸಂಸ್ಥೆಯ ಸೇವೆಯಲ್ಲಿರುವ ಅಥವಾ ಅದರಿಂದ ವೇತನ ಅಥವಾ ಸಂಭಾವನೆಯನ್ನು ಪಡೆಯುವ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿರತಕ್ಕದ್ದು."

ವಿಶ್ವವಿದ್ಯಾನಿಲಯದ ಪರಿನಿಯಮ X ರ ಕ್ರ.ಸಂ. 31 ರಲ್ಲಿ ಈ ಕೆಳಗಿನಂತೆ ಉಚ್ಚರಿಸಲಾಗಿದೆ.

*"31. **ಪರೀಕ್ಷಾ ಸಂಭಾವನೆಯನ್ನು ಮುಂದುವರಿಸದಿರುವುದು:–** ಯಾವುದೇ ಕಾನೂನಿನಲ್ಲಿ ಅಥವಾ ಒಡಂಬಡಿಕೆಯಲ್ಲಿ ಅಥವಾ ನ್ಯಾಯಾಲಯದಿಂದ ನೀಡಲಾಗಿರುವ ತೀರ್ಪಿನಲ್ಲಿ/ನ್ಯಾಯಾಜ್ಞೆಯಲ್ಲಿ ಏನೇ ಹೇಳಿದ್ದರೂ, 1983ರ ಕರ್ನಾಟಕ ಶಿಕ್ಷಣ ಅಧಿಸೂಚನೆಯ 28ನೇಯ ಪ್ರಕರಣದ ಮೇರೆಗೆ, ಪರೀಕ್ಷಾ ಕಾರ್ಯನಿರ್ವಹಣೆ ಕಡ್ಡಾಯ ಕರ್ತವ್ಯವಾಗಿರುತ್ತದೆ. ವಿಶ್ವವಿದ್ಯಾನಿಲಯಗಳಲ್ಲಿನ ಮತ್ತು ಕಾಲೇಜುಗಳಲ್ಲಿನ ಪರೀಕ್ಷಾ ಸಂಬಂಧಿ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ಹೆಚ್ಚಿನ ಸಂಭಾವನೆ ಪಾವತಿಗೆ ಯಾವುದೇ ಪ್ರಾವಧಾನವನ್ನೂ ಮಾಡಲಾಗಿಲ್ಲ. ತಮ್ಮ ಶೈಕ್ಷಣಿಕ ಪ್ರಕಾರ್ಯಗಳ ಭಾಗವೆಂಬಂತೆ, ಮೌಲ್ಯಮಾಪನ ಮತ್ತು ಸಾರಣೀಕರಣವೂ ಸೇರಿದಂತೆ, ಉಪನ್ಯಾಸಕರು ಪರೀಕ್ಷಾ ಸಂಬಂಧವಾದ ತಮ್ಮ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು, ಹಾಗೂ ಇದಕ್ಕಾಗಿ ಅವರು ಯಾವುದೇ ಹೆಚ್ಚಿನ ಸಂಭಾವನೆ ಪಾವತಿಗೆ ಅರ್ಹರಾಗಿರುವುದಿಲ್ಲ. ಆದರೆ, ಪರೀಕ್ಷಾ ಕಾರ್ಯಕ್ಕಾಗಿ ಅವರು ಕೈಗೊಂಡ ಪ್ರಯಾಣಗಳಿಗಾಗಿ 'ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ಮೇರೆಗೆ ಸಂದಾಯಾರ್ಹವಾಗಿರುವ ಪ್ರಯಾಣ ಭತ್ಯೆ/ತುಟ್ಟಿ ಭತ್ಯೆಗಳಿಗೆ ಅವರು ಅರ್ಹರಾಗಿರುತ್ತಾರೆ."*

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ದಿನಾಂಕ:18/07/2018ರ ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳಲ್ಲಿನ ಶಿಕ್ಷಕರು ಮತ್ತು ಇತರೆ ಶೈಕ್ಷಣಿಕ ಸಿಬ್ಬಂದಿಗಳ ನೇಮಕಾತಿಯ ಕನಿಷ್ಠ ಅರ್ಹತೆಗಳು ಮತ್ತು ಉನ್ನತ ಶಿಕ್ಷಣದ ಗುಣಮಟ್ಟ ನಿರ್ವಹಣೆಯ ಕ್ರಮಗಳ ಯು.ಜಿ.ಸಿ. ನಿಯಮಾವಳಿಗಳು, 2018 ರ ನಿಯಮ 17.0(I)(ix) ರಲ್ಲಿ ಶಿಕ್ಷಕರ ಜವಾಬ್ದಾರಿಗಳ ಕುರಿತು ಈ ಕೆಳಗಿನಂತೆ ನಿಯಮಿಸಲಾಗಿದೆ.

"ಕಾಲೇಜು ಮತ್ತು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಜವಾಬ್ದಾರಿಗಳಿಗೆ ಸಂಬಂಧಿಸಿದ ಕಾರ್ಯಗಳಾದ ಪ್ರವೇಶಾತಿ, ವಿದ್ಯಾರ್ಥಿಗಳ ಸಲಹೆ & ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಸೇರಿದಂತೆ ವಿಶ್ವವಿದ್ಯಾನಿಲಯ ಮತ್ತು ಕಾಲೇಜಿನ ಪರೀಕ್ಷಾ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದಲ್ಲಿ ತೊಡಗಿಕೊಂಡು ಸಹಕರಿಸುವುದು ಅಧ್ಯಾಪಕರುಗಳ ವೃತ್ತಿಪರ ಸಂಹಿತೆ ಮತ್ತು ಜವಾಬ್ದಾರಿಯಾಗಿರುತ್ತವೆ."

ಪರೀಕ್ಷಾ ಕರ್ತವ್ಯ, ನಿಯೋಜಿತ ಕಾರ್ಯಗಳ ಮೌಲ್ಯಮಾಪನ ಹಾಗೂ ಉತ್ತರ ಪತ್ರಿಕೆಗಳ ಮೌಲ್ಯಮಾಪನ, ಪ್ರೌಢ ಪ್ರಬಂಧಗಳ ಮೌಲ್ಯಮಾಪನ, ಪ್ರಾಯೋಗಿಕ ಪರೀಕ್ಷೆಗಳ ಮೌಲ್ಯಮಾಪನ ಮತ್ತು ಪರೀಕ್ಷಾ ಮಂಡಳಿ ಸಭೆಯಲ್ಲಿ ಭಾಗವಹಿಸುವುದು ವಿಶ್ವವಿದ್ಯಾನಿಲಯದಲ್ಲಿ ನೇಮಕಾತಿ ಹೊಂದಿ ಯು.ಜಿ.ಸಿ. ವೇತನ ಶ್ರೇಣಿಯ ವೇತನ ಪಡೆಯುತ್ತಿರುವ ಬೋಧಕರುಗಳ ಕರ್ತವ್ಯದ ಭಾಗವಾಗಿದ್ದು ಸದರಿ ಕರ್ತವ್ಯ ನಿರ್ವಹಣೆಗೆ ಸಂಭಾವನೆಯನ್ನು ಪಾವತಿಸುವುದು ಈ ಮೇಲೆ ಸೂಚಿಸಲಾದ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಈ ಕುರಿತು ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:85/30.12.2024ರಲ್ಲಿ ಸೂಕ್ತ ವಿವರಣೆಯನ್ನು ಕೋರಲಾಗಿ, ವಿಶ್ವವಿದ್ಯಾನಿಲಯವು ಹೊರಡಿಸಿರುವ ಸ್ಥಾಯಿ ಆದೇಶದ ಅನುಸಾರ ಪರೀಕ್ಷಾ & ಶೈಕ್ಷಣಿಕ ಕಾರ್ಯಗಳನ್ನು ನಿರ್ವಹಿಸಿದ ವಿಶ್ವವಿದ್ಯಾನಿಲಯದ ಬೋಧಕ ವರ್ಗದವರಿಗೆ ಸಂಭಾವನೆಯನ್ನು ಪಾವತಿಸುತ್ತಿರುವುದಾಗಿ ಅನುಪಾಲನೆಯನ್ನು ನೀಡಿರುತ್ತಾರೆ. ವಿಶ್ವವಿದ್ಯಾನಿಲಯದ ಕುಲಾಧಿಪತಿಗಳ ಅಂಕಿತಗೊಂಡಿರುವ ಪರಿನಿಯಮ X ರ ಕ್ರ.ಸಂ. 31 ರಂತೆ ಹಾಗೂ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ನಿಯಮಾವಳಿಗಳಂತೆ ಪರೀಕ್ಷಾ & ಶೈಕ್ಷಣಿಕ ಕಾರ್ಯಗಳು ವಿಶ್ವವಿದ್ಯಾನಿಲಯದ ಬೋಧಕರುಗಳ ಕರ್ತವ್ಯದ ಭಾಗವಾಗಿದ್ದು, ಸದರಿ ಕರ್ತವ್ಯಗಳ ನಿರ್ವಹಣೆಯಲ್ಲಿ ಕೈಗೊಂಡ ಪ್ರಯಾಣ & ತಂಗುವಿಕೆಗಾಗಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳಲ್ಲಿ ನಿಯಮಿಸಿದ ದರಗಳಲ್ಲಿ ಭತ್ಯೆಗಳನ್ನು ಪಡೆಯಬಹುದೇ ಹೊರತು, ಶೈಕ್ಷಣಿಕ ಪ್ರಕಾರ್ಯಗಳಿಗಾಗಿ ಸಂಭಾವನೆ ಪಡೆಯಲು ಅರ್ಹರಿರುವುದಿಲ್ಲ. ಆದ್ದುದರಿಂದ ಪರೀಕ್ಷಾ ಸಂಬಂಧಿತ ಕಾರ್ಯಗಳಲ್ಲಿ ಭಾಗವಹಿಸಿದ ಅಧ್ಯಾಪಕರುಗಳಿಗೆ ನಿಯಮ ಮೀರಿ ಪಾವತಿಸಲಾಗಿರುವ ಸಂಭಾವನೆ ಮೊತ್ತ **ರೂ.32,59,772/–ಗಳನ್ನು** ವಿಶ್ವವಿದ್ಯಾನಿಲಯದ ಕುಲಸಚಿವರು(ಪರೀಕ್ಷಾಂಗ) ಮತ್ತು ಹಣಕಾಸು ಅಧಿಕಾರಿಗಳಿಂದ **ವಸೂಲಾತಿಗೆ** ಸೂಚಿಸಿದೆ.

24.3 ಪರೀಕ್ಷಾ ಸಾಮಗ್ರಿಗಳ ಸಾಗಾಣಿಕೆಗಾಗಿ ನಿಯೋಜಿಸಲಾದ ಸಿಬ್ಬಂದಿಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ನು ಮೀರಿ ಹೆಚ್ಚುವರಿಯಾಗಿ ರೂ.1,06,275/–ಗಳನ್ನು ಪಾವತಿಸಿರುವುದು.

2023–24ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯವು ರಾಜ್ಯದಾದ್ಯಂತ ಪರೀಕ್ಷಾ ಕೇಂದ್ರಗಳಿಗೆ, ಪರೀಕ್ಷಾ ಸೌಪ್ಯತಾ ಸಾಮಗ್ರಿಗಳನ್ನು ಪೂರೈಸಲು ವಿಶ್ವವಿದ್ಯಾನಿಲಯದ ಸಿಬ್ಬಂದಿಗಳನ್ನು ನಿಯೋಜಿಸಿರುತ್ತಾರೆ. ಅದರಂತೆ, ಸಿಬ್ಬಂದಿಗಳು ಪರೀಕ್ಷಾ ಸಾಮಗ್ರಿಗಳನ್ನು ವಿತರಿಸುವ ಕರ್ತವ್ಯ ನಿರ್ವಹಿಸಲು ಬೆಳೆಸಿದ ಪ್ರಯಾಣಕ್ಕಾಗಿ ಸಂಭವಿಸಿದ ಪ್ರಯಾಣ

ಭತ್ಯೆಯ ಬಿಲ್ಲುಗಳನ್ನು ಲೆಕ್ಕಪರಿಶೋಧಿಸಲಾಗಿ **ಅನುಬಂಧ–45**ರಲ್ಲಿ ನಮೂದಿಸಿರುವಂತೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1958ರಲ್ಲಿ ನಿಯಮಿಸಿರುವ ದರವನ್ನು ಮೀರಿ ಹೆಚ್ಚುವರಿ ದಿನಭತ್ಯೆಯನ್ನು ಪಾವತಿ ಮಾಡಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ.

ಕರ್ನಾಟಕ ಆರ್ಥಿಕ ಸಂಹಿತೆ, 1958ರ ಅನುಚ್ಛೇದ–15(5) ರಲ್ಲಿ ಅಡಕಿಸಿರುವಂತೆ, ಭತ್ಯೆಗಳು ಕ್ಲೇಮುದಾರನಿಗೆ ನಿರ್ದಿಷ್ಟ ವೆಚ್ಚವನ್ನು ಪೂರೈಸುವಂತಿರಬೇಕೆ ಹೊರತು ಸದರಿ ಭತ್ಯೆಯು ಸ್ವೀಕರಿಸುವವನಿಗೆ ಲಾಭದ ಸಂಪೂರ್ಣ ಮೂಲವಾಗಿರತಕ್ಕುದ್ದಲ್ಲ. ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1958 ರ ನಿಯಮ 451 (2) ರಂತೆ ನೌಕರನು ಪ್ರಯಾಣ ಮತ್ತು ತಂಗುವಿಕೆಯ ಕ್ಲೇಮುಗಳಲ್ಲಿ, ತಂಗುವಿಕೆಯ ಅವಧಿಗೆ ತಂಗಿದ ಸ್ಥಳಗಳಿಗೆ ಅನ್ವಯಿಸುವ ದರಗಳಲ್ಲಿ ಮತ್ತು ನಿಯಮ 498(c) ರನ್ವಯ ರಾಜ್ಯದ ಒಳಗಡೆ ಅಥವಾ ಹೊರಗಡೆ ಪ್ರಯಾಣದ ಅವಧಿಯಲ್ಲಿ ಕಳೆದ ಸಮಯಕ್ಕೆ ಇತರೆ ಸ್ಥಳಗಳಿಗೆ ಅನುಮತಿಸಲಾದ ದರದಲ್ಲಿ ದಿನಭತ್ಯೆಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಹೆಚ್ಚುವರಿ ದಿನಭತ್ಯೆಯ ಪಾವತಿಗೆ ಸಂಬಂಧಿಸಿ ವಿವರಣೆ ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 84/30.12.2024ಕ್ಕೆ ವಿಶ್ವವಿದ್ಯಾನಿಲಯದಿಂದ ಯಾವುದೇ ಅನುಪಾಲನಾ ವರದಿ ನೀಡಿರುವುದಿಲ್ಲ. ದಿನಭತ್ಯೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳಿಗಳನ್ವಯ ನೌಕರರಿಗೆ ಅಧಿಕೃತ ಕರ್ತವ್ಯ ನಿಮಿತ್ತ ಪ್ರಯಾಣಿಸಿದ ಅವಧಿ ಮತ್ತು ತಂಗುವಿಕೆಯ ಅವಧಿಗೆ ನಿಗಧಿಪಡಿಸಲಾದ ದರಕ್ಕಿಂತ ಹೆಚ್ಚುವರಿಯಾಗಿ ಪಾವತಿಸಿರುವುದು ನಿಯಮದ ಸ್ಪಷ್ಟ ಉಲ್ಲಂಘನೆಯಾಗಿದ್ದು, ಆದ್ದರಿಂದ **ರೂ.1,06,275/– ಮೊತ್ತವನ್ನು ಸಂಬಂಧಿಸಿದ** ನೌಕರರು ಮತ್ತು ಅಧಿಕಾರಿಗಳಿಂದ **ವಸೂಲಿಸಲು** ಸೂಚಿಸಿದೆ.

24.4 2023–24 ನೇ ಸಾಲಿನಲ್ಲಿ ಪರೀಕ್ಷಾ ನಿಧಿ ಖಾತೆಯಿಂದ ಸಂಭಾವನೆ ಪಾವತಿಯಲ್ಲಿ ರೂ. 51,720/– ಗಳ ಆದಾಯ ತೆರಿಗೆ ಕಟಾವಣೆ ಮಾಡದಿರುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 2023–24ನೇ ಸಾಲಿನಲ್ಲಿ ಪರೀಕ್ಷಾ ಸಂಬಂಧಿತ ಕರ್ತವ್ಯಗಳ ನಿರ್ವಹಣೆಗಾಗಿ ವಿಶ್ವವಿದ್ಯಾನಿಲಯದ ಆಂತರಿಕ ಸಿಬ್ಬಂದಿ/ಬೋಧಕರುಗಳು ಮತ್ತು ಬಾಹ್ಯ ವೃತ್ತಿಪರ ವ್ಯಕ್ತಿಗಳಿಗೆ ಕ್ರಮವಾಗಿ ರೂ.4,30,168/– ಮತ್ತು ರೂ.87,032/–ಗಳನ್ನು ಸಂಭಾವನೆ ರೂಪದಲ್ಲಿ ಪಾವತಿ ಮಾಡಿದ್ದು, ವಿವರವನ್ನು **ಅನುಬಂಧ–46**ರಲ್ಲಿ ವಿವರಿಸಲಾಗಿದೆ. ಸದರಿ ಪಾವತಿಯ ಮೊತ್ತಕ್ಕೆ ಕ್ರಮವಾಗಿ ಮೂಲದಲ್ಲಿ 1961ರ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 194J ಪ್ರಕಾರ, ವೃತ್ತಿಪರ ಅಥವಾ ತಾಂತ್ರಿಕ ಸೇವೆಗಳ ಶುಲ್ಕ ಮತ್ತು ಸಂಭಾವನೆಗಳಿಗೆ ಸಂಬಂಧಿಸಿದಂತೆ ಮೂಲದಲ್ಲಿ ತೆರಿಗೆ (TDS) ಯನ್ನು ಅಂತಹ ಶುಲ್ಕದ ಶೇಕಡಾ 10ರ ದರದಲ್ಲಿ ಕಟಾಯಿಸಬೇಕಾದ ತೆರಿಗೆ ಮೊತ್ತ ರೂ.43,017/– ಮತ್ತು ರೂ.8,703/– ಗಳನ್ನು ಕಟಾಯಿಸದೇ ಪಾವತಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ಈ ಸಂಬಂಧ ವಿವರಣೆಯನ್ನು ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:115/13.01.2025ಕ್ಕೆ ವಿಶ್ವವಿದ್ಯಾನಿಲಯವು ಅನುಪಾಲನೆಯನ್ನು ನೀಡಿರುವುದಿಲ್ಲ.

1961ರ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 201ರ ಪ್ರಕಾರ, ಮೂಲದಲ್ಲಿ ತೆರಿಗೆಯನ್ನು ಕಡಿತಗೊಳಿಸಲು ಹೊಣೆಗಾರರಾಗಿರುವ ಯಾವುದೇ ವ್ಯಕ್ತಿಯು ಅದನ್ನು ಕಡಿತಗೊಳಿಸದಿದ್ದರೆ ಅಥವಾ ಹಾಗೇ ಕಡಿತಗೊಳಿಸಿದ

ನಂತರ, ತೆರಿಗೆಯ ಸಂಪೂರ್ಣ ಅಥವಾ ಯಾವುದೇ ಭಾಗವನ್ನು ಸರ್ಕಾರದ ಖಾತೆಗೆ ಪಾವತಿಸಲು ವಿಫಲವಾದರೆ, ಅಂತಹ ವ್ಯಕ್ತಿಯು ಸದರಿ ತೆರಿಗೆಯನ್ನು ಕಡಿತಗೊಳಿಸಿದ ದಿನಾಂಕದಿಂದ ಅಂತಹ ತೆರಿಗೆಯನ್ನು ಕಡಿತಗೊಳಿಸಿದ ದಿನಾಂಕದವರೆಗೆ ಅಂತಹ ತೆರಿಗೆಯ ಮೊತ್ತದ ಮೇಲೆ ಪ್ರತಿ ತಿಂಗಳು ಅಥವಾ ಒಂದು ತಿಂಗಳ ಭಾಗಕ್ಕೆ ಒಂದು ಶೇಕಡಾ ದರದಲ್ಲಿ ಸರಳ ಬಡ್ಡಿಯನ್ನು ಪಾವತಿಸಬೇಕಾಗುತ್ತದೆ. ಇದು ಶಾಸನಬದ್ಧ ಕರ್ತವ್ಯದ ಲೋಪವಾಗಿದ್ದು, ವಿಶ್ವವಿದ್ಯಾನಿಲಯದೊಳಗೆ ಪಾವತಿ ಹಂತದಲ್ಲಿ ಆಂತರಿಕ ನಿಯಂತ್ರಣವನ್ನು ಬಲಪಡಿಸುವ ಅಗತ್ಯವನ್ನು ಲೆಕ್ಕಪರಿಶೋಧನೆಯು ಅಭಿಪ್ರಾಯಿಸುವುದರ ಜೊತೆಗೆ **ರೂ.51,720/–** ಮೊತ್ತವನ್ನು ಸಂಬಂಧಿಸಿದ ಅಧಿಕಾರಿಗಳಿಂದ **ವಸೂಲಿಸಿ ಸರ್ಕಾರಕ್ಕೆ** ಜಮಾ ಮಾಡಲು ಸೂಚಿಸಿದೆ.

25. ಕಾಮಗಾರಿ ವೆಚ್ಚಗಳು

25.1 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯ ವಿವರವನ್ನು ಹಾಜರುಪಡಿಸದಿರುವುದು.

2023–24ನೇ ಸಾಲಿನಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ಕಾಮಗಾರಿಗಳಿಗಾಗಿ ಒಟ್ಟಾರೆ ರೂ.70.10 ಕೋಟಿಗಳ ಆಯವ್ಯಯ ಅಂದಾಜು ಮಾಡಿಕೊಳ್ಳಲಾಗಿದೆ. ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	ಆಯವ್ಯಯ ಅಂದಾಜು ಮೊತ್ತ
1	271	17,00,00,000
2	272	2.00,00,000
3	273	35,00,000
4	293	17.50.00.000
5	296	3,25,00,000
6	341	30,00,00,000
	ಒಟ್ಟು	**70,10,00,000**

ಮೇಲಿನ ಶೀರ್ಷಿಕೆಗಳಡಿ ವಿವಿಧ ಅಂದಾಜಿನ ಕಾಮಗಾರಿಗಳನ್ನು ಕೈಗೊಂಡಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ಈ ಕಾಮಗಾರಿಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಲು ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಪ್ರದತ್ತಗೊಂಡಿರುವ ಆಡಳಿತಾತ್ಮಕ ಹಾಗೂ ಹಣಕಾಸು ಅಧಿಕಾರಗಳ ಪ್ರತ್ಯಾಯೋಜನೆಯ ಪಾಯಿಲಾತಿಗಳನ್ನು ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:06/29.10.2024 ಅನ್ನು ನೀಡಲಾಗಿದ್ದು, ವಿಶ್ವವಿದ್ಯಾನಿಲಯದಿಂದ ದಿನಾಂಕ:22.01.2025ರಂದು ನೀಡಿರುವ ಅನುಪಾಲನಾ ವರದಿಯ ಸಂಖ್ಯೆ. ಕರಾಮುವಿ/ಯುಇಡಿ/50/2024–25ರಲ್ಲಿ ಉಪ–ಕುಲಪತಿಗಳಿಗೆ 25.00 ಲಕ್ಷಗಳ ಮೊತ್ತದ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಪರಮಾಧಿಕಾರವಿದ್ದು, 25.00 ಲಕ್ಷಗಳನ್ನು ಮೀರಿದ ಕಾಮಗಾರಿಗಳ ಅನುಷ್ಠಾನಕ್ಕಾಗಿ ಉಪ–ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆಯುವ ಹಣಕಾಸು ಸಮಿತಿ ಸಭೆ,

ವ್ಯವಸ್ಥಾಪನಾ ಮಂಡಳಿ ಸಭೆಗಳಲ್ಲಿ ಮಂಡಿಸಿ ಆಡಳಿತಾತ್ಮಕ ಅನುಮೋದನೆಯನ್ನೂ ಕಟ್ಟಡ ಸಮಿತಿ ಸಭೆಯಲ್ಲಿ ತಾಂತ್ರಿಕ ಮಂಜೂರಾತಿಯನ್ನು ಪಡೆಯಲಾಗುವುದೆಂದು ತಿಳಿಸಿರುತ್ತಾರೆ. ಆದರೆ ಮೇಲ್ಕಂಡ ಸಮಿತಿಗಳಿಗೆ ಸರ್ಕಾರದಿಂದ ಅಥವಾ ಮಾನ್ಯ ಕುಲಾಧಿಪತಿಗಳಿಂದ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಲು ಪ್ರದತ್ತಗೊಂಡಿರುವ ಅಧಿಕಾರಗಳ ಯಾವುದೇ ಅಧಿಕೃತ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

25.2 ಅಂದಾಜು ಆಯ–ವ್ಯಯ ಮತ್ತು ಕ್ರಿಯಾಯೋಜನೆ ಕುರಿತು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ಆಯವ್ಯಯ ಅಂದಾಜು ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿದಾಗ ವಿಭಾಗ ಸಂಖ್ಯೆ–022 ಮತ್ತು 023 ರಡಿಯಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಿಗೆ ರೂ.72,63,00,000/– ಗಳಿಗೆ ಪರಿಷ್ಕೃತ ಆಯವ್ಯಯ ಅಂದಾಜು ಸಿದ್ಧಪಡಿಸಿ ರೂ.42,49,17,804/– ಗಳ ವೆಚ್ಚವನ್ನು ಭರಿಸಲಾಗಿದೆ. ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕ್ರ.ಸಂ	ಉಪ ಲೆಕ್ಕ ಶೀರ್ಷಿಕೆ	ವಿವರ	ಆಯವ್ಯಯ ಅಂದಾಜು ಮೊತ್ತ (ರೂ.ಗಳಲ್ಲಿ)	ಪರಿಷ್ಕೃತ ಆಯವ್ಯಯ ಅಂದಾಜು ಮೊತ್ತ (ರೂ.ಗಳಲ್ಲಿ)	ವಾರ್ಷಿಕ ಲೆಕ್ಕಪತ್ರದನ್ವಯ ವಾಸ್ತವಿಕ ವೆಚ್ಚ
1	271	ದೊಡ್ಡ ಕಾಮಗಾರಿಗಳು	12,00,00,000	17,00,00,000	13,56,82,369
2	272	ಸಣ್ಣ ಕಾಮಗಾರಿಗಳು	2,00,00,000	2,00,00,000	1,85,61,389
3	273	ಕಟ್ಟಡಗಳ ನಿರ್ವಹಣೆ & ದುರಸ್ಥಿ	1,00,00,000	35,00,000	22,18,672
4	293	ಸಂಸ್ಕೃತ ವಿಶ್ವವಿದ್ಯಾನಿಲಯದ ಕಟ್ಟಡ ನಿರ್ಮಾಣ	20,00,00,000	17,50,00,000	86244976
5	296	ಸರ್ಕಾರಿ / ಅನುದಾನಿತ ಶಾಲೆಗಳ ದತ್ತು ಸ್ವೀಕಾರ	5,00,00,000	3,25,00,000	1,65,94,794
6	329	ತೋಟಗಳ ನಿರ್ವಹಣೆ	5,00,000	1,50,000	73,398
7	350	ಕಛೇರಿ ಸಾದಿಲ್ವಾರು ವೆಚ್ಚ	5,00,000	1,50,000	1,13,855
8	281	ಹೊಸ ಜಮೀನು ಖರೀದಿ ವೆಚ್ಚ	2,00,00,000	2,50,00,000	2,34,19,080
9	341	ಪ್ರಾದೇಶಿಕ ಕೇಂದ್ರ ನಿರ್ಮಾಣ	53,00,00,000	30,00,00,000	1,420,09,271
		ಒಟ್ಟು	**95,10,00,000**	**72,63,00,000**	**42,49,17,804**

ಮೇಲ್ಕಂಡ ಆಯ–ವ್ಯಯ ಅಂದಾಜು ಮೊತ್ತಗಳಿಗೆ ಅನುಗುಣವಾಗಿ ಕ್ರಿಯಾ ಯೋಜನೆಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆದು ಕಾಮಗಾರಿಗಳನ್ನು ನಿರ್ವಹಿಸಿ ವೆಚ್ಚವನ್ನು ಭರಿಸಬೇಕಾಗಿರುತ್ತದೆ. ಸಂಬಂಧಿಸಿದಂತೆ ಕ್ರಿಯಾಯೋಜನೆ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:05/29.10.2024ರಲ್ಲಿ ಕೋರಲಾಗಿದೆ. ವಿಶ್ವವಿದ್ಯಾನಿಲಯದಿಂದ ಯಾವುದೇ ಅನುಪಾಲನಾ ವರದಿಯನ್ನು ನೀಡಿರುವುದಿಲ್ಲ. ಅಲ್ಲದೆ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಆಯ–

ವ್ಯಯ ಅಂದಾಜು ಮೊತ್ತಕ್ಕೂ ಕ್ರಿಯಾ ಯೋಜನೆಯಲ್ಲಿ ನಿಗದಿಪಡಿಸಿರುವ ಮೊತ್ತಗಳಿಗೂ, ವಾಸ್ತವಿಕ ವೆಚ್ಚಗಳ ಮೊತ್ತಗಳಿಗೂ ಅಸಾಧಾರಣ ವ್ಯತ್ಯಾಸಗಳಿದ್ದು, ಆಯ–ವ್ಯಯ ಅಂದಾಜುಗಳನ್ನು ವೈಜ್ಞಾನಿಕವಾಗಿ ತಯಾರಿಸದಿರುವುದು ಕಂಡುಬಂದಿರುತ್ತದೆ. ಆದ್ದರಿಂದ ವಾರ್ಷಿಕ ಕ್ರಿಯಾ ಯೋಜನೆಯನ್ನು ಹಾಜರುಪಡಿಸಲು ಹಾಗೂ ವೈಜ್ಞಾನಿಕ ಆಯ–ವ್ಯಯ ಅಂದಾಜುಗಳನ್ನು ತಯಾರಿಸಲು ಸಕ್ಷಮ ಪ್ರಾಧಿಕಾರವು ಸೂಕ್ತ ಆಡಳಿತಾತ್ಮಕ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

25.3 ವಾಸ್ತವಿಕ ವೆಚ್ಚಗಳಿಗೂ ವಾರ್ಷಿಕ ಲೆಕ್ಕಪತ್ರಗಳಿಗೂ ವ್ಯತ್ಯಾಸವಿರುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಲಾದ ದಾಖಲಾತಿಗಳನ್ವಯ, ವಿಭಾಗ ಸಂಖ್ಯೆ–022 ಮತ್ತು 023 ರಡಿಯ ವಿವಿಧ ಲೆಕ್ಕಶೀರ್ಷಿಕೆಗಳಿಗೆ ಸಂಬಂಧಿಸಿದಂತೆ ವಾಸ್ತವಿಕ ವೆಚ್ಚಗಳಿಗೂ ವಾರ್ಷಿಕ ಲೆಕ್ಕಪತ್ರಗಳಿಗೂ ವ್ಯತ್ಯಾಸವಿರುವುದು ಕಂಡುಬಂದಿದ್ದು, ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ

ಕ್ರ ಸಂ.	ಶೀರ್ಷಿಕೆ ಸಂ.	ಶಿರ್ಷಿಕೆ ವಿವರ	ವಾಸ್ತವಿಕ ವೆಚ್ಚ	ವಾರ್ಷಿಕ ಲೆಕ್ಕಪತ್ರಗಳನ್ವಯ ವೆಚ್ಚ	ವ್ಯತ್ಯಾಸ
1	271	ದೊಡ್ಡ ಕಾಮಗಾರಿಗಳು	13,77,60,272.00	13,56,82,369.00	20,77,903.00
2	272	ಸಣ್ಣ ಕಾಮಗಾರಿಗಳು	1,85,62,685.00	1,85,61,389.00	1,296.00
3	273	ಕಟ್ಟಡಗಳ ನಿರ್ವಹಣೆ & ದುರಸ್ತಿ	23,44,737.00	22,18,672.00	1,26,065.00
4	293	ಸಂಸ್ಕೃತ ವಿಶ್ವವಿದ್ಯಾನಿಲಯದ ಕಟ್ಟಡ ನಿರ್ಮಾಣ	9,16,23,736.00	8,62,44,976.00	53,78,760.00
5	296	ಸರ್ಕಾರಿ / ಅನುದಾನಿತ ಶಾಲೆಗಳ ದತ್ತು ಸ್ವೀಕಾರ	1,74,40,650.00	1,65,94,794.00	8,45,856.00
6	341	ಹೊಸ ಪ್ರಾದೇಶಿಕ ಕೇಂದ್ರ ಕಟ್ಟಡ ನಿರ್ಮಾಣ ವೆಚ್ಚ	14,90,42,011.00	14,20,09,271.00	70,32,740.00
		ಒಟ್ಟು	**41,67,74,091.00**	**40,13,11,471.00**	**1,54,62,620.00**

ಹೀಗೆ ವಾಸ್ತವಿಕ ವೆಚ್ಚಗಳಿಗೂ ವಾರ್ಷಿಕ ಲೆಕ್ಕಪತ್ರಗಳಲ್ಲಿ ನಮೂದಿಸಿರುವ ವೆಚ್ಚಗಳಿಗೂ ಅಸಾಧಾರಣಾ ವ್ಯತ್ಯಾಸವಿದ್ದು, ವಾಸ್ತವಿಕ ಅಂಕಿ ಅಂಶಗಳನ್ನು ಕ್ರೋಢೀಕರಿಸಿ ಕರಾರುವಕ್ಕಾದ ಲೆಕ್ಕಪತ್ರಗಳನ್ನು ಸಿದ್ಧಪಡಿಸುವಲ್ಲಿನ ವಿಶ್ವವಿದ್ಯಾನಿಲಯದ ವೈಫಲ್ಯತೆಯನ್ನು ಸ್ಪಷ್ಟಪಡಿಸುತ್ತದೆ. ಮೇಲ್ಕಂಡಂತೆ ಕಂಡುಬಂದ ವ್ಯತ್ಯಾಸಗಳಿಗೆ ಸಂಬಂಧಿಸಿದಂತೆ, ಅಗತ್ಯ ದಾಖಲಾತಿಗಳೊಂದಿಗೆ ಸೂಕ್ತ ಸ್ಪಷ್ಟೀಕರಣವನ್ನು ಕೋರಿ ನೀಡಲಾದ **ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:136/30.01.2025ನ್ನು ನೀಡಲಾಗಿರುತ್ತದೆ.** ಅಲ್ಲದೆ 2022–23ನೇ ಸಾಲಿನ **ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ.** 25.7ರಲ್ಲಿಯೂ **ಈ** ರೀತಿಯ ವ್ಯತ್ಯಾಸಗಳ **ಕುರಿತು** ವರದಿ **ಮಾಡಲಾಗಿರುತ್ತದೆ.** ಆದರೆ ವಿಶ್ವವಿದ್ಯಾನಿಲಯದ ವತಿಯಿಂದ ಯಾವುದೇ ಅನುಪಾಲನಾ ವರದಿಯನ್ನು

ಹಾಜರುಪಡಿಸಿರುವುದಿಲ್ಲ. ಆದ್ದರಿಂದ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ದಪಡಿಸುವಾಗ ಸಂಬಂಧಿಸಿದ ವಿಭಾಗದಿಂದ ನಿಖರವಾದ ಅಂಕಿ ಅಂಶಗಳನ್ನು ಪಡೆದು ಸಿದ್ದಪಡಿಸುವ ಸಂಬಂಧ ಸಕ್ಷಮ ಪ್ರಾಧಿಕಾರವು ಸೂಕ್ತ ಆಡಳಿತಾತ್ಮಕ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

.254 ಪ್ಯಾಕೇಜ್ ಕಾಮಗಾರಿಯ ಬಿಲ್ಲುಗಳಲ್ಲಿ ಕಡಿಮೆ ರಾಜಧನವನ್ನು ಕಟಾಯಿಸಿರುವುದು.

ಅಳತೆ –ಹಾಗೂ ಇ ,24ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ವೋಚರ್‌ಗಳು–2023 ಏ ,ಪ್ರಾದೇಶಿಕ ಕೇಂದ್ರ ಕಟ್ಟಡಗಳು ,ಮಸ್ತಕಗಳನ್ನು ಪರಿಶೀಲಿಸಿದಂತೆ.ವಿಯ ಹಂಸ ಮಾನಸ ಕಟ್ಟಡಗಳು ಹಾಗೂ , ದತ್ತು ಶಾಲೆಗಳ ಕಟ್ಟಡ ನಿರ್ಮಾಣ ಹಾಗೂ 16ದುರಸ್ಥಿ ಪ್ಯಾಕೇಜ್ ಕಾಮಗಾರಿಗಳ ಬಿಲ್ಲುಗಳಲ್ಲಿ ಒಟ್ಟಾರೆ ರೂ.2,80,866/–ಗಳ ರಾಜಧನವನ್ನು ಕಟಾಯಿಸಬೇಕಾಗಿದ್ದು, ರೂ.2,66,463/–ಗಳನ್ನು ಮಾತ್ರವೇ ಕಟಾಯಿಸಲಾಗಿದ್ದು, ಉಳಿಕೆ ರೂ.14,403/–ಗಳನ್ನು ಕಡಿಮೆ ಕಟಾಯಿಸಲಾಗಿರುತ್ತದೆ. ವಿವರವನ್ನು ಅನುಬಂಧ–**47ರಲ್ಲಿ** ವಿವರಿಸಲಾಗಿದೆ.

ಕಡಿಮೆ ಕಟಾಯಿಸಿರುವ ರಾಜಧನದ ಮೊತ್ತ ರೂ.14,403/–ಗಳನ್ನು ಗುತ್ತಿಗೆದಾರರಾದ ಮೆ// ಬಿ.ಎಸ್.ಆರ್. ಇನ್ಫ್ರಾಟೆಕ್ ಇಂಡಿಯಾ ಲಿ., ಬೆಂಗಳೂರುರವರಿಂದ ವಸೂಲಿಸದಿರುವ ಬಗ್ಗೆ ವಿವರಣೆ ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರದ ಸಂಖ್ಯೆ: 119/17.01.2025ಕ್ಕೆ ವಿಶ್ವವಿದ್ಯಾನಿಲಯದಿಂದ ದಿನಾಂಕ:22.01.2025ರಂದು ನೀಡಲಾದ ಅನುಪಾಲನಾ ವರದಿಯಲ್ಲಿ ಸದರಿ ಕಾಮಗಾರಿಗಳಿಗೆ ಸಂಬಂಧಿಸಿದ ಅಂತಿಮ ಹುಂಡಿಗಳಲ್ಲಿ ಕಟಾಯಿಸಲಾಗಿರುವುದಾಗಿ ತಿಳಿಸಿದ್ದು, ಪ್ರಸ್ತುತ ಲೆಕ್ಕಪರಿಶೋಧನೆಯಲ್ಲಿ ಅಂತಿಮ ಹುಂಡಿಗಳನ್ನಾಗಲೀ ಲೆಕ್ಕಾಚಾರದ ತ:ಖ್ತೆಯನ್ನಾಗಲೀ ಪರಿಶೀಲಿಸಲು ಸಾಧ್ಯವಾಗದಿರುವುದರಿಂದ ಮುಂದಿನ ಲೆಕ್ಕಪರಿಶೋಧನೆಯಲ್ಲಿ ಅಂತಿಮ ಹುಂಡಿಗಳನ್ನು ಪರಿಶೀಲಿಸಿ ವಸೂಲಾತಿಯನ್ನು ಖಚಿತಪಡಿಸಿಕೊಂಡ ನಂತರ ಕಂಡಿಕೆಯನ್ನು ಕೈಬಿಡಬಹುದಾಗಿರುತ್ತದೆ. ಆದ್ದರಿಂದ 2023–24ನೇ ಸಾಲಿನ ಕಡಿಮೆ ಕಟಾವಣೆಯ ಮೊಬಲಗು **ರೂ.14,403/–ಗಳನ್ನು** ಗುತ್ತಿಗೆದಾರರಾದ ಮೆ// ಬಿ.ಎಸ್.ಆರ್. ಇನ್ಫ್ರಾಟೆಕ್ ಇಂಡಿಯಾ ಲಿ., ಬೆಂಗಳೂರುರವರಿಂದ ವಸೂಲಿಸಿ ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಿ ಜಮಾ ವಿವರಗಳನ್ನು ಅನುಪಾಲಾ ವರದಿಯೊಂದಿಗೆ ಸಲ್ಲಿಸಲು ಸೂಚಿಸಲಾಗಿದೆ.

25.5 ಸರ್ಕಾರದ ಆದೇಶ ಸಂಖ್ಯೆ. ಪಿಡಬ್ಲ್ಯೂಡಿ 423 ಎಫ್‌ಸಿ–1 2018, ಬೆಂಗಳೂರು, ದಿನಾಂಕ:24.09.2018 ಮತ್ತು ಸಂಖ್ಯೆ. ಆಇ 195 ವೆಚ್ಚ–12/11 ಬೆಂಗಳೂರು, ದಿನಾಂಕ: 30.03.2011ರ ನಿಯಮಗಳನುಸಾರ ತಾಂತ್ರಿಕ ಮಂಜೂರಾತಿ ಪಡೆಯದಿರುವುದು ಹಾಗೂ ಟೆಂಡರ್ ಸಲ್ಲಿಸಲು ನಿರ್ದಿಷ್ಟಪಡಿಸಿದ ಕಾಲಾವಧಿಯನ್ನು ಅನುಸರಿಸದೆ ರೂ.10,89,34,839/–ಗಳನ್ನು ಪಾವತಿಸಿರುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 24ನೇ ಸಾಲಿನ ಲೆಕ್ಕಪರಿಶೋಧನೆಗಾಗಿ –2023 Electrical ಇಂಜಿನಿಯರಿಂಗ್ ವಿಭಾಗಕ್ಕೆ ಸಂಬಂಧಿಸಿದ ,ಕಾರ್ಯಪಾಲಕ ಅಭಿಯಂತರರು ,ಹಾಜರುಪಡಿಸಲಾದ ಕಾಮಗಾರಿಗಳಿಗಾಗಿ Installationಪಾವತಿಸಲಾದ ಬಿಲ್ಲುಗಳನ್ನು ಪರಿಶೀಲಿಸಲಾಗಿ. ರೂ.200.00 (ಎರಡು ನೂರು) ಲಕ್ಷಗಳನ್ನು ಮೀರಿದ ಕಾಮಗಾರಿಗಳ ಅಂದಾಜುಪಟ್ಟಿಗಳನ್ನು Electrical Installation

09 ತಯಾರಿಸಲಾಗಿರುತ್ತದೆ ಹಾಗೂ ಸದರಿ ಕಾಮಗಾರಿಗಳಿಗಾಗಿ ಅಲ್ಪಾವಧಿ ಟೆಂಡರ್ ಆಹ್ವಾನಿಸಿ ಟೆಂಡರ್ ಸಲ್ಲಿಸಲು)ಒಂಭತ್ತು) 11 ರಿಂದ (ಹನ್ನೊಂದುದಿನಗಳ ಕನಿಷ್ಠ ಕಾಲಾವಧಿಯನ್ನ (ಂ ನಿಗದಿಪಡಿಸಿರುವುದು ಕಂಡುಬಂದಿರುತ್ತದೆ ವಿವರಗಳನ್ನು) .**ಅನುಬಂಧ–48ರಲ್ಲಿ** ನೀಡಲಾಗಿದೆ (

ಆದರೆ ಸರ್ಕಾರದ ಆದೇಶ ಸಂಖ್ಯೆ. ಪಿಡಬ್ಲ್ಯುಡಿ 423 ಎಫ್‌ಸಿ–1 2018, ಬೆಂಗಳೂರು, ದಿನಾಂಕ: 24.09.2018ರ ಅನುಸಾರ ರೂ.2.00(ಎರಡು) ಲಕ್ಷಗಳ ಅಂದಾಜುಪಟ್ಟಿಗಳಿಗೆ ಮಾತ್ರವೇ ಕಾರ್ಯಪಾಲಕ ಅಭಿಯಂತರರು ತಾಂತ್ರಿಕ ಮಂಜೂರಾತಿ ನೀಡಬಹುದಾಗಿರುತ್ತದೆ. ಅನುಬಂಧದಲ್ಲಿ ವಿವರಿಸಿರುವ ಕಾಮಗಾರಿಗಳ ಅಂದಾಜುಪಟ್ಟಿಗಳನ್ನು ಮುಖ್ಯ ಅಭಿಯಂತರರಿಂದ ಮಂಜೂರಾತಿ ಪಡೆಯಬೇಕಾಗಿರುತ್ತದೆ ಮತ್ತು ಸರ್ಕಾರದ ಆದೇಶ ಸಂಖ್ಯೆ. ಆಇ 195 ವೆಚ್ಚ–12/11 ಬೆಂಗಳೂರು, ದಿನಾಂಕ: 30.03.2011ರ ಅನುಸಾರ ರೂ.2.00 (ಎರಡು) ಕೋಟಿಗೂ ಮೀರಿದ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು 60 ದಿನಗಳ ಕಾಲಾವಧಿಯನ್ನು ನಿಗದಿಪಡಿಸಬೇಕಾಗಿರುತ್ತದೆ. ಇದರಿಂದಾಗಿ ಪಾರದರ್ಶಕ ನಿಯಮಗಳನ್ನು ಪಾಲಿಸಿದಂತಾಗಿರುವುದಿಲ್ಲ. ಪಾರದರ್ಶಕ ನಿಯಮಗಳನ್ನು ಪಾಲಿಸಿರುವುದಕ್ಕೆ ಸೂಕ್ತ ಸ್ಪಷ್ಟೀಕರಣವನ್ನು ನೀಡುವಂತೆ ಕೋರಿದ ಆಡಿಟ್ ವಿಚಾರಣಾ ಪತ್ರದ ಸಂಖ್ಯೆ. 134/22.01.2025ನ್ನು ನೀಡಲಾಗಿರುತ್ತದೆ. ವಿಶ್ವವಿದ್ಯಾನಿಲಯದಿಂದ ದಿನಾಂಕ:07.02.2025ರಂದು ಹಾಜರುಪಡಿಸಲಾದ ಸಂಖ್ಯೆ:ಕರಾಮುವಿ/ಯುಇಡಿ/50/2024–25ರ ಅನುಪಾಲನಾ ವರದಿಯಲ್ಲಿ ಮಾನ್ಯ ಕುಲಪತಿಗಳು ಹಾಗೂ ವ್ಯವಸ್ಥಾಪನಾ ಮಂಡಳಿಯ ಆದೇಶದ ಅನುಸಾರ ಇ–ಪ್ರೊಕ್ಯೂರ್‌ಮೆಂಟ್ (e–procurement) ಮತ್ತು Gem portal ಮುಖಾಂತರ ಕೆಟಿಪಿಪಿ ನಿಯಮ 2000, ಅಧ್ಯಾಯ–1, ದಿನಾಂಕ: 24ನೇ ಅಕ್ಟೋಬರ್ 2000 ಅಧ್ಯಾಯ–1 ಕ್ರ.ಸಂ. 17.2ರ ಅನುಸಾರ ಬಿಡ್ ಅವಧಿಯನ್ನು ಕಡಿಮೆ ಮಾಡಲಾಗಿದೆಯೆಂದು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಾಯ್ದೆ–1994ರ ಅಧ್ಯಾಯ–IV ಕಲಂ 17ರನ್ವಯ ವ್ಯವಸ್ಥಾಪನಾ ಮಂಡಳಿಯು ವಿವಿಗೆ ಪ್ರಾಧಿಕಾರವಾಗಿಯೂ ಹಾಗೂ ಪ್ರಧಾನ ಕಾರ್ಯಕಾರಿಯಾಗಿಯೂ ಅಧಿಕಾರವಿರುವುದಾಗಿ ತಿಳಿಸಲಾಗಿದೆ. ಅಧ್ಯಾಯ–IV ಕಲಂ 18(2)ರಲ್ಲಿ ವ್ಯವಸ್ಥಾಪನಾ ಮಂಡಳಿಯ ಅಧಿಕಾರವನ್ನು ವಿವರಿಸುತ್ತಾ ವಿಶ್ವವಿದ್ಯಾನಿಲಯದ ಸ್ವತ್ತುಗಳು ಮತ್ತು ಆದಾಯಗಳನ್ನು ನಿರ್ವಹಿಸುವ ಮತ್ತು ಅವುಗಳ ವಹಿವಾಟು ನಡೆಸುವ ಅಧಿಕಾರವನ್ನು ನೀಡಲಾಗಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕೈಗೊಳ್ಳುವ ಯಾವುದೇ ಕಾಮಗಾರಿ, ದುರಸ್ಥಿ, ಏರಿಂದಿ, ಸಂಗ್ರಹಣೆ ಹಾಗೂ ಇನ್ನಿತರೆ ಕೆಲಸಗಳಿಗೆ ಸಂಬಂಧಿಸಿದಂತೆ ಸೂಕ್ತ ನಿರ್ಧಾರ ಕೈಗೊಳ್ಳಲು ವಿ.ವಿಯ ಉಪ–ಕುಲಪತಿಗಳಿಗೆ 25.00 ಲಕ್ಷಗಳ ಮೊತ್ತದ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಪರಮಾಧಿಕಾರವಿದ್ದು, 25.00 ಲಕ್ಷಗಳನ್ನು ಮೀರಿದ ಕಾಮಗಾರಿಗಳ ಅನುಷ್ಠಾನಕ್ಕಾಗಿ ಉಪ–ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆಯುವ ಹಣಕಾಸು ಸಮಿತಿ ಸಭೆ, ವ್ಯವಸ್ಥಾಪನಾ ಮಂಡಳಿ ಸಭೆಗಳಲ್ಲಿ ಮಂಡಿಸಿ ಆಡಳಿತಾತ್ಮಕ ಅನುಮೋದನೆಯನ್ನೂ ಪಡೆಯಲಾಗುವುದೆಂದು ತಿಳಿಸಿರುತ್ತಾರೆ. ಆದರೆ ಮೇಲ್ಕಂಡ ಸಮಿತಿಗಳಿಗೆ ಸರ್ಕಾರದಿಂದ ಅಥವಾ ಮಾನ್ಯ ಕುಲಾಧಿಪತಿಗಳಿಂದ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಲು ಪ್ರದತ್ತಗೊಂಡಿರುವ ಅಧಿಕಾರಗಳ ಯಾವುದೇ ಅಧಿಕೃತ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಅಲ್ಲದೆ ಟೆಂಡರ್ ಅವಧಿಯನ್ನು ಕಡಿಮೆ ಮಾಡಲಾಗಿರುವುದಕ್ಕೆ ಸಂಬಂಧಿಸಿದಂತೆ ಟೆಂಡರ್ ಅನುಮೋದನಾ ಪ್ರಾಧಿಕಾರವು ಲಿಖಿತ ರೂಪದಲ್ಲಿ ದಾಖಲು ಮಾಡಿದ ವಿವರಗಳನ್ನು ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ

ಅಲ್ಪಾವಧಿ ಟೆಂಡರ್ ಹಾಗೂ ತಾಂತ್ರಿಕ ಮಂಜೂರಾತಿಯ ಔಚಿತ್ಯವನ್ನು ಖಚಿತಪಡಿಸಿಕೊಳ್ಳಲು ಲೆಕ್ಕಪರಿಶೋಧನೆಯಲ್ಲಿ ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಕಾಮಗಾರಿಗಳಿಗಾಗಿ Electrical Installation ಪಾವತಿಸಲಾದ ಒಟ್ಟು ಮೊಬಲಗು **ರೂ.10,89,34,839/–ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.**

25.6 ಪ್ಯಾಕೇಜ್ ಕಾಮಗಾರಿಯ ಬಿಲ್ಲುಗಳಲ್ಲಿ ಹೆಚ್ಚುವರಿ ಪರಿಮಾಣ (ವರ್ಕ್ ಸ್ಲೀಪ್) ಹಾಗೂ ಹೆಚ್ಚುವರಿ ಅಂಶ (ಇಎಐಆರ್ಎಲ್)ಗಳನ್ನು ನಿರ್ವಹಿಸಿ ರೂ.11,61,54,000/–ಗಳನ್ನು ಪಾವತಿಸಿರುವುದು.

ಅಳತೆ –ಹಾಗೂ ಇ ,24ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ವೋಚರ್ಗಳು–2023 16 ಮಾನಸ ಕಟ್ಟಡಗಳು ಹಾಗೂ ,ಎಐಯ ಹಂಸ ,ಪ್ರಾದೇಶಿಕ ಕೇಂದ್ರ ಕಟ್ಟಡಗಳು ,ಪುಸ್ತಕಗಳನ್ನು ಪರಿಶೀಲಿಸಿದಂತೆ ದತ್ತು ಶಾಲೆಗಳ ಕಟ್ಟಡ ನಿರ್ಮಾಣ ಹಾಗೂ ದುರಸ್ಥಿ ಪ್ಯಾಕೇಜ್ ಕಾಮಗಾರಿಗಳ ಬಿಲ್ಲುಗಳಲ್ಲಿಹೆಚ್ಚುವರಿ ಪರಿಮಾಣ (ವರ್ಕ್ಸ್ಲೀಪ್)ಗಾಗಿ ರೂ.8,39,85,297/–ಗಳು ಮತ್ತು ಹೆಚ್ಚುವರಿ ಅಂಶ (ಇಎಐಆರ್ಎಲ್)ಗಾಗಿ ರೂ.3,21,68,704/– ಒಟ್ಟಾರೆ ರೂ.11,61,54,000/–ಗಳನ್ನು ಪಾವತಿಸಲಾಗಿದ್ದು, ಹೆಚ್ಚುವರಿ ಪರಿಮಾಣ ಮತ್ತು ಹೆಚ್ಚುವರಿ ಅಂಶಗಳ ಐಟಂವಾರು ವಿವರಗಳನ್ನು **ಅನುಬಂಧ–49ರಲ್ಲಿ** ನೀಡಲಾಗಿದೆ.

1. ಸರ್ಕಾರದ ಆದೇಶದ ಸಂಖ್ಯೆ. ಪಿಡಬ್ಲ್ಯುಡಿ 423 ಎಫ್ಸಿ–1 2018, ದಿನಾಂಕ: 24.09.2018ರಲ್ಲಿ ವರ್ಕ್ಸ್ ಸ್ಲಿಪ್ ಹಾಗೂ ಇಐಆರ್ಎಲ್ ಅನುಮೋದನೆಗೆ ಪ್ರತ್ಯಾಯೋಜನೆ ಮಾಡಿದ್ದ ಅಧಿಕಾರ ರದ್ದಾಗಿರುತ್ತದೆ.
2. ಈ ರೀತಿಯ ಹೆಚ್ಚುವರಿ ಮೊತ್ತಗಳನ್ನು ಪಾವತಿ ಮಾಡುವ ಮುನ್ನ ಲೋಕೋಪಯೋಗಿ ಇಲಾಖಾ ಸಂಹಿತೆಯ ಅನುಚ್ಛೇದ–191ರಲ್ಲಿ ತಿಳಿಸಿರುವಂತೆ ಅನುಮೋದಿತ ಅಂದಾಜಿಗಿಂತ ಶೇ.5 ರಷ್ಟು ಅಧಿಕವಾದ ಸಂದರ್ಭಗಳಲ್ಲಿ, ಪರಿಷ್ಕೃತ ಅಂದಾಜು ಪಟ್ಟಿಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯಬೇಕಾಗಿರುತ್ತದೆ. ಹಾಗೂ ಅನಚ್ಛೇದ–184(14)(ಡಿ)ಯಂತೆ ಈ ರೀತಿಯ ಹೆಚ್ಚುವರಿ ಪಾವತಿ ಸಂದರ್ಭಗಳಲ್ಲಿ ಗುತ್ತಿಗೆದಾರರೊಂದಿಗೆ ಪೂರಕ ಕರಾರು ಮಾಡಿಕೊಳ್ಳಬೇಕಾಗಿರುತ್ತದೆ. ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 17 ಯುಎನ್ಇ, 2020, ಬೆಂಗಳೂರು, ದಿನಾಂಕ: 24.06.2020ರ ಆದೇಶದಂತೆ ವರ್ಕ್ಸ್ಲಿಪ್ ಮತ್ತು ಇ.ಐ.ಆರ್.ಎಲ್. ಅಂದಾಜುಗಳಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯಬೇಕಾಗಿರುತ್ತದೆ. ಆದರೆ ಹೆಚ್ಚುವರಿ ಪಾವತಿಗೆ ಸಂಬಂಧಿಸಿದಂತೆ ಗುತ್ತಿಗೆದಾರರೊಂದಿಗೆ ಮಾಡಿಕೊಳ್ಳಲಾದ ಪೂರಕ ಕರಾರು ಒಪ್ಪಂದದ ಪ್ರತಿ ಹಾಗೂ ಪರಿಷ್ಕೃತ ಅಂದಾಜು ಪಟ್ಟಗಳನ್ನು ಹಾಜರುಪಡಿಸಿರುವುದಿಲ್ಲ.
3. ಹೆಚ್ಚುವರಿ ಪರಿಮಾಣ ಮತ್ತು ಹೆಚ್ಚುವರಿ ಅಂಶಗಳ ಉದ್ಭವಿಸುವಿಕೆಗೆ ಸಂಬಂಧಿಸಿದಂತೆ ಸಿದ್ಧಪಡಿಸಲಾದ ಸ್ಥಳ ಪರಿಶೀಲನೆಯ ವರದಿಗಳು ಹಾಗೂ ತಾಂತ್ರಿಕ ಪರಿಶೀಲನಾ ವರದಿ (Inspection Notes or Reports) ಗಳನ್ನು ಹಾಜರುಪಡಿಸಿರುವುದಿಲ್ಲ.
4. ಹೆಚ್ಚುವರಿ ಕಾರ್ಯ ನಿರ್ವಹಿಸಲು ಗುತ್ತಿಗೆದಾರರಿಗೆ ನೀಡಲಾದ ಕಾರ್ಯಾದೇಶದ ಪ್ರತಿ ಮತ್ತು ಗುತ್ತಿಗೆದಾರರು ಹೆಚ್ಚುವರಿ ಕಾರ್ಯ ನಿರ್ವಹಿಸಲು ಕಾರ್ಯಾದೇಶಕ್ಕಾಗಿ ಸಲ್ಲಿಸಿದ ಲಿಖಿತ ಮನವಿಗಳನ್ನು ಹಾಜರುಪಡಿಸಿರುವುದಿಲ್ಲ.
5. ಟೆಂಡರ್ ದಸ್ತಾವೇಜಿನ ನಿಬಂಧನೆ ಸಂಖ್ಯೆ–34.4 (ಪುಟ ಸಂಖ್ಯೆ.35)ರಲ್ಲಿ ನಮೂದಿಸಿರುವಂತೆ ಸೇವಾದಾರರ (Employer) ಮೌಖಿಕ ಆದೇಶದ 30 ದಿನಗಳೊಳಗಾಗಿ ಖಚಿತತೆಗಾಗಿ ಗುತ್ತಿಗೆದಾರರು ಲಿಖಿತ

ಮನವಿಯನ್ನು ಸಲ್ಲಿಸಬೇಕಾಗಿರುತ್ತದೆ ಅಲ್ಲದೆ ಹೆಚ್ಚುವರಿ ನಿರ್ವಹಣೆಯ ವ್ಯತ್ಯಾಸವು ಶೇಕಡಾ 5ಕ್ಕಿಂತ ಹೆಚ್ಚಾಗಿದ್ದಲ್ಲಿ ಸರ್ಕಾರದ ಅನುಮೋದನೆಯನ್ನು ಪಡೆಯಬೇಕಾಗಿರುತ್ತದೆ. ಈ ಮೇಲಿನ ಯಾವುದೇ ದಾಖಲೆಗಳನ್ನು ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಿರುವುದಿಲ್ಲ.

ಈ ಸಂಬಂಧ ಎಲ್ಲಾ ದಾಖಲೆಗಳನ್ನು ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರದ ಸಂಖ್ಯೆ:108/ 13.01.2025 ಮತ್ತು 127/20.01.2025ನ್ನು ನೀಡಲಾಗಿದೆ. ಇದಕ್ಕೆ ವಿಶ್ವವಿದ್ಯಾನಿಲಯದ ವತಿಯಿಂದ ದಿನಾಂಕ: 22.01.2025ರಂದು ನೀಡಲಾದ ಅನುಪಾಲನಾ ವರದಿ ಸಂಖ್ಯೆ.ಕರಾಮುವಿ/ಯುಇಡಿ/50/2024–25 ರಲ್ಲಿ 1) ಹೆಚ್ಚುವರಿ ನಿರ್ವಹಣೆಗೆ ಸಂಬಂಧಿಸಿದಂತೆ ದಿನಾಂಕ:16.06.2022 ರಂದು ನಡೆದ 26ನೇ ಕಟ್ಟಡ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆಯೆಂದು ಹೆಚ್ಚುವರಿ ಕಾಮಗಾರಿಗಳನ್ನು ನಿರ್ವಹಿಸಿಕೊಡುವಂತೆ ವಿವಿಧ ಶಾಲೆಯಲ್ಲಿನ ಮುಖ್ಯೋಪಾಧ್ಯಾಯರು/ಶಾಲಾ ಕಮಿಟಿಯ ಸದಸ್ಯರು ಹಾಗೂ ಆಯಾಯ ಕ್ಷೇತ್ರದ ವಿಧಾನಸಭೆಯ ಸದಸ್ಯರು/ ವಿಧಾನಪರಿಷತ್ ಸದಸ್ಯರುರವರುಗಳ ನಿರ್ದೇಶನ/ ಕೋರಿಕೆ ಮೇರೆಗೆ ನಿರ್ವಹಿಸಲಾಗಿದೆಯೆಂದು, 2) ವಿವಿಯ ಹಂಸ ಮತ್ತು ಮಾನಸ ಕಟ್ಟಡಗಳ ಉನ್ನತೀಕರಣ ಕಾಮಗಾರಿಯಲ್ಲಿ ಇತರೆ ವಿಭಾಗದ ಕೋರ್ಸ್‌ಗಳಿಗೆ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಸಹ–ಪ್ರಾಧ್ಯಾಪಕರುಗಳು ಮತ್ತು ವಿವಿಧ ಅಧ್ಯಯನ ಪೀಠಗಳಿಗೆ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲಾಗಿದೆ. 3) ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ತಿಪ್ಪಸಂದ್ರ ಗ್ರಾಮದಲ್ಲಿ ನಿರ್ಮಿಸಿರುವ ಸಂಸ್ಕೃತ ವಿವಿಯ ಕರಾಮುವಿಯ ಪ್ರಾದೇಶಿಕ ಕೇಂದ್ರ ಕಟ್ಟಡ ನಿರ್ಮಾಣದ ನಿಯೋಜಿತ ಸ್ಥಳದಲ್ಲಿ ಕೆಲವು ರೈತರುಗಳ ಜಮೀನುಗಳು ಇರುವುದು ಕಂಡುಬಂದಿದ್ದರಿಂದ ನಿಗದಿತ ಸ್ಥಳದ ಬದಲಾಗಿ ಬದಲಿ ಸ್ಥಳದಲ್ಲಿ (ಅಕ್ಕ ಪಕ್ಕಕ್ಕೆ ಹೊಂದಿಕೊಂಡ ಜಾಗದಲ್ಲಿ) ಕಟ್ಟಡ ನಿರ್ಮಾಣ ಮಾಡಬೇಕಾಗಿದ್ದುದರಿಂದ ಆ ಜಾಗಕ್ಕೆ ಅನುಗುಣವಾಗಿ ಹೆಚ್ಚುವರಿ ಕೆಲಸ (ಹೆಚ್ಚವರಿ ಕೆಲಸ) ಮತ್ತು Sub strcture & Super structure ಕೆಲಸವನ್ನು ಮಾಡಲಾಗಿದೆಯೆಂದು 4) ಮಂಗಳೂರಿನ ನಿಯೋಜಿತ ಸ್ಥಳದಲ್ಲಿ ನಿಗದಿಯಾಗಿದ್ದ ಸ್ಥಳದಲ್ಲಿಯೂ ಸಹ ಇದೇ ರೀತಿ ತಾಂತ್ರಿಕ ಅಡಚಣೆಯಿಂದಾಗಿ ಲಭ್ಯವಾದ ಜಾಗದ ಅನುಗುಣಕ್ಕೆ ತಕ್ಕಂತೆ ಕಟ್ಟಡದ ಮಾರ್ಪಾಡನ್ನು ಮಾಡಲಾಗಿದೆ. 5) ಧಾರವಾಡ ಜಿಲ್ಲೆಯಲ್ಲಿ ಸ್ಥಳೀಯ ಸಕ್ಷಮ ಪ್ರಾಧಿಕಾರದ ಅನುಸಾರ ನಕ್ಷೆಯನ್ನು ಮಾರ್ಪಡಿಸಬೇಕಾಗಿದ್ದುದರಿಂದ ಕೆಲಸವನ್ನು ನಿರ್ವಹಿಸುವ ಸಲುವಾಗಿ ಮಣ್ಣಿನ ಗುಣದ ಪ್ರಕಾರ ಕೆಲವು ಭಾಗಗಳಲ್ಲಿ ಫೌಂಡೇಷನ್‌ನಲ್ಲಿ ಬದಲಾವಣೆ ಮಾಡಿ ಅದಕ್ಕೆ ಅನುಗುಣವಾಗಿ ಕೆಲಸವನ್ನು ನಿರ್ವಹಿಸಲಾಗಿದೆಯೆಂದು **ಈ ಎಲ್ಲಾ ಅಂಶಗಳನ್ನು ಸಭೆಯಲ್ಲಿ ಮಂಡಿಸಿ ಎಲ್ಲಾ ಪರಿಷ್ಕೃತ ಅಂದಾಜುಗಳನ್ನು ಸಹ ಟೆಂಡರ್ ಮೊತ್ತದ ಮಿತಿಯೊಳಗೆ ಬದಲಾವಣೆ ಮಾಡಿ ಕೆಲಸ ನಿರ್ವಹಿಸುವುದಾಗಿ ಅನುಮೋದನೆ ಪಡೆಯಲಾಗಿರುವುದಾಗಿಯೂ ತಿಳಿಸಿರುತ್ತಾರೆ**. ಆದರೆ ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

1. ಬದಲಿ ನಿವೇಶನದ ಮಣ್ಣಿನ ಕ್ಷೇಮಧಾರಣಾ ಸಾಮರ್ಥ್ಯ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುವುದಿಲ್ಲ.
2. ಆಯಾಯ ಸ್ಥಳೀಯ ಪ್ರಾಧಿಕಾರಗಳಿಂದ ಪಡೆದ ಕಟ್ಟಡ ನಿರ್ಮಾಣ ಪರವಾನಗಿಯನ್ನು ಹಾಜರುಪಡಿಸಿರುವುದಿಲ್ಲ.

3. ಸ್ಥಳೀಯ ಪ್ರಾಧಿಕಾರಗಳು ಅನುಮೋದಿಸಿದ ಕಟ್ಟಡಗಳ ವಿನ್ಯಾಸ ನಕ್ಷೆಗಳನ್ನು ಹಾಜರುಪಡಿಸಿರುವುದಿಲ್ಲ.

ಮೇಲಿನ ಕಾರಣಗಳಿಂದಾಗಿ ಪಾವತಿಯ ಮೊತ್ತ ರೂ.**11,61,54,000/–ಗಳನ್ನು ಆಕ್ಷೇಪಣೆಗೆ** ಸೂಚಿಸಿದೆ.

25.7 ಪ್ಯಾಕೇಜ್ ಕಾಮಗಾರಿಗೆ ಸಂಬಂಧಿಸಿದಂತೆ ಟೆಂಡರ್ ಪ್ರೀಮಿಯಂಗಿಂತ ರೂ.30,82,188/–ಗಳನ್ನು ಹೆಚ್ಚುವರಿಯಾಗಿ ಭರಿಸಿರುವುದು ಹಾಗೂ ರೂ.1,30,92,871/–ಗಳಿಗೆ 2023–24ನೇ ಸಾಲಿನವರೆಗೂ ಯಾವುದೇ ಆರ್ಥಿಕ ಪ್ರಗತಿಯನ್ನು ಸಾಧಿಸದಿರುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಕಾರ್ಯಪಾಲಕ ಅಭಿಯಂತರರು ಇಂಜಿನಿಯರಿಂಗ್ ವಿಭಾಗಕ್ಕೆ ಸಂಬಂಧಿಸಿದಂತೆ ,ಹಾಜರುಪಡಿಸಲಾದ ದಾಖಲಾತಿಗಳನ್ವಯ, ದತ್ತು 16 ಮಾನಸ ಕಟ್ಟಡಗಳು ಹಾಗೂ ,ವಿವಿಯ ಹಂಸ ,ಪ್ರಾದೇಶಿಕ ಕೇಂದ್ರ ಕಟ್ಟಡಗಳು" ಶಾಲೆಗಳ ಕಟ್ಟಡ ನಿರ್ಮಾಣ ಹಾಗೂ ದುರಸ್ಥಿ ಪ್ಯಾಕೇಜ್ ಕಾಮಗಾರಿಗಳ ಿಗಾಗಿ –2023 ಹಾಗೂ 23–2022 24ನೇ ಸಾಲಿನಲ್ಲಿ ಒಟ್ಟಾರೆಮೊತ್ತ ರೂ66,11,23,860./–ಗಳ ವೆಚ್ಚವನ್ನು ಭರಿಸಲಾಗಿರುತ್ತದೆಆದರೆ ಸದರಿ .ಕಾಮಗಾರಿಗಳಲ್ಲಿ ಕೆಲವು ಕಾಮಗಾರಿಗಳ ಟೆಂಡರ್ ಪ್ರೀಮಿಯಂಗಿಂತಲೂ ರೂ30,82,188/–ಗಳ ಹೆಚ್ಚುವರಿ ವೆಚ್ಚವನ್ನು ಭರಿಸಲಾಗಿರುತ್ತದೆ ಹಾಗೂ 2023–24ನೇ ಸಾಲಿನವರೆಗೂ ರೂ.1,30,92,871/–ಗಳಿಗೆ ಕೆಲವು ಕಾಮಗಾರಿಗಳನ್ನು ನಿರ್ವಹಿಸದೇ ಇರುವುದು ಅಥವಾ ಯಾವುದೇ ಆರ್ಥಿಕ ಪ್ರಗತಿಯನ್ನು ಸಾಧಿಸದೇ ಇರುವುದು ಕಂಡುಬಂದಿರುತ್ತದೆ. (ವಿವರಗಳನ್ನು **ಅನುಬಂಧ–50ರಲ್ಲಿ** ನೀಡಲಾಗಿದೆ) ಹೀಗೆ ಯಾವುದೇ ಆರ್ಥಿಕ ಪ್ರಗತಿಯನ್ನು ಸಾಧಿಸದಿರುವುದಕ್ಕೆ ಸಂಬಂಧಿಸಿದಂತೆ ದಾಖಲಾತಿಗಳೊಂದಿಗೆ ಸೂಕ್ತ ಸ್ಪಷ್ಟೀಕರಣವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:210/21.02.2025ನ್ನು ನೀಡಲಾಗಿತ್ತು. ಆದರೆ ವಿಶ್ವವಿದ್ಯಾನಿಲಯದ ವತಿಯಿಂದ ಯಾವುದೇ ಅನುಪಾಲನಾ ವರದಿಯನ್ನು ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ ಹೆಚ್ಚುವರಿ ಪಾವತಿ ಹಾಗೂ ವಿಳಂಬಿತ ಪ್ರಗತಿಯ ಔಚಿತ್ಯವನ್ನು ಖಚಿತಪಡಿಸಿಕೊಳ್ಳಲು ಲೆಕ್ಕಪರಿಶೋಧನೆಯಲ್ಲಿ ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಹೆಚ್ಚುವರಿಯ ಬಾಬ್ತು ರೂ30,82,188/–ಗಳನ್ನು ಪಾವತಿ ಹಾಗೂ ವಿಳಂಬಿತ ಪ್ರಗತಿಯ ದಂಡ ಶುಲ್ಕದ ಒಟ್ಟಾರೆ ಬಾಬ್ತು **ರೂ.1,61,75,060/–ಗಳನ್ನು ಆಕ್ಷೇಪಣೆಗೆ ಸೂಚಿಸುತ್ತಾ,** ಯಾವುದೇ ಪ್ರಗತಿಯನ್ನು ಸಾಧಿಸದಿರುವ ಕುರಿತು ಸಕ್ಷಮ ಪ್ರಾಧಿಕಾರವು ಸೂಕ್ತ ಆಡಳಿತಾತ್ಮಕ ಕ್ರಮವನ್ನು ಕೈಗೊಳ್ಳುವಂತೆ ಸೂಚಿಸಿದೆ.

25.8 2021–22ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ.25.3 ಮತ್ತು 2022–23ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ.25.5ಕ್ಕೆ ಅನುಸರಣಾ ವರದಿಯೊಂದಿಗೆ ಪೂರಕ ದಾಖಲಾತಿಗಳನ್ನು ಹಾಜರುಪಡಿಸದಿರುವುದು.

25.3 .22ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ–2021ರಲ್ಲಿ ಪ್ರಾದೇಶಿಕ ಕೇಂದ್ರ " ದತ್ತು ಶಾಲೆಗಳ ಕಟ್ಟಡ ನಿರ್ಮಾಣ ಹಾಗೂ ದುರಸ್ಥಿ 16 ಮಾನಸ ಕಟ್ಟಡಗಳು ಹಾಗೂ ,ವಿವಿಯ ಹಂಸ ,ಕಟ್ಟಡಗಳು ಗಳ –/4,70,00,000.ಪ್ಯಾಕೇಜ್ ಕಾಮಗಾರಿಗಳಿಗೆ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯದೆ ರೂ

ಮೊಬೈಲೈಜೇಷನ್ ಅಡ್‌ವಾನ್ಸ್ ಪಾವತಿಸಿರುವುದು) 9 ಈ ಶೀರೋನಾಮೆಯಡಿಯಲ್ಲಿ ಒಟ್ಟು "ಒಂಭತ್ತುಸಂಖ್ಯೆಗಳ (ಗಳನ್ನು ಹಾಗೂ–/4,70,00,000.ವಿವಿಧ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿ ರೂ2021–22ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ. 25.3ರಲ್ಲಿ ವಿವರಿಸಿರುವ 9 (ಒಂಭತ್ತು) ಸಂಖ್ಯೆಯ ನ್ಯೂನತೆಗಳಿಗೆ ಯಾವುದೇ ಅನುಪಾಲನಾ ವರದಿಯನ್ನು ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ ಕಾಮಗಾರಿ ನಿರ್ವಹಣೆಯಲ್ಲಿನ ನೈಜತೆಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ ಎಂದು 2022–23ನೇ ಸಾಲಿಗಾಗಿ ಭರಿಸಲಾದ ಈ ಕಾಮಗಾರಿಯ ಒಟ್ಟಾರೆ ಬಾಬ್ತು **ರೂ.39,11,53,452/–ಗಳನ್ನು** ಆಕ್ಷೇಪಣೆಯಲ್ಲಿಡಲಾಗಿರುತ್ತದೆ .

ಮುಂದುವರೆದು24–2023 ,ನೇ ಸಾಲಿನಲ್ಲಿ ಸದರಿ ಕಾಮಗಾರಿಗಳ ಮುಂದುವರೆದ ಕೆಲಸಗಳನ್ನು ಅನುಷ್ಠಾನಗೊಳಿಸಿ ರೂ.26,99,70,408/–ಗಳ ಮೊತ್ತನ್ನು ಪಾವತಿಸಲಾಗಿದ್ದು, ವಿವರವನ್ನು **ಅನುಬಂಧ–51** ರಲ್ಲಿ ನೀಡಲಾಗಿದೆ. ರೂ.4,70,00,000/–ಗಳ ಮೊಬೈಲೈಜೇಷನ್ ಅಡ್ವಾನ್ಸ್ ಪಾವತಿಯ ಮೊತ್ತಕ್ಕೆ ಎದುರಾಗಿ –2023 .24ನೇ ಸಾಲಿನವರೆಗೆ ಒಟ್ಟಾರೆ ರೂ4,01,92,787/–ಗಳನ್ನು ಕಟಾಯಿಸಲಾಗಿರುತ್ತದೆ. ರೂ.68,07,213/–ಗಳು ಕಟಾವಣೆಗೆ ಬಾಕಿ ಇರುತ್ತದೆ. ವಿವರಗಳನ್ನು **ಅನುಬಂಧ–51 (ಎ) ರಲ್ಲಿ** ನೀಡಲಾಗಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 23ನೇ ಸಾಲಿನ ಮೇಲ್ಕಂಡ –2022 ಮತ್ತು 22–2021 ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ಎಲ್ಲಾ ದಸ್ತಾವೇಜುಗಳನ್ನು ಅನುಸರಣಾ ವರದಿಯೊಂದಿಗೆಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:108/13.01.2025ಕ್ಕೆ ವಿಶ್ವವಿದ್ಯಾನಿಲಯದಿಂದ ಹಾಜರುಪಡಿಸಿದ ಅನುಪಾಲನಾ ವರದಿಯಲ್ಲಿ 2021–22ನೇ ಸಾಲಿನ ಆಕ್ಷೇಪಣೆಗಳಿಗೆ ಈಗಾಗಲೇ ಉತ್ತರವನ್ನು ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ಉತ್ತರವು ಅಸಮಂಜಸವಾಗಿರುವುದರಿಂದ 2022–23ನೇ ಸಾಲಿನವರೆಗಿನ ಒಟ್ಟು ವೆಚ್ಚವನ್ನು ಆಕ್ಷೇಪಿಸಲಾಗಿರುತ್ತದೆ. ಅಲ್ಲದೆ 2021–22ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ. 25.3ರಲ್ಲಿ ವಿವರಿಸಿರುವ 9 (ಒಂಭತ್ತು) ಸಂಖ್ಯೆಯ ನ್ಯೂನತೆಗಳಿಗೆ ಯಾವುದೇ ಅನುಪಾಲನಾ ವರದಿಯನ್ನು ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ ಕಾಮಗಾರಿ ನಿರ್ವಹಣೆಯಲ್ಲಿನ ನೈಜತೆಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. 2023–24ನೇ ಸಾಲಿನ ಒಟ್ಟು ಪಾವತಿಯ ಮೊಬಲಗು ರೂ.26,99,70,408/–ಗಳಲ್ಲಿ ಈಗಾಗಲೇ ಮೇಲಿನ 1) ಕಂಡಿಕೆ ಸಂಖ್ಯೆ.25.4ರಲ್ಲಿ ವಸೂಲಾತಿಗೆ ಸೂಚಿಸಿರುವ ರಾಜಧನದ ಮೊತ್ತ ರೂ.14,403/– 2) ಕಂಡಿಕೆ ಸಂಖ್ಯೆ. 25.6ರಲ್ಲಿ ಆಕ್ಷೇಪಣೆಗೆ ಸೂಚಿಸಿರುವ ಹೆಚ್ಚುವರಿ ಪರಿಮಾಣ & ಹೆಚ್ಚುವರಿ ಅಂಶಗಳ ಮೊತ್ತ ರೂ.11,61,54,000/– ಮತ್ತು ಕಂಡಿಕೆ ಸಂಖ್ಯೆ.25.7ರಲ್ಲಿ ಆಕ್ಷೇಪಣೆಗೆ ಸೂಚಿಸಿರುವ ಹೆಚ್ಚುವರಿ ಪಾವತಿಯ ಬಾಬ್ತು ರೂ.30,82,188/–ಗಳ ಒಟ್ಟಾರೆ ಮೊಬಲಗು ರೂ.11,92,50,591/–ಗಳನ್ನು ಹೊರತುಪಡಿಸಿ ಉಳಿದ ಮೊಬಲಗು **ರೂ.15,07,19,817/–ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.**

26. ದಾಸ್ತಾನು ಲೆಕ್ಕಗಳು

26.1 ರಶೀದಿ ಪುಸ್ತಕಗಳ ಭೌತಿಕ ಪರಿಶೀಲನೆ ವಿವರ.

ಎ) ಲೆಕ್ಕಪರಿಶೋಧನಾ ಅವಧಿಯಲ್ಲಿ ಭೌತಿಕವಾಗಿ ಪರಿಶೀಲಿಸಿದ ರಶೀತಿ ಪುಸ್ತಕಗಳ ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ.ಸಂ	ವಿಭಾಗ	ಭೌತಿಕವಾಗಿ ಖಾಲಿ ಉಳಿದ ರಶೀದಿ ಪುಸ್ತಕಗಳ ವಿವರ	ಷರಾ
1	ಸಾಮಾನ್ಯ ನಿಧಿ (08)	ರಶೀದಿ ಪುಸ್ತಕ ಸಂಖ್ಯೆ:1500 (ರ.ಸಂ:99951 ರಿಂದ 100000)ರ 1 ರಶೀದಿ ಪುಸ್ತಕ	ಸಂಪೂರ್ಣ ಖಾಲಿ ಉಳಿದಿರುತ್ತವೆ
	ಹ.ವಿ (ಪ್ರಸಾರಾಂಗ)	ರಶೀದಿ ಪುಸ್ತಕ ಸಂಖ್ಯೆ:181 ರಿಂದ 250 (ರ.ಸಂ:9001 ರಿಂದ 12500)ರವರೆಗೆ 70 ರಶೀದಿ ಪುಸ್ತಕಗಳು (ತ್ರಿಪ್ರತಿಯಲ್ಲಿ)	ಸಂಪೂರ್ಣ ಖಾಲಿ ಉಳಿದಿರುತ್ತವೆ
2	ಗ್ರಂಥಾಲಯ	ರಶೀದಿ ಪುಸ್ತಕ ಸಂಖ್ಯೆ:1474 (ರ.ಸಂ:098684 ರಿಂದ 098700)ರ 1 ರಶೀದಿ ಪುಸ್ತಕ	ಭಾಗಶಃ ಖಾಲಿ ಉಳಿದಿರುತ್ತದೆ
		ರಶೀದಿ ಪುಸ್ತಕ ಸಂಖ್ಯೆ:1475 ರಿಂದ 1480 (ರ.ಸಂ:098701 ರಿಂದ 099000) ರವರೆಗೆ ಒಟ್ಟು 6 ರಶೀದಿ ಪುಸ್ತಕಗಳು	ಸಂಪೂರ್ಣ ಖಾಲಿ ಉಳಿದಿರುತ್ತವೆ
3	ವಿದ್ಯಾರ್ಥಿನಿಲಯ	ರಶೀದಿ ಪುಸ್ತಕ ಸಂಖ್ಯೆ:1498 (ರ.ಸಂ:099894 ರಿಂದ 099900) ರ 1 ರಶೀದಿ ಪುಸ್ತಕ	ಭಾಗಶಃ ಖಾಲಿ ಉಳಿದಿರುತ್ತದೆ
		ರಶೀದಿ ಪುಸ್ತಕ ಸಂಖ್ಯೆ:1499 ರಿಂದ 1500 (ರ.ಸಂ:099901 ರಿಂದ 100000) ರವರೆಗೆ ಒಟ್ಟು 2 ರಶೀದಿ ಪುಸ್ತಕಗಳು	ಸಂಪೂರ್ಣ ಖಾಲಿ ಉಳಿದಿರುತ್ತವೆ
4	ಪರೀಕ್ಷಾ ನಿಧಿ (09)	ರಶೀದಿ ಪುಸ್ತಕ ಸಂಖ್ಯೆ:268 (ರ.ಸಂ:013366 ರಿಂದ 013400 ರವರೆಗೆ)	ಭಾಗಶಃ ಖಾಲಿ ಉಳಿದಿರುತ್ತದೆ
		ರಶೀದಿ ಪುಸ್ತಕ ಸಂಖ್ಯೆ:269 ರಿಂದ 290 (ರ.ಸಂ:013401 ರಿಂದ 014500)ರವರೆಗೆ ಒಟ್ಟು 22 ರಶೀದಿ ಪುಸ್ತಕಗಳು	ಸಂಪೂರ್ಣ ಖಾಲಿ ಉಳಿದಿರುತ್ತವೆ
		ರಶೀದಿ ಪುಸ್ತಕ ಸಂಖ್ಯೆ:331 ರಿಂದ 345 (ರ.ಸಂ:016501 ರಿಂದ 017250)ರವರೆಗೆ ಒಟ್ಟು 15 ರಶೀದಿ ಪುಸ್ತಕಗಳು	ಸಂಪೂರ್ಣ ಖಾಲಿ ಉಳಿದಿರುತ್ತವೆ
		ರಶೀದಿ ಪುಸ್ತಕ ಸಂಖ್ಯೆ:662 ರಿಂದ 800 (ರ.ಸಂ:058051 ರಿಂದ 065000)ರವರೆಗೆ ಒಟ್ಟು 139 ರಶೀದಿ ಪುಸ್ತಕಗಳು	ಸಂಪೂರ್ಣ ಖಾಲಿ ಉಳಿದಿರುತ್ತವೆ
5	ಪ್ರಸಾರಾಂಗ ವಿಭಾಗ	ರಶೀದಿ ಪುಸ್ತಕ ಸಂಖ್ಯೆ:161 (ರ.ಸಂ:8010 ರಿಂದ 8050 ರವರೆಗೆ) 1 ರಶೀದಿ ಪುಸ್ತಕ (ತ್ರಿಪ್ರತಿಯಲ್ಲಿ)	ಭಾಗಶಃ ಖಾಲಿ ಉಳಿದಿರುತ್ತದೆ
		ರಶೀದಿ ಪುಸ್ತಕ ಸಂಖ್ಯೆ:162–180 (8051 ರಿಂದ 9000)ರವರೆಗೆ	ಸಂಪೂರ್ಣ ಖಾಲಿ

		19 ಪುಸ್ತಕಗಳು (ತ್ರಿಪ್ರತಿಯಲ್ಲಿ)	ಉಳಿದಿರುತ್ತವೆ

ಬಿ) ರಶೀತಿ ಪುಸ್ತಕಗಳ ದಾಸ್ತನು, ವಿತರಣೆ ಮತ್ತು ಬಾಕಿ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ದಾಸ್ತಾನು ವಿವರ	ವಿಭಾಗ	ಪ್ರಾರಂಭಿಕ ಶಿಲ್ಕು (ದಿ:01.04.2023 ರಂತೆ)	2023–24ರಲ್ಲಿ ಖರೀದಿ/ಸ್ವೀಕೃತಿ	ಒಟ್ಟು	2023–24ರಲ್ಲಿ ವಿತರಣೆ/ಬಳಕೆ	ಅಂತಿಮ ಶಿಲ್ಕು (ದಿ:31.03.2024 ರಂತೆ)	ಉಳಿಕೆ ರಶೀದಿ ಪುಸ್ತಕಗಳ ಸಂಖ್ಯೆ		
								ಇಂದ	ವರೆಗೆ	ಒಟ್ಟು
1	ಮುಖ್ಯ ದಾಸ್ತಾನು	ಸಾಮಾನ್ಯ ನಿಧಿ (08)	20	0	20	15	5	1496	1500	5
		ಹ.ವಿ (ಪ್ರಸಾರಾಂಗ)	0	100	100	10	90	161	250	90
2	ಉಪ ದಾಸ್ತಾನು	ಗ್ರಂಥಾಲಯ	9	0	9	1	8	1473	1480	8
3		ವಿದ್ಯಾರ್ಥಿನಿಲಯ	0	10	10	8	2	1494	1495	2
4		ಅತಿಥಿ ಗೃಹ	1	4	5	4	1	1492	0	1
5		ಕಾರ್ಯಪಾಲಕ ಅಭಿಯಂತರರ ಕಛೇರಿ (ಇಂಜಿನಿಯರಿಂಗ ವಿಭಾಗ)	0	1	1	1	0	–	–	–
ಒಟ್ಟು (ಎ)			30	115	145	39	106	–	–	106
6	–	ಪರೀಕ್ಷಾ ವಿಭಾಗ (09)	176	0	176	0	176	269	290	22
								331	345	15
								662	800	139
7	–	ಪ್ರಸಾರಾಂಗ	21	10	31	21	10	151	160	10
ಒಟ್ಟು (ಬಿ)			197	10	207	21	186	–	–	186
ಒಟ್ಟು (ಎ+ಬಿ)			227	125	352	60	292	–	–	292

26.2 ರಶೀದಿ ಪುಸ್ತಕಗಳಿಂದ ವಿಭಾಗವಾರು ವಸೂಲಿಸಿದ ಮತ್ತು ಇರಸಾಲು ಮಾಡಿದ ವಿವರಗಳು.

2023–24ನೇ ಸಾಲಿನಲ್ಲಿ ಬಳಕೆಯಾಗಿರುವ ರಶೀದಿ ಪುಸ್ತಕಗಳನ್ನು, ಜಮಾ ಚಲನ್‌ಗಳು ಮತ್ತು ಬ್ಯಾಂಕ್ ಸ್ಟೇಟ್‌ಮೆಂಟ್‌ಗಳೊಂದಿಗೆ ಪರಿಶೀಲಿಸಲಾಗಿ ರಶೀತಿ ಪುಸ್ತಕಗಳಿಂದ ಒಟ್ಟು ಸ್ವೀಕೃತಿ ಮತ್ತು ಇರಸಾಲು ವಿವರಗಳ ಸಂಕ್ಷಿಪ್ತ

ಮಾಹಿತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ ಹಾಗೂ ಪೂರ್ಣ ವಿವರಗಳನ್ನು **ಅನುಬಂಧ–52**ರಲ್ಲಿ ವಿವರಿಸಲಾಗಿದೆ.

ಕ್ರ.ಸಂ	ವಿಭಾಗ	ಸ್ವೀಕೃತಿಗಳು			ಇರಸಾಲು			ಕಡಿಮೆ ಇರಸಾಲು
		ರಶೀದಿ	ಚಲನ್/ ಆನ್‌ಲೈನ್	ಒಟ್ಟು	ಸಾಮಾನ್ಯ ನಿಧಿ ಖಾತೆ ಸಂಖ್ಯೆ: 54035420117	ಹಾಸ್ಟೆಲ್ ನಿಧಿ ಖಾತೆ ಸಂಖ್ಯೆ: 64068987296	ಒಟ್ಟು	
1	ಗ್ರಂಥಾಲಯ	23,250	2,260	25,510	25,510	–	25,510	–
2	ಕಾರ್ಯಪಾಲಕ ಅಭಿಯಂತರರ ಕಛೇರಿ	35,400	44,250	79,650	79,650	–	79,650	–
3	ಅತಿಥಿ ಗೃಹ	7,23,460	–	7,23,460	–	7,23,460	7,23,460	–
4	ವಿದ್ಯಾರ್ಥಿ ನಿಲಯ	3,54,583	–	3,54,583	–	3,54,583	3,54,583	–
5	ಪ್ರಸಾರಾಂಗ	2,24,072	–	2,24,072	2,24,072	–	2,24,072	–
ಒಟ್ಟು ಮೊತ್ತ ರೂ.		**13,60,765**	**46,510**	**14,07,275**	**3,29,232**	**10,78,043**	**14,07,275**	–

26.3 ಗ್ರಂಥಾಲಯ ಪುಸ್ತಕಗಳ ದಾಸ್ತಾನು ವಿವರ.

2023–24ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಗ್ರಂಥಾಲಯ ವಿಭಾಗದ ದಾಸ್ತಾನು ವಹಿ/ಸೇರ್ಪಡೆ ವಹಿಗಳನ್ನು (Accession Register) ಪೂರಕ ದಾಖಲೆಗಳೊಂದಿಗೆ ಪರಿಶೀಲಿಸಲಾಗಿ, ದಿನಾಂಕ:01–04–2023ಕ್ಕೆ ಇ–ಪುಸ್ತಕಗಳು ಸೇರಿದಂತೆ ಒಟ್ಟು 1,13,658 ಪುಸ್ತಕಗಳು ಪ್ರಾರಂಭ ಶಿಲ್ಕಿನಲ್ಲಿದ್ದು, ಸದರಿ ಸಾಲಿನಲ್ಲಿ ಖರೀದಿಸಿದ 4,700 ಪುಸ್ತಕಗಳು ಹಾಗೂ ಉಡುಗೊರೆಯಾಗಿ ಸ್ವೀಕರಿಸಿದ 690 ಪುಸ್ತಕಗಳು ಸೇರ್ಪಡೆಗೊಂಡು ದಿನಾಂಕ:31.03.2024ರ ಅಂತ್ಯಕ್ಕೆ ಒಟ್ಟು 1,19,048 ಪುಸ್ತಕಗಳು ಗ್ರಂಥಾಲಯದಲ್ಲಿದ್ದು, ಅದರ ಸಂಕ್ಷಿಪ್ತ ವಿವರ ಫೋಷ್ಟಾರೆ ಈ ಕೆಳಗಿನಂತಿದೆ.

ಪುಸ್ತಕಗಳ ದಾಸ್ತಾನು ವಿವರ	ಖರೀದಿಸಿದ ಪುಸ್ತಕಗಳ ಸಂಖ್ಯೆ	ಉಡುಗೊರೆಯಾಗಿ ಪಡೆದ ಪುಸ್ತಕಗಳ ಸಂಖ್ಯೆ	ಖರೀದಿಸಿದ ಇ–ಪುಸ್ತಕಗಳ ಸಂಖ್ಯೆ	ಒಟ್ಟು
ದಿನಾಂಕ:01.04.2023ರಂತೆ ಆರಂಭಿಕ ಶಿಲ್ಕು	1,03,884	3,686	6,088	1,13,658
(+) 2023–24ನೇ ಸಾಲಿನಲ್ಲಿ ಖರೀದಿ	1,057	690	3,643	5,390

ಒಟ್ಟು	1,04,941	4,376	9,731	1,19,048
(-) 2023-24ನೇ ಸಾಲಿನಲ್ಲಿ ವಿಲೇ/ಕಳವು	–	–	–	–
ದಿನಾಂಕ:31.03.2024ರಂತೆ ಅಂತಿಮ ಶಿಲ್ಕು	1,04,941	4,376	9,731	1,19,048

26.4 ಪ್ರಸಾರಾಂಗದಿಂದ ಪ್ರಕಟಣೆ ಮಾಡಲಾದ/ಸ್ವೀಕರಿಸಲಾದ ಪುಸ್ತಕಗಳು ಹಾಗೂ ಮಾರಾಟಕ್ಕೆ ಇಡಲಾಗಿರುವ ಪುಸ್ತಕಗಳ ದಾಸ್ತಾನು ಪರಿಶೀಲನೆ ಕೈಗೊಳ್ಳದಿರುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಸಾರಾಂಗ ವಿಭಾಗದಿಂದ ವಿವಿಧ ವಿಷಯಗಳ ಹಾಗೂ ಶೀರ್ಷಿಕೆಗಳ ಪುಸ್ತಕಗಳನ್ನು ಮಾರಾಟ ಮಾಡುತ್ತಿದ್ದು, ಪುಸ್ತಕಗಳ ಮಾರಾಟ ಮಳಿಗೆಗಳ ದಾಸ್ತಾನಿನ ಭೌತಿಕ ಪರಿಶೀಲನೆಯನ್ನು ಮುಕ್ತ ವಿಶ್ವವಿದ್ಯಾನಿಲಯದ ವತಿಯಿಂದ ಕೈಗೊಳ್ಳಲಾಗಿರುವುದಿಲ್ಲ. ಕರ್ನಾಟಕ ಆರ್ಥಿಕ ಸಂಹಿತೆ-1958ರ ಅನುಚ್ಛೇದ-169 (Verification of Store) ರನ್ವಯ ಪ್ರತಿ ವರ್ಷ ಪುಸ್ತಕಗಳ ಉಗ್ರಾಣಗಳು ಮತ್ತು ಮಾರಾಟ ಮಳಿಗೆಗಳ ದಾಸ್ತಾನು ಪರಿಶೀಲನೆಯನ್ನು ಕೈಗೊಂಡು ಸಕ್ಷಮ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ. ಆದರೆ ಪುಸ್ತಕಗಳ ಮುಖ್ಯ ದಾಸ್ತಾನು, ಮಾರಾಟ ಮಳಿಗೆಗಳ ಉಪ ದಾಸ್ತಾನುವಿನ ಭೌತಿಕ ಪರಿಶೀಲನೆಯನ್ನು ಕೈಗೊಳ್ಳದಿರುವುದರಿಂದ ಪುಸ್ತಕಗಳ ವಾಸ್ತವಿಕ ದಾಸ್ತಾನು, ಮಾರಾಟವಾಗಿರುವ ಪುಸ್ತಕಗಳು ಹಾಗೂ ಹಾಲಿ ಇರುವ ದಾಸ್ತಾನಿನ ಲೆಕ್ಕಗಳು ಸರಿಯಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಭೌತಿಕ ದಾಸ್ತಾನು ಪರಿಶೀಲನೆ ಕೈಗೊಂಡು ವಾಸ್ತವಿಕ ಅಂಕಿ ಅಂಶಗಳನ್ನು ಕ್ರೋಢೀಕರಿಸದಿರುವುದರಿಂದ ಪುಸ್ತಕಗಳು ಹಾಳಾಗಿ ಅಥವಾ ಕಳೆದುಹೋಗಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿದ್ದರೆ ಪತ್ತೆ ಹಚ್ಚಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಪ್ರಸಾರಾಂಗದ ನಿರ್ದೇಶಕರು ಈ ಬಗ್ಗೆ ಸೂಕ್ತ ಕ್ರಮ ವಹಿಸಿ ಪುಸ್ತಕ ದಾಸ್ತಾನು ಪರಿಶೀಲನೆಗೆ ಪ್ರತ್ಯೇಕ ತಂಡ ರಚಿಸಿ, ಭೌತಿಕ ಪರಿಶೀಲನೆ ನಡೆಸಿದ ವರದಿಯನ್ನು ಪಡೆದುಕೊಂಡು ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದೆ. ದಾಸ್ತಾನು ವಿತರಣಾ ವಿವರಗಳನ್ನು ಹಾಜರುಪಡಿಸಿದ ಪುಸ್ತಕವಾರು ಅಂತಿಮ ಶಿಲ್ಕಿನ ವಿವರಗಳ ತ:ಬ್ಬೆಯನುಸಾರ ಕ್ರೋಢೀಕರಿಸಲಾಗಿದ್ದು, ವಿವರಗಳನ್ನು **ಅನುಬಂಧ-53 ಮತ್ತು 53(ಎ)** ರಲ್ಲಿ ವರದಿಗೆ ಲಗತ್ತಿಸಿದೆ.

26.5 ಅಂಕಪಟ್ಟಿ, ಪದವಿ ಪ್ರಮಾಣ ಪತ್ರಗಳು ಹಾಗೂ ಇತರೆ ಪ್ರಮಾಣ ಪತ್ರಗಳ ವಿತರಣೆ ಹಾಗೂ ದಾಸ್ತಾನು ನಿರ್ವಹಣೆಯಲ್ಲಿನ ನ್ಯೂನತೆಗಳು.

2023-24ನೇ ಸಾಲಿಗೆ ಸಂಬಂಧಿಸಿದಂತೆ ಅಂಕಪಟ್ಟಿ, ಪದವಿ ಪ್ರಮಾಣ ಪತ್ರಗಳು ಹಾಗೂ ಇತರೆ ಪ್ರಮಾಣ ಪತ್ರಗಳ ವಿತರಣೆ ಹಾಗೂ ದಾಸ್ತಾನು ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ನೀಡಿದ ವಿಚಾರಣೆ ಪತ್ರ ಸಂಖ್ಯೆ:01/28.10.2024ಕ್ಕೆ ಪ್ರತಿಕ್ರಿಯಿಸಿ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದವರು ಹಾಜರುಪಡಿಸಿದ ದಾಸ್ತಾನು ವಹಿಯ ಅನುಸಾರ ವಿವರಗಳು ಕೆಳಕಂಡಂತಿದೆ.

ವಿವರ	ಅಂಕಪಟ್ಟಿಗಳ ವಿವರ	ಉತ್ತರ ಪುಸ್ತಕಗಳ	ನೈಪತೆ ಪ್ರಮಾಣ ಪತ್ರಗಳ ವಿವರ	ಪದವಿ ಪ್ರಮಾಣ ಪತ್ರಗಳ ವಿವರ	ವಲಸೆ ಪ್ರಮಾಣ ಪತ್ರಗಳ ವಿವರ	ತಾತ್ಕಾಲಿಕ ಪ್ರಮಾಣ

		ವಿವರ				ಪತ್ರಗಳ ವಿವರ
ಆರಂಭಿಕ ಶಿಲ್ಕು ದಿ:01.04.2023	454999	1345929	11800	155052	10800	5800
2023–2024ನೇ ಸಾಲಿನ ಖರೀದಿ	0000	26165	0000	0	0000	0000
2023–2024ನೇ ಸಾಲಿನ ವಿತರಣೆ	80811	424272	1066	8861	581	1246
ರದ್ದುಗೊಳಿಸಿದ ವಿವರ	1189	01	34	139	19	54
ಅಂತಿಮ ಶಿಲ್ಕು ದಿ:31.03.2024	**372999**	**947821**	**10700**	**146052**	**10200**	**4500**

ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳ ನಿರ್ವಹಣೆಗೆ ಸಂಬಂಧಿಸಿದ ದಾಸ್ತಾನು ವಹಿಯನ್ನು ಪರಿಶೀಲಿಸಿದಾಗ, ವಿಭಾಗದಲ್ಲಿ ಕಾರ್ಯನಿರ್ವಹಿಸುವ ವಿಷಯ ನಿರ್ವಾಹಕರುಗಳಿಗೆ ಸುಮಾರು ಐದು ನೂರರಿಂದ ಸಾವಿರ ಸಂಖ್ಯೆಯಲ್ಲಿ ಖಾಲಿ ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಿ, ತದನಂತರ ವಿತರಣೆಯಾದ ಬಗ್ಗೆ ವಿವರ/ದಾಖಲೆಗಳನ್ನು ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ನೀಡುವ ಪದ್ಧತಿ ಅಳವಡಿಸಿಕೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ದಾಸ್ತಾನು ನಿರ್ವಹಣೆಗೆ ಸಂಬಂಧಿಸಿದಂತೆ ಕಂಡು ಬಂದ ನ್ಯೂನತೆಗಳು ಕೆಳಕಂಡಂತಿವೆ.

1. ಅಂಕಪಟ್ಟಿಗಳು, ನೈಜಪ್ರಮಾಣ ಪತ್ರ, ತಾತ್ಕಾಲಿಕ ಪ್ರಮಾಣ ಪತ್ರಗಳು ಮತ್ತು ಪದವಿ ಪ್ರಮಾಣ ಪತ್ರಗಳನ್ನು ಸೇರಿದಂತೆ ಒಟ್ಟು 1436 ಸಂಖ್ಯೆಯ ಪ್ರಮಾಣ ಪತ್ರಗಳನ್ನು ರದ್ದುಗೊಳಿಸಲಾಗಿದ್ದು, ರದ್ದುಗೊಳಿಸಲಾದ ಪ್ರತಿಯನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳು ವಿಶ್ವವಿದ್ಯಾನಿಲಯದ ಪ್ರಮುಖ ದಾಖಲೆಗಳಾಗಿದ್ದು, ಅತ್ಯಂತ ಜಾಕರೂಕತೆಯಿಂದ ಕ್ರಮಬದ್ಧವಾಗಿ ನಿರ್ವಹಿಸಬೇಕಾಗುತ್ತದೆ. ಆದ್ದರಿಂದ, ವಿಶ್ವವಿದ್ಯಾನಿಲಯವು ಈ ಕುರಿತು ಸೂಕ್ತ ಆಡಳಿತಾತ್ಮಕ ಕ್ರಮಕ್ಕೆಗೊಳ್ಳಲು ಸೂಚಿಸಿದೆ.

26.6 ಆರೋಗ್ಯ ಕೇಂದ್ರದ ಔಷಧಿ ದಾಸ್ತಾನು ಪರಿಶೀಲನೆ.

ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯ ಆರೋಗ್ಯ ಕೇಂದ್ರದ ಔಷಧಿ ದಾಸ್ತಾನು ವಹಿಗಳನ್ನು ಪರಿಶೀಲಿಸಲಾಗಿ, 2023–24ನೇ ಸಾಲಿನ ಔಷಧಿ ದಾಸ್ತಾನು ಸ್ವೀಕೃತಿ, ವಿತರಣೆ ಮತ್ತು ಉಳಿಕೆ ವಿವರಗಳನ್ನು **ಅನುಬಂಧ–54 ಮತ್ತು 54(ಅ) ರಲ್ಲಿ** ನೀಡಿದೆ ಹಾಗೂ ಆರೋಗ್ಯ ಕೇಂದ್ರದ ಔಷಧಿ ದಾಸ್ತಾನು ವಹಿಯಲ್ಲಿ ಖರೀದಿ, ವಿತರಣೆ, ಪ್ರಾರಂಭಿಕ ಮತ್ತು ಅಂತಿಮ ಶಿಲ್ಕುಗಳನ್ನು ಕಾಲಿಕವಾಗಿ ದಾಖಲಿಸಿ, ಲೆಕ್ಕಸಮನ್ವಯಗೊಳಿಸಿ ಕಛೇರಿ ಮುಖ್ಯಸ್ಥರಿಂದ ಧೃಢೀಕರಣ ಪಡೆದು ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

26.7 ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ನಿಯಮಾನುಸಾರ ತಯಾರಿಸಿಲ್ಲದಿರುವುದು.

ಕರ್ನಾಟಕ ಆರ್ಥಿಕ ಸಂಹಿತೆ–1958ರ ಅನುಚ್ಛೇದ–169 ರನ್ವಯ ಪ್ರತಿ ಆರ್ಥಿಕ ವರ್ಷದ ಕೊನೆಯಲ್ಲಿ ವಾರ್ಷಿಕ ದಾಸ್ತಾನು ಪರಿಶೀಲನೆಯನ್ನು ಕೈಗೊಂಡು, ಕ್ರೋಢೀಕೃತ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ ಹಾಗೂ ಕೆ.ಎಫ್.ಸಿ–1958ರ ಅನುಚ್ಛೇದ–168ರನ್ವಯ ಅನುಪಯುಕ್ತ ವಸ್ತುಗಳನ್ನು ಪಟ್ಟಿಮಾಡಿ

ವಿಲೇ ಮಾಡಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಅದರಂತೆ ವಾರ್ಷಿಕ ಪರಿಶೀಲನೆ ಕೈಗೊಂಡು ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಿದ ಕ್ರೋಢೀಕೃತ ದಾಸ್ತಾನು ಪರಿಶೀಲನಾ ವರದಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:186/15.02.2025ನ್ನು ನೀಡಲಾಗಿತ್ತು. ಆದರೆ ವಿಶ್ವವಿದ್ಯಾನಿಲಯದವರು ಈ ಮೇಲ್ಕಂಡ ಕೆ.ಎಫ್.ಸಿ ನಿಯಮಗಳಲ್ಲಿ ಸೂಚಿಸಿರುವ ರೀತ್ಯ ಕ್ರೋಢೀಕೃತ ವರದಿ ತಯಾರಿಸದೆ ಅಪೂರ್ಣ ಮಾಹಿತಿಯುಳ್ಳ ತಃಖ್ತೆಯನ್ನು ತಯಾರಿಸಿ ಅನುಪಾಲನಾ ವರದಿಯೊಂದಿಗೆ ದಿನಾಂಕ:24.02.2025ರಂದು ಸಲ್ಲಿಸಿರುತ್ತಾರೆ. ಇದರಿಂದಾಗಿ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಪ್ರಸ್ತುತ ಲಭ್ಯವಿರುವ ವಿವಿಧ ಸಾಮಗ್ರಿ/ಸಲಕರಣೆಗಳ ಪರಿಮಾಣ ಹಾಗೂ ಸ್ಥಿತಿಗತಿಗಳ ಬಗ್ಗೆ ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಪ್ರತಿ ವರ್ಷ ದಾಸ್ತಾನುಗಳನ್ನು ಭೌತಿಕವಾಗಿ ಪರಿಶೀಲಿಸಿ ಧೃಡೀಕರಿಸದಿದ್ದಲ್ಲಿ ದಾಸ್ತಾನು ಪುಸ್ತಕದ ಶಿಲ್ಕಿಗೂ ಹಾಗೂ ವಾಸ್ತವಿಕವಾಗಿರುವ ಭೌತಿಕ ಶಿಲ್ಕಿಗೂ ವ್ಯತ್ಯಾಸವನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಿಯಮಾನುಸಾರ ಪ್ರತಿ ವಿಭಾಗಗಳ ವಾರ್ಷಿಕ ದಾಸ್ತಾನು ಪರಿಶೀಲನೆ ಕೈಗೊಂಡು ವರದಿ ಕ್ರೋಢೀಕರಿಸಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲು ಸೂಚಿಸಿದೆ.

27. ವಿಶ್ವವಿದ್ಯಾನಿಲಯದ ಮುದ್ರಣಾಲಯ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ತನ್ನದೇ ಆದ ಸ್ವಂತ ಮುದ್ರಣಾಲಯವನ್ನು ಹೊಂದಿರುವುದಿಲ್ಲ.

28. ವಾಹನ ಖರೀದಿ ಮುಂಗಡಗಳು

2023–24ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದಿಂದ ಯಾವುದೇ ಮುಂಗಡ ನೀಡಿರುವುದಿಲ್ಲ ಮತ್ತು ವಸೂಲಿಸಬೇಕಾದ ಬಾಕಿ ಇರುವುದಿಲ್ಲ.

29. ಗೃಹ ನಿರ್ಮಾಣ ಮುಂಗಡಗಳು

2023–24ನೇ ಸಾಲಿನ ಲೆಕ್ಕಪರಿಶೋಧನೆಗೆ ಮುಕ್ತ ವಿಶ್ವವಿದ್ಯಾನಿಲಯದವರು ನೀಡಿದ ದಾಖಲೆಗಳನ್ವಯ ಗೃಹ ನಿರ್ಮಾಣ ಮುಂಗಡ ನ್ಯೂನತೆಗಳಿಗೆ ಸಂಬಂಧಿಸಿದಂತೆ ಯಾವುದೇ ಕಂಡಿಕೆಗಳಿರುವುದಿಲ್ಲ.

30. ಇತರೆ ಮುಂಗಡಗಳು

30.1 ಕಟಾಯಿಸಲಾದ ಆದಾಯ ತೆರಿಗೆ ರೂ.7,600/–ಗಳನ್ನು ಸಂಬಂಧಪಟ್ಟ ಇಲಾಖೆಗೆ ಜಮೆ ಮಾಡಿರುವ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.

2023–24ನೇ ಸಾಲ್ಲಿನಲ್ಲಿ ಅಧ್ಯಾಪಕರ ಸಿ.ಎ.ಎಸ್ ಪದೋನ್ನತಿ ಸಂಬಂಧ ದಿನಾಂಕ:25.07.2023 ಮತ್ತು ದಿನಾಂಕ:26.07.2023 ರಂದು ನಡೆಸಲಾದ Screening Cum-Evaluation and Selection committee ಸಭೆಗೆ ಈ ಕೆಳಕಂಡಂತೆ ಒಟ್ಟು ರೂ.4.00,000/–ಗಳ ಮುಂಗಡವನ್ನು ಪಾವತಿಸಲಾಗಿರುತ್ತದೆ.

ಕ್ರ.ಸಂ	ಪಾವತಿ ವೋಚರ್ ಸಂಖ್ಯೆ & ದಿನಾಂಕ	ಮೊತ್ತ	ಹೊಂದಾಣಿಕೆ ಮೊತ್ತ	ಉಳಿಕೆ ಮೊತ್ತ ಜಮೆ ಮಾಡಿರುವುದು	ಆದಾಯ ತೆರಿಗೆ ಕಟಾವಣೆ ಮೊತ್ತ

1	190/25.07.2023	2,00,000	1,80,488	19,512	5400
2	191/25.07.2023	2,00,000	1,99,997	3	2200
	ಒಟ್ಟು	**4,00,000**	**3,80,485**	**19,515**	**7,600**

ಮೇಲ್ಕಂಡ ವಿವರಗಳಂತೆ ಕಟಾಯಿಸಲಾದ ಆದಾಯ ತೆರಿಗೆ ಒಟ್ಟು ಮೊತ್ತ ರೂ.7,600/–ಗಳನ್ನು ಜಮೆ ಮಾಡಿರುವ ಸಂಬಂಧದ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:69/16.12.2024ರಲ್ಲಿ ಕೋರಲಾಗಿದ್ದರೂ, ವಿಶ್ವವಿದ್ಯಾನಿಲಯವು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಆದುದರಿಂದ ಆದಾಯ ತೆರಿಗೆಯನ್ನು ಜಮೆ ಮಾಡುವವರೆಗೆ **ರೂ.7,600/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

30.2 ಹಬ್ಬದ ಮುಂಗಡ ಮತ್ತು ಹೊಂದಾಣಿಕೆ ಮಾಡಿರುವುದು.

2023–24ನೇ ಸಾಲಿನ ಬೋಧಕೇತರ ವರ್ಗದವರಿಗೆ ಹಬ್ಬದ ಮುಂಗಡ ಮಂಜೂರು ಮಾಡಿರುವ, ವೇತನದಿಂದ ಕಟಾಯಿಸಿರುವ ಹಾಗೂ ಕಟಾಯಿಸಲು ಬಾಕಿ ಇರುವ ವಿವರಗಳನ್ನೊಳಗೊಂಡ ಕಟಾವಣೆ ವಹಿಯನ್ನು ಪೂರಕ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ವಿವರಗಳು ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಆದೇಶ ಸಂಖ್ಯೆ	ಹಬ್ಬ	ಒಟ್ಟು ಮೊತ್ತ
1	ಕರಮುವಿ/ಆವಿ/ಸಿಬ್ಬಂದಿ/2/897(ಉ.ಕ)/2022–23/ದಿ:19.04.2023	ರಂಜಾನ್ ಮತ್ತು ಬಸವ ಜಯಂತಿ	94000
2	ಕರಮುವಿ/ಆವಿ/ಸಿಬ್ಬಂದಿ/2/897(ಉ.ಕ)/2022–23/ದಿ:23.06.2023/27.06.2023	ಬಕ್ರೀದ್	237500
3	ಕರಮುವಿ/ಆವಿ/ಸಿಬ್ಬಂದಿ/2/897/2022–23/ದಿ:04.08.2023	ಸ್ವಾತಂತ್ರ ದಿನಾಚರಣೆ	362000
4	ಕರಮುವಿ/ಆವಿ/ಸಿಬ್ಬಂದಿ/2/897/2022–23/ದಿ:16.08.2023	ವರಮಹಾಲಕ್ಷ್ಮಿ ಹಬ್ಬ	611000
5	ಕರಮುವಿ/ಆವಿ/ಸಿಬ್ಬಂದಿ/2/897/2022–23/ದಿ:14.09.2023	ಗಣೇಶ ಚತುರ್ಥಿ ಹಬ್ಬ	405500
6	ಕರಮುವಿ/ಆವಿ/ಸಿಬ್ಬಂದಿ/2/897/2022–23/ದಿ:25.09.2023	ಈದ್ ಮಿಲಾದ್	265000
7	ಕರಮುವಿ/ಆವಿ/ಸಿಬ್ಬಂದಿ/2/897/2022–23/ದಿ:07.10.2023	ಮಹಾಲಯ ಅಮಾವಾಸ್ಯೆ	205500
8	ಕರಮುವಿ/ಆವಿ/ಸಿಬ್ಬಂದಿ/2/897/2022–23/ದಿ:19.10.2023	ಆಯುಧಪೂಜೆ/ವಿಜಯದಶಮಿ	202000
9	ಕರಮುವಿ/ಆವಿ/ಸಿಬ್ಬಂದಿ/2/897/2022–23/ದಿ:06.11.2023	ದೀಪಾವಳಿ	136500
10	ಕರಮುವಿ/ಆವಿ/ಸಿಬ್ಬಂದಿ/2/897/2022–23/ದಿ:15.12.2023	ಕ್ರಿಸ್‌ಮಸ್	133500
11	ಕರಮುವಿ/ಆವಿ/ಸಿಬ್ಬಂದಿ/2/897/2022–23/ದಿ:10.01.2024	ಮಕರ ಸಂಕ್ರಾಂತಿ	269500
12	ಕರಮುವಿ/ಆವಿ/ಸಿಬ್ಬಂದಿ/2/1131/2023–24/ದಿ:01.03.2024	ಮಹಾಶಿವರಾತ್ರಿ	193500
		ಒಟ್ಟು	3115500

ಫೋಷ್ಠಾರೆ

ಏಪ್ರೀಲ್ 2023 ರ ಪ್ರಾರಂಭಿಕ ಶಿಲ್ಕು	280320
2023–24 ರಲ್ಲಿ ಮಂಜೂರು ಮಾಡಿರುವ ಹಬ್ಬದ ಮುಂಗಡ ಮೊತ್ತ	3115500
ಒಟ್ಟು	3395820
2023–24 ರ ವರೆಗೆ ವಸೂಲಾತಿ ಮಾಡಿರುವ ಮೊತ್ತ	3164080
ಅಂತಿಮ ಶಿಲ್ಕು (ಹೊಂದಾಣಿಕೆಯಾಗಬೇಕಾಗಿರುವುದು)	231740

30.3 ಪರೀಕ್ಷಾಂಗ ಖಾತೆ ಮತ್ತು ಸಾಮಾನ್ಯ ಖಾತೆಯಿಂದ ಎ.ಸಿ. ಬಿಲ್ಲಿನ ಮೂಲಕ ವೆಚ್ಚ ಭರಿಸಲಾದ ಹೊಂದಾಣಿಕೆ ವೋಚರ್‌ಗಳಲ್ಲಿನ ನ್ಯೂನ್ಯತೆಗಳು.

ವಿಶ್ವವಿದ್ಯಾನಿಲಯದಲ್ಲಿ 2023–24ನೇ ಸಾಲಿಗೆ ವಿವಿಧ ಉದ್ದೇಶಗಳಿಗಾಗಿ ಪರೀಕ್ಷಾಂಗ ಖಾತೆ ಮತ್ತು ಸಾಮಾನ್ಯ ಖಾತೆಯಿಂದ ಕ್ರಮವಾಗಿ **ಅನುಬಂಧ–55 ಮತ್ತು 55(ಎ)ರಲ್ಲಿ** ವಿವರಿಸಿರುವಂತೆ ಕ್ರಮವಾಗಿ ರೂ.93,42,000/– ಮತ್ತು ರೂ.74,42,906/–ಗಳನ್ನು ಎ.ಸಿ ಬಿಲ್ಲಿನ ಮೂಲಕ ಹಣ ಸೆಳೆಯಲಾಗಿದೆ. ಸದರಿ ಬಿಲ್ಲುಗಳಿಗೆ ಸಲ್ಲಿಸಲಾಗಿರುವ ಎನ್.ಡಿ.ಸಿ ವೋಚರ್‌ಗಳ ಪರಿಶೀಲನೆಯಲ್ಲಿ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತದೆ.

1. ಸಾದಿಲ್ವಾರು ವೆಚ್ಚ ಕೈಪಿಡಿ 1958 ನಿಯಮ 37(8) ರ ಪ್ರಕಾರ ಎನ್.ಡಿ.ಸಿ ಬಿಲ್ಲುಗಳನ್ನು ಎ.ಸಿ ಬಿಲ್ಲನ್ನು ಡ್ರಾ ಮಾಡಲಾದ ಮುಂದಿನ ತಿಂಗಳ ಮೊದಲ ವಾರದ ಮುಕ್ತಾಯದ ಒಳಗೆ ಮೇಲುಸಹಿ ಅಧಿಕಾರಿಗಳಿಗೆ ಸಲ್ಲಿಸಬೇಕಾಗಿರುತ್ತದೆ. ಆದರೆ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಳ ಕಛೇರಿಗಳಲ್ಲಿ ಕನಿಷ್ಠ 4 ದಿನಗಳಿಂದ 242 ದಿನಗಳವರೆಗೆ ತಡವಾಗಿ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಲಾಗಿದೆ. ವಿವರಗಳನ್ನು **ಅನುಬಂಧ–55 ಮತ್ತು 55(ಎ)ರಲ್ಲಿ** ನೀಡಲಾಗಿದೆ

2. ಎ.ಸಿ ಬಿಲ್ಲಿನಲ್ಲಿ ಡ್ರಾ ಮಾಡಿರುವ ಉಳಿಕೆ ಹಣವನ್ನು ಎಂ.ಸಿ.ಇ ನಿಯಮ 36(4)ರಂತೆ ತಡಮಾಡದೆ ಸಂಬಂಧಪಟ್ಟ ಖಾತೆಗೆ ಜಮಾ ಮಾಡಬೇಕಿದ್ದು, ತಡವಾಗಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಲಾಗುತ್ತಿದೆ. ಹೀಗೆ ವಿಳಂಭವಾಗಿ ಎನ್.ಡಿ.ಸಿ ಸಲ್ಲಿಸುವ ಹಾಗೂ ಬಾಕಿ ಮೊತ್ತವನ್ನು ಜಮೆ ಮಾಡುವವರಿಂದ ವಿಳಂಬದ ಅವಧಿಗೆ ಅನ್ವಯವಾಗುವ ದರದಲ್ಲಿ ಬಡ್ಡಿಯನ್ನು ವಸೂಲಿಸಲು ಸೂಚಿಸಲಾಗಿದೆ.

3. ಸಾದಿಲ್ವಾರು ವೆಚ್ಚದ ಕೈಪಿಡಿ ನಿಯಮ 1958ರ ನಿಯಮ 36ರ ರೀತ್ಯ ತುರ್ತು ವೆಚ್ಚಗಳಿಗೆ ಅವಶ್ಯವಿರುವ ಸಂದರ್ಭಗಳಲ್ಲಿ ಸಂಕ್ಷಿಪ್ತ ಬಿಲ್ಲುಗಳ ಮೂಲಕ ಹಣ ಡ್ರಾ ಮಾಡಲು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಹಣ ಡ್ರಾ ಮಾಡಲು ಎ.ಸಿ ಬಿಲ್ಲು ತಯಾರಿಸಿ

ನಿಯಂತ್ರಣಾಧಿಕಾರಿಯವರಿಂದ ಬಿಲ್ಲಿಗೆ ಮೇಲು ಸಹಿಯಿಲ್ಲದೆಯೇ ಹಣ ಡ್ರಾ ಮಾಡಿ ವೆಚ್ಚ ಭರಿಸಿ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ.

4. ಸರ್ಕಾರದ ಆದೇಶ ಸಂಖ್ಯೆ: ಆಇ03/ಟಿಎಫ್‌ಪಿ/2018, ಬೆಂಗಳೂರು ದಿನಾಂಕ:14.05.2018ರ ಮಾರ್ಗಸೂಚಿಗಳಂತೆ ರೂ.2.00 ಲಕ್ಷಕ್ಕಿಂತ ಅಧಿಕ ಮೊತ್ತವನ್ನು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಿನ ಮೂಲಕ ಡ್ರಾ ಮಾಡಲು ಅವಕಾಶವಿರುವುದಿಲ್ಲವಾದರೂ, ರೂ.2.00 ಲಕ್ಷಕ್ಕಿಂತ ಅಧಿಕ ಮೊತ್ತವನ್ನು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಿನ ಮೂಲಕ ಡ್ರಾ ಮಾಡಲಾಗಿದೆ.

ಈ ಮೇಲ್ಕಿನ ನ್ಯೂನತೆಗಳಿಗೆ ಸಂಬಂಧಿಸಿದಂತೆ ಮುಂಗಡ ಹುಂಡಿ ಮೊತ್ತಗಳಿಗೆ ಎನ್.ಡಿ.ಸಿ ಬಿಲ್ಲುಗಳನ್ನು ವಿಳಂಭವಾಗಿ ಸಲ್ಲಿಸುತ್ತಿರುವ ಪ್ರಕರಣಗಳನ್ನು ಗುರುತಿಸಿ ವಿಳಂಭದ ಅವಧಿಗೆ ಬಡ್ಡಿ ಲೆಕ್ಕಾಚಾರ ಮಾಡಿ ಸಂಬಂಧಿಸಿದವರಿಂದ ವಸೂಲಿಸುವ ಹಾಗೂ ತುರ್ತಲ್ಲದ ಪಾವತಿಗಳಿಗೆ ಕಡ್ಡಾಯವಾಗಿ ಡಿಸಿ ಬಿಲ್ಲುಗಳ ಮೂಲಕ ವೆಚ್ಚ ಭರಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳದೆ ಇರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದು, ಈ ಬಗ್ಗೆ ಸೂಕ್ತ ವಿವರಣೆ ಕೋರಿ ಆಡಿಟ್ ವಿಚಾರಣೆ ಪತ್ರ ಸಂಖ್ಯೆ:185/12.02.2025 ಮತ್ತು 153/03.02.2025ರಂದು ನೀಡಲಾಗಿದ್ದು, ವಿಶ್ವವಿದ್ಯಾನಿಲಯದವರು ಯಾವುದೇ ಅನುಪಾಲನಾ ವರದಿಯನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಿರುವುದಿಲ್ಲ. ಅನುಬಂಧದಲ್ಲಿ ವಿವರಿಸಿರುವಂತೆ ವಿಳಂಭವಾಗಿ ಸಲ್ಲಿಸಿರುವ ಎನ್.ಡಿ.ಸಿ ಹೊಂದಾಣಿಕೆ ಬಿಲ್ಲುಗಳ ಮೊತ್ತಕ್ಕೆ ಬ್ಯಾಂಕ್‌ನವರು ಸಾಲದ ಮೊತ್ತಕ್ಕೆ ವಿಧಿಸುವ ಬಡ್ಡಿ ದರದಲ್ಲಿ ದಂಡ ಲೆಕ್ಕಚಾರ ಮಾಡಿ ಸಂಬಂಧಿಸಿದವರಿಂದ ವಸೂಲಿಸಿ ವರದಿಯನ್ನು ಅನುಪಾಲನಾ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

31. ಸಹಾಯಾನುದಾನಗಳು

2023–24ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯವು ಯಾವುದೇ ಸಹಾಯಾನುದಾನ ಸ್ವೀಕರಿಸಿದ ಬಗ್ಗೆ ಮಾಹಿತಿಯನ್ನು ನೀಡಿರುವುದಿಲ್ಲ.

32. ವಿದ್ಯಾರ್ಥಿ ವೇತನ ಮತ್ತು ಬಹುಮಾನಗಳ ದತ್ತಿಗಳು

32.1 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟಪಂಗಡದ ವಿದ್ಯಾರ್ಥಿಗಳ ಶುಲ್ಕ ವಿನಾಯಿತಿಯ ವಿವರ:

ಕ.ರಾ.ಮು.ವಿ.ವಿನಿಲಯದಲ್ಲಿ 2023–24ನೇ ಸಾಲಿನಲ್ಲಿ ಪ್ರವೇಶಾತಿ ಪಡೆದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಶುಲ್ಕ ವಿನಾಯಿತಿಗೆ ಸಂಬಂಧಿಸಿದಂತೆ ಎಸ್.ಬಿ.ಐ (ಖಾತೆ ಸಂ:0054035421417) ಹಾಗೂ ಹಚ್.ಡಿ.ಎಫ್.ಸಿ(ಖಾತೆ ಸಂ:50100059343995) ಬ್ಯಾಂಕ್ ಖಾತೆಗಳಲ್ಲಿ ವಿದ್ಯಾರ್ಥಿವೇತನ ಮರುಪಾವತಿ ಮೊತ್ತವನ್ನು ನಿರ್ವಹಿಸುತ್ತಿದ್ದು, ವಿವರಗಳು ಕೆಳಗಿನಂತಿವೆ:

ಘೋಷ್ವಾರೆ

ಕ್ರಮ	ವಿವರ	ಖಾತೆ ವಿವರ	ಒಟ್ಟು ಮೊತ್ತ

ಸಂ		ಎಸ್.ಬಿ.ಐ	ಹಬ್.ಡಿ.ಎಫ್.ಸಿ	
1.	ಆರಂಭಿಕ ಶಿಲ್ಕು ದಿನಾಂಕ:01.04.2023 ರಂತೆ	30788323.57	15980052.82	46768376.39
2.	<u>ಸ್ವೀಕೃತಿಗಳು</u>			
	a) ಸಮಾಜ ಕಲ್ಯಾಣ ಇಲಾಖೆ ಯಿಂದ ಮರು ಭರಿಕೆ ಯಾಗಿರುವ ಮೊತ್ತ	78800.00	0	78800.00
	b) ಅರ್ಜಿಸಿರುವ ಬಡ್ಡಿ	842076.00	560511.00	1402587.00
	c) ವರ್ಗಾವಣೆಯಾಗದ ಖಾತೆಗೆ ಮರುಜಮೆಯಾಗಿರುವುದು	4.00	0	4.00
3.	ಒಟ್ಟು ಸ್ವೀಕೃತಿಗಳು (a+b+c)	920880.00	560511.00	1481391.00
4.	ಒಟ್ಟು (1+3)	31709203.57	16540563.82	48249767.39

5.	ಪಾವತಿಗಳು			
	d) ಉಚಿತ ಪ್ರವೇಶಾತಿ ಶುಲ್ಕ ಸಾಮಾನ್ಯ ನಿಧಿ ಖಾತೆಗ ವರ್ಗಾವಣೆ	0	0	0
	e) 2023–24 ನೇ ಸಾಲಿನಲ್ಲಿ ವಿದ್ಯಾರ್ಥಿ ವೇತನ ಪಾವತಿಸಿರುವ ಮೊತ್ತ	0	2148700.00	2148700.00
	f) ಬ್ಯಾಂಕ್ ಚಾರ್ಜಸ್	0	94.40	94.40
6.	ಒಟ್ಟು ಪಾವತಿಗಳು(d+e)	0	2148794.40	2148794.40
7.	**ಅಂತಿಮ ಶಿಲ್ಕು ದಿನಾಂಕ:31.04.2024 ರಂತೆ (4–6)**	**31709203.57**	**14391769.42**	**46100973.00**

ಹಾಜರುಪಡಿಸಲಾದ ನಗದು ಪುಸ್ತಕ ಮತ್ತು ಬ್ಯಾಂಕ್ ಸ್ಟೇಟ್ಮೆಂಟ್ ಗಳನ್ನು ಪರಿಶೀಲಿಸಲಾಗಿ 2023–24 ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಶುಲ್ಕ ಮರುಭರಿಕೆಯಾಗಿರುವುದಿಲ್ಲ. ಆರಂಭಿಕ ಶಿಲ್ಕು ರೂ4,67,68,376/– ಖಾತೆಗಳಲ್ಲಿ ಲಭ್ಯವಿದ್ದು ಹಿಂದಿನ ಸಾಲುಗಳ ಬಾಕಿ ಮೊತ್ತ ರೂ.78,800/– ಗಳು ಸದರಿ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಸ್ವೀಕೃತಿಯಾಗಿದೆ. ಆದರೆ, ವಿದ್ಯಾರ್ಥಿಗಳಿಗೆ ವಿತರಿಸಲು ವಿವರ ಲಭ್ಯವಿರುವುದಿಲ್ಲ, ಈ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ:120/17.01.2025ರಲ್ಲಿ ಕೋರಲಾಗಿ ಯಾವುದೇ ದಾಖಲೆ ನೀಡಿರುವುದಿಲ್ಲ. ರೂ.21,48,700/– ಗಳನ್ನು ಹಿಂದಿನ ಸಾಲುಗಳಲ್ಲಿ ಶುಲ್ಕ ಪಾವತಿಸಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ವಿತರಣೆ ಮಾಡಲಾಗಿದ್ದು, ರೂ.4,61,00,973/–ಗಳ ಅಂತಿಮ ಶಿಲ್ಕು 2023–24ನೇ ಸಾಲಿನ ಅಂತ್ಯಕ್ಕೆ ಖಾತೆಗಳಲ್ಲಿ ಉಳಿದಿರುತ್ತವೆ. ಉಳಿಕೆಯಾಗಿರುವ ಅಂತಿಮ ಶಿಲ್ಕಿನ ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ವಿವರ	ಮೊತ್ತ
1.	ಖಾತೆಯಲ್ಲಿ ಲಭ್ಯವಿರುವ ಮರುಭರಿಕೆ ಮೊತ್ತಕ್ಕೆ ಸ್ವೀಕೃತಿಯಾಗಿರುವ ಬಡ್ಡಿ	1,70,30,747.00

2.	ವಿತರಿಸದೆ ಬಾಕಿ ಉಳಿದಿರುವ ವಿದ್ಯಾರ್ಥಿವೇತನ ಮೊತ್ತ	2,90,70,226.00
	ಒಟ್ಟು	**4,61,00,973.00**

32.2 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಅನುಧಾನದಿಂದ ಅರ್ಜಿತವಾಗಿರುವ ಬಡ್ಡಿ ಮೊತ್ತ ರೂ.1,70,30,747/–ಗಳನ್ನು ಸರ್ಕಾರಕ್ಕೆ ಹಿಂದಿರುಗಿಸದೆ ಖಾತೆಯಲ್ಲಿ ಉಳಿಸಿಕೊಂಡಿರುವುದು.

ಸರ್ಕಾರದಿಂದ ಮಂಜೂರಾಗಿರುವ ವಿದ್ಯಾರ್ಥಿವೇತನ ಮೊತ್ತದಿಂದ ಅರ್ಜಿತವಾಗಿರುವ ಬಡ್ಡಿಯನ್ನು ಹಣಕಾಸು ವರ್ಷದ ಅಂತ್ಯಕ್ಕೆ ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಬೇಕಾಗಿರುತ್ತದೆ, ಈ ಕೆಳಗೆ ವಿವರಿಸಿರುವಂತೆ ಖಾತೆಯಲ್ಲಿ ಲಭ್ಯವಿರುವ ಮರುಭರಿಕೆ ಮೊತ್ತಕೆ ಸ್ವೀಕೃತಿಯಾಗಿರುವ ಬಡ್ಡಿ ರೂ.1,70,30,747/–ಗಳನ್ನು ಸರ್ಕಾರಕ್ಕೆ ಜಮೆ ಮಾಡದಿರುವುದು ಕಂಡುಬಂದಿದ್ದು, ಈ ಬಗ್ಗೆ ಸೂಕ್ತ ವಿವರಣೆ ನೀಡುವಂತೆ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:191/15.02.2025ರಲ್ಲಿ ಕೋರಲಾಗಿ ವಿಶ್ವವಿದ್ಯಾನಿಲಯದವರು 2015–16 ರಿಂದ 2022–23ರ ವರೆಗಿನ ಬಡ್ಡಿ ಮೊತ್ತವನ್ನು ಜಮೆ ಮಾಡುವ ಸಂಬಂಧ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಮತ್ತು ಸಹಾಯಕ ನಿರ್ದೇಶಕರು ಗ್ರೇಡ್–01, ಸಮಾಜ ಕಲ್ಯಾಣ ಇಲಾಖೆ, ಮೈಸೂರು, ರವರುಗಳಿಗೆ ಪತ್ರ ಸಂವಹನ ನಡೆಸಲಾಗಿದೆ ಎಂದು ತಿಳಿಸಿರುತ್ತಾರೆ. ಸದರಿ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಿ ವಿವರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೆ **ರೂ.1,70,30,747/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ಕ್ರಮ.ಸಂ	ಸಾಲು	ಅರ್ಜಿಸಿರುವ ಬಡ್ಡಿ
1	2015–16	2972120
2	2016–17	3489711
3	2017–18	2029604
4	2018–19	1533012
5	2019–20	1416753
6	2020–21	1304777
7	2021–22	1354408
8	2022–23	1527775
9	2023–24	1402587
	ಒಟ್ಟು	**17030747**

ಆ) ವಿದ್ಯಾರ್ಥಿಗಳಿಗೆ ವಿತರಿಸದೆ ಉಳಿದಿರುವ ರೂ.2,90,70,226/–ಬಾಕಿ ಮೊತ್ತವನ್ನು ಪಾವತಿಸಲು ಕ್ರಮವಹಿಸದಿರವುದು.

ಸರ್ಕಾರದಿಂದ ಮರುಭರಿಕೆಯಾಗಿರುವ ಮೊತ್ತವನ್ನು ಪೂರ್ಣಪ್ರಮಾಣದಲ್ಲಿ ವಿದ್ಯಾರ್ಥಿಗಳಿಗೆ ವಿತರಿಸದೆ ಉಳಿದಿರುವ ಒಟ್ಟು ಮೊತ್ತ ರೂ.2,90,70,226/–ಗಳಿದ್ದು, ಈ ಮೊತ್ತದಲ್ಲಿ ರೂ.12,42,760/–ಗಳನ್ನು ಮೊತ್ತವನ್ನು

ಪಾವತಿಸಲು ವಿದ್ಯಾರ್ಥಿಗಳ ಪಟ್ಟಿಯನ್ನು ಮಾತ್ರ ಸಿದ್ಧಪಡಿಸಿರುತ್ತಾರೆ. ವಿವರಗಳನ್ನು **ಅನುಬಂಧ-56**ರಲ್ಲಿ ನೀಡಿದ್ದು, ಇನ್ನುಳಿದ ಮೊತ್ತ ರೂ.2,78,27,466/-ಗಳನ್ನು ವಿತರಿಸಲು ವಿಶ್ವವಿದ್ಯಾನಿಲಯದವರು ವಿದ್ಯಾರ್ಥಿಗಳ ವಿವರವನ್ನು ಗುರುತಿಸದಿರುವುದು ಕಂಡುಬಂದಿದೆ. ಈ ಬಗ್ಗೆ ಸೂಕ್ತ ವಿವರಣೆ ನೀಡುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 191/15.02.2025ರಲ್ಲಿ ಕೋರಲಾಗಿ ಸದರಿ ವಿಚಾರಣೆ ಪತ್ರಕ್ಕೆ ಸಲ್ಲಿಸಿರುವ ಅನುಪಾಲನಾ ವರದಿಯಲ್ಲಿ" ಅರ್ಜಿ ಸಲ್ಲಿಸಿ ವಿದ್ಯಾರ್ಥಿವೇತನ ಪಡೆದುಕೊಳ್ಳುವಂತೆ, ವಿದ್ಯಾರ್ಥಿಗಳಿಗೆ ಪತ್ರ/ದೂರವಾಣಿ ಮೂಲಕ ಸಂಪರ್ಕಿಸಿ ಪಾವತಿಸಲು ಕ್ರಮವಹಿಸಲಾಗುವುದು" ಎಂದು ತಿಳಿಸಿರುತ್ತಾರೆ. ಈ ಸಂಬಂಧ ಸೂಕ್ತ ಕ್ರಮ ವಹಿಸಿ ವಿದ್ಯಾರ್ಥಿಗಳಿಗೆ ವಿತರಿಸುವವರೆಗೆ **ರೂ.2,90,70,226/-ಗಳನ್ನು ಆಕ್ಷೇಪಣೆಗೆ** ಸೂಚಿಸಿದೆ.

32.3 ಕ.ರಾ.ಮು.ವಿ.ವಿ ಯ ವಿವಿಧ ಅಧ್ಯಯನ ಪೀಠಗಳಲ್ಲಿ ಲಭ್ಯವಿರುವ ಹಣವನ್ನು/ಅನುದಾನವನ್ನು ನಿಗದಿತ ಕಾರ್ಯಚಟುವಟಿಕೆಗಳಿಗೆ ಸಮರ್ಪಕವಾಗಿ ಬಳಕೆ ಮಾಡಿಕೊಳ್ಳದಿರುವುದು.

ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುವ ಉದ್ದೇಶದಿಂದ ಸ್ಥಾಪಿಸಲಾಗಿರುವ ವಿವಿಧ ಅಧ್ಯಯನ ಪೀಠಗಳಿಗೆ ಸಂಬಂಧಿಸಿದಂತೆ 2023-24ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ನಗದು ಪುಸ್ತಕ, ಪಾಸ್ ಪುಸ್ತಕ ಮತ್ತು ಇತರೆ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಅಧ್ಯಯನ ಪೀಠದ ಸ್ಥಾಪನೆಯ ಸಮಯದಲ್ಲಿ ರೂಪಿಸಲಾಗಿರುವ ಶಾಸನ(Statute) ದಲ್ಲಿ ತಿಳಿಸಿರುವಂತೆ ಅಧ್ಯಯನ ಪೀಠಗಳಲ್ಲಿ ವಿ.ವಿ ನಿಲಯದಿಂದ ನೀಡಲಾಗಿರುವ ಮೂಲನಿಧಿಯಿಂದ ಅರ್ಜಿತವಾಗುವ ಬಡ್ಡಿ ಮತ್ತು ಇತರೆ ಅನುದಾನ ಒದಗಿಸುವ ಸಂಸ್ಥೆಗಳಿಂದ ಸಂಗ್ರಹಿಸಬಹುದಾದ ನಿಧಿಯಿಂದ ಈ ಕೆಳಕಂಡ ಉದ್ದೇಶಗಳು/ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳಬೇಕಾಗಿರುತ್ತದೆ:

- ಆಯಾ ಅಧ್ಯಯನ ಪೀಠಗಳಿಗೆ ಸಂಬಂಧಿಸಿದಂತೆ ವಿಚಾರಗೋಷ್ಠಿಗಳು, ಕಾರ್ಯಾಗಾರಗಳು, ವಿಚಾರ ಸಂಕಿರಣಗಳು ಮತ್ತು ವಿಸ್ತರಣಾ ಉಪನ್ಯಾಸಗಳನ್ನು ವಿ.ವಿ ನಿಲಯದ ಪ್ರಧಾನ ಶಾಖೆ ಹಾಗೂ ಪ್ರಾದೇಶಿಕ ಕೇಂದ್ರಗಳಲ್ಲಿ ಏರ್ಪಡಿಸುವುದು.
- ಸಂಬಂಧಿತ ವಿಷಯಗಳ ಸಂಶೋಧನೆಗೆ ಮತ್ತು ಅದರ ಪ್ರಕಟಣೆಗೆ ಅಗತ್ಯ ಬೆಂಬಲವನ್ನು ಒದಗಿಸಿ, ವಿಮರ್ಶಾತ್ಮಕ ಮತ್ತು ಸಂಶೋಧನಾ ಕೃತಿಗಳನ್ನು ಪ್ರಕಟಿಸುವುದು.
- ಪೀಠವನ್ನು ಯಾರ ಹೆಸರಿನಲ್ಲಿ ಸ್ಥಾಪಿಸಲಾಗಿದೆಯೋ ಅವರ ಕೊಡುಗೆಯ ಬಗ್ಗೆ ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಅಲ್ಪಾವಧಿ ಕಾರ್ಯಕ್ರಮಗಳನ್ನು ಪ್ರಾರಂಭಿಸುವುದು. ಸಂಬಂಧಿತ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಇತರೆ ಎನ್.ಜಿ.ಓಗಳೊಂದಿಗೆ ಸಹಭಾಗಿತ್ವ.

➢ ಇತರೆ ಭಾಷೆಗಳಿಗೆ ಕೃತಿಗಳ ಅನುವಾದ ಕಾರ್ಯ ಹಾಗೂ ಅಧ್ಯಯನ ಪೀಠಗಳ ಹಿತಾಸಕ್ತಿಗೆ ಸಂಬಂಧಿಸಿದ ಯಾವುದೇ ಇತರ ಕೆಲಸಗಳನ್ನು ಕೈಗೊಳ್ಳುವುದು.

ಆದರೆ, ಹಲವು ಪೀಠಗಳಲ್ಲಿ ಲಭ್ಯವಿರುವ ಹಣವನ್ನು ಸದರಿ ಸಾಲಿಗೆ ಈ ಮೇಲಿನ ಯಾವುದೇ ಕಾರ್ಯ ಚಟುವಟಿಕೆಗಳಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳದಿರುವುದು ಕಂಡುಬಂದಿದ್ದು, ಪೀಠಗಳಲ್ಲಿನ ಸ್ವೀಕೃತಿ ಮತ್ತು ವೆಚ್ಚಗಳನ್ನು ವಿಶ್ಲೇಷಿಸಿ ಪ್ರತಿ ಪೀಠದ ವೆಚ್ಚದ ಶೇಖಡವಾರು ವಿವರವನ್ನು **ಅನುಬಂಧ–57** ರಲ್ಲಿ ಒದಗಿಸಿದೆ. ಘೋಷ್ವಾರೆ ಈ ಕೆಳಗಿನಂತಿದೆ.

ವಿವರ	ಮೊತ್ತ
ಆರಂಭಿಕ ಶಿಲ್ಕು	76,11,060
ಒಟ್ಟು ಸ್ವೀಕೃತಿ	24,36,242
ಒಟ್ಟು	1,00,34,302
ವೆಚ್ಚ	2,44,448
ಅಂತಿಮ ಶಿಲ್ಕು	97,89,854

ಮೇಲಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಯಾವುದೇ ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳದಿರುವುದಕ್ಕೆ ಸೂಕ್ತ ವಿವರಣೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:**60**/09.12.2024ರಲ್ಲಿ ಕೋರಲಾಗಿ, ಸದರಿ ವಿಚಾರಣೆ ಪತ್ರಕ್ಕೆ ಸಲ್ಲಿಸಿರುವ ಅನುಪಾಲನಾ ವರದಿಯಲ್ಲಿ, "ಅಧ್ಯಕ್ಷರು/ಸಂಯೋಜನಾಧಿಕಾರಿಗಳು ವಿಭಾಗದ ಕಾರ್ಯಭಾರದ ತುರ್ತು ನಿರ್ವಹಣೆ ಹಾಗೂ ಸಿಬಿಸಿಎಸ್ ಪಠ್ಯಕ್ರಮಗಳ ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಕಾರಣ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗದೆ ಇರುವ ಕಾರಣದಿಂದ ಪೀಠದ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡಿಲ್ಲ" ಎಂದು ತಿಳಿಸಿದ್ದು, ಹೀಗೆ ಲಭ್ಯವಿರುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳದೆ ಖಾತೆಯಲ್ಲಿ ಉಳಿಸಿರುವುದರಿಂದ ಅಧ್ಯಯನ ಪೀಠಗಳ ಉದ್ದೇಶಗಳು/ಆಶಯಗಳು ಈಡೇರಿದಂತಾಗಿರುವುದಿಲ್ಲ. ಆದುದರಿಂದ ವಿಶ್ವವಿದ್ಯಾನಿಲಯದ ಆಡಳಿತ ವರ್ಗದವರು ಮಾರ್ಗಸೂಚಿ/statute ಅನ್ವಯ ನಿಗಧಿತ ಉದ್ದೇಶಿತ ಕಾರ್ಯಚಟುವಟಿಕೆಗಳನ್ನು ನಡೆಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.

33. ಭವಿಷ್ಯ ನಿಧಿ

ಭವಿಷ್ಯ ನಿಧಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣಾ ಕಂಡಿಕೆಗಳು ಇರುವುದಿಲ್ಲ

34. ಪಿಂಚಣಿ ಸೌಲಭ್ಯಗಳು

34.1 ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್.ಪಿ.ಎಸ್) ಖಾತೆಗೆ ಜಮೆ ಮಾಡಬೇಕಿರುವ ರೂ.1,67,68,777/–ಗಳ ಮೊತ್ತವನ್ನು ವಿಶ್ವವಿದ್ಯಾನಿಲಯದವರು ಉಳಿಸಿಕೊಂಡಿರುವುದು

ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ರಾಷ್ಟ್ರೀಯ ಪಿಂಚಣಿ ಯೋಜನೆಗೆ (ಎನ್.ಪಿ.ಎಸ್) ಒಳಪಡುವ ಅಧಿಕಾರಿಗಳು ಮತ್ತು ನೌಕರರ ವೇತನದಿಂದ ಕಟಾಯಿಸಿದ ಎನ್.ಪಿ.ಎಸ್ ವಂತಿಗೆ ಮತ್ತು ವಿಶ್ವವಿದ್ಯಾನಿಲಯದ ವಂತಿಗೆಯ ಪಾಲುಗಳನ್ನು ಎಸ್.ಬಿ.ಐ ನ ಚಾಲ್ತಿ ಖಾತೆ ಸಂ:64090001048೭ಕ್ಕೆ ವರ್ಗಾಯಿಸಿಕೊಂಡು, ನಂತರ ಎನ್.ಎಸ್.ಡಿ.ಎಲ್‌ಗೆ ಜಮೆ ಮಾಡಲಾಗಿರುತ್ತದೆ. ಇದರಿಂದ ಈ ಖಾತೆಯು ಒಂದು ಹೊಣೆಗಾರಿಕೆಯ ಖಾತೆಯಾಗಿರುತ್ತದೆ. ಹಾಗಾಗಿ ವರ್ಗಾಯಿಸಿಕೊಂಡ ಪ್ರತಿಯೊಂದು ಮೊತ್ತವೂ ಆಗಿಂದಾಗ್ಗೆ ನಿಗದಿತ ಅವಧಿಯಲ್ಲಿ ಎನ್.ಎಸ್.ಡಿ.ಎಲ್‌ಗೆ ಪಾವತಿಗೊಂಡು ಖಾತೆಯಲ್ಲಿ ಆರ್ಥಿಕ ವರ್ಷಾಂತ್ಯಕ್ಕೆ ಶೂನ್ಯ ಶಿಲ್ಕು ಇರಬೇಕಾಗಿರುತ್ತದೆ.

ಆದರೆ ಈ ಖಾತೆಯಲ್ಲಿ 2023–24ನೇ ಸಾಲಿನಲ್ಲಿ ರೂ.1,82,85,185/– ಪ್ರಾರಂಭ ಶಿಲ್ಕು ಮತ್ತು ರೂ.1,67,68,777/–ಗಳ ಅಂತಿಮ ಶಿಲ್ಕುಗಳಿರುತ್ತದೆ. ಹೀಗೆ ಪೂರ್ಣ ಪ್ರಮಾಣದಲ್ಲಿ ಪಾವತಿಗೊಳ್ಳದೇ ವರ್ಷಾಂತ್ಯಕ್ಕೆ ಉಳಿದಿರುವ ಹೊಣೆಗಾರಿಕೆಯ ಮೊತ್ತ ರೂ.1,67,68,777/–ಗಳಾಗಿರುತ್ತದೆ. ಎನ್.ಪಿ.ಎಸ್ ವಂತಿಕೆಯನ್ನು ವೇತನ ಪಾವತಿಸುವ ಖಾತೆಯಿಂದಲೇ ನೇರವಾಗಿ ಪಾವತಿಸಬಹುದಾಗಿದ್ದರೂ ಹೀಗೆ ಬೇರೊಂದು ಖಾತೆಯನ್ನು ತೆರೆದು ನಿರ್ವಹಿಸುತ್ತಿರುವ ಕುರಿತಂತೆ ಸ್ಪಷ್ಟೀಕರಣವನ್ನು ನೀಡುವಂತೆ ಹಾಗೂ ರಾಷ್ಟ್ರೀಯ ಪಿಂಚಣಿ ಯೋಜನೆ ಖಾತೆಯ ಸಂಪೂರ್ಣ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸುವಂತೆ ಕೋರಿ ನೀಡಲಾದ ವಿಚಾರಣಾ ಪತ್ರ ಸಂಖ್ಯೆ:28/11.12024, 131/20.01.2025, 135/22.01.2025 ಮತ್ತು ವಿಚಾರಣಾ ಪತ್ರ ಸಂಖ್ಯೆ: 179/10.02.2025ಗಳಿಗೆ ವಿಶ್ವವಿದ್ಯಾನಿಲಯದವರು ಈ ಕೆಳಕಂಡಂತೆ ಉತ್ತರವನ್ನು ನೀಡಿರುತ್ತಾರೆ.

ಕರಾಮುವಿಯ ಅಧಿಸೂಚನೆ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–2/779/2009–10, ದಿನಾಂಕ: 24.05.2011ರ ಪ್ರಕಾರ ಸರ್ಕಾರದ ಆದೇಶಗಳು ಹಾಗೂ ವ್ಯವಸ್ಥಾಪನಾ ಮಂಡಳಿಯ ಮೇರೆಗೆ, ದಿನಾಂಕ: 01.04.2006ರ ನಂತರ ವಿಶ್ವವಿದ್ಯಾನಿಲಯದ ಸೇವೆಗೆ ಸೇರಿರುವ/ ಮುಂದೆ ಸೇರುವ ಬೋಧಕ/ ಬೋಧಕೇತರ/ ವಿವಿಧ ವರ್ಗದ ನೌಕರರುಗಳಿಗೆ ಸರ್ಕಾರವು ನೂತನವಾಗಿ ಜಾರಿಗೆ ತಂದಿರುವ ಎನ್.ಪಿ.ಎಸ್. ಯೋಜನೆಯನ್ನು ಕಡ್ಡಾಯಗೊಳಿಸಿ, ಪ್ರತೀ ನೌಕರರ ಉದ್ಯೋಗಿ ಮತ್ತು ಉದ್ಯೋಗದಾತರ ವಂತಿಕೆಯನ್ನು ಒಂದು ಪ್ರತ್ಯೇಕ ಖಾತೆಯನ್ನು ತೆರೆದು ವಿನಿಯೋಜಿಸಲು ಆದೇಶಿಸಿದೆ. ಸರ್ಕಾರದ ಆದೇಶದನುಸಾರ ರಾಷ್ಟ್ರೀಯ ಪಿಂಚಣಿ ಯೋಜನೆ ಅಳವಡಿಸಬೇಕಾಗಿದ್ದುದರಿಂದ ನೌಕರರ ವೇತನದಿಂದ ಕಟಾಯಿಸುವ ಉದ್ಯೋಗಿ ಹಾಗೂ ಉದ್ಯೋಗದಾತರ ವಂತಿಕೆಯನ್ನು ಜಮಾ ಮಾಡಲು ಅನುಕೂಲವಾಗುವಂತೆ ಜನವರಿ 2012ರಲ್ಲಿ ಎಸ್.ಜಿ.ಐ., ಕರಾಮುವಿ ಆವರಣ ಶಾಖೆಯಲ್ಲಿ ಚಾಲ್ತಿ ಖಾತೆ ತೆರೆದು, ಚಾಲ್ತಿ ಖಾತೆ ಸಂಖ್ಯೆ: 64090010482ಗೆ ಜಮೆ ಮಾಡಲಾಗುತ್ತಿತ್ತು. ಈವರೆವಿಗೂ ಎನ್.ಪಿ.ಎಸ್. ವಂತಿಕೆಯ ಮೊತ್ತವನ್ನು ಸದರಿ ಖಾತೆಗೆ ಜಮಾ ಮಾಡಿ PFRD Trustee Bank ಮೂಲಕ ನೌಕರರ PRAN ಖಾತೆಗೆ ವರ್ಗಾಯಿಸಲಾಗುತ್ತಿದೆ ಎಂದು ಉತ್ತರಿಸಿರುತ್ತಾರೆ.

2023–24ನೇ ಸಾಲಿನ ಅಂತ್ಯಕ್ಕೆ ಎನ್.ಪಿ.ಎಸ್ ಖಾತೆಯಲ್ಲಿ ಆಖೈರು ಶಿಲ್ಕಿಗೆ ಸಂಬಂಧಿಸಿದಂತೆ ಲೆಕ್ಕಸಮನ್ವಯ ರೂ.1,67,68,777/–ಗಳ ಆಖೈರು ಶಿಲ್ಕುಗೆ ವಿವರ ಪಟ್ಟಿಯನ್ನು ಲೆಕ್ಕಪರಿತೋಧನೆಗೆ ಹಾಜರುಪಡಿಸಲಾಗಿದೆ. ವಿವರಗಳನ್ನು **ಅನುಬಂಧ–58 ರಲ್ಲಿ** ಮತ್ತು ಫೋಷ್ವಾರೆಯಲ್ಲಿ ವಿವರಿಸಿದೆ.

ಉದ್ಯೋಗದಾತರು ಈ ರೀತಿ ನೌಕರರಿಂದ ಎನ್.ಪಿ.ಎಸ್ ವಂತಿಗೆ ಕಟಾಯಿಸಿ ತನ್ನಲ್ಲೇ ಉಳಿಸಿಕೊಳ್ಳುವುದು ನಿಯಮಬಾಹಿರವಾದ ಕ್ರಮವಾಗಿರುತ್ತದೆ. ವಂತಿಗೆಯ ವಿಳಂಬ ಪಾವತಿಗೆ ಬಡ್ಡಿಯನ್ನು ಪಾವತಿಸಬೇಕಾಗಿರುವುದರಿಂದ ಉದ್ಯೋಗಿಗಳು ಮತ್ತು ಉದ್ಯೋಗದಾತರ ವಂತಿಗೆಯನ್ನು ಬಡ್ಡಿ ಸಹಿತ ಎನ್.ಎಸ್.ಡಿ.ಎಲ್‌ಗೆ ಜಮೆ ಮಾಡಲು ಸೂಚಿಸಿದೆ. ಎನ್‌ಪಿಎಸ್ ಖಾತೆಯ ಅಂತಿಮ ಶಿಲ್ಕಿನಲ್ಲಿರುವ **ರೂ.1,67,68,777/–ಗಳ** ಮೊತ್ತವನ್ನು ಪೂರ್ಣವಾಗಿ ಎನ್.ಎಸ್.ಡಿ.ಎಲ್‌ಗೆ ಜಮೆ ಮಾಡುವವರೆಗೆ ಸಂಬಂಧಿಸಿದವರೆಲ್ಲರ ಹೊಣೆಗಾರಿಕೆ ಮೇಲೆ **ಆಕ್ಷೇಪಣೆಯಲ್ಲಿಡಲಾಗಿದೆ**.

34.2 ನೌಕರರ ಪ್ರಾನ್ ಖಾತೆಯಲ್ಲಿರುವ ಮೊತ್ತ ರೂ.74,29,134/–ಗಳನ್ನ ವಿಶ್ವವಿದ್ಯಾನಿಲಯಕ್ಕೆ ಹಿಂಪಡೆಯದೇ ರೂ.41,69,511/–ಗಳ ಕುಟುಂಬ ಪಿಂಚಣಿ ಸೌಲಭ್ಯಗಳನ್ನು ಮಂಜೂರು ಮಾಡಿರುವುದು.

ಸರ್ಕಾರದ ಆದೇಶ ಸಂಖ್ಯೆ:ಆಇ 34 ಪಿಇಎನ್ 2018, ದಿನಾಂಕ:23–06–2018 ಮತ್ತು ಸರ್ಕಾರದ ಆದೇಶ ಸಂಖ್ಯೆ:ಆಇ 34 ಪಿಇಎನ್ 2018 (ಭಾ) ದಿ: 19–08–2021 ಗಳಲ್ಲಿ ದಿನಾಂಕ:01–04–2006 ರಂದು ಮತ್ತು ತದನಂತರ ಸರ್ಕಾರಿ ಸೇವೆಗೆ ಸೇರಿದ ಹೊಸ ವ್ಯಾಪ್ತಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಯಡಿ ಬರುವ ಸರ್ಕಾರಿ ನೌಕರರಿಗೆ ನಿವೃತ್ತಿ ಉಪದಾನ, ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿ ಸೌಲಭ್ಯವನ್ನು ದಿನಾಂಕ:01–04–2018 ರಿಂದ ಬರುವಂತೆ ವಿಸ್ತರಿಸಿ ಆದೇಶಿಸಿರುವ ಆದೇಶಗಳ ಮಾರ್ಗಸೂಚಿಯಲ್ಲಿ ಕುಟುಂಬ ಪಿಂಚಣಿ ಸೌಲಭ್ಯಗಳನ್ನು ಆಯ್ಕೆ ಮಾಡಿಕೊಂಡ ತರುವಾಯ "ಮೃತ ನೌಕರರ ಪ್ರಾನ್ ಖಾತೆಯಲ್ಲಿರುವ ಸಂಪೂರ್ಣ ಮೊತ್ತವನ್ನು ಸರ್ಕಾರಕ್ಕೆ ಹಿಂಪಡೆದ" ನಂತರ ಕುಟುಂಬ ಪಿಂಚಣಿ ಸೌಲಭ್ಯಗಳನ್ನು ಪಾವತಿಸಬೇಕಾಗಿರುತ್ತದೆ.

ವಿಶ್ವವಿದ್ಯಾನಿಲಯದಲ್ಲಿ ದಿ:01–04–2018ರ ನಂತರ ವಿವಿಧ ದಿನಾಂಕಗಳಂದು ಒಟ್ಟು 6 ಮಂದಿ ನೌಕರರು ಮೃತರಾಗಿರುತ್ತಾರೆ. ವಿವರಗಳನ್ನು **ಅನುಬಂಧ–59 ರಲ್ಲಿ** ನೀಡಲಾಗಿದೆ. ಮೇಲಿನ ಆದೇಶಗಳಂತೆ ಮೃತರ ಕುಟುಂಬದ ಅವಲಂಭಿತರಿಗೆ ನೌಕರರ ಪ್ರಾನ್ ಖಾತೆಯಲ್ಲಿರುವ ಮೊತ್ತ ರೂ.74,29,134/–ಗಳನ್ನು ವಿಶ್ವವಿದ್ಯಾನಿಲಯಕ್ಕೆ ಹಿಂಪಡೆಯದೇ ಕುಟುಂಬ ಪಿಂಚಣಿ ಸೌಲಭ್ಯಗಳನ್ನು ಮಂಜೂರು ಮಾಡಲಾಗಿದೆ. ಈ ಬಗ್ಗೆ ವಿವರಣೆ ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:112/13.01.2025ಕ್ಕೆ ವಿಶ್ವವಿದ್ಯಾನಿಲಯದವರು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ವಿಶ್ವವಿದ್ಯಾನಿಲಯದವರು ಸಂಬಂಧಿಸಿದ ನೌಕರರ ಪ್ರಾನ್ ಖಾತೆಯಲ್ಲಿರುವ ಮೊತ್ತ ರೂ.74,29,134/–ಗಳನ್ನು ವಿಶ್ವವಿದ್ಯಾನಿಲಯಕ್ಕೆ ಹಿಂಪಡೆಯದೆ ಅನುಬಂಧದಲ್ಲಿ ವಿವರಿಸಿರುವಂತೆ ಪಾವತಿಸಿರುವ ಕುಟುಂಬ ಪಿಂಚಣಿ ಮೊತ್ತ **ರೂ.41,69,511/–ಗಳನ್ನು**

ಆಕ್ಷೇಪಣೆಯಲ್ಲಿಡಲಾಗಿದೆ. ಹಾಗೂ ನೌಕರರ ಪ್ರಾನ್ ಖಾತೆಯಲ್ಲಿರುವ ಸಂಪೂರ್ಣ ಮೊತ್ತವನ್ನು ಹಿಂಪಡೆಯಲು ವಿಶ್ವವಿದ್ಯಾನಿಲಯಕ್ಕೆ ಸೂಚಿಸಿದೆ.

34.3 2023-24ನೇ ಸಾಲಿನಲ್ಲಿ ಶ್ರೀ ಸೋಮಣ್ಣ ಆರ್. ನಿವೃತ್ತ ಸೇವಕರವರಿಗೆ ಉಪಧನ ಪಾವತಿ ಕಾಯ್ದೆಯಡಿ ಉಪಧನ ಮತ್ತು ಗಳಿಕೆ ರಜೆ ನಗದೀಕರಣ ಪಾವತಿಸಿರುವ ಮೊತ್ತ ರೂ.4,66,704/-ಗಳನ್ನು ವಸೂಲಿಸುವ ಬಗ್ಗೆ.

ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಸಂ:ಕರಾಮುವಿ/ಆವಿ/ಸಿಬ್ಬಂದಿ-2/1001/2022-23, ದಿನಾಂಕ:01-08-2022ರಲ್ಲಿ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡುತ್ತಿದ್ದ 10ವರ್ಷ ಪೂರೈಸಿರುವ 75 ತಾತ್ಕಾಲಿಕ ನೌಕರರನ್ನು ದಿನಾಂಕ:01-06-2022ರಿಂದ ಪೂರ್ವಾನ್ವಯವಾಗುವಂತೆ ನಿಯಮಗಳನ್ನು ಉಲ್ಲಂಘಿಸಿ ಖಾಯಂ ಮಾಡಿ ವಿಶ್ವವಿದ್ಯಾನಿಲಯದ ಪ್ರಭಾರ ಕುಲಸಚಿವರು ಆದೇಶ ಹೊರಡಿಸಿರುತ್ತಾರೆ ಹಾಗೂ ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/1001/2022-23 ದಿನಾಂಕ:03-10-2022ರಲ್ಲಿ ದಿನಾಂಕ:01-07-2011 ರಿಂದ ವೇತನವನ್ನು ಕಾಲ್ಪಾನಿಕವಾಗಿ ನಿಗಧಿಪಡಿಸಿರುವುದನ್ನು ಈಗಾಗಲೇ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ:21.3ರಲ್ಲಿ ಆಕ್ಷೇಪಿಸಲಾಗಿದೆ. ಈ 75 ಜನ ನೌಕರರಲ್ಲಿ ಶ್ರೀ ಸೋಮಣ್ಣ ಆರ್. ಕೂಡ ಒಬ್ಬರಾಗಿರುತ್ತಾರೆ.

ವಿ.ವಿಯ ಆದೇಶ ಸಂಖ್ಯೆ ಕರಾಮುವಿ/ಆವಿ/ಸಿಬ್ಬಂದಿ-2/1041/2022-23 ದಿನಾಂಕ:28-03-2023ರಲ್ಲಿ 05 ವರ್ಷಗಳ ಖಾಯಂ ಪೂರ್ವ ಅವಧಿಯನ್ನು ತೃಪ್ತಿಕರವಾಗಿ ಪೂರೈಸಲಾಗಿದೆ ಎಂದು ಘೋಷಿಸಲಾಗಿದೆ. ಹಾಗೂ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/1124/2023-24 ದಿನಾಂಕ:26-07-2023ರಲ್ಲಿ ಸದರಿಯವರು ಒಂದೇ ಹುದ್ದೆಯಲ್ಲಿ 10 ವರ್ಷ ಸೇವೆ ಹಾಗೂ ಯಾವುದೇ ಪದೋನ್ನತಿಯನ್ನು ಹೊಂದದೇ ನಿರಂತರವಾಗಿ ಸೇವೆಯನ್ನು ತೃಪ್ತಿಕರಾಗಿ ಪೂರೈಸಿರುವುದರಿಂದ "The Karnataka Civil Services (Time-Bound Advancement) Rules, 1983ರಂತೆ, ವಿಶ್ವವಿದ್ಯಾನಿಲಯದ ಪರಿನಿಯಮದ ಪ್ರಕಾರ 10 ವರ್ಷಗಳ ಕಾಲಬದ್ಧ ವೇತನ ಬಡ್ತಿಯನ್ನು ಮಂಜೂರು ಮಾಡಿ ವೇತನವನ್ನು ಪುನರ್ ನಿಗದಿಪಡಿಸಲಾಗಿದೆ ಮತ್ತು ಕಛೇರಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-02/993/2020-21, ದಿ:07-04-2021 ರನ್ವಯ "ವಿಶ್ವವಿದ್ಯಾನಿಲಯದ ವಿವಿಧ ವರ್ಗಗಳ ಕಾಲಿಕ ವೇತನ ಶ್ರೇಣಿಯ ಎಲ್ಲಾ ನೌಕರರುಗಳಿಗೆ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯ ದಿ:13-10-2016 ರಂದು ಹೊರಡಿಸಿರುವ ಸುತ್ತೋಲೆ ಸಂಖ್ಯೆ:ಕಾಇ 58 ಎಲ್‌ಡಬ್ಲ್ಯೂ 2016ರ ಮಾರ್ಗಸೂಚಿಯನ್ವಯ ಉಪಧನ ಪಾವತಿ ಕಾಯ್ದೆ-1972 ರಡಿ ಉಪಧನ ಪಾವತಿ ಸೌಲಭ್ಯವನ್ನು ವಿಸ್ತರಿಸಿ ಆದೇಶಿಸಿರುತ್ತಾರೆ.

ಶ್ರೀ ಸೋಮಣ್ಣ.ಆರ್. ರವರು ಸೇವಕ ಹುದ್ದೆಯಿಂದ ದಿನಾಂಕ:31-07-2023 ರಂದು ವಯೋ ನಿವೃತ್ತಿ ಹೊಂದಿರುವುದರಿಂದ ಇವರಿಗೆ ಈ ಕಳಕಂಡಂತೆ ನಿವೃತ್ತಿ ಸೌಲಭ್ಯಗಳನ್ನು ಪಾವತಿಸಿರುವುದು ಕಂಡು ಬಂದಿದೆ.

1. ವೋಚರ್ ನಂ.215/31-07-2023 ಧನಾದೇಶ ಸಂಖ್ಯೆ:925485/31-07-2023ರಲ್ಲಿ 178 ದಿನಗಳ ಗಳಿಕೆ ರಜೆ ನಗದೀಕರಣ ಮೊತ್ತ ರೂ.179424/-,

2. ಉಪಧನ ಪಾವತಿ ಕಾಯ್ದೆ–1972ರಡಿ ಉಪಧನವನ್ನು "ಮೂಲವೇತನ + ತುಟ್ಟಿಭತ್ಯೆx೨ಒಟ್ಟು ಪೂರ್ಣಗೊಳಿಸಿದ ಸೇವಾವಧಿx15/30" ರಂತೆ ರೂ.2,87,280–00ರಲ್ಲಿ 14,165–00 ಆಡಿಟ್ ವಸೂಲಾತಿ ಮಾಡಿ ನಿವ್ವಳ ಮೊತ್ತ ರೂ.2,73,115/– ಗಳನ್ನು ಧನಾದೇಶ ನಂ.103815 ದಿನಾಂಕ:16–02–2024 ರಲ್ಲಿ ಪಾವತಿಸಲಾಗಿದೆ.

3. ಎನ್‌ಪಿಎಸ್ ಮೊತ್ತ ರೂ.69,201/–ಗಳನ್ನು ಧನಾದೇಶ ನಂ.067459, ದಿ:12–06–202 ರಲ್ಲಿ ನೌಕರರಿಗೆ ಹಿಂದಿರುಗಿಸಲಾಗಿದೆ.

ಉಪಧನ ಪಾವತಿ ಕಾಯ್ದೆಯ ಕಲಂ 2(ಇ) ಪ್ರಕಾರ ಅಪ್ರೆಂಟೀಸ್ ಷಿಪ್ ಕಾಯ್ದೆ–1961ರಡಿ ನಿಯುಕ್ತಿಯಾದ ಅಪ್ರೆಂಟೀಸ್‌ಗಳನ್ನು ಹೊರತುಪಡಿಸಿ ಹಾಗೂ ಕೆ.ಸಿ.ಎಸ್.ಆರ್.ರಡಿ ಸೇವೆ ಸಲ್ಲಿಸುತ್ತಿರುವವರನ್ನು ಹೊರತುಪಡಿಸಿ ಉಳಿದ ದಿನಗೂಲಿ, ತಾತ್ಕಾಲಿಕ, ಎನ್.ಎಂ.ಆರ್. ಹೀಗೆ ಯಾವುದೇ ಸ್ವರೂಪದ ಕೆಲಸಗಳನ್ನು ನಿರ್ವಹಿಸುತ್ತಿರುವ ಉದ್ಯೋಗಿಗಳಿಗೆ ಉಪಧನ ಪಾವತಿ ಕಾಯ್ದೆ–1972 ರಡಿ ಉಪಧನ ಪಾವತಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಮೇಲ್ಕಂಡ ತಾತ್ಕಾಲಿಕ ನೌಕರರಾದ ಶ್ರೀ ಸೋಮಣ್ಣರವರಿಗೆ ಕೆ.ಸಿ.ಎಸ್.ಆರ್. ನಿಯಮ, 397ರಂತೆ ಸೇವಾಹಿಗಳನ್ನು ತೆರೆದು, ಕೆ.ಸಿ.ಎಸ್. ಆರ್ ನಿಯಮ 112, 114 ಮತ್ತು 118 ರಂತೆ ಕ್ರಮವಾಗಿ ಗಳಿಕೆ ರಜೆ, ಪರಿವರ್ತಿತ ರಜೆ ಮತ್ತು ಗಳಿಕೆ ರಜೆ ನಗದೀಕರಣ ಸೌಲಭ್ಯವನ್ನು ವಿಸ್ತರಿಸಿರುವುದು ಹಾಗೂ ಅಧಿಕೃತ ಜ್ಞಾಪನ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–2/1001/2022–23 ದಿನಾಂಕ:01–08–2022ರಲ್ಲಿ ವಿಲೀನಗೊಳಿಸಿರುವುದನ್ನೇ ಲೆಕ್ಕಪರಿಶೋಧನೆಯಲ್ಲಿ ಸದರಿಯವರ ವೇತನವನ್ನು ವಸೂಲಾತಿಗೆ ಸೂಚಿಸಲಾಗಿದ್ದರೂ ಸದರಿಯವರಿಗೆ ಉಪಧನ ಪಾವತಿ ಕಾಯ್ದೆಯಡಿ ರೂ. 2,87,280–00ಗಳ ಉಪಧನವನ್ನು ಪಾತಿಸಿರುವುದಕ್ಕೆ ಸ್ಪಷ್ಟೀಕರಣ ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 78/26.12.2024 ನೀಡಲಾಗಿತ್ತು. ಇದಕ್ಕೆ ವಿಶ್ವವಿದ್ಯಾನಿಲಯದವರು ಈ ಕೆಳಕಂಡಂತೆ ಅನುಪಾಲನಾ ವರದಿ ಸಲ್ಲಿಸಿರುತ್ತಾರೆ.

ಶ್ರೀ ಸೋಮಣ್ಣ ಆರ್. ನಿವೃತ್ತ ಸೇವಕ, ಇಂಜಿನಿಯರಿಂಗ್ ವಿಭಾಗ, ಕರಾಮುವಿ, ಇವರು ದಿನಾಂಕ:31.07.2023 ರಂದು ವಯೋನಿವೃತ್ತಿ ಆಧಾರದ ಮೇಲೆ ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತಿ ಹೊಂದಿದ್ದು, ನಿಯಮಾನುಸಾರ ಪರಿಶೀಲಿಸಿ ವೇತನ, ಪಿಂಚಣಿ, ಉಪದಾನ ಹಾಗೂ ಇತರೆ ನಿವೃತ್ತಿ ಸೌಲಭ್ಯಗಳನ್ನು ಮುಂದಿನ ಲೆಕ್ಕ ತಪಾಸಣೆಗೊಳಪಟ್ಟು ಪಾವತಿಸಲು ಮಂಜೂರಾತಿ ನೀಡಿ ದಿನಾಂಕ:14.07.2023ರಂದು ಆದೇಶ ಹೊರಡಿಸಲಾಗಿತ್ತು. ಈ ಸಂಬಂಧ ಹಣಕಾಸು ಅಧಿಕಾರಿಗಳು ಶ್ರೀ ಸೋಮಣ್ಣ ಆರ್. ಇವರು ವಿ.ವಿ.ನಿಲಯಕ್ಕೆ ತಾತ್ಕಾಲಿಕ ಸೇವೆಗೆ ವರದಿ ಮಾಡಿಕೊಂಡ ದಿನಾಂಕದಿಂದ ಸೇವಾ ಜೇಷ್ಠತೆಯ ಆಧಾರದ ಮೇಲೆ ವಿ.ವಿ.ನಿಲಯಕ್ಕೆ ಸರ್ಕಾರದಿಂದ ಮಂಜೂರಾಗಿ ನೇರ ನೇಮಕಾತಿಗೆ ಖಾಲಿ ಇರುವ ಸಮಾನ ಖಾಯಂ ಸೇವಕ ಹುದ್ದೆಯಲ್ಲಿ ದಿನಾಂಕ:01.06.2022ರಿಂದ ಜಾರಿಗೆ ಬಂದಂತೆ ಸೇವೆಯಲ್ಲಿ ವಿಲೀನಗೊಳಿಸಲಾಗಿರುವ ಹಿನ್ನೆಲೆಯಲ್ಲಿ ಸದರಿಯವರಿಗೆ ಉಪದಾನ ಪಾವತಿಗೆ ಅರ್ಹತಾದಾಯಕ ಸೇವೆಯನ್ನು KCSR(291) ರಿತ್ಯಾ ಒಂದು ವರ್ಷ

ಎರಡು ತಿಂಗಳು ಮಾತ್ರ ಪರಿಗಣಿಸಬೇಕಾಗಿರುತ್ತದೆ. ಈ ಬಗ್ಗೆ ಆಡಳಿತಾತ್ಮಕ ಆದೇಶ ಹೊರಡಿಸಿ ನೀಡಿದಲ್ಲಿ ಪಾವತಿಗೆ ಕ್ರಮವಹಿಸಲಾಗುವುದು ಎಂದು ದಿನಾಂಕ: 25.09.2023ರ ಟಿಪ್ಪಣಿ ತಿಳಿಸಿಲಾಗಿರುತ್ತದೆ.

ಮುಂದುವರಿದು, ಈ ಸಂಬಂಧ ಮಂಡಿಸಲಾದ ಕಡತದಲ್ಲಿ ಮಾನ್ಯ ಹಣಕಾಸು ಅಧಿಕಾರಿಗಳು ಈ ವಿಚಾರವಾಗಿ ಇ.ಎಸ್.ಐ ಅಂಡ್ ಇ.ಪಿ.ಎಫ್ ಸಲಹೆಗಾರರ ಸಲಹೆ ಪಡೆದು ಪ್ರಸ್ತಾವನೆಯನ್ನು ಇತ್ಯರ್ಥಗೊಳಿಸುವುದು ಸೂಕ್ತವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಮೆ//ಬಸವರಾಜ್ ಅಂಡ್ ಅಸೋಸಿಯೇಟ್ಸ್, ಮೈಸೂರು, ಇವರಿಗೆ ಪತ್ರ ಬರೆದು ದಾಖಲೆಗಳನ್ನು ಪರಾಮರ್ಶಿಸಿ ಲಿಖಿತ ಸಲಹೆಯನ್ನು ನೀಡುವಂತೆ ಕೋರಲಾಗಿತ್ತು, ಈ ಸಂಬಂಧ "With reference to the above subject, Sri Somanna R. Attender as per the KSOU records it is found the said employee joined to the service on 24.12.1999 as daily Wages till 04.11.2005 and he abstained from work Wef: 05.11.2005 to 24.01.2010.

As per Gratuity Act any employee (Daily Wager/Casual/ Temporary/ Permanent) continuously worked for 240 days in a year and served minimum Period of 5 years is entitled for Gratuity.

Sri Somanna is entiled for Gratuity from 24.12.1999 to 14.11.2005 and 25.01.2010 to 31.07.2023 as he woked continuously during that period.

Gratuity of Sri Somanna has to been calculated by taking 15 days wages (Basic + DA) from the lost month Salary drawn by the workmen for the number of years served" ಎಂದು ದಿನಾಂಕ:26.12.2023ರ ಪತ್ರದಲ್ಲಿ ಲಿಖಿತ ಸಲಹೆಯನ್ನು ನೀಡಿದ್ದು, ಸದರಿ ಸಲಹೆಯನುಸಾರ ಕ್ರಮವಹಿಸಲು ಮಾನ್ಯ ಕುಲಪತಿಗಳು ಅನುಮೋದನೆ ಮೇರೆಗೆ ಸದರಿಯವರಿಗೆ ಉಪಧನ ಪಾವತಿ ಸಂಬಂಧ (ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಆಪಿ/ಸಿಬ್ಬಂದಿ-2/1112/2023-24, ದಿನಾಂಕ:23.01.2024)ಹೊರಡಿಸಲಾಗಿತ್ತು ಸದರಿ ಆದೇಶಕ್ಕೆ ಸಂಬಂಧಿಸಿದಂತೆ ಸದರಿಯವರಿಗೆ ಉಪಧನ ಲೆಕ್ಕಚಾರಕ್ಕೆ ಮಧ್ಯಂತರ ಪರಿಹಾರ ಭತ್ಯೆಯನ್ನು ಹೊರತುಪಡಿಸಿ ಲೆಕ್ಕಚಾರ ಮಾಡಿ ಆದೇಶ ನೀಡಲು ಹಣಕಾಸು ಅಧಿಕಾರಿಗಳು ದಿನಾಂಕ:02.02.2024ರ ಟಿಪ್ಪಣಿಯನುಸಾರ ಉಪಧನ ಪಾವತಿ ಸಂಬಂಧ ಪರಿಷ್ಕೃತ ಕಛೇರಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/1112/2023-24, ದಿನಾಂಕ:23.01.2024ಅನ್ನು ಹೊರಡಿಸಲಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ.

ವಿಶ್ವವಿದ್ಯಾನಿಲಯದವರು ನೀಡಿರುವ ಉತ್ತರದಲ್ಲಿ ಯಾವುದೇ ಸ್ಪಷ್ಟ ವಿವರಣೆ ಹಾಗೂ ಪೂರಕ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಾಯ್ದೆ-1992ರ 2ನೇ ಅನುಸೂಚಿಯ ಮೊದಲನೇ ಪರಿನಿಯಮದ ನಿಯಮ 2(9)(iii)ರಡಿಯಲ್ಲಿ ಪ್ರದತ್ತವಾದ ಅಧಿಕಾರದನ್ವಯ ಆರು ತಿಂಗಳ ಅವಧಿಗೆ ಮಾತ್ರ ತಾತ್ಕಾಲಿಕ ನೇಮಕಾತಿಯನ್ನು ಮಾಡಲು ಅವಕಾಶವಿದ್ದು, ಅವರನ್ನು ಮುಂದುವರೆಸಲು ಅವಕಾಶಗಳಿರುವುದಿಲ್ಲ. ಸರ್ಕಾರದ ಆದೇಶ ಸಂಖ್ಯೆ:ಆಇ3/6/ಟಿಎಫ್‌ಪಿ/2018,ದಿ:29.12.2018 ಹಾಗೂ ಆದೇಶ ಸಂಖ್ಯೆ:ಆಇ6/ಟಿಎಫ್‌ಪಿ/2018, ದಿ:22.03.2019ರನ್ವಯ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಪ್ರಸ್ತುತ ಖಾಲಿ ಇರುವ ಹುದ್ದೆಗಳಿಗೆ ಸರ್ಕಾರದ ಹಣಕಾಸು ಇಲಾಖೆಯ ಅನುಮೋದನೆಯೊಂದಿಗೆ ಹೊರಗುತ್ತಿಗೆ ಮೂಲಕ

ಸೇವೆಯನ್ನು ಪಡೆಯಬಹುದಾಗಿದೆಯೇ ವಿನಃ ಪರಿನಿಯಮದ ನಿಯಮ 2(9)(iii)ರಡಿಯಲ್ಲಿ ನೇಮಕ ಮಾಡಿಕೊಳ್ಳಲು ಕೂಡ ಅವಕಾಶವಿರುವುದಿಲ್ಲ. ವಿಶ್ವವಿದ್ಯಾನಿಲಯದವರು ನೀಡಿರುವ ಉತ್ತರದಲ್ಲಿ ಈ ನೌಕರರುಗಳನ್ನು ಪಾಯಂ ಅಥವಾ ತಾತ್ಕಾಲಿಕ ಇವುಗಳಲ್ಲಿ ಯಾವುದರಡಿ ಪರಿಗಣಿಸಲಾಗಿದೆ ಎಂಬ ಸ್ಪಷ್ಟೀಕರಣ ಕೂಡ ಇರುವುದಿಲ್ಲ.

ಆದುದರಿಂದ ನಿವೃತ್ತಿ ಹೊಂದಿರುವ ಶ್ರೀ ಆರ್.ಸೋಮಣ್ಣ ರವರಿಗೆ ಪಾವತಿಸಿರುವ ಉಪಧನ ಮೊತ್ತ ರೂ.2,87,280/- ಮತ್ತು ಗಳಿಕೆ ರಜೆ ನಗಧೀಕರಣ ಮೊತ್ತ ರೂ.1,79,424/-ಗಳು ಸೇರಿ ಒಟ್ಟು **ರೂ.4,66,704/-** ಗಳನ್ನು ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳಿಂದ **ವಸೂಲಿಸಿ.**

34.4 ಶ್ರೀ ವಲೀಯುಲ್ಲಾ ಸಾಹೇಬ್ ಆರ್.ಪಿ., ನಿವೃತ್ತ ಸಹಾಯಕ ಕುಲಸಚಿವ ಇವರ ಪಾಯಂ ಪೂರ್ವ ಅವಧಿಯಲ್ಲಿನ ಸೇವೆಯನ್ನು ಪರಿಗಣಿಸಿ ಹಳೆಯ ಪಿಂಚಣಿ ಯೋಜನೆಯಡಿ ರೂ.15,55,002/-ನಿವೃತ್ತಿ ವೇತನ ಸೌಲಭ್ಯಗಳನ್ನು ಪಾವತಿಸಿರುವುದು.

2023-24ನೇ ಸಾಲಿನಲ್ಲಿ ಶ್ರೀ ವಲೀಯುಲ್ಲಾ ಸಾಹೇಬ್ ಆರ್.ಪಿ., ನಿವೃತ್ತ ಸಹಾಯಕ ಕುಲಸಚಿವ , ಇವರು ದಿನಾಂಕ:30.06.2023ರಂದು ವಯೋ ನಿವೃತ್ತಿ ಹೊಂದಿದ್ದು, ವಿಶ್ವವಿದ್ಯಾಲಯದ ಆದೇಶ ಸಂಖ್ಯೆ: ಕರಾಮುವಿ/ಹವಿ-3/ಪಿಂಚಣಿ20/202-24, ದಿನಾಂಕ:09-10-2023ರಲ್ಲಿ ಪಿಂಚಣಿ ರೂ.22458/- ಪರಿವರ್ತಿತ ಪಿಂಚಣಿ ಮೌಲ್ಯ ರೂ.8,81,252/-, ನಿವೃತ್ತಿ ಉಪದಾನ ರೂ.6,73,750/- ಮತ್ತು ಕುಟುಂಬ ಪಿಂಚಣಿ ರೂ.16170/-ಗಳನ್ನು ಮಂಜೂರು ಮಾಡಿದ್ದು, ಪರಿವರ್ತಿತ ಪಿಂಚಣಿ ಮತ್ತು ಉಪದಾನವನ್ನು ಧನಾದೇಶ ಸಂಖ್ಯೆ: 103801/26.10.2023, ರಲ್ಲಿ ರೂ.15,55,002/-ಗಳನ್ನು ಹಾಗೂ ವೋಚರ್ ನಂ.172/30.06.2023ರಲ್ಲಿ ನಿವೃತ್ತಿ ಸಮಯದ ಗಳಿಕೆ ರಜೆ ನಗದೀಕರಣ ಮೊತ್ತ ರೂ.7,27,650/-ಗಳನ್ನು ಧನಾದೇಶ ಸಂಖ್ಯೆ:925398/30.06.2023ರಲ್ಲಿ ಪಾವತಿಸಿದೆ.

ಶ್ರೀ ವಲೀಯುಲ್ಲಾ ಸಾಹೇಬ್ ಆರ್.ಪಿ., ಇವರು ಕುಲಸಚಿವರು, ಮೈಸೂರು ವಿಶ್ವವಿದ್ಯಾಲಯರವರ ಆದೇಶ ಸಂಖ್ಯೆ:ಇಟಿ.4/163/91-92, ದಿನಾಂಕ:28.04.1992 ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ. ಸಾವಿ/ಆಡಳಿತ/96-97, ದಿನಾಂಕ:1.8.1996ರಲ್ಲಿ ಮಾಸಿಕವಾಗಿ ರೂ.1,000/- ಸಂಭಾವನೆಗೆ ತಾತ್ಕಾಲಿಕವಾಗಿ ಗ್ರಂಥಾಲಯ ಅಪ್ರೆಂಟೀಸ್ ಆಗಿ ನೇಮಕವಾಗಿರುತ್ತಾರೆ.

ಇವರ ಸೇವಾವಹಿಯನ್ನು ಪರಿಶೀಲಿಸಲಾಗಿ, ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಕರಾಮುವಿ/ಆ/ಸಂ:ಇಟಿ-1ಆಶಾ/36/97-98, ದಿನಾಂಕ:03-08-1998ರಲ್ಲಿ ಹೊಸದಾಗಿ ಸೃಷ್ಟಿಸಿದ ಗ್ರಂಥಾಲಯ ಸಹಾಯಕ ಹುದ್ದೆಗೆ ಮಾಸಿಕ ವೇತನ ರೂ.1040/-ರಂತೆ ತಾತ್ಕಾಲಿಕ ಆಧಾರದ ಮೇಲೆ ನೇಮಕವಾಗಿರುತ್ತಾರೆ. (ಸೇವಾವಹಿಯ ಪುಟ ಸಂಖ್ಯೆ.4 ರಲ್ಲಿ ನಮೂದಿಸಿದೆ.)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಅಧಿಕೃತ ಜ್ಞಾಪನ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ2/ ಪ್ರದಗುನೇ/07/531/2007-08, ದಿನಾಂಕ:20.11.2007ರಲ್ಲಿ ಸದರಿಯವರನ್ನು ಹೊಸದಾಗಿ ಸೃಜಿಸಿದ ಪ್ರ.ದ.ಗು ಹುದ್ದೆಗೆ ಎದುರಾಗಿ ರೂ.8000-200-8600-225-9500-250-10500-300-12300-350-14400-400-

14800ರ ವೇತನ ಶ್ರೇಣಿಯಲ್ಲಿ ನೂತನ ಪಿಂಚಣಿ ಯೋಜನೆಯಡಿ ನೇರ ನೇಮಕಾತಿ ಮಾಡಿಕೊಂಡಿರುವುದು ಕೂಡ ಕಂಡು ಬಂದಿರುತ್ತದೆ. ಸದರಿಯವರ ನೇಮಕಾತಿಗೆ ಸಂಬಂಧಿಸಿದ ತಾತ್ಕಾಲಿಕವಾಗಿ ನೇಮಕ ಮಾಡಿರುವ ಆದೇಶದ ಕಡತ ಹಾಗೂ ಸದರಿಯವರು ಸೇವೆಗೆ ಸೇರಿದ ದಿನಾಂಕದಿಂದ ಖಾಯಂಗೊಳಿಸುವವರೆಗೂ ಕರ್ತವ್ಯ ನಿರ್ವಹಿಸಿರುವುದಕ್ಕೆ ಹಾಜರಾತಿ ವಹಿ ಮತ್ತು ಇವರನ್ನು ಖಾಯಂಗೊಳಿಸಿರುವುದಕ್ಕೆ ಅನುಸರಿಸಿರುವ ಮಾನದಂಡಗಳನೊಳಗೊಂಡ ಪೂರ್ಣ ಕಡತವನ್ನು ಹಾಜರುಪಡಿಸುವಂತೆ ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 123/18.01.2025ನ್ನು ನೀಡಲಾಗಿತ್ತು. ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿ ಶ್ರೀ ವಲೀಯುಲ್ಲಾ ಸಾಹೇಬ್ ಆರ್.ಪಿ, ಇವರು ದಿನಾಂಕ:04.05.1992 ರಿಂದ ದಿನಾಂಕ:02.08.1998ರ ವರೆಗೂ ಮೈಸೂರು ವಿಶ್ವವಿದ್ಯಾನಿಲಯದ ಹಿಂದಿನ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯಲ್ಲಿ ನಂತರ ದಿನಾಂಕ:19.11.2007ರ ವರೆಗೆ ತಾತ್ಕಾಲಿಕವಾಗಿ ಸೇವೆ ಸಲ್ಲಿಸಿರುತ್ತಾರೆ, ಇವರು ತಾತ್ಕಾಲಿಕವಾಗಿ ಸೇವೆ ಸೇರಿದ ದಿನಾಂಕದಿಂದ ಖಾಯಂಗೊಳಿಸುವವರೆಗೂ ಕರ್ತವ್ಯ ನಿರ್ವಹಿಸಿರುವ ಸಂಬಂಧ ಕರಾಮುವಿ ನಿಲಯದಲ್ಲಿ ಬೋಧಕೇತರ ಹುದ್ದೆಗಳ ನೇಮಕಾತಿಗೆ ಅರ್ಜಿ ಸಲ್ಲಿಸುವ ಸಂಬಂಧದಲ್ಲಿ ಸೇವಾ ದೃಢೀಕರಣ ಪತ್ರವನ್ನು ದಿನಾಂಕ:19.05.2007ರಲ್ಲಿ ವಿಶ್ವವಿದ್ಯಾನಿಲಯವು ನೀಡಲಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ.

ಶ್ರೀ ವಲೀಯುಲ್ಲಾ ಸಾಹೇಬ್ ಆರ್.ಪಿ., ದಿನಾಂಕ:31.10.2021 ರಂದು ನೌಕರರು ಮನವಿ ಸಲ್ಲಿಸಿ ತಾತ್ಕಾಲಿಕ ಸೇವೆಯನ್ನು ಸಕ್ರಮಗೊಳಿಸಿ ಖಾಯಂ ಪೂರ್ವ ಅವಧಿಯ ಸೇವಾ ಸೌಲಭ್ಯಗಳನ್ನು ತಮಗೂ ಅನ್ವಯಿಸಬೇಕೆಂದು ಹಾಗೂ ಹಳೆಯ ಪಿಂಚಣಿ ಯೋಜನೆಯನ್ನು ಒದಗಿಸಿಕೊಡಬೇಕೆಂದು ಕೋರಿದುದರಿಂದ ನೇಮಕಾತಿ ಪ್ರಾಧಿಕಾರವಾದ ವ್ಯವಸ್ಥಾಪನಾ ಮಂಡಳಿಯ 166ನೇ ಸಭೆಯ ತೀರ್ಮಾನದಂತೆ "ಸರ್ವೋಚ್ಚ ನ್ಯಾಯಾಲಯದ ತೀರ್ಪು, ಸರ್ಕಾರದ ಆದೇಶ ಹಾಗೂ ವಿಶ್ವವಿದ್ಯಾನಿಲಯದ ಪರಿನಿಯಮಗಳನ್ವಯ ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳುವಂತೆ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿರುವ ಮೇರೆಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/62/2021-22/01, ದಿನಾಂಕ:19.02.2022ರಲ್ಲಿ ಆದೇಶ ಹೊರಡಿಸಿ ದಿನಾಂಕ:29.04.2002 ರಿಂದ ಜಾರಿಗೆ ಬಂದಂತೆ ಸಕ್ರಮಗೊಳಿಸಿ ವೇತನವನ್ನು ಕಾಲ್ಪನಿಕವಾಗಿ ನಿಗದಿಪಡಿಸಲು ಮತ್ತು ಹಳೆ ಪಿಂಚಣಿ ಸೌಲಭ್ಯಕ್ಕೆ ಒಳಪಡಿಸಿ ಆದೇಶಿಸಲಾಗಿದೆ. ಹಾಗೂ ತಕ್ಷಣದಿಂದ ಜಾರಿಗೆ ಬಂದಂತೆ ನೂತನ ಪಿಂಚಣಿ ಯೋಜನೆಯ ವಂತಿಗೆಯನ್ನು ಸ್ಥಗಿತಗೊಳಿಸಲು ಹಾಗೂ ಸದರಿ ಯೋಜನೆಯಡಿ ನೌಕರರಿಂದ ಕಟಾಯಿಸಿರುವ ನೌಕರರ ವಂತಿಕೆ (Employee Contribution) ಯನ್ನು ನೌಕರರಿಗೆ ಮರುಪಾವತಿಸಲು ಕ್ರಮವಹಿಸುವಂತೆ ಆದೇಶಿಸಲಾಗಿದೆ.

ವಿಶ್ವವಿದ್ಯಾಲಯದ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/62/2021-22/01, ದಿನಾಂಕ: 19.02.2022 ರಂತೆ ದಿನಾಂಕ:03.08.1998 ರಿಂದ 10 ವರ್ಷಗಳು ತಾತ್ಕಾಲಿಕ ನೌಕರರಾಗಿ ಕಾರ್ಯನಿರ್ವಹಿಸಿರುವುದನ್ನು ಪರಿಗಣಿಸಿದ್ದು, 29.04.2002 ರಿಂದ ಜಾರಿಗೆ ಬಂದಂತೆ ಸಕ್ರಮಗೊಳಿಸಿ, ವೇತನವನ್ನು ಕಾಲ್ಪನಿಕವಾಗಿ ನಿಗಧಿಪಡಿಸಲು ಮತ್ತು ಹಳೆಯ ಪಿಂಚಣಿ ಸೌಲಭ್ಯಕ್ಕೆ ಒಳಪಡಿಸಿ ಆದೇಶಿಸಿದೆ. ಇದರನ್ವಯ ದಿನಾಂಕ:20.11.2007 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದರೂ ಸಹ ದಿನಾಂಕ:03.08.1998ಕ್ಕೆ

ವೇತನ ಶ್ರೇಣಿ 3000-5450ರಲ್ಲಿ ಮೂಲ ವೇತನವನ್ನು ರೂ.3,000/-ಗಳಿಗೆ ನಿಗದಿಪಡಿಸಿರುವುದು ಕಂಡುಬಂದಿರುತ್ತದೆ.

1984 ರಿಂದ 2002 ರವರೆಗೆ ಪ್ರತೀ ಆರು ತಿಂಗಳಿಗೆ ಗ್ರಂಥಾಲಯ ಅಪ್ರೆಂಟಿಸ್ ಹುದ್ದೆಗೆ ತಾತ್ಕಾಲಿಕ ಆಧಾರದ ಮೇಲೆ ನೇಮಕ ಮಾಡಿರುವುದನ್ನು ಸೇವಾ ವಹಿಯಲ್ಲಿ ದಾಖಲಿಸಿದ್ದು, ಈ ಸಂಬಂಧ ಖಾಲಿ ಹುದ್ದೆಗಳ ವಿವರಗಳು, ತಾತ್ಕಾಲಿಕ ನೇಮಕಾತಿಯ ಅಧಿಸೂಚನೆಗಳು, ನೇಮಕಾತಿ ಆದೇಶಗಳು, ತಾತ್ಕಾಲಿಕವಾಗಿ ಕಾರ್ಯನಿರ್ವಹಿಸಿರುವುದಕ್ಕೆ ಹಾಜರಾತಿ ಪಟ್ಟಿಗಳು ಹಾಗೂ ವೇತನ ಬಟವಾಡೆ ಲೆಕ್ಕಪತ್ರಗಳು, ಇವು ಯಾವುದನ್ನೂ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ಸೇವಾ ವಹಿಯಲ್ಲಿ ದಾಖಲಿಸಿರುವಂತೆ ಇವರನ್ನು ವಿಶ್ವವಿದ್ಯಾಲಯದ ಮಂಜೂರಾದ ಖಾಲಿ ಹುದ್ದೆಗೆ ಎದುರಾಗಿ ಖಾಯಂ ಮಾಡಿರುವುದಾಗಿದ್ದು, ಅನ್ಯ ಇಲಾಖಾ ನೌಕರರಿಗೆ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪನ್ನೇ ವಿಶ್ವವಿದ್ಯಾಲಯಕ್ಕೆ ಅಳವಡಿಸಿಕೊಳ್ಳಲು ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಿ ಜಾರಿಗೊಳಿಸಿದ್ದು, ಈ ಸಿಂಡಿಕೇಟ್ ನಿರ್ಣಯವನ್ನು ಪರಿನಿಯಮಗೊಳಿಸಿ ಮಾನ್ಯ ಕುಲಾಧಿಪತಿಯವರಿಂದ ಒಪ್ಪಿಗೆ ಪಡೆದಿರುವುದಿಲ್ಲ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ-2000, ಅಧ್ಯಾಯ-5ರ ನಿಯಮ-41ರ ಅನ್ವಯ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಪರಿನಿಯಮಗಳನ್ನು ರೂಪಿಸಿ ಮಾನ್ಯ ಕುಲಾಧಿಪತಿಯವರ ಅನುಮೋದನೆ ಪಡೆದು ವಿಶ್ವವಿದ್ಯಾನಿಲಯವು ಅಧಿಸೂಚಿಸಿದ ಹೊರತು ಅದು ಜಾರಿಗೆ ಬರುವುದಿಲ್ಲ. ಆದರೆ ಈ ನಿಯಮವನ್ನು ಪಾಲಿಸದೇ ಸಿಂಡಿಕೇಟ್ ನಿರ್ಣಯದಂತೆ ಸಿಬ್ಬಂದಿಗಳನ್ನು ಖಾಯಂಗೊಳಿಸಿರುವುದು ನಿಯಮಗಳ ಉಲ್ಲಂಘನೆಯಾಗಿರುತ್ತದೆ.

ಕರ್ನಾಟಕ ಸರ್ಕಾರವು ರಾಜ್ಯ ಸರ್ಕಾರಿ ನೌಕರರಿಗೆ ದಿನಾಂಕ:01.04.2006 ರಿಂದ ಅನ್ವಯವಾಗುವಂತೆ ನೂತನ ಪಿಂಚಣಿ ಯೋಜನೆಯನ್ನು(NPS) ಜಾರಿಗೊಳಿಸಿದ್ದು, ನೂತನ ಪಿಂಚಣಿ ಯೋಜನೆ ಜಾರಿಗೊಂಡ ನಂತರ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:28.07.2006ರ ಸಿಂಡಿಕೇಟ್ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಶ್ರೀಯುತರನ್ನು ದಿನಾಂಕ:01.02.1999ರಿಂದ ಪೂರ್ವಾನ್ವಯವಾಗುವಂತೆ ಖಾಯಂಗೊಳಿಸಿ ವೇತನ ನಿಗದಿಪಡಿಸಿ ಆದೇಶ ಹೊರಡಿಸಿರುವುದು(ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕರಾಮುವಿ/ಆಪಿ/ಸಿಬ್ಬಂದಿ-2/62/2021-22/01, ದಿನಾಂಕ:19.02.2022 ರಲ್ಲಿ) ತಾತ್ಕಾಲಿಕವಾಗಿ ಸೇವೆ ಸಲ್ಲಿಸಿ 10 ವರ್ಷ ಪೂರೈಸಿದ ನೌಕರರಿಗೆ ಹಳೆಯ ಪಿಂಚಣಿ ಸೌಲಭ್ಯಕ್ಕೆ ಒಳಪಡಿಸಿರುವುದನ್ನು ಆಕ್ಷೇಪಿಸಲಾಗಿದೆ ಹಾಗೂ ಶ್ರೀಯುತರಿಗೆ ಪಾವತಿಸಿರುವ ಪರಿವರ್ತಿತ ಪಿಂಚಣಿ ಮೌಲ್ಯ ಹಾಗೂ ನಿವೃತ್ತಿ ಉಪದಾನಗಳ ಒಟ್ಟು ಮೊತ್ತ **ರೂ.15,55,002/-ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.**

ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ (ಎಸ್.ಪಿ.ಎಲ್)/04/ ಪಿಇಟಿ/2005 ದಿನಾಂಕ:31.03.2006ರ ಆದೇಶದನ್ವಯ ದಿ:01.04.2006ರ ನಂತರ ಖಾಯಂ ನೇಮಕಾತಿ ಹೊಂದುವ ಮೂಲಕ ಕೆಲಸಕ್ಕೆ ವರದಿ ಮಾಡಿಕೊಳ್ಳುವ ನೌಕರರುಗಳಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಬೇಕಾಗಿರುತ್ತದೆ.

ಸರ್ಕಾರಿ ಆದೇಶಸಂಖ್ಯೆ: ಎಫ್.ಡಿ(ಎಸ್.ಪಿ.ಎಲ್)/04/ಪಿಇಟಿ/2005 ದಿನಾಂಕ:31.03.2006ನ್ನು ಉಲ್ಲಂಘಿಸಿ ಹಳೆಯ ಪಿಂಚಣಿ ಯೋಜನೆಗೆ ಒಳಪಡಿಸಿರುವ ಬಗ್ಗೆ ಬಿ.ಒ.ಎಂ ಸಭೆಯ ನಿರ್ಣಯ ಕೈಗೊಂಡು

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ–2000ರ ನಿಯಮ41(5) ರನ್ವಯ ಬಿ.ಒ.ಎಂ ಸಭೆಯಲ್ಲಿ ಕೈಗೊಂಡಿರುವ ನಿರ್ಣಯಗಳನ್ನು ಸರ್ಕಾರಕ್ಕೆ ಸಲ್ಲಿಸಿ ನಿಯಮ41(6)ರನ್ವಯ ಬಿ.ಒ.ಎಂ ಸಭೆಯ ನಿರ್ಣಯದ ಪರಿನಿಯಮಾವಳಿಗಳಿಗೆ ಸರ್ಕಾರ ತಿದ್ದುಪಡಿಗಳೊಂದಿಗೆ ಸಲ್ಲಿಸಲಾದ ಬಿ.ಒ.ಎಂ ಸಭೆಯ ನಿಯಮಗಳು/ ಪರಿನಿಯಮಗಳಿಗೆ ನಿಯಮ 41(7)ರನ್ವಯ ಮಾನ್ಯ ಕುಲಾಧಿಪತಿಗಳಿಂದ ಪರಿನಿಯಮವನ್ನು ಅನುಮೋದನೆ ಪಡೆದು ಜಾರಿಗೊಳಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮಂಜೂರು ಮಾಡಿರುವ ಪಿಂಚಣಿ ಆದೇಶವನ್ನು ರದ್ದುಗೊಳಿಸಿ ನೂತನ ಪಿಂಚಣಿ ಯೋಜನೆಗೆ ಒಳಪಡಿಸಲು ಹಾಗೂ ಹೆಚ್ಚುವರಿಯಾಗಿ ನೀಡಿರುವ ಮೊತ್ತವನ್ನು ಲೆಕ್ಕಾಚಾರ ಮಾಡಿ ವಸೂಲಿಸಲು ಸೂಚಿಸಿದೆ.

35. ಪುಸ್ತಕಗಳ ಮಾರಾಟ

35.1 ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ಪುಸ್ತಕಗಳನ್ನು ಮಾರಾಟ ಮಾಡಿದ ವಿವರ.

2023–24ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಪ್ರಸಾರಾಂಗ ವಿಭಾಗದ ಮಾರಾಟ ಮಳಿಗೆ ಹಾಗೂ ಜನಪ್ರಿಯ ಕನ್ನಡ ಮಾಲೆ ರಶೀದಿ ಪುಸ್ತಕಗಳನ್ನು ಪರಿಶೀಲಿಸಲಾಗಿದ್ದು, ಸದರಿ ಸಾಲಿನಲ್ಲಿ ಪ್ರಸಾರಾಂಗ ಮಾರಾಟ ಮಳಿಗೆಯಿಂದ ಹಾಗೂ ಜನಪ್ರಿಯ ಕನ್ನಡ ಮಾಲೆ ಪುಸ್ತಕಗಳ ಮಾರಾಟದಿಂದ ಒಟ್ಟು ರೂ.2,24,072/– ಗಳು ಸ್ವೀಕೃತಿಯಾಗಿದ್ದು, ಎಸ್.ಬಿ.ಐನಲ್ಲಿರುವ ವಿಶ್ವವಿದ್ಯಾನಿಲಯದ ಬ್ಯಾಂಕ್ ಖಾತೆ ಸಂಖ್ಯೆ:54035420117ಕ್ಕೆ ಜಮೆ ಮಾಡಲಾಗಿದೆ.

36. ಲೆಕ್ಕಪರಿಶೋಧನಾ ಶುಲ್ಕ

36.1 ವಿಶ್ವವಿದ್ಯಾನಿಲಯದವರು ಲೆಕ್ಕಪರಿಶೂಧನಾ ಶುಲ್ಕವನ್ನು ಸರ್ಕಾರದ ಲೆಕ್ಕಶೀರ್ಷಿಕೆ ಪಾವತಿಸದಿರುವುದು.

2023–24ನೇ ಸಾಲಿನ ಅಂತ್ಯಕ್ಕೆ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಲೆಕ್ಕ ಶೀರ್ಷಿಕೆಗೆ ಸಂದಾಯ ಮಾಡಬೇಕಿರುವ ಲೆಕ್ಕಪರಿಶೋಧನಾ ಶುಲ್ಕದ ಬಾಕಿ ವಿವರಗಳು ಈ ಕೆಳಕಂಡಂತಿರುತ್ತದೆ.

ವರ್ಷ	ಆರಂಭಿಕ ಶಿಲ್ಕು	ಚಾಲ್ತಿ ವರ್ಷದ ಆಡಿಟ್ ಶುಲ್ಕ	ಒಟ್ಟು ಮೊತ್ತ	ಚಾಲ್ತಿ ವರ್ಷದ ಪಾವತಿ	ಬಾಕಿ ಮೊತ್ತ
2015–16	0	6,46,496	6,46,496		6,46,496
2016–17	6,46,496	13,27,400	19,73,896	0	19,73,896
2017–18	19,73,896	7,48,729	27,22,625		27,22,625

2018–19	27,22,625	12,50,176	39,72,801		39,72,801
2019–20	39,72,801	10,26,100	49,98,901	49,98,901	0
2020–21	0	15,39,399	15,39,399		15,39,399
2021–22	15,39,399	22,03,571	37,42,970	–	37,42,970
2022–23	37,42,970	15,33,294	52,76,264	–	**52,76,264**
2023–24	52,76,264	16,15,557	68,91,821	–	**68,91,821**

ಬಾಕಿ ಉಳಿದಿರುವ ರೂ.52,76,264/–ಗಳ ಲೆಕ್ಕಪರಿಶೋಧನಾ ಶುಲ್ಕವನ್ನು ಇಲಾಖೆ ಲೆಕ್ಕ ಶೀರ್ಷಿಕೆ 0070–60–110–0–01–000ಗೆ ಜಮೆ ಮಾಡಿ, ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿದೆ. ಚಾಲ್ತಿ ವರ್ಷದ ಲೆಕ್ಕಪರಿಶೋಧನಾ ಶುಲ್ಕದ ವಿವರವನ್ನು **ಅನುಬಂಧ–60** ರಲ್ಲಿ ವಿವರಿಸಲಾಗಿದೆ.

ಸಾಮಾನ್ಯ ಅಭಿಪ್ರಾಯ

1. ವಿಶ್ವವಿದ್ಯಾನಿಲಯವು ಹಿಂದಿನ ಸಾಲುಗಳಲ್ಲಿ ಇತ್ಯರ್ಥವಾಗದೇ ಬಾಕಿ ಉಳಿದಿರುವ ಲೆಕ್ಕಪರಿಶೋಧನಾ ವರದಿಗಳ ಕಂಡಿಕೆಗಳಿಗೆ ಅನುಪಾಲನಾ ವರದಿಗಳನ್ನು ಪೂರಕ ದಾಖಲೆಗಳೊಂದಿಗೆ ಸಕ್ಷಮ ಪ್ರಾಧಿಕಾರದ ಮೂಲಕ ಸಲ್ಲಿಸಿ ಶೀಘ್ರ ಇತ್ಯರ್ಥಕ್ಕೆ ಕ್ರಮವಹಿಸಿರುವುದಿಲ್ಲ

2. ಯೋಜನೆವಾರು ಬ್ಯಾಂಕ್ ಖಾತೆಗಳಲ್ಲಿನ ಸ್ವೀಕೃತಿ ಮತ್ತು ಪಾವತಿಗಳನ್ವಾಧರಿಸಿ ಜಮೆ ಮತ್ತು ಪಾವತಿ ತಃಖ್ತೆಗಳನ್ನು ತಯಾರಿಸಿ, ಅವುಗಳನ್ನು ಕ್ರೋಢೀಕರಿಸಿ ವಾರ್ಷಿಕ ಲೆಕ್ಕ ಪತ್ರಗಳೆಂದು ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿರುತ್ತದೆ. ಆದರೆ ಸನ್ನದು ಲೆಕ್ಕಿಗರಿಂದ ಮತ್ತೊಂದು ಹಣಕಾಸು ತಃಖ್ತೆಯನ್ನು ತಯಾರಿಸಲಾಗುತ್ತದೆಂದು ಹೇಳಲಾಗುತ್ತದೆ. ಸನ್ನದು ಲೆಕ್ಕಿಗರಿಗೆ ಹಣ ಪಾವತಿಸಿರುವುದು ಇದನ್ನು ಪುಷ್ಟೀಕರಿಸುತ್ತದೆ. ಆದರೆ ಸನ್ನದು ಲೆಕ್ಕಿಗರಿಂದ ತಯಾರಿಸಿದ ವಾರ್ಷಿಕ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ನೀಡಿರುವುದಿಲ್ಲ.

3. ವಿಶ್ವವಿದ್ಯಾನಿಲಯವು ತಾನು ನಿರ್ವಹಿಸುತ್ತಿರುವ ಬ್ಯಾಂಕ್ ಖಾತೆಗಳ ಪೂರ್ಣ ವಿವರಗಳನ್ನು ಲೆಕ್ಕಪರಿಶೋಧನೆಗೆ ಬಹಿರಂಗಪಡಿಸಿರುವುದಿಲ್ಲ. ಲೆಕ್ಕಪತ್ರಗಳಲ್ಲಿ ಬಿಂಬಿಸದ ಆಕ್ಸಿಸ್ ಬ್ಯಾಂಕ್ ಖಾತೆಯ ವಿವರಗಳನ್ನು ನೀಡಲು ವಿಶ್ವವಿದ್ಯಾನಿಲಯದ ಕುಲಸಚಿವರು(ಆಡಳಿತ)ರನ್ನು ಕೋರಿದ್ದರೂ, ಯಾವುದೇ ವಿವರ ನೀಡಿರುವುದಿಲ್ಲ. ಹೀಗಾಗಿ ವಿಶ್ವವಿದ್ಯಾನಿಲಯವು ಈ ಬಗೆಯ ಇನ್ನೂ ಹಲವು ಬ್ಯಾಂಕ್ ಖಾತೆಗಳನ್ನು ನಿರ್ವಹಿಸುತ್ತಿರಬಹುದಾದ ಸಂಶಯ ಮೂಡುತ್ತದೆ.

4. ವಿಶ್ವವಿದ್ಯಾನಿಲಯವು ಪ್ರವೇಶ ಪಡೆದ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕಕ್ಕೆ ಸಂಬಂಧಿಸಿದಂತೆ ಬೇಡಿಕೆ, ವಸೂಲಾತಿ ಮತ್ತು ಬಾಕಿ (DCB Register)ವಹಿಯನ್ನು ಕ್ರಮಬದ್ಧವಾಗಿ ನಿರ್ವಹಿಸಲು ಸೂಚಿಸಿದೆ.

5. ವಿಶ್ವವಿದ್ಯಾನಿಲಯದ ನಿಧಿಯನ್ನು ಹೂಡಿಕೆ ಮಾಡುವಾಗ ಹೂಡಿಕೆ ಸಮಿತಿ ಹಾಗೂ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಸರಕಾರದ ನಿಯಮ/ಮಾರ್ಗಸೂಚಿಯನ್ವಯ ಹೂಡಿಕೆ ಮಾಡದೆ ಖಾಸಗಿ ಹಣಕಾಸು ಸಂಸ್ಥೆ/ಬ್ಯಾಂಕುಗಳಲ್ಲಿ ಕೂಡ ಹೂಡಿಕೆ ಮಾಡಿರುವುದು ಅಪಾಯಕಾರಿ ನಿರ್ಧಾರವಾಗಿದ್ದು, ಈ ಬಗ್ಗೆ ಪರಿಶೀಲಿಸಲು ಸೂಚಿಸಿದೆ.

6. ವಿಶ್ವವಿದ್ಯಾನಿಲಯದಲ್ಲಿ ಕ್ರಿಯಾಯೋಜನೆಯ ದಸ್ತಾವೇಜುಗಳು, ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯ ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ.

7. ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಕಾಮಗಾರಿಗಳಲ್ಲಿ ಹೆಚ್ಚುವರಿ ಅಂಶಗಳಿಗೆ ಬಿಲ್ಲು ಪಾವತಿಸಿರುವುದನ್ನು ಹಾಗೂ ಸಕ್ಷಮ ಪ್ರಾಧಿಕಾರದ ಅನುಮೋದನೆ ಇಲ್ಲದೆ ಪ್ರೈಸ್ ಎಸ್ಕಲೇಸನ್ ಮಾಡಿ ಹಿಂದಿನ ಲೆಕ್ಕಪರಿಶೋಧನಾ ವರದಿಯಲ್ಲಿ ವಸೂಲಿಸಲು ಸೂಚಿಸಿದ್ದ ಹೆಚ್ಚುವರಿ ಪಾವತಿ ಮೊತ್ತವನ್ನು ಹೊಂದಾಣಿಕೆ ಮಾಡುವ ಮೂಲಕ ಗುತ್ತಿಗೆದಾರರಿಗೆ ಅನಗತ್ಯ ಅನುಕೂಲ ಮಾಡಿಕೊಟ್ಟಿರುವುದು ಸರಿಯಾದ ಕ್ರಮವಾಗಿರುವುದಿಲ್ಲ.

8. ವಿಶ್ವವಿದ್ಯಾನಿಲಯದಲ್ಲಿ ಪ್ರತ್ಯೇಕ ಇಂಜಿನಿಯರಿಂಗ್ ವಿಭಾಗವಿದ್ದರೂ ಕಾಮಗಾರಿಗಳನ್ನು ನಿರ್ಮಿತಿ ಕೇಂದ್ರ ಹಾಗೂ ಕೆ.ಆರ್.ಐ.ಡಿ.ಎಲ್ ಮೂಲಕ ನಿರ್ವಹಿಸಿರುವುದು ಸರಿಯಾದ ಕ್ರಮವಾಗಿರುವುದಿಲ್ಲ.

9. ವಿಶ್ವವಿದ್ಯಾಲಯವು ಕೆ.ಸಿ.ಎಸ್.ಆರ್, ಕೆ.ಎಫ್.ಸಿ., ಎಂ.ಸಿ.ಇ., ಕೆ.ಟಿ.ಪಿ.ಪಿ. ಕಾಯ್ದೆ ಮತ್ತು ಸರಕಾರದ ಸುತ್ತೋಲೆ ನಿಯಮಗಳಡಿ ಕಾರ್ಯನಿರ್ವಹಿಸಬೇಕಿದ್ದು, ಹಲವು ಸಂದರ್ಭಗಳಲ್ಲಿ ಈ ಕಾಯ್ದೆ/ನಿಯಮಗಳನ್ನು ಉಲ್ಲಂಘಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

10. ಬೋಧಕ/ಬೋಧಕೇತರ ವರ್ಗದವರಿಗೆ ಯು.ಜಿ.ಸಿ./ಸರ್ಕಾರಿ ಆದೇಶವನ್ನು ಮೀರಿ ಸಂಭಾವನೆ/ ಗೌರವಧನವನ್ನು ನೀಡಿರುವುದು, ಕೆ.ಸಿ.ಎಸ್.ಆರ್. ನಿಯಮಗಳನ್ನು ಮೀರಿ ಹೆಚ್ಚುವರಿಯಾಗಿ ಪ್ರಯಾಣ ಭತ್ಯೆ, ದಿನಭತ್ಯೆ ಹಾಗೂ ಇತರೆ ಭತ್ಯೆಗಳನ್ನು ಪಾವತಿಸಿರುವುದನ್ನು ಗಮನಿಸಲಾಗಿದೆ. ಈ ಬಗ್ಗೆ ವಿಶ್ವವಿದ್ಯಾಲಯವು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.

11. ಸರ್ಕಾರದಿಂದ ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಖಾಲಿ ಇರುವ ಹುದ್ದೆಗಳಿಗೆ ನೇಮಕ ಮಾಡಿಕೊಂಡು ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಹಾಗೂ ವೇತನ ಶ್ರೇಣಿ ವಿವರಗಳನ್ನೊಳಗೊಂಡ (ಕೆ.ಎಫ್.ಸಿ–1963 ಅನುಚ್ಛೇದ–93(4)ರ ನಮೂನೆ 19 & 20) ಶ್ರೇಣಿ ವಹಿಯನ್ನು ನಿರ್ವಹಿಸಿ ಹಾಜರುಪಡಿಸಿರುವುದಿಲ್ಲ. ಹಾಗೂ ಬೋಧಕೇತರ ಅಧಿಕಾರಿ ಮತ್ತು ಸಿಬ್ಬಂದಿಗಳ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಿರುವುದಿಲ್ಲ

12. ಬೋದಕೇತರ ಹುದ್ದೆಗಳನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳದಂತೆ ಹಾಗೂ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಖಾಲಿ ಇರುವ ಹುದ್ದೆಗಳಿಗೆ ಮಾತ್ರ ಸರ್ಕಾರದ ಪೂರ್ವಾನುಮತಿ ಪಡೆದು ಹೊರ ಗುತ್ತಿಗೆ ಮೇಲೆ

ಮಾತ್ರ ಸೇವೆ ಪಡೆಯಬೇಕೆಂಬ ಸರ್ಕಾರದ ನಿರ್ದೇಶನಗಳನ್ನು ಉಲ್ಲಂಘಿಸಿ ಮಂಜೂರಾದ ಹುದ್ದೆಗಳಿಗಿಂತಲೂ ಹೆಚ್ಚು ಮಂದಿಯನ್ನು ತಾತ್ಕಾಲಿಕ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವುದನ್ನು ಗಮನಿಸಲಾಗಿದೆ.

13. ಎ.ಸಿ ಬಿಲ್‌ಗಳ ಮೂಲಕ ಮುಂಗಡ ಡ್ರಾ ಮಾಡುವ ಸಂದರ್ಭದಲ್ಲಿ ಸರ್ಕಾರದ ನಿಯಮವನ್ನು ಪಾಲಿಸದೇ ಇರುವುದು ಮತ್ತು ವೋಚರುಗಳೊಡನೆ ಎನ್.ಡಿ.ಸಿಯನ್ನು ತಡವಾಗಿ ಸಲ್ಲಿಸಿರುವುದು ಅಥವಾ ಸಲ್ಲಿಸದೇ ಇರುವುದನ್ನು, ಎಸಿ ಬಿಲ್ಲುಗಳನ್ನು ಮಂಜೂರು ಮಾಡುವ ಸಕ್ಷಮ ಪ್ರಾಧಿಕಾರದ ಮೇಲು ಸಹಿ ಇಲ್ಲದೆಯೇ ಎನ್.ಡಿ.ಸಿಯನ್ನು ಹೊಂದಾಣಿಕೆ ಮಾಡಿರುವುದನ್ನು ಗಮನಿಸಲಾಗಿದೆ.

ಅಪರ ನಿರ್ದೇಶಕರು (ಪ್ರ)

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,

ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಮೈಸೂರು

ಅನುಬಂಧ - 2.

2024–25ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನಾ ಮುಖ್ಯ ಸಾರಾಂಶಗಳು

ಕ್ರ ಸಂ	ಕಂಡಿಕೆ ಸಂಖ್ಯೆ	ವಿವರ	ಪುಟ ಸಂಖ್ಯೆ
		ಭಾಗ–1	
1	1	ಪೀಠಿಕೆ.	18
2	1.1	ಸಂಸ್ಥೆಯ ವಿವರ.	18
3	1.2	ವಿಶ್ವವಿದ್ಯಾನಿಲಯದ ಸಿಬ್ಬಂದಿ ವಿವರ.	19
4	1.3	ಲೆಕ್ಕಪರಿಶೋಧನಾ ತಂಡದ ಅಧಿಕಾರಿ/ಸಿಬ್ಬಂದಿಗಳ ಹಾಗೂ ಲೆಕ್ಕಪರಿಶೋಧನಾ ಕಾರ್ಯಕ್ರಮದ ವಿವರಗಳು.	20
5	2	ಆರ್ಥಿಕ ಪರಿಸ್ಥಿತಿ.	21–22
6	2.1	ಮುಕ್ತ ವಿಶ್ವವಿದ್ಯಾನಿಲಯದವರು ಸಲ್ಲಿಸಿರುವ ಕರಡು ವಾರ್ಷಿಕ ಲೆಕ್ಕಪತ್ರಗಳ ಅನ್ವಯ. ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿ.	22–27
7	3	ಲೆಕ್ಕ ಪರಿಶೋಧನಾ ವ್ಯಾಪ್ತಿ.	27–28
8	4	ಲೆಕ್ಕ ಪರಿಶೋಧನಾ ಮಾನದಂಡ.	28
9	4.1	ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಂಡಿರುವ ಲೆಕ್ಕಪದ್ಧತಿ.	28
10	4.2	ಲೆಕ್ಕಪತ್ರ ನಮೂನೆಗಳು.	29
		ಭಾಗ–02	
11		ಆಡಿಟ್ ಪ್ರಮಾಣ ಪತ್ರ.	30
12	5	ಪ್ರತಿಕೂಲ ಅಭಿಪ್ರಾಯಕ್ಕೆ ಆಧಾರಗಳು.	31–33
13	6	ಇತರೆ ಅವಲೋಕನಗಳು.	33
14	6.1	ಆದಾಯ ಮತ್ತು ವೆಚ್ಚಗಳ ಅಂಕಿ ಅಂಶಗಳಲ್ಲಿ ವ್ಯತ್ಯಾಸಗಳು.	33
15	7	ಆನುದಾನ ವಹಿ ಮತ್ತು ಖರ್ಚಿ ಪುಸ್ತಕಗಳನ್ನು ನಿರ್ವಹಿಸದಿರುವುದು.	33
16	8	ಆಂತರಿಕ ನಿಯಂತ್ರಣ ಸಂಬಂಧದ ಅಭಿಪ್ರಾಯಗಳು.	34
		I ಹಣಕಾಸು ಲೆಕ್ಕ ಪರಿಶೋಧನೆ ಮತ್ತು ಸಂಶೋಧನೆಗಳು	
17	9	ಆಯವ್ಯಯ ಅಂದಾಜುಗಳು.	34–35
18	10	ಹಿಂದಿನ ಸಾಲುಗಳ ಆಯವ್ಯಯ ಅಂದಾಜುಗಳ ತುಲನಾತ್ಮಕ ವಿವರಗಳು.	35–36
19	11	ಪರೀಕ್ಷಾ ವಿಭಾಗದ ನಗದು ಪುಸ್ತಕದಲ್ಲಿ ಋಣಾತ್ಮಕ ಶಿಲ್ಕು ನಿರ್ವಹಿಸುತ್ತಿರುವುದು.	36–37
20	12	ಸರಕಾರವು ಹೊರಡಿಸಿರುವ ಸುತ್ತೋಲೆ ನಿಯಮಗಳನ್ನು ಪಾಲಿಸದೆ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮತ್ತು ಹಿಂತೆಗೆತಗಳನ್ನು ಮಾಡಿರುವುದು.	37–38
21	13	ಪಕ್ವವಾಗಿರುವ ಠೇವಣಿಗಳನ್ನು ಏಳಂಬವಾಗಿ ಮರು ಹೂಡಿಕೆ ಮಾಡಿ ಬಡ್ಡಿ ನಷ್ಟ ಉಂಟಾಗಿರುವುದು.	38–39
22	14	ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡದೇ ಸಣ್ಣ ಹಣಕಾಸು ಬ್ಯಾಂಕಿನಲ್ಲಿ ಹೂಡಿಕೆ ಮಾಡಿ ಬಡ್ಡಿ ನಷ್ಟ ಉಂಟಾಗಿರುವುದು.	40
23	15	ವಿಶ್ವವಿದ್ಯಾನಿಲಯದ ಪಾನ್ ಸಂಖ್ಯೆ:AAAGK0051J ಯಲ್ಲಿ ಬಾಹ್ಯ ಸಂಸ್ಥೆಗಳಿಂದ ತೆರಿಗೆ ಸಂಗ್ರಹಿಸಿರುವುದು (TCS).	41–43

24	16	ವಿಶ್ವವಿದ್ಯಾನಿಲಯದಲ್ಲಿ ಕುಲಸಚಿವರು (ಪರೀಕ್ಷಾಂಗ) ಇವರು ನಿರ್ವಹಿಸುತ್ತಿರುವ ಉಳಿತಾ ಖಾತೆಯ ಪೂರ್ಣ ದಾಖಲಾತಿಗಳನ್ನು ಹಾಜರುಪಡಿಸದಿರುವುದು.	43–44
25	17	ವಿಶ್ವವಿದ್ಯಾನಿಲಯದ ವ್ಯವಹರಣೆ ಇಲ್ಲದಿರುವ ಬ್ಯಾಂಕ್ ಖಾತೆಗಳನ್ನು ಮುಕ್ತಾಯಗೊಳಿಸುವುದು.	44–45
26	18	ನಿಶ್ಚಿತ ಠೇವಣಿಗಳಲ್ಲಿ ಹಾಗೂ ಇತರೆ ಆದಾಯಗಳಿಗೆ ಕಟಾವಣೆಯಾದ ಆದಾಯ ತೆರಿಗೆಯನ್ನು ಹಿಂಭರಿಕೆ ಮಾಡಿಕೊಳ್ಳದಿರುವುದು.	45
27	19	ಅನುದಾನವನ್ನು ಒಂದು ಖಾತೆಯಿಂದ ಇನ್ನೊಂದು ಖಾತೆಗೆ ಹಣ ವರ್ಗವಣೆ ಮಾಡಿರುವುದು.	46
28	20	ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಪರೀಕ್ಷಾ ಶುಲ್ಕಕ್ಕೆ ಬ್ಯಾಂಕಿನವರು ವಹಿವಾಟು ಶುಲ್ಕವನ್ನು ವಿಧಿಸಿರುವುದು.	46–47
29	21	ಹೂಡಿಕೆಗೆ ಸಂಬಂಧಿಸಿದಂತೆ ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಒಂದು ವರ್ಷಕ್ಕೂ ಹೆಚ್ಚಿನ ಅವಧಿಗೆ ಠೇವಣಿಗಳನ್ನು ಹೂಡಿಕೆ ಮಾಡಿ ವಿಶ್ವವಿದ್ಯಾನಿಲಯಕ್ಕೆ ಆದಾಯ ನಷ್ಟ ಉಂಟುಮಾಡಿರುವುದು.	47
30	22	ವಿಶ್ವವಿದ್ಯಾನಿಲಯವು ವಿವಿಧ ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿ ಹೂಡಿಕೆ ಮಾಡಿದ್ದು, ಬ್ಯಾಂಕ್ ಸಿ.ಎಸ್.ಆರ್ ನಿಧಿಯಿಂದ ವಿಶ್ವವಿದ್ಯಾನಿಲಯವು ಪ್ರಾಯೋಜಕತ್ವ ಪಡೆದಿರುವುದು.	48
		II. ವಹಿವಾಟು ಲೆಕ್ಕ ಪರಿಶೋಧನೆ ಮತ್ತು ಸಂಶೋಧನೆಗಳು	
		ಆಡಿಟ್ ಪ್ರಮಾಣ ಪತ್ರ	
31	23	ವಿಶ್ವವಿದ್ಯಾನಿಲಯದ ವಾರ್ಷಿಕ ವರದಿ ಮತ್ತು ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಡಿಸಲು ಸರ್ಕಾರಕ್ಕೆ ಸಲ್ಲಿಸಿರುವ ವಿವರ.	48
32	24	ಮುಕ್ತ ವಿಶ್ವವಿದ್ಯಾನಿಲಯದ ಸ್ವೀಕೃತಿಗಳು.	49
33	25	ಶೈಕ್ಷಣಿಕ ಸಾಲಿನಲ್ಲಿ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಬೇಡಿಕೆ, ವಸೂಲಾತಿ ಹಾಗೂ ಬಾಕಿ ಶುಲ್ಕಗಳ ವಿವರಗಳು.	49–51
34	26	ಹೆಚ್ಚುವರಿಯಾಗಿ ಪ್ರವೇಶಾತಿ ಶುಲ್ಕವನ್ನು ಸಂಗ್ರಹಿಸಿರುವುದು.	51–52
35	27	2020–21ನೇ ಸಾಲಿನಿಂದ 2024–25ನೇ ಸಾಲಿನವರೆಗೆ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ವಿವರ.	52–53
36	28	ಕೆ.ಎಸ್.ಓ.ಯು ಆನ್‌ಲೈನ್ ಕಾರ್ಯಕ್ರಮಗಳ ಪ್ರವೇಶಾತಿಯಲ್ಲಿ ಕಡಿಮೆ ಶುಲ್ಕ ಪಡೆದಿರುವುದು.	53–55
37	29	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಹೆಚ್ಚುವರಿಯಾಗಿ ಪಾವತಿಸಿರುವುದು ಹಾಗೂ ಬಡ್ಡಿ ಮೊತ್ತವನ್ನು ಸರ್ಕಾರದ ಲೆಕ್ಕಶಿರ್ಷಿಕೆಗೆ ಜಮೆ ಮಾಡದಿರುವುದು.	55–56
38	30	ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಬ್ಯಾಂಕ್ ಕಟ್ಟಡದಿಂದ ಕಡಿಮೆ ಬಾಡಿಗೆಯನ್ನು ವಸೂಲಿಸಿರುವುದು ಹಾಗೂ ಜಿ.ಎಸ್.ಟ ಮೊತ್ತವನ್ನು ಸಂಬಂಧಿಸಿದ ಲೆಕ್ಕತೀರ್ಷಿಕೆಗೆ ಜಮೆ ಮಾಡದಿರುವುದು.	57–59
39	31	**ದಾಸ್ತಾನು ಲೆಕ್ಕಗಳು**	
40	31.1	ರತೀದಿ ಪುಸ್ತಕಗಳ ಭೌತಿಕ ಪರಿಶೀಲನೆ ವಿವರ.	59–60
41	31.2	ರತೀದಿ ಪುಸ್ತಕಗಳಿಂದ ವಿಭಾಗವಾರು ವಸೂಲಿಸಿದ ಮತ್ತು ಇರಸಾಲು ಮಾಡಿದ ವಿವರಗಳು.	61
42	31.3	ಗ್ರಂಥಾಲಯ ಪುಸ್ತಕಗಳ ದಾಸ್ತಾನು ವಿವರ.	61–62

43	31.4	ಅಂಕಪಟ್ಟಿ, ಪದವಿ ಪ್ರಮಾಣ ಪತ್ರಗಳು ಹಾಗೂ ಇತರೆ ಪ್ರಮಾಣ ಪತ್ರಗಳ ವಿತರಣೆ ಹಾಗೂ ದಾಸ್ತಾನು ನಿರ್ವಹಣೆಯಲ್ಲಿನ ನ್ಯೂನತೆಗಳು.	62–63
44	31.5	ಚಿನ್ನದ ಪದಕ ಖರೀದಿ ಮತ್ತು ವಿತರಣೆಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸದಿರುವುದು.	63
45	32	**ಶಾಸನಬದ್ಧ ಅಧಿಕಾರಿ ಮತ್ತು ಬೋಧಕ ವರ್ಗದವರ ವೇತನ ಮತ್ತು ಭತ್ಯೆಗಳು**	
46	32.1	ವೃತ್ತಿ ಪ್ರಗತಿ ಯೋಜನೆಯಡಿ (CAS) ಪದೋನ್ನತಿ ನೀಡಿದ ಬೋಧಕರಿಗೆ ಆರ್ಥಿಕ ಸೌಲಭ್ಯವನ್ನು ವಿಶ್ವವಿದ್ಯಾನಿಲಯದ ಆದೇಶದ ದಿನಾಂಕದಿಂದ ಪಾವತಿಸದೇ, ಅರ್ಹತಾ ದಿನಾಂಕದಿಂದ ಪಾವತಿಸಿರುವುದು.	63–66
47	32.2	ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿ ದಿನಾಂಕ:01.01.2016ರ ನಂತರ ಪಿ.ಹೆಚ್.ಡಿ./ಎಮ್.ಫಿಲ್. ಪದವಿ ಪೂರ್ಣಗೊಸಿರುವ ಬೋಧಕರುಗಳಿಗೆ ಮುಂಗಡ ವೇತನ ಬಡ್ತಿಗಳನ್ನು ನೀಡಿ ಪಾವತಿಸಿರುವುದು.	67–68
48	32.3	ಕರಾಮುವಿಗೆ ನೇಮಕಗೊಳ್ಳುವ ಪೂರ್ವದಲ್ಲಿ ಅನ್ಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಸೇವಾವಧಿಯನ್ನು ಪರಿಗಣಿಸಿ ಸಹಾಯಕ ಪ್ರಾಧ್ಯಾಪಕರುಗಳಿಗೆ ವೇತನ ನಿಗದಿಪಡಿಸಿ ವೇತನ ಪಾವತಿಸಿರುವುದಕ್ಕೆ ಪೂರಕ ದಾಖಲೆಗಳನ್ನು ಹಾಜರುಪಡಿಸದಿರುವುದು.	68–71
49	32.4	ಬೋಧಕ ವರ್ಗದವರ ಸೇವಾವಹಿಯಲ್ಲಿ ಕಂಡುಬಂದ ನ್ಯೂನತೆಗಳು.	72–73
50	32.5	ಅತಿಥಿ ಉಪನ್ಯಾಸಕರು/ಕಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರು ಹಾಗೂ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿರುವ ಸಹಾಯಕ ಪ್ರಾಧ್ಯಾಪಕರನ್ನು ನಿಯಮ ಉಲ್ಲಂಘಿಸಿ ನೇಮಕ ಮಾಡಿ ವೇತನ ಪಾವತಿಸಿರುವುದು.	74–75
51	32.6	ಎಲ್ಲಾ ವಿಭಾಗಗಳಿಂದ ಪಿ.ಹೆಚ್.ಡಿ ಪದವಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಮಾಹಿತಿ.	76
52	33	**ಬೋಧಕೇತರ ವರ್ಗದವರ ವೇತನ ಮತ್ತು ಭತ್ಯೆಗಳು**	
53	33.1	ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ ಛರ್ತಿ ಮಾಡಿದ ಮತ್ತು ಖಾಲಿ ಹುದ್ದೆಗಳ ವಿವರ.	77
54	33.2	ಮಂಜೂರಾದ ಹುದ್ದೆಗಳ ಲಿಕ್ಕಪತ್ರಗಳಲ್ಲಿನ ನ್ಯೂನತೆಗಳು.	78–79
55	33.3	ಪ್ರಾದೇಶಿಕ ನಿರ್ದೇಶಕರು ಮಂಜೂರಾತಿ ಹುದ್ದೆಗಳ ಸಂಖ್ಯೆಯಲ್ಲಿ 11 ಹುದ್ದೆಗಳನ್ನು ಅನಧಿಕೃತವಾಗಿ ಹೆಚ್ಚುವರಿಯಾಗಿ ಪರಿಗಣಿಸಿರುವುದು.	79–80
56	33.4	ಮಂಜೂರಾದ ಬೋಧಕೇತರ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸದಿರುವುದು.	81–82
57	33.5	ಮಂಜೂರಾದ ಹುದ್ದೆಗಳಲ್ಲಿ ಕೆಲವು ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಕೈಗೊಳ್ಳದೇ ಸಂಪೂರ್ಣವಾಗಿ ಖಾಲಿ ಉಳಿದಿರುವುದು.	82
58	33.6	ಕುಲಾಧಿಪತಿಗಳಿಂದ ಪರಿನಿಯಮಕ್ಕೆ ಅನುಮೋದನೆ ಪಡೆಯದೆ ನಿಯಮಬಾಹಿರ ನೇಮಕಾತಿ ಹುದ್ದೆಗಳನ್ನು ಮಂಜೂರಾದ ಹುದ್ದೆಗಳ ಎದುರು ಪರಿಗಣಿಸಿರುವುದು.	83–85
59	33.7	ಬೋಧಕೇತರ ಹುದ್ದೆಗಳಲ್ಲಿ "ಹೈದ್ರಾಬಾದ್–ಕರ್ನಾಟಕ" ಪ್ರದೇಶಕ್ಕೆ ಮೀಸಲಿರಿಸಿರುವ ಹುದ್ದೆಗಳ ವಿವರ.	85–87
60	33.8	ಮಂಜೂರಾಗಿರುವ ಹುದ್ದೆಗಳ ಸಮೂಹವಾರು ವರ್ಗೀಕರಣದಲ್ಲಿನ ವ್ಯತ್ಯಾಸಗಳು.	88
61	33.9	ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆಯದೆ 75 ಕಾಲಿಕ ವೇತನ ಶ್ರೇಣಿ ತಾತ್ಕಾಲಿಕ ನೌಕರರನ್ನು ಖಾಯಂಗೊಳಿಸಿರುವುದು.	89–90
62	33.10	ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆಯದೆ 30 ನೇರ ನೇಮಕಾತಿ ಪ್ರದಸ ಹುದ್ದೆಗಳನ್ನು ಪದೋನ್ನತಿ ನಿಡಿರುವುದು.	90–91
63	33.11	ಏ. ಶ್ರೀನಿವಾಸ, ಡೇಟಾ ಎಂಟ್ರಿ ಆಪರೇಟರ್‌ರವರಿಗೆ ವೃಂದ ಮತ್ತು ನೇಮಕಾತಿ ನಿಯಮ ಉಲ್ಲಂಘಿಸಿ ಶೀಘ್ರಲಿಪಿಗಾರರಾಗಿ ಪದೋನ್ನತಿ ನೀಡಿರುವುದು.	92

64	33.12	ಮುನಿಸ್ವಾಮಿ. ಕಾಲಿಕ ವೇತನ ಶ್ರೇಣಿ ದ್ವೀತೀಯ ದರ್ಜೆ ಗುಮಾಸ್ತರು ಇವರಿಗೆ ಮರು ನಿಯೋಜನೆ (Redeployment) ಮೂಲಕ ಸಹಾಯಕ ನಿರ್ದೇಶಕರು ಗ್ರೂಪ್ ಬಿ ಹುದ್ದೆಗೆ ನಿಯಮ ಬಾಹಿರವಾಗಿ ನೇಮಕಾತಿ ಮಾಡಿರುವುದು.	93–94
65	33.13	ಸುಧೀರ್. ಸಹಾಯಕ ಇಂಜಿನಿಯರ್ ಇವರಿಗೆ ನಿಯಮ ಉಲ್ಲಂಘಿಸಿ ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗೆ ಮುಂಬಡ್ತಿ ನೀಡಿರುವುದು.	94–95
66	33.14	ಉಪಕುಲಸಚಿವರ 10 ಹುದ್ದೆ ಸೃಜನೆಗಾಗಿ ರಚಿಸಲಾದ ಕರಡು ಪರಿನಿಯಮಕ್ಕೆ ಕುಲಾಧಿಪತಿಗಳ ಅನುಮೋದನೆ ಕಾಯ್ದುರಿಸಿ, ನಿಯಮ 32 ರನ್ವಯ ಸ್ವತಂತ್ರ ಪ್ರಭಾರದಲ್ಲಿರಿಸಿರುವುದು.	95–97
67	33.15	ನೇರನೇಮಕಾತಿ ಉಪನಿರ್ದೇಶಕರ ಹುದ್ದೆಗಳಿಗೆ ನಿಯಮ ಉಲ್ಲಂಘಿಸಿ ಸ್ವತಂತ್ರ ಪ್ರಭಾರ ನೀಡಿ ಪ್ರಭಾರ ಭತ್ಯೆ ಮಂಜೂರು ಮಾಡಿರುವುದು.	97–99
68	33.16	ಪ್ರಥಮ ದರ್ಜೆ ಸಹಾಯಕರ ಹುದ್ದೆಯಲ್ಲಿ, ಪ್ರಭಾರದ ಅವಧಿಯನ್ನು ನಿಯಮ ಬಾಹಿರವಾಗಿ ಪರಿಗಣಿಸಿ ಹಿರಿಯ ಸಹಾಯಕರ ಹುದ್ದೆಗೆ ಮುಂಬಡ್ತಿ ನೀಡಿರುವುದು.	100–102
69	33.17	ಕುಲಾಧಿಪತಿಗಳ ಅನುಮೋದನೆ ಪಡೆಯದೆ ವಿವಿಧ ಸ್ವರೂಪದ ತಾತ್ಕಾಲಿಕ ನೌಕರರ ನೇಮಕಾತಿ ಮಾಡಿರುವುದು.	102–109
70	33.18	ಲೋಕೇಶ್.ಜಿ ಎಸ್. ಸಂಯೋಜನಾಧಿಕಾರಿ(ತಾತ್ಕಾಲಿಕ)ರವರಿಗೆ ಮಂಜೂರಾತಿ ಇಲ್ಲದ ಎಸ್ಟೇಟ್ ಆಫೀಸರ್ ಹುದ್ದೆಗೆ ಗ್ರೇಡೆಡ್ ಪೇ ಅಡಿಯಲ್ಲಿ ತಾತ್ಕಾಲಿಕ ನೌಕರರನ್ನಾಗಿ ನೇಮಿಸಿರುವುದು.	109–110
71	33.19	ವಿವಿಧ ಸ್ವರೂಪದ ತಾತ್ಕಾಲಿಕ ನೌಕರರ ಕಾರ್ಯಒತ್ತಡ (Work Load) ಅನ್ವಯ ನೌಕರರ ಸಂಖ್ಯೆಯನ್ನು ನಿರ್ದಿಷ್ಟಪಡಿಸದೆ ಅನಗತ್ಯವಾಗಿ ನೇಮಕಾತಿ ಮಾಡಿಕೊಂಡಿರುವುದು.	110–114
72	33.20	ಬೋಧಕ ಹಾಗೂ ಬೋಧಕೇತರ ನೌಕರರಿಗೆ ನೀಡಲಾದ ವಿವಿಧ ಮುಂಗಡಗಳು ಬಾಕಿ ಇರುವುದು.	115
73	33.21	ಬೋಧಕ ಹಾಗೂ ಬೋಧಕೇತರ ನೌಕರರ ವೇತನದಲ್ಲಿ ಕಟಾಯಿಸಲಾದ ವೃತ್ತಿ ತೆರಿಗೆ, ಆದಾಯ ತೆರಿಗೆ ಮತ್ತು ಸಾಮೂಹಿಕ ಜೀವ ವಿಮೆ ಮೊತ್ತಗಳ ವಿವರಗಳನ್ನು ವೇತನ ಬಟವಾಡೆ ವಹಿಯಲ್ಲಿ ದಾಖಲಿಸದಿರುವುದು.	115
74	33.22	ಸಂಕೀರ್ಣ ಖಾತೆಯ ಲೆಕ್ಕಪತ್ರಗಳ ಬಗ್ಗೆ.	116–117
75	34	**ಪಿಂಚಣಿ ನಿಧಿ**	
76	34.1	ಪಿಂಚಣಿ ನಿಧಿ (Pension Fund) ನಿರ್ವಹಣೆ.	118–119
77	34.2	ಪಿಂಚಣಿ ಮತ್ತು ಕುಟುಂಬ ಪಿಂಚಣಿ ಪ್ರಾಧಿಕರಣದ ಬಗ್ಗೆ.	119–120
78	34.3	ಪಿಂಚಣಿ ಮತ್ತು ಕುಟುಂಬ ಪಿಂಚಣಿ ಪ್ರಾಧಿಕರಣದ ಸಭೆ ನಿರ್ವಹಿಸದಿರುವುದು.	121
79	34.4	ಶ್ರೀ ತಿಮ್ಮೇಗೌಡ. ಪರಿಚಾರಕ. ನಿಯಮ ಬಾಹಿರವಾಗಿ ವಿಲೀನಗೊಂಡ ನೌಕರರಿಗೆ ನಿವೃತ್ತಿ ಸೌಲಭ್ಯವಾಗಿ ಗಳಿಕೆ ರಜೆ ನಗದೀಕರಣ ಸೌಲಭ್ಯ ನೀಡಿರುವುದು.	122–123
80	34.5	ರಾಷ್ಟ್ರೀಯ ಪಿಂಚಣಿ ಯೋಜನೆ (National pention Scheme) ಯ ವಂತಿಕೆ, ಸಂಗ್ರಹಣೆ, ಪಾವತಿ ಮತ್ತು ಬಾಕಿ.	123–125
81	34.6	ರಾಷ್ಟ್ರೀಯ ಪಿಂಚಣಿ ಯೋಜನೆ ನಿಧಿಯಿಂದ ತ್ರೈಮಾಸಿಕ ಅಪ್‌ಲೋಡ್ ವೆಚ್ಚ ಪಾವತಿಸಿರುವುದು.	125–126
82	34.7	ರಿಪೈನ್ಡ್ ಕುಟುಂಬ ಪಿಂಚಣಿ ಪ್ರಾಧೀಕರಿಸಿ ಎನ್‌ಪಿಎಸ್ ಖಾತೆಯಲ್ಲಿ ಉದ್ಯೋಗದಾತರ ವಂತಿಕೆ ಮೊತ್ತವನ್ನು ವಿಶ್ವವಿದ್ಯಾನಿಲಯದ ಖಾತೆಗೆ ಹಿಂಪಡೆಯದಿರುವುದು.	126–128
83	35	**ಪ್ರಯಾಣ ಭತ್ಯೆಗಳು**	
84	35.1	ಪರೀಕ್ಷಾ ಕಾರ್ಯ ಹಾಗೂ ತೃಕ್ಷಣಿಕ ಕಾರ್ಯ ನಿರ್ವಹಿಸಿದ ಬೋಧಕ ವರ್ಗದವರಿಗೆ ನಿಯಮ ಮೀರಿ ಹೆಚ್ಚುವರಿ ಪ್ರಯಾಣ ಭತ್ಯೆ, ದಿನಭತ್ಯೆ, ಸ್ಥಳೀಯ ಭತ್ಯೆ ಹಾಗೂ ಪರೀಕ್ಷಾ ಕಾರ್ಯ ವೆಚ್ಚ ಪಾವತಿಸಿರುವುದು.	128–130

85	35.2	ಸಂಪರ್ಕ ಕಾರ್ಯಕ್ರಮ, ಪಿ.ಹೆಚ್.ಡಿ ಆರ್.ಎ.ಸಿ ಕಾರ್ಯಕ್ರಮ ಹಾಗೂ ಇತರೆ ಶೈಕ್ಷಣಿಕ ಕಾರ್ಯಕ್ರಮ ನಿರ್ವಹಿಸಿರುವುದಕ್ಕೆ ನಿಯಮ ಮೀರಿ ಹೆಚ್ಚುವರಿಯಾಗಿ ಪ್ರಯಾಣ ಭತ್ಯೆ, ದಿನಭತ್ಯೆ ಹಾಗೂ ಸ್ಥಳೀಯ ಭತ್ಯೆ ಪಾವತಿಸಿರುವುದು.	130–1
86	35.3	ಕೆ.ಸಿ.ಎಸ್.ಆರ್. ನಿಯಮ ಉಲ್ಲಂಘಿಸಿ ಪ್ರಯಾಣ ಭತ್ಯೆ, ದಿನಭತ್ಯೆಗಳ ಸಭಾ ಭತ್ಯೆ, ಪಾವತಿಸಿರುವುದು.	132–133
87	35.4	ರಜಾ ಪ್ರವಾಸ ರಿಯಾಯಿತಿ ಸೌಲಭ್ಯಕ್ಕೆ ವಾಸ್ತವಿಕ ವಿಮಾನ ವೆಚ್ಚ ಪಾವತಿಸಿರುವುದು.	133–134
88	36	**ಪರೀಕ್ಷಾ ಕಾರ್ಯಗಳಿಗೆ ಪಾವತಿಗಳು**	
89	36.1	ಪರೀಕ್ಷಾ ನಿಧಿ ಖಾತೆಯಿಂದ ಪರೀಕ್ಷಾ ಕೇಂದ್ರಗಳಿಗೆ ಪಾವತಿಸಲಾಗಿರುವ ಪರೀಕ್ಷಾ ಕೇಂದ್ರದ ಎ.ಸಿ. ಬಿಲ್ಲುಗಳಿಗೆ ಎನ್.ಡಿ.ಸಿ. ವೋಚರ್ ಸಲ್ಲಿಸದಿರುವುದು.	135
90	36.2	ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಲು ಹಾಗೂ ಒಂದು ಪರೀಕ್ಷಾ ಕೇಂದ್ರಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಆಯ್ಕೆ ಮಾನದಂಡಗಳ ಮಾಹಿತಿ ಹಾಗೂ ಸ್ವಂತ ಕಟ್ಟಡ ಇದ್ದರೂ ಖಾಸಗಿ ಕಾಲೇಜುಗಳಿಗೆ ಶುಲ್ಕ ಪಾವತಿಸಿರುವುದು.	135–137
91	36.3	ಪರೀಕ್ಷಾ ಪ್ರಶ್ನೆ ಪತ್ರಿಕೆಗಳ ಮುದ್ರಣ ಕಾರ್ಯ ನಿರ್ವಹಿಸಲು ಹೆಚ್ಚುವರಿಯಾಗಿ ಕರಾರು ಒಪ್ಪಂದ ಮಾಡಿಕೊಂಡು ಹೆಚ್ಚುವರಿ ಪಾವತಿಸಿರುವುದು.	137–138
92	36.4	ಪರೀಕ್ಷಾ ಪ್ರಶ್ನೆ ಪತ್ರಿಕೆಗಳ ಮುದ್ರಣ ಕಾರ್ಯಕ್ಕೆ ಕರಾರು ನವೀಕರಿಸುವಾಗ ಒಪ್ಪಂದದ ಅನುಬಂಧಗಳಲ್ಲಿರುವ ವಿಶೇಷಣಗಳಿಗೆ ಹೆಚ್ಚುವರಿ ದರ ನಿಗದಿಪಡಿಸಿ ಪಾವತಿಸಿರುವುದು.	139–141
93	36.5	ವಿ.ವಿ ಯ ಕಛೇರಿ ಆದೇಶವಿಲ್ಲದೆ ಪಿ.ಹೆಚ್.ಡಿ ಮೌಖಿಕ ಪರೀಕ್ಷೆಯಲ್ಲಿ ಭಾಗವಹಿಸಿದ್ದ ಪ್ರಾಧ್ಯಾಪಕರಿಗೆ ಪಾವತಿಸಿರುವುದು.	141
94	36.6	ಪ್ರಶ್ನೆಪತ್ರಿಕೆ ಮುದ್ರಕರಿಗೆ ಮುದ್ರಣ ವೆಚ್ಚ ಪಾವತಿಯಲ್ಲಿ ಎಂ.ಓ.ಯುನ ಅನುಬಂಧ 2 ರ ಕ್ರ.ಸಂ. 15ನ್ನು ಉಲ್ಲಂಘಿಸಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿರುವುದು.	142
95	37	**ಇಂಜಿನಿಯರಿಂಗ್ ವಿಭಾಗದ ಸ್ವೀಕೃತಿ ಮತ್ತು ವೆಚ್ಚಗಳು**	
96	37.1	ಕೋಲಾರ ಪ್ರಾದೇಶಿಕ ಕೇಂದ್ರದ ಕಟ್ಟಡ ಬಾಡಿಗೆ ಪಾವತಿ ಚಲನ್ ಹಾಜರುಪಡಿಸದಿರುವುದು ಹಾಗೂ ಜಿಎಸ್‌ಟಿ ಸಂಗ್ರಹಿಸದಿರುವುದು.	143–144
97	37.2	ಮಂಡಕಳ್ಳಿ ಗ್ರಾಮದಲ್ಲಿರುವ 10 ಎಕರೆ ಜಾಗ ಹಾಗೂ ಶೈಕ್ಷಣಿಕ ಭವನ ಕಟ್ಟಡಕ್ಕೆ ಬಾಡಿಗೆ ಕಡಿಮೆ ನಿಗದಿಪಡಿಸಿ ನಷ್ಟಪಡಿಸಿರುವುದು ಹಾಗೂ ಒಪ್ಪಂದ ಪತ್ರದಲ್ಲಿನ ನ್ಯೂನತೆಗಳು.	144–146
98	37.3	ವಿಜಯನಗರ ಶೈಕ್ಷಣಿಕ ಭವನ ಬಾಡಿಗೆ ಪಾವತಿಗೆ ಚಲನ್ ಹಾಜರುಪಡಿಸದಿರುವುದು.	146–147
99	37.4	ಕ್ಯಾಂಟೀನ್ ಕಟ್ಟಡ ಬಾಡಿಗೆ ಪಾವತಿಗೆ ಚಲನ್ ಹಾಜರುಪಡಿಸದಿರುವುದು ಹಾಗೂ ಜಿಎಸ್‌ಟಿ ಸಂಗ್ರಹಿಸದಿರುವುದು.	148
100	37.5	ಟೆಂಡರ್ ನಮೂನೆ ಮಾರಾಟದ ಶುಲ್ಕವನ್ನು ವಿಶ್ವವಿದ್ಯಾನಿಲಯದ ಖಾತೆಗೆ ಜಮೆಯಾಗಿರುವ ಚಲನ್ ಹಾಜರುಪಡಿಸದಿರುವುದು.	149
101	37.6	ಇಂಜಿನಿಯರಿಂಗ್ ವಿಭಾಗದಲ್ಲಿನ ವಾಸ್ತವ ವೆಚ್ಚಗಳಿಗೂ ಹಣಕಾಸು ವಿಭಾಗದ ಲೆಕ್ಕಶೀರ್ಷಿಕೆವಾರು ವೆಚ್ಚಗಳಿಗೂ ವ್ಯತ್ಯಾಸಗಳು.	149–151
102	37.7	ಇಂಜಿನಿಯರಿಂಗ ವಿಭಾಗದ ಆಯ-ವ್ಯಯ ಅವೈಜ್ಞಾನಿಕವಾಗಿರುವುದು.	151

103	37.8	ಇಂಜಿನಿಯರಿಂಗ್ ವಿಭಾಗದ ಕಾಮಗಾರಿಗಳ ಸಂಬಂಧ "ಅಧಿಕಾರ ಪ್ರತ್ಯಾಯೋಜನೆ" (Delegation of Power) ಬಗ್ಗೆ.	152–153
104	37.9	ಕಟ್ಟಡ ಸಮಿತಿಗೆ ಪರಿನಿಯಮ ಅನುಮೋದನೆ ಪಡೆಯದಿರುವುದು.	153–154
105	37.10	ಪ್ಯಾಕೇಜ್ ಕಾಮಗಾರಿಗಳಲ್ಲಿ ಹೆಚ್ಚುವರಿ ಟೆಂಡರ್ ಪ್ರೀಮಿಯಂ, ಹೆಚ್ಚುವರಿ ಪರಿಮಾಣ ಮತ್ತು ಇಐಆರ್‌ಎಲ್ ಮೊತ್ತಗಳನ್ನು ಪಾವತಿಸಿರುವುದು ಹಾಗೂ ಇತರೇ ನ್ಯೂನತೆಗಳ ಬಗ್ಗೆ.	154–164
108	**38**	**ಸಾದಿಲ್ವಾರ ವೆಚ್ಚಗಳು**	164
109	38.1	ವಾಹನಗಳಿಗೆ ಹೊಸ ಟೈಯರ್ ಖರೀದಿ ಪೂರ್ವದಲ್ಲಿ ಮತ್ತು ನಂತರದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ದೃಢೀಕರಣ ಪತ್ರ ಪಡೆಯದೆ ವೆಚ್ಚ ಭರಿಸಿರುವುದು.	164–165
110	38.2	ಪ್ರಾದೇಶಿಕ ಕೇಂದ್ರ ಕಟ್ಟಡಗಳಿಗೆ ಪಿ.ಡಬ್ಲ್ಯೂ.ಡಿ ಇಂಜಿನಿಯರ್‌ರವರಿಂದ ಕಟ್ಟಡವನ್ನು ಮೌಲ್ಯಮಾಪನ ಮಾಡಿಸಿ ಬಾಡಿಗೆ ದರ ನಿಗದಿಪಡಿಸದೆ ಬಾಡಿಗೆ ಪಾವತಿಸಿರುವುದು.	165
111	38.3	ಸಿದ್ಧಪಾಠಗಳ ಬರವಣಿಗೆಯ ಡಿಟಿಪಿ ಕಾರ್ಯಕ್ಕಾಗಿ ಪಾವತಿಸಿರುವುದು.	166
112	38.4	ಬಾಹ್ಯ ಪ್ರಾಧ್ಯಾಪಕರುಗಳನ್ನು ಬಳಸಿ ಸಂಪರ್ಕ/ಸಮಾಲೋಚನಾ ಕಾರ್ಯಕ್ರಮಗಳನ್ನು ಆಯೋಜಿಸಿ ಸಂಭಾವನೆ ಪಾವತಿಸಿರುವುದು.	167–168
113	38.5	ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೂಲಕ ಜಾಹೀರಾತು ಪ್ರಕಟಣೆ ಮಾಡದೆ ಖಾಸಗಿ ಸಂಸ್ಥೆಗಳಿಂದ ಪ್ರಕಟಣೆ ಮಾಡಿ ಜಾಹೀರಾತು ವೆಚ್ಚ ಭರಿಸಿರುವುದು.	168–169
114	38.6	ಇಎಸ್‌ಐ ವಂತಿಗೆ ಕಟಾಯಿಸದೇ ಇರುವುದಕ್ಕೆ Proposal Damages ಮೊತ್ತವನ್ನು ಹಾಗೂ ದಂಡ ಮೊತ್ತವನ್ನು ಕಾರ್ಮಿಕರ ರಾಜ್ಯ ವಿಮಾ ನಿಗಮ, ಮೈಸೂರು ಇವರಿಗೆ ಪಾವತಿಸಿರುವುದು.	169–170
115	38.7	ಭದ್ರತಾ ಸೇವೆಯನ್ನು MS KSF-9 Corporate Service Pvt Ltd, Bengaluru ರವರಿಂದ ಪಡೆದು ಭದ್ರತಾ ಸೇವಾ ಶುಲ್ಕ ಪಾವತಿಸಿರುವುದು.	170
116	38.8	ಸ್ವಯಂ ಕಲಿಕಾ ಸಾಮಗ್ರಿಗಳನ್ನು (SLM) ಬಾಹ್ಯ ಬರಹಗಾರರಿಂದ ಹೆಚ್ಚುವರಿಯಾಗಿ ಸಿದ್ಧಪಾಠಗಳನ್ನು ಬರೆಸಿ ಪಾವತಿಸಿರುವುದು.	171
117	38.9	ವಿಶ್ವವಿದ್ಯಾನಿಲಯದಲ್ಲಿ Digital Academic Platform ಸೇವೆ ಪಡೆದು ಸೇವಾ ಶುಲ್ಕ ಪಾವತಿಸಿರುವುದು.	172–174
118	38.10	Studio equipments & Video Conference unit ಗಳನ್ನು ಖರೀದಿ ಮಾಡಿ ವೆಚ್ಚ ಭರಿಸಿರುವುದು.	174–175
119	38.11	ಫೋಟೋ ಕಾಪಿಯರ್ ಯಂತ್ರಗಳಿಗೆ ವಾರ್ಷಿಕ ನಿರ್ವಹಣೆಯ ಸರ್ವೀಸ್ ಕಾರ್ಯ ನಿರ್ವಹಿಸಿರುವುದಕ್ಕೆ ಪಾವತಿ ಮಾಡಿರುವುದು.	175–177
120	38.12	ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಪ್ರವೇಶಾತಿ ಪೂರ್ವ ಸಮಾಲೋಚನೆ ನಡೆಸಿರುವುದಕ್ಕೆ ಪ್ರೋತ್ಸಾಹ ಧನವನ್ನು ಪಾವತಿಸಿರುವುದು.	177–179
121	38.13	ಡಿಜಿಟಲ್ ಮಾರ್ಕೆಟಿಂಗ್ ಸೇವೆಗಳನ್ನು ಪಡೆಯುವ ಸಲುವಾಗಿ ಮೆ. ಎಸ್ ಪಿ ಯು ಸೊಲ್ಯೂಷನ್ಸ್ ಮತ್ತು ಸರ್ವೀಸಸ್, ಬೆಂಗಳೂರುರವರಿಗೆ ಪಾವತಿಸಿರುವುದು.	179–182
122	38.14	Admission to Examination END to END ERP Softwareನ Annual Maintenance, Operational Support and Server Hosting ಕಾರ್ಯವನ್ನು ನಿರ್ವಹಿಸಿರುವುದಕ್ಕೆ ಪಾವತಿಸಿರುವುದು.	182–184

123	38.15	ಅಲ್ಲಮ ಇಕ್ಬಾಲ್ ಮುಕ್ತ ವಿಶ್ವವಿದ್ಯಾನಿಲಯ, ಇಸ್ಲಾಮಬಾದ್, ಪಾಕಿಸ್ತಾನದಲ್ಲಿನ ವಾರ್ಷಿಕ ಸಮ್ಮೇಳನಕ್ಕೆ ನೊಂದಣಿ ಶುಲ್ಕವನ್ನು ಪಾವತಿಸಿರುವುದು.	184–185
124	38.16	ಬಿಡಿ ಬಿಡಿಯಾಗಿ ಪಿಠೋಪಕರಣಗಳನ್ನು ಖರೀದಿಸಿ ವೆಚ್ಚಭರಿಸಿರುವುದು.	185–186
125	38.17	ರಾಮನಗರ ನೂತನ ಪ್ರಾದೇಶಿಕ ಕೇಂದ್ರದಿಂದ ಪೀಠೋಪಕರಣಗಳನ್ನು ಮೈಸೂರಿನ ಕೇಂದ್ರ ಕಛೇರಿಗೆ ಸ್ಥಳಾಂತರಿಸಿರುವ ಸಂಬಂಧ ವೆಚ್ಚಭರಿಸಿರುವುದು.	186–188
126	38.18	ಕರಾರು ಪತ್ರಗಳನ್ನು ಮಾಡಿಕೊಳ್ಳುವಾಗ ಕಡಿಮೆ ಮುದ್ರಾಂಕ ಶುಲ್ಕ(ಸ್ಟಾಂಪ್ ಡ್ಯೂಟಿ)ವನ್ನು ಸಂಗ್ರಹಿಸಿರುವುದು.	188
127	38.19	ಆನ್‌ಲೈನ್ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಲು ಶುಲ್ಕ ಹಂಚಿಕೆ ಮಾದರಿ ವ್ಯವಸ್ಥೆಯಲ್ಲಿ ಹೊರಗುತ್ತಿಗೆ (Outsourcing) ನೀಡಿ ಪಾವತಿಸಿರುವುದು.	188–191
128	38.20	ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿಯಿಂದ ಪರೀಕ್ಷೆಯವರೆಗೆ ತಂತ್ರಾಂಶ ಇದ್ದರೂ ಡಿಜಿಟಲ್ ಶೈಕ್ಷಣಿಕ ಹಾಗೂ ಡಿಜಿಟಲ್ ಮೌಲ್ಯಮಾಪನ ಎಂದು ತಂತ್ರಾಂಶಗಳನ್ನು ಬೇರೆ ಬೇರೆ ಸಂಸ್ಥೆಯವರಿಂದ ಸಿದ್ಧಪಡಿಸಿರುವುದು.	192–193
129	38.21	Alumni Portal ಹಾಗೂ ಪ್ರಸಾರಂಗಕ್ಕೆ ಅವಶ್ಯವಿದ್ದ E-Commerce Portal ವೆಬ್‌ಸೈಟ್‌ಗಳನ್ನು ಕಾರ್ಯಾರಂಭಗೊಳಿಸದೇ ಸಂಸ್ಥೆಗೆ ಪಾವತಿಸಿರುವುದು.	193–195
130	38.22	Data Centre ನ Storage enhance ಮಾಡಲು ಹಾಗೂ Disaster Recovery Centre ಸ್ಥಾಪಿನೆಗಾಗಿ ವೆಚ್ಚಭರಿಸಿರುವುದು.	195–198
131	38.23	ಜಿ.ಆರ್.ಎ ಸಾಮಾನ್ಯ ಖಾತೆಯಿಂದ ಎಸಿ ಬಿಲ್ಲಿನ ಮೂಲಕ ವೆಚ್ಚ ಭರಿಸಲಾದ ಹೊಂದಾಣಿಕೆ ವೋಚರ್‌ಗಳಲ್ಲಿನ ನ್ಯೂನತೆಗಳು.	198–199
		ಭಾಗ–3	
132	39	ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ವರದಿಗಳ ಕಂಡಿಕೆಗಳ ತೀರುವಳಿ ಬಗ್ಗೆ.	200–201
133	40	ಮುಕ್ತ ವಿಶ್ವವಿದ್ಯಾನಿಲಯದ ನ್ಯಾಯಾಲಯ, ಪೋಲೀಸ್ ಠಾಣೆ, ಲೋಕಾಯುಕ್ತ ಹಾಗೂ ಸಿ.ಬಿ.ಐ. ಪ್ರಕರಣಗಳು.	201–204
134	41	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಸ್ತಿಗಳ ವಿವರ	204
135	42	ಲೆಕ್ಕಪರಿಶೋಧನಾ ಶುಲ್ಕ	205
		ಭಾಗ–4	
136	43	ಲೆಕ್ಕ ಪರಿಶೋಧನಾ ಸಂಸ್ಥೆಯ ಕೈಗೊಂಡಿರುವ ಅತ್ಯುತ್ತಮ ಅಭ್ಯಾಸಗಳು ಹಾಗೂ ಸಾಧನೆಗಳು.	205–206
		ಭಾಗ–5	
137	44	**Acknowledgement** ಲೆಕ್ಕಪರಿಶೋಧನಾ ವಿಚಾರಣಾ ಪತ್ರಗಳಿಗೆ ಕೈಗೊಂಡ ಕ್ರಮ	207
138	45	ಲೆಕ್ಕಪರಿಶೋಧನಾ ವಿಚಾರಣಾ ಪತ್ರಗಳಿಗೆ ಕೈಗೊಂಡ ಕ್ರಮ.	208

2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದ ನ್ಯೂನತೆಗಳಲ್ಲಿನ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತದ ವಿವರಗಳು

ಕ್ರ.ಸಂ	ಕಂಡಿಕೆ ಸಂಖ್ಯೆ	ವಿವರ	ಆಕ್ಷೇಪಣೆ ಮೊತ್ತ ರೂ.	ವಸೂಲಾತಿ ಮೊತ್ತ ರೂ.
ಭಾಗ–2				
I ಹಣಕಾಸು ಲೆಕ್ಕ ಪರಿಶೋಧನೆ ಮತ್ತು ಸಂಶೋಧನೆಗಳು				
1	13	ಪಕ್ವವಾಗಿರುವ ಠೇವಣಿಗಳನ್ನು ವಿಳಂಬವಾಗಿ ಮರು ಹೂಡಿಕೆ ಮಾಡಿ ಬಡ್ಡಿ ನಷ್ಟ ಉಂಟಾಗಿರುವುದು. **(ವಿಚಾರಣಾ ಪತ್ರ ಸಂಖ್ಯೆ:142/ದಿ:26.09.2025)**	–	50,79,453
2	14	ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡದೇ ಸಣ್ಣ ಹಣಕಾಸು ಬ್ಯಾಂಕಿನಲ್ಲಿ ಹೂಡಿಕೆ ಮಾಡಿ ಬಡ್ಡಿ ನಷ್ಟ ಉಂಟಾಗಿರುವುದು. **(ವಿಚಾರಣಾ ಪತ್ರ ಸಂಖ್ಯೆ:132/ದಿ:24.09.2025)**	–	41,384
3	15	ವಿಶ್ವವಿದ್ಯಾನಿಲಯದ ಪಾನ್ ಸಂಖ್ಯೆ:AAAGK0051J ಯಲ್ಲಿ ಬಾಹ್ಯ ಸಂಸ್ಥೆಗಳಿಂದ ತೆರಿಗೆ ಸಂಗ್ರಹಿಸಿರುವುದು (TCS). **(ವಿಚಾರಣಾ ಪತ್ರ ಸಂಖ್ಯೆ:152/ದಿ:04.10.2025, & 197/ದಿ:07.11.2025)**	1,34,81,776	–
4	16	ವಿಶ್ವವಿದ್ಯಾನಿಲಯದಲ್ಲಿ ಕುಲಸಚಿವರು (ಪರೀಕ್ಷಾಂಗ) ಇವರು ನಿರ್ವಹಿಸುತ್ತಿರುವ ಉಳಿತಾಯ ಖಾತೆಯ ಪೂರ್ಣ ದಾಖಲಾತಿಗಳನ್ನು ಹಾಜರುಪಡಿಸದಿರುವುದು. **(ವಿಚಾರಣಾ ಪತ್ರ ಸಂಖ್ಯೆ:166/ದಿ:15.10.2025)**	1,48,62,537	–
5	18	ನಿಶ್ಚಿತ ಠೇವಣಿಗಳಲ್ಲಿ ಹಾಗೂ ಇತರೆ ಆದಾಯಗಳಿಗೆ ಕಟ್ಟಾವಣೆಯಾದ ಆದಾಯ ತೆರಿಗೆಯನ್ನು ಹಿಂಭರಿಕೆ ಮಾಡಿಕೊಳ್ಳದಿರುವುದು. **(ವಿಚಾರಣಾ ಪತ್ರ ಸಂಖ್ಯೆ:121/ದಿ:16.09.2025)**	55,19,307	–
6	20	ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಪರೀಕ್ಷಾ ಶುಲ್ಕಕ್ಕೆ ಬ್ಯಾಂಕಿನವರು ವಹಿವಾಟು ಶುಲ್ಕವನ್ನು ವಿಧಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:118/ದಿ:12.09.2025)**	–	28,064
II–ವಹಿವಾಟು ಲೆಕ್ಕ ಪರಿಶೋಧನೆ ಸಂಶೋಧನೆಗಳು				
7	25	ಶೈಕ್ಷಣಿಕ ಸಾಲಿನಲ್ಲಿ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಬೇಡಿಕೆ, ವಸೂಲಾತಿ ಹಾಗೂ ಬಾಕಿ ಶುಲ್ಕಗಳ ವಿವರಗಳು. **(ವಿಚಾರಣಾ ಪತ್ರ ಸಂಖ್ಯೆ:175/ದಿ:28.10.2025)**	–	25,28,683
8	28	ಕೆ.ಎಸ್.ಓ.ಯು ಆನ್‌ಲೈನ್ ಕಾರ್ಯಕ್ರಮಗಳ ಪ್ರವೇಶಾತಿಯಲ್ಲಿ ಕಡಿಮೆ ಶುಲ್ಕ ಪಡೆದಿರುವುದು. **(ವಿಚಾರಣಾ ಪತ್ರ ಸಂಖ್ಯೆ:176/28.10.25)**	–	24,000
9	29	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಹೆಚ್ಚುವರಿಯಾಗಿ ಪಾವತಿಸಿರುವುದು ಹಾಗೂ ಬಡ್ಡಿ ಮೊತ್ತವನ್ನು ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆ ಮಾಡದಿರುವುದು. **(ವಿಚಾರಣಾ ಪತ್ರ ಸಂಖ್ಯೆ:177/ದಿ:28.01.2025)**	14,80,450	71,490

10	30	ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಬ್ಯಾಂಕ್ ಕಟ್ಟಡದಿಂದ ಕಡಿಮೆ ಬಾಡಿಗೆಯನ್ನು ವಸೂಲಿಸಿರುವುದು ಹಾಗೂ ಜಿ.ಎಸ್.ಟ ಮೊತ್ತವನ್ನು ಸಂಬಂಧಿಸಿದ ಲೆಕ್ಕಶೀರ್ಷಿಕೆಗೆ ಜಮೆ ಮಾಡದಿರುವುದು. **(ವಿಚಾರಣಾ ಪತ್ರ ಸಂಖ್ಯೆ:93/ದಿ:16.08.2025&168/ದಿ:23-10-2025)**		7,65,720
11	32.1	ವೃತ್ತಿ ಪ್ರಗತಿ ಯೋಜನೆಯಡಿ (CAS) ಪದೋನ್ನತಿ ನೀಡಿದ ಬೋಧಕರಿಗೆ ಆರ್ಥಿಕ ಸೌಲಭ್ಯವನ್ನು ವಿಶ್ವವಿದ್ಯಾನಿಲಯದ ಆದೇಶದ ದಿನಾಂಕದಿಂದ ಪಾವತಿಸದೇ, ಅರ್ಹತಾ ದಿನಾಂಕದಿಂದ ಪಾವತಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:62/ದಿ:23.07.2025 & 114/ದಿ:08.09.2025)**	-	69,14,834
12	32.2	ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿ ದಿನಾಂಕ:01.01.2016ರ ನಂತರ ಪಿ.ಹೆಚ್.ಡಿ./ಎಮ್.ಫಿಲ್. ಪದವಿ ಪೂರೈಸಿರುವ ಬೋಧಕರುಗಳಿಗೆ ಮುಂಗಡ ವೇತನ ಬಡ್ತಿಗಳನ್ನು ನೀಡಿ ಪಾವತಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:83/ದಿ:14.08.2025 & 134/ದಿ:24.09.2025)**	-	2,85,64,649
13	32.3	ಕರಾಮುಎಗೆ ನೇಮಕಗೊಳ್ಳುವ ಪೂರ್ವದಲ್ಲಿ ಅನ್ಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಸೇವಾವಧಿಯನ್ನು ಪರಿಗಣಿಸಿ ಸಹಾಯಕ ಪ್ರಾಧ್ಯಾಪಕರುಗಳಿಗೆ ವೇತನ ನಿಗಧಿಪಡಿಸಿ ವೇತನ ಪಾವತಿಸಿರುವುದಕ್ಕೆ ಪೂರಕ ದಾಖಲೆಗಳನ್ನು ಹಾಜರುಪಡಿಸದಿರುವುದು. **(ವಿಚಾರಣಾ ಪತ್ರ ಸಂಖ್ಯೆ:145/ದಿ:03.10.2025)**	72,509	-
14	32.5	ಅತಿಥಿ ಉಪನ್ಯಾಸಕರು/ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರು ಹಾಗೂ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿರುವ ಸಹಾಯಕ ಪ್ರಾಧ್ಯಾಪಕರನ್ನು ನಿಯಮ ಉಲ್ಲಂಘಿಸಿ ನೇಮಕ ಮಾಡಿ ವೇತನ ಪಾವತಿಸಿರುವುದು. **(ವಿಚಾರಣಾ ಪತ್ರದ ಸಂಖ್ಯೆ112/28.08.2025)**	4,04,30,821	-
15	33.9	ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆಯದೆ 75 ಕಾಲಿಕ ವೇತನ ಶ್ರೇಣಿ ತಾತ್ಕಾಲಿಕ ನೌಕರರನ್ನು ಖಾಯಂಗೊಳಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:55 /ದಿ:17-07-2025)**	4,76,33,593	-
16	33.10	ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆಯದೆ 30 ನೇರನೇಮಕಾತಿ ಪ್ರದಸ ಹುದ್ದೆಗಳನ್ನು ಪದೊನ್ನತಿ ನಿಡಿರುವುದು. **(ವಿಚಾರಣಾ ಪತ್ರ ಸಂಖ್ಯೆ:25/ದಿ:03-07-2025)**	-	2,21,45,121
17	33.12	ಮುನಿಸ್ವಾಮಿ, ಕಾಲಿಕ ವೇತನ ಶ್ರೇಣಿ ದ್ವೀತೀಯ ದರ್ಜೆ ಗುಮಾಸ್ತರು ಇವರಿಗೆ ಮರು ನಿಯೋಜನೆ(Redeployment) ಮೂಲಕ ಸಹಾಯಕ ನಿರ್ದೇಶಕರು ಗ್ರೂಪ್ ಬಿ ಹುದ್ದೆಗೆ ನಿಯಮ ಬಾಹಿರವಾಗಿ ನೇಮಕಾತಿ ಮಾಡಿರುವುದು. **(ವಿಚಾರಣಾ ಪತ್ರ ಸಂಖ್ಯೆ:33/ದಿ:09-07-2025)**	-	10,71,763

18	33.13	ಸುಧೀರ್, ಸಹಾಯಕ ಇಂಜಿನಿಯರ್ ಇವರಿಗೆ ನಿಯಮ ಉಲ್ಲಂಘಿಸಿ ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗೆ ಮುಂಬಡ್ತಿ ನೀಡಿರುವುದು. **(ವಿಚಾರಣಾ ಪತ್ರ ಸಂಖ್ಯೆ:35/ದಿ:05-07-2025)**	–	13,11,165
19	33.16	ಪ್ರಥಮ ದರ್ಜೆ ಸಹಾಯಕರ ಹುದ್ದೆಯಲ್ಲಿ, ಪ್ರಭಾರದ ಅವಧಿಯನ್ನು ನಿಯಮ ಬಾಹಿರವಾಗಿ ಪರಿಗಣಿಸಿ ಹಿರಿಯ ಸಹಾಯಕರ ಹುದ್ದೆಗೆ ಮುಂಬಡ್ತಿ ನೀಡಿರುವುದು. **(ವಿಚಾರಣಾ ಪತ್ರ ಸಂಖ್ಯೆ:205/ದಿ:06-12-2025)**	96,69,335	–
20	33.17	ಕುಲಾಧಿಪತಿಗಳ ಅನುಮೋದನೆ ಪಡೆಯದೆ ವಿವಿಧ ಸ್ವರೂಪದ ತಾತ್ಕಾಲಿಕ ನೌಕರರ ನೇಮಕಾತಿ ಮಾಡಿರುವುದು. **(ವಿಚಾರಣಾ ಪತ್ರ ಸಂಖ್ಯೆ:8/ದಿ:25-06-2025 & 105/ದಿ:19-08-2025)**	25,72,89,950	–
21	33.22	ಸಂಕೀರ್ಣ ಖಾತೆಯ ಲೆಕ್ಕಪತ್ರಗಳ ಬಗ್ಗೆ. **(ವಿಚಾರಣಾ ಪತ್ರ ಸಂಖ್ಯೆ:098/ದಿ:18-08-2025)**	1,17,51,464	–
22	34.1	ಪಿಂಚಣಿ ನಿಧಿ (Pension Fund) ನಿರ್ವಹಣೆ. **(ವಿಚಾರಣಾ ಪತ್ರ ಸಂಖ್ಯೆ:**137/ದಿ:25-09-2025)	2,07,06,470	–
23	34.4	ಶ್ರೀ ತಿಮ್ಮೇಗೌಡ, ಪರಿಚಾರಕ, ನಿಯಮ ಬಾಹಿರವಾಗಿ ವಿಲೀನಗೊಂಡ ನೌಕರರಿಗೆ ನಿವೃತ್ತಿ ಸೌಲಭ್ಯವಾಗಿ ಗಳಿಕೆ ರಜೆ ನಗದೀಕರಣ ಸೌಲಭ್ಯ ನೀಡಿರುವುದು. **(ವಿಚಾರಣಾ ಪತ್ರ ಸಂಖ್ಯೆ:207/ದಿ:06-12-2025)**	–	2,31,900
24	34.5	ರಾಷ್ಟ್ರೀಯ ಪಿಂಚಣಿ ಯೋಜನೆ (National pention Scheme) ಯ ವಂತಿಕೆ, ಸಂಗ್ರಹಣೆ, ಪಾವತಿ ಮತ್ತು ಬಾಕಿ. **(ವಿಚಾರಣಾ ಪತ್ರ ಸಂಖ್ಯೆ:95/ದಿ:18-08-2025)**	48,80,969	–
25	34.6	ರಾಷ್ಟ್ರೀಯ ಪಿಂಚಣಿ ಯೋಜನೆ ನಿಧಿಯಿಂದ ತ್ರೈಮಾಸಿಕ ಅಪ್‌ಲೋಡ್ ವೆಚ್ಚ ಪಾವತಿಸಿರುವುದು.	44,277	–
26	34.7	ಡಿಪ್ಯೆನ್ಡ್ ಕುಟುಂಬ ಪಿಂಚಣಿ ಪ್ರಾಧಿಕಾರಿಸಿ ಎನ್‌ಪಿಎಸ್ ಖಾತೆಯಲ್ಲಿ ಉದ್ಯೋಗದಾತರ ವಂತಿಕೆ ಮೊತ್ತವನ್ನು ವಿಶ್ವವಿದ್ಯಾನಿಲಯದ ಖಾತೆಗೆ ಹಿಂಪಡೆಯದಿರುವುದು. (ವಿಚಾರಣಾ ಪತ್ರ ಸಂಖ್ಯೆ:127/:19-09-2025)	47,86,532	68,63,596
27	35.1	ಪರೀಕ್ಷಾ ಕಾರ್ಯ ಹಾಗೂ ಶೈಕ್ಷಣಿಕ ಕಾರ್ಯ ನಿರ್ವಹಿಸಿದ ಬೋಧಕ ವರ್ಗದವರಿಗೆ ನಿಯಮ ಮೀರಿ ಹೆಚ್ಚುವರಿ ಪ್ರಯಾಣ ಭತ್ಯೆ, ದಿನಭತ್ಯೆ, ಸ್ಥಳೀಯ ಭತ್ಯೆ ಹಾಗೂ ಪರೀಕ್ಷಾ ಕಾರ್ಯ ವೆಚ್ಚ ಪಾವತಿಸಿರುವುದು. **(ವಿಚಾರಣಾ ಪತ್ರ ಸಂ:92/16.08.2025 108/20.08.2025, 192/07.11.2025)**	–	1,25,33,989

28	35.2	ಸಂಪರ್ಕ ಕಾರ್ಯಕ್ರಮ, ಪಿ.ಹೆಚ್.ಡಿ ಆರ್.ಎ.ಸಿ ಕಾರ್ಯಕ್ರಮ ಹಾಗೂ ಇತರೆ ಶೈಕ್ಷಣಿಕ ಕಾರ್ಯಕ್ರಮ ನಿರ್ವಹಿಸಿರುವುದಕ್ಕೆ ನಿಯಮ ಮೀರಿ ಹೆಚ್ಚುವರಿಯಾಗಿ ಪ್ರಯಾಣ ಭತ್ಯೆ, ದಿನಭತ್ಯೆ ಹಾಗೂ ಸ್ಥಳೀಯ ಭತ್ಯೆ ಪಾವತಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:195/ದಿ:07.11.2025)**	–	26,51,276
29	35.3	ಕೆ.ಸಿ.ಎಸ್.ಆರ್. ನಿಯಮ ಉಲ್ಲಂಘಿಸಿ ಪ್ರಯಾಣ ಭತ್ಯೆ, ದಿನಭತ್ಯೆಗಳ ಸಭಾ ಭತ್ಯೆ ಪಾವತಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ: 147/ದಿ:03-10-2025)**	–	1,30,458
30	35.4	ರಜಾ ಪ್ರವಾಸ ರಿಯಾಯಿತಿ ಸೌಲಭ್ಯಕ್ಕೆ ವಾಸ್ತವಿಕ ವಿಮಾನ ವೆಚ್ಚ ಪಾವತಿಸಿರುವುದು. (ವಿಚಾರಣಾ ಪತ್ರ ಸಂಖ್ಯೆ:79/06.08.2025 ಹಾಗೂ 100/18.08.2025)	–	30,983
31	36.1	ಪರೀಕ್ಷಾ ನಿಧಿ ಖಾತೆಯಿಂದ ಪರೀಕ್ಷಾ ಕೇಂದ್ರಗಳಿಗೆ ಪಾವತಿಸಲಾಗಿರುವ ಪರೀಕ್ಷಾ ಕೇಂದ್ರ ವಿ.ಸಿ. ಬಿಲ್ಲುಗಳಿಗೆ ಎನ್.ಡಿ.ಸಿ. ವೋಚರ್ ಸಲ್ಲಿಸದಿರುವುದು. **(ವಿಚಾರಣಾ ಪತ್ರ ಸಂಖ್ಯೆ:124/ದಿ:18.9.2025)**	5,90,000	–
32	36.2	ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಲು ಹಾಗೂ ಒಂದು ಪರೀಕ್ಷಾ ಕೇಂದ್ರಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಆಯ್ಕೆ ಮಾನದಂಡಗಳ ಮಾಹಿತಿ ಹಾಗೂ ಸ್ವಂತ ಕಟ್ಟಡ ಇದ್ದರೂ ಖಾಸಗಿ ಕಾಲೇಜುಗಳಿಗೆ ಶುಲ್ಕ ಪಾವತಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:70/ದಿ:29.07.2025, 138/ದಿ:25.09.2025 ಹಾಗೂ 179/ದಿ:25-09-2025)**	–	22,30,880
33	36.3	ಪರೀಕ್ಷಾ ಪ್ರಶ್ನೆ ಪತ್ರಿಕೆಗಳ ಮುದ್ರಣ ಕಾರ್ಯ ನಿರ್ವಹಿಸಲು ಹೆಚ್ಚುವರಿಯಾಗಿ ಕರಾರು ಒಪ್ಪಂದ ಮಾಡಿಕೊಂಡು ಹೆಚ್ಚುವರಿ ಪಾವತಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:73/ದಿ:04.08.2025)**	1,23,85,674	–
34	36.4	ಪರೀಕ್ಷಾ ಪ್ರಶ್ನೆ ಪತ್ರಿಕೆಗಳ ಮುದ್ರಣ ಕಾರ್ಯಕ್ಕೆ ಕರಾರು ನವೀಕರಿಸುವಾಗ ಒಪ್ಪಂದದ ಅನುಬಂಧಗಳಲ್ಲಿರುವ ವಿಶೇಷಣಗಳಿಗೆ ಹೆಚ್ಚುವರಿ ದರ ನಿಗದಿಪಡಿಸಿ ಪಾವತಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:107/ದಿ:19.8.2025)**	–	99,66,094
35	36.5	ವಿ.ವಿ ಯ ಕಛೇರಿ ಆದೇಶವಿಲ್ಲದೆ ಪಿ.ಹೆಚ್.ಡಿ ಮೌಖಿಕ ಪರೀಕ್ಷೆಯಲ್ಲಿ ಭಾಗವಹಿಸಿದ್ದ ಪ್ರಾಧ್ಯಾಪಕರಿಗೆ ಪಾವತಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:186/ ದಿ:29.10.2025)**	–	3,000
36	36.6	ಪ್ರಶ್ನೆಪತ್ರಿಕೆ ಮುದ್ರಕರಿಗೆ ಮುದ್ರಣ ವೆಚ್ಚ ಪಾವತಿಯಲ್ಲಿ ಎಂ.ಓ.ಯುನ ಅನುಬಂಧ 2 ರ ಕ್ರ.ಸಂ. 15ನ್ನು ಉಲ್ಲಂಘಿಸಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿರುವುದು. **(ವಿಚಾರಣಾ ಪತ್ರ ಸಂಖ್ಯೆ:167/ದಿ:16.10.2025)**	–	56,36,769
37	37.1	ಕೋಲಾರ ಪ್ರಾದೇಶಿಕ ಕೇಂದ್ರದ ಕಟ್ಟಡ ಬಾಡಿಗೆ ಪಾವತಿ ಚಲನ್ ಹಾಜರುಪಡಿಸದಿರುವುದು ಹಾಗೂ ಜಿಎಸ್‌ಟಿ ಸಂಗ್ರಹಿಸದಿರುವುದು. **(ವಿಚಾರಣಾ ಪತ್ರ ಸಂಖ್ಯೆ:**171/ದಿ:27-10-2025)	1,10,000	1,65,600

38	37.2	ಮಂಡಕಳ್ಳಿ ಗ್ರಾಮದಲ್ಲಿರುವ 10 ಎಕರೆ ಜಾಗ ಹಾಗೂ ಶೈಕ್ಷಣಿಕ ಭವನ ಕಟ್ಟಡಕ್ಕೆ ಬಾಡಿಗೆ ಕಡಿಮೆ ನಿಗದಿಪಡಿಸಿ ನಷ್ಟಪಡಿಸಿರುವುದು ಹಾಗೂ ಒಪ್ಪಂದ ಪತ್ರದಲ್ಲಿನ ನ್ಯೂನತೆಗಳು. **(ವಿಚಾರಣಾ ಪತ್ರ ಸಂಖ್ಯೆ:168/ದಿ:23-10-2025)**	–	4,03,38,095
39	37.3	ವಿಜಯನಗರ ಶೈಕ್ಷಣಿಕ ಭವನ ಬಾಡಿಗೆ ಚಲನ್ ಹಾಜರುಪಡಿಸದಿರುವುದು. **(ವಿಚಾರಣಾ ಪತ್ರ ಸಂಖ್ಯೆ:163/ದಿ:23-10-2025)**	3,34,955	–
40	37.4	ಕ್ಯಾಂಟೀನ್ ಕಟ್ಟಡ ಬಾಡಿಗೆ ಚಲನ್ ಹಾಜರುಪಡಿಸದಿರುವುದು ಹಾಗೂ ಜಿಎಸ್‌ಟಿ ಸಂಗ್ರಹಿಸದಿರುವುದು. **(ವಿಚಾರಣಾ ಪತ್ರ ಸಂಖ್ಯೆ:168A/ದಿ:24-10-2025)**	21,600	7,200
41	37.5	ಟೆಂಡರ್ ನಮೂನೆ ಮಾರಾಟದ ಶುಲ್ಕವನ್ನು ಪೆತ್ತಪಿದ್ಯಾನಿಲಯದ ಖಾತೆಗೆ ಜಮೆಯಾಗಿರುವ ಚಲನ್ ಹಾಜರುಪಡಿಸದಿರುವುದು. **(ವಿಚಾರಣಾ ಪತ್ರ ಸಂಖ್ಯೆ:193/ದಿ:07-11-2025)**	18,880	–
42	37.10	ಪ್ಯಾಕೇಜ್ ಕಾಮಗಾರಿಗಳಲ್ಲಿ ಹೆಚ್ಚುವರಿ ಟೆಂಡರ್ ಪ್ರೀಮಿಯಂ, ಹೆಚ್ಚುವರಿ ಪರಿಮಾಣ ಮತ್ತು ಇಪಿಆರ್‌ಎಸ್ ಮೊತ್ತಗಳನ್ನು ಪಾವತಿಸಿರುವುದು ಹಾಗೂ ಇತರೇ ನ್ಯೂನತೆಗಳ ಬಗ್ಗೆ. **(ವಿಚಾರಣಾ ಪತ್ರ ಸಂಖ್ಯೆ:189/ದಿ:30-10-2025)**	40,47,84,462	–
43	38.1	ವಾಹನಗಳಿಗೆ ಹೊಸ ಟೈಯರ್ ಖರೀದಿ ಪೂರ್ವದಲ್ಲಿ ಮತ್ತು ನಂತರದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ದೃಢೀಕರಣ ಪತ್ರ ಪಡೆಯದೆ ವೆಚ್ಚ ಭರಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:174/ದಿ:28.10.202)**	3,77,362	–
44	38.2	ಪ್ರಾದೇಶಿಕ ಕೇಂದ್ರ ಕಟ್ಟಡಗಳಿಗೆ ಪಿ.ಡಬ್ಲ್ಯೂ.ಡಿ ಇಂಜಿನಿಯರ್‌ರವರಿಂದ ಕಟ್ಟಡವನ್ನು ಮೌಲ್ಯಮಾಪನ ಮಾಡಿಸಿ ಬಾಡಿಗೆ ದರ ನಿಗದಿಪಡಿಸದೆ ಬಾಡಿಗೆ ಪಾವತಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:160/ದಿ:13.10.2025)**	28,10,786	–
45	38.3	ಸಿದ್ಧಪಾಠಗಳ ಬರವಣಿಗೆಯ ಡಿಟಿಪಿ ಕಾರ್ಯಕ್ಕಾಗಿ ಪಾವತಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:74/05.08.2025, 101/18.08.2025 ಹಾಗೂ 119/ದಿ:16.09.2025)**	–	1,86,525
46	38.4	ಬಾಹ್ಯ ಪ್ರಾಧ್ಯಾಪಕರುಗಳನ್ನು ಬಳಸಿ ಸಂಪರ್ಕ/ಸಮಾಲೋಚನಾ ಕಾರ್ಯಕ್ರಮಗಳನ್ನು ಆಯೋಜಿಸಿ ಸಂಭಾವನೆ ಪಾವತಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:113/ದಿ:03.09.2025)**	1,05,99,102	–
47	38.5	ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೂಲಕ ಜಾಹೀರಾತು ಪ್ರಕಟಣೆ ಮಾಡದೆ ಖಾಸಗಿ ಸಂಸ್ಥೆಗಳಿಂದ ಪ್ರಕಟಣೆ ಮಾಡಿ ಜಾಹೀರಾತು ವೆಚ್ಚ ಭರಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:106/ದಿ:19.08.2025)**	64,29,810	–

48	38.6	ಇಎಸ್‌ಐ ವಂತಿಗೆ ಕಟಾಯಿಸದೇ ಇರುವುದಕ್ಕೆ Propasal Damages ಹಾಗೂ ದಂಡ ಮೊತ್ತವನ್ನು ಕಾರ್ಮಿಕರ ರಾಜ್ಯ ವಿಮಾ ನಿಗಮ, ಮೈಸೂರು ಇವರಿಗೆ ಪಾವತಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:16/ದಿ:27.06.2025 & 77/ದಿ:05.08.2025)**	–	9,75,209
49	38.7	ಭದ್ರತಾ ಸೇವೆಯನ್ನು MS KSF–9 Corporate Service Pvt Ltd, Bengaluru ರವರಿಂದ ಪಡೆದು ಭದ್ರತಾ ಸೇವಾ ಶುಲ್ಕ ಪಾವತಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:196/ದಿ:7.11.2025)**	3,35,14,370	–
50	38.8	ಸ್ವಯಂ ಕಲಿಕಾ ಸಾಮಗ್ರಿಗಳನ್ನು (SLM) ಬಾಹ್ಯ ಬರಹಗಾರರಿಂದ ಹೆಚ್ಚುವರಿಯಾಗಿ ಸಿದ್ಧಪಾಠಗಳನ್ನು ಬರೆಸಿ ಪಾವತಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ120/ದಿ:16.09.2025)**	–	1,47,15,000
51	38.9	ವಿಶ್ವವಿದ್ಯಾನಿಲಯದಲ್ಲಿ Digital Academic Platform ಸೇವೆ ಪಡೆದು ಸೇವಾ ಶುಲ್ಕ ಪಾವತಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:71/ದಿ:29.07.2025 & 139/ದಿ:25.09.2025)**	2,19,35,954	–
52	38.10	Studio equipments & Video Conference unit ಗಳನ್ನು ಖರೀದಿ ಮಾಡಿ ವೆಚ್ಚ ಭರಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:146/ದಿ:03.10.2025&165/ದಿ:15.10.2025)**	98,80,000	25,000
53	38.11	ಫೋಟೋ ಕಾಪಿಯರ್ ಯಂತ್ರಗಳಿಗೆ ವಾರ್ಷಿಕ ನಿರ್ವಹಣೆಯ ಸರ್ವೀಸ್ ಕಾರ್ಯ ನಿರ್ವಹಿಸಿರುವುದಕ್ಕೆ ಪಾವತಿ ಮಾಡಿರುವುದು. **(ವಿಚಾರಣಾ ಪತ್ರ ಸಂಖ್ಯೆ:129/ದಿ:22.09.2025)**	–	18,53,967
54	38.13	ಡಿಜಿಟಲ್ ಮಾರ್ಕೆಟಿಂಗ್ ಸೇವೆಗಳನ್ನು ಪಡೆಯುವ ಸಲುವಾಗಿ ಮೆ. ಎನ್.ಪಿ.ಯು ಸೊಲ್ಯೂಷನ್ಸ್ ಮತ್ತು ಸರ್ವೀಸಸ್, ಬೆಂಗಳೂರುರವರಿಗೆ ಪಾವತಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ: 102/ದಿ:18.08.2025)**	45,70,000	–
55	38.14	Admission to Examination END to END ERP Softwareನ Annual Maintenance, Operational Support and Server Hosting ಕಾರ್ಯವನ್ನು ನಿರ್ವಹಿಸಿರುವುದಕ್ಕೆ ಪಾವತಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:126/ದಿ:19.09.2025)**	–	48,28,000
56	38.15	ಅಲ್ಲಮ ಇಕ್ಬಾಲ್ ಮುಕ್ತ ವಿಶ್ವವಿದ್ಯಾನಿಲಯ, ಇಸ್ಲಾಮಾಬಾದ್, ಪಾಕಿಸ್ತಾನದಲ್ಲಿನ ವಾರ್ಷಿಕ ಸಮ್ಮೇಳನಕ್ಕೆ ನೊಂದಣಿ ಶುಲ್ಕವನ್ನು ಪಾವತಿಸಿರುವುದು. **(ವಿಚಾರಣಾ ಪತ್ರಸಂಖ್ಯೆ:76/ದಿ:05.08.2025)**	–	97,223
57	38.16	ಬಿಡಿ ಬಿಡಿಯಾಗಿ ಪಿಠೋಪಕರಣಗಳನ್ನು ಖರೀದಿಸಿ ವೆಚ್ಚಭರಿಸಿರುವುದು. **(ವಿಚಾರಣಾ ಪತ್ರಸಂಖ್ಯೆ: 187/ದಿ:30.10.2025)**	24,96,677	–
58	38.18	ಕರಾರು ಪತ್ರಗಳನ್ನು ಮಾಡಿಕೊಳ್ಳುವಾಗ ಕಡಿಮೆ ಮುದ್ರಾಂಕ ಶುಲ್ಕ(ಸ್ಟಾಂಪ್ ಡ್ಯೂಟಿ)ವನ್ನು ಸಂಗ್ರಹಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:200/ದಿ:07.11.2025)**	–	75,500

59	3p8.19	ಆನ್‌ಲೈನ್ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಲು ಶುಲ್ಕ ಹಂಚಿಕೆ ಮಾದರಿ ವ್ಯವಸ್ಥೆಯಲ್ಲಿ ಹೊರಗುತ್ತಿಗೆ (Outsourcing) ನೀಡಿ ಪಾವತಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:180/ದಿ:18.10.202)**	18,08,300	-
60	38.21	Alumni Portal ಹಾಗೂ ಪ್ರಸಾರಂಗಕ್ಕೆ ಅವಶ್ಯವಿದ್ದ E-Commerce Portal ವೆಬ್‌ಸೈಟ್‌ಗಳನ್ನು ಕಾರ್ಯಾರಂಭಗೊಳಿಸದೇ ಸಂಸ್ಥೆಗೆ ಪಾವತಿಸಿರುವುದು. **(ವಿಚಾರಣಾ ಪತ್ರ ಸಂಖ್ಯೆ:156/ದಿ:08.10.2025)**	-	84,35,355
61	38.22	Data Centre ನ Storage enhance ಮಾಡಲು ಹಾಗೂ Disaster Recovery Centre ಸ್ಥಾಪನೆಗಾಗಿ ವೆಚ್ಚಭರಿಸಿರುವುದು. **(ವಿಚಾರಣಾ ಪತ್ರಸಂಖ್ಯೆ:158/ದಿ:10.10.2025)**	6,99,59,436	-
		ಒಟ್ಟು	**101,52,37,358**	**18,05,27,945**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

ಭಾಗ – 1

1. ಪೀಠಿಕೆ:

1.1 ಸಂಸ್ಥೆಯ ವಿವರ:

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಾಯ್ದೆ-1992ರ ಅನ್ವಯ ಕರ್ನಾಟಕ ರಾಜ್ಯ ಸರ್ಕಾರದಿಂದ 12ನೇ ಫೆಬ್ರವರಿ 1996 ರಂದು ಅಂಗೀಕಾರ ಪಡೆದು, 1ನೇ ಜೂನ್ 1996 ರಿಂದ ಅಸ್ತಿತ್ವಕ್ಕೆ ಬಂದಿರುತ್ತದೆ. ಕರ್ನಾಟಕ ರಾಜ್ಯದ ವಿಶೇಷ ದೂರ ಶಿಕ್ಷಣ ಒದಗಿಸುವ ಸಂಸ್ಥೆಯಾಗಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ''ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲಿಡೆ'' ಎಂಬ ಧ್ಯೇಯೋಕ್ತಿಯಿಂದ ಮುಕ್ತ ಕಲಿಕೆ ವ್ಯವಸ್ಥೆಯನ್ನು ದೂರ ಶಿಕ್ಷಣ ವಿಧಾನದಲ್ಲಿ ಒದಗಿಸುತ್ತಿದ್ದು, ಯುಜಿಸಿ–ಡಿಇಬಿ ಮಾರ್ಗಸೂಚಿಗಳ ಪ್ರಕಾರ ವರ್ಷಕ್ಕೆ ಜನವರಿ ಮತ್ತು ಜೂನ್‌ನಲ್ಲಿ ಎರಡು ಆವೃತ್ತಿಗಳಲ್ಲಿ ಕೋರ್ಸ್‌ಗಳಿಗೆ ಪ್ರವೇಶಾತಿಯನ್ನು ಆನ್‌ಲೈನ್ ನೋಂದಣಿಯ ಮೂಲಕ ಒದಗಿಸಲಾಗುತ್ತಿದೆ.

ಮುಕ್ತ ವಿಶ್ವವಿದ್ಯಾನಿಲಯವು 49 ಪ್ರಮುಖ ವಿಭಾಗಗಳನ್ನು ಹೊಂದಿದ್ದು, ಸಂಶೋಧನಾ ಚಟುವಟಿಕೆಗಳ ಜೊತೆಗೆ ಒಟ್ಟು 84 ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಮತ್ತು ಡಿಪ್ಲೊಮಾ ಪ್ರಮಾಣ ಪತ್ರ ಕೋರ್ಸಗಳನ್ನು ಹಾಗೂ 10 ವಿಷಯಗಳಲ್ಲಿ ಆನ್‌ಲೈನ್ ಪ್ರೋಗ್ರಾಮ್ ನಡೆಸುತ್ತಿದೆ. ಅಲ್ಲದೆ, 09 ಸಂಶೋಧನಾ ಮತ್ತು ಅಧ್ಯಯನ ಪೀಠಗಳನ್ನು ಸ್ಥಾಪಿಸಲಾಗಿದೆ. ರಾಜ್ಯದಲ್ಲಿ ಸಾಂಪ್ರದಾಯಿಕ ಶಿಕ್ಷಣ ಪಡೆಯಲು ಸಾಧ್ಯವಾಗದಿರುವವರಿಗೆ ಮುಕ್ತ ವಿಶ್ವವಿದ್ಯಾನಿಲಯ ಮತ್ತು ದೂರ ಸಂಪರ್ಕ ಶಿಕ್ಷಣದ ಮೂಲಕ ಪರ್ಯಾಯ ವಿಧಾನಗಳಲ್ಲಿ ಶಿಕ್ಷಣ ಪಡೆಯಲು ಉತ್ತೇಜಿಸಲು ಮತ್ತು ಅಂತಹ ಪದ್ಧತಿಗಳ ಗುಣಮಟ್ಟದ ಸಮನ್ವಯ ಮತ್ತು ನಿರ್ವಹಣೆಯ ದೃಷ್ಟಿಯಿಂದ ರಾಜ್ಯ ಮಟ್ಟದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಲಾಗಿರುತ್ತದೆ.

1.2. ವಿಶ್ವವಿದ್ಯಾನಿಲಯದ ಸಿಬ್ಬಂದಿ ವಿವರ :

ಮುಕ್ತ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಹೆಸರು ಮತ್ತು ಪದನಾಮ

2024–25ನೇ ಸಾಲಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವಿಶ್ವವಿದ್ಯಾನಿಲಯದ ಅಧಿಕಾರಿಗಳ ವಿವರಗಳು ಈ ಕೆಳಕಂಡಂತಿವೆ.

ಕ್ರ ಸಂ.	ಪದನಾಮ	ಹೆಸರು	ಅವಧಿ
1	ಉಪಕುಲಪತಿಗಳು	ಪ್ರೊ ಶರಣಪ್ಪ ಎ ಹಲಸೆ	ದಿನಾಂಕ:11.11.2022 ರಿಂದ ಪ್ರಸ್ತುತದವರೆಗೆ
2	ಕುಲಸಚಿವರು	ಪ್ರೊ.ಕೆ.ಬಿ. ಪ್ರವೀಣ	ದಿನಾಂಕ:01.04.2024ರಿಂದ 31.03.2025
3	ಕುಲಸಚಿವರು (ಪರೀಕ್ಷಾಂಗ)	ಡಾ. ಹೆಚ್.ವಿಶ್ವನಾಥ್	ದಿನಾಂಕ:01.04.2024ರಿಂದ 31.03.2025

4	ಹಣಕಾಸು ಅಧಿಕಾರಿಗಳು	ಡಾ.ವಿ.ಎಂ. ರಮೇಶ್(ಪ್ರ)	ದಿನಾಂಕ:01.04.2024ರಿಂದ 03.04.2024
		ಪ್ರೊ. ರಾಮನಾಥಂ ನಾಯ್ಕು (ಪ್ರ) ಪ್ರೊ. ಕೆ.ಬಿ. ಪ್ರವೀಣ (ಪ್ರ) ಶ್ರೀಮತಿ ಶ್ವೇತ ಹೆಚ್.ಎ. ಡಾ.ನಿರಂಜನ್ ರಾಜ್ ಎಸ್ (ಪ್ರ)	ದಿನಾಂಕ:03.04.2024ರಿಂದ17.05.2024 ದಿನಾಂಕ:17.05.2024ರಿಂದ08.07.2024 ದಿನಾಂಕ:08.07.2024ರಿಂದ28.10.2024 ದಿನಾಂಕ:28.10.2024ರಿಂದ ಪ್ರಸ್ತುತದವರೆಗೆ
5.	ಡೀನ್ ಶೈಕ್ಷಣಿಕ	ಪ್ರೊ.ಎನ್. ಲಕ್ಷ್ಮೀ	ದಿನಾಂಕ01.04.2024ರಿಂದ 31.03.2025
6	ಡೀನ್ (ಅಧ್ಯಯನ ಕೇಂದ್ರ)	ಪ್ರೊ. ರಾಮನಾಥಂ ನಾಯ್ಕು	ದಿನಾಂಕ:01.04.2024ರಿಂದ 31.03.2025

1.3 ಲೆಕ್ಕಪರಿಶೋಧನಾ ತಂಡದ ಅಧಿಕಾರಿ/ಸಿಬ್ಬಂದಿಗಳ ಹಾಗೂ ಲೆಕ್ಕಪರಿಶೋಧನಾ ಕಾರ್ಯಕ್ರಮದ ವಿವರಗಳು

1	ಲೆಕ್ಕಪರಿಶೋಧಕರ ಹೆಸರುಗಳು	**ಲೆಕ್ಕ ಪರಿಶೋಧನಾಧಿಕಾರಿ** 1. ಶ್ರೀಮತಿ. ಪ್ರೀತಿ.ಪ್ರ.ಮಗ್ಗಾವಿ 2. ಶ್ರೀಮತಿ. ವಿ.ಎಸ್. ರೇಣು 3. ಶ್ರೀ. ಎ.ಸಿ. ಗುರುಪಾದಸ್ವಾಮಿ **ಲೆಕ್ಕಾಧೀಕ್ಷಕರು** 1. ಶ್ರೀ. ಸತೀಶ ಜಿ.ಕೆ. 2. ಶ್ರೀಮತಿ ಅನಂತಲಕ್ಷ್ಮಿ ಬಿ.ಎನ್. 3. ಶ್ರೀ. ಸಮೀರ್ ಉಲ್ಲಾ **ಲೆಕ್ಕ ಸಹಾಯಕರು** 1. ಶ್ರೀಮತಿ. ತೇಜಶ್ವಿನಿ.ಬಿ.ಎನ್. 2. ಶ್ರೀಮತಿ. ನುಜಹತ್ ಫಾತಿಮಾ 3. ಶ್ರೀಮತಿ. ರಾಧಾ ಎಸ್. 4. ಶ್ರೀಮತಿ. ಶೈಲಜಾ ಎಸ್.
2	ಲೆಕ್ಕಪರಿಶೋಧನೆ ಪ್ರಾರಂಭದ ದಿನಾಂಕ	16-06-2025
5	ಲೆಕ್ಕಪರಿಶೋಧನೆ ಮುಕ್ತಾಯದ ದಿನಾಂಕ	12-12-2025
6	ಲೆಕ್ಕಪರಿಶೋಧನೆಗೆ ತೆಗೆದುಕೊಂಡ ಮಾನವದಿನಗಳು	844
7	ಲೆಕ್ಕಪರಿಶೋಧನಾ ಕರಡು ವರದಿಯನ್ನು ಪುನರ್ ಪರಿಶೀಲಿಸಿದ ಅಧಿಕಾರಿಗಳ ಹೆಸರು ಮತ್ತು ಪದನಾಮ	ಶ್ರೀಮತಿ. ಅನಿತಾ ಎಮ್.ಪಿ. ಅಪರ ನಿರ್ದೇಶಕರು

8	ಲೆಕ್ಕಪರಿಶೋಧನಾ ಕರಡು ವರದಿಯ ಪುನರ್ ಪರಿಶೀಲನೆ ದಿನಾಂಕ	13.02.2026


2. ಆರ್ಥಿಕ ಪರಿಸ್ಥಿತಿ:

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ–1994ರಲ್ಲಿನ ಕಲಂ–3(5)ರ ಅನುಸಾರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ತನ್ನದೇ ಆದ ನಿಧಿಯನ್ನು ಹೊಂದಿರುತ್ತದೆ. ವಿಶ್ವವಿದ್ಯಾನಿಲಯದ ಆಂತರಿಕ ಮೂಲಗಳಿಂದ ಬರುವ ಆದಾಯ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ–1994ರ ಅಧ್ಯಾಯ–II ರಲ್ಲಿನ ಕಲಂ–3(5)ರ ಅನುಸಾರ ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತವಾಗುವ ರಾಜ್ಯ ಸರ್ಕಾರದಿಂದ ಬರಬಹುದಾದ ಅನುದಾನಗಳು, ಕೇಂದ್ರ ಸರ್ಕಾರದಿಂದ ಬರಬಹುದಾದ ಅನುದಾನಗಳು, ಹಾಗೂ ಸಾರ್ವಜನಿಕ ದತ್ತಿಗಳು/ಕೊಡುಗೆಗಳು ಈ ನಿಧಿಯ ಮೂಲಗಳಾಗಿರುತ್ತವೆ. ವಿಶ್ವವಿದ್ಯಾನಿಲಯದಲ್ಲಿ ಕಾರ್ಯಕ್ರಮವಾರು ಬ್ಯಾಂಕ್ ಖಾತೆಗಳನ್ನು ನಿರ್ವಹಿಸುತ್ತಿದ್ದು, ಇವುಗಳಲ್ಲಿನ ಸ್ವೀಕೃತಿ ಮತ್ತು ಪಾವತಿ ವಿವರಗಳನ್ನು ಕ್ರೋಢೀಕರಿಸಿ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಹಾಗೂ ವ್ಯವಸ್ಥಾಪನಾ ಮಂಡಳಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ. ಈ ನಿಧಿಯನ್ನು ರಾಷ್ಟ್ರೀಕೃತ/ಅನುಸೂಚಿತ ಬ್ಯಾಂಕ್‌ಗಳಲ್ಲಿ ನಿರ್ವಹಿಸಬೇಕಾಗಿರುತ್ತದೆ. ವಿಶ್ವವಿದ್ಯಾನಿಲಯಕ್ಕೆ ಈ ಕೆಳಕಂಡವುಗಳು ಪ್ರಮುಖ ಹಣಕಾಸಿನ ಮೂಲಗಳಾಗಿರುತ್ತವೆ.

ಅ) ಆಂತರಿಕ ಮೂಲಗಳಿಂದ ಆದಾಯ:ವಿದ್ಯಾರ್ಥಿಗಳ ಪ್ರವೇಶ ಶುಲ್ಕಗಳು, ಪರೀಕ್ಷಾ ಶುಲ್ಕಗಳು, ವಿಶ್ವವಿದ್ಯಾನಿಲಯಗಳ ಕಟ್ಟಡಗಳ ಬಾಡಿಗೆ, ವಿಶ್ವವಿದ್ಯಾನಿಲಯದ ನಿಧಿಯ ಹೂಡಿಕೆ ಮೇಲಿನ ಬಡ್ಡಿಯಿಂದ ಬರುವ ಆದಾಯ ಹಾಗೂ ಇತ್ಯಾದಿ

ಆ) ಸಾರ್ವಜನಿಕರಿಂದ ಬರುವ ದತ್ತಿಗಳು ಹಾಗೂ ಕೊಡುಗೆಗಳು

ಇ) ಸರ್ಕಾರದಿಂದ ಅಭಿವೃದ್ಧಿ ಅನುದಾನ ಹಾಗೂ ಪ್ರಾಯೋಜಿತ ಕಾರ್ಯಕ್ರಮಕ್ಕೆ ಅನುದಾನಗಳು



2024–25ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದಲ್ಲಿ ವ್ಯವಹರಣೆಯಲ್ಲಿದ್ದ ಎಲ್ಲಾ ಬ್ಯಾಂಕ್ ಖಾತೆಗಳ ತೆಖ್ತೆಯನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 5 ಟಿಎಆರ್ 2017 ದಿನಾಂಕ:30.01.2017ರ ಭಾಗ–ಎ(III)ರ ಕಂಡಿಕೆ–1ರನ್ವಯ ವಾರ್ಷಿಕ ಲೆಕ್ಕಪತ್ರಗಳಲ್ಲಿ ಅನುಬಂಧ–ಇ ರಲ್ಲಿ ಬಹಿರಂಗಗೊಳಿಸಬೇಕಾಗಿರುತ್ತದೆ (Disclosure of Bank Accounts). ಆದರಂತೆ ಮುಕ್ತ ವಿಶ್ವವಿದ್ಯಾನಿಲಯದ ಅಧೀನದಲ್ಲಿರುವ ವಿವಿಧ ವಿಭಾಗಗಳು, ಪ್ರಾದೇಶಿಕ ಕಛೇರಿ, ಅಧ್ಯಯನ ಕೇಂದ್ರ, ಸಹಾಯ ಕಲಿಕಾ ಕೇಂದ್ರ, ಶೈಕ್ಷಣಿಕ ಭವನಗಳು ಹಾಗೂ ಇತ್ಯಾದಿ ಕಛೇರಿಗಳಲ್ಲಿ ನಿರ್ವಹಿಸುತ್ತಿರುವ

ಎಲ್ಲಾ ಬ್ಯಾಂಕ್ ಖಾತೆಗಳನ್ನು ವೃಢೀಕರಿಸಿ ನಗದು ಪುಸ್ತಕದೊಂದಿಗೆ ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ:03/23.06.2025, 18/27.06.2025, 53/15.07.2025, 82/08.08.2025 ಹಾಗೂ 150/03.10.2025ರಲ್ಲಿ ವಿವರ ಕೋರಲಾಗಿತ್ತು. ಹಾಜರುಪಡಿಸಿದ ನಗದು ಪುಸ್ತಕ ಹಾಗೂ ಬ್ಯಾಂಕ್ ತಃಖ್ತೆಗಳ ಪ್ರಕಾರ ಆರ್ಥಿಕ ಪರಿಸ್ಥಿತಿಯನ್ನು ಸಿದ್ಧಪಡಿಸಿ ಅನುಬಂಧ–01 ರಲ್ಲಿ ವಿವರಿಸಲಾಗಿದೆ. ಅದರಂತೆ ವಾರ್ಷಿಕ ಲೆಕ್ಕಪತ್ರಗಳಲ್ಲಿ ಸರ್ಕಾರದ ಪತ್ರ ಎಫ್‌ಡಿ 5 ಟಿಎಆರ್ 2017 ದಿನಾಂಕ:30.01.2017 ದನ್ವಯ ಅನುಬಂಧ–ಇ ರಲ್ಲಿ ವಿಶ್ವವಿದ್ಯಾನಿಲಯದ ಎಲ್ಲಾ ಬ್ಯಾಂಕ್ ಖಾತೆಗಳನ್ನು ಬಹಿರಂಗಗೊಳಿಸಿ ದೃಢೀಕರಿಸಲು ಸೂಚಿಸಿದೆ.

ವಿಶ್ವವಿದ್ಯಾನಿಲಯವು ತನ್ನ ವಾರ್ಷಿಕ ಲೆಕ್ಕಪತ್ರವನ್ನು 37 ಬ್ಯಾಂಕ್ ಖಾತೆಗಳ ವ್ಯವಹರಣೆಯ ಆಧಾರದಲ್ಲಿ ತಯಾರಿಸಲಾಗಿದೆ. ವಿವರಗಳನ್ನು ಅನುಬಂಧ–01(ಎ) ರಲ್ಲಿ ನೀಡಲಾಗಿದೆ.

2.1 ಮುಕ್ತ ವಿಶ್ವವಿದ್ಯಾನಿಲಯದವರು ಪಲ್ಲಿಸಿರುವ ಕರಡು ವಾರ್ಷಿಕ ಲೆಕ್ಕಪತ್ರಗಳ ಅನ್ವಯ ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿಯು ಕೆಳಕಂಡಂತಿರುತ್ತದೆ:

ಮೊತ್ತ (ರೂ.ಗಳಲ್ಲಿ)

ವಿವರಗಳು	ಭಾಗ–1 (ವಾಸ್ತವಿಕ)		ಭಾಗ–2 (ಆಂತರಿಕ ವರ್ಗಾವಣೆ)		ಒಟ್ಟು		
	ನಗದು	ನಿಶ್ಚಿತ ಠೇವಣಿ	ನಗದು	ನಿಶ್ಚಿತ ಠೇವಣಿ	ನಗದು	ನಿಶ್ಚಿತ ಠೇವಣಿ	ಒಟ್ಟು
ಪ್ರಾರಂಭಿಕ ತಿಲ್ಕು:01–04–2024	34,69,36,196	5,17,27,67,821	0	0	34,69,36,196	5,17,27,67,821	5,51,97,04,017
ಸ್ವೀಕೃತಿಗಳು	1,90,84,37,721	5,53,59,40,595	2,15,13,19,311	0	4,05,97,57,032	5,53,59,40,595	9,59,56,97,627
ಒಟ್ಟು	2,25,53,73,917	10,70,87,08,416	2,92,45,55,609	0	4,40,66,93,228	10,70,87,08,416	15,11,54,01,644
ಪಾವತಿಗಳು	1,90,87,16,151	5,56,66,53,875	2,07,68,95,476	0	3,98,56,11,627	5,56,66,53,875	9,55,22,65,502
ಅಂತಿಮ ತಿಲ್ಕು: 31–03–2025	34,66,57,766	5,14,20,54,541	84,76,60,133	0	42,10,81,601	5,14,20,54,541	5,56,31,36,142

2023–24ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರದನ್ವಯ ಅಂತಿಮ ತಿಲ್ಕು ರೂ.535,94,35,787/– ಗಳು ಇರುತ್ತದೆ. 2023–24ನೇ ಸಾಲಿನ ಲೆಕ್ಕ ಪರಿಶೋಧನೆ ವರದಿಯಲ್ಲಿನ ಕಂಡಿಕೆ ಸಂಖ್ಯೆ:11.1 ಮತ್ತು 11.2 ರಲ್ಲಿ ಲೆಕ್ಕ ಪರಿಶೋಧನೆ ಪ್ರಕಾರ ಆರ್ಥಿಕ ಪರಿಸ್ಥಿತಿ ಅಂತಿಮ ತಿಲ್ಕು ರೂ.551,97,04,017/– (ನಿಶ್ಚಿತ ಠೇವಣಿ ರೂ.517,27,67,821/– ಹಾಗೂ ನಗದು ತಿಲ್ಕು ರೂ.34,69,36,196/–) ಗಳಾಗಿದ್ದು ವ್ಯತ್ಯಾಸ ರೂ.16,02,68,230/– ಗಳಾಗಿರುತ್ತದೆ. ವ್ಯತ್ಯಾಸ ಮೊತ್ತಕ್ಕೆ ವಿವರಣೆ ಈ ಕೆಳಗಿನಂತಿರುತ್ತದೆ.

ಕ್ರ. ಸಂ.	ಬ್ಯಾಂಕ ಖಾತೆ ಸಂಖ್ಯೆ	ಖಾತೆ ವಿವರ	ಮೊತ್ತ	ಪರಾ
1.	54035420117	ಸಾಮಾನ್ಯ ಖಾತೆ	16,03,01,295/–	ಪರೀಕ್ಷಾ ಖಾತೆಯಿಂದ ವರ್ಗಾಯಿಸಿರುವ ಮೊತ್ತ ಪರಿಗಣಿಸಿರುವುದಿಲ್ಲ.
2.	54035420128	ಪರೀಕ್ಷಾ ಖಾತೆ	18,009/–	ನಿಶ್ಚಿತ ಠೇವಣಿ ಪಕ್ವವಾಗಿರುವ ಮೊತ್ತದಲ್ಲಿ ರೂ.18009/– ಗಳನ್ನು ಪರಿಗಣಿಸಿರುವುದಿಲ್ಲ.
3.	54035421315	ಸಂಕೀರ್ಣ ಖಾತೆ	(–) 51,074/–	2022–23 ಹಾಗೂ 2023–24 ನಗದು

				ಮಸ್ತಕ ನಿರ್ವಹಿಸದೇ ಇರುವುದರಿಂದ 2024–25 ನೇ ಸಾಲಿಗೆ ಲೆಕ್ಕ ಪರಿಶೋಧನೆಯಂತೆ ಆರಂಭಿಕ ಶಿಲ್ಕು ಪರಿಗಣಿಸಲಾಗಿದೆ.
			ಒಟ್ಟು ಮೊತ್ತ	**16,02,68,230/–**	

ವಿಶ್ವವಿದ್ಯಾನಿಲಯದವರು ಮೇಲಿನಂತೆ ವ್ಯತ್ಯಾಸಗಳನ್ನು ಸರಿಪಡಿಸಿ 2024–25ನೇ ಸಾಲಿಗೆ ಪ್ರಾರಂಭಿಕ ಶಿಲ್ಕು ರೂ.551,97,04,017/– ಗಳನ್ನು ಆಳವಡಿಸಿ ಕರಡು ವಾರ್ಷಿಕ ಲೆಕ್ಕ ಪತ್ರಗಳನ್ನು ದಿನಾಂಕ:12–11–2025 ರ ಹಣಕಾಸು ಸಮಿತಿಯಲ್ಲಿ ಮಂಡಿಸಿ ಲೆಕ್ಕ ಪರಿಶೋಧನೆಗೆ ಸಲ್ಲಿಸಿರುತ್ತಾರೆ.

ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳ ಅನುಸಾರ ಸ್ವೀಕೃತಿ ಮೊತ್ತ ರೂ.194,36,35,788/– ಗಳಾಗಿರುತ್ತದೆ. ಲೆಕ್ಕಪರಿಶೋಧನೆಯ ಅನುಸಾರ ರೂ.190,84,42,976/– ಇದ್ದು, ರೂ.31,51,92,992/– ಗಳಷ್ಟು ವ್ಯತ್ಯಾಸವಿರುತ್ತದೆ. ಅದರಂತೆ ವಾರ್ಷಿಕ ಲೆಕ್ಕಪತ್ರಗಳ ಅನುಸಾರ ಪಾವತಿಗಳ ಮೊತ್ತ ರೂ.181,14,07,815/–ಗಳಾಗಿರುತ್ತದೆ. ಲೆಕ್ಕಪರಿಶೋಧನೆಯ ಅನುಸಾರ ಇದು ರೂ.190,87,21,403/–ಇದ್ದು, ರೂ.9,73,13,588/–ಗಳಷ್ಟು ವ್ಯತ್ಯಾಸವಿರುತ್ತದೆ. ಭಾಗ–1 ರಲ್ಲಿ ಪರಿಗಣಿಸಬೇಕಾದ ಮೊತ್ತಗಳನ್ನು ಹಾಗೂ ಭಾಗ–2 ರಲ್ಲಿ ಪರಿಗಣಿಸಿರುವುದಕ್ಕೆ ಮೇಲಿನ ವ್ಯತ್ಯಾಸಗಳು ಉಂಟಾಗಿರುತ್ತವೆ.

ವಿಶ್ವವಿದ್ಯಾನಿಲಯವು ಸಲ್ಲಿಸಿರುವ ವಾರ್ಷಿಕ ಲೆಕ್ಕಪತ್ರಗಳ ಅನುಸಾರ ಅಂತಿಮ ಶಿಲ್ಕು ರೂ.556,31,36,150/– ಹಾಗೂ ಲೆಕ್ಕಪರಿಶೋಧನೆಯ ಅನುಸಾರ ರೂ.556,31,36,150/–ಗಳು ಇದ್ದು, (ನಿಶ್ಚಿತ ಠೇವಣಿ ರೂ.514,20,54,541/– ಹಾಗೂ ನಗದು ಶಿಲ್ಕು ರೂ.42,10,81,609/–) ತಾಳೆಯಾಗಿರುತ್ತದೆ.

ಲೆಕ್ಕಪರಿಶೋಧನೆಯ ಪ್ರಕಾರ ವಿಶ್ವವಿದ್ಯಾನಿಲಯದ 37 ಬ್ಯಾಂಕ್ ಖಾತೆಗಳ ಆರ್ಥಿಕ ಪರಿಸ್ಥಿತಿಯು ಕೆಳಕಂಡಂತಿರುತ್ತದೆ:

ಮೊತ್ತ (ರೂ.ಗಳಲ್ಲಿ)

ಕ್ರ ಸಂ	ವಿವರಗಳು		ಮೊತ್ತ	ಮೊತ್ತ
1	ಆರಂಭಿಕ ಶಿಲ್ಕು			34,69,36,196
2	ಆದಾಯ (ವಾಸ್ತವಿಕ ಸ್ವೀಕೃತಿಗಳು)	ಅನುದಾನ	392,72,600	
		ಶುಲ್ಕಗಳು ಮತ್ತು ಇತರೆ	150,92,30,432	
		ಉಳಿತಾಯ ಬಡ್ಡಿ	71,18,465	
		ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ	35,26,21,352	
		ಇತರೆ ಸ್ವೀಕೃತಿ	1,94,872	
	ಒಟ್ಟು (ಅ)		**190,84,37,721**	
	ಹೊಂದಾಣಿಕೆಗಳು	ಹೂಡಿಕೆ ಹಿಂತೆಗೆತ	84,13,80,041	
		ಆಂತರಿಕ ನಿಧಿ ಸ್ವೀಕೃತಿ	130,99,31,359	
		ಇತರೆ ಹೊಂದಾಣಿಕೆಗಳು	7,911	

	ಒಟ್ಟು (ಆ)		215,13,19,311	
4	ಒಟ್ಟು (ಇ+ಈ)			405,97,57,032
	ಒಟ್ಟು (ಕ್ರ.ಸಂ 1+3)			440,66,93,228
5	ವೆಚ್ಚಗಳು (ಇ)	ವಾಸ್ತವಿಕ ವೆಚ್ಚಗಳು	190,87,16,151	
	ಹೊಂದಾಣಿಕೆಗಳು	ಹೂಡಿಕೆ	76,84,86,580	
		ಆಂತರಿಕ ನಿಧಿ ವರ್ಗಾವಣೆ	130,84,08,896	
		ಇತರೆ ಹೊಂದಾಣಿಕೆಗಳು	0	
	ಒಟ್ಟು (ಈ)		398,56,11,627	
6	ಒಟ್ಟು(ಇ+ಈ)			398,56,11,627
7	ಅಂತಿಮ ಶಿಲ್ಕು (ಲೆಕ್ಕಪರಿಶೋಧನೆ/ನಗದು ಪುಸ್ತಕ) (3–6)			42,10,81,601
8	ಅಂತಿಮ ಶಿಲ್ಕು (ಬ್ಯಾಂಕ್ ಸ್ಟೇಟ್ಮೆಂಟ್)			56,20,44,172
9	ವ್ಯತ್ಯಾಸ (7–8)			14,09,62,571

ನಗದು ಪುಸ್ತಕದಲ್ಲಿನ ಸ್ವೀಕೃತಿ ಮತ್ತು ಪಾವತಿಗಳ ವಿವರಗಳನ್ನು **ಅನುಬಂಧ–01** ರಲ್ಲಿ ಹಾಗೂ ನಗದಾಗದ ಧನಾದೇಶದ ವಿವರಗಳನ್ನು **ಅನುಬಂಧ–02** ರಲ್ಲಿ ನೀಡಲಾಗಿದೆ. ವಿಶ್ವವಿದ್ಯಾನಿಲಯದಲ್ಲಿ ರೂ.42,10,81,601/–ಗಳಷ್ಟು ನಗದು ಬ್ಯಾಂಕ್ ಖಾತೆಯಲ್ಲಿಯೇ ಉಳಿದಿದ್ದು, ಬಡ್ಡಿ ನಷ್ಟವಾಗುವುದನ್ನು ತಪ್ಪಿಸಲು ಬ್ಯಾಂಕ್ ಖಾತೆಗಳನ್ನು ಫ್ಲೆಕ್ಸಿ ಖಾತೆಗಳಾಗಿ ಬದಲಾಯಿಸಲು ಹಿಂದಿನ ಎರಡು ವರ್ಷಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೂಚಿಸಲಾಗಿದ್ದರೂ ಸಹ ಕ್ರಮ ಕೈಗೊಂಡಿರುವುದಿಲ್ಲ. ಫ್ಲೆಕ್ಸಿ ಖಾತೆಗೆ ಬದಲಾಯಿಸಿದ್ದಲ್ಲಿ ನಿಶ್ಚಿತ ಠೇವಣಿ ಬಡ್ಡಿ ಗಳಿಸಬಹುದಾಗಿದೆ. ಆದುದರಿಂದ ವಿಶ್ವವಿದ್ಯಾನಿಲಯಗಳ ಬ್ಯಾಂಕ ಖಾತೆಗಳನ್ನು ಫ್ಲೆಕ್ಸಿ ಖಾತೆಗಳಾಗಿ ಬದಲಾಯಿಸಲು ಕ್ರಮವಹಿಸಲು ಮತ್ತೋಮ್ಮೆ ಸೂಚಿಸಿದೆ.

ಮುಕ್ತ ವಿಶ್ವವಿದ್ಯಾನಿಲಯ ವಿವಿಧ ಯೋಜನೆಗಳ ಬ್ಯಾಂಕ್ ಖಾತೆಗಳಿಂದ 2024–25ನೇ ಸಾಲಿನಲ್ಲಿ ಹೂಡಿಕೆ ಮಾಡಿರುವ ನಿಶ್ಚಿತ ಠೇವಣಿಗಳ ವಿವರಗಳನ್ನು **ಅನುಬಂಧ–03 ಮತ್ತು 3ಎ** ರಲ್ಲಿ ನೀಡಲಾಗಿದ್ದು, ಘೋಷ್ವಾರೆ ಈ ಕೆಳಕಂಡಂತಿರುತ್ತದೆ.

ದಿನಾಂಕ: 01.04.2024 ಪ್ರಾರಂಭಿಕ ಶಿಲ್ಕು		5,17,27,67,821
1) (+) 2024–25ನೇ ಸಾಲಿನಲ್ಲಿ ಬ್ಯಾಂಕ್ ಬಡ್ಡಿ ಜಮೆ	40,75,67,854	
2) (+) 2024–25ನೇ ಸಾಲಿನ ಹೊಸ ಹೂಡಿಕೆ	64,73,00,000	
3) (+) ಪಕ್ವಗೊಂಡ ಠೇವಣಿಗಳ ಮರುಹೂಡಿಕೆ	3,58,96,06,580	
4) (+) ಪಕ್ವಗೊಂಡ ಠೇವಣಿಗಳ ಸ್ವಯಂ ನವೀಕರಣ	89,14,66,161	
ಒಟ್ಟು	5,53,59,40,595	10,70,87,08,416
1) (–) ಆದಾಯ ತೆರಿಗೆ	34,20,775	
2) (–) ಹಿಂಪಡೆದ ಬಡ್ಡಿ ಮೊತ್ತ	35,22,47,155	
3) (–) ನಗದೀಕರಿಸಿದ ಠೇವಣಿಗಳ ಮೊತ್ತ	431,95,19,784	
4) (–) ಪಕ್ವಗೊಂಡ ಠೇವಣಿಗಳ ಸ್ವಯಂ ನವೀಕರಣ	89,14,66,161	

	ಒಟ್ಟು	**5,56,66,53,875**
ದಿನಾಂಕ: 31.03.25ರ ಅಂತ್ಯಕ್ಕೆ ಅಂತಿಮ ಶಿಲ್ಕು		5,14,20,54,541
	ಒಟ್ಟು	**10,70,87,08,416**


ಮುಕ್ತ ವಿಶ್ವವಿದ್ಯಾನಿಲಯದವರು ಸಲ್ಲಿಸಿರುವ ವಾರ್ಷಿಕ ಲೆಕ್ಕಗಳ ನಮೂದುಗಳನ್ನು ಪರಿಶೀಲಿಸಿದಾಗ ಸ್ವೀಕೃತಿ ಮತ್ತು ಪಾವತಿಗಳನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದ್ದು ವಿಶ್ವವಿದ್ಯಾನಿಲಯದ ರಾಜಸ್ವ, ಠೇವಣಿಗಳ ಮೇಲಿನ ಬಡ್ಡಿ ಮುಂತಾದವುಗಳನ್ನು ಸ್ವೀಕೃತಿ ವಿಭಾಗದ ಭಾಗ–I ರಲ್ಲಿ ಹಾಗೂ ಆಂತರಿಕ ಬ್ಯಾಂಕ್ ಖಾತೆಗಳಿಂದ ಮಾಡಿಕೊಂಡ ವರ್ಗಾವಣೆಗಳು, ಠೇವಣಿಗಳು, ಇದಿರು ನಮೂದುಗಳು (ಕಾಂಟ್ರಾ ಎಂಟ್ರೀಸ್) ಮುಂತಾದವುಗಳನ್ನು ಸ್ವೀಕೃತಿ ವಿಭಾಗದ ಭಾಗ–2ರಲ್ಲಿ ತೆಗೆದುಕೊಳ್ಳಲಾಗಿದೆ. ಅದೇ ರೀತಿ ಸಾಮಾನ್ಯ ವೆಚ್ಚಗಳನ್ನು ಪಾವತಿ ವಿಭಾಗದ ಭಾಗ–1ರಲ್ಲಿ ಹಾಗೂ ಆಂತರಿಕ ಬ್ಯಾಂಕ್ ಖಾತೆಗಳಿಗೆ ಮಾಡಿದ ವರ್ಗಾವಣೆಗಳು, ಹಿಂಪಾವತಿಸಿದ ಠೇವಣಿಗಳು, ಇದಿರು ನಮೂದುಗಳು ಮುಂತಾದವುಗಳನ್ನು ವೆಚ್ಚ ವಿಭಾಗದ ಭಾಗ–2ರಲ್ಲಿ ತೆಗೆದುಕೊಳ್ಳಲಾಗಿದೆ. ವಾರ್ಷಿಕ ಲೆಕ್ಕಗಳಲ್ಲಿ ರಾಜಸ್ವ ಸ್ವೀಕೃತಿ ಮತ್ತು ವೆಚ್ಚಗಳು, ಬಂಡವಾಳ ಸ್ವೀಕೃತಿ ಮತ್ತು ವೆಚ್ಚಗಳು, ಸಾಲಗಳು ಮತ್ತು ಮುಂಗಡಗಳು ಮುಂತಾದ ವರ್ಗೀಕರಣವಾಗಲೀ ಅಥವಾ ಅಂತಹ ವರ್ಗೀಕರಣಕ್ಕೆ ಪೂರಕವಾದ ನಮೂನೆಗಳಲ್ಲಿ ಲೆಕ್ಕಪತ್ರಗಳ ನಿರ್ವಹಣೆಯನ್ನಾಗಲೀ ಮಾಡಿರುವುದಿಲ್ಲ. ವಿಶ್ವವಿದ್ಯಾನಿಲಯದಲ್ಲಿ ಪ್ರತ್ಯೇಕವಾಗಿ ಹಣಕಾಸು ಶಾಖೆಯಿದ್ದರೂ ಕೂಡ ಹಣಕಾಸು ಹಾಗೂ ಲೆಕ್ಕಪತ್ರ ನಿರ್ವಹಣೆಯಲ್ಲಿ ಯಾವುದೇ ಶಿಸ್ತುಬದ್ಧ ಕ್ರಮಗಳನ್ನು ಅನುಸರಿಸುತ್ತಿರುವುದು ಕಂಡು ಬಂದಿರುವುದಿಲ್ಲ.

ವಾರ್ಷಿಕ ಲೆಕ್ಕಪತ್ರ ಹಾಗೂ ನಗದು ಪುಸ್ತಕಗಳ ವಾಸ್ತವಿಕ ಸ್ವೀಕೃತಿಗಳ ನಡುವೆ ರೂ.3,52,06,354/–ಗಳ ಹಾಗೂ ವಾರ್ಷಿಕ ಲೆಕ್ಕಪತ್ರಗಳ ಮತ್ತು ನಗದು ಪುಸ್ತಕಗಳ ವಾಸ್ತವಿಕ ಪಾವತಿಗಳ ನಡುವೆ ರೂ.(–)9,72,92,135/–ಗಳ ವ್ಯತ್ಯಾಸ ಕಂಡುಬಂದಿದ್ದು, ಈ ವ್ಯತ್ಯಾಸದ ಮೊತ್ತಕ್ಕೆ ಲೆಕ್ಕಸಮನ್ವಯಗೊಳಿಸಿರುವ ವಿವರದ ತ:ಖ್ತೆಯನ್ನು ಅನುಬಂಧ–04 ರಲ್ಲಿ ನೀಡಲಾಗಿದೆ.


ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ ಖಾತೆಯನ್ನು 10 ಬ್ಯಾಂಕ್ ಖಾತೆಗಳಲ್ಲಿ ಹಾಗೂ ಪರೀಕ್ಷಾ ನಿಧಿ ಖಾತೆಯನ್ನು 6 ಬ್ಯಾಂಕ್ ಖಾತೆಗಳಲ್ಲಿ ನಿರ್ವಹಿಸಲಾಗುತ್ತಿದ್ದು, ಕ್ರಮವಾಗಿ 10 ಮತ್ತು 6 ನಗದು ಪುಸ್ತಕಗಳನ್ನು ನಿರ್ವಹಿಸಲಾಗುತ್ತಿದೆ. ಹೀಗೆ ಒಂದು ಉದ್ದೇಶಕ್ಕೆ ಒಂದಕ್ಕಿಂತ ಹೆಚ್ಚು ಬ್ಯಾಂಕ್ ಖಾತೆಗಳನ್ನು ನಿರ್ವಹಿಸಲಾಗುತ್ತಿದ್ದು, ಇದು ನಿಯಮಬಾಹಿರವಾಗಿರುತ್ತದೆ. ಹೀಗೆ ಹೆಚ್ಚುವರಿಯಾಗಿ ಬ್ಯಾಂಕ್ ಖಾತೆಗಳನ್ನು ನಿರ್ವಹಿಸುತ್ತಿರುವುದಕ್ಕೆ 2022–23 ಹಾಗೂ 2023–24ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಸೂಚಿಸಲಾಗಿದೆ. ಅದಕ್ಕೆ ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿ ಪ್ರಸ್ತುತ ವಿಶ್ವವಿದ್ಯಾನಿಲಯದ ವಿರುದ್ಧ ಸಿ.ಬಿ.ಐ, ಎ.ಸಿ.ಬಿ ರವರಿಂದ ತನಿಖೆಗಳು ನಡೆಯುತ್ತಿದ್ದು, ವಿವಿಯ ಬ್ಯಾಂಕ್ ವಿವರಗಳನ್ನು ತನಿಖೆಗೆ ಒದಗಿಸಿರುವುದರಿಂದ ಈ ಹಂತದಲ್ಲಿ ಮುಕ್ತಾಯಗೊಳಿಸಲು ಸಾಧ್ಯವಿರುವುದಿಲ್ಲ, ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಮುಂದಿನ ದಿನಗಳಲ್ಲಿ ಸರ್ಕಾರದ ಆದೇಶದಂತೆ ಮುಕ್ತಾಯಗೊಳಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿರುತ್ತಾರೆ.

ವಿಶ್ವವಿದ್ಯಾನಿಲಯದ ಪ್ರಸ್ತುತ ಸಾಲಿನ ಸ್ವೀಕೃತಿ ಮತ್ತು ಪಾವತಿಗಳನ್ನು ಕಳೆದ ಐದು ವರ್ಷಗಳ ಸ್ವೀಕೃತಿ ಮತ್ತು ಪಾವತಿಗಳ ಅಂಕಿ ಅಂಶಗಳ ನಕ್ಷೆ ತಯಾರಿಸಿ ಹೋಲಿಕೆ ಮಾಡಿದಾಗ ಸ್ವೀಕೃತಿಗೆ ಸಂಬಂಧಿಸಿದಂತೆ, ಠೇವಣಿಗಳ ಮೇಲಿನ ಬಡ್ಡಿಯ ಸ್ವೀಕೃತಿ ಮೊತ್ತವು ಹಿಂದಿನ ಎರಡು ವರ್ಷಗಳಿಗೆ ಹೋಲಿಸಿದರೆ ಕಡಿಮೆಯಾಗಿರುವುದನ್ನು ಗಮನಿಸಬಹುದು. ವಿಶ್ವವಿದ್ಯಾನಿಲಯವು ಸಂಗ್ರಹಿಸುವ ಶುಲ್ಕಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಏರಿಕೆಯಿದ್ದರೂ, ಪ.ಜಾತಿ/ಪರ್ಗಗಳ ವಿದ್ಯಾರ್ಥಿಗಳಿಗೆ ನೀಡಲಾಗಿರುವ ರಿಯಾಯಿತಿ ಮೊತ್ತವನ್ನು ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿಗಳ ಖಾತೆಗೆ ಡಿ.ಬಿ.ಟಿ ಮೂಲಕ ಮರುಭರಿಕೆಯಾಗುತ್ತಿದ್ದು ಸದರಿ ಮೊತ್ತವನ್ನು ವಿದ್ಯಾರ್ಥಿಗಳಿಂದ ಸಂಗ್ರಹಿಸಿ ಪೂರ್ಣ ಪ್ರಮಾಣದಲ್ಲಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ/ಹಿಂಭರ್ತಿ ಮಾಡಿಕೊಳ್ಳುವಲ್ಲಿ ವಿಫಲವಾಗಿರುವುದು ಕಂಡು ಬಂದಿರುತ್ತದೆ. ಪೆಚ್ಚಿಕ್ಕೆ ಸಂಬಂಧಿಸಿದಂತೆ ಆಡಳಿತ ವೆಚ್ಚಗಳು ಹಿಂದಿನ ವರ್ಷಕ್ಕಿಂತ ದುಪ್ಪಟ್ಟಾಗಿದ್ದು, ಇದು ವಿಶ್ವವಿದ್ಯಾನಿಲಯದ ಆರ್ಥಿಕ ದೃಷ್ಟಿಯಿಂದ ಆರೋಗ್ಯಕರ ಬೆಳವಣಿಗೆಯಾಗಿರುವುದಿಲ್ಲ. ಸ್ವೀಕೃತಿ ಮತ್ತು ಪಾವತಿಗಳಲ್ಲಿನ ಏರಿಳಿತಗಳನ್ನು ಕೆಳಗಿನ ನಕ್ಷೆಗಳಲ್ಲಿ ನೀಡಲಾಗಿದೆ.

ಸ್ವೀಕೃತಿಗಳು ರೂ. ಲಕ್ಷಗಳಲ್ಲಿ



ವೆಚ್ಚಗಳು ರೂ. ಲಕ್ಷಗಳಲ್ಲಿ



3. ಲೆಕ್ಕ ಪರಿಶೋಧನಾ ವ್ಯಾಪ್ತಿ:

3.1 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ-1992ರ ಅಧ್ಯಾಯ-VI ರಲ್ಲಿನ ಕಲಂ-26 ಹಾಗೂ ಕಲಂ-27ರಂತೆ ಮುಕ್ತ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ವ್ಯವಸ್ಥಾಪನಾ ಮಂಡಳಿಯ

ನಿರ್ದೇಶನಗಳನುಸಾರ ತಯಾರಿಸಬೇಕಾಗಿರುತ್ತದೆ. ವಾರ್ಷಿಕ ಲೆಕ್ಕಗಳನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆಯ ಕಲಂ–20(3)(ii)ರ ಅನ್ವಯ ಹಣಕಾಸು ಸಮಿತಿಯು ಪರಿಶೀಲಿಸಿ, ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿದ ನಂತರ ವಾರ್ಷಿಕ ಲೆಕ್ಕಗಳನ್ನು ಲೆಕ್ಕಪರಿಶೋಧನಾ ಕಛೇರಿಗೆ ಕಳುಹಿಸಬೇಕಾಗಿರುತ್ತದೆ.

3.2 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ 2024–25ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನೆಯನ್ನು ಕಾಯ್ದೆಯ ಕಲಂ–27ರ ಅನುಸಾರ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪ್ರಧಾನ ನಿರ್ದೇಶಕರು ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಮೈಸೂರು ಪ್ರಾಂತೀಯ ಕಛೇರಿಯಿಂದ ಕೈಗೊಳ್ಳಲಾಗಿರುತ್ತದೆ.

3.3 2024–25ನೇ ಸಾಲಿನ ಮುಕ್ತ ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ–1992, ಅದರಡಿ ರಚಿತವಾದ ಪರಿನಿಯಮಗಳು, ಅಧ್ಯಾದೇಶಗಳು, ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಬಜೆಟ್ ಕೈಪಿಡಿ ನಿಯಮಗಳು, ಕರ್ನಾಟಕ ಲೋಕೋಪಯೋಗಿ ಲೆಕ್ಕ ಸಂಹಿತೆ ಮತ್ತು ಇಲಾಖಾ ಸಂಹಿತೆ, ಕರ್ನಾಟಕ ಸಾದಿಲ್ವಾರು ಕೈಪಿಡಿ ನಿಯಮಗಳು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಅಧಿನಿಯಮ–1999 ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳು–2000ದ ಉಪಬಂಧಗಳು, ಯು.ಜಿ.ಸಿ ಅಥವಾ ಅನುದಾನ ಒದಗಿಸುವ ಸಂಸ್ಥೆಗಳ ಮಾರ್ಗಸೂಚಿಗಳ ಅನ್ವಯ ತಪಾಸಣೆ ಮಾಡಿ ವರದಿಯನ್ನು ಸಿದ್ಧಪಡಿಸಲಾಗಿದೆ.

3.4 ಲೆಕ್ಕಪರಿಶೋಧನೆಗೊಂಡ ವಾರ್ಷಿಕ ಲೆಕ್ಕಗಳ ಪ್ರತಿಗಳನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ–1992ರ ಕಲಂ–27(4)ರ ಅನುಸಾರ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸಲು ಮುಕ್ತ ವಿಶ್ವವಿದ್ಯಾನಿಲಯವು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.

3.5 ಕರ್ನಾಟಕ ಬಜೆಟ್ ಕೈಪಿಡಿಯ ನಿಯಮ–303ರ ಪ್ರಕಾರ ಲೆಕ್ಕಪರಿಶೋಧನಾ ವರದಿಗಳ ಸ್ವರೂಪ ಮತ್ತು ಜವಾಬ್ದಾರಿಗನುಗುಣವಾಗಿ ಲೆಕ್ಕಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆಗಳಿಗೆ ಉತ್ತರಿಸುವ ಮತ್ತು ಲೆಕ್ಕಪರಿಶೋಧನೆಯಲ್ಲಿ ಎತ್ತಿದ ಇತರೆ ವಿಷಯಗಳನ್ನು ಇತ್ಯರ್ಥಗೊಳಿಸುವ ಹೊಣೆಗಾರಿಕೆಯು ಬಟವಾಡೆ ಅಧಿಕಾರಿ, ನಿಯಂತ್ರಣ ಅಧಿಕಾರಿ ಹಾಗೂ ವಿಶ್ವವಿದ್ಯಾನಿಲಯದ ಮುಖ್ಯಸ್ಥರದ್ದಾಗಿರುತ್ತದೆ.

4. ಲೆಕ್ಕ ಪರಿಶೋಧನಾ ಮಾನದಂಡ:

4.1 ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಂಡಿರುವ ಲೆಕ್ಕಪದ್ಧತಿ: (ವಿಚಾರಣಾ ಪತ್ರ ಸಂಖ್ಯೆ:116 ಮತ್ತು 117)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಾಯ್ದೆ–1992ರ ಕಲಂ–27(1) ರ ಅನ್ವಯ ವಿಶ್ವವಿದ್ಯಾನಿಲಯವು ವ್ಯವಸ್ಥಾಪನಾ ಮಂಡಳಿಯ ನಿರ್ದೇಶನಗಳಡಿ ವಾರ್ಷಿಕ ಲೆಕ್ಕಪತ್ರಗಳು ಮತ್ತು ಸಮತೋಲನ ಪಟ್ಟಿಯನ್ನು (Balance Sheet) ತಯಾರಿಸಿ ಲೆಕ್ಕಪರಿಶೋಧನೆಗೆ ನೀಡಬೇಕಾಗಿರುತ್ತದೆ. ಲೆಕ್ಕಪತ್ರ ನಿರ್ವಹಣೆಯನ್ನು ಏಕ ನಮೂದು ಅಥವಾ ಜೋಡಿ ನಮೂದು ಎಂದು ನಿರ್ದಿಷ್ಟ ಬಗೆಯಲ್ಲಿ ನಿರ್ವಹಿಸುವ ಬಗ್ಗೆ ಯಾವುದೇ ಪರಿನಿಯಮವನ್ನು ವಿಶ್ವವಿದ್ಯಾನಿಲಯವು ರೂಪಿಸಿಕೊಂಡಿರುವುದಿಲ್ಲ. ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಂಡಿರುವ ಲೆಕ್ಕಪದ್ಧತಿಯ ವಿವರಗಳು ಹಾಗೂ ಸಮತೋಲನ ಪಟ್ಟಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:116/12.09.2025 ಮತ್ತು 117/12.09.2025ಕ್ಕೆ ಮುಕ್ತ ವಿಶ್ವ ವಿದ್ಯಾನಿಲಯದವರು ಉತ್ತರಿಸಿರುವುದಿಲ್ಲ. ಆದಾಯ ಮತ್ತು ವೆಚ್ಚದ ತಃಖ್ತೆ ಹಾಗೂ ಸಮತೋಲನ ಪಟ್ಟಿಯನ್ನು ಹಾಜರುಪಡಿಸಿರುವುದಿಲ್ಲ.

4.2 ಲೆಕ್ಕಪತ್ರ ನಮೂನೆಗಳು:

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಏಕ ನಮೂದು ಅಥವಾ ಜೋಡಿ ನಮೂದುಗಳಂತಹ ಯಾವುದೇ ಬಗೆಯ ನಿರ್ದಿಷ್ಟ ಲೆಕ್ಕಪದ್ಧತಿಯನ್ನು ಅನುಸರಿಸುತ್ತಿರುವುದು ಕಂಡುಬಂದಿರುವುದಿಲ್ಲ. ಅಲ್ಲದೆ ಲೆಕ್ಕಪತ್ರ ನಿರ್ವಹಣೆಗೆ ಯಾವುದೇ ನಮೂನೆಗಳನ್ನು ವಿನ್ಯಾಸಗೊಳಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಅಳವಡಿಸಿಕೊಂಡಿರುವುದಿಲ್ಲ. ಮುಕ್ತ ವಿಶ್ವವಿದ್ಯಾನಿಲಯವು ನಿರ್ವಹಿಸುತ್ತಿರುವ ಯೋಜನೆವಾರು ಬ್ಯಾಂಕ್ ಖಾತೆಗಳಲ್ಲಿನ ಸ್ವೀಕೃತಿ ಮತ್ತು ಪಾವತಿಗಳನ್ನಾಧರಿಸಿ ಜಮೆ ಮತ್ತು ಪಾವತಿ ತಃಖ್ತೆಗಳನ್ನು ತಯಾರಿಸಿ, ಅವುಗಳನ್ನು ಕ್ರೋಢೀಕರಿಸಿ ವಾರ್ಷಿಕ ಲೆಕ್ಕ ಪತ್ರಗಳೆಂದು ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿರುತ್ತದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧಿನಿಯಮ,1992ರ ಕಲಂ–27ರ ಅನುಸಾರ ಪ್ರತೀ ವರ್ಷ ಜೂನ್ ಅಂತ್ಯದೊಳಗೆ ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಬೇಕಾಗಿರುವುದರಿಂದ ಈ ಅವಧಿಗೆ ಮುಂಚಿತವಾಗಿ ವ್ಯವಸ್ಥಾಪನಾ ಮಂಡಳಿಯಿಂದ ಅನುಮೋದಿತವಾದ ವಾರ್ಷಿಕ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನಾ ಕಛೇರಿಗೆ ಕಳುಹಿಸಬೇಕಾಗಿರುತ್ತದೆ. ಆದರೆ ವಿಶ್ವವಿದ್ಯಾನಿಲಯದವರು ಬ್ಯಾಂಕ್ ಖಾತೆಗಳಲ್ಲಿನ ಸ್ವೀಕೃತಿ ಮತ್ತು ಪಾವತಿಗಳನ್ನಾಧರಿಸಿ ಜಮೆ ಮತ್ತು ಪಾವತಿ ತಃಖ್ತೆಗಳಿರುವ ವಾರ್ಷಿಕ ಲೆಕ್ಕಗಳನ್ನು ಲೆಕ್ಕಪರಿಶೋಧನೆ ಸಮಯದಲ್ಲಿ ಕರಡು ವಾರ್ಷಿಕ ವರದಿ ಹಾಜರುಪಡಿಸಿದ್ದು, ಕರಡು ವಾರ್ಷಿಕ ಲೆಕ್ಕಪತ್ರಗಳನ್ನು 92ನೇ ಹಣಕಾಸು ಸಮಿತಿ ಸಭೆ ದಿನಾಂಕ:02–12–2025 ರಲ್ಲಿ ಅನುಮೋದಿಸಿದ್ದು ಹಾಗೂ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದು ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸಲಾಗುವುದು ಎಂದು ಉತ್ತರಿಸಿರುತ್ತಾರೆ.

ದೃಢೀಕರಿಸಿ ಅನುಮೋದಿಸಿರುವ ವಾರ್ಷಿಕ ವರದಿಯನ್ನು ದಿನಾಂಕ:30.11.2025 ರವರೆಗೆ ಲೆಕ್ಕ ಪರಿಶೋಧನೆಗೆ ಸಲ್ಲಿಸಿರುವುದಿಲ್ಲ.

ಆಡಿಟ್ ಪ್ರಮಾಣಪತ್ರ

I. ನಾನು ಇದರೊಡನೆ ಲಗತ್ತಿಸಿರುವ 31ನೇ ಮಾರ್ಚ್ 2025ಕ್ಕೆ ಕೊನೆಗೊಂಡ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ವೀಕೃತಿ ಮತ್ತು ಪಾವತಿ ಲೆಕ್ಕಗಳ ಲೆಕ್ಕಪರಿಶೋಧನೆಯನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ–1992ರಲ್ಲಿನ ಕಲಂ–27ರ ಅನುಸಾರ ಕೈಗೊಂಡಿರುತ್ತೇನೆ. ಈ ಲೆಕ್ಕಗಳನ್ನು ಸಿದ್ಧಪಡಿಸುವ ಜವಾಬ್ದಾರಿಯು ವಿಶ್ವವಿದ್ಯಾನಿಲಯದ್ದಾಗಿದ್ದು, ನಾವು ಕೈಗೊಂಡ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಈ ಲೆಕ್ಕಗಳ ಮೇಲೆ ಅಭಿಪ್ರಾಯ ವ್ಯಕ್ತಪಡಿಸುವುದಷ್ಟೇ ನನ್ನ ಜವಾಬ್ದಾರಿಯಾಗಿರುತ್ತದೆ.

II. ನಾನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಆಡಿಟ್ ಕೈಪಿಡಿಯ ಮಾರ್ಗಸೂಚಿಗಳ ಅನುಸಾರ ಲೆಕ್ಕಪರಿಶೋಧನೆಯನ್ನು ಕೈಗೊಂಡಿರುತ್ತೇನೆ. ಈ ಮಾರ್ಗಸೂಚಿಗಳ ಅನ್ವಯ ವಿಶ್ವವಿದ್ಯಾನಿಲಯದ ಹಣಕಾಸು ತಃಖ್ತೆಗಳು ಭೌತಿಕ ತಪ್ಪುಗಳಿಂದ ಮುಕ್ತವಾಗಿರುವುದರ ಬಗ್ಗೆ ವಿಶ್ವವಿದ್ಯಾನಿಲಯದಿಂದ ಸಮಂಜಸವಾದ ಖಾತರಿ ಪಡೆದುಕೊಳ್ಳಲು ಪ್ರಯತ್ನಿಸಿರುತ್ತೇನೆ. ಲೆಕ್ಕಪರಿಶೋಧನೆಯು ಹಣಕಾಸು ತಃಖ್ತೆಯಲ್ಲಿ ಬಹಿರಂಗಪಡಿಸಿದ ಮೊತ್ತಗಳಿಗೆ ಪೆಂಬಲವಾಗಿ ಸಾಕ್ಷ್ಯಾಧಾರಗಳನ್ನು ಪರಿಶೀಲಿಸುವುದನ್ನು ಸಹ ಒಳಗೊಂಡಿರುತ್ತದೆ. ಸಂಸ್ಥೆಯು ಅನುಸರಿಸಿದ ಲೆಕ್ಕಗಳ ತತ್ವಗಳು ಮತ್ತು ಮಾಡಿರುವ ಮಹತ್ವದ ಅಂದಾಜುಗಳಲ್ಲದೆ ಒಟ್ಟಾರೆ ಲೆಕ್ಕಪತ್ರಗಳ ಮಂಡನೆಯ ಮೌಲ್ಯಮಾಪನ ಮಾಡುವುದನ್ನೂ ಲೆಕ್ಕಪರಿಶೋಧನೆಯು ಒಳಗೊಂಡಿರುತ್ತದೆ. ನಾವು ಮಾಡಿರುವ ಲೆಕ್ಕಪರಿಶೋಧನೆಯು ನನ್ನ ಅಭಿಪ್ರಾಯಕ್ಕೆ ಸಮರ್ಥನೀಯವಾದ ಆಧಾರವನ್ನು ಒದಗಿಸುತ್ತದೆ ಎಂದು ನಾನು ನಂಬುತ್ತೇನೆ.

III. ನನಗೆ ಅಗತ್ಯವಿರುವ ಮತ್ತು ಪಡೆಯಲಾದ ಮಾಹಿತಿಗಳು ಹಾಗೂ ವಿವರಣೆಗಳು, ಲೆಕ್ಕಪತ್ರಗಳ ಪರೀಕ್ಷಾ ಪರಿಶೀಲನೆಯ ಫಲಿತಾಂಶ ಮತ್ತು ನೀಡಲಾದ ವಿವರಣೆಗಳನ್ನು ಪರಿಗಣಿಸಿ ನನ್ನ ಅತ್ಯುತ್ತಮ ಅರಿವಿನ ಮೇರೆಗೆ, ಇದರೊಡನೆ ಲಗತ್ತಿಸಲಾಗಿರುವ ವರದಿಯಲ್ಲಿ ಸ್ಪಷ್ಟಪಡಿಸಿರುವಂತೆ ಲೆಕ್ಕಪತ್ರ ದಾಖಲೆಗಳಲ್ಲಿ ಭೌತಿಕವಾಗಿ ಮತ್ತು ವ್ಯಾಪಕವಾಗಿ ತಪ್ಪು ಹೇಳಿಕೆಗಳಿರುವ ಕಾರಣ ಮುಕ್ತ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಸ್ವೀಕೃತಿ ಮತ್ತು ಪಾವತಿ ಲೆಕ್ಕಗಳು ವಿಶ್ವವಿದ್ಯಾನಿಲಯದ ಸ್ವೀಕೃತಿಗಳು ಮತ್ತು ಪಾವತಿಗಳ ಒಂದು ನಿಜವಾದ ಮತ್ತು ನ್ಯಾಯೋಚಿತವಾದ ಚಿತ್ರಣವನ್ನು ನೀಡುವುದಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ಮೈಸೂರು

ದಿನಾಂಕ:

ಪ್ರತಿಕೂಲ ಅಭಿಪ್ರಾಯಕ್ಕೆ ಆಧಾರಗಳು:

i. ವಿಶ್ವವಿದ್ಯಾನಿಲಯದ ಲೆಕ್ಕಪತ್ರ ನಿರ್ವಹಣೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ-1994ರ ಅಡಿಯಲ್ಲಾಗಲೀ ಅಥವಾ ವಿಶ್ವವಿದ್ಯಾನಿಲಯವೇ ಲೆಕ್ಕಪತ್ರ ಕೈಪಿಡಿಯೊಂದನ್ನು ಅಳವಡಿಸಿಕೊಳ್ಳುವ ಮೂಲಕವಾಗಲೀ ಒಂದು ಪರಿಣಾಮಕಾರಿಯಾದ ಲೆಕ್ಕಪತ್ರ ನಿರ್ವಹಣಾ ಪದ್ಧತಿಯನ್ನು ಅನುಸರಿಸುತ್ತಿಲ್ಲ. ಹಾಗೂ ಲೆಕ್ಕಪತ್ರ ನಮೂನೆಗಳನ್ನು ಕೂಡ ನಿಗದಿಪಡಿಸಿಕೊಂಡಿರುವುದಿಲ್ಲ. ವಿಶ್ವವಿದ್ಯಾನಿಲಯವು ತನ್ನ ದೈನಂದಿನ ಆರ್ಥಿಕ ವಹಿವಾಟುಗಳನ್ನು ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ನಿರ್ವಹಿಸುವ ಸಲುವಾಗಿ ಅಳವಡಿಸಿಕೊಂಡಿರುವ ಲೆಕ್ಕಪತ್ರಗಳ ಕಾರ್ಯವಿಧಾನ ಹಾಗೂ ಸರಕಾರವು ಕಾಲಕಾಲಕ್ಕೆ ರೂಪಿಸಿ ಹೊರಡಿಸಿರುವ ಯಾವ ಯಾವ ನಿಯಮಗಳನ್ನು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳಲಾಗಿದೆ ಎಂಬುವುದರ ಬಗ್ಗೆ ಸಂಬಂಧಿತ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:117/12.09.2025ರಲ್ಲಿ ಕೋರಲಾಗಿ, ವಿಶ್ವವಿದ್ಯಾನಿಲಯದಿಂದ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ.

ii. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 5 ಟಿಎಆರ್ 2017 ದಿನಾಂಕ:30.01.2017ರ ಭಾಗ–ಎ(III)ರ ಕಂಡಿಕೆ–1ರನ್ವಯ ವಿಶ್ವವಿದ್ಯಾನಿಲಯವು ತಾನು ನಿರ್ವಹಿಸುತ್ತಿರುವ ಬ್ಯಾಂಕ್ ಖಾತೆಗಳ ವಿವರಗಳನ್ನು ಸದರಿ ಆದೇಶದೊಡನೆ ಇರುವ ಅನುಬಂಧ–ಇ ನpಮೂನೆಯಲ್ಲಿ ಲೆಕ್ಕಪರಿಶೋಧನೆಗೆ ನೀಡಬೇಕಾಗಿರುತ್ತದೆ. ಆದರಂತೆ ಬ್ಯಾಂಕ್ ಖಾತೆಗಳ ಸಂಖ್ಯೆ, ಬ್ಯಾಂಕಿನ ಹೆಸರು, ಬ್ಯಾಂಕ್ ಖಾತೆಯ ವಿಧ, ಬ್ಯಾಂಕ್ ಖಾತೆ ತೆರೆದಿರುವ ಉದ್ದೇಶ, ಆರಂಭಿಕ ಶಿಲ್ಕು(01–04–2024), ಸ್ವೀಕೃತಿಗಳು, ವೆಚ್ಚಗಳು ಹಾಗೂ ಅಂತಿಮ ಶಿಲ್ಕುಗಳ ವಿವರಗಳನ್ನು ದೃಢೀಕರಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ:18/27.06.2025 ಹಾಗೂ 53/15.07.2025ನ್ನು ನೀಡಲಾಗಿತ್ತು. ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳು ನೀಡಿರುವ ಅನುಪಾಲನಾ ವರದಿಯನ್ನು ಪರಿಶೀಲಿಸಿದಾಗ ವಿವಿಧ ವಿಭಾಗಗಳ ಹಾಗೂ 36 ಪ್ರಾದೇಶಿಕ ಕೇಂದ್ರಗಳ ಬ್ಯಾಂಕ್ ಪಾಸ್‌ಬುಕ್‌ಗಳನ್ನು ಮಾತ್ರ ಹಾಜರುಪಡಿಸಿರುತ್ತಾರೆ, ವಿವರಗಳನ್ನು **ಅನುಬಂಧ–05ರಲ್ಲಿ** ನೀಡಲಾಗಿದೆ. ನಗದು ಪುಸ್ತಕ ಹಾಗೂ ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ವಿಶ್ವವಿದ್ಯಾನಿಲಯದಲ್ಲಿ ನಿರ್ವಹಿಸುತ್ತಿರುವ ಎಲ್ಲಾ ಬ್ಯಾಂಕ್ ಖಾತೆಗಳ ದೃಢೀಕರಣವನ್ನು ನೀಡಿರುವುದಿಲ್ಲ ಮತ್ತು ಬ್ಯಾಂಕ್ ಖಾತೆ ತೆರೆದಿರುವ ಉದ್ದೇಶ ಹಾಗೂ ಬ್ಯಾಂಕ್ ಖಾತೆಯನ್ನು ತೆರೆಯಲು ಸಕ್ಷಮ ಪ್ರಾಧಿಕಾರದಿಂದ ಅನುಮತಿ ನೀಡಿರುವ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

iii. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧೀನದಲ್ಲಿ ಒಟ್ಟು 36 ಪ್ರಾದೇಶಿಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ಸದರಿ ಕೇಂದ್ರಗಳ ಬ್ಯಾಂಕ್ ಖಾತೆಗಳ ಅಂಕಿ ಅಂಶಗಳನ್ನು ಮುಕ್ತ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರದಲ್ಲಿ ತೆಗೆದುಕೊಂಡಿರುವುದಿಲ್ಲ.

iv. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ದೃಶ್ಯ ಸ್ಟುಡಿಯೋ ಹೆಸರಿನಲ್ಲಿ ಐ ಸಿ ಐ ಸಿ ಐ ಬ್ಯಾಂಕ್, ಮೈಸೂರಿನ ಇಸ್ಟೋಸಸ್ ಶಾಖೆ, ಇಲ್ಲಿ ಬ್ಯಾಂಕ್ ಖಾತೆಯನ್ನು (ಖಾತೆ ಸಂ–055801001170) ಹೊಂದಿದ್ದು, ಈ ಖಾತೆಯ ವಹಿವಾಟುಗಳನ್ನು ವಾರ್ಷಿಕ ಲೆಕ್ಕಪತ್ರಗಳಲ್ಲಿ ತೆಗೆದುಕೊಂಡಿರುವುದಿಲ್ಲ.

v. ವಿಶ್ವವಿದ್ಯಾನಿಲಯದ ಕುಲಸಚಿವರು (ಪರೀಕ್ಷಾಂಗ)ಇವರ ಪದನಾಮದಡಿ ನಿರ್ವಹಿಸಿರುವ ಎಸ್.ಬಿ.ಐ ಬ್ಯಾಂಕ್ ಸಂಖ್ಯೆ:-54035421393ರಲ್ಲಿ 2022–23ನೇ ಸಾಲುಗಳಿಂದ ಬಾಹ್ಯ ಸಂಸ್ಥೆಗಳಾದ ಕೊ–ಆಪರೇಟಿವ ಸೋಸೈಟಿ ಬ್ಯಾಂಕಗಳು, ಹಾಲು ಉತ್ಪಾದಕರ ಸಂಘಗಳು, ಕೆ.ಪಿ.ಎಸ್.ಸಿ ಪರೀಕ್ಷೆ ನಡೆಸಲು ಒಟ್ಟು ರೂ.148,62,537/– ಅನುದಾನ ನೀಡಿದ್ದು ಸದರಿ ಅನುದಾನದಲ್ಲಿ ರೂ.109,17,255/–ಗಳನ್ನು ವೆಚ್ಚ ಭರಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿ, ಈ ಸಂಬಂಧ ವ್ಯವಹರಗಳಿಗೆ ದೃಡೀಕರಿಸಿರುವ ನಗದು ಪುಸ್ತಕ ಮತ್ತು ದಾಖಲೆಗಳನ್ನೊಳಗೊಂಡ ಕಡತ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ವಿಚಾರಣಾ ಪತ್ರ ಸಂಖ್ಯೆ:166/ದಿ:15.10.2025ರಲ್ಲಿ ನೀಡಲಾಗಿತ್ತು. ವಿಶ್ವವಿದ್ಯಾನಿಲಯದವರು ದಿನಾಂಕ:01.12.2025 ರಂದು ನೀಡಿರುವ ಅನುಪಾಲನಾ ವರದಿಯಲ್ಲಿ ಸದರಿ ಬ್ಯಾಂಕ್ ಖಾತೆಯ ನಗದು ಪುಸ್ತಕ ಹಾಗೂ ಕಡತಗಳ ನಿರ್ವಹಣೆ ಮಾಡಿರುವುದಿಲ್ಲ ಎಂದು ತಿಳಿಸಿದ್ದು, ಬ್ಯಾಂಕ್ ತಃಖ್ತೆ ಮಾತ್ರ ಹಾಜರುಪಡಿಸಿರುತ್ತಾರೆ. ಈ ಖಾತೆಯ ವಿವರಗಳು ವಾರ್ಷಿಕ ಲೆಕ್ಕಪತ್ರಗಳಲ್ಲಿಯು ಸೇರಿರುವುದಿಲ್ಲ. ವಿವರಗಳನ್ನು **ಅನುಬಂಧ–06ರಲ್ಲಿ** ನೀಡಲಾಗಿದೆ. ಅದರಂತೆ 2022–23 ರಿಂದ 2024–25 ನೇ ಸಾಲಿನವರೆಗೆ ಒಟ್ಟು ಸ್ವೀಕೃತಿ ರೂ.148,62,537/–ಗಳಿಗೆ ಹಾಗೂ ಪಾವತಿ ರೂ.109,17,255/– ಗಳಿಗೆ ಯಾವುದೇ ಚಲನ್ ಅಥವಾ ವೋಚರ್ ಲೆಕ್ಕಪರಿಶೋದನೆಗೆ ಹಾಜರುಪಡಿಸಿರುವುದಿಲ್ಲ. ಬಾಹ್ಯ ಸಂಸ್ಥೆಗಳ ಪರೀಕ್ಷೆ ಅನುದಾನಗಳನ್ನು ವಿಶ್ವವಿದ್ಯಾನಿಲಯದ ಹಣ ಬಟವಡೆ ಅಧಿಕಾರಿಯಾಗಿರುವ ಹಣಕಾಸು ಅಧಿಕಾರಿ ಇವರ ಹೆಸರಲ್ಲಿರುವ ಬ್ಯಾಂಕ್ ಖಾತೆಗೆ ಅನುದಾನ ಜಮೆಯಾಗದೇ, ಕುಲಸಚಿವರು (ಮೌಲ್ಯಮಾಪನ) ಇವರ ಹೆಸರಿನಲ್ಲಿರುವ ಖಾತೆಗೆ ಅನುದಾನ ಜಮೆಯಾಗುತ್ತಿದ್ದು ವೆಚ್ಚಗಳನ್ನು ಭರಿಸಲಾಗುತ್ತಿದೆ. ಹೀಗಾಗಿ ವಿಶ್ವವಿದ್ಯಾನಿಲಯದಲ್ಲಿ ನಿರ್ವಹಿಸುತ್ತಿರುವ ಎಲ್ಲಾ ಬ್ಯಾಂಕ್ ಖಾತೆಗಳ ವಿವರಗಳನ್ನು ಲೆಕ್ಕಪರಿಶೋಧನೆಗೆ ನೀಡದಿರುವ ಸಂದೇಹ ಉದ್ಭವವಾಗುತ್ತದೆ. ಹಾಗೂ ವಿಶ್ವವಿದ್ಯಾನಿಲಯದ ಸ್ವೀಕೃತಿ ಮತ್ತು ಪಾವತಿ ಲೆಕ್ಕಗಳು ನಿಖರ ಮತ್ತು ನೈಜ ಎಂಬ ಭಾವನೆ ಮೂಡುವುದಿಲ್ಲ.

vi. ಬಜೆಟ್ ಕೈಪಿಡಿ ನಿಯಮಗಳು, 1958ರ ಕಂಡಿಕೆ–226–232ರಲ್ಲಿ ತಿಳಿಸಿರುವಂತೆ ಪ್ರತಿ ಮಾಹೆ ಅನುದಾನದ ಉಳಿತಾಯ, ಹೆಚ್ಚುವರಿ ವೆಚ್ಚ ಹಾಗೂ ಹಂಚಿಕೆ ಇವುಗಳ ಬಗ್ಗೆ ನಿಗಾ ವಹಿಸುವುದು ನಿಯಂತ್ರಣಾಧಿಕಾರಿಗಳ ಮತ್ತು ಬಟವಾಡೆ ಅಧಿಕಾರಿಗಳ ಜವಾಬ್ದಾರಿಯಾಗಿದ್ದು, ಲೆಕ್ಕಶೀರ್ಷಿಕೆವಾರು ಆಯವ್ಯಯದಲ್ಲಿ ನಿಗದಿಪಡಿಸಿಕೊಂಡಿರುವುದಕ್ಕೆ ಎದುರಾಗಿ ವೆಚ್ಚ ಭರಿಸಿರುವ ವಿವರಗಳನ್ನು ಬಿಲ್ಲುಗಳಲ್ಲಿ ಹಾಗೂ ನಿಗಾವಹಿಯಲ್ಲಿ ನಮೂದಿಸಬೇಕಾಗಿರುತ್ತದೆ. ಆದರೆ ವಿಶ್ವವಿದ್ಯಾನಿಲಯದಲ್ಲಿ ಈ ಕ್ರಮ ಅನುಸರಿಸದೆ ಪ್ರತೀ ವರ್ಷ ಆಯವ್ಯಯದಲ್ಲಿ ನಿಗದಿಪಡಿಸಿಕೊಂಡಿರುವುದಕ್ಕಿಂತ ಹೆಚ್ಚುವರಿಯಾಗಿ ವೆಚ್ಚಭರಿಸಿ, ವೆಚ್ಚ ಭರಿಸಿದ ಮೊತ್ತಕ್ಕೆ ಆಯವ್ಯಯವನ್ನು ಪರಿಷ್ಕರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಳ್ಳಲಾಗುತ್ತಿದೆ. ಇದು ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಆಯವ್ಯಯ ನಿಯಂತ್ರಣ ವ್ಯವಸ್ಥೆ ಇಲ್ಲದಿರುವುದನ್ನು ಬಿಂಬಿಸುತ್ತದೆ.

vii. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ–1992ರ ಅಧ್ಯಾಯ–VIರಲ್ಲಿನ ಕಲಂ–27(1)ರ ಅನುಸಾರ 2024–25ನೇ ಸಾಲಿನ ವಾರ್ಷಿಕ ಲೆಕ್ಕಪತ್ರದೊಂದಿಗೆ ಮುಕ್ತ ವಿಶ್ವವಿದ್ಯಾನಿಲಯದ ಬ್ಯಾಲೆನ್ಸ್ ಶೀಟ್‌ನ್ನು ಸಿದ್ದಪಡಿಸಿ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ದಾಖಲೆಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

6. ಇತರೆ ಅವಲೋಕನಗಳು

6.1 ಆದಾಯ ಮತ್ತು ವೆಚ್ಚಗಳ ಅಂಕಿ ಅಂಶಗಳಲ್ಲಿ ವ್ಯತ್ಯಾಸಗಳು

6.1.1 2024–25ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ಸಾಮಾನ್ಯ ನಿಧಿ ಖಾತೆಯಲ್ಲಿ ವೆಚ್ಚಗಳೆಲ್ಲ ರೂ.155,65,12,080/– ಎಂದು ಹಾಗೂ ಲೆಕ್ಕ ಪರಿಶೋಧನೆ ವೆಚ್ಚಗಳು ರೂ.155,84,45,931/–ವ್ಯತ್ಯಾಸ

ರೂ.19,33,851/– ಹೆಚ್ಚುವರಿಯಾಗಿದ್ದು ಈ ಮೊತ್ತವು ಆಂತರಿಕ ವರ್ಗಾವಣೆಯ ವೆಚ್ಚವೆಂದು ಪರಿಗಣಿಸಲಾಗಿದೆ.

6.1.2 ನೂತನ ಪಿಂಚಣಿ ನಿಧಿ ಖಾತೆಯಿಂದ ಎನ್‌ಎಸ್‌ಡಿಎಲ್ ಗೆ ಪಾವತಿಸಲಾಗಿರುವ ಉದ್ಯೋಗಿ ವಂತಿಕೆ ಮತ್ತು ಉದ್ಯೋಗದಾತರ ವಂತಿಕೆ ಮೊತ್ತವನ್ನು ರೂ6,88,52,944/–ಗಳನ್ನು ಭಾಗ–1ರಲ್ಲಿ ವಾಸ್ತವಿಕ ವೆಚ್ಚವೆಂದು ಪರಿಗಣಿಸಿರುವುದಿಲ್ಲ.

6.1.3 ಭದ್ರತಾ ಠೇವಣಿ ಖಾತೆಯಿಡಿ ಸರಬರಾಜುದಾರರಿಗೆ ಮತ್ತು ಗುತ್ತಿಗೆದಾರರಿಗೆ ಪಾವತಿ ಮಾಡಲಾದ ರೂ.2,65,25,596/–ಗಳ ವಾಸ್ತವಿಕ ವೆಚ್ಚವನ್ನು ಭಾಗ–1ರಲ್ಲಿ ಪರಿಗಣಿಸಿರುವುದಿಲ್ಲ.

6.1.4 ಭದ್ರತಾ ಠೇವಣಿ ಖಾತೆಯಡಿ ಸರಬರಾಜುದಾರಿಂದ ಮತ್ತು ಗುತ್ತಿಗೆದಾರರಿಂದ ಪಡೆಯಲಾದ ಭದ್ರತಾ ಠೇವಣಿ ರೂ.72,51,211/–ಗಳನ್ನು ವಾರ್ಷಿಕ ಲೆಕ್ಕಪತ್ರದಲ್ಲಿ ಭಾಗ–1ರಲ್ಲಿ ಸ್ವೀಕೃತಿ ಎಂದು ಪರಿಗಣಿಸಿರುವುದಿಲ್ಲ.

6.1.5 ಸಂಕೀರ್ಣ ಖಾತೆಗೆ ಸಾಮಾನ್ಯ ನಿಧಿ ಬ್ಯಾಂಕ್ ಖಾತೆಯಿಂದ ಸ್ವೀಕೃತವಾಗಿರುವ ವೇತನದಲ್ಲಿ ಕಟಾವಣೆಯಾದ ಮೊತ್ತ ರೂ.4,21,57,565/–ಗಳನ್ನು ವಾರ್ಷಿಕ ಲೆಕ್ಕಪತ್ರದಲ್ಲಿ ಭಾಗ–2ರಲ್ಲಿ ಪರಿಗಣಿಸಿರುವುದಿಲ್ಲ.

7. ಅನುದಾನ ವಹಿ ಮತ್ತು ಖರ್ದಿ ಪುಸ್ತಕಗಳನ್ನು ಹಾಜರುಪಡಿಸದಿರುವುದು

ವಿಶ್ವವಿದ್ಯಾನಿಲಯದವರು ದಿನ ಪುಸ್ತಕ, ಅನುದಾನ ವಹಿ, ಖರ್ದಿ ಪುಸ್ತಕ ಮುಂತಾದ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲವಾದ್ದರಿಂದ ಸರ್ಕಾರ/ಯುಜಿಸಿಯಿಂದ ಬಂದ ಅನುದಾನ, ವಿದ್ಯಾರ್ಥಿಗಳಿಂದ ಸಂಗ್ರಹವಾದ ವಿವಿಧ ಶುಲ್ಕಗಳು, ದತ್ತಿ ನಿಧಿ ಮತ್ತು ಅಧ್ಯಯನ ಪೀಠಗಳಿಗೆ ಬಂದ ಅನುದಾನ/ಕೊಡುಗೆ, ಲಭ್ಯ ಅನುದಾನದ ಮೇಲೆ ಪ್ರಾಪ್ತವಾದ ಬಡ್ಡಿಯ ವಿವರ ಮುಂತಾದವುಗಳನ್ನು ವರ್ಗೀಕೃತ ಸ್ವೀಕೃತಿವಾರು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.

8. ಆಂತರಿಕ ನಿಯಂತ್ರಣಕ್ಕೆ ಸಂಬಂಧಿಸಿದ ಅಭಿಪ್ರಾಯಗಳು

ಅ) ಸಮನ್ವಯ ಮತ್ತು ನಿಯಂತ್ರಣದ ಕೊರತೆ

ವಿಶ್ವವಿದ್ಯಾನಿಲಯದಲ್ಲಿ ಕುಲಸಚಿವರ ಹಾಗೂ ಹಣಕಾಸು ಅಧಿಕಾರಿಗಳ ನೇತೃತ್ವದಲ್ಲಿ ಪ್ರತ್ಯೇಕವಾಗಿ ಆಡಳಿತ ಶಾಖೆ, ಪ್ರವೇಶಾತಿ ಶಾಖೆ, ಪರೀಕ್ಷಾ ಶಾಖೆ ಮತ್ತು ಹಣಕಾಸು ಶಾಖೆಗಳಿದ್ದು ಇವುಗಳು ವಿಶ್ವವಿದ್ಯಾನಿಲಯದ ಹಣಕಾಸು ಶಿಸ್ತನ್ನು ಕಾಯ್ಯುಕೊಳ್ಳಲು ಅಗತ್ಯ ನಿಯಂತ್ರಣ ವಿಧಾನಗಳನ್ನು ಬಜೆಟ್ ಕೈಪಿಡಿ ನಿಯಮಗಳು, 1958ರ ಕಂಡಿಕೆ–226–232ರಲ್ಲಿ ತಿಳಿಸಿರುವಂತೆ ಅನುಸರಿಸದೇಕಾಗುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಅನುಮೋದಿತ ಆಯವ್ಯಯಕ್ಕಿಂತ ವೆಚ್ಚಗಳು ಹೆಚ್ಚಾಗುತ್ತಿರುವುದನ್ನು ಆಯವ್ಯಯ ನಿಗಾ ವಹಿ ನಿರ್ವಹಿಸುವ ಮೂಲಕ ನಿಯಂತ್ರಿಸುವ ವ್ಯವಸ್ಥೆ ಇರುವುದಿಲ್ಲ. ಸಾದಿಲ್ವಾರು ಬಿಲ್ಲುಗಳು ಮತ್ತು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಹೊಂದಾಣಿಕೆಗೆ ಸಲ್ಲಿಸುವ ಸವಿವರ ಸಾದಿಲ್ವಾರು ಬಿಲ್ಲುಗಳಿಗೆ ವಿಶ್ವವಿದ್ಯಾನಿಲಯದ ವ್ಯವಹರಣೆಗಳ ನಿಯಂತ್ರಣಾಧಿಕಾರಿಗಳಾದ ಕುಲಸಚಿವರು ಪ್ರತಿ ಸಹಿ ಮಾಡುವ ಪದ್ಧತಿ ಜಾರ್ತಿಯಲ್ಲಿರುವುದಿಲ್ಲ. ಹೀಗಾಗಿ ವಿಶ್ವವಿದ್ಯಾನಿಲಯದಲ್ಲಿನ ವ್ಯವಹರಣೆಗಳಲ್ಲಿ ಪರಿಣಾಮಕಾರಿಯಾದ ಆಂತರಿಕ ನಿಯಂತ್ರಣ ವ್ಯವಸ್ಥೆ ಇಲ್ಲದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

ಆ) ಬ್ಯಾಂಕ್ ಖಾತೆಯನ್ನು ಜಂಟಿಯಾಗಿ ನಿರ್ವಹಿಸದೆ ಒಬ್ಬರ ಪದನಾಮದಲ್ಲಿ ನಿರ್ವಹಿಸುತ್ತಿರುವುದು.

ವಿಶ್ವವಿದ್ಯಾನಿಲಯದಲ್ಲಿ ಬ್ಯಾಂಕ್ ಖಾತೆಯನ್ನು ಜಂಟಿಯಾಗಿ ನಿರ್ವಹಿಸದೆ ಹಣಕಾಸು ಅಧಿಕಾರಿಗಳ ಪದನಾಮದಲ್ಲಿ ನಿರ್ವಹಿಸಲಾಗುತ್ತಿದೆ. ಇದಲ್ಲದೆ ವಿಶ್ವವಿದ್ಯಾನಿಲಯಗಳ ಇತರೆ ಅಧಿಕಾರಿಗಳಾದ ಉಪ ಕುಲಸಚಿವ ಹಾಗೂ ಸಂಯೋಜಕರು ಮುಂತಾದವರ ಪದನಾಮದಲ್ಲಿ ಕೂಡ ಒಂಟಿಯಾಗಿ ಬ್ಯಾಂಕ್ ಖಾತೆಗಳ ನಿರ್ವಹಣೆ ಮಾಡಲಾಗುತ್ತಿದೆ.

ವಿಶ್ವವಿದ್ಯಾನಿಲಯದವರು ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ವಾರ್ಷಿಕ ಲೆಕ್ಕಪತ್ರಗಳು ಮತ್ತು ದಾಖಲೆಗಳ ಆಧಾರದ ಮೇಲೆ ಈ ವರದಿಯನ್ನು ತಯಾರಿಸಲಾಗಿದೆ.

I. ಹಣಕಾಸು ಲೆಕ್ಕ ಪರಿಶೋಧನೆ ಸಂಶೋಧನೆಗಳು:

9. ಆಯವ್ಯಯ ಅಂದಾಜುಗಳು

ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಮೂಲ ಆಯವ್ಯಯ ಅಂದಾಜುಪಟ್ಟಿ ಹಾಗೂ ಪರಿಷ್ಕೃತ ಆಯವ್ಯಯ ಅಂದಾಜು ಪಟ್ಟಿಯನ್ನು ಪರಿಶೀಲಿಸಲಾಗಿ, ಮೂಲ ಆಯವ್ಯಯ ಅಂದಾಜು ಪಟ್ಟಿಯನ್ನು ದಿನಾಂಕ.07.03.2024ರಂದು ನಡೆದ 88ನೇ ಹಣಕಾಸು ಸಮಿತಿ ಸಭೆ ಹಾಗೂ 177ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆಯಲಾಗಿದೆ. ಹಾಗೂ ಪರಿಷ್ಕೃತ ಆಯವ್ಯಯ ಅಂದಾಜು ಪಟ್ಟಿಯನ್ನು ದಿನಾಂಕ.26.03.2025 ರಂದು ನಡೆದ 91ನೇ ಹಣಕಾಸು ಸಮಿತಿ ಸಭೆ ಹಾಗೂ ದಿನಾಂಕ:08.05.2025 ರಂದು ನಡೆದ 183ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆಯಲಾಗಿದೆ. ವಿವರಗಳನ್ನು ಅನುಬಂಧ–07 ರಲ್ಲಿ ನೀಡಲಾಗಿದ್ದು, ಅದರ ಘೋಷ್ವಾರೆ ಕೆಳಕಂಡಂತಿದೆ.

2024–25ನೇ ಸಾಲು	ಆಯವ್ಯಯ ಅಂದಾಜು	ಪರಿಷ್ಕೃತಆಯವ್ಯಯ ಅಂದಾಜು	ವಾರ್ಷಿಕ ಲೆಕ್ಕಪತ್ರ ಪ್ರಕಾರ ವಾಸ್ತವಿಕ ಸ್ವೀಕೃತಿ	ಶೇಕಡವಾರು ವ್ಯತ್ಯಾಸ
ಸ್ವೀಕೃತಿಗಳು	167,85,61,000	420,44,04,000	190,11,15,381	–54.78
ಪಾವತಿಗಳು	238,79,90,000	233,53,61,300	177,14,82,318	–24.15

ಮೇಲೆ ವಿವರಿಸಿರುವಂತೆ ಸ್ವೀಕೃತಿಯನ್ನು ಆಯವ್ಯಯ ಅಂದಾಜು ರೂ.167.86 ಕೋಟಿ ಇರುವುದನ್ನು ಪರಿಷ್ಕೃತ ಅಂದಾಜಿನಲ್ಲಿ ರೂ.420.44 ಕೋಟಿಗಳಿಗೆ ಹೆಚ್ಚಿಸಿಕೊಳ್ಳಲಾಗಿರುತ್ತದೆ. ಆದರೆ ವಾಸ್ತವಿಕ ಸ್ವೀಕೃತಿ ರೂ.190.11ಕೋಟಿಗಳು ಪರಿಷ್ಕೃತ ಅಂದಾಜಿಗಿಂತಲೂ ಶೇ.54.78%ರಷ್ಟು ಕಡಿಮೆಯಾಗಿರುವುದು ಕಂಡು ಬಂದಿರುತ್ತದೆ. ಅದೇ ರೀತಿ ಪಾವತಿಯನ್ನು ಆಯವ್ಯಯ ಅಂದಾಜು ರೂ.238.80 ಕೋಟಿ ಇರುವುದನ್ನು ಪರಿಷ್ಕೃತ ಅಂದಾಜಿನಲ್ಲಿ ರೂ.233.53ಕೋಟಿಗಳು ಕಡಿಮೆ ಮಾಡಲಾಗಿದೆ. ಆದರೆ ವಾಸ್ತವಿಕ ಪಾವತಿಯು ಪರಿಷ್ಕೃತ ಅಂದಾಜಿಗಿಂತಲೂ ಶೇ24.15%ರಷ್ಟು ಕಡಿಮೆಯಾಗಿರುತ್ತದೆ. ಆಯವ್ಯಯ ಅಂದಾಜುಗಳು ಹಾಗೂ ವಾರ್ಷಿಕ ಲೆಕ್ಕಗಳ ಆದಾಯ, ವೆಚ್ಚಗಳಿಗೆ ಹೊಂದಾಣಿಕೆ ಇಲ್ಲದಿರುವುದಕ್ಕೆ ವಿವರಣೆಯನ್ನು ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:182/ದಿ:29.10.25ರಲ್ಲಿ ಕೋರಲಾಗಿತ್ತು, ಇದಕ್ಕೆ ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿರುವುದಿಲ್ಲ.


ಮುಂದಿನ ವರ್ಷದ ಆಯವ್ಯಯ ಅಂದಾಜುಗಳನ್ನು ಚಾಲ್ತಿ ವರ್ಷದಲ್ಲಿ ತಯಾರಿಸುವಾಗ ಹಿಂದಿನ ವರ್ಷದ ಅಂತಿಮ ಶಿಲ್ಕನ್ನು ಆರಂಭಿಕ ಶಿಲ್ಕಾಗಿ ತೆಗೆದುಕೊಂಡು ಚಾಲ್ತಿ ವರ್ಷದ ನಿರೀಕ್ಷಿತ ರಾಜಸ್ವವನ್ನು ಸೇರಿಸಿಕೊಂಡು, ಲಭ್ಯವಾಗುವ ಒಟ್ಟು ಮೊತ್ತದಿಂದ ಚಾಲ್ತಿ ವರ್ಷದ ನಿರೀಕ್ಷಿತ ವೆಚ್ಚಗಳನ್ನು ಕಳೆದು ಚಾಲ್ತಿ ವರ್ಷದ ಅಂತಿಮ ಶಿಲ್ಕನ್ನು ಅಂದಾಜಿಸಬಹುದಾಗಿರುತ್ತದೆ. ಈ ಮೊತ್ತವನ್ನು ನಂತರದ ವರ್ಷದ ಆಯವ್ಯಯ ಅಂದಾಜಿಗೆ ಆರಂಭಿಕ ಶಿಲ್ಕಾಗಿ ಪರಿಗಣಿಸಬೇಕಾಗಿರುತ್ತದೆ. ಈ ಕ್ರಮವನ್ನು ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೂಚಿಸಿದ್ದರೂ ವಿಶ್ವವಿದ್ಯಾನಿಲಯವು

ಇದನ್ನು ಅನುಸರಿಸದೇ ಇಯವುದರಿಂದ ನಿಖರವಾದ ಆಯವ್ಯಯ ಅಂದಾಜು ಸಿದ್ಧಪಡಿಸುವಲ್ಲಿ ವಿಫಲವಾಗುತ್ತಿರುತ್ತದೆ. ಆದ್ದರಿಂದ ವಿಶ್ವವಿದ್ಯಾನಿಲಯವು ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮವಹಿಸುವಂತೆ ಸೂಚಿಸಿದೆ.

10. ಹಿಂದಿನ ಸಾಲುಗಳ ಆಯವ್ಯಯ ಅಂದಾಜುಗಳ ತುಲನಾತ್ಮಕ ವಿವರಗಳು

	2019–20	2020–21	2021–22	2022–23	2023–24	2024–25
ಸ್ವೀಕೃತಿಗಳು	58,97,63,000	184,11,58,847	106,03,61,882	150,50,20,500	148,39,87,000	167,85,61,000
ಪಾವತಿಗಳು	79,50,61,000	197,76,51,765	112,18,90,302	208,71,88,001	245,41,35,002	238,79,90,000

ವಿಶ್ವವಿದ್ಯಾನಿಲಯದ ಹಿಂದಿನ ಸಾಲುಗಳ ಆಯವ್ಯಯ ಅಂದಾಜುಗಳನ್ನು ಪರಿಶೀಲಿಸಿದಾಗ 2022–23ನೇ ಸಾಲಿನಿಂದ ಸ್ವೀಕೃತಿಯಲ್ಲಿ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿರುವುದನ್ನು ಹಾಗೂ 2023–24ನೇ ಸಾಲಿಗೆ ಹೋಲಿಕೆ ಮಾಡಿದಾಗ 2024–25ನೇ ಸಾಲಿನಲ್ಲಿ ಭರಿಸುವ ಮೊತ್ತದಲ್ಲಿ ಅಲ್ಪ ಪ್ರಮಾಣದಲ್ಲಿ ಇಳಿಕೆಯಾಗಿರುವುದನ್ನು ಕೆಳಗಿನ ತುಲನಾತ್ಮಕ ನಕ್ಷೆಯಲ್ಲಿ ಗಮನಿಸಬಹುದಾಗಿದೆ.



11. ಪರೀಕ್ಷಾ ವಿಭಾಗದ ನಗದು ಪುಸ್ತಕದಲ್ಲಿ ಋಣಾತ್ಮಕ ಶಿಲ್ಕು ನಿರ್ವಹಿಸುತ್ತಿರುವುದು:

(ವಿಚಾರಣಾ ಪತ್ರ ಸಂಖ್ಯೆ:26/ದಿ:03.07.2025 & 89/ದಿ:14.08.2025)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪರೀಕ್ಷಾ ಖಾತೆ (exam account) ಖಾತೆ ಸಂಖ್ಯೆ:54035420128ರ ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿ ಈ ಕೆಳಗೆ ವಿವರಿಸಿರುವಂತೆ ಸ್ವೀಕೃತಿ ರೂ.46,06,73,296/-ಗಳನ್ನು ದಿನಾಂಕ:31.03.2025ರ ಅಂತ್ಯಕ್ಕೆ ಪಾವತಿ ರೂ.46,43,97,362/-ಗಳನ್ನು ಭರಿಸಲಾಗಿದೆ. ಸ್ವೀಕೃತಿಗಿಂತ ಪಾವತಿಯಲ್ಲಿ ರೂ.(–)37,24,066/- ಗಳನ್ನು ಹೆಚ್ಚಿ ಭರಿಸಲಾಗಿರುವುದು ಕಂಡು ಬಂದಿದೆ. ಕರ್ನಾಟಕ ಆರ್ಥಿಕ ಸಂಹಿತೆ 1958 ಪುಟ್ಟಣ್ಣಯ್ಯ ನಗದು ಪುಸ್ತಕದಲ್ಲಿ ಹಣ ಲಭ್ಯವಿಲ್ಲದಿದ್ದರು ಪಾವತಿ ಮಾಡಿರುವುದಕ್ಕೆ ಸ್ಪಷ್ಟನೆ ನೀಡಲು ವಿಚಾರಣಾ ಪತ್ರ ಸಂಖ್ಯೆ:26/ದಿ:03.07.2025& 89/ದಿ:14.08.2025 ನ್ನು ನೀಡಲಾಗಿದೆ.

ವಿವರ	ಮೊತ್ತ ರೂ.ಗಳಲ್ಲಿ
01.04.2024ರಲ್ಲಿ ಆರಂಭಿಕ ಶಿಲ್ಕು	2,02,05,922
ಸ್ವೀಕೃತಿ	44,04,67,374

ಒಟ್ಟು ಸ್ವೀಕೃತಿ	46,06,73,296
ವೆಚ್ಚ	46,43,97,362
31.03.2025ರ ಅಂತ್ಯಕ್ಕೆ ಅಂತಿಮ ಶಿಲ್ಕು	(–)37,24,066

ಅದಕ್ಕೆ ವಿಶ್ವವಿದ್ಯಾನಿಲಯದವರು ಪರೀಕ್ಷಾ ಖಾತೆ ಎಸ್.ಬಿ.ಐ ಸಂಖ್ಯೆ:54035420128 ಯಿಂದ ದಿನಾಂಕ:25.03.2025 ರಂದು ರೂ.150,00.000/–ಗಳನ್ನು ವರ್ಗಾಯಿಸಲು ಬ್ಯಾಂಕ್‌ಗೆ ಧನಾದೇಶ ನೀಡಲಾಗಿದ್ದು, ಬ್ಯಾಂಕನಲ್ಲಿ ದಿನಾಂಕ:02.04.2025 ರಲ್ಲಿ ಜಮೆ ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ವೆಚ್ಚ ಭರಿಸುವ ಮುನ್ನ ಬ್ಯಾಂಕಲ್ಲಿ ಹಣ ಲಭ್ಯತೆ ಖಚಿತ ಪಡಿಸಿಕೊಂಡು ವೆಚ್ಚಕ್ಕೆ ಕ್ರಮವಹಿಸಲು ಸೂಚಿಸಲಾಗಿದೆ.

12. ಸರಕಾರವು ಹೊರಡಿಸಿರುವ ಸುತ್ತೋಲೆ ನಿಯಮಗಳನ್ನು ಪಾಲಿಸದೆ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮತ್ತು ಹಿಂತೆಗೆತಗಳನ್ನು ಮಾಡಿರುವುದು: (ವಿಚಾರಣಾ ಪತ್ರ ಸಂಖ್ಯೆ:122/ದಿ:16.09.2025)

ಸರ್ಕಾರವು ಹೂಡಿಕೆಗೆ ಸಂಬಂಧಿಸಿದಂತೆ ಹೊರಡಿಸಿರುವ ಸುತ್ತೋಲೆ ಸಂಖ್ಯೆ FD 91 TAR 2022 ಬೆಂಗಳೂರು ದಿನಾಂಕ:02.07.2022 ರಂತೆ ಸರಕಾರದ ಎಲ್ಲಾ ಇಲಾಖೆಗಳು, ನಿಗಮ–ಮಂಡಳಿಗಳು, ಸ್ಥಳೀಯ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಹಾಗೂ ಸರಕಾರದ ಅಧೀನದಲ್ಲಿರುವ ಎಲ್ಲಾ ಸಂಸ್ಥೆಗಳು ಹೂಡಿಕೆ ಮಾಡುವ ಸಂದರ್ಭದಲ್ಲಿ ಸದರಿ ಸುತ್ತೋಲೆಗಳ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ ಹೂಡಿಕೆ ಮಾಡಬೇಕಾಗಿರುತ್ತದೆ.

2024–25 ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ನಿಶ್ಚಿತ ಅವಧಿ ಠೇವಣಿ ಹೂಡಿಕೆಯ ರಶೀದಿಗಳು ಹಾಗೂ ಠೇವಣಿ ತಃಪ್ತೆಗಳನ್ನು ಪರಿಶೀಲಿಸಲಾಗಿ, ಸದರಿ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ, ಕಾರ್ಪಸ್ ನಿಧಿ, ಪರೀಕ್ಷಾ ನಿಧಿ, ಪಿಂಚಣಿ ನಿಧಿ, ಎಸ್.ಡಿ/ಇ.ಎಂ.ಡಿ ನಿಧಿ, ದತ್ತಿ ನಿಧಿ ಹಾಗೂ ವಿವಿಧ ಪೀಠಗಳ ಹೆಚ್ಚುವರಿ ನಿಧಿಯನ್ನು ಕಮರ್ಷಿಯಲ್ ಬ್ಯಾಂಕುಗಳಾದ ಸಾರ್ವಜನಿಕ ವಲಯದ State Bank Of India, ಖಾಸಗೀ ವಲಯದ ICICI, HDFC, ಸಣ್ಣ ಹಣಕಾಸು ಬ್ಯಾಂಕ್ Fincare (AU), ಮತ್ತು ಪ್ರಾಯೋಜಿತ Karnataka Grameena Bank ಗಳಲ್ಲಿ ಒಟ್ಟು ರೂ.514.20/–ಕೋಟಿ (ಸದರಿ ಸಾಲಿನಲ್ಲಿ ಹೊಸ ಹೂಡಿಕೆ ರೂ.65.73/– ಕೋಟಿಗಳು ಹಾಗೂ ಮರು ಹೂಡಿಕೆ/ನವೀಕರಿಸಲಾದ ರೂ.448.47/–ಕೋಟಿ) ಗಳಷ್ಟು ಮೊತ್ತವನ್ನು ನಿಶ್ಚಿತ ಅವಧಿ ಠೇವಣಿಗಳಲ್ಲಿ ಹೂಡಿಕೆ ಮಾಡಲಾಗಿದ್ದು, ವಿವರಗಳನ್ನು ಈ ಕೂಡ ಲಗತ್ತಿಸಿರುವ ಅನುಬಂಧ–3 & 3ಎ ರಲ್ಲಿ ನೀಡಿದೆ. ಈ ಹೂಡಿಕೆಗಳಲ್ಲಿ ಒಂದು ಕೋಟಿ ರೂಪಾಯಿಗೂ ಮೀರಿದ ಘಟಕಗಳಲ್ಲಿ ಹೂಡಿಕೆ ಮಾಡಿರುವುದನ್ನು ಹಾಗೂ ಖಾಸಗಿ ಹಣಕಾಸು ಸಂಸ್ಥೆಗಳಲ್ಲಿ ನಿಶ್ಚಿತ ಠೇವಣಿಯಲ್ಲಿ ತೊಡಗಿಸಿರುವುದನ್ನು ಕೂಡ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಈ ಸಂಬಂಧ ಹೂಡಿಕೆಗಳಲ್ಲಿ ನ್ಯೂನತೆಗಳಿಗೆ ವಿವರಣೆ ನೀಡಲು ವಿಚಾರಣಾ ಪತ್ರ ಸಂಖ್ಯೆ:122/ದಿ:16.09.2025ರಲ್ಲಿ ಕೋರಲಾಗಿ, ವಿಶ್ವವಿದ್ಯಾನಿಲಯದವರು ಕೆಳಗಿನ ಅಂಶಗಳಿಗೆ ಅನುಪಾಲನಾ ವರದಿ ಸಲ್ಲಿಸಿರುತ್ತಾರೆ.

ಅ) ನಿಶ್ಚಿತ ಠೇವಣಿಗಳಲ್ಲಿ ಸಂಬಂಧಿಸಿದಂತೆ ಕ್ರೋಢೀಕೃತ ಠೇವಣಿ ವಹಿ/ನಿಗಾವಹಿ ಹಾಗೂ ಬ್ಯಾಂಕ್ ಹೂಡಿಕೆ ದೃಢೀಕರಣ ಪತ್ರಗಳನ್ನು ಹಾಗೂ 2024–25 ಸಾಲಿನ ಆದಾಯ ತೆರಿಗೆ ನಮೂನೆ 26 ಎ.ಎಸ್. ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾಗಿದೆ.

ಆ) ಉಳಿದಂತೆ ಸರ್ಕಾರದ ಮಾರ್ಗಸೂಚಿಗಳನುಸಾರ ರೂ.100.00ಲಕ್ಷ ಮೀರಿದ ಹೂಡಿಕೆಗಳಿಗೆ ವಿದ್ಯುನ್ಮಾನ ಸಂಗ್ರಹಣಾ ವೇದಿಕೆಯಲ್ಲಿ ಇ–ಬಿಡ್ ಮುಖಾಂತರ ಬ್ಯಾಂಕುಗಳಿಂದ ಬಡ್ಡಿ ದರ ಆಹ್ವಾನಿಸಬೇಕಾಗಿರುತ್ತದೆ. ಆದರೇ, ವಿಶ್ವವಿದ್ಯಾನಿಲಯವು ರೂ.100.00ಲಕ್ಷ ಮೀರಿದ ಒಟ್ಟು ರೂ.448.47/– ಕೋಟಿಗಳಿಗೆ ಹಾಗೂ ರೂ.100.00 ಲಕ್ಷದೊಳಗಿನ ಒಟ್ಟು ರೂ.65.73/– ಲಕ್ಷಗಳಿಗೆ ಮೊತ್ತಕ್ಕೆ ಸ್ಪರ್ಧಾತ್ಮಕ ದರಪಟ್ಟಿ ಕರೆದು ಹೂಡಿಕೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಹಾಗೂ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡುವುದಕ್ಕೆ ಹಣಕಾಸು ಸಮಿತಿ ಹಾಗೂ ವ್ಯಸ್ಥಾಪನಾ ಮಂಡಳಿಯಲ್ಲಿ ಅನುಮೋದನೆ ಪಡೆಯಬೇಕಾಗಿದ್ದು, ಕುಲಪತಿಯವರ ಸೂಚನೆ ಮೇರೆಗೆ ಹೂಡಿಕೆಗಳನ್ನು ಮಾಡಲಾಗಿದೆ.

ಹೂಡಿಕೆ ಮಾಡುವಾಗ ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸುತ್ತಿರುವ ಬಗ್ಗೆ ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ಆಕ್ಷೇಪಿಸಿ. ಸರ್ಕಾರದ ನಿರ್ದೇಶನಗಳನುಸಾರ ಹೂಡಿಕೆ ಮಾಡಲು ಸೂಚಿಸಲಾಗಿದ್ದರೂ ಸಹ ವಿಶ್ವವಿದ್ಯಾನಿಲಯದ ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳು ಹೂಡಿಕೆ ಸಂಬಂಧದ ಸರ್ಕಾರದ ಮಾರ್ಗಸೂಚಿಗಳನ್ನು ಹಣಕಾಸು ಸಮಿತಿ ಹಾಗೂ ವ್ಯವಸ್ಥಾಪನಾ ಮಂಡಳಿಯ ಗಮನಕ್ಕೆ ತರದೆಯೇ ಮನಸೋ ಇಚ್ಛೆ ಹೂಡಿಕೆ ಮಾಡುವ. ಪಕ್ವತಾವಧಿಗೂ ಮುನ್ನ ಹಿಂಪಡೆಯುವ ಮೂಲಕ ಸರ್ಕಾರದ ನಿರ್ದೇಶನಗಳನ್ನು ಉಲ್ಲಂಘಿಸುವುದನ್ನು ಮುಂದುವರಿಸಿರುತ್ತಾರೆ. ಹೀಗಾಗಿ ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ವಿಶ್ವವಿದ್ಯಾನಿಲಯಕ್ಕೆ ನಷ್ಟವುಂಟು ಮಾಡಿರುವ ಕುಲಪತಿ. ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳ ವಿರುದ್ಧ ಸೂಕ್ತ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ.

13. ಪಕ್ವವಾಗಿರುವ ಠೇವಣಿಗಳನ್ನು ವಿಳಂಬವಾಗಿ ಮರು ಹೂಡಿಕೆ ಮಾಡಿ ಬಡ್ಡಿ ನಷ್ಟವುಂಟಾಗಿರುವುದು:

(ವಿಚಾರಣಾ ಪತ್ರ ಸಂಖ್ಯೆ:142/ದಿ:26.09.2025)

ಅ) ವಿಶ್ವವಿದ್ಯಾನಿಲಯದ ನಿಶ್ಚಿತ ಠೇವಣಿಗಳ ಮರುಹೂಡಿಕೆ ಹಾಗೂ ನವೀಕರಿಸಿರುವ ಠೇವಣಿಗಳ ತಃಖ್ತೆಗಳನ್ನು ಪರಿಶೀಲಿಸಲಾಗಿ ಕೆಳಕಂಡ ಠೇವಣಿಗಳನ್ನು ವಿಳಂಬವಾಗಿ ಮರುಹೂಡಿಕೆ ಮಾಡಿರುವುದು ಕಂಡುಬಂದಿದೆ.

ಎಸ್.ಬಿ.ಐ ನಲ್ಲಿ ಹೂಡಿಕೆ ಮಾಡಲಾದ ಕಾರ್ಪಸ್ ನಿಧಿಯ ಠೇವಣಿ ಸಂಖ್ಯೆ:42801872016 ಹಾಗೂ 42806550832ನ್ನು ದಿನಾಂಕ:15.03.2024 ರಿಂದ 15.03.2025ಕ್ಕೆ ಕ್ರಮವಾಗಿ ರೂ.100,00,00,000/– ಮತ್ತು ರೂ.150,00,00,000/– ಗಳನ್ನು ಒಟ್ಟು ರೂ.250,00,00,000/–ಗಳು (ಐರವ ನೂರ ಐವತ್ತು ಕೋಟಿ) ಪಕ್ವವಾಗಿರುತ್ತದೆ. ಮುಂದಿನ ಅವಧಿಗೆ ನವೀಕರಿಸಿರುವುದಿಲ್ಲ.

ಎಸ್.ಬಿ.ಐ ನಲ್ಲಿ ಹೂಡಿಕೆ ಮಾಡಲಾದ ಪಿಂಚಣಿ ಖಾತೆಯ ಠೇವಣಿ ಸಂಖ್ಯೆ:43977200250, ದಿನಾಂಕ:15.03.2024 ರಿಂದ 15.03.2025ಕ್ಕೆ ರೂ.100,00,00,000/–(ನೂರು ಕೋಟಿ) ಪಕ್ವವಾಗಿರುತ್ತದೆ. ಮುಂದಿನ ಅವಧಿಗೆ ನವೀಕರಿಸಿರುವುದಿಲ್ಲ.

ಮೇಲೆ ವಿವರಿಸಿರುವ ಮೂರು ಠೇವಣಿಗಳು ದಿನಾಂಕ:15.03.2025 ರಂದು ಪಕ್ವಗೊಂಡಿದ್ದು ವಿಶ್ವವಿದ್ಯಾನಿಲಯದ ಖಾತೆಗೆ ವರ್ಗಾಯಿಸಿ ಮರು ಹೂಡಿಕೆಗೆ ಕ್ರಮವಹಿಸಬೇಕಿದ್ದು, ದಿನಾಂಕ:05.04.2025 ರಂದು ವಿಶ್ವವಿದ್ಯಾನಿಲಯದ ಬ್ಯಾಂಕ್ ಖಾತೆಗೆ ಜಮ ಮಾಡಿರುವುದರಿಂದ. ವಿಳಂಬದ 20 ದಿನಗಳಿಗೆ ಉಳಿತಾಯ ಬಡ್ಡಿ ಶೇ.3.0 ರಂತೆ ವಿಶ್ವವಿದ್ಯಾನಿಲಯದ ಉಳಿತಾಯ ಖಾತೆಗೆ ಬಡ್ಡಿ ಮೊತ್ತ ರೂ.60,41,095/– ಜಮೆ ಮಾಡಲಾಗಿದೆ. ಈ ಕೆಳಗೆ ವಿವರಿಸಿರುವಂತೆ ಠೇವಣಿ ಬಡ್ಡಿ ದರ ಶೇ.7.6 ರಂತೆ ಮರು ಹೂಡಿಕೆ ಮಾಡಿದ್ದಲ್ಲಿ ವಿಳಂಬದ 20 ದಿನಗಳಿಗೆ ರೂ.88,21,918/– ಗಳಷ್ಟು ಬಡ್ಡಿ ನಷ್ಟವಾಗಿರುತ್ತದೆ.

FDR No	Amount in Rs.	No. OF Days	Interest to be Paid For 20 Days ಶೇ.7.6%	Interest Paid For 20 Days ಶೇ.3%	Interest Paid For 20 Days ಶೇ.2%	Short Payment Of Interest
42801872016	1,00,00,00,000	20	41,64,384	1,726,027	40,27,397	45,06,850
42806550832	150,00,00,000	20	62,46,575	2,589,041		
42801944606	1,000,000,000	20	41,64,384	1,726,027		
		Total Rs.	1,45,75,342	60,41,095		

ಆ) ಮುಕ್ತ ಸಂಜೀವಿನಿ ಅಡಿ ರೂ.5,00,00,000/– (ರೂ. ಐದು ಕೋಟಿಗಳು ಮಾತ್ರ) ಗಳನ್ನು ಎಸ್.ಬಿ.ಐನಲ್ಲಿ ಹೂಡಿಕೆ ಮಾಡಿ (ಠೇವಣಿ ಖಾತೆ ಸಂಖ್ಯೆ:43395944857) ದಿನಾಂಕ:05.08.2023 ರಿಂದ 05.08.2024ಕ್ಕೆ ಪಕ್ವವಾಗಬೇಕಿದ್ದು, ಸದರಿ ಠೇವಣಿಯನ್ನು ಮುಂದಿನ ಅವಧಿಗೆ ನವೀಕರಿಸದೇ ದಿನಾಂಕ:09.09.2024ರಂದು ಮುಕ್ತಾಯಗೊಳಿಸಿ, ದಿನಾಂಕ:30.09.2024 ರಂದು ಮರು ಹೂಡಿಕೆ ಮಾಡಲಾಗಿದೆ.

ಮರು ಹೂಡಿಕೆಯು 55 ದಿನಗಳು ವಿಳಂಬವಾಗಿದ್ದು, ಈ ಕೆಳಗೆ ವಿವರಿಸಿರುವಂತೆ ಮರು ಹೂಡಿಕೆ ಮಾಡಿದ್ದಲ್ಲಿ ಕನಿಷ್ಟ ಹಿಂದಿನ ಠೇವಣಿ ಬಡ್ಡಿ ದರ ಶೇ.7.6 ರಂತೆ ವಿಳಂಬವಾಗಿರುವ 55 ದಿನಗಳಿಗೆ ರೂ.5,72,603/– ಗಳಷ್ಟು ಬಡ್ಡಿ ನಷ್ಟವಾಗಿರುತ್ತದೆ.

FDR No	Amount	NO OF Days	Interest to be Paid For 55 Days @7.6%	Short Payment Of Interest
42801944606	50,000,000	55	5,72,603	5,72,603

ಮೇಲಿನ ವಿವರಿಸಿರುವ ಎರಡು ಕಂಡಿಕೆಗಳಿಗೆ ಸೂಕ್ತ ವಿವರಣೆ ಕೋರಿ ವಿಚಾರಣಾ ಪತ್ರ ಸಂಖ್ಯೆ:142/ದಿ:26.09.2025 ನ್ನು ನೀಡಲಾಗಿತ್ತು. ಅದಕ್ಕೆ ವಿಶ್ವವಿದ್ಯಾನಿಲಯವು (ಅ) ರಲ್ಲಿ ಕೋರಿರುವ ಠೇವಣಿಗಳಿಗೆ ಮಾತ್ರ ಪ್ರತಿಕ್ರಿಯಿಸಿ ಎಸ್.ಬಿ.ಐ ವ್ಯವಸ್ಥಾಪಕರ ಪತ್ರ ಸಂಖ್ಯೆ ದಿನಾಂಕ:28.10.25 ರಲ್ಲಿ ರೂ.350,00,00,000 ಗಳಿಗೆ ವಿಳಂಬದ 20 ದಿನಗಳಿಗೆ ಶೇ.5.25 ರಂತೆ ರೂ.1,00,68,492/– ಬಡ್ಡಿ ಪಾವತಿಸಬೇಕಿದ್ದು, ಶೇ.3% ರಂತೆ ರೂ.60,41,095/– ಈಗಾಗಲೆ ಜಮೆ ಮಾಡಲಾಗಿದೆ. ದಿನಾಂಕ:28.8.25ರಂದು ಶೇ.2.0% ರಂತೆ ವ್ಯತ್ಯಾಸದ ಬಡ್ಡಿ ರೂ.40,27,397/–ಗಳನ್ನು ಸಾಮಾನ್ಯ ನಿಧಿ ಖಾತೆ ಸಂಖ್ಯೆ:54035420117 ಗೆ ಜಮಾ ಮಾಡಲಾಗಿದೆ ಎಂದು ತಿಳಿಸಿರುವ ಪತ್ರವನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುತ್ತಾರೆ. ಆದರೇ, ಬ್ಯಾಂಕ್‌ನವರು ವಿಳಂಬದ 20 ದಿನಗಳಿಗೆ ನಿಶ್ಚಿತ ಠೇವಣಿ ಬಡ್ಡಿ ಶೇ.7.6 ರಂತೆ ಒಟ್ಟು ರೂ.1,45,75,342/– ಗಳನ್ನು ಬಡ್ಡಿ ಪಾವತಿಸಬೇಕಾಗಿದ್ದು ಈಗಾಗಲೇ ರೂ.1,00,68,492/– ಗಳನ್ನು ಪಾವತಿಸಿದ್ದು ಉಳಿಕೆ ಮೊತ್ತ ರೂ.45,06,850/– ಗಳನ್ನು ಬ್ಯಾಂಕ್‌ನಿಂದ 20 ವಿಳಂಬದ ದಿನಗಳಿಗೆ ಬಡ್ಡಿ ಪಡೆಯಬೇಕಾಗಿರುತ್ತದೆ. ಹಾಗೂ (ಅ) ರಲ್ಲಿ ಕೋರಿರುವ ಠೇವಣಿಯಲ್ಲಿ ವಿಳಂಬದ 55 ದಿನಗಳ ಬಡ್ಡಿ ಮೊತ್ತ ರೂ.5,72,603/– ಒಟ್ಟು **ರೂ.50,79,453/–** ಸಂಬಂಧಪಟ್ಟ ಬ್ಯಾಂಕನವರೊಂದಿಗೆ ಪತ್ರ ವ್ಯವಹಾರ ಮಾಡಿ ಬಡ್ಡಿ ಮೊತ್ತ **ವಸೂಲಿಸಲು** ಸೂಚಿಸಿದೆ.

14. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡದೇ ಸಣ್ಣ ಹಣಕಾಸು ಬ್ಯಾಂಕಿನಲ್ಲಿ ಹೂಡಿಕೆ ಮಾಡಿ ಬಡ್ಡಿ ನಷ್ಟ ಉಂಟಾಗಿರುವುದು: (ವಿಚಾರಣಾ ಪತ್ರ ಸಂಖ್ಯೆ:132/ದಿ:24.09.2025)

ಸರ್ಕಾರ ಹೊರಡಿಸಿರುವ ಸುತ್ತೋಲೆ ಸಂಖ್ಯೆ:FD 91 TAR 2022, ದಿನಾಂಕ:02.07.2022 ರಂತೆ ಸರ್ಕಾರದ ಎಲ್ಲಾ ಇಲಾಖೆಗಳು, ನಿಗಮ–ಮಂಡಳಿಗಳು, ಸ್ಥಳೀಯ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಹಾಗೂ ಸರ್ಕಾರದ ಅಧೀನದಲ್ಲಿರುವ ಎಲ್ಲಾ ಸಂಸ್ಥೆಗಳು ಹೂಡಿಕೆ ಮಾಡುವ ಸಂದರ್ಭದಲ್ಲಿ ಸದರಿ ಸುತ್ತೋಲೆಗಳ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ ಹೂಡಿಕೆ ಮಾಡಬೇಕಾಗಿರುತ್ತದೆ.

ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ನಿಶ್ಚಿತ ಠೇವಣಿಯ ರಶೀದಿಗಳು ಹಾಗೂ ತಃಖ್ತೆಗಳನ್ನು ಪರಿಶೀಲಿಸಲಾಗಿ ಸದರಿ ಸಾಲಿನಲ್ಲಿ ಪರೀಕ್ಷೆ ಖಾತೆಯಿಂದ ರೂ.1.00/– ಕೋಟಿ (ಒಂದು ಕೋಟಿಗಳನ್ನು) ಹಾಗೂ 2023–24ನೇ ಸಾಲಿನಲ್ಲಿ ರೂ.1.00/–ಕೋಟಿಗಳನ್ನು Fincare Small Finance Bank Ltd., ನಲ್ಲಿನ ಹೂಡಿಕೆಗಳು ದಿನಾಂಕ:07.11.2024 ರಂದು ಪಕ್ವಗೊಂಡಿದ್ದು ಸದರಿ ರೂ.2.00/– ಕೋಟಿಗಳನ್ನು AU Small Finance Bank ltd., ನಲ್ಲಿ ದಿನಾಂಕ:27.11.2024 ರಂದು ಹೂಡಿಕೆ ಮಾಡಲಾಗಿದೆ. Fincare Small Finance Bank Ltd., ನಲ್ಲಿ ಹೂಡಿಕೆ ಮಾಡಲಾದ ರೂ.1.00/–ಕೋಟಿಗಳಿಗೆ ದಿನಾಂಕ:07.11.2024 ರಿಂದ 27.11.2024 ವರೆಗೆ ವಿಳಂಬವಾಗಿ ಹೂಡಿಕೆ ಮಾಡಲಾಗಿದೆ. ಹೀಗೆ ವಿಳಂಬದ 19 ದಿನಗಳಿಗೆ ಈ ಕೆಳಗಿನಂತೆ ಬಡ್ಡಿ ಮೊತ್ತ ರೂ.41,384/– ಗಳು ನಷ್ಟವಾಗಿರುವ ಬಗ್ಗೆ ಹಾಗೂ ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಸಣ್ಣ ಹಣಕಾಸು ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿ ತೊಡಗಿಸಿರುವುದಕ್ಕೆ ವಿವರಣೆ ನೀಡಲು ವಿಚಾರಣಾ ಪತ್ರ ಸಂಖ್ಯೆ:132/ದಿ:24.09.2025 ರಲ್ಲಿ ಕೋರಲಾಗಿದೆ. ವಿವರಣೆ ನೀಡುವುದು. ಅನುಪಾಲನ ವರದಿಯಲ್ಲಿ 20 ದಿನಗಳ ಅವಧಿಗೆ ಬಡ್ಡಿ ಮೊತ್ತವನ್ನು ಪಡೆಯಲು ಕ್ರಮವಹಿಸಲಾಗಿದೆ ಎಂದು ಭಾಗಶಃ ಉತ್ತರ ನೀಡಲಾಗಿದೆ.

FDR No &bank name	Amount	No.OF Days	Interest to be Paid For 19 Days @7.95%	Delay in reinvest	Short Payment Of Interest
AU Small finance bank Ltd 2403415533072173/1	10000000	20	41384/-	Matured on7.11.2025 renwal on27.11.2025	41384/-

ಕಾರಣ ವಿಳಂಬದ 19 ದಿನಗಳಿಗೆ ಬಡ್ಡಿ ಮೊತ್ತ **ರೂ.41,384/-** ಗಳನ್ನು ಸಂಬಂಧಪಟ್ಟ ಬ್ಯಾಂಕನವರೊಂದಿಗೆ ಪತ್ರ ವ್ಯವಹಾರ ಮಾಡಿ ಬಡ್ಡಿ ಮೊತ್ತ **ವಸೂಲಿಸಲು** ಹಾಗೂ ಸರ್ಕಾರದ ಮಾರ್ಗಸೂಚಿಗಳಂತೆ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡಲು ಸೂಚಿಸಿದೆ.

15. **ವಿಶ್ವವಿದ್ಯಾನಿಲಯದ ಪಾನ್ ಸಂಖ್ಯೆ:AAAGK005IJ ಯಲ್ಲಿ ಬಾಹ್ಯ ಸಂಸ್ಥೆಗಳಿಂದ ತೆರಿಗೆ ಸಂಗ್ರಹಿಸಿರುವುದು (TCS): (ವಿಚಾರಣಾ ಪತ್ರ ಸಂಖ್ಯೆ:152/ದಿ:04.10.2025, & 197/ದಿ:07.11.2025)**

ವಿಶ್ವವಿದ್ಯಾನಿಲಯಕ್ಕೆ ವಿವಿಧ ಆದಾಯ ಮೂಲಗಳಾದ ಬಾಡಿಗೆಗಳು, ನಿಶ್ಚಿತ ಠೇವಣಿಗಳು, ಬಾಹ್ಯ ಸಂಸ್ಥೆಗಳಿಂದ ಅನುದಾನ ಪಡುಗಡೆ ಮೊತ್ತಗಳಲ್ಲಿ ವಿಶ್ವವಿದ್ಯಾನಿಲಯದ PANಸಂಖ್ಯೆ: AAAGK005IJ ಯಲ್ಲಿ ತೆರಿಗೆಯನ್ನು ಸಂಗ್ರಹಿಸಲಾಗಿದೆ (TCS). ಹೀಗೆ ತೆರಿಗೆ ಸಂಗ್ರಹಣೆ ಮಾಡಿರುವುದಕ್ಕೆ ಆದಾಯ ತೆರಿಗೆ ನಮೂನೆ 26 AS ಪರಿಶೀಲಿಸಿದಾಗ ಈ ಕೆಳಗಿನ ಬಾಹ್ಯ ಸಂಸ್ಥೆಗಳಿಂದ – ಆದಾಯ ತೆರಿಗೆಯನ್ನು ವಿಶ್ವವಿದ್ಯಾನಿಲಯದ PANಸಂಖ್ಯೆ: AAAGK005IJ ಲ್ಲಿ ಸಂಗ್ರಹಿಸಿರುವುದು ಗಮನಿಸಲಾಗಿದೆ.

1. BIJAPUR CO-OP MILK PRODUCERS. SOCIETIES UNION LTD. PAN-BLRB01991D Rs.450000/- Total Tax Deducted Rs.45000/-

2.THE MYSORE & CH NAGAR DIST CO OPERATIVE CENTRAL BANK LTD APMC YARD BRANCH PAN-BLRT11555FRs.861020/- Total Tax Deducted Rs.86102/-

3. RAICHUR BELLARY & KOPPAL MILK UNION LTD PAN-BLRR04041C Rs.779500/- Total Tax Deducted Rs.15590/-

4. BIG C TECHNOLOGIES PRIVATE LIMITED PAN-BLRBI0675A Rs.11391256/- Total Tax Deducted Rs.11391/-

ಈ ಮೇಲೆ ವಿವರಿಸಿರುವ ನಾಲ್ಕು ಬಾಹ್ಯ ಸಂಸ್ಥೆಗಳಿಂದ ಸ್ವೀಕರಿಸಲಾದ ಮೊತ್ತಕ್ಕೆ ವಿಶ್ವವಿದ್ಯಾನಿಲಯದ ಯಾವ ಬ್ಯಾಂಕ್ ಖಾತೆಗೆ ಜಮೆಯಾಗಿರುತ್ತದೆ ಹಾಗೂ ಜಮೆಯಾಗಿರುವ ಮೊತ್ತದಲ್ಲಿ ವೆಚ್ಚ ಭರಿಸಿರುವ ಪೂರ್ಣ ಕಡತಗಳೊಂದಿಗೆ ನಗದು ಪುಸ್ತಕ ಹಾಗೂ ಬ್ಯಾಂಕ್ ಪಾಸ್ ಪುಸ್ತಕ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ವಿಚಾರಣಾ ಪತ್ರ ಸಂಖ್ಯೆ:152/ದಿ:04.10.2025 ರಲ್ಲಿ ಕೋರಲಾಗಿತ್ತು.

ಅದಕ್ಕೆ ಕುಲಸಚಿವರು (ಮೌಲ್ಯಮಾಪನ) ಇವರು ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ ಬಳ್ಳಾರಿ, ಸಂಸ್ಥೆಯ ಖಾಲಿ ಹುದ್ದೆಗಳಿಗೆ ನೇಮಕಾತಿಯ ಪರೀಕ್ಷೆ ಪ್ರಕ್ರಿಯೆ ನಡೆಸಲು ನೀಡಿರುವ ಅನುದಾನ ರೂ.7,79,500/- ಗಳಿಗೆ ಮಾತ್ರ ಕಡತವನ್ನು ಹಾಜರುಪಡಿಸಿದ್ದು, ಹಾಗೂ ಉಳಿದ ಮೂರು ಬಾಹ್ಯ ಸಂಸ್ಥೆಗಳೊಡನೆ ವ್ಯವರಿಸಲಾಗಿರುವ ಮಾಹಿತಿ ಲಭ್ಯವಿರುವುದಿಲ್ಲ ಎಂದು ಹಾಗೂ ನಗದು ಪುಸ್ತಕ ಹಾಗೂ ಕಡತಗಳು ನಿರ್ವಹಿಸಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

ಮೇಲೆ ವಿವರಿಸಿರುವ ಸಂಸ್ಥೆಯ ಕಡತ ಪರಿಶೀಲಿಸಿದಾಗ, ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವರು (ಮೌಲ್ಯಮಾಪನ) ಇವರು ವ್ಯವಸ್ಥಾಪಕ ನಿರ್ದೇಶಕರು, ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ ಬಳ್ಳಾರಿ ಈ ಸಂಸ್ಥೆಯಲ್ಲಿ ಖಾಲಿ ಇರುವ ವಿವಿಧ ವೃಂದದ 60 ಹುದ್ದೆಗಳಿಗೆ ನೇಮಕಾತಿ ಕೋರಿ ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯಾರ್ಥಿಗಳಿಗೆ ಲಿಖಿತ ಪರೀಕ್ಷೆ ಏರ್ಪಡಿಸುವ ಸಂಬಂಧ ದಿನಾಂಕ:13.12.2023 ರಂದು ಕಾರ್ಯಾದೇಶ ನೀಡಿ, ದಿನಾಂಕ:15.12.2023 ರಂದು ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ.

ಕರಾರು ಪತ್ರವನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳಿಗೆ ವಿವರಣೆ ನೀಡಲು ವಿಚಾರಣಾ ಪತ್ರ ಸಂಖ್ಯೆ:197/ದಿ:07.11.25.ರಲ್ಲಿ ಕೋರಲಾಗಿತ್ತು.

1. ಕರ್ನಾಟಕ ಸರ್ಕಾರ, ಸಹಾಕಾರ ಇಲಾಖೆ, ಹೊರಡಿಸಿರುವ ಕಾರ್ಯಸೂಚಿಯಂತೆ ನಿಯಮಗಳನ್ನು ಒಳಗೊಂಡಂತೆ ನಿಯಮಾನುಸಾರ ನೇಮಕಾತಿ ಕೈಗೊಳ್ಳಲುಸೂಚಿಸಿದ್ದು, ಅದರಂತೆ ಲಿಖಿತ ಪ್ರಶ್ನೆ ಪತ್ರಿಕೆಗಳನ್ನು ಹಾಗೂ ಓ.ಎಮ್.ಆರ್ Sheets ಗಳನ್ನು ಮುದ್ರಿಸಲು ಕೈಗೊಂಡ ಪ್ರಕ್ರಿಯೆ ಕಡತ ಒದಗಿಸುವುದು. ಲಿಖಿತ ಪರೀಕ್ಷೆಯ ಎಲ್ಲಾ ಅಗತ್ಯ ಕಾರ್ಯಗಳನ್ನು ನಿರ್ವಹಿಸಲು ಪ್ರತಿ ಅಭ್ಯರ್ಥಿಗೆ ರೂ.500/- + 18% ಜಿ.ಎಸ್.ಟಿ ಸೇರಿ ಒಟ್ಟು ರೂ.590/- ದರ ನಿಗದಿಪಡಿಸಲಾಗಿದೆ. ಹಾಗೂ ಪರೀಕ್ಷೆ ನಡೆಸಲು ವಿಶ್ವವಿದ್ಯಾನಿಲಯದ ಆವರಣದಲ್ಲಿ ಇರುವ ಎಲ್ಲಾ ಮೂಲ ಭೂತ ಸೌಕರ್ಯಗಳನ್ನು ಬಳಸಿಕೊಂಡು ಒಟ್ಟು ಪರೀಕ್ಷಾ ವೆಚ್ಚ ರೂ.8,36,191/-ರಲ್ಲಿ ಶೇ.10 ರಷ್ಟು ರೂ.83,619/- ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ ಖಾತೆಗೆ ಜಮೆ ಮಾಡಲಾಗಿದೆ. ಹೀಗೆ ಪರೀಕ್ಷೆ ನಡೆಸಲು ಯಾವ ಮಾನದಂಡಗಳನ್ವಯ ದರಗಳನ್ನು ನಿಗದಿಪಡಿಸಲಾಗಿದೆ.

2. ವಿಶ್ವವಿದ್ಯಾನಿಲಯವು ಒಪ್ಪಂದದ ಪ್ರಕಾರ ಪರೀಕ್ಷೆ ನಡೆಸಿರುವ ವೆಚ್ಚಗಳನ್ನು ಇನ್‌ವಾಯಿಸ್ ಬಿಲ್ಲು ಸಂಖ್ಯೆ:001/02.02.24 ರಲ್ಲಿ ರೂ.9,19,810/- ಗಳಿಗೆ ಬಿಲ್ಲು ಸಿದ್ದಪಡಿಸಿದ್ದು, ರೂ.5,00,000/- ಮುಂಗಡ ಪಾವತಿಸಿದ್ದು, ಬಾಕಿ ಮೊತ್ತ ರೂ.4,19,810/- ಗಳನ್ನು ಪಡೆಯಬೇಕಾಗಿರುತ್ತದೆ. ಆದರೇ, ಬ್ಯಾಂಕ್ ಖಾತೆ ಪರಿಶೀಲಿಸಲಾಗಿ ಬಾಕಿ ಮೊತ್ತ ರೂ.4,19,810/- ಗಳನ್ನು ವಿಶ್ವವಿದ್ಯಾನಿಲಯವು ಸ್ವೀಕರಿಸಿರುವುದಿಲ್ಲ. ಹಾಗೂ ಸದರಿ ಬಿಲ್ಲಿನಲ್ಲಿ GST 18% ರೂ.1,40,310/- ಸಂಬಂಧಪಟ್ಟ ಇಲಾಖೆಗೆ ಜಮೆ ಮಾಡಿರುವ ಚಲನ್ ಹಾಜರುಪಡಿಸಿರುವುದಿಲ್ಲ.

3. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ 1992 ರ ಎರಡನೇ ಅನುಸೂಚಿಯ (4)(ಎ) ಹಣಕಾಸು ಅಧಿಕಾರಿಗಳ ಪರಿನಿಯಮದಂತೆ ವಿಶ್ವವಿದ್ಯಾನಿಲಯದ ನಿಧಿಗಳ ಸಾಮಾನ್ಯ ಮೇಲ್ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ವಿಶ್ವವಿದ್ಯಾನಿಲಯಕ್ಕೆ, ಅದರ ಹಣಕಾಸು ನೀತಿಯ ವಿಷಯದಲ್ಲಿ ಸಲಹೆ ನೀಡತಕ್ಕದ್ದು, ಹಾಗೂ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ.5.ಟಿಎಆರ್2017, ದಿನಾಂಕ:30.01.2017ರ ಭಾಗ-ಎ(III)ರ ಕಂಡಿಕೆ-1 ರನ್ವಯ ವಿಶ್ವವಿದ್ಯಾನಿಲಯವು ತಾನು ನಿರ್ವಹಿಸುತ್ತಿರುವ ಬ್ಯಾಂಕ್ ಖಾತೆಗಳ ವಿವರಗಳನ್ನು ವಿಚಾರಣಾ ಪತ್ರ ಸಂ.3/ದಿ:23-06-2025 ರಲ್ಲಿ ನೀಡಲಾಗಿದೆ. ಆದರೆ ವ್ಯವಸ್ಥಾಪಕ ನಿರ್ದೇಶಕರು, ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ ಬಳ್ಳಾರಿ, ಇವರು ಪರೀಕ್ಷೆ ಕೈಗೊಳ್ಳಲು ನೀಡಿರುವ ಅನುದಾನ ಕುಲಸಚಿವರು (ಮೌಲ್ಯಮಾಪನ) ಇವರ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸಿಕೊಂಡು ವೆಚ್ಚ ಭರಿಸಿರುವುದಕ್ಕೆ ಸೂಕ್ತ ದಾಖಲೆಗಳೊಂದಿಗೆ ವಿವರಣೆ ಕೋರಲಾಗಿತ್ತು.

4. ಸಹಕಾರ ಸಂಘಗಳ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ವಿಶ್ವವಿದ್ಯಾನಿಲಯದಲ್ಲಿ ನಡೆಸಲು ಹಣಕಾಸು ಸಮಿತಿ ಹಾಗೂ ವ್ಯವಸ್ಥಾಪನಾ ಮಂಡಳಿಯಿಂದ ಅನುಮೋದನೆ ಪಡೆದಿರುವ ನಡವಳಿ ಕೋರಿದೆ.

5. ಕುಲಸಚಿವರ (ಮೌಲ್ಯಮಾಪನ) ರವರ ವಿಶ್ವವಿದ್ಯಾನಿಲಯದ ಪರಿನಿಯಮದಂತೆ ಪ್ರತ್ಯಾಯೋಜನೆಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿದೆ.

ಈ ಮೆಲ್ಕಂಡ ಅಂಶಗಳಿಗೆ ವಿಶ್ವವಿದ್ಯಾನಿಲಯದವರು ಯಾವುದೇ ಉತ್ತರ ನೀಡಿರುವುದಿಲ್ಲ.

Name	under IT Sec	TAN	PAN	Total Amount Rs.	TDS	TDS Amount	Amount credited to KSOU
Bijapur Co-operative Milk Producers Societies Union Limited. Bijapur	194JB	BLRBO1991D		4,50,000	10%	45000	4,05,000
The Mysore &Ch Nagara Dist.co-operative Central Bank Ltd APMC Yard Br.	194A	BLRT01555F		8,61,020	10%	86102	7,74,918
RAICHUR BELLARY & KOPPAL MILK UNION LTD Total Tax Deducted Rs.15590/-			PAN-BLRR04041C	7,79,500	2%	15590	763910
Big C Technologies Private Limited Bangalore	206CR	BLRB10675A	AAFCB2235A	113,91,256	0.10%	11391	113,79,864
TOTAL				**134,81,776**			

ಮೇಲಿನ ಅಂಶಗಳಿಗೆ ಸೂಕ್ತ ವಿವರಣೆಗಳೊಂದಿಗೆ ದಾಖಲೆಗಳನ್ನು ಹಾಜರುಪಡಿಸುವವರೆಗೆ **ರೂ.134,81,776/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

16. **ವಿಶ್ವವಿದ್ಯಾನಿಲಯದಲ್ಲಿ ಕುಲಸಚಿವರು (ಪರೀಕ್ಷಾಂಗ) ಇವರು ನಿರ್ವಹಿಸುತ್ತಿರುವ ಉಳಿತಾಯ ಖಾತೆಯ ಪೂರ್ಣ ದಾಖಲಾತಿಗಳನ್ನು ಹಾಜರುಪಡಿಸದಿರುವುದು: (ವಿಚಾರಣಾ ಪತ್ರ ಸಂಖ್ಯೆ:166/ದಿ:15.10.2025)**

2024-25ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿದ್ದ ಎಲ್ಲಾ ಬ್ಯಾಂಕ್ ಖಾತೆಗಳ ವಿವರಗಳನ್ನು ಸರ್ಕಾರದ ಆದೇಶ ಸಂಖ್ಯೆ ಎಫ್ ಡಿ 5 ಟಿಎಆರ್ 2017, ದಿನಾಂಕ:30/01/2017ರ ಭಾಗ-ಎ (III)ರ ಕಂಡಿಕೆ-1 ರನ್ವಯ ವಾರ್ಷಿಕ ಲೆಕ್ಕಗಳಲ್ಲಿ ಅನುಬಂಧ-(ಇ) ರಲ್ಲಿ ಬಹಿರಂಗಗೊಳಿಸಬೇಕಾಗಿರುತ್ತದೆ (Disclosure of Bank Accounts)

ವಿಶ್ವವಿದ್ಯಾನಿಲಯದ ಕುಲಸಚಿವರು (ಪರೀಕ್ಷಾಂಗ) ಇವರ ಪದನಾಮದಡಿ ನಿರ್ವಹಿಸಿರುವ ಎಸ್.ಬಿ.ಐ ಬ್ಯಾಂಕ್ ಖಾತೆ ಸಂಖ್ಯೆ:-54035421393ರಲ್ಲಿ 2024-25 ನೇ ಸಾಲಿನಲ್ಲಿ ಸ್ವೀಕೃತಿ ರೂ.130,70,436/- ಹಾಗೂ ವೆಚ್ಚ ರೂ.131,24,654/-ಗಳನ್ನು ವ್ಯವಹರಿಸಲಾಗಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿ, ಈ ಸಂಬಂಧ ವ್ಯವಹರಣೆಗಳಿಗೆ ದೃಢೀಕರಿಸಿರುವ ನಗದು ಪುಸ್ತಕ ಮತ್ತು ದಾಖಲೆಗಳನ್ನೊಳಗೊಂಡ ಕಡತ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ವಿಚಾರಣಾ ಪತ್ರ ಸಂಖ್ಯೆ:166/ದಿ:15.10.2025ರಲ್ಲಿ ನೀಡಲಾಗಿತ್ತು. ವಿಶ್ವವಿದ್ಯಾನಿಲಯದವರು ದಿನಾಂಕ:01.12.2025 ರಂದು ನೀಡಿರುವ ಅನುಪಾಲನಾ ವರದಿಯಲ್ಲಿ ಸದರಿ ಬ್ಯಾಂಕ್ ಖಾತೆಯ ನಗದು ಪುಸ್ತಕ ಹಾಗೂ ಕಡತಗಳ ನಿರ್ವಹಣೆ ಮಾಡಿರುವುದಿಲ್ಲ ಎಂದು ತಿಳಿಸಿದ್ದು, ಬ್ಯಾಂಕ್ ಸ್ಟೇಟ್‌ಮೆಂಟ್ ಮಾತ್ರ ಹಾಜರುಪಡಿಸಿರುತ್ತಾರೆ. ಸದರಿ ಹಾಜರುಪಡಿಸಿದ ಬ್ಯಾಂಕ್ ಸ್ಟೇಟ್‌ಮೆಂಟ್ ಪರಿಶೀಲಿಸಲಾಗಿ 2022-23 ನೇ ಸಾಲಿನಿಂದ ಬಾಹ್ಯ ಸಂಸ್ಥೆಗಳಿಂದ ರೂ.1,48,62,537/- ಗಳನ್ನು ಸ್ವೀಕರಿಸಲಾಗಿದೆ ಮತ್ತು **ರೂ.1,09,17,255/-ಗಳನ್ನು** ವೆಚ್ಚ ಭರಿಸಲಾಗಿದೆ ವಿವರಗಳನ್ನು **ಅನುಬಂಧ-06** ರಲ್ಲಿ ನೀಡಲಾಗಿದೆ.

ಸದರಿ ಖಾತೆಯಲ್ಲಿ ಸ್ವೀಕೃತಿಯಾದ ಮೊತ್ತಕ್ಕೆ ಹಾಗೂ ಪಾವತಿಗಳಿಗೆ ಸಂಬಂಧಿಸಿದಂತೆ ಆದೇಶಗಳು, ಸಂಸ್ಥೆಗಳಿಂದ ಬಂದ ಪತ್ರಗಳು ಮತ್ತು ದಾಖಲೆಗಳೊಂದಿಗೆ ಕಡತವನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ದಾಖಲೆಗಳನ್ನು ಹಾಜರುಪಡಿಸುವವರೆಗೆ ಸ್ವೀಕೃತಿ ಮೊತ್ತ **ರೂ.1,48,62,537/- ಗಳನ್ನು ಆಕ್ಷೇಪಿಸಲಾಗಿದೆ.**

17. **ವಿಶ್ವವಿದ್ಯಾನಿಲಯದ ವ್ಯವಹರಣೆ ಇಲ್ಲದಿರುವ ಬ್ಯಾಂಕ್ ಖಾತೆಗಳನ್ನು ಮುಕ್ತಾಯಗೊಳಿಸುವುದು:**

(ವಿಚಾರಣಾ ಪತ್ರ ಸಂಖ್ಯೆ:198/ದಿ:07.11.2025)

ವಿಶ್ವವಿದ್ಯಾನಿಲಯದ ಉಳಿತಾಯ ಖಾತೆಗಳ ಆರ್ಥಿಕ ಪರಿಸ್ಥಿತಿಗಳನ್ನು ಪರಿಶೀಲಿಸಲಾಗಿ ಕೆಲವು ಬ್ಯಾಂಕ್ ಖಾತೆಗಳು 2024–25ನೇ ಸಾಲಿನಲ್ಲಿ ವ್ಯವಹರಿಸದಿರುವುದು ಕಂಡು ಬಂದಿದೆ. ಈ ಕೆಳಗೆ ವಿವರಿಸಿರುವ ಖಾತೆಗಳ ಅಗತ್ಯತೆ ಹಾಗೂ ನಿರ್ವಹಿಸದಿರುವ ಕುರಿತು ವಿಶ್ವವಿದ್ಯಾನಿಲಯದವರು ಕೈಗೊಂಡ ಕ್ರಮ ಲೆಕ್ಕಪರಿಶೋಧನೆಗೆ ಸ್ಪಷ್ಟಣೆ ನೀಡಲು ವಿಚಾರಣಾ ಪತ್ರ ಸಂಖ್ಯೆ:198/ದಿ:07.11.2025ರಲ್ಲಿ ಕೋರಲಾಗಿದ್ದು, ಅದಕ್ಕೆ ಹಣಕಾಸು ಅಧಿಕಾರಿ ನೂತನ ಪಿಂಚಣಿ ನಿಧಿ ಖಾತೆ ಸಂಖ್ಯೆ:41363351892 ಯನ್ನು NSDL ಗೆ ನೊಂದಾಯಿಸಲು ಪ್ರಕ್ರಿಯೆಯಲ್ಲಿದ್ದು, ಅದು ಪೂರ್ಣಗೊಂಡ ನಂತರ NPS ಚಾಲ್ತಿ ಖಾತೆ ಸಂಖ್ಯೆ:64090010482 ನ್ನು ಮುಕ್ತಾಯಗೊಳಿಸಲಾಗುವುದು ಎಂದು ಒಂದೇ ಬ್ಯಾಂಕ್ ಖಾತೆ ಬಗ್ಗೆ ಮಾತ್ರ ಉತ್ತರಿಸಿರುತ್ತಾರೆ.

ಕ್ರ.ಸಂ	ಬ್ಯಾಂಕ್/ಖಾತೆಯ ಹೆಸರು	ಶಾಖೆ ಹೆಸರು	ಖಾತೆಸಂಖ್ಯೆ	ಖಾತೆ ವಿಧ	ಆರಂಭಿಕ ಶಿಲ್ಕು	ಸ್ವೀಕೃತಿ/ಬಡ್ಡಿ	ಪಾವತಿ	ಅಂತಿಮ ಶಿಲ್ಕು
1	State Bank of India (Power jyothi)	Main Branch–Mysuru	31051187090	CA	2047458	122010	3029	2166459
2	State Bank of India (Old)	K.S.O.U. Branch–Mysore	10562326495	SB	95933	2612	0	98545
3	State Bank of India (Guest House/Hostel Rent)	K.S.O.U. Branch–Mysore	64068987296	SB	58134	1479	8146	51467
4	HDFC BANK	V.V.Mohalla–Mysuru	,50200010317069	CA	367290	0	0	367290
5	ಸಿಲ್ವರ್ ಜುಬಲಿ	HDFC, Kuvempunagar	,50100418722508	SB	1590748	48160	0	1638908
6	ಜಿ.ಇ.ಎಂಪೂಲ್	Axis Bank, Kuvempunagara	,920010058491432	SB	27567	837	0	28404
7	SBI ONLINE PROGRAMME		64089378530		0	0	0	0
8	State Bank of India (New)	Main Branch–sayyoji rao Br Mysuru	31106997538	CA	4605516	70232	2502	4675748
9	State Bank of India (Old)	Main Branch–Mysuru	10562326508	SB	59658	1624	0	61282
10	HDFC BANK	V.V.Mohalla–Mysuru	50200015842381	CA	49109	0	0	49109
11	SEVA SINDHU	SBI MANASA GANGOTRI	39785793972	SB	66811	1819	0	68630
12	ನೂತನ ಪಿಂಚಣಿ ನಿಧಿ--2	K.S.O.U. Branch–Mysore	41363351892	SB	181105	4929	0	186034

ಮೇಲೆ ವಿವರಿಸಿರುವ ಬ್ಯಾಂಕ್ ಖಾತೆಗಳ ವ್ಯವಹರಣೆಗಳ ಅಗತ್ಯತೆಗಳನ್ನು ಪರಿಶೀಲಿಸಿ ಬ್ಯಾಂಕ್ ಖಾತೆಗಳನ್ನು ಮುಕ್ತಾಯಗೊಳಿಸಿ ಮುಂದಿನ ಲೆಕ್ಕ ಪರಿಶೋಧನೆಗೆ ವರದಿ ಮಾಡಲು ಸೂಚಿಸಿದೆ.

18. ನಿಶ್ಚಿತ ಠೇವಣಿಗಳಲ್ಲಿ ಹಾಗೂ ಇತರೆ ಆದಾಯಗಳಿಗೆ ಕಟಾವಣೆಯಾದ ಆದಾಯ ತೆರಿಗೆಯನ್ನು ಹಿಂಭರಿಕೆ ಮಾಡಿಕೊಳ್ಳದಿರುವುದು: (ವಿಚಾರಣಾ ಪತ್ರ ಸಂಖ್ಯೆ:121/ದಿ:16.09.2025)

ವಿಶ್ವವಿದ್ಯಾನಿಲಯದ ಹೂಡಿಕೆಗಳಿಗೆ ಹಾಗೂ ಇತರೆ ಆದಾಯಗಳಿಗೆ ಸಂಬಂಧವಾಗಿ ಆದಾಯ ತೆರಿಗೆ ನಮೂನೆ 26AS ರಂತೆ ಆದಾಯ ತೆರಿಗೆ ರೂ.55,19,307/–ಗಳು ಕಟಾವಣೆ ಮಾಡಲಾಗಿದೆ. ಈ **ವಿವರಗಳನ್ನು ಅನುಬಂಧ–08 ರಲ್ಲಿ** ನೀಡಿದೆ. ವಿಶ್ವವಿದ್ಯಾನಿಲಯಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್–1ಎ ಅನುಸಾರ 31 ಅಕ್ಟೋಬರ್–2025 ರೊಳಗಾಗಿ ಆದಾಯ ತೆರಿಗೆ ಹಿಂಭರಿಕೆ ಮಾಡಿಕೊಂಡು, ತೆರಿಗೆ ಪಾವತಿಯಿಂದ ವಿನಾಯಿತಿ ಇದ್ದರೂ ಕೂಡ 2024–25 ಸಾಲುಗಳಲ್ಲಿ ಕಟಾಯಿಸಲಾಗಿರುವ ಟಿಡಿಎಸ್ ಮೊತ್ತವನ್ನು ಆದಾಯ ತೆರಿಗೆ ಇಲಾಖೆಯಿಂದ ಹಿಂಭರಿಕೆ ಮಾಡಿಕೊಳ್ಳಲು ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಿ ಆದಾಯ ತೆರಿಗೆ ರಿಟರ್ನ್‌ಗೆ ಸಲ್ಲಿಸಿರುವ ಮಾಹಿತಿಯನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:121/ದಿ:16.09.2025 ರಲ್ಲಿ ಕೋರಲಾಗಿತ್ತು. ಅದಕ್ಕೆ ವಿಶ್ವವಿದ್ಯಾನಿಲಯದವರು 2024–25ನೇ ಸಾಲಿನ ಆದಾಯ ತೆರಿಗೆ ರಿಟರ್ನ್ ಮಾಡಲು ಸನ್ನದು ಲೆಕ್ಕಿಗರ ನೇಮಕ ಮಾಡುವಂತೆ ಕುಲಸಚಿವರಿಗೆ ಕೋರಲಾಗಿದೆ ಹಾಗೂ ಸನ್ನದು ಲೆಕ್ಕಿಗರ ನೇಮಕ ಮಾಡಿಕೊಂಡು ಆದಾಯ ತೆರಿಗೆ ರಿಟರ್ನ್‌ಗೆ ಕ್ರಮ ವಹಿಸಲಾಗುವುದು ಎಂದು ಉತ್ತರಿಸಿರುತ್ತಾರೆ. ಆದಾಯ ತೆರಿಗೆ ಹಿಂಭರಿಕೆಗೆ ಅಕ್ಟೋಬರ್–2025 ಮಾಹೆಯು ಅಂತಿಮ ಗಡುವಾಗಿದ್ದು, ಡಿಸೆಂಬರ್–2025ರ ಅಂತ್ಯದ ವರೆವಿಗೂ ಆದಾಯ ತೆರಿಗೆ ರಿಟರ್ನ್ ಮಾಡಿಕೊಂಡಿಲ್ಲದಿರುವುದರಿಂದ ಆದಾಯ ತೆರಿಗೆ ಇಲಾಖೆಯು ವಿಧಿಸುವ ದಂಡನೆಗೆ ವಿಳಂಬಕ್ಕೆ ಕಾರಣರಾದ ಕುಲಸಚಿವರಿಂದ ವಸೂಲಿಸುವುದು, ಹಾಗೂ **ರೂ.55,19,307/–ಗಳನ್ನು ಆದಾಯ ತೆರಿಗೆ ರಿಟರ್ನ್ ಮಾಡುವವರೆಗೆ ಆಕ್ಷೇಪಣೆಗೆ ಸೂಚಿಸಿದೆ.**

19. ಒಂದು ಖಾತೆಯಿಂದ ಇನ್ನೊಂದು ಖಾತೆಗೆ ಹಣ ವರ್ಗಾವಣೆ ಮಾಡಿರುವುದು:

(ವಿಚಾರಣಾ ಪತ್ರ ಸಂಖ್ಯೆ:128/ದಿ:22.09.2025)

ವಿಶ್ವವಿದ್ಯಾನಿಲಯವು 2024–2025ನೇ ಸಾಲಿನಲ್ಲಿ ರೂ.119.00/– ಕೋಟಿ ಮೊತ್ತವನ್ನು ಅನುಬಂಧ–9 ರಲ್ಲಿ ವಿವರಿಸಿರುವಂತೆ ಒಂದು ಖಾತೆಯಿಂದ ಮತ್ತೊಂದು ಖಾತೆಗೆ ಹಣ ವರ್ಗಾವಣೆ ಮಾಡಿರುವುದನ್ನು ಹಾಜರುಪಡಿಸಲಾದ ನಗದು ಪುಸ್ತಕದಲ್ಲಿ ಕಂಡುಬಂದಿದೆ. ಹೀಗೆ ಹಣವನ್ನು ವರ್ಗಾವಣೆ ಮಾಡಿಕೊಳ್ಳಲು ಇದರ ಅಗತ್ಯತೆಯನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಂಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:128/ದಿ:22.09.2025 ರಲ್ಲಿ ಕೋರಲಾಗಿತ್ತು. ಅದಕ್ಕೆ ವಿಶ್ವವಿದ್ಯಾನಿಲಯದವರು ಅಧಿಕಾರಿಗಳ/ಅಧ್ಯಾಪಕ/ಅಧ್ಯಾಪಕೇತರ ಉದ್ಯೋಗಿಗಳ ವೇತನ, ಕಾಲಿಕ ನೌಕರರ/ತಾತ್ಕಾಲಿಕ ನೌಕರರ ವೇತನ ಹಾಗೂ ವಿ.ವಿ ಅಡಳಿತಾತ್ಮಕ ವೆಚ್ಚಗಳನ್ನು ಭರಿಸಲು ಕುಲಪತಿಗಳಿಂದ ಅನುಮೋದನೆ ಪಡೆದು ಆಂತರಿಕವಾಗಿ ಹಣ ವರ್ಗಾವಣೆ ಮಾಡಲಾಗಿದೆ. ನಂತರ ಸಕ್ಷಮ ಪ್ರಾಧಿಕಾರವಾದ ಹಣಕಾಸು ಸಮಿತಿ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ವಿಷಯ ಮಂಡಿಸಿ ಅನುಮೋದನೆ ಪಡೆಯಲಾಗಿದೆ ಎಂದು ಉತ್ತರಿಸಿರುತ್ತಾರೆ. ಆದರೆ ನಿಯಮಾನುಸಾರ ಹಣವನ್ನು ಒಂದು ಖಾತೆಯಿಂದ ಮತ್ತೊಂದು ಖಾತೆಗೆ ವರ್ಗಾವಣೆ ಮಾಡಿಕೊಳ್ಳುವಂತಿಲ್ಲಾ. ಆದ್ದರಿಂದ ಇನ್ನು ಮುಂದೆ ಹಣ ಸ್ವೀಕೃತಿಯಾದ ಖಾತೆಯಲ್ಲಿಯೇ ವೆಚ್ಚ ಭರಿಸಲು ಕ್ರಮವಹಿಸುವಂತೆ ಸೂಚಿಸಲಾಗಿದೆ.

20. ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಪರೀಕ್ಷಾ ಶುಲ್ಕಕ್ಕೆ ಬ್ಯಾಂಕಿನವರು ವಹಿವಾಟು ಶುಲ್ಕವನ್ನು ವಿಧಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:118/ದಿ:12.09.2025)

ಸಾಮಾನ್ಯ ನಿಧಿ ಖಾತೆ ಹಾಗೂ ಪರೀಕ್ಷಾ ನಿಧಿ ಖಾತೆಗಳ ನಗದು ಪುಸ್ತಕ ಮತ್ತು ಬ್ಯಾಂಕ್ ಸ್ಟೇಟ್ಮೆಂಟ್‌ನ್ನು ಪರಿಶೀಲಿಸಲಾಗಿ ಬ್ಯಾಂಕ್‌ನವರು ಕೆಳಗೆ ವಿವರಿಸಿರುವ ಬ್ಯಾಂಕ್‌ಗಳಲ್ಲಿ Account keeping charges ಮತ್ತು ಬ್ಯಾಂಕ್ ವಹಿವಾಟು ಶುಲ್ಕ ಎಂದು ರೂ.28,064/–ಗಳನ್ನು ವಿಧಿಸಲಾಗಿದೆ.

ಕ್ರ.ಸಂ	ಖಾತೆ ಹೆಸರು	ಖಾತೆ ಸಂಖ್ಯೆ	ಮೊತ್ತ
1	ಸಾಮಾನ್ಯ ನಿಧಿ	54035420117	11079
		310511870	3009
			207
2	ಅಭಿವೃದ್ಧಿ ನಿಧಿ	54035421246	189
3	ಪರೀಕ್ಷಾ ನಿಧಿ	5403520128	11078
		31106997538	2502
		ಒಟ್ಟು ಮೊತ್ತ	**28064**

ಮುಕ್ತ ವಿಶ್ವವಿದ್ಯಾನಿಲಯವು ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುತ್ತಿರುವ ಸಂಸ್ಥೆಯಾಗಿದ್ದು, ವಾಣಿಜ್ಯ ಉದ್ದೇಶವಿಲ್ಲದ ಹಾಗೂ ಲಾಭರಹಿತ ಸೇವೆಗಳನ್ನು ಒದಗಿಸುತ್ತಿದೆ. ಬ್ಯಾಂಕಿನವರು ಇದಕ್ಕೆ ವಹಿವಾಟು ಶುಲ್ಕ ವಿಧಿಸುತ್ತಿರುವುದು ವಿಶ್ವವಿದ್ಯಾನಿಲಯಕ್ಕೆ ಅನಗತ್ಯ ಆರ್ಥಿಕ ಹೊರೆಯಾಗಿರುತ್ತದೆ. ಆದ್ದರಿಂದ ಬ್ಯಾಂಕ್ ವಹಿವಾಟು ಶುಲ್ಕ ಕಟಾವಣೆ ಮಾಡದಂತೆ ಬ್ಯಾಂಕ್‌ನವರೊಂದಿಗೆ ಪತ್ರವ್ಯವಹರಿಸಿ ಕಡಿತಗೊಳಿಸಿರುವ ಶುಲ್ಕವನ್ನು ಹಿಂಪಡೆದು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:118/ದಿ:12.09.2025 ರಲ್ಲಿ ಕೋರಲಾಗಿತ್ತು. ಅದಕ್ಕೆ ವಿಶ್ವವಿದ್ಯಾನಿಲಯದವರು ಬ್ಯಾಂಕ್ ಶುಲ್ಕ ಹಿಂಪಾವತಿಸುವಂತೆ ಸಂಬಂಧಪಟ್ಟ ಬ್ಯಾಂಕ್‌ಗಳಿಗೆ ಪತ್ರ ವ್ಯವಹಾರ ಮಾಡಲಾಗಿದೆ ಎಂದು ಉತ್ತರಿಸಿರುತ್ತಾರೆ.

ಬ್ಯಾಂಕ್ ಖಾತೆಗಳನ್ನು ನಿರ್ವಹಿಸಲು ಮಾರ್ಗಸೂಚಿಗಳನ್ನು ಆರ್ಥಿಕ ಇಲಾಖೆಯ ನಡವಳಿ ಸಂಖ್ಯೆ: FD 5 TAR 2017 dated:30.1.2017 ರ Para 9 (a) of Part A (II) ರನ್ವಯ ಬ್ಯಾಂಕ್‌ರವರೊಂದಿಗೆ ತಿಳಿವಳಿಕೆ ಪತ್ರ ಮಾಡಿಕೊಂಡು ಕಡಿತವಾಗಿರುವ ವಹಿವಾಟು ಶುಲ್ಕಗಳ ಮೊತ್ತ **ರೂ.28,064/–ಗಳನ್ನು** ಬ್ಯಾಂಕ್‌ನವರಿಂದ ಮರುಭರಿಕೆಗೆ ಕ್ರಮವಹಿಸಲು **ಸೂಚಿಸಿದೆ.**

21. **ಹೂಡಿಕೆಗೆ ಸಂಬಂಧಿಸಿದಂತೆ ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಒಂದು ವರ್ಷಕ್ಕೂ ಹೆಚ್ಚಿನ ಅವಧಿಗೆ ಠೇವಣಿಗಳನ್ನು ಹೂಡಿಕೆ ಮಾಡಿ ವಿಶ್ವವಿದ್ಯಾನಿಲಯಕ್ಕೆ ಆದಾಯ ನಷ್ಟ ಉಂಟುಮಾಡಿರುವುದು:**

(ವಿಚಾರಣಾ ಪತ್ರ ಸಂಖ್ಯೆ:144/ದಿ:30.09.25)

ಬ್ಯಾಂಕ್ ಹೆಸರು	ಶಾಖೆ ಹೆಸರು	ಬ್ಯಾಂಕ್ ಸಂಖ್ಯೆ	ಠೇವಣಿ ಖಾತೆ ಸಂಖ್ಯೆ	ಮೊತ್ತ	ದರ	ಅವಧಿ	ಅವಧಿ ವರ್ಷ ದಲ್ಲಿ	ಠೇವಣಿ ದಿನಾಂಕ	ಪಕ್ವ ದಿನಾಂಕ	ಲಭ್ಯವಿದ್ದ ಗರಿಷ್ಠ ಬಡ್ಡಿದರ	ಅವಧಿ (ವರ್ಷ/ ತಿಂಗಳು	ಪ್ರಾಪ್ತವಾಗುತ್ತಿದ್ದ ಅಧಿಕಬಡ್ಡಿದರ	ಪ್ರಾಪ್ತವಾಗುತ್ತಿದ್ದ ಅಧಿಕ ಬಡ್ಡಿ ಮೊತ್ತರೂ.
S B I, KSOU Br., Mysore	SD/EM D A/C	540354 21224	377482 80982	136,81,800	6.80	1year 11 M	1.9	08.03.24	08.02.26	7.10	11M/0.9	7.10–6.8 =0.3	37710

ರಾಜ್ಯ ಸರ್ಕಾರದ ಸುತ್ತೋಲೆ ಸಂಖ್ಯೆ: ಎಫ್.ಡಿ.8 ಟಿಎಆರ್ 2020, ದಿನಾಂಕ:12/03/2020ರ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ನಿಧಿಯಲ್ಲಿ ಒಂದು ವರ್ಷಕ್ಕೂ ಹೆಚ್ಚಿನ ಅವಧಿಗೆ ರೂ.1.368 ಕೋಟಿಗಳನ್ನು ನಿಶ್ಚಿತ ಅವಧಿ ಠೇವಣಿಗಳಲ್ಲಿ ಹೂಡಿಕೆ ಮಾಡಲಾಗಿದ್ದು, ಈ ಮೇಲೆ ವಿವರಿಸಿರುವಂತೆ ವಿಶ್ವವಿದ್ಯಾನಿಲಯಕ್ಕೆ ರೂ.37,710/–ಗಳಷ್ಟು ಬಡ್ಡಿ ನಷ್ಟವಾಗಿರುತ್ತದೆ. ಠೇವಣಿಗಳನ್ನು ಗರಿಷ್ಠ 1 ವರ್ಷದ ಅವಧಿಗೆ ಹೂಡಿಕೆ ಮಾಡಿ ನಂತರ ಹಿಂಪಡೆದು, ದಿನಾಂಕ:08.03.2025ಕ್ಕೆ ಮತ್ತೆ ಹೊಸದಾಗಿ ಹೂಡಿಕೆ ಮಾಡಿದಿದ್ದರೆ ವಿಶ್ವವಿದ್ಯಾನಿಲಯಕ್ಕೆ ಆ ಅವಧಿಗೆ ಭಾರತೀಯ ಸ್ಟೇಟ್ ಬ್ಯಾಂಕ್ ಚಾಲ್ತಿಯಲ್ಲಿದ್ದ ಗರಿಷ್ಠ ಬಡ್ಡಿ ದರ ಶೇ. 7.10ರ ದರದಲ್ಲಿ ರೂ.37,710/–ಗಳಷ್ಟು ಅಧಿಕ ಬಡ್ಡಿ ಪ್ರಾಪ್ತವಾಗುತ್ತಿತ್ತು. ಆದರೆ ವಿಶ್ವವಿದ್ಯಾನಿಲಯವು ಈ ನಿಯಮ ಪಾಲಿಸದ ಕಾರಣ ಬಡ್ಡಿ ನಷ್ಟವಾಗಿದ್ದು, ಈ ಬಗ್ಗೆ ಸೂಕ್ತ ವಿವರಣೆ ಸಲ್ಲಿಸುವಂತೆ ವಿಚಾರಣಾ ಪತ್ರ ಸಂಖ್ಯೆ:144/ದಿ:30.09.25 ನ್ನು ನೀಡಲಾಗಿದ್ದು, ವಿಶ್ವವಿದ್ಯಾನಿಲಯಲದವರು ಪ್ರತಿಕ್ರಿಯಿಸಿ ಹನ್ನೊಂದು ತಿಂಗಳಿಗೆ ಮಾನ್ಯ ಕುಲಪತಿಗಳ ಅನುಮೋದನೆಯೊಂದಿಗೆ ಹೂಡಿಕೆ ಮಾಡಲಾಗಿದ್ದು, ಸದರಿ ಠೇವಣಿಗೆ ಶೇ.7.21 ರಷ್ಟು ಬಡ್ಡಿ ಲಭ್ಯವಾಗಿದ್ದು ಹೆಚ್ಚಿನ ಬಡ್ಡಿ ದೊರೆತಿರುವುದಾಗಿ ವಿಶ್ವವಿದ್ಯಾನಿಲಯಕ್ಕೆ ಯಾವುದೇ ನಷ್ಟ ಉಂಟಾಗಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಆದರೇ, ಸರ್ಕಾರದ ಮಾರ್ಗದರ್ಶನದ ಉಲ್ಲಂಘನೆಯಾಗಿರುವುದು ಸ್ಪಷ್ಟವಾಗಿರುತ್ತದೆ. ಮುಂದಿನ ದಿನಗಳಲ್ಲಿ ಒಂದು ವರ್ಷದ ಅವಧಿಗೆ ಹೂಡಿಕೆ ಮಾಡಲು ಸೂಚಿಸಿದೆ.

22. **ವಿಶ್ವವಿದ್ಯಾನಿಲಯವು ವಿವಿಧ ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿ ಹೂಡಿಕೆ ಮಾಡಿದ್ದು, ಬ್ಯಾಂಕ್ ನಿಧಿಯಿಂದ ವಿಶ್ವವಿದ್ಯಾನಿಲಯವು ಪ್ರಾಯೋಜಕತ್ವ ಪಡೆದಿರುವುದು:** ಸಿ.ಎಸ್.ಆರ್

(ವಿಚಾರಣಾ ಪತ್ರ ಸಂಖ್ಯೆ:201/ದಿ:07.11.2025)

ವಿಶ್ವವಿದ್ಯಾನಿಲಯವು 2024-25ನೇ ಸಾಲಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕರ್ನಾಟಕ ಗ್ರಾಮೀಣ ಬ್ಯಾಂಕ್, (ಕೆ.ಜಿ.ಬಿ), ಹೆಚ್.ಡಿ.ಎಫ್.ಸಿ., ಐ.ಸಿ.ಐ.ಸಿ.ಐ., ಎ.ಯು. ಫೈನಾನ್ಸ್, ಬ್ಯಾಂಕ್ ಗಳಲ್ಲಿ ಒಟ್ಟು **ರೂ.517.25 ಕೋಟಿಗಳನ್ನು** ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಲಾಗಿದೆ. ಹೀಗೆ ಹೂಡಿಕೆ ಮಾಡಿರುವ ಬ್ಯಾಂಕ್ ಸಿ.ಎಸ್. ಆರ್. ನಿಧಿಯಿಂದ ವಿಶ್ವವಿದ್ಯಾನಿಲಯವು ಪ್ರಾಯೋಜಕತ್ವ ಪಡೆದಿರುವ ವರದಿಗಳನ್ನು ದಾಖಲೆಗಳೊಂದಿಗೆ ಲೆಕ್ಕಪರಿಶೋಧನೆಗೆ ಮಾಹಿತಿ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:201/ದಿ:07.11.2025ರಲ್ಲಿ ಕೋರಲಾಗಿತ್ತು. ಅದಕ್ಕೆ ವಿಶ್ವವಿದ್ಯಾನಿಲಯವು ಪ್ರತಿಕ್ರಿಯಿಸಿರುವುದಿಲ್ಲ.

II-ವಹಿವಾಟು ಲೆಕ್ಕಪರಿಶೋಧನೆ ಸಂಶೋಧನೆಗಳು

23. ವಿಶ್ವವಿದ್ಯಾನಿಲಯದ ವಾರ್ಷಿಕ ವರದಿ ಮತ್ತು ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಡಿಸಲು ಸರ್ಕಾರಕ್ಕೆ ಸಲ್ಲಿಸಿರುವ ವಿವರ: (ವಿಚಾರಣಾ ಪತ್ರ ಸಂಖ್ಯೆ:91/16.08.2025)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿನಿಯಮ-1992ರ ಪ್ರಕರಣ 26 ಮತ್ತು 27ರಂತೆ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿ, ವಾರ್ಷಿಕ ಲೆಕ್ಕಗಳು ಮತ್ತು ಬ್ಯಾಲೆನ್ಸ್ ಶೀಟುಗಳನ್ನು ವ್ಯವಸ್ಥಾಪನಾ ಮಂಡಳಿಯ ನಿರ್ದೇಶನಗಳನುಸಾರ ಸಿದ್ಧಪಡಿಸಿ, ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ಲೆಕ್ಕಪರಿಶೋಧಿಸಿದ ವಾರ್ಷಿಕ ಲೆಕ್ಕಪತ್ರದ ಪ್ರತಿಯನ್ನು ಲೆಕ್ಕಪರಿಶೋಧನಾ ವರದಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಸಲ್ಲಿಸಿ, ಆ ಮುಖಾಂತರ ಶಾಸಕಾಂಗದ ಉಭಯ ಸದನಗಳ ಮುಂದಿಟ್ಟು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕಾಗಿರುತ್ತದೆ.

ಹೀಗೆ ಪ್ರಸಕ್ತ ಸಾಲಿನವರೆಗೆ ಮುಕ್ತ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಶಾಸಕಾಂಗದ ಉಭಯ ಸದನಗಳ ಮುಂದಿಟ್ಟು ಅನುಮೋದನೆ ಪಡೆದಿರುವ ಹಾಗೂ ಕಳೆದ ಮೂರು ಹಣಕಾಸು ವರ್ಷಗಳ ವಾರ್ಷಿಕ ವರದಿ, ಲೆಕ್ಕಪತ್ರಗಳನ್ನು ಸರ್ಕಾರಕ್ಕೆ ಸಲ್ಲಿಸಿದ ಮಾಹಿತಿಯನ್ನು ಅಗತ್ಯ ಪೂರಕ ದಾಖಲೆಗಳೊಂದಿಗೆ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ **ಕೋರಿ ಆಡಿಟ್** ವಿಚಾರಣಾ ಪತ್ರ ಸಂಖ್ಯೆ:91/16.08.2025 ರಂದು ನೀಡಲಾಗಿ, ವಿಶ್ವವಿದ್ಯಾನಿಲಯದವರು ಅನುಪಾಲನಾ ವರದಿಯಲ್ಲಿ 2021-22ನೇ ಸಾಲಿನ ಲೆಕ್ಕತಪಾಸಣಾ ವರದಿಯ ಆಕ್ಷೇಪಣೆ ಮತ್ತು ವಸೂಲಾತಿಗಳಿಗೆ ಕಂಡಿಕೆವಾರು ಅನುಪಾಲನಾ ವರದಿ ಸಿದ್ಧಪಡಿಸಿ, ದಿನಾಂಕ:17.08.2024ರಂದು ನಡೆದ 89ನೇ ಹಣಕಾಸು ಸಮಿತಿ ಸಭೆ ಮತ್ತು 179ನೇ ವ್ಯವಸ್ಥಾಪನಾ ಮಂಡಳ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಹಾಗೂ 2022-23ನೇ ಸಾಲಿನ ವಾರ್ಷಿಕ ವರದಿಯನ್ನು ದಿನಾಂಕ:19-02-2025 ರಂದು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಉತ್ತರಿಸಿರುತ್ತಾರೆ. 2023-24 ನೇ ಸಾಲಿನ ವರದಿಯನ್ನು ಸಹ ಕಾಗದ ಪತ್ರಗಳ ಸಮಿತಿಗೆ ಹಾಗೂ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ.

24. ಮುಕ್ತ ವಿಶ್ವವಿದ್ಯಾನಿಲಯದ ಸ್ವೀಕೃತಿಗಳು.

ವಿದ್ಯಾರ್ಥಿಗಳಿಂದ ಸಂಗ್ರಹಿಸುವ ಶುಲ್ಕ, ದಂಡ ಶುಲ್ಕಗಳು, ವಿಶ್ವವಿದ್ಯಾನಿಲಯದ ಆಸ್ತಿಗಳಿಂದ ಬರುವ ಬಾಡಿಗೆ ಮೊತ್ತಗಳು, ವಿಶ್ವವಿದ್ಯಾನಿಲಯವು ಬಾಹ್ಯ ಸಂಸ್ಥೆಗಳಿಗೆ ಒದಗಿಸುವ ಸೇವೆಗಳಿಗಾಗಿ ಪಡೆಯುವ ಶುಲ್ಕ, ಪ್ರಸಾರಾಂಗದಲ್ಲಿ ಪುಸ್ತಕ ಮಾರಾಟದಿಂದ ಬರುವ ಮೊತ್ತ, ರಾಜ್ಯ ಸರ್ಕಾರದಿಂದ ಬರುವ ಅನುದಾನ, ಕೇಂದ್ರ ಸರ್ಕಾರ, ಯು.ಜಿ.ಸಿ ಮತ್ತು ಅಂತರರಾಷ್ಟ್ರೀಯ ಏಜೆನ್ಸಿಗಳಿಂದ ಬರಬಹುದಾದ ಅನುದಾನಗಳು ಹಾಗೂ ಸಾರ್ವಜನಿಕ ದತ್ತಿಗಳು ಮತ್ತು ಕೊಡುಗೆಗಳು ವಿಶ್ವವಿದ್ಯಾನಿಲಯದ ಪ್ರಮುಖ ಸ್ವೀಕೃತಿಗಳಾಗಿರುತ್ತವೆ.

ವಿಶ್ವವಿದ್ಯಾನಿಲಯದಲ್ಲಿ ಅನುಮೋದಿತ ಪದ್ಧತಿ ಹಾಗೂ ನಮೂನೆಯಲ್ಲಿ ಸ್ವೀಕೃತಿಗೆ ಸಂಬಂಧಿಸಿದಂತೆ ನಿರ್ದಿಷ್ಟ ವಹಿಯನ್ನು ಮತ್ತು ಖಿರ್ದಿ ಪುಸ್ತಕವನ್ನು ನಿರ್ವಹಿಸದಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಹಿಂದಿನ ವರ್ಷಗಳಿಂದ ಬರಬೇಕಾದ ಬಾಕಿ ಸ್ವೀಕೃತಿಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ವಿಶ್ವವಿದ್ಯಾನಿಲಯವು

ಹಾಜರುಪಡಿಸಿದ ನಗದು ಪುಸ್ತಕಗಳು ಮತ್ತು ಬ್ಯಾಂಕ್ ಪಾಸ್‌ಶೀಟ್‌ಗಳ ಅನುಸಾರ 2024–25ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಒಟ್ಟು ಆದಾಯ ರೂ.190,84,37,721/–ಗಳಾಗಿದ್ದು, ವಿವರಗಳು ಕೆಳಕಂಡಂತಿರುತ್ತದೆ.

ವಿವರಗಳು	ಮೊತ್ತ
ಅನುದಾನ	3,92,72,600/–
ಶುಲ್ಕಗಳು ಮತ್ತು ಇತರೆ	150,92,30,432/–
ಉಳಿತಾಯ ಬಡ್ಡಿ	71,18,465/–
ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ	35,26,21,352/–
ಇತರೆ ಸ್ವೀಕೃತಿ	1,94,872/–
ಒಟ್ಟು	**190,84,37,721**

25. ಶೈಕ್ಷಣಿಕ ಸಾಲಿನಲ್ಲಿ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಬೇಡಿಕೆ, ವಸೂಲಾತಿ ಹಾಗೂ ಬಾಕಿ ಶುಲ್ಕಗಳ ವಿವರಗಳು: (ವಿಚಾರಣಾ ಪತ್ರ ಸಂಖ್ಯೆ:175/ದಿ:28.10.2025)

2024–25ನೇ ಶೈಕ್ಷಣಿಕ ಸಾಲಿಗೆ ಜುಲೈ ಮತ್ತು ಜನವರಿ, ಎರಡು ಅವೃತ್ತಿಗಳಲ್ಲಿ ರಾಜ್ಯದ ವಿವಿಧ ಕೇಂದ್ರಗಳಿಂದ ಪ್ರವೇಶಾತಿ ಪಡೆದಿರುವ ಸ್ನಾತಕ, ಸ್ನಾತಕೋತ್ತರ, ಸ್ನಾತಕೋತ್ತರ ಸರ್ಟಿಫಿಕೇಟ್ ಕಾರ್ಯಕ್ರಮ, ಡಿಪ್ಲೋಮಾ ಕಾರ್ಯಕ್ರಮಗಳ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕಕ್ಕೆ ಸಂಬಂಧಿಸಿದಂತೆ ಹಾಜರುಪಡಿಸಲಾದ ಲೆಕ್ಕಪತ್ರ ದಾಖಲೆಗಳನ್ನು ವಿದ್ಯಾರ್ಥಿಗಳ ಅನುಮೋದನಾ ಪಟ್ಟಿಯೊಂದಿಗೆ ಪರಿಶೀಲಿಸಲಾಗಿ ಸದರಿ ಸಾಲಿನಲ್ಲಿ ಒಟ್ಟು 79085 ವಿದ್ಯಾರ್ಥಿಗಳ ಪ್ರವೇಶಾತಿಯಿಂದ ಸಂಗ್ರಹವಾಗಬೇಕಾದ ಒಟ್ಟು ಪ್ರವೇಶಾತಿ ಶುಲ್ಕದ ಬೇಡಿಕೆ, ಸಂಗ್ರಹಣೆಯಾಗಿರುವ ಶುಲ್ಕ ಹಾಗೂ ಸಂಗ್ರಹಿಸದೇ ಬಾಕಿ ಉಳಿದ ಶುಲ್ಕದ ವಿವರಗಳು ಕೆಳಗಿನಂತಿವೆ:

ಘೋಷ್ವಾರೆ

ಪ್ರವೇಶಾತಿ ವಿವರ		ವಿದ್ಯಾರ್ಥಿಗಳ ಸಂಖ್ಯೆ	ಆರಂಭಿಕ ಶಿಲ್ಕು	ಬೇಡಿಕೆ	ವಸೂಲಾತಿ	ಬಾಕಿ
ಜುಲೈ ಅವೃತ್ತಿ	ಪ್ರಥಮ ವರ್ಷ	25567	2113435	372078920	370836700	3355655
	ರಿನಿವಲ್ ಪ್ರವೇಶಾತಿ	22854	2166854	238658409	238534189	2291074
ಜನವರಿ ಅವೃತ್ತಿ	ಪ್ರಥಮ ವರ್ಷ	14434	1320419	210515283	209590181	2245521
	ರಿನಿವಲ್ ಪ್ರವೇಶಾತಿ	16230	125341	202094983	201857842	362482
ಒಟ್ಟು		**7985**	**5726049**	1023347595	1020818912	**8254732**

ಈ ಮೇಲಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಸಂಗ್ರಹಿಸದೇ ಬಾಕಿ ಉಳಿದ ಮೊತ್ತ ರೂ.82,54,732/– ಗಳಲ್ಲಿ ಆರಂಭಿಕ ಶಿಲ್ಕು ರೂ.57,26,049/– ಗಳನ್ನು 2023–24ನೇ ಸಾಲಿನ ಲೆಕ್ಕಪರಿಶೋಧನೆ ವರದಿಯಲ್ಲಿ ವಸೂಲಾತಿಗೆ ಸೂಚಿಸಿರುವುದರಿಂದ ಉಳಿಕೆ ಮೊತ್ತ ರೂ.25,28,683/– ಗಳಲ್ಲಿ ರೂ.9,243/– ಗಳು ವಿದ್ಯಾರ್ಥಿಗಳು ಪ್ರವೇಶಾತಿ ಶುಲ್ಕ ಪಾವತಿ ಸಂದರ್ಭ ಕೆಲವು ಕೋರ್ಸ್‌ಗಳಿಂದ ಕಡಿಮೆ 69

ಶುಲ್ಕ ಸ್ವೀಕೃತಿಯಾಗಿದ್ದು, ರೂ.6,21,569/- ಗಳು ನೇರ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಂದ ಕಡಿಮೆ ಸ್ವೀಕರಿಸಿರುವ ಮೊತ್ತವಾಗಿರುತ್ತದೆ. (ವಿವರಗಳನ್ನು **ಅನುಬಂಧ-10 & 10 (ಎ) ರಲ್ಲಿ** ವಿವರಿಸಿದೆ) ಹಿಂದಿನ ಸಾಲುಗಳಲ್ಲಿ ಪ್ರವೇಶಾತಿ ಪಡೆದು ಕಾರಣಾಂತರಗಳಿಂದ ಅಧ್ಯಯನ ಮುಂದುವರೆಸದ ವಿದ್ಯಾರ್ಥಿಗಳು 2024-25ನೇ ಶೈಕ್ಷಣಿಕ ಸಾಲಿನಲ್ಲಿ ದ್ವಿತೀಯ ಮತ್ತು ತೃತೀಯ ವರ್ಷದ ಪದವಿಗಳಿಗೆ ನೇರ ಪ್ರವೇಶಾತಿ ಪಡೆಯಬಹುದಾಗಿದ್ದು, ನೇರ ಪ್ರವೇಶಾತಿ ಶುಲ್ಕ (ಲ್ಯಾಟರಲ್ ಫೀ) ರೂ.3,000/-ಗಳೊಂದಿಗೆ ಮಾನ್ಯ ಕುಲಸಚಿವರ ಆದೇಶ ಸಂಖ್ಯೆ: ಕರಾಮುಎ/ಪ್ರವಿ/ಎಡಿಎಂ-1/129/2024-25, ದಿನಾಂಕ: 20.07.2024ರಲ್ಲಿ ನಿಗದಿಪಡಿಸಿದ ಪ್ರವೇಶಾತಿ ಶುಲ್ಕವನ್ನು ಪಾವತಿ ಮಾಡಬೇಕಾಗಿರುತ್ತದೆ. ಪ್ರವೇಶಾತಿ ಸಮಯದಲ್ಲಿ ವಿದ್ಯಾರ್ಥಿಗಳಿಂಧ ಮೇಲ್ಕಂಡ ಆದೇಶದಲ್ಲಿರುವಂತೆ ದ್ವೀತೀಯ ವರ್ಷ ಹಾಗೂ ತೃತೀಯ ವರ್ಷದ ಪದವಿ ಕೋರ್ಸ್‌ಗಳಿಗೆ ನಿಗದಿಪಡಿಸಿದ ಶುಲ್ಕ ಸಂಗ್ರಹಣೆ ಮಾಡದೇ ಪ್ರಥಮ ವರ್ಷದ ಕೋರ್ಸ್‌ಗಳಿಗೆ ನಿಗದಿಪಡಿಸಿದ ಪ್ರವೇಶಾತಿ ಶುಲ್ಕವನ್ನು ಸಂಗ್ರಹಿಸಲಾಗಿರುತ್ತದೆ. ಈ ಸಂಬಂಧ ಸೂಕ್ತ ಸ್ಪಷ್ಟೀಕರಣವನ್ನು ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:175/ದಿ:28.10.2025 ಅನ್ನು ನೀಡಲಾಗಿತ್ತು.

ಅದಕ್ಕೆ ವಿಶ್ವವಿದ್ಯಾನಿಲಯದವರು ತಮ್ಮ ಪೂರ್ವ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿರುವ ವಿದ್ಯಾರ್ಥಿಯು ಪದವಿಯ ದ್ವಿತೀಯ ಹಾಗೂ ತೃತೀಯ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆಯುವ ಸಂದರ್ಭದಲ್ಲಿ ಕ.ರಾ.ಮು.ವಿ ನಿಲಯಕ್ಕೆ ಹೊಸ ವಿದ್ಯಾರ್ಥಿಯಾಗಿರುತ್ತಾನೆ. ವಿ.ವಿ ನಿಲಯದಲ್ಲಿ ಹೊಸದಾಗಿ ಪ್ರವೇಶಾತಿ ಪಡೆಯುವಾಗ ವಿದ್ಯಾರ್ಥಿಗಳು ಪಾವತಿಸುವ ಪ್ರವೇಶಾತಿ ಪ್ರಕ್ರಿಯೆ ಶುಲ್ಕ, ನೊಂದಣಿ ಶುಲ್ಕ, ಕೌಶಲಾಭಿವೃದ್ಧಿ ಶುಲ್ಕ, ಗ್ರಂಥಾಲಯ ಶುಲ್ಕ, ಅಲ್ಯೂಮಿನಿ ಶುಲ್ಕ ಹಾಗೂ ಬೋಧನಾ ಶುಲ್ಕಗಳೊಂದಿಗೆ ನೇರ ಪ್ರವೇಶಾತಿ ಶುಲ್ಕವನ್ನು ಪಾವತಿಸಬೇಕಾಗಿದ್ದು, ನೇರ ಪ್ರವೇಶಾತಿ ಹೊಂದುವ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಹೊಸ ವಿದ್ಯಾರ್ಥಿಯೆಂದು ಪರಿಗಣಿಸಿ ಪ್ರಥಮ ಸಾಲಿನ ಶುಲ್ಕವನ್ನು ಪಾವತಿಸಿಕೊಳ್ಳಲಾಗಿದೆ ಹಾಗೂ ಉಲ್ಲೇಖಿತ ಆದೇಶದಲ್ಲಿ ದ್ವೀತೀಯ ಹಾಗೂ ತೃತೀಯ ವರ್ಷದ ಪದವಿಗಳಿಗೆ ನಿಗದಿಪಡಿಸಿದ ಬೋಧನಾ ಶುಲ್ಕವನ್ನು ನಂತರದ ಸಾಲಿನಲ್ಲಿ ವಿದ್ಯಾರ್ಥಿಗಳು ನವೀಕರಣ ಸಂಧರ್ಭದಲ್ಲಿ ಪಡೆಯುವ ಶುಲ್ಕವಾಗಿರುತ್ತದೆ ಎಂದು ಭಾವಿಸಬೇಕಾಗಿರುತ್ತದೆ ಎಂಬ ಅನುಪಾಲನಾ ವರದಿಯನ್ನು ಸಲ್ಲಿಸಿರುತ್ತಾರೆ. ಆದರೆ ದ್ವೀತೀಯ ಮತ್ತು ತೃತೀಯ ವರ್ಷದ ವಿದ್ಯಾರ್ಥಿಗಳ ನವೀಕರಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಸುತ್ತೋಲೆಗಳನ್ನು ಹೊರಡಿಸಿ ಶುಲ್ಕ ನಿಗದಿಪಡಿಸಲಾಗಿರುತ್ತದೆ. ದ್ವೀತೀಯ ವರ್ಷ ಹಾಗೂ ತೃತೀಯ ವರ್ಷಕ್ಕೆ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ ಹೊಸ ವಿದ್ಯಾರ್ಥಿಯೆಂದು ಭಾವಿಸಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ನಿಗದಿಪಡಿಸಿರುವ ಬೋಧನಾ ಶುಲ್ಕವನ್ನು ಪಡೆಯುತ್ತಿರುವುದು ಸರಿಯಾದ ಕ್ರಮವಾಗಿರುವುದಿಲ್ಲ. ಹೀಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಹೊಸ ವಿದ್ಯಾರ್ಥಿಗಳೆಂದು ಭಾವಿಸಿ ಪ್ರವೇಶಾತಿ ಪ್ರಕ್ರಿಯ ಶುಲ್ಕದಿಂದ ಅಲ್ಯುಮಿನಿ ಶುಲ್ಕಗಳನ್ನು ಪಡೆಯುತ್ತಿರುವುದಾಗಿ ಅನುಪಾಲನಾ ವರದಿಯಲ್ಲಿ ತಿಳಿಸಿರುವುದು ಸರಿಯಷ್ಟೇ. ಆದರೆ ಪ್ರಥಮ ಸಾಲಿಗೆ ನಿಗದಿಪಡಿಸಿದ ಬೋಧನಾ ಶುಲ್ಕ ದ್ವೀತೀಯ ಅಥವಾ ತೃತೀಯ ವರ್ಷದ ವಿದ್ಯಾರ್ಥಿಗಳಿಗೆ ಪಡೆಯಬೇಕು ಎಂಬುದಕ್ಕೆ ಶುಲ್ಕ ಸಂರಚನೆಯಲ್ಲಿ ಅವಕಾಶವಾಗಲೀ ಅಥವಾ ಸಕ್ಷಮ ಪ್ರಾಧಿಕಾರವು ನೀಡಿರುವ ಆದೇಶವನ್ನಾಗಲೀ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಈ ಸಂಬಂಧ ದಾಖಲೆಗಳೊಂದಿಗೆ ಸೂಕ್ತ ಮಾಹಿತಿ ಹಾಜರುಪಡಿಸುವವರೆಗೆ **ರೂ.6,30,812/-ಗಳನ್ನು ವಸೂಲಾತಿಯಲ್ಲಿಡಲಾಗಿ ಸೂಚಿಸಿದೆ.**

ಮುಂದುವರೆದು ರೂ.18,97,871/-ಗಳು ಪರಿತಿಷ್ಟ ಜಾತಿ/ಪರಿತಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿಯಡಿ ಪ್ರವೇಶಾತಿಯನ್ನು ನೀಡಲಾಗಿದ್ದು, ಸರ್ಕಾರದಿಂದ ಮರುಭರಿಕೆಯಾಗಬೇಕಾಗಿರುತ್ತದೆ. ಈ ಬಗ್ಗೆ ಸೂಕ್ತ ವಿವರಣೆ ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:175/ದಿ:28-10-2025ರಲ್ಲಿ ಕೋರಲಾಗಿ, ವಿಶ್ವವಿದ್ಯಾನಿಯದವರು ಯಾವುದೇ ಅನುಪಾಲನಾ ವರದಿ ನೀಡಿರುವುದಿಲ್ಲ. ಈ ಮೇಲೆ ತಿಳಿಸಿರುವಂತೆ ವಿದ್ಯಾರ್ಥಿಗಳಿಂದ ಕಡಿಮೆ ಶುಲ್ಕ ಸ್ವೀಕೃತಿಯಾಗಿರುವ ಮೊತ್ತ ರೂ.6,30,812/- ಹಾಗೂ ಸರ್ಕಾರದಿಂದ ಹಿಂಭರಿಕೆ ಮಾಡಿಕೊಳ್ಳದ ಮೊತ್ತ ರೂ.18,97,871-ಗಳನ್ನು ಸೇರಿಸಿ ಒಟ್ಟು **ರೂ.25,28,683/-ಗಳನ್ನು ಸಂಬಂಧಿಸಿದ ಇಲಾಖೆಯಿಂದ/ವಿದ್ಯಾರ್ಥಿಗಳಿಂದ ಹಿಂಭರಿಕೆ/ವಸೂಲಾತಿ** ಮಾಡಿ ವಿಶ್ವವಿದ್ಯಾನಿಲಯದ ಲೆಕ್ಕಶೀರ್ಷಿಕೆಗೆ ಜಮೆ ಮಾಡಲು ಸೂಚಿಸಿದೆ. ಪ್ರವೇಶಾತಿ ಶುಲ್ಕದ ಬೇಡಿಕೆ-ವಸೂಲಾತಿ-ಬಾಕಿ ವಿವರಗಳನ್ನು **ಅನುಬಂಧ-11, 11 (ಎ), (ಬಿ), ಹಾಗೂ (ಸಿ) ಗಳಲ್ಲಿ ನೀಡಲಾಗಿದೆ.**


26. ಹೆಚ್ಚುವರಿಯಾಗಿ ಪ್ರವೇಶಾತಿ ಶುಲ್ಕವನ್ನು ಸಂಗ್ರಹಿಸಿರುವುದು.

(ವಿಚಾರಣಾ ಪತ್ರ ಸಂಖ್ಯೆ:202/2025-26, ದಿನಾಂಕ:07.11.2025)


ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಲೆಕ್ಕಪರಿಶೋಧನೆಗೆ ದಾಖಲೆ ಹಾಜರುಪಡಿಸಿದಂತೆ 2024–25ನೇ ಶೈಕ್ಷಣಿಕ ಸಾಲಿಗೆ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದ ಕೆಲವು ವಿದ್ಯಾರ್ಥಿಗಳು ಹೆಚ್ಚುವರಿಯಾಗಿ ಪ್ರವೇಶಾತಿ ಶುಲ್ಕ ಪಾವತಿಸಿರುವುದು ಕಂಡು ಬಂದಿರುತ್ತದೆ. ಹೀಗೆ ಹೆಚ್ಚುವರಿಯಾಗಿ 2024–25ನೇ ಶೈಕ್ಷಣಿಕ ಸಾಲಿನಲ್ಲಿ ಸಂಗ್ರಹವಾಗಿರುವ ಒಟ್ಟಾರೆ ಹೆಚ್ಚುವರಿ ಶುಲ್ಕ ರೂ.6,64,496/–ಗಳಾಗಿರುತ್ತದೆ. ಹೀಗೆ ಪ್ರವೇಶಾತಿ ಶುಲ್ಕದಲ್ಲಿ ಹೆಚ್ಚುವರಿಯಾಗಿ ಜಮೆಯಾಗಿರುವ ಮೊತ್ತವನ್ನು ವಾರ್ಷಿಕ ಲೆಕ್ಕಪತ್ರದಲ್ಲಿ ಯಾವ ಲೆಕ್ಕಶೀರ್ಷಿಕೆಯಡಿ ಪರಿಗಣಿಸಲಾಗಿದೆ. ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಶುಲ್ಕಕ್ಕಿಂತ ಹೆಚ್ಚುವರಿಯಾಗಿ ಸಂಗ್ರಹಿಸಿರುವ ಪ್ರವೇಶಾತಿ ಶುಲ್ಕದ ಮೊತ್ತವನ್ನು ವಿದ್ಯಾರ್ಥಿಗಳಿಗೆ ಹಿಂದಿರುಗಿಸಲು ಕೈಗೊಂಡಿರುವ ಕ್ರಮದ ಬಗ್ಗೆ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:202/2025–26, ದಿನಾಂಕ:07.11.2025 ಅನ್ನು ನೀಡಲಾಗಿತ್ತು. ಆದರೆ ಈ ಸಂಬಂಧ ವಿಶ್ವವಿದ್ಯಾನಿಲಯದವರು ಅನುಪಾಲನಾ ವರದಿಯನ್ನು ಸಲ್ಲಿಸಿರುವುದಿಲ್ಲ. ಕಾರಣ ಸೂಕ್ತ ಕ್ರಮವಹಿಸಿ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವಂತೆ ಪ್ರವೇಶಾತಿ ಶುಲ್ಕ ವಸೂಲಾತಿಗೆ ಕ್ರಮವಹಿಸಲು ಸೂಚಿಸಿದೆ.

27. 2020–21ನೇ ಸಾಲಿನಿಂದ 2024–25ನೇ ಸಾಲಿನವರೆಗೆ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ವಿವರ:

ಕರ್ನಾಟಕ ರಾಜ್ಯದ ಏಕೈಕ ದೂರ ಶಿಕ್ಷಣ ಒದಗಿಸುವ ಸಂಸ್ಥೆಯಾಗಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ''ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ'' ಎಂಬ ಧ್ಯೇಯೋಕ್ತಿಯಿಂದ ಮುಕ್ತ ಕಲಿಕೆ ವ್ಯವಸ್ಥೆಯನ್ನು ದೂರ ಶಿಕ್ಷಣ ವಿಧಾನದಲ್ಲಿ ಒದಗಿಸುತ್ತಿದ್ದು, ಯುಜಿಸಿ–ಡಿಇಬಿ ಮಾರ್ಗಸೂಚಿಗಳ ಪ್ರಕಾರ ವರ್ಷಕ್ಕೆ ಜನವರಿ ಮತ್ತು ಜೂನ್‌ನಲ್ಲಿ ಎರಡು ಆವೃತ್ತಿಗಳಲ್ಲಿ ಕೋರ್ಸ್‌ಗಳಿಗೆ ಪ್ರವೇಶಾತಿಯನ್ನು ಆನ್‌ಲೈನ್ ನೋಂದಣಿಯ ಮೂಲಕ ಒದಗಿಸಲಾಗುತ್ತಿದೆ. 2020–21ನೇ ಸಾಲಿನಿಂದ 2024–25ನೇ ಸಾಲಿನವರೆಗೆ ವಿವಿಧ ಕೋರ್ಸ್‌ಗಳ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಸಂಕ್ಷಿಪ್ತ ವಿವರ ಕೆಳಕಂಡಂತಿರುತ್ತದೆ.



ವಿದ್ಯಾರ್ಥಿಗಳ ಪ್ರವೇಶಾತಿಯಿಂದ ಸ್ವೀಕೃತವಾಗಿರುವ
ಮೊತ್ತ



ಮೇಲ್ಕಂಡ ನಕ್ಷೆಗಳನ್ನು ಅವಲೋಕಿಸಿದಾಗ ಎಕ್ಸ್‌ಪೆರಿಮೆಂಟಲ್ ಯಿದ ವಿವಿಧ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ. 2020-21ನೇ ಸಾಲಿನಲ್ಲಿ ವಿವಿಧ ಕೋರ್ಸ್‌ಗಳಿಗೆ ಒಟ್ಟು 36,596 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದು ರೂ.2,48,18,861/-ಗಳು ಸಂಗ್ರಹವಾಗಿರುತ್ತದೆ. 2024-25ನೇ ಸಾಲಿನಲ್ಲಿ ಒಟ್ಟು 79085 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದು ರೂ.101,94,25,462/-ಗಳು ಸಂಗ್ರಹವಾಗಿರುತ್ತದೆ. ಆದರೆ ಎಕ್ಸ್‌ಪೆರಿಮೆಂಟಲ್ ಯಿದ ಪ್ರವೇಶಾತಿ ಶುಲ್ಕಕ್ಕೆ ಸಂಬಂಧಿಸಿದಂತೆ ಯಾವುದೇ ನಿಯಮಗಳನ್ನಾಗಲಿ ಅಥವಾ ಮಾರ್ಗಸೂಚಿಗಳನ್ನಾಗಲೀ ರಚನೆ ಮಾಡದಿರುವುದು ಕಂಡು ಬಂದಿರುತ್ತದೆ. ಎಕ್ಸ್‌ಪೆರಿಮೆಂಟಲ್ ಯಿದ ವೈಕ್ಷಣಿಕ ಸಭೆಯಲ್ಲಿ ತೀರ್ಮಾನಿಸಿ ಪ್ರವೇಶಾತಿ ಶುಲ್ಕ ರಚನೆ ಪಟ್ಟಿಗೆ ಎಕ್ಸ್‌ಪೆರಿಮೆಂಟಲ್ ಯಿದ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಪ್ರವೇಶಾತಿ ಶುಲ್ಕದ ನಿಗದಿ, ಪರಿಷ್ಕರಣೆಗೆ ಸಂಬಂಧಪಟ್ಟಂತೆ ನಿಯಮಗಳನ್ನು ರಚಿಸಿಕೊಂಡು ಎಕ್ಸ್‌ಪೆರಿಮೆಂಟಲ್ ಯಿದ ಆದಾಯದ ಹೆಚ್ಚಳಕ್ಕೆ ಕ್ರಮವಹಿಸಲು ಸೂಚಿಸಿದೆ.

28. ಕೆ.ಎಸ್.ಓ.ಯು ಆನ್‌ಲೈನ್ ಕಾರ್ಯಕ್ರಮಗಳ ಪ್ರವೇಶಾತಿಯಲ್ಲಿ ಕಡಿಮೆ ಶುಲ್ಕ ಪಡೆದಿರುವುದು: (ವಿಚಾರಣಾ ಪತ್ರ ಸಂಖ್ಯೆ:176/28.10.25)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 2023-24ನೇ ಸಾಲಿನಿಂದ ಆನ್‌ಲೈನ್ ಮೂಲಕವೂ ಸಹ ಪ್ರವೇಶಾತಿಯನ್ನು ಪ್ರಾರಂಭಿಸಿದ್ದು, ವಿಶ್ವವಿದ್ಯಾನಿಲಯಗಳ ಧನ ಸಹಾಯ ಆಯೋಗ-ದಿಜಿಜಿ ರವರ ಆದೇಶ ಸಂಖ್ಯೆ: F.No.39-2/2023(DEB-1), ದಿನಾಂಕ:17.08.2023ರಲ್ಲಿ 10 ಆನ್ಲೈನ್ ಕೋರ್ಸ್ ಗಳಿಗೆ ಮಾನ್ಯತೆಯನ್ನು ನೀಡಲಾಗಿರುತ್ತದೆ.

ವಿವಿಧ ಪದವಿ ಕಾರ್ಯಕ್ರಮಗಳಿಗೆ ನೋಂದಣಿಯಾಗುವ ವಿದ್ಯಾರ್ಥಿಗಳಿಗೆ ಯಾವುದೇ ಸ್ಥಳದಿಂದ ಪ್ರವೇಶಾತಿಯ ಅವಕಾಶವನ್ನು ಒದಗಿಸಿ, ಉನ್ನತ ಶಿಕ್ಷಣಕ್ಕೆ ಅನುಕೂಲಕರ ಮತ್ತು ಹೊಂದಿಕೊಳ್ಳುವ ವಿಧಾನದಲ್ಲಿ ಆಧುನಿಕ ತಂತ್ರಜ್ಞಾನ/ಪರಿಕರಗಳು ಮತ್ತು ಮಲ್ಟಿಮೀಡಿಯಾ ಸಂಪನ್ಮೂಲಗಳನ್ನು ಬಳಸಿಕೊಂಡು ಕಲಿಕಾರ್ಥಿಗಳ ಅಗತ್ಯತೆಗಳನ್ನು ಪೂರೈಸಲು ಮತ್ತು ಸಮೃದ್ಧ ವೈಕ್ಷಣಿಕ ಅನುಭವ ಹಾಗೂ ವೈಕ್ಷಣಿಕ ಶ್ರೇಷ್ಠತೆಯನ್ನು ಸಾಧಿಸುವ ದೂರದೃಷ್ಟಿಯೊಂದಿಗೆ ವಿನ್ಯಾಸಗೊಳಿಸಿರುವ "ಕೆ.ಎಸ್.ಓ.ಯು ಆನ್‌ಲೈನ್ ಕಾರ್ಯಕ್ರಮಗಳಲ್ಲಿ" 2024-25ನೇ ವೈಕ್ಷಣಿಕ ಸಾಲಿನಲ್ಲಿ ವಿವಿಧ ಒಟ್ಟು 10 ಕೋರ್ಸ್‌ಗಳಲ್ಲಿ 719 ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಪ್ರವೇಶಾತಿ ಪಡೆದಿದ್ದು ಸದರಿ ವಿದ್ಯಾರ್ಥಿಗಳಿಂದ ರೂ.1,38,64,000/-ಗಳ ಪ್ರವೇಶಾತಿ ಶುಲ್ಕವು ಸಾಮಾನ್ಯ ನಿಧಿ ಖಾತೆ ಸಂಖ್ಯೆ:50100316845801 ಗೆ ಸ್ವೀಕೃತಿಯಾಗಿದ್ದು, ವಿವರಗಳು ಕೆಳಗಿನಂತಿವೆ:

2024–25ನೇ ಸಾಲಿನ ಆನ್‌ಲೈನ್ ಕಾರ್ಯಕ್ರಮಗಳ ಪ್ರವೇಶಾತಿ ಶುಲ್ಕದ ವಿವರ ಈ ಕೆಳಕಂಡಂತಿದೆ

ಕ್ರ.ಸಂ.	ಕೋರ್ಸ್ ವಿವರ	ವಿದ್ಯಾರ್ಥಿಗಳ ಸಂಖ್ಯೆ	ಶುಲ್ಕ (ರೂ)
1.	ಬಿ.ಎ	220	22,12,000
2.	ಬಿ.ಕಾಂ	176	21,34,000
3.	ಎಂ.ಎ– ಕನ್ನಡ	30	4,72,000
4.	ಎಂ.ಎ– ಇಂಗ್ಲೀಷ್	35	5,50,000
5.	ಎಂ.ಎ– ಹಿಂದಿ	4	68,000
6.	ಎಂ.ಎ– ಸಂಸ್ಕೃತ	19	3,06,000
7.	ಎಂ.ಎ–ಅರ್ಥಶಾಸ್ತ್ರ	24	3,82,000
8.	ಎಂ.ಕಾಂ	37	7,66,000
9.	ಎಂ.ಬಿ.ಎ	141	5,668,000
10.	ಎಂ.ಎಸ್ಸಿ–ಗಣಿತಶಾಸ್ತ್ರ	33	13,06,000
	ಒಟ್ಟು	**719**	**138,64,000**

61ನೇ ಶೈಕ್ಷಣಿಕ ಮಂಡಳಿ ಸಭೆ ಹಾಗೂ 174ನೇ ವ್ಯವಸ್ಥಾಪನಾ ಸಭೆಯಲ್ಲಿ ಅನುಮೋದಿಸಿ 2023–24ನೇ ಶೈಕ್ಷಣಿಕ ಸಾಲಿಗೆ ನಿಗದಿಪಡಿಸಿದ ಪ್ರವೇಶಾತಿ ಶುಲ್ಕದ ದರವನ್ನು 2024–25ನೇ ಸಾಲಿನ ಪ್ರವೇಶಾತಿಗೂ ಸಹ ಮುಂದುವರೆಸಲಾಗಿರುತ್ತದೆ. ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಲಾದ ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಲಾಗಿ ಎಂ.ಎಸ್ಸಿ – ಗಣಿತಶಾಸ್ತ್ರ ವಿಷಯದ ಬೋಧನಾ ಶುಲ್ಕ ಮೊತ್ತವನ್ನು ರೂ.37,000/–ಗಳಿಗೆ ನಿಗದಿಪಡಿಸಿದೆ. ಆದರೆ, ಆನ್‌ಲೈನ್ ಪ್ರವೇಶಾತಿಯಲ್ಲಿ ಪ್ರತಿ ವಿದ್ಯಾರ್ಥಿಗೆ ರೂ.36,000/– ಗಳನ್ನು ಪಡೆಯಲಾಗಿದೆ. ಸದರಿ ಕೋರ್ಸ್‌ನಲ್ಲಿ ಒಟ್ಟು 24 ವಿದ್ಯಾರ್ಥಿಗಳ ಪ್ರವೇಶಾತಿಯಿಂದ ರೂ.8,88,000/–ಗಳು ಸ್ವೀಕೃತಿಯಾಗಬೇಕಾಗಿದ್ದು, ರೂ.8,64,000/– ಗಳು ಮಾತ್ರ ಸ್ವೀಕೃತಿಯಾಗಿದೆ, ವ್ಯತ್ಯಾಸ ಮೊತ್ತ ರೂ.24,000/–ಗಳು ಕಡಿಮೆ ಸ್ವೀಕೃತಿಯಾಗಿದ್ದು, ಈ ಸಂಬಂಧ ಸೂಕ್ತ ಸ್ಪಷ್ಟೀಕರಣ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:176/28.10.25ನ್ನು ನೀಡಲಾಗಿ, ಪ್ರವೇಶಾತಿ ಸಮಯದಲ್ಲಿ ತಾಂತ್ರಿಕ ಕಾರಣಗಳಿಂದಾಗಿ ಪ್ರತಿ ವಿದ್ಯಾರ್ಥಿಗಳಿಂದ ರೂ.36,000/–ಗಳನ್ನು ಪಡೆಯಲಾಗಿದ್ದು, ವ್ಯತ್ಯಾಸದ ಮೊತ್ತ ರೂ.1000/–ಗಳನ್ನು ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ದ್ವಿತೀಯ ವರ್ಷಕ್ಕೆ ಪ್ರವೇಶಾತಿ ನೀಡುವ ಸಂದರ್ಭದಲ್ಲಿ ವಸೂಲಿಸಲಾಗುವುದು ಎಂಬ ಅನುಪಾಲನಾ ವರದಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಕಡಿಮೆ ವಸೂಲಿಸಿರುವ ಪ್ರವೇಶಾತಿ ಶುಲ್ಕದ ಮೊತ್ತ **ರೂ.24,000/–ಗಳನ್ನು ಸಂಬಂಧಿಸಿದ ವಿದ್ಯಾರ್ಥಿಗಳಿಂದ ವಸೂಲಿಸಿ** ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ ಖಾತೆಗೆ ಜಮೆ ಮಾಡಲು ಸೂಚಿಸಿದೆ.

29. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಹೆಚ್ಚುವರಿಯಾಗಿ ಪಾವತಿಸಿರುವುದು ಹಾಗೂ ಬಡ್ಡಿ ಮೊತ್ತವನ್ನು ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆ ಮಾಡದಿರುವುದು:

(ವಿಚಾರಣಾ ಪತ್ರ ಸಂಖ್ಯೆ:177/ದಿ:28.01.2025)

ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ದಾಖಲೆಗಳನ್ವಯ ಕ.ರಾ.ಮು.ವಿ.ಪ.ನಿಲಯದ ವಿದ್ಯಾರ್ಥಿವೇತನ ಖಾತೆಗೆ ಯಾವುದೇ ವಿದ್ಯಾರ್ಥಿ ವೇತನದ ಮೊತ್ತವು ಜಮೆಯಾಗಿರುವುದಿಲ್ಲ. ಪ್ರಸ್ತುತ ಎಸ್.ಎಸ್.ಪಿ ಪೋರ್ಟಲ್‌ನಲ್ಲಿ ನೊಂದಣಿಯಾದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮೊತ್ತವು ನೇರವಾಗಿ ಡಿ.ಬಿ.ಟಿ ಪ್ರಕ್ರಿಯೆಯ ಮೂಲಕ ವಿದ್ಯಾರ್ಥಿಗಳ ಖಾತೆಗೆ ಜಮೆಯಾಗುತ್ತಿದೆ. ಆದುದರಿಂದ, ದಿನಾಂಕ:16.03.2025 ರಲ್ಲಿ ಹೆಚ್.ಡಿ.ಎಫ್.ಸಿ ಬ್ಯಾಂಕ್ ಖಾತೆ ಸಂಖ್ಯೆ:50100059343995ನ್ನು ಮುಕ್ತಾಯಗೊಳಿಸಿ ಅಂತಿಮ ಶಿಲ್ಕಿನ

ಮೊತ್ತವನ್ನು ಎಸ್.ಬಿ.ಐ (ಖಾತೆ ಸಂಖ್ಯೆ:00540354214l7) ಖಾತೆಗೆ ವರ್ಗಾವಣೆ ಮಾಡಿರುತ್ತಾರೆ. ಈ ಕೆಳಕಂಡಂತೆ ವ್ಯವಹರಣೆ ನಡೆದಿರುತ್ತದೆ.

ಪೋಷ್ಟಾರೆ

ಕ್ರಮ ಸಂ	ವಿವರ	ಖಾತೆ ವಿವರ		ಒಟ್ಟು ಮೊತ್ತ
		ಎಸ್.ಬಿ.ಐ	ಹಚ್.ಡಿ.ಎಫ್.ಸಿ	
1.	ಆರಂಭಿಕ ಶಿಲ್ಕು ದಿನಾಂಕ:01.04.2024 ರಂತೆ	**31709203.57**	**14391769.42**	**46100972.99**
2.	ಸ್ವೀಕೃತಿಗಳು			
	ಅರ್ಜಿಸಿರುವ ಬಡ್ಡಿ	8,55,323.00	6,25,127.00	14,80,450
	ವರ್ಗಾವಣೆಯಾಗದೆ ಖಾತೆಗೆ ಮರುಜಮೆಯಾಗಿರುವುದು	11,672.00	0	11,672
	ದಿನಾಂಕ: 16.03.2025ರಂದು ಬ್ಯಾಂಕ್ ಖಾತೆ ಸಂಖ್ಯೆ: 50100059343995 ಖಾತೆಯಿಂದ ವರ್ಗಾವಣೆ ಮಾಡಿರುವುದು.	150,16,896.42	0	150,16,896.42
3.	ಒಟ್ಟು ಸ್ವೀಕೃತಿಗಳು	158,83,891.42	6,25,127.00	16509018.42
4.	ಒಟ್ಟು (1+3)	4,75,93,094.99	150,16,896.42	62609991.41
5.	ಪಾವತಿಗಳು			
	2024–25 ನೇ ಸಾಲಿನಲ್ಲಿ ವಿದ್ಯಾರ್ಥಿ ವೇತನ ಪಾವತಿಸಿರುವ ಮೊತ್ತ	8,53,285	0	8,53,285
	ದಿನಾಂಕ: 16.03.2025ರಂದು ಬ್ಯಾಂಕ್ ಖಾತೆ ಸಂಖ್ಯೆ: 54035421417 ಖಾತೆಗೆ ವರ್ಗಾವಣೆ ಮಾಡಿ ಖಾತೆ ಮುಕ್ತಾಯ.	0	150,16,896.42	150,16,896.42
6.	ಒಟ್ಟು ಪಾವತಿಗಳು	8,53,285	150,16,896.42	1,58,70,181.42
7.	**ಅಂತಿಮ ಶಿಲ್ಕು ದಿನಾಂಕ:31.04.2025ರಂತೆ (4–6)**	**4,67,39,809.99**	0	**4,67,39,809.99**

ಮೇಲಿನ ಕೋಷ್ಟಕದಲ್ಲಿ ನಮೂದಿಸಿರುವ ಮಾಹಿತಿಯಂತೆ 2019–20 ಹಾಗೂ 2020–21ನೇ ಸಾಲಿನ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ 2024–25ನೇ ಸಾಲಿನಲ್ಲಿ ಒಟ್ಟು ರೂ.8,53,285/–ಗಳ ವಿದ್ಯಾರ್ಥಿ ವೇತನ ಮೊತ್ತವನ್ನು ಪಾವತಿಸಲಾಗಿರುತ್ತದೆ. ಈ ಸಂಬಂಧ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ವಿದ್ಯಾರ್ಥಿ ವೇತನ ಲೆಡ್ಜರ್ ಅನ್ನು ಪರಿಶೀಲಿಸಲಾಗಿ ವಿದ್ಯಾರ್ಥಿ ವೇತನದ ಬೇಡಿಕೆ ಮೊತ್ತಗಿಂತ ವಿದ್ಯಾರ್ಥಿಗಳಿಗೆ ರೂ.71,490/–ಗಳನ್ನು ಹೆಚ್ಚುವರಿಯಾಗಿ ಪಾವತಿ ಮಾಡಲಾಗಿದೆ. ವಿವರಗಳನ್ನು **ಅನುಬಂಧ–12** ರಲ್ಲಿ **ಲಗತ್ತಿಸಿದೆ.**

ಸರ್ಕಾರದ ಮಾರ್ಗಸೂಚಿಯಂತೆ, ವಿದ್ಯಾರ್ಥಿ ವೇತನಕ್ಕೆ ಬಿಡುಗಡೆಯಾದ ಅನುದಾನದಿಂದ ಅರ್ಜಿತವಾಗಿರುವ ಬಡ್ಡಿಯನ್ನು ಹಣಕಾಸು ವರ್ಷದ ಅಂತ್ಯಕ್ಕೆ ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಬೇಕಾಗಿರುತ್ತದೆ. ಲೆಕ್ಕ ಪರಿಶೋಧನೆ ಅವಧಿಗೆ ವಿಶ್ವವಿದ್ಯಾನಿಲಯದ ಎರಡು ಖಾತೆಗಳಿಂದ ಒಟ್ಟು ರೂ.14,80,450/–ಗಳ ಬಡ್ಡಿ ಮೊತ್ತವು ಅರ್ಜಿತವಾಗಿದೆ. ಸದರಿ ಮೊತ್ತ ಸರ್ಕಾರಕ್ಕೆ ಜಮೆ ಮಾಡಿರುವ ವಿವರ ಹಾಜರುಪಡಿಸಿರುವುದಿಲ್ಲ.

ಹಾಗೂ ಬ್ಯಾಂಕ್ ಖಾತೆಯಲ್ಲಿ ಬಡ್ಡಿ ರೂ.1,85,11,197/–ಹೊರತು ಪಡಿಸಿ ಪೂರ್ಣ ಪ್ರಮಾಣದಲ್ಲಿ ವಿದ್ಯಾರ್ಥಿಗಳಿಗೆ ವಿತರಿಸದೆ ಉಳಿದಿರುವ ಮೊತ್ತ ರೂ.2,82,28,613/–ವಿದ್ಯಾರ್ಥಿಗಳ ವಿವರವನ್ನು ಗುರುತಿಸದೆ ಬಾಕಿ ಉಳಿಸಿಕೊಳ್ಳಲಾಗಿದೆ.

ಮೇಲಿನ ಅಂಶಗಳಿಗೆ ಸೂಕ್ತ ಸ್ಪಷ್ಟೀಕರಣವನ್ನು ಕೋರಿ ವಿಚಾರಣಾ ಪತ್ರ ಸಂಖ್ಯೆ:177/ದಿ:28.01.2025 ನ್ನು ನೀಡಲಾಗಿತ್ತು. ಅದಕ್ಕೆ ವಿಶ್ವವಿದ್ಯಾನಿಲಯವು ಎಸ್.ಎಸ್.ಪಿ ಪೋರ್ಟಲ್‌ನಲ್ಲಿ ಮಂಜೂರಾತಿ ಪಟ್ಟಿಯನ್ವಯ ವಿದ್ಯಾರ್ಥಿಗಳಿಗೆ ಪಾವತಿಸಲಾಗಿದೆ ಎಂದು ಹಾಗೂ 2015–16 ರಿಂದ 2022–23 ಸಾಲುಗಳಲ್ಲಿ ಅರ್ಜಿತವಾದ ಬಡ್ಡಿ ಮೊತ್ತ ರೂ.1,56,28,160/– ಗಳನ್ನು ಸರ್ಕಾರದ ಲೆಕ್ಕ ಶೀರ್ಷಿಕೆ:2225–01–911–0–04–364–NA ಗೆ ದಿನಾಂಕ:07–05–2025 ರಂದು ಜಮೆ ಮಾಡಲಾಗಿದೆ ಹಾಗೂ ಉಳಿದ 2023–24 ರಿಂದ 2024–25 ಸಾಲುಗಳ ಬಡ್ಡಿ ಮೊತ್ತ ರೂ.28,83,037/–ಗಳನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾಗುವುದು ಹಾಗೂ ಬಾಕಿ ಮೊತ್ತ ರೂ.2,82,28,613/–ಗಳನ್ನು ವಿದ್ಯಾರ್ಥಿಗಳಿಗೆ ಪತ್ರ ಅಥವಾ ದೂರವಾಣಿ ಮೂಲಕ ಸಂಪರ್ಕಿಸಿ ಪಾವತಿಸಲು ಕ್ರಮವಹಿಸಲಾಗುವುದು ಎಂದು ಉತ್ತರಿಸಿರುತ್ತಾರೆ.

ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ವೇತನದ ಬೇಡಿಕೆ ದಾಖಲೆಗಳನ್ನು ಪರಿಶೀಲಿಸಿ ವಿದ್ಯಾರ್ಥಿ ವೇತನ ಪಾವತಿಸದೇ, ಎಸ್.ಎಸ್.ಪಿ ಪೋರ್ಟಲ್ ಪಟ್ಟಿಯಂತೆ ವಿದ್ಯಾರ್ಥಿ ವೇತನ ಪಾವತಿ ಮಾಡಿರುವುದರಿಂದ ವಿದ್ಯಾರ್ಥಿಗಳಿಗೆ ರೂ.71,490/– ಗಳನ್ನು ಹೆಚ್ಚುವರಿಯಾಗಿ ವಿದ್ಯಾರ್ಥಿ ವೇತನ ಪಾವತಿಯಾಗಿರುತ್ತದೆ. ಆದ್ದರಿಂದ ಈ ಬಗ್ಗೆ ಮಾನ್ಯ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆಯಿಂದ ಸೂಕ್ತ ನಿರ್ದೇಶನ ಪಡೆದು ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಿದೆ. ಹಾಗೂ ಬಡ್ಡಿ ಮೊತ್ತ ರೂ.28,83,037/–ಗಳನ್ನು ಹಾಗೂ ಖಾತೆಯಲ್ಲಿ ಬಾಕಿ ಉಳಿದಿರುವ ಮೊತ್ತ ರೂ.2,82,28,613/– ಗಳನ್ನು ಸಂಬಂಧ ಪಟ್ಟವರಿಗೆ ಪಾವತಿಸಲು ಸೂಚಿಸಿದೆ. ಹಾಗೂ ಒಟ್ಟು ಬಡ್ಡಿ ಮೊತ್ತ ರೂ.28,83,037/–ಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಅರ್ಜಿಸಿದ ಬಡ್ಡಿಯ ಮೊತ್ತ **ರೂ.14,80,450/–ಗಳನ್ನು** ಸರ್ಕಾರದ ಲೆಕ್ಕ ಶೀರ್ಷಿಕೆ:2225–01–911–0–04–364–NA ಗೆ ಜಮೆ ಮಾಡುವವರೆಗೆ **ಆಕ್ಷೇಪಣೆಗೆ** ಸೂಚಿಸಿದೆ. ಹಾಗೂ **ರೂ.71,490/–ಗಳನ್ನು** ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಸಂಬಂಧಿಸಿದ ವಿದ್ಯಾರ್ಥಿಗಳಿಂದ **ವಸೂಲಾತಿಗೆ ಸೂಚಿಸಿದೆ.**

30. ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಬ್ಯಾಂಕ್ ಕಟ್ಟಡದಿಂದ ಕಡಿಮೆ ಬಾಡಿಗೆಯನ್ನು ವಸೂಲಿಸಿರುವುದು ಹಾಗೂ ಜಿ.ಎಸ್.ಟಿಯನ್ನು ಸಂಬಂಧಿಸಿದ ಲೆಕ್ಕಶೀರ್ಷಿಕೆಗೆ ಜಮೆ ಮಾಡದಿರುವುದು:

(ವಿಚಾರಣಾ ಪತ್ರ ಸಂಖ್ಯೆ:93/ದಿ:16.08.2025 & 168/ದಿನಾಂಕ:23–10–2025)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿ ನಿರ್ಮಾಣಗೊಂಡಿರುವ ಕಟ್ಟಡವನ್ನು ಬ್ಯಾಂಕ್‌ಗೆ ಬಾಡಿಗೆಗೆ ನೀಡಲು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳ ಜಲಸಾರಿಗೆ ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರು ತಮ್ಮ ಪತ್ರ ಸಂಖ್ಯೆ:ಕಾ.ಇಂ.ಮೈ.ವಿ.ಮೈ. ಎಇ–3 ಬಾಡಿಗೆ ನಿಗದಿ:11–12/1757, ದಿನಾಂಕ:10.03.2011ರಲ್ಲಿ ಕಟ್ಟಡದ ಬಾಡಿಗೆಯನ್ನು ಮಾಹೆಯಾನ ರೂ.37,500/–ಗಳಿಗೆ ನಿಗದಿಪಡಿಸಿರುತ್ತಾರೆ. ಆದರೆ ಬ್ಯಾಂಕ್‌ನವರೊಂದಿಗೆ ವಿಶ್ವವಿದ್ಯಾನಿಲಯವು 15 ವರ್ಷಗಳವರೆಗೆ ಪ್ರತಿ 5 ವರ್ಷಕ್ಕೊಮ್ಮೆ **ಶೇ.20** ರ ಪ್ರಮಾಣದಲ್ಲಿ ಬಾಡಿಗೆ ಮೊತ್ತವನ್ನು ಹೆಚ್ಚಿಸುವ ಷರತ್ತಿನ ಮೇಲೆ ಮಾಹೆಯಾನ ರೂ.25,000/–ಗಳಿಗೆ ಬಾಡಿಗೆ ನಿಗದಿಪಡಿಸಿ ದಿನಾಂಕ:16.08.2012 ರಂದು ದಿನಾಂಕ:01.02.2012ರಿಂದ ಪೂರ್ವಾನ್ವಯವಾಗುವಂತೆ ಕರಾರುಪತ್ರವನ್ನು ಮಾಡಿಕೊಂಡಿರುತ್ತಾರೆ. ಒಪ್ಪಂದ ಪತ್ರವನ್ನು ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ–401 ರಲ್ಲಿನ ನಿಯಮಗಳನ್ವಯ "ದ್ವಿಪಕ್ಷೀಯ ಹಿತಾಸಕ್ತಿ"ಗಳನ್ನು ಕಾಯ್ದುಕೊಂಡಿರುವ ಕಾನೂನು ಸಲಹೆ ಪಡೆಯದೆ ಒಪ್ಪಂದ ಪತ್ರ ಮಾಡಿಕೊಳ್ಳಲಾಗಿರುತ್ತದೆ.

ಈ ಬಗ್ಗೆ ಈ ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಆಕ್ಷೇಪಿಸಿ ವಸೂಲಾತಿಗೆ ಸೂಚಿಸಿದ್ದರೂ, 2024–25ನೇ ಸಾಲಿನಲ್ಲಿ ರೂ. 36,000/– ಗಳ ಕಡಿಮೆ ಬಾಡಿಗೆ ನಿಗದಿಪಡಿಸಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟುಮಾಡಲಾಗಿದೆ. ವಿವರಗಳು ಕೆಳಕಂಡಂತಿದೆ.

ಕ್ರ.ಸಂ	ಮಾಹೆ	ತಿಂಗಳು	ನಿಗದಿಪಡಿಸಬೇಕಾದ ಮಾಹೆಯಾನ ಬಾಡಿಗೆ/ ಬೇಡಿಕೆ ಮೊತ್ತ (Demand)	ವಿಶ್ವವಿದ್ಯಾನಿಲಯ ನಿಗದಿಪಡಿಸಿರುವ ಮಾಹೆಯಾನ ಬಾಡಿಗೆ / ವಸೂಲಾತಿ ಮೊತ್ತ (Collection)	ವ್ಯತ್ಯಾಸ

1	ಏಪ್ರಿಲ್–24 ರಿಂದ ಮಾರ್ಚ್–2025 ರವರೆಗೆ	12	54,000 * 12 = 6,48,000	36000 * 12 = 4,32,000	2,16,000

ಮೇಲೆ ವಿವರಿಸಿರುವಂತೆ ಲೋಕೋಪಯೋಗಿ ಇಲಾಖೆಯವರು ನಿಗದಿಪಡಿಸಿದ ದರಕ್ಕಿಂತ ಕಡಿಮೆ ಬಾಡಿಗೆ ಮೊತ್ತವನ್ನು ವಸೂಲಾತಿ ಮಾಡಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ನಷ್ಟವುಂಟು ಮಾಡಿರುವ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ:93/ದಿ:16.08.2025 ನ್ನು ನೀಡಲಾಗಿತ್ತು. ಅದಕ್ಕೆ ಕಾರ್ಯಪಾಲಕ ಅಭಿಯಂತರರು ಪ್ರತಿಕ್ರಿಯಿಸಿ. ಕಡಿಮೆ ಬಾಡಿಗೆಯನ್ನು ಅಂದಿನ ಮಾನ್ಯ ಕುಲಪತಿಗಳು ನಿಗದಿಪಡಿಸಿರುವಂತೆ ಕರಾರು ಒಪ್ಪಂದ ಮಾಡಿಕೊಂಡು ಬಾಡಿಗೆ ಪಡೆಯಲಾಗುತ್ತಿದೆ. ಹೀಗೆ ಕರಾರು ಒಪ್ಪಂದ ಮಾಡಿಕೊಂಡು ವಿ.ವಿ ನಿಲಯಕ್ಕೆ ನಷ್ಟ ಉಂಟುಮಾಡಿರುವ ಅಧಿಕಾರಿಗಳಿಂದ ವ್ಯತ್ಯಾಸದ ಮೊತ್ತ ವಸೂಲಿಗೆ ಕ್ರಮ ಕೈಗೊಳ್ಳಲು ಕುಲಪತಿ ಹಾಗೂ ಕುಲಸಚಿವರ ಹಂತದಲ್ಲಿ ಚರ್ಚೆಯಲ್ಲಿರುತ್ತದೆ ಎಂದು ಉತ್ತರಿಸಿರುತ್ತಾರೆ.

ಮುಂದುವರೆದು Goods and Service Tax (CGST)Act –2017 Section–7 ಅನ್ವಯ ದಿನಾಂಕ:01–07–2017 ರಿಂದ ಅನ್ವಯವಾಗುವಂತೆ ಬಾಡಿಗೆ ಮೊತ್ತಗಳ ಮೇಲೆ ಸರಕು ಸೇವಾ ತೆರಿಗೆ ವಿಧಿಸಿ ಸಂಬಂಧಪಟ್ಟ ಇಲಾಖಾ ಲೆಕ್ಕಶೀರ್ಷಿಕೆಗೆ ಜಮಾ ಮಾಡಿರುವ ವಿವರಗಳು ಲೆಕ್ಕಪರಿಶೋಧನೆಗೆ ಲಭ್ಯವಾಗಿರುವುದಿಲ್ಲ. ದಿನಾಂಕ:01–07–2017 ರಿಂದ 31–03–2024 ರವರೆಗಿನ ಹಿಂಬಾಕಿ ಸರಕು ಮತ್ತು ಸೇವಾ ತೆರಿಗೆ ಮೊತ್ತಗಳು ಕೆಳಕಂಡಂತಿರುತ್ತವೆ.

ಎಸ್‌ಬಿಎಂ ಬ್ಯಾಂಕ್ ಕಟ್ಟಡದ ಬಾಡಿಗೆ ಮೇಲೆ ನಿಯಮಾನುಸಾರ ಪಾವತಿಸಬೇಕಾದ ಹಿಂಬಾಕಿ ಜಿಎಸ್‌ಟಿ ಲೆಕ್ಕಾಚಾರ ಪಟ್ಟಿ

ಕ್ರಮ ಸಂಖ್ಯೆ	ಅವಧಿ		ಒಟ್ಟು ಮಾಹೆಗಳು	ಮಾಹೆವಾರು ಬಾಡಿಗೆ ದರ	ಒಟ್ಟು ಬಾಡಿಗೆ ಮೊತ್ತ	ಬಾಡಿಗೆ ಮೊತ್ತದ ಮೇಲೆ ಪಾವತಿಸ ಬೇಕಾದ ಜಿಎಸ್‌ಟಿ ಮೊತ್ತ ರೂ.
	ಇಂದ	ವರೆಗೆ				
1	01–07–2017	31–03–2018	9	30,000	2,70,000	48,600
2	01–04–2018	31–03–2019	12	30,000	3,60,000	64,800
3	01–04–2019	31–03–2020	12	30,000	3,60,000	64,800
4	01–04–2020	31–03–2021	12	30,000	3,60,000	64,800
5	01–04–2021	31–01–2022	10	30,000	3,60,000	54,000
6	01–02–2022	31–03–2022	2	36,000	72,000	12,960
7	01–04–2022	31–03–2023	12	36,000	4,32,000	77,760
8	01–04–2023	31–03–2024	12	36,000	4,32,000	77,760
					ಒಟ್ಟು ಮೊತ್ತ ರೂ	4,65,480

ಬಾಕಿ ಉಳಿದ ಜಿಎಸ್‌ಟಿ ಮೊತ್ತ ನೀಡಿರುವುದಕ್ಕೆ ಸೂಕ್ತ ಮಾಹಿತಿಯನ್ನು ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:168/ದಿನಾಂಕ:23–10–2025 ನ್ನು ನೀಡಲಾಗಿದ್ದು ಅನುಪಾಲನಾ ಪತ್ರ ಸಂಖ್ಯೆ: ಕರಾಮುಪ/ಯುಇಡಿ/45/2025–26 ದಿನಾಂಕ: 18–11–2025 ರಲ್ಲಿ ಅಂತಿಮ ಕ್ರಮದ ಉತ್ತರವನ್ನು ನೀಡಿರುವುದಿಲ್ಲ. ಲೆಕ್ಕಪರಿಶೋಧನೆಯಂತೆ ಬಾಡಿಗೆ, ಬೇಡಿಕೆ, ವಸೂಲಿ ಮತ್ತು ಬಾಕಿ ವಿವರಗಳ ಪೋಷ್ಣಾರೆಯು ಕೆಳಕಂಡಂತಿರುತ್ತದೆ.

ಬಾಡಿಗೆ ಬೇಡಿಕೆ, ವಸೂಲಿ ಮತ್ತು ಬಾಕಿ ವಿವರ

ಕ್ರ.ಸಂ	ವಿವರ	ಬಾಡಿಗೆ	ಜಿಎಸ್‌ಟಿ	ದಂಡ	ಒಟ್ಟು ಬಾಡಿಗೆ ಮೊತ್ತ ರೂ

1	ದಿನಾಂಕ: 01–04–2024 ಕ್ಕೆ ಪ್ರಾರಂಭಿಕ ಶಿಲ್ಕು	36,000	4,71,960	0	5,07,960
2	2024–25 ನೇ ಸಾಲಿನ ಬೇಡಿಕೆ	4,32,000	77,760	0	5,09,760
3	ಒಟ್ಟು ಮೊತ್ತ	4,68,000	549,720	0	1,017,720
4	2024–25ನೇ ಸಾಲ್ಲಿನಲ್ಲಿ ವಸೂಲಿ	4,32,000	0	0	4,32000
5	31–03–2025 ಕ್ಕೆ ಅಂತಿಮ ಶಿಲ್ಕು	36,000	5,49,720	0	5,85,720

ಬ್ಯಾಂಕ್ ಕಟ್ಟಡ ಬಾಡಿಗೆ ದಿನಾಂಕ:31–03–2025 ಕ್ಕೆ ರೂ.5,49,720/– ಗಳ ಜಿಎಸ್‌ಟಿ ಮೊತ್ತವು ಬಾಡಿಗೆ ದಾರರಿಂದ ವಸೂಲಿಸಿ ಜಿಎಸ್‌ಟಿ ಲೆಕ್ಕಶೀರ್ಷಿಕೆಗೆ ಜಮಾ ಮಾಡಲು ಬಾಕಿ ಇರುತ್ತದೆ. ಸದರಿ ಜಿಎಸ್‌ಟಿ ಮೊತ್ತವನ್ನು ವಿಳಂಬವಾಗಿ ಪಾವತಿಸುವುವದಕ್ಕೆ ಇಲಾಖೆಯು ವಿಧಿಸುವ ಬಡ್ಡಿ ಮತ್ತು ದಂಡದ ಮೊತ್ತವನ್ನು ಪಾವತಿಸುವ ಸಂಧರ್ಭಗಳು ಉದ್ಭವವಾಗುವುದರಿಂದ ಜಿಎಸ್‌ಟಿ ಮೊತ್ತ ಪಾವತಿಯ ದಿನಾಂಕದಿಂದ ಬಾಡಿಗೆ ಮೊತ್ತಗಳ ಮೇಲೆ ಶೇ.18ರ ದರದಲ್ಲಿ ಜಿಎಸ್‌ಟಿ ಮೊತ್ತವನ್ನು ಲೆಕ್ಕಾಚಾರ ಮಾಡಲಾಗಿರುತ್ತದೆ. ಪಾವತಿಗೆ ಬಾಕಿ ಉಳಿದ ರೂ.5,49,720/– ಗಳನ್ನು ಬ್ಯಾಂಕ್‌ದಾರರಿಂದ ವಸೂಲಿಸಿ ಜಿಎಸ್‌ಟಿ ಲೆಕ್ಕಶೀರ್ಷಿಕೆಗೆ ಜಮಾ ಮಾಡುವವರೆಗೆ ಜಿಎಸ್‌ಟಿ ಮೊತ್ತ **ರೂ.5,49,720/– ಗಳನ್ನು ವಸೂಲಾತಿಗೆ ಸೂಚಿಸಿದೆ.** ಬಾಕಿ ಉಳಿದ ಬಾಡಿಗೆ ಮೊತ್ತವನ್ನು ವಸೂಲಿಸುವ ಅಗತ್ಯಕ್ರಮ ವಹಿಸಲು ಸೂಚಿಸಿದೆ. ವಿವರಗಳನ್ನು **ಅನುಬಂಧ–13** ರಲ್ಲಿ ನೀಡಲಾಗಿದೆ ಹಾಗೂ ನಿಗದಿಪಡಿಸಿರುವ ಬಾಡಿಗೆ ದರಕ್ಕಿಂತ ಕಡಿಮೆ ಬಾಡಿಗೆ ಪಡೆದಿರುವುದಕ್ಕೆ ವ್ಯಾತ್ಯಾಸ ಮೊತ್ತ **ರೂ.2,16,000/–ಗಳನ್ನು ವಸೂಲಾತಿಗೆ ಸೂಚಿಸದೆ. (ಒಟ್ಟು ಮೊತ್ತ ರೂ.5,49,720+2,16,000 = 7,65,720)**

31. ದಾಸ್ತಾನು ಲೆಕ್ಕಗಳು

31.1 ರಶೀದಿ ಪುಸ್ತಕಗಳ ಭೌತಿಕ ಪರಿಶೀಲನೆ ವಿವರ:

ಎ) ಲೆಕ್ಕಪರಿಶೋಧನಾ ಅವಧಿಯಲ್ಲಿ ಭೌತಿಕವಾಗಿ ಪರಿಶೀಲಿಸಿದ ರಶೀದಿ ಪುಸ್ತಕಗಳ ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ.ಸಂ	ವಿಭಾಗ	ಭೌತಿಕವಾಗಿ ಖಾಲಿ ಉಳಿದ ರಶೀದಿ ಪುಸ್ತಕಗಳ ವಿವರ	ಷರಾ
1.	ಸಾಮಾನ್ಯ ನಿಧಿ (08)	ರಶೀದಿ ಪುಸ್ತಕ ಸಂಖ್ಯೆ : 16 ರಿಂದ 100 (ರ.ಸಂ: 751 ರಿಂದ 5000 ರವರೆಗೆ)	ಸಂಪೂರ್ಣ ಖಾಲಿ ಉಳಿದಿರುತ್ತದೆ.
2.	ಗ್ರಂಥಾಲಯ	ರಶೀದಿ ಪುಸ್ತಕ ಸಂಖ್ಯೆ : 1472 ರಿಂದ 1473 ರವರೆಗೆ (ರ.ಸಂ: 098551 ರಿಂದ 098650 ರವರೆಗೆ ಉಪಯೋಗಿಸಲಾಗಿದೆ)	ಸಂಪೂರ್ಣವಾಗಿ ಉಪಯೋಗಿಸಲಾಗಿದೆ.
		ರಶೀದಿ ಪುಸ್ತಕ ಸಂಖ್ಯೆ : 1474 (ರ.ಸಂ: 098651 ರಿಂದ 098692 ರವರೆಗೆ ಉಪಯೋಗಿಸಲಾಗಿದೆ)	ಭಾಗಶಃ ಖಾಲಿ ಉಳಿದಿರುತ್ತದೆ.
		ರಶೀದಿ ಪುಸ್ತಕ ಸಂಖ್ಯೆ : 1475 ರಿಂದ 1480 ರವರೆಗೆ (ರ.ಸಂ: ರಿಂದ ರವರೆಗೆ 6 ರಶೀದಿ ಪುಸ್ತಕಗಳು (ತ್ರಿಪ್ರತಿಯಲ್ಲಿ)	ಸಂಪೂರ್ಣ ಖಾಲಿ ಉಳಿದಿರುತ್ತದೆ.
3.	ಪ್ರಸಾರಾಂಗ ವಿಭಾಗ	ರಶೀದಿ ಪುಸ್ತಕ ಸಂಖ್ಯೆ : 151 ರಿಂದ 164 ರವರೆಗೆ (ರ.ಸಂ: 7501 ರಿಂದ 8200 ರವರೆಗೆ ಉಪಯೋಗಿಸಲಾಗಿದೆ)	ಸಂಪೂರ್ಣವಾಗಿ ಉಪಯೋಗಿಸಲಾಗಿದೆ
		ರಶೀದಿ ಪುಸ್ತಕ ಸಂಖ್ಯೆ : 165 (ರ.ಸಂ: 8201 ರಿಂದ 8239 ರವರೆಗೆ ಉಪಯೋಗಿಸಲಾಗಿದೆ)	ಭಾಗಶಃ ಖಾಲಿ ಉಳಿದಿರುತ್ತದೆ.

		ರಶೀದಿ ಪುಸ್ತಕ ಸಂಖ್ಯೆ : 166 ರಿಂದ 180 ರವರೆಗೆ (ರ.ಸಂ: 8251 ರಿಂದ 9000 ರವರೆಗೆ 15 ರಶೀದಿ ಪುಸ್ತಕಗಳು (ತ್ರಿಪ್ರತಿಯಲ್ಲಿ)	ಸಂಪೂರ್ಣ ಖಾಲಿ ಉಳಿದಿರುತ್ತದೆ.
4.	ವಿದ್ಯಾರ್ಥಿನಿಲಯ	ರಶೀದಿ ಪುಸ್ತಕ ಸಂಖ್ಯೆ : 1494 , 1495, 1496, 1498,1499, 04, 05, 06, 07, 08, 09, 10 ನ್ನುಉಪಯೋಗಿಸಲಾಗಿದೆ	ಸಂಪೂರ್ಣವಾಗಿ ಉಪಯೋಗಿಸಲಾಗಿದೆ
		ರಶೀದಿ ಪುಸ್ತಕ ಸಂಖ್ಯೆ : 11 (ರಶೀದಿ ಸಂಖ್ಯೆ : 530 ರವರೆಗೆ ಉಪಯೋಗಿಸಲಾಗಿದೆ)	ಭಾಗಶಃ ಖಾಲಿ ಉಳಿದಿರುತ್ತದೆ.
		ರಶೀದಿ ಪುಸ್ತಕ ಸಂಖ್ಯೆ : 12, 13, 14, 15	ಸಂಪೂರ್ಣ ಖಾಲಿ ಉಳಿದಿರುತ್ತದೆ.
5.	ಅತಿಥಿ ಗೃಹ	ರಶೀದಿ ಪುಸ್ತಕ ಸಂಖ್ಯೆ : 1490, 1492,1500 ನ್ನು ಉಪಯೋಗಿಸಲಾಗಿದೆ.	ಸಂಪೂರ್ಣವಾಗಿ ಉಪಯೋಗಿಸಲಾಗಿದೆ
		ರಶೀದಿ ಪುಸ್ತಕ ಸಂಖ್ಯೆ : 01 (ರಶೀದಿ ಸಂಖ್ಯೆ : 36 ರವರೆಗೆ ಉಪಯೋಗಿಸಲಾಗಿದೆ)	ಭಾಗಶಃ ಖಾಲಿ ಉಳಿದಿರುತ್ತದೆ.
		ರಶೀದಿ ಪುಸ್ತಕ ಸಂಖ್ಯೆ : 02, 03	ಸಂಪೂರ್ಣ ಖಾಲಿ ಉಳಿದಿರುತ್ತದೆ.

ಬಿ) ರಶೀದಿ ಪುಸ್ತಕಗಳ ದಾಸ್ತನು, ವಿತರಣೆ ಮತ್ತು ಬಾಕಿ ವಿವರ ಈ ಕೆಳಕಂಡಂತಿದೆ.

ಕ್ರ. ಸಂ	ದಾಸ್ತಾನು ವಿವರ	ವಿಭಾಗ	ಪ್ರಾರಂಭಿಕ ತಿಲ್ಲುಕ (ದಿ:01.04.2024ರಂತೆ)	2024 –25 ರಲ್ಲಿ ಸ್ವೀಕೃತಿ	ಒಟ್ಟು	202 –25 ರಲ್ಲಿ ವಿತರಣೆ/ ಬಳಕೆ	ಅಂತಿಮ ತಿಲ್ಲುಕ (ದಿ:31.03.2025 ರಂತೆ)	ಉಳಿಕೆ ರಶೀದಿ ಪುಸ್ತಕಗಳ ಸಂಖ್ಯೆ		
								ಇಂದ	ವರೆಗೆ	ಒಟ್ಟು
1.	ಮುಖ್ಯ ದಾಸ್ತಾನು	ಸಾಮಾನ್ಯ ನಿಧಿ (08)	05	100	105	20	85	16	100	85
2.	ಉಪ ದಾಸ್ತಾನು	ಗ್ರಂಥಾಲಯ	09	0	09	03	06	1475	1480	06
3.		ಪಸಾರಾಂಗ	10	20	30	13	17	164	180	17
4		ವಿದ್ಯಾರ್ಥಿನಿಲಯ	02	15	17	13	04	12	15	04
5.		ಅತಿಥಿ ಗೃಹ	02	05	07	05	02	02	03	02
6.		ಕಾರ್ಯಪಾಲಕ ಅಭಿಯಂತರರ ಕಛೇರಿ (ಇಂಜಿನಿಯರಿಂಗ್ ವಿಭಾಗ)	0	0	0	0	0	–	–	–
ಒಟ್ಟು			28	140	168	54	114	–	–	114

31.2 ರಶೀದಿ ಪುಸ್ತಕಗಳಿಂದ ವಿಭಾಗವಾರು ವಸೂಲಿಸಿದ ಮತ್ತು ಇರಸಾಲು ಮಾಡಿದ ವಿವರಗಳು.

2024–25ನೇ ಸಾಲಿನಲ್ಲಿ ಒಳಕೆಯಾಗಿರುವ ರಶೀದಿ ಪುಸ್ತಕಗಳನ್ನು, ಜಮಾ ಚಲನ್‌ಗಳು ಮತ್ತು ಬ್ಯಾಂಕ್ ಸ್ಟೋಲ್‌ಗಳೊಂದಿಗೆ ಪರಿಶೀಲಿಸಲಾಗಿ ರಶೀದಿ ಪುಸ್ತಕಗಳಿಂದ ಒಟ್ಟು ಸ್ವೀಕೃತಿ ಮತ್ತು ಇರಸಾಲು ವಿವರಗಳ ಸಂಕ್ಷಿಪ್ತ ಮಾಹಿತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕ್ರ ಸಂ	ವಿಭಾಗ	ಸ್ವೀಕೃತಿಗಳು			ಇರಸಾಲು		
		ರಶೀದಿ	ಚಲನ್/ ಆನ್‌ಲೈನ್	ಒಟ್ಟು	ಸಾಮಾನ್ಯ ನಿಧಿ ಖಾತೆ ಸಂಖ್ಯೆ: 54035420117	ಹಾಸ್ಟೆಲ್ ನಿಧಿ ಖಾತೆ ಸಂಖ್ಯೆ: 64068987296	ಒಟ್ಟು
1	ಗ್ರಂಥಾಲಯ	55,950	–	55,950	55,950	–	55,950
2	ಕಾರ್ಯಪಾಲಕ ಅಭಿಯಂತರರ ಕಛೇರಿ	–	18,880	18,880	18,880	–	18,880
3	ಅತಿಥಿ ಗೃಹ	7,59,802	–	7,59,802	–	7,59,802	7,59,802
4	ವಿದ್ಯಾರ್ಥಿ ನಿಲಯ	6,16,971	–	6,16,971	–	6,16,971	6,16,971
5	ಪ್ರಸಾರಾಂಗ	1,59,938	–	1,59,938	1,59,938	–	1,59,938
ಒಟ್ಟು ಮೊತ್ತ ರೂ.		**15,92,661**	**18,880**	**16,11,541**	**2,34,768**	**13,76,773**	**16,11,541**

31.3 ಗ್ರಂಥಾಲಯ ಪುಸ್ತಕಗಳ ದಾಸ್ತಾನು ವಿವರ.

2024–25ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಗ್ರಂಥಾಲಯ ವಿಭಾಗದ ದಾಸ್ತಾನು ವಹಿ/ಸೇರ್ಪಡೆ ವಹಿಗಳನ್ನು (Accession Register) ಮೂರಕ ದಾಖಲೆಗಳೊಂದಿಗೆ ಪರಿಶೀಲಿಸಲಾಗಿ, ದಿನಾಂಕ: 01–04–2024ಕ್ಕೆ ಒಟ್ಟು 1,09,319 ಪುಸ್ತಕಗಳು (ಖರೀದಿ ಪುಸ್ತಕಗಳು + ಉಡುಗೊರೆಯಾಗಿ ಪಡೆದ ಪುಸ್ತಕಗಳು) ಪ್ರಾರಂಭ ಶಿಲ್ಕಿನಲ್ಲಿದ್ದು, ಸದರಿ ಸಾಲಿನಲ್ಲಿ ಖರೀದಿಸಿದ 482 ಪುಸ್ತಕಗಳು ಹಾಗೂ ಉಡುಗೊರೆಯಾಗಿ ಸ್ವೀಕರಿಸಿದ 485 ಪುಸ್ತಕಗಳು ಸೇರ್ಪಡೆಗೊಂಡು ದಿನಾಂಕ:31.03.2025ರ ಅಂತ್ಯಕ್ಕೆ ಒಟ್ಟು 1,10,286 ಪುಸ್ತಕಗಳು ಗ್ರಂಥಾಲಯದಲ್ಲಿದ್ದು, ಅದರ ಸಂಕ್ಷಿಪ್ತ ವಿವರ ಈ ಕೆಳಗಿನಂತಿದೆ.

ಘೋಷ್ವಾರೆ:

ಪುಸ್ತಕಗಳ ದಾಸ್ತಾನು ವಿವರ	ಖರೀದಿಸಿದ ಪುಸ್ತಕಗಳ ಸಂಖ್ಯೆ	ಉಡುಗೊರೆಯಾಗಿ ಪಡೆದ ಪುಸ್ತಕಗಳ ಸಂಖ್ಯೆ	ಒಟ್ಟು
ದಿನಾಂಕ:01.04.2024 ರಂತೆ ಆರಂಭಿಕ ಶಿಲ್ಕು	1,04,942	4,377	1,09,319
(+) 2024–25ನೇ ಸಾಲಿನಲ್ಲಿ ಖರೀದಿ	482	485	967
ಒಟ್ಟು	1,05,424	4,862	1,10,286
(–) 2023–24ನೇ ಸಾಲಿನಲ್ಲಿ ಎಲೇ/ಕಳವು	–	–	–
ದಿನಾಂಕ:31.03.2025 ರಂತೆ ಅಂತಿಮ ಶಿಲ್ಕು	1,05,424	4,862	1,10,286

31.4 ಅಂಕಪಟ್ಟಿ, ಪದವಿ ಪ್ರಮಾಣ ಪತ್ರಗಳು ಹಾಗೂ ಇತರೆ ಪ್ರಮಾಣ ಪತ್ರಗಳ ವಿತರಣೆ ಹಾಗೂ ದಾಸ್ತಾನು ನಿರ್ವಹಣೆಯಲ್ಲಿನ ನ್ಯೂನತೆಗಳು.

2024–25ನೇ ಸಾಲಿಗೆ ಸಂಬಂಧಿಸಿದಂತೆ ಅಂಕಪಟ್ಟಿ, ಪದವಿ ಪ್ರಮಾಣ ಪತ್ರಗಳು ಹಾಗೂ ಇತರೆ ಪ್ರಮಾಣ ಪತ್ರಗಳ ವಿತರಣೆ ಹಾಗೂ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದವರು ಹಾಜರುಪಡಿಸಿದ ದಾಸ್ತಾನು ವಹಿಯ ಅನುಸಾರ ವಿವರಗಳು ಕೆಳಕಂಡಂತಿದೆ.

ವಿವರ	ಅಂಕಪಟ್ಟಿಗಳ ವಿವರ	ಉತ್ತರ ಪುಸ್ತಕಗಳ ವಿವರ	ನೈಜತೆ ಪ್ರಮಾಣ ಪತ್ರಗಳ ವಿವರ	ಪದವಿ ಪ್ರಮಾಣ ಪತ್ರಗಳ ವಿವರ	ವಲಸೆ ಪ್ರಮಾಣ ಪತ್ರಗಳ ವಿವರ	ತಾತ್ಕಾಲಿಕ ಪ್ರಮಾಣ ಪತ್ರಗಳ ವಿವರ
ಆರಂಭಿಕ ತಿಲ್ಕು ದಿ:01.04.2024	372999	947821	10700	146052	10200	4500
2024–2025 ನೇ ಸಾಲಿನ ಖರೀದಿ	0000	13744	0000	0	0000	0000
	372999	961565	10700	146052	10200	4500
2024–2025ನೇ ಸಾಲಿನ ವಿತರಣೆ (–)	110627	695407	783	7841	391	1178
ರದ್ದುಗೊಳಿಸಿದ ವಿವರ (–)	1373	21	17	159	09	22
ಅಂತಿಮ ತಿಲ್ಕು ದಿ: 31.03.2025	**260999**	**266137**	**9900**	**138052**	**9800**	**3300**

ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ ಅಂಕಪಟ್ಟಿ ಹಾಗೂ ಪದವಿ ಪ್ರಮಾಣಪತ್ರಗಳ ನಿರ್ವಹಣೆಗೆ ಸಂಬಂಧಿಸಿದ ದಾಸ್ತಾನು ವಹಿಯನ್ನು ಪರಿಶೀಲಿಸಿದಾಗ, ವಿಭಾಗದಲ್ಲಿ ಕಾರ್ಯನಿರ್ವಹಿಸುವ ವಿಷಯ ನಿರ್ವಾಹಕರುಗಳಿಗೆ ಸುಮಾರು ಐದು ನೂರರಿಂದ ಸಾವಿರ ಸಂಖ್ಯೆಯಲ್ಲಿ ಖಾಲಿ ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಿ, ತದನಂತರ ವಿತರಣೆಯಾದ ಬಗ್ಗೆ ವಿವರ/ದಾಖಲೆಗಳನ್ನು ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ನೀಡುವ ಪದ್ಧತಿ ಅಳವಡಿಸಿಕೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ದಾಸ್ತಾನು ನಿರ್ವಹಣೆಗೆ ಸಂಬಂಧಿಸಿದಂತೆ ಅಂಕಪಟ್ಟಿಗಳು, ನೈಜ ಪ್ರಮಾಣಪತ್ರ, ತಾತ್ಕಾಲಿಕ ಪ್ರಮಾಣ ಪತ್ರಗಳು ಮತ್ತು ಪದವಿ ಪ್ರಮಾಣ ಪತ್ರಗಳನ್ನು ಸೇರಿದಂತೆ ಒಟ್ಟು 1601 ಸಂಖ್ಯೆಯ ಪ್ರಮಾಣ ಪತ್ರಗಳನ್ನು ರದ್ದುಗೊಳಿಸಲಾಗಿದ್ದು, ರದ್ದುಗೊಳಿಸಲಾದ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ್ದು, ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳು ವಿಶ್ವವಿದ್ಯಾನಿಲಯದ ಪ್ರಮುಖ ದಾಖಲೆಗಳಾಗಿದ್ದು, ಅತ್ಯಂತ ಜಾಕರೂಕತೆಯಿಂದ ಕ್ರಮಬದ್ಧವಾಗಿ ನಿರ್ವಹಿಸಬೇಕಾಗುತ್ತದೆ. ಆದ್ದರಿಂದ, ವಿಶ್ವವಿದ್ಯಾನಿಲಯವು ಈ ಕುರಿತು ಸೂಕ್ತ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ತಿಳಿಸಿದೆ.

31.5 ಚಿನ್ನದ ಪದಕ ಖರೀದಿ ಮತ್ತು ವಿತರಣೆಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸದಿರುವುದು:

(ವಿಚಾರಣಾ ಪತ್ರ ಸಂಖ್ಯೆ:125/ದಿ:18.9.2025)

2024–25ನೇ ಸಾಲಿನಲ್ಲಿ ಖರೀದಿಸಲಾದ ಚಿನ್ನದ ಪದಕ ಮತ್ತು ವಿತರಣೆಗೆ ಸಂಬಂಧಿಸಿದ ಪೂರಕ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:125/ದಿ:18.9.2025 ರಲ್ಲಿ ಕೋರಲಾಗಿ ಯಾವುದೇ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

32. ಶಾಸನ ಬದ್ಧ ಅಧಿಕಾರಿ ಮತ್ತು ಬೋಧಕ ವರ್ಗದವರ ವೇತನ ಮತ್ತು ಭತ್ಯೆಗಳು

32.1 ವೃತ್ತಿ ಪ್ರಗತಿ ಯೋಜನೆಯಡಿ (CAS) ಪದೋನ್ನತಿ ನೀಡಿದ ಬೋಧಕರಿಗೆ ಆರ್ಥಿಕ ಸೌಲಭ್ಯವನ್ನು ವಿಶ್ವವಿದ್ಯಾನಿಲಯದ ಆದೇಶದ ದಿನಾಂಕ ದಿಂದ ಪಾವತಿಸದೇ, ಅರ್ಹತಾ ದಿನಾಂಕದಿಂದ ಪಾವತಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:62/ದಿ:23.07.2025 ಹಾಗೂ 114/ದಿ:08.09.2025)

2024–25ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಬೋಧಕರ ವೇತನ ಪಾವತಿ ಬಿಲ್ಲುಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಬಿಲ್ಲುಗಳಲ್ಲಿ 19 ಮಂದಿಗೆ ವೃತ್ತಿ ಪ್ರಗತಿ ಯೋಜನೆಯಡಿ (CAS) ಪದೋನ್ನತಿ ಅನ್ವಯವಾಗುವ ಅರ್ಹತಾ ದಿನಾಂಕದಿಂದ ಮೂಲ ವೇತನವನ್ನು ನಿಗದಿಪಡಿಸಿ, ಅರ್ಹತಾ ದಿನಾಂಕ ದಿಂದಲೇ ವೇತನ ವ್ಯತ್ಯಾಸದ ಬಾಕಿಯನ್ನು ಲೆಕ್ಕಚಾರ ಮಾಡಿ ರೂ.1,08,33,679/–ಗಳನ್ನು ಪಾವತಿಸಲಾಗಿದೆ.

ಕ್ರ.ಸಂ	ಕಛೇರಿ ಆದೇಶ ಸಂಖ್ಯೆ/ದಿನಾಂಕ	ಲೆವೆಲ್	ವೋಚರ್ ಸಂಖ್ಯೆ	ಧನಾದೇಶ ಸಂಖ್ಯೆ/ದಿನಾಂಕ	ಮೊತ್ತ ರೂ.
1	KSOU/AB/EST–1/598/2023–24,Date:19/02/2024	Academic Level–13A ರಿಂದ Academic Level–14	67/July–2024	313578/313579/313580, ದಿನಾಂಕ:16.07.2024	ರೂ.57,97,147/–
2	KSOU/AB/EST–1/598/2023–24, Date:19/06/2024	Academic Level–10 ರಿಂದ Academic Level–11	81/July–2024	313593/313594/313595ದಿನಾಂಕ:22.07.2024	ರೂ.42,52,536/–
3	ಕರಾಮುವಿ/ಹವಿ/ಸಿಬ್ಬಂದಿ–1/598/2023–2024, ದಿನಾಂಕ:06/11/2023	Academic Level–11 ರಿಂದ Academic Level–12, AGP 9000 ರಿಂದ AGP 10000	140/August–2024	313727/313728/31372, ದಿನಾಂಕ:31.08.2024	ರೂ.2,44,291/–
4	KSOU/AB/EST–1/611/2024–25, ದಿನಾಂಕ:31/08/2024	Academic Level–14 ರಿಂದ Academic Level–15	03/March–2025	638364/638365/ ದಿನಾಂಕ:03.03.2025ರ	ರೂ.5,39,705/–
ಒಟ್ಟು ರೂ.					ರೂ. 1,08,33,679/–

ಯು.ಜಿ.ಸಿ ನಿಬಂಧನೆಗಳು ಹಾಗೂ 7ನೇ ಪರಿಷ್ಕೃತ ಯು.ಜಿ.ಸಿ ವೇತನ ಶ್ರೇಣಿ ಆದೇಶ ಸಂಖ್ಯೆ:ಇಡಿ/483/ಯುಎನ್ಇ/2017, ದಿನಾಂಕ:16.03.2019ರನ್ವಯ ವೃತ್ತಿ ಪ್ರಗತಿ ಯೋಜನೆಯಡಿಯಲ್ಲಿ ಪದೋನ್ನತಿ ನೀಡುವ ಸಂದರ್ಭಗಳಲ್ಲಿ ವೃತ್ತಿ ಪ್ರಗತಿ ಯೋಜನೆ ಪದೋನ್ನತಿ ಸಮಿತಿಯ ಶಿಫಾರಸ್ಸನ್ನು ಸಿಂಡಿಕೇಟ್/**BOM** ಸಭೆಯ ಅನುಮೋದನೆ ಪಡೆದುಕೊಂಡ ಬೋಧಕರುಗಳ ಅರ್ಹತಾ ದಿನಾಂಕಕ್ಕೆ ಕಾಲ್ಪನಿಕವಾಗಿ ವೇತನವನ್ನು ನಿಗದಿಪಡಿಸಬೇಕಾಗಿರುತ್ತದೆ. ಹಾಗೂ ಪದೋನ್ನತಿ ಆದೇಶ ಹೊರಡಿಸಿದ ದಿನಾಂಕದಿಂದ ಆರ್ಥಿಕ ಸೌಲಭ್ಯವನ್ನು ನೀಡಬೇಕಾಗಿರುತ್ತದೆ.

ಸರ್ಕಾರದ ಪತ್ರ ಸಂಖ್ಯೆ: ಇಡಿ 46/ಯು.ಎಂ.ಎ.2021/ದಿನಾಂಕ:19.07/.2021 ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿ. ಉನ್ನತ ಶಿಕ್ಷಣ ಇಲಾಖೆ. (ವಿಶ್ವವಿದ್ಯಾನಿಲಯ–I) ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಇಡಿ:55/ಯು.ಜಿ.ಸಿ/2021/ದಿನಾಂಕ:29.10.2022 ರನ್ವಯ ಪದೋನ್ನತಿಯ ಅರ್ಹತಾ ದಿನಾಂಕದಿಂದ ಮೂಲ ವೇತನವನ್ನು ಕಾಲ್ಪನಿಕವಾಗಿ ನಿಗದಿಪಡಿಸಿ, ನಂತರ ಆರ್ಥಿಕ ಸೌಲಭ್ಯವನ್ನು ವಿಶ್ವವಿದ್ಯಾನಿಲಯವು ಪದೋನ್ನತಿಗೆ ಸಂಬಂಧಿಸಿದಂತೆ ಹೊರಡಿಸುವ ಆದೇಶದ ದಿನಾಂಕದಿಂದ ಜಾರಿಗೊಳಿಸಬೇಕಾಗಿರುತ್ತದೆ. ಪದೋನ್ನತಿಯನ್ನು ಪೂರ್ವಾನ್ವಯವಾಗುವಂತೆ ನೀಡಿ ವೇತನ ಬಾಕಿಯನ್ನು ಪಾವತಿಸಲು ಅವಕಾಶವಿಲ್ಲವೆಂದು ಸ್ಪಷ್ಟಪಡಿಸಿದೆ.

ಕರಾಮು ವಿಶ್ವವಿದ್ಯಾನಿಲಯವು ಒಟ್ಟು 19 ಬೋಧಕರಿಗೆ ಆರ್ಥಿಕ ಸೌಲಭ್ಯವನ್ನು ಪದೋನ್ನತಿಗೆ ಆದೇಶ ಹೊರಡಿಸಿದ ದಿನಾಂಕಗಳಿಂದ ಪಾವತಿಸದೇ ಅರ್ಹತಾ ದಿನಾಂಕದಿಂದ ಪೂರ್ವಾನ್ವಯವಾಗುವಂತೆ ಪಾವತಿಸಿರುವುದರಿಂದ ಮೇಲ್ಕಂಡ ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿದಂತಾಗಿದ್ದು, ಈ ಸಂಬಂಧ ವಿವರಣೆ ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:62/ದಿ:23.07.2025 ಹಾಗೂ 114/ದಿ:08.09.2025 ಗಳನ್ನು ನೀಡಲಾಗಿದ್ದು, ಇದಕ್ಕೆ ಹಣಕಾಸು ಅಧಿಕಾರಿಯವರ ಪತ್ರ ದಿನಾಂಕ:11.02.2026ರಲ್ಲಿ ಪ್ರತಿಕ್ರಿಯಿಸಿ ಜಂಟಿ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ. (Grade – 4) ರಾಜಸ್ಥಾನ ರಾಜ್ಯ ಸರ್ಕಾರದವರು ಸ್ಪಷ್ಟೀಕರಣ ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದು, ಇದಕ್ಕೆ ಜಂಟಿ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ, ಭಾರತ ಸರ್ಕಾರ ಇವರ ಪತ್ರ ಸಂಖ್ಯೆ:ಎಫ್9–3/2021 ಪಿಎಸ್(ಮಿಸಲೇನಿಯಸ್) ದಿನಾಂಕ:21.06.2021 ರಲ್ಲಿ ಸ್ಪಷ್ಟೀಕರಣವಾಗಿ ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳಲ್ಲಿ ಶಿಕ್ಷಕರು ಮತ್ತು ಇತರೆ ಶೈಕ್ಷಣಿಕ ಸಿಬ್ಬಂದಿಗಳು ನೇಮಕಾತಿಗೆ ಕನಿಷ್ಠ ಅರ್ಹತೆ ಕುರಿತಾದ ಯುಜಿಸಿ ನಿಯಮಗಳು ಮತ್ತು ಅರ್ಹತೆಯ ದಿನಾಂಕದಂದು ಜಾರಿಯಲ್ಲಿರುವ ಉನ್ನತ ಗುಣಮಟ್ಟವನ್ನು ಕಾಯ್ದುಕೊಳ್ಳುವ ಕ್ರಮಗಳ ಪ್ರಕಾರ CAS ಅನುದಾನದ ಮೇಲೆ ವಿಶ್ವವಿದ್ಯಾನಿಲಯ/ಕಾಲೇಜು ಶಿಕ್ಷಕರಿಗೆ ಹಣಕಾಸಿನ ಪ್ರಯೋಜನಗಳು ಅರ್ಹತಾ ದಿನಾಂಕದಿಂದ ಸ್ವೀಕಾರಾರ್ಹವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಈ ಸಂಬಂಧ ಯು.ಜಿ.ಸಿ ಅಧಿಸೂಚನೆ ಸಂಖ್ಯೆ:F9–1/2010(PS/MISC) PT. VO/II. Dated:06.06.2024 ರಲ್ಲಿ 6.3 ಪರಿಗಣಿಸಲು ಕೋರಿದ್ದು, ವಿವರ ಈ ರೀತಿಯಾಗಿರುತ್ತದೆ. " The Criteria for promotion under Career Advancement Scheme laid down under these Regulations shall be effective from the date of notification of these Regulations. However, to avoid hardship to those faculty members who have already qualified or are likely to qualify till 31st December 2024 as per the UGC Regulations on Minimum Qualifications for Appoinment of Teachers and other Academic staff in Universities and Colleges and other Measures for the Maintenance of Standards in Higher Education, 2010, a choice may be given to them either for being consider for promotion under the 2010 or 2018 Regulations. The date of eligibility shall be retained as the date of promotion. On the date of submission of the application, the candidate should fulfil all eligibility criteria required for Promotion".

ಮಹಾಲೇಖಪಾಲರ ವರದಿ ಕಂಡಿಕೆ ಸಂಖ್ಯೆ 4.1.3.2 (ಡಿ) ಕಂಡಿಕೆಯಲ್ಲಿ ಡಾ. ಶಂಕರನಾರಾಯಣಪ್ಪ, ಡಾ.ಎಂ.ಎಸ್.ರಮಾನಂದ್ ಮತ್ತು ಡಾ.ತೇಜಸ್ವಿ ನವಿಲೂರ್ ರವರ ನೇಮಕಾತಿಯನ್ನು ಪ್ರಶ್ನಿಸಿರುವುದನ್ನು ಸದರಿ ಬೋಧಕರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಮಾನ್ಯ ನ್ಯಾಯಾಲಯವು ಈ ಸಂಬಂಧ ಅಮೂಲ್ಯಾಗ್ರವಾಗಿ ಪರಿತೀಲಿಸಿ ಮುಂದುವರೆಸತಕ್ಕದ್ದಲ್ಲವೆಂದು ರದ್ದುಗೊಳಿಸಿ ಆದೇಶಿಸಿದೆ. ನ್ಯಾಯಾಲಯದ ಆದೇಶವನ್ನು ಪರಿಗಣಿಸಿ ದಿನಾಂಕ:12.03.2024ರಲ್ಲಿ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಸಭೆಯ ನಡವಳಿ ಸಂಖ್ಯೆ 12.30 (4) ರಲ್ಲಿ ಕಂಡಿಕೆ ಸಂಖ್ಯೆ 4.1.3.2 (ಡಿ) ನ್ನು ಮುಕ್ತಾಯಗೊಳಿಸಲಾಗಿದೆ. ಅದರಂತೆ ಡಾ. ಶಂಕರನಾರಾಯಣಪ್ಪ, ಡಾ.ಎಂ.ಎಸ್.ರಮಾನಂದ್ ಮತ್ತು ಡಾ.ತೇಜಸ್ವಿ ನವಿಲೂರ್ ರವರಿಗೆ ವೃತ್ತಿ ಪ್ರಗತಿ ಯೋಜನೆಯಡಿ (CAS) ಪದೋನ್ನತಿ ನೀಡಿ ಅರ್ಹತಾ ದಿನಾಂಕದಿಂದ ಅನ್ವಯವಾಗುವಂತೆ ಆರ್ಥಿಕ ಸೌಲಭ್ಯವನ್ನು ನೀಡಲಾಗಿದೆ ಎಂದು ಉತ್ತರಿಸಿರುತ್ತಾರೆ.

ಯು.ಜಿ.ಸಿ ಅಧಿಸೂಚನೆ ಸಂಖ್ಯೆ:F9–1/2010(PS/MISC) PT. VO/II. Dated:06.06.2024 ರಂತೆ ಡಾ. ಶಂಕರನಾರಾಯಣಪ್ಪ, ಡಾ.ಎಂ.ಎಸ್.ರಮಾನಂದ್ ಮತ್ತು ಡಾ.ತೇಜಸ್ವಿ ನವಿಲೂರ್ ಇವರುಗಳಿಗೆ ಅವರಲ್ಲದ ತಪ್ಪಿಗೆ CAS ಪದೋನ್ನತಿ ವಿಳಂಬವಾಗಿರುವುದು ಮೇಲ್ನೋಟಕ್ಕೆ ತಿಳಿದುಬಂದಿರತ್ತದೆ ಎಂದು ವಿಶ್ವವಿದ್ಯಾನಿಲಯವು ಪರಿಗಣಿಸಿ CAS ಪದೋನ್ನತಿಗೆ ಪರಿತೀಲನಾ

ಸಮಿತಿಯನ್ನು ರಚಿಸಿದ್ದು, ಸಮಿತಿಯ ಸದಸ್ಯರುಗಳು ಪ್ರಾಥಮಿಕ ಹಂತವಾಗಿ ಪರಿಶೀಲನಾ ಕಾರ್ಯ ಪೂರ್ಣಗೊಳಿಸಿ ಸ್ಕೋರ್ ಕಾರ್ಡ್‌ಗಳನ್ನು ಸಿದ್ಧಪಡಿಸಿ ಕುಲಸಚಿವರಿಗೆ ಸಲ್ಲಿಸಿರುತ್ತಾರೆ. ಸಲ್ಲಿಸಿರುವ ಅರ್ಜಿಗಳನ್ನು ಪರಿಗಣಿಸುವ ಸಂಬಂಧ ಆಯ್ಕೆ ಮಂಡಳಿ ರಚಿಸಿದ್ದು, ಸದರಿ ಸಮಿತಿಯು ದಿನಾಂಕ:08.11.2023 ರಂದು ಸಭೆ ನಡೆಸಿ ನಡಾವಳಿಯನ್ನು ಕುಲಸಚಿವರಿಗೆ ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:01.12.2023 ರಂದು ಜರುಗಿದ 175ನೇಯ ವ್ಯವಸ್ಥಾಪನ ಮಂಡಳಿಯ ಸಭೆಯಲ್ಲಿ ಡಾ.ತೇಜಸ್ವಿ ನವಿಲೂರ್ ಇವರಿಗೆ ದಿನಾಂಕ:11.12.2015 ರಿಂದ ಹಾಗೂ ಡಾ.ಎಂ.ಎಸ್ ರಮಾನಂದ್ ಇವರಿಗೆ ದಿನಾಂಕ:15.12.2015 ರಿಂದ ಅರ್ಹತಾ ದಿನಾಂಕವನ್ನು ನಿಗದಿಪಡಿಸಿರುತ್ತಾರೆ. ಆದರೆ ಡಾ.ಶಂಕರ್ ನಾರಾಯಣಪ್ಪ ಇವರಿಗೆ ಆಯ್ಕೆ ಮಂಡಳಿಯು ಅರ್ಹತಾ ದಿನಾಂಕವನ್ನು ಶಿಫಾರಸ್ಸು ಮಾಡಿರುವುದಿಲ್ಲ ಎಂದು ನಮೂದಿಸಿ ಅದರಂತೆ ಆಯ್ಕೆ ಕಮೀಟಿಯ ತೀರ್ಮಾನದಂತೆ ಮುಂದಿನ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಗಿರುತ್ತದೆ. ಈ ಸಭೆಯ ನಿರ್ಣಯದಂತೆ ಡಾ. ಶಂಕರನಾರಾಯಣಪ್ಪ, ಹೊರತುಪಡಿಸಿ ಡಾ.ಎಂ.ಎಸ್.ರಮಾನಂದ ಮತ್ತು ಡಾ.ತೇಜಸ್ವಿ ನವಿಲೂರ್ ಇವರುಗಳಿಗೆ CAS ಪದೋನ್ನತಿ ನೀಡಿ ಅರ್ಹ ದಿನಾಂಕದಿಂದ ಅನ್ವಯವಾಗುವಂತೆ ಆರ್ಥಿಕ ಸೌಲಭ್ಯವನ್ನು ಬಿಡುಗಡೆಗೊಳಿಸಬಹುದಾಗಿರುತ್ತದೆ. ಆದರೆ ಡಾ.ಶಂಕರನಾರಯಣಪ್ಪ ಇವರಿಗೆ ಕುಲಸಚಿವರ ಆದೇಶ ಸಂಖ್ಯೆ: KSOU/AD/EST-1/598/2023-24, Dated:19.02.2024 ರಲ್ಲಿ ದಿನಾಂಕ:11.12.2015 ಅರ್ಹ ದಿನಾಂಕವನ್ನು ನಿಗದಿಪಡಿಸಿ ಆದೇಶಿಸಿರುವಂತೆ ಅರ್ಹ ದಿನಾಂಕದಿಂದ ಆರ್ಥಿಕ ಸೌಲಭ್ಯವನ್ನು ಬಿಡುಗಡೆಗೊಳಿಸಲಾಗಿದೆ. ಆದರೆ ವ್ಯವಸ್ಥಾಪನ ಮಂಡಳಿಯ 175ನೇ ಸಭೆಯಲ್ಲಿ ಆಯ್ಕೆ ಮಂಡಳಿಯು ಅರ್ಹತಾ ದಿನಾಂಕವನ್ನು ಶಿಫಾರಸ್ಸು ಮಾಡದಿದ್ದರೂ ಕುಲಸಚಿವರು ಆದೇಶ ಹೊರಡಿಸಿ ದಿನಾಂಕ:11.12.2015 ರಿಂದ ಆರ್ಥಿಕ ಸೌಲಭ್ಯ ನೀಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಒಪ್ಪಲಾಗುವುದಿಲ್ಲ.

ಮೇಲಿದಂತೆ 17 ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಪ್ರಾಧ್ಯಾಪಕರು, ಹಿರಿಯ ಪ್ರಾಧ್ಯಾಪಕರು, ಗ್ರಂಥಪಾಲಕರು, ಹಾಗೂ ಸಹಾಯಕ ಗ್ರಂಥಪಾಲಕರುಗಳಿಗೆ ಪದೋನ್ನತಿ ಅನ್ವಯವಾಗುವ ಅರ್ಹತಾ ದಿನಾಂಕದಿಂದ ಮೂಲ ವೇತನವನ್ನು ನಿಗದಿಪಡಿಸಿ, ಅರ್ಹತಾ ದಿನಾಂಕದಿಂದಲೇ ವೇತನ ವ್ಯತ್ಯಾಸ ಪಾವತಿಸಲು ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವಂತೆ ಸರ್ಕಾರದ ಆದೇಶ ದಿನಾಂಕ:16.03.2019, ದಿನಾಂಕ:19.07.2021 ಹಾಗೂ ದಿನಾಂಕ:293.10.2022 ರನ್ವಯ ಪಾವತಿಸಲು ಅವಕಾಶವಿರುವುದಿಲ್ಲ. ಆದರೂ ಅರ್ಹತಾ ದಿನಾಂಕದಿಂದಲೇ ವೇತನ ವ್ಯತ್ಯಾಸ ಮೊತ್ತ ರೂ.67,28,390/-ಗಳನ್ನು ಹಾಗೂ ಸರ್ಕಾರದ ಪಾಲಿನ NPS ವಂತಿಗೆಯ ಶೇ.10 & 14 ರಷ್ಟು ಬಾಬ್ತುಗಳ ಮೊತ್ತ ರೂ.1,86,444/-ಗಳನ್ನು ಹೆಚ್ಚುವರಿಯಾಗಿ ಪಾವತಿಸಲಾಗಿರುತ್ತದೆ. ವಿವರಗಳನ್ನು **ಅನುಬಂಧ 14 & 15**ರಲ್ಲಿ ನೀಡಲಾಗಿದೆ. ಹೀಗೆ ಹೆಚ್ಚುವರಿಯಾಗಿ ಪಾವತಿಸಿರುವ ಒಟ್ಟು ಮೊತ್ತ **ರೂ.67,28,390/-ಗಳನ್ನು ಸಂಬಂಧಿಸಿದವರಿಂದ ವಸೂಲಿಸಿ** ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದೆ. ಹಾಗೂ ಈ ಸದರಿ ಪಾವತಿಗಳಲ್ಲಿನ ಸರ್ಕಾರದ ಪಾಲಿನ ಹೆಚ್ಚುವರಿ NPS ವಂತಿಗೆಯ ಮೊತ್ತ ರೂ.1,86,444/-ಗಳನ್ನು ಒಟ್ಟು ಮೊತ್ತ **ರೂ.69,14,834/- ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ.**

32.2. ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿ ದಿನಾಂಕ:01.01.2016ರ ನಂತರ ಪಿ.ಹೆಚ್.ಡಿ./ಎಮ್.ಫಿಲ್. ಪದವಿ ಪೂರೈಸಿರುವ ಬೋಧಕರುಗಳಿಗೆ ಮುಂಗಡ ವೇತನ ಬಡ್ತಿಗಳನ್ನು ಪಾವತಿಸಿರುವುದು:

(ವಿಚಾರಣಾ ಪತ್ರ ಸಂಖ್ಯೆ:83/ದಿ:14.08.2025 ಹಾಗೂ 134/ದಿ:24.09.2025)

ಸರ್ಕಾರದ ಆದೇಶ ಸಂಖ್ಯೆ:ಇಡಿ/483/UNE/2017, ಬೆಂಗಳೂರು, ದಿನಾಂಕ:16/03/2019ರ ಸರ್ಕಾರದ ಆದೇಶದ Note SL No. ಸಂಖ್ಯೆ:14 ರಲ್ಲಿ "In view of the conflicting provisions at para-8 of GOI letter No.1-7/2015-U.II(1) dated:02-11-2017 and in Regulation 19.1 of "UGC Regulations on Minimum Qualifications for appointment of teachers and other academic staff and measures for maintenance of standards in Higher Education, 2018" regarding grant of incentives in the form of advance increments for acquiring Higher Qualifications. UGC has been sought clarification in this regard. Appropriate provison in this clause would be laid down after receiving the same". -

ಎಂದು ಪಿ.ಎಚ್.ಡಿ./ಎಮ್.ಫಿಲ್. ಪದವಿ ಪೂರೈಸಿರುವ ಬೋಧಕರುಗಳಿಗೆ ಮುಂಗಡ ವೇತನ ಬಡ್ತಿಗಳ ಆರ್ಥಿಕ ಸೌಲಭ್ಯಗಳ ಪಾವತಿಗಳ ಬಗ್ಗೆ ಸ್ಪಷ್ಟೀಕರಣ ಬಾಕಿ ಎಂದು ಅಭಿಪ್ರಾಯ ನೀಡಲಾಗಿತ್ತು. ಪ್ರಸ್ತುತ ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಇಡಿ/19/UNE/2021/(ಭಾಗ-I). ದಿನಾಂಕ:11/02/2025ದಲ್ಲಿ – "In the government Order No: ED 483 UNE 2017, Dated:16.03.2019, SL No. 14 Shall be replaced and read as Follows "

"The incentive structre is built–in in the pay structure itself wherin those having M. Phil. or Ph.D. degree will progress faster under CAS. Therfore, "there shall be no incentives in form of advance increments for obtaining the degrees of M. Phil. or Ph.D." ಎಂದು ದಿನಾಂಕ:01.01.2016 ರ ನಂತರ ಪಡೆದ ಪಿ.ಎಚ್.ಡಿ/ಎಂ.ಫಿಲ್ ಪದವಿಗಳಿಗೆ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡಲು ಅವಕಾಶವಿಲ್ಲ" – ಎಂದು ಸ್ಪಷ್ಟೀಕರಣದ ಅಭಿಪ್ರಾಯ ನೀಡಿರುವ ಆದೇಶದ ಅನುಸಾರ ದಿನಾಂಕ:01.01.2016 ರ ನಂತರ ಪಿ.ಎಚ್.ಡಿ./ಎಂ.ಫಿಲ್. ಪದವಿ ಪೂರೈಸಿರುವ ಬೋಧಕರುಗಳಿಗೆ ಮುಂಗಡ ವೇತನ ಬಡ್ತಿಗಳನ್ನು ನೀಡಲು ಅವಕಾಶವಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಕರಾಮು ವಿಶ್ವವಿದ್ಯಾನಿಲಯದ ಬೋಧಕ ವರ್ಗದ ಸೇವಾ ವಹಿಗಳನ್ನು ಹಾಗೂ ವೇತನ ಬಟವಾಡೆ ವಹಿಗಳನ್ನು ಪರಿಶೀಲಿಸಿದಾಗ, ದಿನಾಂಕ:01.01.2016ರ ನಂತರ ಪಿ.ಎಚ್.ಡಿ./ಎಂ.ಫಿಲ್. ಪದವಿ ಪೂರೈಸಿರುವ ಒಟ್ಟು 27 ಬೋಧಕರಿಗೆ ಮುಂಗಡ ವೇತನ ಬಡ್ತಿಗಳನ್ನು ನೀಡಲಾಗಿರುತ್ತದೆ. ಹಾಗೂ ಈ ಅವಧಿಯಿಂದ ದಿ:28.02.25 ರವರೆಗೆ ಸಂದಾಯ ಮಾಡಿರುವ ಮುಂಗಡ ವೇತನ ಬಡ್ತಿಗಳ ಆರ್ಥಿಕ ಸೌಲಭ್ಯಗಳ ಜೋತೆಗೆ CAS ಅಡಿಯಲ್ಲಿ ಪದೋನ್ನತಿಗಳ ವೇತನ ಬಡ್ತಿಗಳ ಆರ್ಥಿಕ ಸೌಲಭ್ಯಗಳನ್ನು ಮಂಜೂರಾತಿಯ ಆದೇಶದ ದಿನಾಂಕದಿದಂದ ಪಾವತಿಸದೆ. ಅರ್ಹತಾ ದಿನಾಂಕಗಳಿಂದ ಪಾವತಿಸಲಾಗಿರುತ್ತದೆ ಹಾಗೂ ಈ ಪಾವತಿಗಳಲ್ಲಿನ ಸರ್ಕಾರದ ಪಾಲಿನ NPS ವಂತಿಗೆಗಳನ್ನು ಸಹ ಕಡಿತಗೊಳಿಸಿ ರೂ.2,85,64,649/– ಗಳನ್ನು ಪಾವತಿಸಲಾಗಿರುತ್ತದೆ. ವಿವರಗಳನ್ನು ಅನುಬಂಧ–16, 17 ಮತ್ತು 18ರಲ್ಲಿ ನೀಡಲಾಗಿದೆ.

ಮೇಲೆ ವಿವರಿಸಿರುವಂತೆ, ದಿನಾಂಕ:01/01/2016ರ ನಂತರ ಪಿ.ಎಚ್.ಡಿ./ಎಮ್.ಫಿಲ್. ಪದವಿ ಪೂರೈಸಿರುವ 27 ಬೋಧಕರುಗಳಿಗೆ ಮುಂಗಡ ವೇತನ ಬಡ್ತಿಗಳ ಜೋತೆಗೆ CAS ಅಡಿಯಲ್ಲಿನ ಪದೋನ್ನತಿಗಳ ವೇತನ ಪರಿಷ್ಕರಿಸಿ ಅನುಬಂಧ – 16 ರಂತೆ ಮರು ನಗದೀಕರಣ ಮಾಡಿ ವಿಶ್ವವಿದ್ಯಾನಿಲಯದ ವಿವರಣೆ ಕೋರಿ ವಿಚಾರಣಾ ಪತ್ರ ಸಂಖ್ಯೆ:83/ದಿ:14.08.2025 ಹಾಗೂ 134/ದಿ:24.09.2025 ಗಳನ್ನು ನೀಡಲಾಗಿದ್ದು, ಇದಕ್ಕೆ ವಿಶ್ವವಿದ್ಯಾನಿಲಯವು ಯಾವುದೇ ಪ್ರತಿಕ್ರಿಯೆ ನೀಡದಿರುವುದಿಲ್ಲ.

ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿ ದಿನಾಂಕ:01/01/2016ರ ನಂತರ ಪಿ.ಎಚ್.ಡಿ./ಎಮ್.ಫಿಲ್. ಪದವಿ ಪೂರೈಸಿರುವ 27 ಬೋಧಕರುಗಳಿಗೆ ಮುಂಗಡ ವೇತನ ಬಡ್ತಿಗಳನ್ನು ನೀಡಿರುವುದನ್ನು ಕಳೆದು, ವೇತನ ಪರಿಷ್ಕೃತ ಮರು ನಿಗಧೀಕರಣ ಮಾಡಿ, ಅನುಬಂಧ 16, 17, & 18 ರಲ್ಲಿ ವಿವರಿಸಿರುವಂತೆ ಅವಕಾಶವಿಲ್ಲದ ಹೆಚ್ಚುವರಿಯ ಪಾವತಿ ಮೊತ್ತ ರೂ.2,54,31,785/–ಗಳನ್ನು ಸಂಬಂಧಿತ ಸಿಬ್ಬಂದಿಯಿಂದ ವಸೂಲಾತಿ ಮಾಡಲು ಹಾಗೂ ಸರ್ಕಾರದ ಪಾಲಿನ NPS ವಂತಿಗೆಗಳ ಕಟಾವಣೆಗಳ ಹೆಚ್ಚುವರಿ ಪಾವತಿಗಳ ಮೊತ್ತ ರೂ.31,32,864/–ಗಳನ್ನು ಸಂಬಂಧಿಸಿದ ಲೆಕ್ಕ ಖಾತೆಯಿಂದ ಮರುಸೆಳೆದು/ವಸೂಲಾತಿ ಮಾಡಿ, ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡುವವರೆಗೆ ಒಟ್ಟು ಮೊತ್ತ **ರೂ.2,85,64,649/– ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ.**

32.3 ಕರಾಮುವಿಗೆ ನೇಮಕಗೊಳ್ಳುವ ಪೂರ್ವದಲ್ಲಿ ಅನ್ಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಸೇವಾವಧಿಯನ್ನು ಪರಿಗಣಿಸಿ ಸಹಾಯಕ ಪ್ರಾಧ್ಯಾಪಕರುಗಳಿಗೆ ವೇತನ ನಿಗದಿಪಡಿಸಿ ವೇತನ ಪಾವತಿಸಿರುವುದಕ್ಕೆ ಪೂರಕ ದಾಖಲೆಗಳನ್ನು ಹಾಜರು ಪಡಿಸದಿರುವುದು: (ವಿಚಾರಣಾ ಪತ್ರ ಸಂಖ್ಯೆ:145/ದಿ:03.10.2025)

ಅ) ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕರಾಮುಎ/ಆಪ/ಸಿಬ್ಬಂದಿ–1/614/2023–24, ದಿನಾಂಕ:19.02.2024ರಲ್ಲಿ ಕುಂದು ಕೊರತೆ ಸಮಿತಿ ಸಭೆಯ ಶಿಫಾರಸ್ಸಿನನ್ವಯ, ಕುಲಪತಿಯವರ ಅನುಮೋದನೆ ಮೇರೆಗೆ ಡಾ.ಎಂ.ಉಮಾಶಂಕರ್, ಸಹಾಯಕ ಪ್ರಾಧ್ಯಾಪಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಇವರಿಗೆ Dr. D.S.Kothari, Fellowship at the department of Molecular Physics, Indian Institute of Science (IISC) ಇಲ್ಲಿ Higher Post doctoral fellowship ಆಗಿ

ದಿನಾಂಕ:01.07.2010 ರಿಂದ 05.12.2012 ರವರೆಗೆ ಕರ್ತವ್ಯ ನಿರ್ವಹಿಸಿರುತ್ತಾರೆಂದು ಈ ಕರ್ತವ್ಯ ನಿರ್ವಹಿಸಿದ ಸೇವೆಯನ್ನು ಯು.ಜಿ.ಸಿ. ಮಾರ್ಗಸೂಚಿ–2018ರ ಸೆಕ್ಷನ್–10.0 ರನ್ವಯ ಪರಿಗಣಿಸಿ ಮೊದಲನೇ ಹಂತದ ಪದೋನ್ನತಿಯನ್ನು ದಿನಾಂಕ:06.07.2014 ರಿಂದ ಕಾಲ್ಪನಿಕವಾಗಿ ಪರಿಗಣಿಸಿ, ಮತ್ತು ಎರಡನೇ ಹಂತದ ಪದೋನ್ನತಿಯನ್ನು ದಿ:06.07.2019 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದಂತೆ ಪದೋನ್ನತಿಯ ದಿನಾಂಕವನ್ನು ಪರಿಷ್ಕರಿಸಿ, 2024–25ನೇ ಆರ್ಥಿಕ ಸಾಲಿನಲ್ಲಿ ಪದೋನ್ನತಿಯ ದಿನಾಂಕಕ್ಕೆ ಅನುಗುಣವಾಗಿ ಮೂಲ ವೇತನವನ್ನು ನಿಗದಿಪಡಿಸಿ ಆದೇಶಿಸಿದೆ. ಇದರ ಅನ್ವಯ ದಿ:01.07.2024 ರಿಂದ ದಿ:28.02.2025 ರವರೆಗೆ ಮೂಲವೇತನವನ್ನು ರೂ.1,04,100/– (AL – 12/10) ರಿಂದ ರೂ.1,39,400/– (AL – 13A/3) ಗಳಂತೆ ಹೆಚ್ಚಿಸಿ ಇದರಂತೆ ರೂ.64,349/–ಗಳು ಹಾಗೂ ಸರ್ಕಾರದ ಪಾಲಿನ NPS ವಂತಿಗೆಗಳ ಮೊತ್ತ ರೂ.8,160/–ಗಳು, ಒಟ್ಟು ರೂ.72,509/– ಗಳನ್ನು ಪಾವತಿಸಲಾಗಿದೆ.

ಆ) ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–1/614/2024–25, ದಿನಾಂಕ: 11.02.2025ರಲ್ಲಿ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಕುಂದು ಕೊರತೆ ಸಮಿತಿ ಸಭೆಯ ಶಿಫಾರಸ್ಸು ಅನ್ವಯ, ನಿರ್ದೇಶಕರು CIQA ಇವರ ಅಭಿಪ್ರಾಯ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಡಾ. ಶಿವಕುಮಾರಸ್ವಾಮಿ, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ & ಸಂಶೋಧನಾ ವಿಭಾಗ, ಇವರಿಗೆ ಈ ಹಿಂದೆ ಮಹಾರಾಣಿ ಕಲಾ & ವಾಣೀಜ್ಯ ಕಾಲೇಜು, ಮೈಸೂರು ಇಲ್ಲಿ 2001 ರಿಂದ 2002 (ದಿ:23.08.2001 ರಿಂದ 31.03.2002 ರವರೆಗೆ) ಮತ್ತು 2003 ರಿಂದ 2005 ರವರೆಗೆ (ದಿ:08.10.203 ರಿಂದ 16.01.2005 ರವರೆಗೆ) ವರೆಗಿನ FIP ಯೋಜನೆಯ ಅಡಿ ಪೂರ್ಣಕಾಲಿಕ ಬದಲಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸಿರುವ ಅವಧಿಯ ಸೇವೆಯನ್ನು ಯು.ಜಿ.ಸಿ ಮಾರ್ಗಸೂಚಿ 2018ರ Section 10.0 ರ ಅನ್ವಯ ಪರಿಗಣಿಸಿ ಮೊದಲನೇ ಹಂತದ Academic Level 10 To 11 ರ ಹಂತದ ಪದೋನ್ನತಿಯನ್ನು ದಿ:07.02.2015 ರಿಂದ ಕಾಲ್ಪನಿಕವಾಗಿ ಪರಿಗಣಿಸಿ ಹಾಗೂ Academic Level 11 To 12 ರ ಹಂತದ ಪದೋನ್ನತಿಯನ್ನು ದಿ:07.02.2020 ರಿಂದ ಜಾರಿಗೆ ಬಂದಂತೆ ಕಾಲ್ಪನಿಕವಾಗಿ ಪರಿಗಣಿಸಿ ಪರಿಷ್ಕರಿಸಿ ಆದೇಶಿಸಿ, ವೇತನವನ್ನು ನಿಗಧಿಪಡಿಸಲಾಗಿದೆ. ಇದರ ಅನ್ವಯ ದಿ:01.07.2024 ರಿಂದ ದಿ:28.02.2025 ರವರೆಗೆ ಮೂಲ ವೇತನವನ್ನು ರೂ.98,200/– (AL – 12/8) ರಿಂದ ರೂ.1,39,400/–(AL – 13A/3) ಗಳಂತೆ ಹೆಚ್ಚಿಸಿ ಪರಿಷ್ಕರಿಸಿ, ಇದರಂತೆ 2024–25ನೇ ಆರ್ಥಿಕ ಸಾಲಿನಲ್ಲಿ ಪದೋನ್ನತಿಯ ದಿನಾಂಕಕ್ಕೆ ಅನುಗುಣವಾಗಿ ಮೂಲ ವೇತನವನ್ನು ನಿಗದಿಪಡಿಸಲಾಗಿದೆ.

ಇ) ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–1/614/2024–25, ದಿನಾಂಕ:11.02.2025ರಲ್ಲಿ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಕುಂದು ಕೊರತೆ ಸಮಿತಿ ಸಭೆಯ ಶಿಫಾರಸ್ಸು ಅನ್ವಯ, ನಿರ್ದೇಶಕರು CIQA ಇವರ ಅಭಿಪ್ರಾಯ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಡಾ. ನಟರಾಜು ಅಂಗಸ್ವಾಮಿ, ಸಹಾಯಕ ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ಅಧ್ಯಯನ & ಸಂಶೋಧನಾ ವಿಭಾಗ, ಕರಾಮುವಿ, ಇವರಿಗೆ Post–Doctoral Research Scientist and Principal investigator (Juvenile Diabetes Research Foundation Grant) ಆಗಿ At Washington University School Of Medicine Saint Louis Missouri. USA ಇಲ್ಲಿ ದಿ:02.08.2006 ರಿಂದ ದಿ:05.12.2012 ರವರೆಗೆ ಕರ್ತವ್ಯ ನಿರ್ವಹಿಸಿರುವ ಅವಧಿಯನ್ನು ಯು.ಜಿ.ಸಿ ಮಾರ್ಗಸೂಚಿ 2018ರ Section 10.0 ರ ಅನ್ವಯ ಕಾಲ್ಪನಿಕವಾಗಿ ಪರಿಗಣಿಸಿ Academic Level 10 To 11 ರ ಹಂತದ ಪದೋನ್ನತಿಯನ್ನು ದಿ:02.08.2010 ರಿಂದ ಕಾಲ್ಪನಿಕವಾಗಿ ಪರಿಗಣಿಸಿ ಹಾಗೂ Academic Level 11 To 12 ರ ಹಂತದ ಪದೋನ್ನತಿಯನ್ನು ದಿ:09.10.2015 ರಿಂದ ಜಾರಿಗೆ ಬಂದಂತೆ ಪರಿಷ್ಕರಿಸಿ ವೇತನವನ್ನು ನಿಗಧಿಪಡಿಸಿ, ಆದೇಶಿಸಲಾಗಿದೆ. ಇದರ ಅನ್ವಯ ದಿ:01.01.2024 ರಿಂದ ದಿ: 28.02.2025 ರವರೆಗೆ ಮೂಲವೇತನವನ್ನು ರೂ.95,300/– (AL – 12/7) ರಿಂದ ರೂ.1,56,900/–(AL – 13A/7) ಗಳಂತೆ ಹೆಚ್ಚಿಸಿ ಪರಿಷ್ಕರಿಸಿ, ಇದರಂತೆ 2024–25ನೇ ಆರ್ಥಿಕ ಸಾಲಿನಲ್ಲಿ ಪದೋನ್ನತಿಯ ದಿನಾಂಕಕ್ಕೆ ಅನುಗುಣವಾಗಿ ಮೂಲ ವೇತನವನ್ನು ನಿಗಧಿಪಡಿಸಲಾಗಿದೆ.

ಈ) ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–1/614/2024–25, ದಿನಾಂಕ:30.01.2025ರಲ್ಲಿ ಕುಂದು ಕೊರತೆ ಸಮಿತಿ ಸಭೆಯ, ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನ, ನಿರ್ದೇಶಕರು CIQA ಇವರ ಅಭಿಪ್ರಾಯ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಡಾ. ಎಂ.ಎಸ್. ಹೇಮಲತಾ, ಸಹಾಯಕ ಪ್ರಾಧ್ಯಾಪಕರು, ಆಹಾರ & ಪೌಷ್ಟಿಕತೆ ಅಧ್ಯಯನ ವಿಭಾಗ, ಇವರಿಗೆ ಸದರಿಯವರು Central Food Technological Research Institute, Govt of India, Mysore ಇಲ್ಲಿ Woman

Scientists Scheme-A ಅಡಿಯಲ್ಲಿ Woman Scientist Fellowship ಆಗಿ ದಿ:12.07.2017 ರಿಂದ ದಿ:11.07.2020 ರವರೆಗೆ ಕರ್ತವ್ಯ ನಿರ್ವಹಿಸಿರುವ ಅವಧಿಯನ್ನು ಯು.ಜಿ.ಸಿ ಮಾರ್ಗಸೂಚಿ 2018ರ Section 10.0 ರ ಅನ್ವಯ ಪರಿಗಣಿಸಿ, ಮೊದಲನೆಯ ಹಂತದ ಪದೋನ್ನತಿಯನ್ನು ದಿ:10.12.2013 ರಿಂದ ಕಾಲ್ಪನಿಕವಾಗಿ ಪರಿಗಣಿಸಿ ಮುಂದಿನ ಹಂತದ ಎಜಿಪಿ 7000/- ರಿಂದ 8000/-ರ ಪದೋನ್ನತಿಯನ್ನು ದಿ:10.02.2018 ರಿಂದ ಜಾರಿಗೆ ಬಂದಂತೆ ಪರಿಷ್ಕರಿಸಿ ಆದೇಶ ಹೊರಡಿಸಿದೆ. ಇದರ ಅನ್ವಯ ದಿ:01.07.2024 ರಿಂದ ದಿ: 28.02.2025 ರವರೆಗೆ ಮೂಲವೇತನವನ್ನು ರೂ.92,500/- (AL - 12/6) ರಿಂದ ರೂ.1,43,600/-(AL - 13A/4) ಗಳಂತೆ ಹೆಚ್ಚಿಸಿ ಪರಿಷ್ಕರಿಸಿ, ಇದರಂತೆ 2024-25ನೇ ಆರ್ಥಿಕ ಸಾಲಿನಲ್ಲಿ ಪದೋನ್ನತಿಯ ದಿನಾಂಕಕ್ಕೆ ಅನುಗುಣವಾಗಿ ಮೂಲ ವೇತನವನ್ನು ನಿಗಧಿಪಡಿಸಲಾಗಿದೆ.

ಮೇಲ್ಕಂಡ 04 ಸಹಾಯಕ ಪ್ರಾಧ್ಯಾಪಕರುಗಳಿಗೆ, ಇವರಿಗೆ ಮುಕ್ತ ವಿಶ್ವವಿದ್ಯಾನಿಲಯಕ್ಕೆ ನೇಮಕಗೊಳ್ಳುವ ಪೂರ್ವದಲ್ಲಿ ಅನ್ಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಸೇವಾವಧಿಯನ್ನು ಪರಿಗಣಿಸಿ, ಸಿ.ಎ.ಎಸ್ ಪದೋನ್ನತಿ ದಿನಾಂಕವನ್ನು ಪರಿಷ್ಕರಿಸಿ, ಸಿಎಎಸ್ ಪದೋನ್ನತಿಯನ್ನು ನೀಡಿದ್ದು & ವೇತನ ನಿಗಧಿಪಡಿಸಿರುವುದಕ್ಕೆ ಹಾಗೂ ಒಬ್ಬರು ಸಹಾಯಕ ಪ್ರಾಧ್ಯಾಪಕರಿಗೆ ಈ ಅನ್ವಯ ವೇತನ ಪಾವತಿಸಿರುವ ಸಂಬಂಧ ನೇಮಕಗೊಳ್ಳುವ ಪೂರ್ವದಲ್ಲಿ ಅನ್ಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಪೂರ್ವ ಸೇವೆಯ ಯುಜಿಸಿಯ 2018ರ ಮಾರ್ಗಸೂಚಿಯ ಸೆಕ್ಷನ್ 10.0 (a) ಯಿಂದ (g) ವರೆಗಿನ ನಿಬಂಧನೆಗಳ ಅನುಸಾರವಾಗಿರುವ ಹಾಗೂ ಕೆಸಿಎಸ್ಆರ್ ನ 252ಜಿ ಯ ಪೂರ್ವ ಸೇವೆಯ ಸಂಬಂಧಿತ ನಿಯಮಾವಳಿಗಳ ಅನುಸಾರವಾಗಿರುವ ಈ ಕೆಳಕಂಡ ಮೂಲ ದಾಖಲೆಗಳನ್ನು ಲೆಕ್ಕಪರಿಶೋಧನೆಗ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:145/ದಿ:03.10.2025 ನ್ನು ನೀಡಲಾಗಿತ್ತು.

1. ವಿಶ್ವವಿದ್ಯಾನಿಲಯದ ನೇಮಕಾತಿ ಅಧಿಸೂಚನೆ.
2. ಮೇಲ್ಕಂಡವರು ಸಮೂಚಿತ ಮಾರ್ಗದಲ್ಲಿ ಸಲ್ಲಿಸಿರುವ ಕೋರಿಕೆ ಅರ್ಜಿಗಳು.
3. ಕರ್ನಾಟಕ ನಾಗರೀಕ ಸೇವಾ ನಿಯಮಗಳು-ನಿಯಮ 252 (ಜಿ) ರನ್ವಯ ಪಹಿಸಿರುವ ಕ್ರಮಗಳು.
4. ವಿಶ್ವವಿದ್ಯಾನಿಲಯಕ್ಕೆ ನೇಮಕಗೊಳ್ಳುವ ಪೂರ್ವದಲ್ಲಿ ಅನ್ಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿರುವುದಕ್ಕೆ ಅಲ್ಲಿನ ನೇಮಕಾತಿ ಪ್ರಾಧಿಕಾರದಿಂದ ಪಡೆದ ಕಾರ್ಯನಿರ್ವಹಣಾ ದೃಢೀಕರಣ ಪತ್ರ (work done certificate) ಮತ್ತು ವೇತನ ಪಾವತಿ ದಾಖಲೆಗಳು.
5. ಕುಂದು ಕೊರತೆ ವಿವರಣಾ ಸಮಿತಿಯ ಶಿಫಾರಸ್ಸಿನ ವರದಿ.
6. Screening-Cum-Evaluation Committee & Selection Committee ಸಭೆಯ ನಡಾವಳಿಗಳು.
7. ನೇಮಕಾತಿ ಆದೇಶಗಳು ಮತ್ತು ಪಿ.ಹೆಚ್.ಡಿ ಘೋಷಣಾ ದಾಖಲೆಗಳು.
8. ಪದೋನ್ನತಿ ಆದೇಶಗಳು ಮತ್ತು ವೇತನ ನಿಗದಿ ಆದೇಶಗಳು ಮತ್ತು
9. ಯು.ಜಿ.ಸಿ ಮಾರ್ಗಸೂಚಿ-2018ರ ಸೆಕ್ಷನ್ 10.0 ರ (a), (b), (c), (d), (e), (f), (i), (ii), (iii) ಮತ್ತು (g) ರ ಎಲ್ಲಾ ಷರತ್ತುಗಳು ಮತ್ತು ನಿಬಂಧನೆಗಳನ್ನು ಸಂಪೂರ್ಣವಾಗಿ ಪೂರೈಸಿರುವ ಸಂಬಂಧದ ಎಲ್ಲಾ ಮೂಲ ದಾಖಲೆಗಳು.

ಮೇಲಿನ ಆಂಶಗಳಿಗೆ ವಿಶ್ವವಿದ್ಯಾನಿಲಯವು ಯಾವುದೇ ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲ. ಆದುದರಿಂದ ಮೇಲ್ಕಂಡ 04 ಮಂದಿ ಸಹಾಯಕ ಪ್ರಾಧ್ಯಾಪಕರು, ಇವರಿಗೆ ಮುಕ್ತ ವಿಶ್ವವಿದ್ಯಾನಿಲಯಕ್ಕೆ ನೇಮಕಗೊಳ್ಳುವ ಪೂರ್ವದಲ್ಲಿ ಅನ್ಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಸೇವಾವಧಿಯನ್ನು ಪರಿಗಣಿಸಿ, ಸಿ.ಎ.ಎಸ್ ಪದೋನ್ನತಿ ದಿನಾಂಕವನ್ನು ಪರಿಷ್ಕರಿಸಿ, ಸಿಎಎಸ್ ಪದೋನ್ನತಿಯನ್ನು ನೀಡಿ ವೇತನ ನಿಗಧಿಪಡಿಸಿರುವುದಕ್ಕೆ ಪೂರಕ ಅಗತ್ಯ ದಾಖಲೆಗಳನ್ನು ಅನುಪಾಲನಾ ವರದಿಯ ಸಹಿತ ಸಲ್ಲಿಸಲು ಸೂಚಿಸಲಾಗಿದೆ.

ಮೇಲಿನ ಕ್ರಮ ಸಂಖ್ಯೆ: 01 ರಲ್ಲಿ ವಿವರಿಸಿರುವ ಒಬ್ಬರು ಸಹಾಯಕ ಪ್ರಾಧ್ಯಾಪಕರಿಗೆ ಮುಕ್ತ ವಿಶ್ವವಿದ್ಯಾನಿಲಯಕ್ಕೆ ನೇಮಕಗೊಳ್ಳುವ ಪೂರ್ವದಲ್ಲಿ ಅನ್ಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಸೇವಾವಧಿಯನ್ನು ಪರಿಗಣಿಸಿ, ಸಿ.ಎ.ಎಸ್. ಪದೋನ್ನತಿ ದಿನಾಂಕವನ್ನು ಪರಿಷ್ಕರಿಸಿ, ಸಿಎಎಸ್ ಪದೋನ್ನತಿಯನ್ನು ನೀಡಿದ್ದು & ವೇತನ ನಿಗಧಿಪಡಿಸಿರುವುದರ ಅನ್ವಯ ವೇತನ ಪಾವತಿಸಿರುವ ಸಂಬಂಧ ಮೇಲೆ ಸಮೂದಿಸಿರುವ ಪೂರಕ ಅಗತ್ಯ ದಾಖಲೆಗಳನ್ನು ಅನುಪಾಲನಾ ವರದಿಯ ಸಹಿತ ಸಲ್ಲಿಸುವವರೆಗೆ ಅನುಬಂಧ-06 ರಲ್ಲಿ ವಿವರಿಸಿರುವಂತೆ ಈ ನೌಕರರ ನೇಮಕಾತಿಯ ಪೂರ್ವದಲ್ಲಿ ಅನ್ಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಸೇವಾವಧಿಯನ್ನು ಪರಿಗಣಿಸಿ ಸಿ.ಎ.ಎಸ್.

ಪದೋನ್ನತಿಗಳ ಆರ್ಥಿಕ ಸೌಲಭ್ಯಗಳನ್ನು ನೀಡಿರುವುದನ್ನು ಕಳೆದು ಮಂಜೂರಾತಿ ದಿನಾಂಕದಿದಂದ ವೇತನ ಬಡ್ತಿಗಳ ಆರ್ಥಿಕ ಸೌಲಭ್ಯಗಳ ವೇತನ ನಗಧೀಕರಣ ಮಾಡಿ. ಹಾಗೂ ಅನುಬಂಧ–07 & 08 ಗಳ ಅನುಸಾರ ನಂತರ ಈ ಅವಧಿಗಳ ಆರ್ಥಿಕ ಸೌಲಭ್ಯವನ್ನು ಪಾವತಿಸಿರುವ ದಿನಾಂಕದಿದಂದ ವೇತನ ಬಡ್ತಿಗಳ ಬಾಬ್ತುಗಳನ್ನು ಹಾಗೂ ಸರ್ಕಾರದ ಪಾಲಿನ NPS ವಂತಿಗೆಗಳ ಹೆಚ್ಚುವರಿ ಪಾವತಿಗಳ ಮೊಬಲಗುಗಳನ್ನು ವಸೂಲಾತಿಯ & ಫೋಷ್ಟಾರೆ ಪಟ್ಟಿಗಳನ್ನು ಸಿದ್ಧಪಡಿಸಿ. ಈ ಫೋಷ್ಟಾರೆಯ ಅನುಬಂಧಗಳಲ್ಲಿನ ಹೆಚ್ಚುವರಿಯ ಪಾವತಿಯ ಒಟ್ಟು ಮೊತ್ತ **ರೂ.72,509/– (ಎಪ್ಪತ್ತೆರಡು ಸಾವಿರದ ಐದು ನೂರ ಒಂಬತ್ತು ರೂ. ಗಳು ಮಾತ್ರ) ಗಳನ್ನು ಆಕ್ಷೇಪಣೆಗೆ ಇಡಲಾಗಿದೆ.** ಈ ಸಂಬಂಧಿತ ಸದರಿ ವಿವರಗಳನ್ನು ಅನುಬಂಧ–19, 19ಎ & 19ಬಿ ಗಳಲ್ಲಿ ನೀಡಲಾಗಿದೆ.

32.4. ಬೋಧಕ ವರ್ಗದವರ ಸೇವಾವಹಿಯಲ್ಲಿ ಕಂಡುಬಂದ ನ್ಯೂನತೆಗಳು:

(ವಿಚಾರಣಾ ಪತ್ರ ಸಂಖ್ಯೆ:191/ದಿ:05–11–2025)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2024–25ನೇ ಸಾಲಿನಲ್ಲಿ ಬೋಧಕ ವರ್ಗದ ಸಿಬ್ಬಂದಿಯವರ ಒಟ್ಟು 76 ಸೇವಾವಹಿಗಳನ್ನು ಲೆಕ್ಕಪರಿಶೋಧನೆ ಮಾಡಿದ್ದು, ಅನುಬಂಧ–20 ರಲ್ಲಿ ವಿವರಿಸಿರುವಂತೆ ನಮೂದಿಸಿರುವ ಈ ಸೇವಾ ವಹಿಗಳಲ್ಲಿ 11 ಮಂದಿ ಬೋಧಕ ವರ್ಗದ ನೌಕರರ ಸೇವಾವಹಿಗಳಲ್ಲಿ ವೃತ್ತಿ ಪ್ರಗತಿ ಯೋಜನೆಯಡಿ (CAS) Academic Level 10–11 ರಿಂದ Academic Level 14–15 ರವರೆಗೆ ವಿವಿಧ ಹಂತಕ್ಕೆ ಪದೋನ್ನತಿ ನೀಡಿರುವ ಸಂಬಂಧದ ಯು.ಜಿ.ಸಿ.ಯ ಅಧಿಸೂಚನೆಯಲ್ಲಿನ ಮಾರ್ಗಸೂಚಿಗಳ ಅನುಸಾರವಾಗಿರುವ ನಡಾವಳಿಯ ಮತ್ತು ಅರ್ಜಿಯ ದಾಖಲೆಗಳನ್ನು ಹಾಗೂ Phd. ಮಾರ್ಗದರ್ಶಕರಾಗಿದ್ದ ಹಾಗೂ Sucessful Phd. Guide ಪ್ರಮಾಣ ಪತ್ರಗಳ ಪೂರಕ ದಾಖಲೆಗಳನ್ನ ಈ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಇನ್ನುಳಿದಂತೆ ಒಟ್ಟು 07 ಮಂದಿಯ ಬೋಧಕ ಸಿಬ್ಬಂದಿಯ ನೌಕರರ ಸೇವಾ ವಹಿಗಳಲ್ಲಿ ರಜೆಗಳ ವಿವರಗಳನ್ನು ನಮೂದಿಸಿರುವುದಿಲ್ಲ. ಹಾಗೂ 07 ಮಂದಿಯ ಬೋಧಕ ವರ್ಗದ ನೌಕರರ ಸೇವಾವಹಿಗಳಲ್ಲಿ ರಜೆಗಳ ವಿವರಗಳನ್ನು ನಮೂದಿಸಿರುವುದಕ್ಕೆ ಈ ಕೆಳಕಂಡಂತೆ ನಮೂದಿಸಿರುವ ಪೂರಕ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಈ ಸಂಬಂಧ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:62/ದಿ:23.07.2025 ಹಾಗೂ 162/ದಿ:15.10.2025 ಗಳಲ್ಲಿ ಕೋರಲಾಗಿತ್ತು. ಆದರೆ ವಿಶ್ವವಿದ್ಯಾನಿಲಯವು ಯಾವುದೇ, ಮಾಹಿತಿಯನ್ನು ಸಲ್ಲಿಸಿರುವುದಿಲ್ಲ. ಆದುದರಿಂದ ಅನುಬಂಧ–20 ರಲ್ಲಿ ವಿವರಿಸುವಂತೆ ಈ ಸಂಬಂಧಿತ ನೌಕರರ ಈ ಕೆಳಕಂಡಂತೆ ನಮೂದಿಸಿರುವ ಅಗತ್ಯ ಪೂರಕ ದಾಖಲೆಗಳನ್ನು ಅನುಪಾಲನಾ ವರದಿಯಲ್ಲಿ ಸಲ್ಲಿಸಲು ಸೂಚಿಸಲಾಗಿದೆ.

1) ನಿಯೋಜನಾ ಆದೇಶಗಳು, ಕರ್ತವ್ಯಕ್ಕೆ ವರದಿ ಮಾಡಿಕೊಂಡ ಪತ್ರಗಳು.
2) ಸಂಬಂಧಪಟ್ಟ ಮೇಲಧಿಕಾರಿಗಳಿಂದ ಪಡೆದ ಕಾರ್ಯ ನಿರ್ವಹಣಾ ವರದಿ. (Work Done Report)
3) ಕರ್ತವ್ಯದಿಂದ ಬಿಡುಗಡೆಗೊಳಿಸಿದ ಆದೇಶದ ಪ್ರತಿಗಳು.
4) ವಿಶ್ವವಿದ್ಯಾನಿಲಯದಿಂದ ನಿಯೋಜನಾ ಆದೇಶವಾದಾಗಲೇ ಸೇವಾವಹಿಯಲ್ಲಿ ದಾಖಲಿಸದಿರುವ ಬಗ್ಗೆ ಸೂಕ್ತ ಸ್ಪಷ್ಟೀಕರಣಗಳ ದಾಖಲೆಗಳು.
5) ನಿಗದಿತ ಬೋಧನಾ ಅವಧಿಗಳನ್ನು ಪಾಯಂ ಬೋಧನಾ ಸಿಬ್ಬಂದಿಗಳಿಗೆ ಕಾರ್ಯಭಾರ ಹಂಚಿಕೆ ಮಾಡಿ, ನಂತರ ಉಳಿದ ಬೋಧನಾ ಅವಧಿಗಳನ್ನು ತಾತ್ಕಾಲಿಕವಾಗಿ/ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿ ವರ್ಗದ ನೌಕರರುಗಳಿಗೆ ಕಾರ್ಯಭಾರ ಹಂಚಿಕೆ ಮಾಡುವ ಬಗ್ಗೆ:

ಮೈಸೂರು ಮುಕ್ತ ವಿಶ್ವವಿದ್ಯಾನಿಲಯದ 2024–25ನೇ ಸಾಲಿನಲ್ಲಿ ಬೋಧಕ ವರ್ಗದವರ ವೇತನ ಪಾವತಿಯ ವಿವರ ಪಟ್ಟಿಯಂತೆ ಈ ಸಾಲಿನಲ್ಲಿ ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರು ಹೀಗೆ ಒಟ್ಟು 76 ಸಂಖ್ಯೆಗಳ ವಿವಿಧ ವಿಷಯವಾರು ಬೋಧನಾ ವರ್ಗದವರು ಕಾರ್ಯನಿರ್ವಹಿಸಿದ್ದು, ಇವರುಗಳಿಗೆ ನಿಗಧಿಪಡಿಸಿದ ಬೋಧನಾ ಅವಧಿಯ ಕಾರ್ಯಭಾರ ಹಂಚಿಕೆಗೆ ಸಂಬಂಧಿಸಿದ ದಾಖಲೆಗಳನ್ನು, ವಿಶ್ವವಿದ್ಯಾನಿಲಯದ ಆದೇಶಗಳು ಹಾಗೂ ಪೂರಕ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 42/ದಿ:10.07.2025 ರಂದು ನೀಡಲಾಗಿತ್ತು. ಆದರೆ ತೈಕ್ಷಣಿಕ ವಿಭಾಗದಿಂದ ಸಲ್ಲಿಸಿರುವ

ಬೋಧನಾ ಅವಧಿಗಳ ಸಂಬಂಧಿತ ದಾಖಲೆಗಳನ್ನು ಪರಿಶೀಲಿಸಲಾಗಿ, ಈ ದಾಖಲೆಗಳಲ್ಲಿ ನಿಯಮಾನುಸಾರ ನಿಗಧಿತ ಬೋಧನಾ ಅವಧಿಗಳನ್ನು ಖಾಯಂ ಬೋಧನಾ ಸಿಬ್ಬಂದಿಗಳಿಗೆ ಕಾರ್ಯಭಾರ ಹಂಚಿಕೆ ಮಾಡಿ, ನಂತರ ಉಳಿದ ಬೋಧನಾ ಅವಧಿಗಳನ್ನು ತಾತ್ಕಾಲಿಕವಾಗಿ/ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿ ವರ್ಗದ ನೌಕರರುಗಳಿಗೆ ಬೋಧನಾ ಅವಧಿಗಳ ಕಾರ್ಯಭಾರ ಹಂಚಿಕೆ ಮಾಡಿರುವ ಬಗ್ಗೆ ವಿವರವಾದ ಹಾಗೂ ಕ್ರೋಡೀಕೃತ ಮಾಹಿತಿಗಳನ್ನು ನಮೂದಿಸಿ, ತಿಳಿಸಿರುವುದಿಲ್ಲ. ಆದುದರಿಂದ ಈ ಸಂಬಂಧಿತ ಪೂರಕ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:191/2025-26, ದಿ:05/11/2025 ರಂದು ನೀಡಲಾಗಿತ್ತು.

ಆದುದರಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ "Draft Statue relating to direct recruitment and Career advancement Scheme to Teachers and Librarians in the Karnataka State Open University" ಈ ಪರಿನಿಯಮಕ್ಕೆ ಮಾನ್ಯ ಕುಲಾಧಿಪತಿಯವರು ದಿನಾಂಕ:20.02.2019 ರಂದು ಅನುಮೋದನೆ ನೀಡಿದ್ದು,

ಈ ಪರಿನಿಯಮದ ಕ್ರಮ ಸಂಖ್ಯೆ:20, 21, 21.1, 21.2 ಮತ್ತು 21.3 ರಲ್ಲಿ ಮತ್ತು 2006 ರ ಯುಜಿಸಿ ನಿಯಮಾವಳಿಯ ನಿಯಮ 15.1 ಮತ್ತು 15.2 ಗಳನ್ವಯ ಸಹಾಯಕ ಪ್ರಾಧ್ಯಾಪಕರಿಗೆ ವಾರಕ್ಕೆ 16 ಗಂಟೆ ಬೋಧನಾ ಅವಧಿಗಳನ್ನು ಹಾಗೂ ಸಹ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರುಗಳಿಗೆ ವಾರಕ್ಕೆ 14 ಗಂಟೆಗಳ ಬೋಧನಾ ಅವಧಿಗಳನ್ನು ನಿಗದಿಪಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ:ಇಡಿ/333/ಯುಎನ್‌ಇ/2016/ ಬೆಂಗಳೂರು, ದಿನಾಂಕ:18.01.2017ರಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಪತಿಗಳು ಒಂದು ತಿಂಗಳಲ್ಲಿ ಕನಿಷ್ಠ 8 ಗಂಟೆಗಳ ಕಾಲಾವಧಿಯನ್ನು ಹಾಗೂ ಕುಲಸಚಿವರು (ಆಡಳಿತ ಮತ್ತು ಮೌಲ್ಯಮಾಪನ)ಗಳು ಹಾಗೂ ವಿವಿಧ ಅಧ್ಯಯನ ವಿಭಾಗಗಳ ಅಧ್ಯಾಪಕರುಗಳು ವಿಭಾಗದ ಶೈಕ್ಷಣಿಕ ಕಾರ್ಯದ ಜೊತೆಗೆ ಹೆಚ್ಚುವರಿಯಾಗಿ ಆಡಳಿತಾತ್ಮಕ/ ವಿಶೇಷಾಧಿಕಾರಿ/ ನೋಡಲ್/ ಸಂಯೋಜನಾಧಿಕಾರಿಗಳಾಗಿ ಹಾಗೂ ವಿವಿಧ ಬೋಧನಾ ವಿಷಯಗಳ ವಿಭಾಗಗಳ ಮುಖ್ಯಸ್ಥರುಗಳಾಗಿ ಯಾವುದೇ ಮಧ್ಯಂತರ ಹಾಗೂ ಬೇಸಿಗೆ ರಜೆಯನ್ನು ಉಪಯೋಗಿಸಿಕೊಳ್ಳದೇ ಕರ್ತವ್ಯ ನಿರ್ವಹಿಸಿರುವ ನಿಯೋಜಿತ ಬೋಧಕರಿಗೆ ಒಂದು ತಿಂಗಳಲ್ಲಿ ಕನಿಷ್ಠ 16 ಗಂಟೆಗಳ ಕಾಲಾವಧಿಯನ್ನು ಬೋಧನೆಗಾಗಿ ಮೀಸಲಿಡಿಸಲು ಆದೇಶಿಸಲಾಗಿರುತ್ತದೆ.

ಮೇಲ್ಕಂಡ ಎಲ್ಲಾ ಆದೇಶಗಳಲ್ಲಿನ ನಿರ್ದೇಶನಗಳ ಅನ್ವಯ ಕುಲಪತಿಯವರು, ಕುಲಸಚಿವರು (ಆಡಳಿತ ಮತ್ತು ಮೌಲ್ಯಮಾಪನ), ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರುಗಳಿಗೆ ನಿಗದಿಪಡಿಸಿರುವ ಬೋಧನಾ ಅವಧಿ ಹಾಗೂ ನಿರ್ವಹಿಸಿದ ಕಾರ್ಯಭಾರದ ವಿವರದ ದಾಖಲೆಗಳನ್ನು ಹಾಗೂ ನಿಯಮಾನುಸಾರ ನಿಗಧಿತ ಬೋಧನಾ ಅವಧಿಗಳನ್ನು ಖಾಯಂ ಬೋಧನಾ ಸಿಬ್ಬಂದಿಗಳಿಗೆ ಕಾರ್ಯಭಾರ ಹಂಚಿಕೆ ಮಾಡಿ, ನಂತರ ಉಳಿದ ಬೋಧನಾ ಅವಧಿಗಳನ್ನು ತಾತ್ಕಾಲಿಕವಾಗಿ/ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿ ವರ್ಗದ ನೌಕರರುಗಳಿಗೆ ಬೋಧನಾ ಅವಧಿಗಳ ಕಾರ್ಯಭಾರಗಳನ್ನು ಹಂಚಿಕೆ ಮಾಡಲು ಸೂಚಿಸಲಾಗಿದೆ.

32.5 ಅತಿಥಿ ಉಪನ್ಯಾಸಕರು/ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರು ಹಾಗೂ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿರುವ ಸಹಾಯಕ ಪ್ರಾಧ್ಯಾಪಕರನ್ನು ನಿಯಮ ಉಲ್ಲಂಘಿಸಿ ನೇಮಕ ಮಾಡಿ ವೇತನ ಪಾವತಿಸಿರುವುದು:

(ವಿಚಾರಣಾ ಪತ್ರದ ಸಂಖ್ಯೆ:112/28.08.2025)

2024-25ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ವೇತನ ಪಾವತಿ ವೌಚರ್‌ಗಳನ್ನು ಪರಿಶೀಲಿಸಲಾಗಿ, 28 ಅತಿಥಿ ಉಪನ್ಯಾಸಕರು/ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರು ಹಾಗೂ 49 ಸಹಾಯಕ ಪ್ರಾಧ್ಯಾಪಕರನ್ನು ಗುತ್ತಿಗೆ ಆಧಾರದ ಮೇಲೆ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಗಳಿಗೆ ನೇಮಕ ಮಾಡಿ ಒಟ್ಟು ರೂ.4,04,30,821/-ಗಳ ವೇತನ ಪಾವತಿಸಲಾಗಿರುತ್ತದೆ. ಸದರಿ ವೇತನ ಪಾವತಿಗೆ ಸಂಬಂಧಿಸಿದಂತೆ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತದೆ.

ಅ) ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ145ಯುಎನ್‌ಇ2021,ದಿನಾಂಕ:06.04.2021ರಂತೆ ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ತಾತ್ಕಾಲಿಕವಾಗಿ/ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಭರ್ತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯ ಅನುಮತಿಯನ್ನು ಪಡೆಯುವುದು ಕಡ್ಡಾಯವಾಗಿದ್ದು, ಈ ನೇಮಕಾತಿಗೆ ಆರ್ಥಿಕ ಇಲಾಖೆಯ ಅನುಮತಿ ಪಡೆದಿರುವುದಿಲ್ಲ.

ಆ) ವಿಶ್ವವಿದ್ಯಾನಿಲಯಕ್ಕೆ ಸಹಾಯಕ ಪ್ರಾಧ್ಯಾಪಕರ ಮಂಜೂರಾದ. ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿಯಿರುವ ಹುದ್ದೆಗಳಿಗೆ ಎದುರಾಗಿ ಇವರುಗಳನ್ನು ನೇಮಕ ಮಾಡಿರುವ ದಾಖಲೆ ಇರುವುದಿಲ್ಲ.

ಇ) 18 ಜುಲೈ 2018ರ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದವರ ಅಧಿಸೂಚನೆ ಸಂ:ಎಫ್1-2/2017/ಇಸಿಪಿಎಸ್‌ದಲ್ಲಿ ಸೂಚಿಸಿರುವ ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳ ಬೋಧಕರು ಮತ್ತು ಇತರೆ ಶೈಕ್ಷಣಿಕ ಸಿಬ್ಬಂದಿಗಳ ನೇಮಕಾತಿಗೆ ಕನಿಷ್ಠ ಅರ್ಹತೆಗಳು ಮತ್ತು ಉನ್ನತ ಶಿಕ್ಷಣದಲ್ಲಿ ಗುಣಮಟ್ಟ ಸಂರಕ್ಷಣೆಯ ನಿಯಮಾವಳಿಗಳನ್ನು ಅನುಸರಿಸಿ ನೇಮಕಾತಿ ಮಾಡಿರುವ ದಾಖಲೆ ಇರುವುದಿಲ್ಲ.

ಈ) ನೇಮಕಗೊಂಡ ಬೋಧಕರುಗಳಿಗೆ ಮಾಹೆಯಾನ ರೂ.50,000/-ಗಳ ವೇತನ ನಿಗದಿಪಡಿಸಿದ್ದು, ವೇತನ ನಿಗದಿಗೆ ಅನುಸರಿಸಿರುವ ಮಾನದಂಡದಗಳು ಹಾಗೂ ನೇಮಕಾತಿಯಲ್ಲಿ ರೋಸ್ಟರ್ ನಿಯಮಗಳನ್ನು ಅನುಸರಿಸಿರುವ ದಾಖಲೆ ಇರುವುದಿಲ್ಲ.

ಉ) 2006ರ ಯುಜಿಸಿ ನಿಯಮಾಳಿಯ ನಿಯಮ 15.1 ಮತ್ತು 15.2 ಗಳನ್ವಯ ಸಹಾಯಕ ಪ್ರಾಧ್ಯಾಪಕರಿಗೆ ವಾರಕ್ಕೆ 16 ಗಂಟೆ ಬೋಧನಾ ಅವಧಿಗಳನ್ನು ಹಾಗೂ ಸಹ ಪ್ರಾಧ್ಯಾಪಕರುಗಳಿಗೆ ವಾರಕ್ಕೆ 14 ಗಂಟೆಗಳ ಬೋಧನಾ ಅವಧಿಗಳನ್ನು ನಿಗದಿಪಡಿಸಲಾಗಿದೆ ಅದರನ್ವಯ ಒಟ್ಟಾರೆ ಅಗತ್ಯವಿರುವ ಬೋಧನಾ ಅವಧಿ ಲಭ್ಯವಿರುವ ಬೋಧನಾ ಅವಧಿ, ಹಾಗೂ ಅತಿಥಿ ಹಾಗೂ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿರುವ ಸಹಾಯಕ ಪ್ರಾಧ್ಯಾಪರುಗಳಿಗೆ ನಿಗದಿಪಡಿಸಿದ ಬೋಧನೆಯ ಅವಧಿಗಳು, ನಿರ್ವಹಿಸಿದ ಬೋಧನೆಯ ಕಾರ್ಯಭಾರದ ಅವಧಿಗಳು ಹಾಗೂ ವಿಶ್ವವಿದ್ಯಾನಿಲಯದ ಆದೇಶಗಳು ಮತ್ತು ಪೂರಕ ದಾಖಲೆ ಇರುವುದಿಲ್ಲ.

ಮೇಲಿನ ಅಂಶಗಳಿಗೆ ವಿವರಣೆ ಕೋರಿ ನೀಡಿದ ವಿಚಾರಣಾ ಪತ್ರದ ಸಂಖ್ಯೆ.112/28.08.2025ಕ್ಕೆ, ವಿಶ್ವವಿದ್ಯಾನಿಲಯದವರು ಉತ್ತರಿಸಿ ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಕ್ಕೆ ಅವಶ್ಯವಿರುವ ಸಹಾಯಕ ಪ್ರಾಧ್ಯಾಪಕರುಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗಿರುತ್ತದೆ. ಯು.ಜಿ.ಸಿ ಯ ಓ.ಡಿ.ಎಲ್ ಮಾರ್ಗಸೂಚಿಯಲ್ಲಿ ಪ್ರತಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಲು ಸಂಬಂಧಪಟ್ಟ ವಿಭಾಗದಲ್ಲಿ ಇಂತಿಷ್ಟೇ ಬೋಧಕ ಸಿಬ್ಬಂದಿಗಳು ಇರಬೇಕು ಎಂಬ ನಿಯಮವಿರುತ್ತದೆ. ಈ ಸಂಬಂಧ ವಿಶ್ವವಿದ್ಯಾನಿಲಯದ ಡೀನ್(ಶೈಕ್ಷಣಿಕ)ರವರು ವಿಭಾಗದ ಮುಖ್ಯಸ್ಥರುಗಳಿಂದ ಅವಶ್ಯವಿರುವ ಸಿಬ್ಬಂದಿಗಳ ಮಾಹಿತಿಯನ್ನು ಪಡೆದು ದಿನಾಂಕ:25.06.2021ರಂದು ನಡೆದ ಶೈಕ್ಷಣಿಕ ಮಂಡಳಿಯ ಸಭೆಯಲ್ಲಿ ಹಾಗೂ ದಿನಾಂಕ:03.07.2021 ರಂದು ನಡೆದ 165ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸಹಾಯಕ ಪ್ರಾಧ್ಯಾಪಕರುಗಳನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿರುತ್ತದೆ ಎಂದು ಅನುಪಾಲನಾ ವರದಿಯಲ್ಲಿ ತಿಳಿಸಿರುತ್ತಾರೆ. ವಿಶ್ವವಿದ್ಯಾನಿಲಯದ ಕಾಯ್ದೆ 1992ರ ಎರಡನೇ ಅನುಸೂಚಿಯ ಮೊದಲನೇ ಪರಿನಿಯಮದ ನಿಯಮ 2(9)(iii) ಅನ್ವಯ ಮಾನ್ಯ ಕುಲಪತಿಗಳಿಗೆ ಪ್ರದತ್ತವಾಗಿರುವ ಅಧಿಕಾರದಡಿಯಲ್ಲಿ, ವಿಶ್ವವಿದ್ಯಾನಿಲಯದ ಕಾರ್ಯ ನಿರ್ವಹಣೆ ಅವಶ್ಯಕವೆಂದು ಪರಿಗಣಿಸಬಹುದಾದ ವ್ಯಕ್ತಿಯನ್ನು ಒಂದು ಬಾರಿಗೆ ಆರು ತಿಂಗಳಿಗೆ ಮೀರದ ಅವಧಿಗೆ ಅಲ್ಪಾವಧಿ ನೇಮಕಾತಿ ಮಾಡುವುದು ಎಂದಿರುತ್ತದೆ ಅದರನ್ವಯ ಅಥಿತಿ ಉಪನ್ಯಾಸಕರನ್ನು ನೇಮಕ ಮಾಡಲಾಗಿದೆ. ಹಾಗೂ ಯು.ಜಿ.ಸಿ ನಿಯಮದನ್ವಯ ಗೌರವ ಸಂಭಾವನೆ ನಿಗದಿಪಡಿಸಲಾಗಿದೆ ಹಾಗೂ ವಿಶ್ವವಿದ್ಯಾನಿಲಯಕ್ಕೆ 96 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 63 ಕರ್ತವ್ಯ ನಿರ್ವಹಿಸುತ್ತಿದ್ದು, 33 ಹುದ್ದೆಗಳು ಖಾಲಿ ಇರುತ್ತವೆ ಎಂದು ಅನುಪಾಲನಾ ವರದಿ ನೀಡಿರುತ್ತಾರೆ. ಆದರೆ ವಿಶ್ವವಿದ್ಯಾನಿಲಯದವರು 28 ಅತಿಥಿ ಉಪನ್ಯಾಸಕರು/ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರು ಹಾಗೂ 49 ಸಹಾಯಕ ಪ್ರಾಧ್ಯಾಪಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗಿದೆ. ಹೀಗೆ 33 ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ 77 ಹುದ್ದೆಗಳಿಗೆ ನೇಮಕ ಮಾಡುವ ಮೂಲಕ 44 ಹುದ್ದೆಗಳನ್ನು ಹೆಚ್ಚುವರಿಯಾಗಿ ನೇಮಕ ಮಾಡಿಕೊಂಡಿರುವುದು ಕಂಡು ಬಂದಿರುತ್ತದೆ.

ವಿಶ್ವವಿದ್ಯಾನಿಲಯವು ದೂರ ಶಿಕ್ಷಣದ ಮೂಲಕ ಕೋರ್ಸುಗಳನ್ನು ನಡೆಸುತ್ತಿದ್ದು, ಎಲ್ಲಾ ಶೈಕ್ಷಣಿಕ ವರ್ಷಗಳಲ್ಲಿ ವಿದ್ಯಾರ್ಥಿಗಳ ಪ್ರವೇಶದ ಸಂಖ್ಯೆ ಏಕ ಪ್ರಕಾರವಾಗಿರುವುದಿಲ್ಲವಾದ್ದರಿಂದ ಕೋರ್ಸುಗಳು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ನೇಮಕ ಮಾಡಿಕೊಳ್ಳುವ ಬದಲಿಗೆ ಆಯಾ ವರ್ಷಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಆಧಾರವಾಗಿಟ್ಟು ಕೊಂಡು ಕಾರ್ಯಭಾರವನ್ನು ಲೆಕ್ಕಹಾಕಿ ಅಗತ್ಯ ಸಿಬ್ಬಂದಿಯನ್ನು ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ ಹುದ್ದೆಗಳ ಸಂಖ್ಯೆಯ ಮಿತಿಯೊಳಗೆ ನೇಮಕ ಮಾಡಿಕೊಂಡಿದ್ದಲ್ಲಿ ವಿಶ್ವವಿದ್ಯಾನಿಲಯಕ್ಕೆ ಆಗಿರುವ ಈ ಅನಗತ್ಯ ವೆಚ್ಚವನ್ನು ತಪ್ಪಿಸಬಹುದಾಗಿತ್ತು. ಈ ಕುರಿತು ಒಂದಿನ ಸಾಲಿನ ಲೆಕ್ಕಪರಿತೋಧನಾ ವರದಿಯಲ್ಲಿ

ಆಕ್ಷೇಪಿಸಿದ್ದರೂ ಯಾವುದೇ ಕ್ರಮವಹಿಸಿರುವುದಿಲ್ಲ. ಮೇಲಿನ ಕಾರಣಗಳಿಗಾಗಿ ಪ್ರಸಕ್ತ ಸಾಲಿಗೆ ಪಾವತಿಸಿರುವ ವೇತನದ ಒಟ್ಟು ಮೊತ್ತ **ರೂ.4,04,30,821/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

32.6 ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳಿಂದ ಪಿ.ಹೆಚ್.ಡಿ ಪದವಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಮಾಹಿತಿ: (ವಿಚಾರಣಾ ಪತ್ರ ಸಂಖ್ಯೆ:78/05.08.2025)

ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಡಾಕ್ಟರ್ ಆಫ್ ಫಿಲಾಸಫಿ (ಪಿಹೆಚ್‌ಡಿ) ಪದವಿ ಕಾರ್ಯಕ್ರಮವನ್ನು ನಿಯಮಿತ ಕ್ರಮದಲ್ಲಿ ಯಾವುದೇ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯದ ಪಿ.ಎಚ್.ಡಿ ಪದವಿಗೆ ಸಮಾನವಾಗಿ ಒದಗಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ವಿವಿಧ ವಿಭಾಗಗಳಲ್ಲಿ ಪಿ.ಹೆಚ್.ಡಿ ಪದವಿಗೆ ನೋಂದಣಿಯಾಗಿ ಸಂಶೋಧನೆ ನಡೆಸುತ್ತಿರುವ ವಿದ್ಯಾರ್ಥಿಗಳ ವಿವರಗಳು, ಸಂಶೋಧನೆಗೆ ಆಯ್ಕೆಯಾಗಿರುವ ವಿಷಯ ಹಾಗೂ ಮಾರ್ಗದರ್ಶನ ನೀಡುತ್ತಿರುವ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರುಗಳ ವಿವರಗಳು ಹಾಗೂ ಸಂಬಂಧಿಸಿದ ಇನ್ನಿತರೆ ಮೂರಕ ದಾಖಲೆಗಳನ್ನು ಲಿಕ್ಕ ಪರಿಶೋಧನೆಗೆ ಹಾಜರುಪಡಿಸುವಂತೆ. ವಿಚಾರಣಾ ಪತ್ರ ಸಂಖ್ಯೆ:78/05.08.2025ರಲ್ಲಿ ಕೋರಲಾಗಿ. ವಿಶ್ವವಿದ್ಯಾನಿಲಯದ ಡೀನ್ (ಶೈಕ್ಷಣಿಕ) ಇವರು ಒಟ್ಟು 21 ವಿಭಾಗಗಳಿದ್ದು. 14 ವಿಭಾಗಗಳಲ್ಲಿ 101 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ ಎಂದು ಉತ್ತರಿಸಿದ್ದು. ವಿವರಗಳನ್ನು ಅನುಬಂಧ-21 ರಲ್ಲಿ ನೀಡಿದೆ.

ವಿಶ್ವವಿದ್ಯಾನಿಲಯ ಅನುದಾನ ಆಯೋಗ (ಯು.ಜಿ.ಸಿ) ದಿನಾಂಕ: 07 ನವೆಂಬರ್, 2022 ರಲ್ಲಿ ಹೊರಡಿಸಿರುವ ಅಧಿಸೂಚನೆಯ ನಿಬಂಧನೆಗಳು: University Grants commission (Minimum Standards and Procedures for Award of Ph.D., Degree) Regulations, **2022 ರ ನಿಬಂಧನೆ ಕ್ರಮ ಸಂ.5. "Procedure of Admission" ನ (4) ರಲ್ಲಿ "** The Higher Educational Institution shall maintain a list of Ph.D. supervisors (specifying the name of the supervisor, his or her designation, and the department/school/centre), along with the details of Ph.D. scholars (specifying the name of the registered Ph.D. scholar, the topic of his/her research and the date of admission) admitted under them on the website of the institution and update this list every academic year." ಎಂದು ಸೂಚಿಸಿದೆ. ಅದರಂತೆ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಮಾಹಿತಿ ಅಳವಡಿಸಲಾಗಿದೆ.

ನಿಬಂಧನೆ ಕ್ರಮ ಸಂ.6. "Allocation of research Supervisor" ನ (3) ರಲ್ಲಿ "An eligible Professor/Associate Professor/Assistant Professor can guide up to eight (8) /six (6) /four (4) Ph.D Scholars, respectively, at any given time." ಎಂದು ಸೂಚಿಸಲಾಗಿದೆ. ವಿಶ್ವವಿದ್ಯಾನಿಲಯದಲ್ಲಿ 13 ಪ್ರಾಧ್ಯಾಪಕರು, 19 ಸಹ ಪ್ರಾಧ್ಯಾಪಕರು, 30 ಸಹಾಯಕ ಪ್ರಾಧ್ಯಾಪಕರು ಒಟ್ಟು 62 ಬೋಧಕ ವರ್ಗದವರು ಕಾರ್ಯನಿರ್ವಹಿಸುತ್ತಿದ್ದು ಮೇಲಿನ ಯು.ಜಿ.ಸಿ ನಿಭಂದನೆ ಪ್ರಕಾರ ಪ್ರಾಧ್ಯಾಪಕರು 8, ಸಹ ಪ್ರಾಧ್ಯಾಪಕರು 6 ಹಾಗೂ ಸಹಾಯಕ ಪ್ರಾಧ್ಯಾಪಕರು 4 ಸಂಶೋಧನಾ ವಿಧ್ಯಾರ್ಥಿಗಳನ್ನು ಹೊಂದಿರಬೇಕು. ಆದರೇ, ವಿಶ್ವವಿದ್ಯಾನಿಲಯದವರು ಹಾಜರುಪಡಿಸಿದ ಮಾರ್ಗದರ್ಶನ ನೀಡುತ್ತಿರುವ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರುಗಳ ಅಡಿಯಲ್ಲಿ ಸಂಶೋಧನೆ ನಡೆಸುತ್ತಿರುವವರ ಪಟ್ಟಿಯನ್ನು ಪರಿಶೀಲಿಸಿದಾಗ ಪ್ರಾಧ್ಯಾಪಕರು ಸರಾಸರಿ ಗರಿಷ್ಠ 5 ಹಾಗೂ ಕನಿಷ್ಠ 1 ಸಂಶೋಧನಾ ವಿದ್ಯಾರ್ಥಿಗಳಿಗೆ ಹಾಗೂ 36 ಬೋಧಕ ವರ್ಗದವರಿಗೆ ಸಂಶೋಧನಾ ವಿದ್ಯಾರ್ಥಿಗಳೇ ಇಲ್ಲ. ಆದ ಕಾರಣ ಯು.ಜಿ.ಸಿ ನಿಬಂಧನೆಗಳನುಸಾರ ಕ್ರಮ ಕೈಗೊಳ್ಳಲು ಸೂಚಿಸಿದೆ.

33. ಬೋಧಕೇತರ ವರ್ಗದವರ ವೇತನ ಮತ್ತು ಭತ್ಯೆಗಳು

33.1 ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ, ಭರ್ತಿ ಮಾಡಿದ ಮತ್ತು ಖಾಲಿ ಹುದ್ದೆಗಳ ವಿವರ:

(ವಿಚಾರಣಾ ಪತ್ರ ಸಂಖ್ಯೆ:032/ದಿ:09-07-2025)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ದಿನಾಂಕ:31-03-2024 ರಲ್ಲಿರುವಂತೆ ಬೋಧಕೇತರ ಸಿಬ್ಬಂದಿಗಳ ಮಂಜೂರಾದ, ಭರ್ತಿಯಾದ ಮತ್ತು ಖಾಲಿ ಹುದ್ದೆಗಳ ವಿವರಗಳನ್ನು ಹಾಗೂ ಸರ್ಕಾರದ ಆದೇಶಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ

ಕೋರಿ ವಿಚಾರಣಾ ಪತ್ರ ಸಂಖ್ಯೆ:032/ದಿ:09-07-2025 ನೀಡಲಾಗಿದ್ದು, ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/985/ 2025-26, ದಿನಾಂಕ:30-06-2025, ಮತ್ತು ಕರಾಮುವಿ/ಆವಿ/ಸಿಬ್ಬಂದಿ-2/985/2025-26, ದಿನಾಂಕ:14-07-2025ರಲ್ಲಿ ಮಂಜೂರಾದ, ಭರ್ತಿಮಾಡಲಾದ ಮತ್ತು ಖಾಲಿ ಹುದ್ದೆಗಳ ಹಾಗೂ ಖಾಲಿ ಹುದ್ದೆಗಳಲ್ಲಿ ನೇರನೇಮಕಾತಿ ಹುದ್ದೆಗಳು, ಮುಂಬಡ್ತಿ ಹುದ್ದೆಗಳ ವಿವರಗಳನ್ನು ವೃಂದವಾರು ವಿವರಗಳು ಕೆಳಕಂಡಂತಿರುತ್ತವೆ.

ಕ್ರ.ಸಂ	ಮಂಜೂರಾದ ಹುದ್ದೆಗಳ ಹೆಸರು	ಹುದ್ದೆಗಳ ಸ್ವರೂಪ	ಮಂಜೂರಾದ ಒಟ್ಟು ಹುದ್ದೆಗಳು	ನೇಮಕಾತಿ ವಿಧಾನ		ಭರ್ತಿ ಮಾಡಲಾದ ಒಟ್ಟು ಹುದ್ದೆಗಳು	ನೇಮಕಾತಿ ವಿಧಾನ		ಖಾಲಿ ಉಳಿದ ಒಟ್ಟು ಹುದ್ದೆಗಳು	ನೇಮಕಾತಿ ವಿಧಾನ	
				ನೇರ ನೇಮಕಾತಿ ಹುದ್ದೆಗಳ ಸಂಖ್ಯೆ	ಮುಂಬಡ್ತಿ ಹುದ್ದೆಗಳ ಸಂಖ್ಯೆ		ನೇರ ನೇಮಕಾತಿ ಹುದ್ದೆಗಳ ಸಂಖ್ಯೆ	ಮುಂಬಡ್ತಿ ಹುದ್ದೆಗಳ ಸಂಖ್ಯೆ		ನೇರ ನೇಮಕಾತಿ ಹುದ್ದೆಗಳ ಸಂಖ್ಯೆ	ಮುಂಬಡ್ತಿ ಹುದ್ದೆಗಳ ಸಂಖ್ಯೆ
									(4-7)	(5-8)	(6-9)
1	2	3	4	5	6	7	8	9	10	11	12
1	ಸಮೂಹ- ಎ (Group-A)	17	61	34	27	24	2	22	37	32	5
2	ಸಮೂಹ- ಬಿ (Group-B	7	41	6	35	30	0	30	11	6	5
3	ಸಮೂಹ- ಸಿ (Group-C)	29	353	254	99	183	77	106	170	177	-7
4	ಸಮೂಹ- ಡಿ (Group-D)	7	120	101	19	32	21	11	88	80	8
ಒಟ್ಟು ಹುದ್ದೆಗಳ ಸಂಖ್ಯೆ		60	575	395	180	269	100	169	306	295	11

ಮೇಲ್ಕಂಡಂತೆ ಮಂಜೂರಾದ ಒಟ್ಟು 575 ಹುದ್ದೆಗಳಲ್ಲಿ 269 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಲಾಗಿದ್ದು ಒಟ್ಟು 306 ಹುದ್ದೆಗಳು ಖಾಲಿ ಉಳಿದಿರುತ್ತವೆ. ಭರ್ತಿ ಮಾಡಲಾದ ಹುದ್ದೆಗಳು ಶೇ.46.78 ಆಗಿರುತ್ತದೆ ಮತ್ತು ಖಾಲಿ ಉಳಿದಿರುವ ಹುದ್ದೆಗಳು ಶೇ.53.22 ಆಗಿರುತ್ತದೆ, ವೃಂದವಾರು ಮಂಜೂರಾದ, ಭರ್ತಿಯಾದ ಮತ್ತು ಖಾಲಿ ಉಳಿದಿರುವ ಹುದ್ದೆಗಳ ವಿವರಗಳನ್ನು **ಅನುಬಂಧ-22** ರಲ್ಲಿ ವಿವರಿಸಲಾಗಿದೆ.

33.2 ಮಂಜೂರಾದ ಹುದ್ದೆಗಳ ಲೆಕ್ಕಪತ್ರಗಳಲ್ಲಿನ ನ್ಯೂನತೆಗಳು:

(ವಿಚಾರಣಾ ಪತ್ರ ಸಂಖ್ಯೆ:007/ದಿ:25-06-2025 & 32/ದಿ:09-07-2025)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಯಕ್ಕೆ, ಮೈಸೂರು ವಿಶ್ವವಿದ್ಯಾನಿಲಯದಿಂದ ವರ್ಗಾವಣೆಯಾದ ಹುದ್ದೆಗಳು, ಸರ್ಕಾರದಿಂದ ಮಂಜೂರಾದ ಹುದ್ದೆಗಳು ಹಾಗೂ ಕರಾಮುವಿನಿಲಯವು ರೂಪಿಸಲಾದ ವಿವಿಧ ಪರಿನಿಯಮಗಳನ್ವಯ ಮಂಜೂರಾದ ಹುದ್ದೆಗಳ ವಿವರಗಳನ್ನು ಹಾಜರುಪಡಿಸಲು ವಿಚಾರಣಾ ಪತ್ರ ಸಂಖ್ಯೆ:**007**/ದಿ:**25-06-2025** ರಲ್ಲಿ ಕೋರಲಾಗಿತ್ತು. ಅದಕ್ಕೆ ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ: ಕರಾಮುವಿ/ಆವಿ/ ಸಿಬ್ಬಂದಿ-2/985/2025-26 **ದಿನಾಂಕ**:30-06-2025 ನೀಡಲಾದ ಅನುಪಾಲನಾ ವಿವರಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿರುತ್ತದೆ.

01. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಮೈಸೂರು ವಿಶ್ವವಿದ್ಯಾನಿಲಯದಿಂದ ವರ್ಗಾವಣೆಯಾದ ವಿವಿಧ ಹುದ್ದೆಗಳ ಸಂಬಂಧವಾಗಿ ಸರ್ಕಾರದ ಅಧಿನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, (ವಿಶ್ವವಿದ್ಯಾನಿಲಯಗಳು) ಇವರಿಂದ ನೀಡಲಾದ ಹುದ್ದೆಗಳ ವಿವರದ ಆದೇಶದ ಅನುಬಂಧವನ್ನು ಮಾತ್ರ ಲೆಕ್ಕಪರಿತೋಧನೆಗೆ

ಹಾಜರುಪಡಿಸಲಾಗಿದ್ದು, ಮಂಜೂರಾತಿ ಆದೇಶದ ಪ್ರತಿ ಮತ್ತು ಆದೇಶ ಸಂಖ್ಯೆ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

02. ಸರ್ಕಾರಿ ಆದೇಶ ಸಂಖ್ಯೆ: ಇಡಿ 31 ಯುಟಿಪಿ 2008, ಬೆಂಗಳೂರು, ದಿನಾಂಕ:02-01-2007 ರಲ್ಲಿ ಮಂಜೂರಾದ ಒಟ್ಟು 221 ಹುದ್ದೆಗಳ ಆದೇಶದ ಪ್ರತಿಯಲ್ಲಿನ ಆದೇಶದ ಸಂಖ್ಯೆ & ದಿನಾಂಕ ಹಾಗೂ ಅನುಬಂಧದಲ್ಲಿ ದಾಖಲಿಸಿರುವ ಆದೇಶದ ಸಂಖ್ಯೆ: ಇಡಿ ಯುಟಿಪಿ 2006, ದಿನಾಂಕ:29-12-2006 ವ್ಯತ್ಯಾಸವಾಗಿರುತ್ತದೆ ಈ ಬಗ್ಗೆ ಸೂಕ್ತ ವಿವರಗಳು ಲೆಕ್ಕಪರಿಶೋಧನೆಗೆ ಲಭ್ಯವಾಗಿರುವುದಿಲ್ಲ.

03. ಸರ್ಕಾರಿ ಆದೇಶ ಸಂಖ್ಯೆ:ಇಡಿ 22 ಯುಟಿಪಿ 2007 ದಿನಾಂಕ: 10-07-2007 ರಲ್ಲಿ ಮಂಜೂರಾದ ಒಟ್ಟು 195 ಹುದ್ದೆಗಳ ಸಂಬಂಧವಾಗಿ ಹುದ್ದೆಗಳ ವಿವರಗಳ ಅನುಬಂಧದಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಇಡಿ 31 ಯುಟಿಪಿ 2006 ದಿನಾಂಕ:02-01-2007 ರಲ್ಲಿ ಮಂಜೂರಾದ ಹುದ್ದೆಗಳು 195, ಮಂಜೂರಾತಿ ಪಡೆಯಬೇಕಾಗಿರುವ ಹುದ್ದೆಗಳ ವಿವರಗಳು ಮಾತ್ರ ಲಭ್ಯವಿದ್ದು; 195 ಹುದ್ದೆಗಳು ಮಂಜೂರಾಗಿರುವ ಸಂಬಂಧ ಮಾಹಿತಿಯು ಲೆಕ್ಕಪರಿಶೋಧನೆಗೆ ಲಭ್ಯವಾಗಿರುವುದಿಲ್ಲ.

04. ಸರ್ಕಾರಿ ಆದೇಶ ಸಂಖ್ಯೆ: ಇಡಿ 31 ಯುಟಿಪಿ 2008, ಬೆಂಗಳೂರು, ದಿನಾಂಕ:02-01-2007ರ ಕ್ರಮ ಸಂಖ್ಯೆ- 35 ರಲ್ಲಿ ಮಂಜೂರಾದ ಒಂದು (Drafts Man) ಮತ್ತು ಸರ್ಕಾರಿ ಆದೇಶ ಸಂಖ್ಯೆ:ಇಡಿ 22 ಯುಟಿಪಿ 2007 ದಿನಾಂಕ: 10-07-2007 ರ ಕ್ರಮ ಸಂಖ್ಯೆ 20 ರಲ್ಲಿ ಮಂಜೂರಾದ ಒಂದು (Drafts Man) ಹುದ್ದೆ ಒಟ್ಟು ಎರಡು ಹುದ್ದೆಗಳಲ್ಲಿ ಒಂದನ್ನು ಕಿರಿಯ ಅಭಿಯಂತರರ ಹುದ್ದೆ ಎಂದು ಪರಿವರ್ತಿಸಲಾಗಿದೆ ಎಂದು ನಮೂದಿಸಿದ್ದು ಪರಿವರ್ತಿಸಿ ಸರ್ಕಾರದಿಂದ ಅಧಿಸೂಚಿಸಲ್ಪಟ್ಟ ಸರ್ಕಾರದ ಆದೇಶವು ಲೆಕ್ಕಪರಿಶೋಧನೆಗೆ ಲಭ್ಯವಾಗಿರುವುದಿಲ್ಲ.

05. KSOU (Establishment of University Health Centre Statutes-2011, ದಿನಾಂಕ: 06-02-2012 ರಂದು ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆಯಾದ ಅನುಶಾಸನದಲ್ಲಿ Medical Officer & Lady Medical Officer ಎಂಬ ಎರಡು ಪ್ರತ್ಯೇಕವಾದ ಹುದ್ದೆಗಳನ್ನು ಮಂಜೂರು ಮಾಡಲಾಗಿದ್ದು, ಅನುಪಾಲನಾ ವರದಿಯಲ್ಲಿ ಮಂಜೂರಾದ ಹುದ್ದೆಗಳ ಕ್ರಮ ಸಂಖ್ಯೆ: 55 ರಲ್ಲಿ Doctors ಎರಡು ಹುದ್ದೆಗಳು ಎಂದು ದೃಢೀಕರಿಸಲಾಗಿರುತ್ತದೆ. Medical Officer & Lady Medical Officer ಹುದ್ದೆಗಳು Doctor ಹುದ್ದೆಗಳಾಗಿ ಪರಿವರ್ತಿಸಲಾಗಿರುವ ಸಂಬಂಧ ಆದೇಶದ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

06. ಮೈಸೂರು ವಿಶ್ವವಿದ್ಯಾನಿಲಯದಿಂದ ಮಂಜೂರಾದ ಹುದ್ದೆಗಳ ಕ್ರಮ ಸಂಖ್ಯೆ:10 ರಲ್ಲಿ "Typist cum clerk" 07 ಹುದ್ದೆಗಳು ಹಾಗೂ ಸರ್ಕಾರಿ ಆದೇಶ ಸಂಖ್ಯೆ:ಇಡಿ 31 ಯುಟಿಪಿ 2008, ಬೆಂಗಳೂರು, ದಿನಾಂಕ: 02-01-2007ರ ಕ್ರಮ ಸಂಖ್ಯೆ-23 ರಲ್ಲಿ ಮಂಜೂರಾದ ಒಟ್ಟು 07 "Typist" ಹುದ್ದೆಗಳನ್ನು ಪರಿವರ್ತಿಸಿ ಮಂಜೂರಾದ ಹುದ್ದೆಗಳ ವಿವರ ಪಟ್ಟಿ ಕ್ರಮ ಸಂಖ್ಯೆ:24 ರಲ್ಲಿ ಒಟ್ಟು 14 Typist ಹುದ್ದೆಗಳೆಂದು ದಾಖಲಿಸಿದೆ. ಎರಡು ಹುದ್ದೆಗಳನ್ನು ವಿಲೀನಗೊಳಿಸಿ "Typist" ಹುದ್ದೆಗಳೆಂದು ಘೋಷಿಸಿರುವ ಸಂಬಂಧ ಸೂಕ್ತ ಆದೇಶಗಳು ಲೆಕ್ಕಪರಿಶೋದನೆಗೆ ಲಭ್ಯವಾಗಿರುವುದಿಲ್ಲ.

ಮೇಲ್ಕಂಡ ನ್ಯೂನತೆಗಳ ಸಂಬಂಧವಾಗಿ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:32/ದಿ:09-07-2025 ನ್ನು ನೀಡಲಾಗಿದ್ದು, ಅದಕ್ಕೆ ವಿಶ್ವವಿದ್ಯಾನಿಲಯದಿಂದ ಯಾವುದೇ ವ್ಯತ್ಯಾಸವಾಗಿರುವುದಿಲ್ಲ ಎಂದು ಉತ್ತರ ನೀಡಿರುತ್ತಾರೆ. ಅಂಶವಾರು ಸೂಕ್ತ ಮಾಹಿತಿ ಅಥವಾ ಉತ್ತರವನ್ನು ನೀಡಿರುವುದಿಲ್ಲ. ಮೇಲ್ಕಂಡ ನ್ಯೂನತೆಗಳನ್ನು ಸರ್ಕಾರಿ ಆದೇಶಗಳು, ಪರಿನಿಯಮಗಳನ್ನು ಒಳಗೊಂಡ ದಾಖಲೆ, ವಿವರಗಳನ್ವಯ ಅಧಿಕೃತಗೊಳಿಸಿ ಮಾಹಿತಿಯನ್ನು ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

33.3. ಪ್ರಾದೇಶಿಕ ನಿರ್ದೇಶಕರ ಮಂಜೂರಾತಿ ಹುದ್ದೆಗಳ ಸಂಖ್ಯೆಯಲ್ಲಿ 11 ಹುದ್ದೆಗಳನ್ನು ಅನಧಿಕೃತವಾಗಿ ಹೆಚ್ಚುವರಿಯಾಗಿ ಪರಿಗಣಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:13/ದಿ:25.06.2025)

ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ ಹುದ್ದೆಗಳಲ್ಲಿ ಕುಲಾಧಿಪತಿಗಳ ಪತ್ರ ಸಂಖ್ಯೆ:GS II KOM 2011 DATED 27-12-2011 ರಲ್ಲಿ 07 ಉಪ ಕುಲಸಚಿವರ ಹುದ್ದೆಗಳನ್ನು ಪ್ರಾದೇಶಿಕ ನಿರ್ದೇಶಕರ ಹುದ್ದೆಗಳಾಗಿ ಪರಿವರ್ತಿಸಿ ಹಾಗೂ 03 ಪ್ರಾದೇಶಿಕ ನಿರ್ದೇಶಕರ ಹುದ್ದೆಗಳನ್ನು ಹೊಸದಾಗಿ ಮಂಜೂರು ಮಾಡಿ ಒಟ್ಟು 10 ಪ್ರಾದೇಶಿಕ ನಿರ್ದೇಶಕರ (Regional Director) ಹುದ್ದೆಗಳನ್ನು ಮಂಜೂರಾತಿ ನೀಡಲಾಗಿರುತ್ತದೆ.

ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯಂತೆ ಪ್ರಾದೇಶಿಕ ನಿರ್ದೇಶಕರ 11 ಹುದ್ದೆಗಳನ್ನು ಮಂಜೂರಾದ ಹುದ್ದೆಗಳೆಂದು ಪರಿಗಣಿಸಲಾಗಿರುತ್ತದೆ ಎವರ ಕೆಳಕಂಡಂತಿರುತ್ತವೆ.

ಕ್ರಮ ಸಂಖ್ಯೆ	ವ್ಯವಸ್ಥಾಪನಾ ಮಂಡಳಿ ಸಂಖ್ಯೆ	ವಿಷಯ ಸಂಖ್ಯೆ	ವ್ಯವಸ್ಥಾಪನಾ ಮಂಡಳಿ ದಿನಾಂಕ	ಅನುಮೋದಿತವಾದ ಹುದ್ದೆಗಳ ಸಂಖ್ಯೆ	ವಿವಿ ಆದೇಶ ಸಂಖ್ಯೆ
1	107	107.02	24-08-2010	4	ಕರಾಮುವಿ/ಡೀನ್(ಅ.ಕೇ.) ಪ್ರಾ.ಕೆ./01/2011-12 ದಿನಾಂಕ: 22-08-2011
2	118	118.08	31-03-2012	2	KSOU / AB/ Est-2/796(1)2011-12 Dated: 01-06-2012
3	119	119.02	11-05-2012	5	ಕರಾಮುವಿ/ಡೀನ್(ಅ.ಕೇ.) ಪ್ರಾ.ಕೆ./02/2012-13 ದಿನಾಂಕ: 21-05-2012

ಮೇಲ್ಕಂಡ ವಿವರಗಳಂತೆ ವ್ಯವಸ್ಥಾಪನಾ ಮಂಡಳಿಯಲ್ಲಿ ಅನುಮೋದನೆಯಾದ ಪ್ರಾದೇಶಿಕ ನಿರ್ದೇಶಕರ ಹುದ್ದೆಗಳ ಸಂಬಂಧವಾಗಿ ಕ್ರಮ ಸಂಖ್ಯೆ: 1 ಮತ್ತು 3 ರ ಒಂಭತ್ತು ಹುದ್ದೆಗಳಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿನಿಯಮ-1994 ರ 2ನೇ ಅನುಸೂಚಿ ನಿಯಮ-8(ಐ) ರಲ್ಲಿ- "ಹಣಕಾಸು ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸಿದ ತರುವಾಯ ಆಡಳಿತಾತ್ಮಕ, ಲಿಪಿಕ ಮತ್ತು ಇತರ ಅವಶ್ಯಕ ಹುದ್ದೆಗಳನ್ನು ಸೃಜಿಸುವುದು ಮತ್ತು ಅದರ ನೇಮಕಾತಿ ರೀತಿಯನ್ನು ನಿರ್ದಿಷ್ಟಪಡಿಸುವುದು" ಎಂದು ನಿರ್ದಿಷ್ಟಪಡಿಸಲಾಗಿರುತ್ತದೆ. ಆದರಂತೆ ಹಣಕಾಸು ಸಮಿತಿಯ ಶಿಫಾರಸ್ಸು ಪಡೆದಿರುವುದಕ್ಕೆ ಮಾಹಿತಿ ಲೆಕ್ಕಪರಿಶೋಧನೆಗೆ ಲಭ್ಯವಾಗಿರುವುದಿಲ್ಲ.

ಸದರಿ 11 ಪ್ರಾದೇಶಿಕ ನಿರ್ದೆಶಕರ ಹುದ್ದೆಗಳನ್ನು ಪರಿಗಣಿಸಿ ಹೈದ್ರಾಬಾದ-ಕರ್ನಾಟಕ ಪ್ರದೇಶಕ್ಕೆ ಮೀಸಲಿಡಲಾದ ಹುದ್ದೆಗಳನ್ನು ಗುರುತಿಸಲಾಗಿರುತ್ತದೆ. ಹಾಗೂ ಅಂದಿನಿಂದಲೂ ಸರ್ಕಾರಕ್ಕೆ ಹಾಗೂ ಲೆಕ್ಕಪರಿಶೋಧನೆಗೆ 21 ಮಂಜೂರಾದ ಹುದ್ದೆಗಳು ಎಂದು ಮಾಹಿತಿ ನೀಡುತ್ತಲೇ ಬಂದಿರುತ್ತದೆ. ವಾಸ್ತವವಾಗಿ ಪ್ರಾದೇಶಿಕ ನಿರ್ದೆಶಕರ 10 ಹುದ್ದೆಗಳು ಮಾತ್ರ ಮಂಜೂರಾಗಿದ್ದು, ಯಾವುದೇ ಹುದ್ದೆಗಳನ್ನು ಭರ್ತಿ ಮಾಡಿರುವುದಿಲ್ಲ. ಸರ್ಕಾರದಿಂದ ಮಂಜೂರಾತಿ ಇಲ್ಲದ ಒಟ್ಟು 11 ಪ್ರಾದೇಶಿಕ ನಿರ್ದೆಶಕರ ಹುದ್ದೆಗಳನ್ನು ಪರಿಗಣಿಸಿ ವಿಶ್ವವಿದ್ಯಾನಿಲಯದ ಎಲ್ಲಾ ವೃಂದಗಳು ಸೇರಿದಂತೆ ಒಟ್ಟು 575 ಮಂಜೂರಾದ ಹುದ್ದೆಗಳ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಲಾಗಿರುತ್ತದೆ. ಮಂಜೂರಾತಿ ಇಲ್ಲದ ಅನುಧಿಕೃತವಾಗಿ ಹೆಚ್ಚುವರಿಯಾಗಿರುವ ಪ್ರಾದೇಶಿಕ ನಿರ್ದೆಶಕರ ಒಟ್ಟು 11 ಹುದ್ದೆಗಳನ್ನು ಕೈಬಿಟ್ಟು ಮಂಜೂರಾದ ಹುದ್ದೆಗಳ ಸಂಖ್ಯೆಯನ್ನು 564 ಎಂದು ಸರಿಪಡಿಸಿಕೊಂಡು ಮಂಜೂರಾದ ಹುದ್ದೆಗಳ ಮಾಹಿತಿಯನ್ನು ಪರಿಷ್ಕರಿಸಿ ಅಧಿಸೂಚಿತ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

33.4 ಮಂಜೂರಾದ ಬೋಧಕೇತರ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸದಿರುವುದು:

(ವಿಚಾರಣಾ ಪತ್ರ ಸಂಖ್ಯೆ:64/ದಿ:25-07-2025)

ಕರ್ನಾಟಕ ರಾಜ್ಯ ಮುಕ್ತ **ವಿಶ್ವವಿದ್ಯಾನಿಯವು ಪ್ರಾರಂಭವಾದಾಗಿನಿಂದ ದಿನಾಂಕ:31-03-2025** ರ ವರೆಗೆ ಸರ್ಕಾರದಿಂದ ಅನುಮೋದಿತವಾದ ಎಲ್ಲಾ "ವೃಂದ ಮತ್ತು ನೇಮಕಾತಿ" (Cadre & Recruitment) ಕಾಲೋಚಿತ ಗೊಳಿಸಲಾದ ನಿಯಮಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:64/ದಿ:25-07-2025 ನ್ನು ನೀಡಲಾಗಿರುತ್ತದೆ.

ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ: ಕರಾಮುಏ/ಆಏ/ಸಿಬ್ಬಂದಿ-02/985/2025-26 ದಿನಾಂಕ:30-06-2025 ಹಾಗೂ ಕರಾಮುಏ/ಆಏ/ಸಿಬ್ಬಂದಿ-2/985/2025-26 ದಿನಾಂಕ:25-07-2025ರಲ್ಲಿ ಹಾಜರುಪಡಿಸಲಾದ ಉತ್ತರದಲ್ಲಿ ಪರಿನಿಯಮಗಳ ಮೂಲಕ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿ ಅನುಮೋದನೆ ಪಡೆದ ಹುದ್ದೆಗಳ ಮಾಹಿತಿಯನ್ನು ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸದಿರುವ ಹುದ್ದೆಗಳ ಸರ್ಕಾರಿ ಅಧಿಸೂಚನೆ ಸಂಖ್ಯೆ:ED 10 UOV 2011 Dated: 25-04-2001ರ ಅನ್ವಯ ಮೈಸೂರು ವಿಶ್ವವಿದ್ಯಾನಿಲಯದ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಕ್ರಮ ವಹಿಸಲಾಗುತ್ತಿದ್ದು ಪರಿನಿಯಮ ರಚಿಸಲು ಕ್ರಮ ವಹಿಸಲಾಗುವುದು ಎಂದು ಉತ್ತರ ನೀಡಲಾಗಿರುತ್ತದೆ.

ಮೈಸೂರು ವಿಶ್ವವಿದ್ಯಾನಿಲಯದ ವೃಂದ ಮತ್ತು ನೇಮಕಾತಿ ನಿಯಮಗಳನುಸಾರ ಕ್ರಮವಹಿಸುತ್ತಿರುವ ಹುದ್ದೆಗಳ ವಿವರಗಳು ಕೆಳಕಂಡಂತಿರುತ್ತವೆ.

ಮೈಸೂರು ವಿಶ್ವವಿದ್ಯಾನಿಲಯದ "ವೃಂದ ಮತ್ತು ನೇಮಕಾತಿ" ನಿಯಮಗಳನ್ನು ಅಳವಡಿಸಿಕೊಂಡಿರುವ ಗುಂಪುವಾರು ಹುದ್ದೆಗಳ ಘೋಷ್ವಾರೆ

ಕ್ರ.ಸಂ	ಸಮೂಹ ವಿವರ	ಹುದ್ದೆಗಳ ವೇತನ ಶ್ರೇಣಿ	ಮಂಜೂರಾದ ಒಟ್ಟು ಹುದ್ದೆಗಳು			ಭರ್ತಿ ಮಾಡಲಾದ ಹುದ್ದೆಗಳು			ಖಾಲಿ ಉಳಿದ ಹುದ್ದೆಗಳು		
			ಮಂಜೂರಾದ ಒಟ್ಟು ಹುದ್ದೆಗಳು	ನೇಮಕಾತಿ ವಿಧಾನ		ಭರ್ತಿ ಮಾಡಲಾದ ಒಟ್ಟು ಹುದ್ದೆಗಳು	ನೇಮಕಾತಿ ವಿಧಾನ		ಖಾಲಿ ಉಳಿದ ಒಟ್ಟು ಹುದ್ದೆಗಳು	ನೇಮಕಾತಿ ವಿಧಾನ	
				ನೇರ ನೇಮಕಾತಿ ಹುದ್ದೆಗಳ ಸಂಖ್ಯೆ	ಮುಂಬಡ್ತಿ ಹುದ್ದೆಗಳ ಸಂಖ್ಯೆ		ನೇರ ನೇಮಕಾತಿ ಹುದ್ದೆಗಳ ಸಂಖ್ಯೆ	ಮುಂಬಡ್ತಿ ಹುದ್ದೆಗಳ ಸಂಖ್ಯೆ		ನೇರ ನೇಮಕಾತಿ ಹುದ್ದೆಗಳ ಸಂಖ್ಯೆ	ಮುಂಬಡ್ತಿ ಹುದ್ದೆಗಳ ಸಂಖ್ಯೆ
									(4-7)	(5-8)	(6-9)
1	2	3	4	5	6	7	8	9	10	11	12
1	ಸಮೂಹ- ಎ (Group-A)	8	10	9	1	0	0	0	10	9	1
2	ಸಮೂಹ- ಬಿ (Group-B	4	6	6	0	0	0	0	6	6	0
3	ಸಮೂಹ- ಸಿ (Group-C)	9	15	15	0	3	3	0	12	12	0
4	ಸಮೂಹ- ಡಿ (Group-D)	2	3	3	0	0	0	0	3	3	0
ಒಟ್ಟು ಹುದ್ದೆಗಳ ಸಂಖ್ಯೆ		**23**	**34**	**33**	**1**	**3**	**3**	**0**	**31**	**30**	**1**

ಮೇಲ್ಕಂಡ ಒಟ್ಟು 23 ಸ್ವರೂಪದ ವೇತನ ಶ್ರೇಣಿ 34 ಹುದ್ದೆಗಳ "ವೃಂದ ಮತ್ತು ನೇಮಕಾತಿ" ನಿಯಮಗಳನ್ನು ರಚಿಸಿ ಕುಲಪತಿಗಳಿಂದ ಅನುಮೋದನೆ ಪಡೆದು ಮಂಜೂರಾದ ಎಲ್ಲ ಹುದ್ದೆಗಳ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಕ್ರೋಡೀಕರಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ. ವೃಂದ ವಾರು ಹುದ್ದೆವಾರು ವಿವರಗಳನ್ನು **ಅನುಬಂಧ-23** ರಲ್ಲಿ ನೀಡಲಾಗಿದೆ.

33.5 ಮಂಜೂರಾದ ಹುದ್ದೆಗಳಲ್ಲಿ ಕೆಲವು ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಕೈಗೊಳ್ಳದೇ ಸಂಪೂರ್ಣವಾಗಿ ಖಾಲಿ ಉಳಿದಿರುವುದು:

ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ ಈ ಕೆಳಕಂಡ ಹುದ್ದೆಗಳಲ್ಲಿ ಪ್ರಾರಂಭದಿಂದಲೂ ಈವರೆವಿಗೂ ಭರ್ತಿ ಮಾಡುವ ಯಾವುದೇ ಪ್ರಕ್ರಿಯೆ ಕೈಗೊಳ್ಳದೇ ಖಾಲಿ ಉಳಿದಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ.

ಸಮೂಹವಾರು (Group-wise) ಮಂಜೂರಾದ ಹುದ್ದೆಗಳಲ್ಲಿ ಕೆಲವು ಹುದ್ದೆಗಳು ನೇಮಕಾತಿ ಪ್ರಕ್ರಿಯೆ ಕೈಗೊಳ್ಳದೇ ಸಂಪೂರ್ಣ ಖಾಲಿ ಉಳಿದಿರುವ ಹುದ್ದೆಗಳ ಗುಂಪು-ವಾರು ತೋಸ್ಕಾರೆ ವಿವರಗಳು ಕೆಳಕಂಡಂತಿರುತ್ತವೆ.										
ಕ್ರಸಂ	ಸಮೂಹ ವಿವರ	ಹುದ್ದೆಗಳ ಸೃಜಿಸಿದ ಸಂಖ್ಯೆ	ಮಂಜೂರಾದ ಒಟ್ಟು ಹುದ್ದೆಗಳು	ನೇಮಕಾತಿ ವಿಧಾನ		ಭರ್ತಿ ಮಾಡಲಾದ ಒಟ್ಟು ಹುದ್ದೆಗಳು:	ನೇಮಕಾತಿ ವಿಧಾನ		ಖಾಲಿ ಉಳಿದ ಒಟ್ಟು ಹುದ್ದೆಗಳು	ನೇಮಕಾತಿ ವಿಧಾನ	
				ನೇರ ನೇಮಕಾತಿ ಹುದ್ದೆಗಳ ಸಂಖ್ಯೆ	ಮುಂಬಡ್ತಿ ಹುದ್ದೆಗಳ ಸಂಖ್ಯೆ		ನೇರ ನೇಮಕಾತಿ ಹುದ್ದೆಗಳ ಸಂಖ್ಯೆ	ಮುಂಬಡ್ತಿ ಹುದ್ದೆಗಳ ಸಂಖ್ಯೆ		ನೇರ ನೇಮಕಾತಿ ಹುದ್ದೆಗಳ ಸಂಖ್ಯೆ	ಮುಂಬಡ್ತಿ ಹುದ್ದೆಗಳ ಸಂಖ್ಯೆ
									(4–7)	(5–8)	(6–9)
1	2	3	4	5	6	7	8	9	10	11	12
1	ಗುಂಪು– ಎ (Group–A)	10	32	32	0	0	0	0	32	32	0
2	ಗುಂಪು – ಬಿ (Group–B)	5	7	6	1	0	0	0	7	6	1
3	ಗುಂಪು – ಸಿ (Group–C)	16	31	29	2	0	0	0	31	29	2
4	ಗುಂಪು – ಡಿ (Group–D)	4	15	15	0	0	0	0	15	15	0
ಒಟ್ಟು ಹುದ್ದೆಗಳ ಸಂಖ್ಯೆ		35	85	82	3	0	0	0	85	82	3

ಮೇಲ್ಕಂಡಂತೆ ಒಟ್ಟು **35** ವಿವಿಧ ವೇತನ ಶ್ರೇಣಿಯ ಒಟ್ಟು **85** ಹುದ್ದೆಗಳನ್ನು ಭರ್ತಿ ಮಾಡಲು ಹುದ್ದೆಯು ಮಂಜೂರಾದ ದಿನದಿಂದ ಯಾವುದೇ ಕ್ರಮ ವಹಿಸದಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ಸದರಿ ಹುದ್ದೆಗಳನ್ನು ಒಳಗೊಂಡಂತೆ ಖಾಲಿ ಉಳಿದಿರುವ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ಅಗತ್ಯ ಕ್ರಮ ವಹಿಸಿ ಕ್ರಮದ ವರದಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

33.6 ಕುಲಾಧಿಪತಿಗಳಿಂದ ಪರಿನಿಯಮಕ್ಕೆ ಅನುಮೋದನೆ ಪಡೆಯದೆ ನಿಯಮದಾಹೀರ ನೇಮಕಾತಿ ಹುದ್ದೆಗಳನ್ನು ಮಂಜೂರಾದ ಹುದ್ದೆಗಳ ಎದುರು ಪರಿಗಣಿಸಿರುವುದು:

(ವಿಚಾರಣಾ ಪತ್ರ ಸಂಖ್ಯೆ:025/ದಿ:03–07–2025)

ನೇಮಕಾತಿ ಮತ್ತು ಮುಂಬಡ್ತಿ ನೀಡಲಾಗಿರುವ ಸಂಬಂಧ ರಚಿಸಲಾದ ಪರಿನಿಯಮಗಳನ್ನು ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆಯದೇ ಕೆಲವು ನೇಮಕಾತಿ ಹಾಗೂ ಮುಂಬಡ್ತಿಗಳನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಲಾಗಿರುತ್ತದೆ ವಿವರ ಕೆಳಕಂಡಂತಿರುತ್ತವೆ.

01. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯನಿಯಲಯದ ಅಧಿಕೃತ ಜ್ಞಾಪನ ಸಂಖ್ಯೆ:ಕರಾಮುವಿ/ಆಎ/ಸಿಬ್ಬಂದಿ–2/1001/2022–23, ದಿನಾಂಕ:01–08–2022 ರಲ್ಲಿ ಒಟ್ಟು 75 ವಿವಿಧ ಹುದ್ದೆಗಳಲ್ಲಿ ಕಾಲಿಕ ವೇತನ ಶ್ರೇಣಿಯಡಿಯಲ್ಲಿ ತಾತ್ಕಾಲಿಕ ನೌಕರರಾಗಿ ಕಾರ್ಯ ನಿರ್ವಹಿಸುತ್ತಿದ ನೌಕರರನ್ನು ಖಾಯಂಗೊಳಿಸಲಾಗಿರುತ್ತದೆ.

02. ವಿಶ್ವವಿದ್ಯಾನಿಲಯದ ಕಛೇರಿ ಆದೇಶ ಸಂಖ್ಯೆ:ಕರಾಮುವಿ/ಆಎ/ಸಿಬ್ಬಂದಿ–2/776/2022–23, ದಿನಾಂಕ:25–10–2022. ಅಧಿಕೃತ ಜ್ಞಾಪನದಲ್ಲಿ ನೇರ ನೇಮಕಾತಿಗೆ ಮೀಸಲಿರಿಸಿದ್ದ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗಳಿಗೆ ಪದೋನ್ನತಿ ನೀಡಿರುವ ಒಟ್ಟು 27 ಪ್ರಥಮ ದರ್ಜೆ ಸಹಾಯಕರುಗಳಿಗೆ ನಿಯಮಬಾಹಿರವಾಗಿ ಮುಂಬಡ್ತಿ ನೀಡಲಾಗಿರುತ್ತದೆ.

03. ಶೀಘ್ರಲಿಪಿಗಾರರ ಹುದ್ದೆ ಸಂಬಂಧವಾಗಿ, ಕನ್ನಡ ಮತ್ತು ಆಂಗ್ಲ ಸೀನಿಯರ್, ಕನ್ನಡ ಮತ್ತು ಆಂಗ್ಲ ಬೆರಳಚ್ಚು ಮತ್ತು ಶೀಘ್ರಲಿಪಿಯಲ್ಲಿ ಆಂಗ್ಲ ವಿದ್ಯಾರ್ಹತೆಯನ್ನು ಪರಿಷ್ಕರಿಸಿ ಕನ್ನಡ ಹಿರಿಯ ಬೆರಳಚ್ಚು ಮತ್ತು ಶೀಘ್ರಲಿಪಿ ಮಾತ್ರ ಅಳವಡಿಸಿಕೊಂಡಿರುವ ಪರಿಸಿಯಮವನ್ನು ಅನುಮೋದನೆಗೆ ಕಳುಹಿಸಲಾಗಿದ್ದು ಕುಲಾಧಿಪತಿಗಳ ಅಂಕಿತ ಪಡೆಯಲು ಬಾಕಿ ಇರುತ್ತದೆ. ಸದರಿ ಒಂದು ಹುದ್ದೆಯನ್ನು ಈಗಾಗಲೇ ಪರಿನಿಯಮ ಅನುಮೋದನೆ ನಿರೀಕ್ಷಿಸಿ ಶ್ರೀ. ಶ್ರೀನಿವಾಸ ಎ. ಡಾಟಾ ಎಂಟ್ರಿ ಆಪರೇಟರ್ ವರಿಗೆ ಶೀಘ್ರಲಿಪಿಗಾರರಾಗಿ ಮುಂಬಡ್ತಿ ನೀಡಿ, ಹುದ್ದೆಯನ್ನು ಭರ್ತಿ ಮಾಡಿರುವ 01 ಹುದ್ದೆಯನ್ನು ಮಂಜೂರಾದ ಹುದ್ದೆಯ ಎದುರಾಗಿ ಪರಿಗಣಿಸಲಾಗಿರುತ್ತದೆ.

04. ಮುನಿಸ್ವಾಮಿ, ದ್ವಿತೀಯ ದರ್ಜೆ ಗುಮಾಸ್ತರು (ಕಾಲಿಕವೇತನ ಶ್ರೇಣಿಯಲ್ಲಿ ಖಾಯಂ ಮಾಡಿರುವವರು) ಇವರಿಗೆ ಮರು ನಿಯೋಜನೆ (Redeployment) ಮೂಲಕ ಸಹಾಯಕ ನಿರ್ದೇಶಕ ಗ್ರೂಪ್ ಬ ಹುದ್ದೆಗೆ ನಿಯಮ ಬಾಹಿರವಾಗಿ ಯಾವುದೇ ಪರಿನಿಯಮ ಅನುಮೋದನೆ ಪಡೆಯದೆ 01 ಹುದ್ದೆಯನ್ನು ನೇಮಕಾತಿ ಮಾಡಿ ಮಂಜೂರಾದ ಹುದ್ದೆಗೆ ಪರಿಗಣಿಸಲಾಗಿರುತ್ತದೆ.

05. ಸುಧೀರ್, ಸಹಾಯಕ ಇಂಜಿನಿಯರ್, ಕಾಲಿಕ ವೇತನದಿಂದ ಖಾಯಂಗೊಳಿಸಲಾಗಿರುವ ಪ್ರಕ್ರಿಯೆ ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಣೆಯಲ್ಲಿರುವ ಸಂಧರ್ಭದಲ್ಲಿ ಇವರಿಗೆ ನಿಯಮ ಉಲ್ಲಂಘಿಸಿ ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗೆ ಮುಂಬಡ್ತಿ ನೀಡಿ 01 ಹುದ್ದೆಯನ್ನು ಸಹಾಯಕ ಕಾರ್ಯಪಾಲಕ ಅಭಯಂತರರ ಮಂಜೂರಾದ ಹುದ್ದೆಯ ಎದುರಿಗೆ ಪರಿಗಣಿಸಲಾಗಿರುತ್ತದೆ.

ಸದರಿ ಖಾಯಮಾತಿ ನೇಮಕಾತಿಗಳಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧಿನಿಯಮ–22(ಡಿ). ಅಧಿನಿಯಮದಡಿಯಲ್ಲಿ ಪರಿನಿಯಮವನ್ನು ರೂಪಿಸಿ ಮಾನ್ಯ ರಾಜ್ಯಪಾಲರಿಂದ ಅನುಮೋದನೆ ಪಡೆದು ತದನಂತರ ಖಾಯಂಗೊಳಿಸುವ ಅಧಿಕೃತ ಜ್ಞಾಪನವನ್ನು ಹೊರಡಿಸವುದನ್ನು ಅಗತ್ಯಪಡಿಸಿರುತ್ತದೆ.

ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 54 ಯುಎಸ್‌ಪಿ 2022 ದಿನಾಂಕ:12–09–2022.ಸುತ್ತೋಲೆಯಲ್ಲಿ ನೌಕರರ ನೇಮಕಾತಿ, ಪದೋನ್ನತಿ, ಹುದ್ದೆಗಳ ಉನ್ನತೀಕರಣ ಸೃಜನೆ, ಬಡ್ತಿ ನೀಡುವ ಸಂದರ್ಭದಲ್ಲಿ ಸೂಕ್ತ ಪರಿನಿಯಮಗಳನ್ನು ರೂಪಿಸಿ ನಿಯಮಾನುಸಾರ ಮಾನ್ಯ ರಾಜ್ಯಪಾಲರ ಅನುಮೋದನೆ ಪಡೆಯುವಲ್ಲಿ ಅಗತ್ಯಕ್ರಮ ವಹಿಸಲು ಸೂಚಿಸಿದೆ.

ಆದಾಗ್ಯೂ ಯಾವುದೇ ಪರಿನಿಯಮವನ್ನು ಕುಲಾಧಿಪತಿಗಳಿಂದ ಅನುಮೋದನೆ ಪಡೆಯದೇ ನೇಮಕಾತಿ ಮಾಡಿರುವ ಹುದ್ದೆಗಳ ವಿವರಗಳು ಕೆಳಕಂಡಂತಿರುತ್ತವೆ.

ಕ್ರಮ ಸಂಖ್ಯೆ		ಹುದ್ದೆಯ ಹೆಸರು	ಒಟ್ಟು ಹುದ್ದೆ ಸಂಖ್ಯೆ
1		ಕಾಲಿಕ ವೇತನ ನೌಕರರ ಖಾಯಮಾತಿ	
	1	ಸಹಾಯಕ ನಿರ್ದೇಶಕರು (ಎಸ್‌ಡಿಎ ಯಿಂದ ಮುಂಬಡ್ತಿ)	1
	2	ಸಹಾಯ ಕಾರ್ಯಪಾಲಕ ಅಭಿಯಂತರರು	1
	3	ಚಾಲಕರು (ಡ್ರೈವರ್)	1
	4	ಸ್ವಚ್ಛತಾಗಾರರು (ಕ್ಲೀನರ್ಸ್)	2
	5	ಜವಾನರು (ಎಪಿಸ್)	3
	6	ಪರಿಚಾರಕ (ಅಟೆಂಡರ್)	14
	7	ದ್ವಿತೀಯ ದರ್ಜೆ ಸಹಾಯಕರು	52
		ಹುದ್ದೆಗಳ ಸಂಖ್ಯೆ	74
2		ನೇರನೇಮಕಾತಿ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಿಗೆ ಮುಂಬಡ್ತಿ ನೀಡಿರುವುದು	27
3		ಪರಿನಿಯಮ ಅನುಮೋದನೆ ಕಾಪ್ಪುರಿಸಿ ಡಾಟಾ ಎಂಟ್ರಿ ಆಪರೇಟರ್ ಹುದ್ದೆಯಿಂದ ಮುಂಬಡ್ತಿ ನೀಡಲಾದ ಶೀಘ್ರಲಿಪಿಗಾರರು	01

4		ದ್ವೀತೀಯ ದರ್ಜೆ ಸಹಾಯಕರಿಂದ ಮರುನಿಯೋಜನೆ ಮೂಲಕ ಸಹಾಯಕ ನಿರ್ದೇಶಕರ ಹುದ್ದೆಗೆ ನೇಮಿಸಿಕೊಂಡಿರುವುದು	01
5		ಸಹಾಯಕ ಇಂಜಿನೀರ್ ಹುದ್ದೆಯಿಂದ ನಿಯಮ ಉಲ್ಲಂಘಿಸಿ ಕಾರ್ಯಪಾಲಕ ಅಭಿಯಂತರ ಹುದ್ದೆಗೆ ಮುಂಗಡಿ ನೀಡಿರುವುದು	01
		ಒಟ್ಟು ಹುದ್ದೆಗಳು	**104**

ಮೇಲೆ ವಿವರಿಸಿರುವಂತೆ ಕಾಲಿಕ ವೇತನ ಶ್ರೇಣಿ ತಾತ್ಕಾಲಿಕ ನೌಕರರನ್ನು ಖಾಯಂಗೊಳಿಸಿರುವ ನೌಕರರನ್ನು ಮಂಜೂರಾದ ಹುದ್ದೆಗಳ ಎದುರಾಗಿ ಪರಿಗಣಿಸಿ ಮಾಹಿತಿ ನೀಡಿರುವ ಸಂಬಂಧವಾಗಿ ವಿಚಾರಣಾ ಪತ್ರ ಸಂಖ್ಯೆ:025 /ದಿ:03-07-2025 ನ್ನು ನೀಡಲಾಗಿದ್ದು, ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ: ಕರಾಮುಎ/ಆಎ/ಸಿಬ್ಬಂದಿ-2/985/2025-26 ದಿನಾಂಕ:03-07-2025ರಲ್ಲಿ ನೀಡಲಾದ ಉತ್ತರವು ಲೆಕ್ಕಪರಿಶೋಧನೆಯು ಆಕ್ಷೇಪಿಸಿರುವ ಅಂಶಗಳಲ್ಲಿ ನೀಡಲಾದ ಉತ್ತರವಾಗಿರುವುದಿಲ್ಲ. ಸದರಿ ಅನುಪಾಲನಾ ಸಮರ್ಥನೆಯನ್ನು ಲೆಕ್ಕಪರಿಶೋಧನೆಯಲ್ಲಿ ಪರಿಗಣಿಸಲು ನಿಯಮಗಳಲ್ಲಿ ಅವಕಾಶಗಳಿರುವುದಿಲ್ಲ.

ಕುಲಾಧಿಪತಿಗಳ ಅನುಮೋದನೆ ಪಡೆಯದೆ ನಿಯಮ ಉಲ್ಲಂಘಿಸಿ ನೇಮಿಸಲಾದ ಕಾಲಿಕ ವೇತನ ಶ್ರೇಣಿ ಹುದ್ದೆಗಳು ಹಾಗೂ ನೇರನೇಮಕಾತಿಗೆ ಮೀಸಲಿರಿಸಲಾಗಿದ್ದ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಮುಂಬಡ್ತಿ ನೀಡಿರುವುದು, ಪರಿನಿಯಮ ಅನುಮೋದನೆ ಕಾಯ್ದಿರಿಸಿ ಡಾಟಾ ಎಂಟ್ರಿ ಆಪರೇಟರ್ ಹುದ್ದೆಯಿಂದ ಶೀಘ್ರಲಿಪಿಗಾರರ ಹುದ್ದೆಗೆ ನಿಯಮ ಉಲ್ಲಂಘಿಸಿ ಮುಂಬಡ್ತಿ ನೀಡಿರುವುದು, ದ್ವೀತೀಯ ದರ್ಜೆ ಸಹಾಯಕರನ್ನು ಮರುನಿಯೋಜನೆ ಮೂಲಕ ಸಹಾಯಕ ನಿರ್ದೇಶಕರ ಹುದ್ದೆಗೆ ನಿಯಮ ಉಲ್ಲಂಘಿಸಿ ನೇಮಕಾತಿ ಮಾಡಿರುವುದು, ಸಹಾಯಕ ಇಂಜಿನೀರ್ ಹುದ್ದೆಯಿಂದ ನಿಯಮ ಉಲ್ಲಂಘಿಸಿ ಕಾರ್ಯಪಾಲಕ ಅಭಿಯಂತರ ಹುದ್ದೆಗೆ ಮುಂಬಡ್ತಿ ನೀಡಿರುವುದು ಸೇರಿದಂತೆ ದಿನಾಂಕ:31-03-2025 ರ ಅಂತ್ಯಕ್ಕೆ ಭರ್ತಿ ಮಾಡಲಾದ ಒಟ್ಟು 269 ಹುದ್ದೆಗಳ ನೇಮಕಾತಿಯಲ್ಲಿ 104 ಹುದ್ದೆಗಳ ನೇಮಕಾತಿಯು ನಿಯಮಬಾಹೀರವಾಗಿರುತ್ತದೆ. ಶೇ.**38.66** ರಷ್ಟು ನೇಮಕಾತಿ ಹಾಗೂ ಮುಂಬಡ್ತಿಗಳನ್ನು ನಿಯಮ ಉಲ್ಲಂಘಿಸಿ ನೇಮಕಾತಿ ಮಾಡಲಾಗಿರುತ್ತದೆ.

ಮೇಲ್ಕಂಡಂತೆ ಒಟ್ಟು 104 ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಿದ ಹುದ್ದೆಗಳಿಗೆ ಪರಿಗಣಿಸಿರುವುದನ್ನು ಕೈಬಿಟ್ಟು, ಪರಿಷ್ಕರಿಸಿ ಭರ್ತಿ ಮಾಡಲಾದ ಹುದ್ದೆಗಳು ಹಾಗೂ ಖಾಲಿ ಹುದ್ದೆಗಳನ್ನು ನಿಖರವಾಗಿ ದಾಖಲಿಸಿ ಪರಿಷ್ಕರಿಸಿ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ. ಹಾಗೂ 104 ವಿವಿಧ ಹುದ್ದೆಗಳ ನೇಮಕಾತಿ ಸಂಬಂಧವಾಗಿ ಸೂಕ್ತ ಪರಿನಿಯಮ ರೂಪಿಸಿ ಅನುಮೋದನೆ ಪಡೆಯುವಲ್ಲಿ ಅಗತ್ಯ ಕ್ರಮ ವಹಿಸಲು ಸೂಚಿಸಿದೆ.

33.7. ಬೋಧಕೇತರ ಹುದ್ದೆಗಳಲ್ಲಿ "ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ಮೀಸಲಿರಿಸಿರುವ ಹುದ್ದೆಗಳ ವಿವರ:

(ವಿಚಾರಣಾ ಪತ್ರ ಸಂಖ್ಯೆ:58/ದಿ:19-07-2025 & 69/ದಿ:25-07-2025)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಯಕ್ಕೆ ಕಾಲ ಕಾಲಕ್ಕೆ ಮಂಜೂರಾಗಿರುವ ವಿವಿಧ ಹುದ್ದೆಗಳು ಹಾಗೂ ಪರಿನಿಯಮಗಳ ಮೂಲಕ ಸೃಜಿಸಲಾದ ಹುದ್ದೆಗಳು ಹಾಗೂ ಇತರೇ ವಿಧಾನಗಳ ಮಂಜೂರಾತಿಯು ಸೇರಿದಂತೆ ಒಟ್ಟು ಮಂಜೂರಾದ ಹುದ್ದೆಗಳಲ್ಲಿ ಭಾರತ ಸಂವಿಧಾನದ ಪರಿಚ್ಛೇದ-371(ಜೆ) ರಲ್ಲಿ ಅಧಿನಿಯಮಿಸಿರುವಂತೆ, ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್—ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು-2013 ರ ನಿಯಮ-03 (ಎ) ಹಾಗೂ ನಿಯಮ-04(1)(2) ರನ್ವಯ ಕ್ರಮವಾಗಿ-

- ಕ.ರಾ.ಮು.ವಿ.ದಲ್ಲಿ ರೂಪಿಸಲಾದ ಸಮೂಹ-ಎ, ಸಮೂಹ-ಬಿ ಮತ್ತು ಸಮೂಹ-ಸಿ ಹುದ್ದೆಗಳನ್ನು ಒಳಗೊಂಡ "ರಾಜ್ಯ ಮಟ್ಟದ ಸ್ಥಳೀಯ ವೃಂದ" ರಚಿಸಿರುವ ಸಂಬಂಧ ಮಾಹಿತಿ, ಹಾಗೂ
- ಹೈದ್ರಾಬಾದ್—ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ ಉದ್ದೇಶಕ್ಕಾಗಿ ನೇಮಕಾತಿ, ಜೇಷ್ಠತೆ, ಮುಂಬಡ್ತಿಯ ಉದ್ದೇಶಕ್ಕಾಗಿ ರೋಸ್ಟರ್ ನಿರ್ವಹಣೆ ಮಾಹಿತಿಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 24 ಹೈಕು 2014 ದಿನಾಂಕ:06-04-2016, ಪತ್ರದಲ್ಲಿ ಸೂಚಿಸಿರುವಂತೆ ಸ್ಥಳೀಯ ವೃಂದ ರಚಿಸಿ ಅಧಿಸೂಚಿಸಿರುವ ಮಾಹಿತಿಯನ್ನು

ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಹಾಗೂ ಮಂಜೂರಾದ ಹುದ್ದೆಗಳಲ್ಲಿ, ಹೈದ್ರಾಬಾದ್ ಕರ್ನಾಟಕ ಪ್ರದೇಶದ ಉದ್ಯೋಗಿಗಳಿಗೆ, ನೇಮಕಾತಿ ಮತ್ತು ಬಡ್ತಿಯಲ್ಲಿ ಗುರುತಿಸಲಾಗಿರುವ ಹುದ್ದೆಗಳು, ಭರ್ತಿಮಾಡಲಾದ ಹುದ್ದೆಗಳು ಮತ್ತು ಖಾಲಿ ಉಳಿದಿರುವ ಹುದ್ದೆಗಳ ವಿವರಗಳನ್ನು ಕೋರಿ ವಿಚಾರಣಾ ಪತ್ರ ಸಂಖ್ಯೆ:29/ದಿ:05-07-2025 ನೀಡಲಾಗಿರುತ್ತದೆ.

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಯಲಯದಲ್ಲಿ ಮಂಜೂರಾದ ಒಟ್ಟು ಬೋಧಕೇತರ ಹುದ್ದೆಗಳಲ್ಲಿ ಭಾರತ ಸಂವಿಧಾನದ ವಿಧಿ-371(J) ರನ್ವಯ ಶ್ರೇಣಿವಾರು ನಿಗದಿಪಡಿಸಿರುವ, ಭರ್ತಿ ಮಾಡಲಾದ ಮತ್ತು ಖಾಲಿ ಉಳಿದ ಹುದ್ದೆಗಳ ಮಾಹಿತಿಯನ್ನು ಹಾಜರುಪಡಿಸಲು ವಿಚಾರಣಾ ಪತ್ರ ಸಂಖ್ಯೆ:**29/ದಿ:05-07-2025** ನ್ನು ನೀಡಲಾಗಿ, ಅನುಪಾಲನಾ ವರದಿ ಪತ್ರ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-**02/985/2025-26** ದಿನಾಂಕ:**09-07-2025** ರಲ್ಲಿ ಭಾರತ ಸಂವಿಧಾನದ ವಿಧಿ-371(j) ರನ್ವಯ ಶ್ರೇಣಿವಾರು ನಿಗದಿಪಡಿಸಿರುವ ಹುದ್ದೆಗಳ ವಿವರಗಳು ಮಾತ್ರ ಲಭ್ಯವಿದ್ದು, ಭರ್ತಿ ಮಾಡಲಾದ ಮತ್ತು ಖಾಲಿ ಉಳಿದಿರುವ ಹುದ್ದೆಗಳ ವಿವರಗಳು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಸದರಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ ವಿಚಾರಣಾ ಪತ್ರ ಸಂಖ್ಯೆ:58/ದಿ:19-07-20250ನೀಡಲಾಗಿರುತ್ತದೆ. ಅದಕ್ಕೆ ವಿಶ್ವವಿದ್ಯಾನಿಲಯದವರು ಪದೋನ್ನತಿ ಮೂಲಕ ಭರ್ತಿ ಮಾಡಬೇಕಾಗಿದ್ದ 08 ಹುದ್ದೆಗಳನ್ನು ಹೈದ್ರಾಬಾದ್ ಕರ್ನಾಟಕ ಪ್ರದೇಶದ ನೌಕರರು ಲಭ್ಯವಾಗದಿರುವುದರಿಂದ ಈ ಕೆಳಗೆ ವಿವರಿಸಿರುವಂತೆ ಸಾಮಾನ್ಯ ವರ್ಗದ ನೌಕರರನ್ನು ಪರಿಗಣಿಸಿ ಬಡ್ತಿ ನೀಡಲಾಗಿರುತ್ತದೆ ಎಂದು ಅನುಪಾಲನೆ ನೀಡಿರುತ್ತಾರೆ.

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ನಿಯಮಾನುಸಾರ 371 (ಜೆ)ಅಡಿಯಲ್ಲಿ ಬಡ್ತಿ ನೀಡಬೇಕಾಗಿದ್ದ ಹುದ್ದೆಗಳ ಸಂಖ್ಯೆ	ಸಾಮಾನ್ಯ ಅಭ್ಯರ್ಥಿಗಳನ್ನು ಪರಿಗಣಿಸಿ ಮುಂಬಡ್ತಿ ನೀಡಲಾದ ಹುದ್ದೆಗಳ ಸಂಖ್ಯೆ	ಹೆಸರು	
1	ಅಧೀಕ್ಷಕರು	3	3	1	ಸುಕನ್ಯ.ಟಿ.
				2	ನಾಗೇಗೌಡ.ಎನ್.
				3	ಸುರೇಶ. ಎನ್
2	ಹಿರಿಯ ಸಹಾಯಕರು	2	2	1	ಪುಷ್ಪಲತಾ. ಎಂ.ಟಿ.
				2	ನಿಂಗರಾಜು
3	ಪ್ರಥಮ ದರ್ಜೆ ಸಹಾಯರು	3	3	1	ಲತಾ ಹೆಚ್.ಆರ್.
				2	ಕೃಷ್ಣೇಗೌಡ.ಸಿ.ಎಂ.
				3	ಕೃಷ್ಣ.ಸಿ.

ಮೇಲ್ಕಂಡ ವಿವರಗಳಂತೆ "ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ" ಮೀಸಲು ಹುದ್ದೆಗಳಿಗೆ ಮುಂಬಡ್ತಿ ನೀಡುವ ಕುರಿತು ಹೊರಡಿಸಲಾದ ಪ್ರಕಟಣೆ, ಸದರಿ ಪ್ರಕಟಣೆಯನ್ವಯ ಸ್ವೀಕೃತವಾದ ಅರ್ಜಿಗಳು ಅವುಗಳ ಪರಿಶೀಲನಾ ವರದಿ, ಅಂತಿಮವಾಗಿ "ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ" ಮೀಸಲು ಹುದ್ದೆಗಳಿಗೆ ಅರ್ಹ ನೌಕರರು ಲಭ್ಯವಾಗದಿರುವುದನ್ನು ಅಧಿಕೃತವಾಗಿ ಘೋಷಿಸಲಾದ ವಿವರಗಳು ಹಾಗೂ ಸಾಮಾನ್ಯ ವರ್ಗದ ನೌಕರರನ್ನು ಬಡ್ತಿಗೆ ಪರಿಗಣಿಸಿರುವ ಸಂಬಂಧ ಸೂಕ್ತ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:69/ದಿ:25-07-2025 ನ್ನು ನೀಡಲಾಗಿದ್ದು, ಅನುಪಾಲನಾ ವರದಿಯಲ್ಲಿ ದಿನಾಂಕ:01-02-2025 ರಂದು ಸುತ್ತೋಲೆ ಹೊರಡಿಸಲಾಗಿ 371 (ಜೆ) ಅಡಿಯಲ್ಲಿ ಯಾವುದೇ ಅಭ್ಯರ್ಥಿಗಳು ಅರ್ಜಿ ಸಲ್ಲಿಸದ ಹಿನ್ನೆಲೆಯಲ್ಲಿ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಮುಂಬಡ್ತಿ ನೀಡಲಾಗಿರುತ್ತದೆ. ನಿಯಮಾನುಸಾರ ಗುಂಪುವಾರು ಹುದ್ದೆವಾರು ಹುದ್ದೆಗಳಲ್ಲಿ 371 ಜೆ ಅನ್ವಯ ಹುದ್ದೆಗಳನ್ನು ಗುರುತಿಸಿರುವ, ಭರ್ತಿ ಮಾಡಲಾಗಿರುವ ಹಾಗೂ ಖಾಲಿ ಉಳಿದಿರುವ ಹುದ್ದೆಗಳ ವಿವರಗಳು ಕೆಳಕಂಡಂತಿರುತ್ತವೆ.

ಕ್ರ ಸಂ	ಸಮೂಹ ವಿವರ	ಶ್ರೇಣಿ	ಒಟ್ಟು ಹುದ್ದೆಗಳು	ಮೀಸಲಿರಿಸಬಹುದಾದ 371(J) ಮೀಸಲು ಹುದ್ದೆಗಳು	ಭರ್ತಿ ಮಾಡಲಾದ 371(J) ಮೀಸಲು ಹುದ್ದೆಗಳು	ಖಾಲಿ ಉಳಿದ 371(J) ಮೀಸಲು ಹುದ್ದೆಗಳು

				ಮೀಸಲಿರಿಸಬೇಕಾದ ಒಟ್ಟು ಹುದ್ದೆಗಳು	ನೇಮಕಾತಿ ವಿಧಾನ		ಭರ್ತಿ ಮಾಡಬೇಕಾದ ಮೀಸಲು ಹುದ್ದೆಗಳು	ನೇಮಕಾತಿ ವಿಧಾನ		ಖಾಲಿ ಉಳಿದ ಒಟ್ಟು ಮೀಸಲು ಹುದ್ದೆಗಳು	ನೇಮಕಾತಿ ವಿಧಾನ	
					ನೇರ ನೇಮಕಾತಿ ಹುದ್ದೆಗಳ ಸಂಖ್ಯೆ	ಮುಂಬಡ್ತಿ ಹುದ್ದೆಗಳ ಸಂಖ್ಯೆ		ನೇರ ನೇಮಕಾತಿ ಹುದ್ದೆಗಳ ಸಂಖ್ಯೆ	ಮುಂಬಡ್ತಿ ಹುದ್ದೆಗಳ ಸಂಖ್ಯೆ		ನೇರ ನೇಮಕಾತಿ ಹುದ್ದೆಗಳ ಸಂಖ್ಯೆ	ಮುಂಬಡ್ತಿ ಹುದ್ದೆಗಳ ಸಂಖ್ಯೆ
										(4-7)	(5-8)	(6-9)
1	2	3	4	4	5	6	7	8	9	10	11	12
1	ಸಮೂಹ- ಎ (Group-A)	16	61	6	4	2	2	0	2	4	4	0
2	ಸಮೂಹ- ಬಿ (Group-B	7	41	6	2	4	3	0	3	3	2	1
3	ಸಮೂಹ- ಸಿ (Group-C)	20	353	36	27	9	6	1	5	30	26	4
4	ಸಮೂಹ- ಡಿ (Group-D)	4	120	13	11	2	0	0	0	13	11	2
	ಒಟ್ಟು ಹುದ್ದೆಗಳ ಸಂಖ್ಯೆ	47	575	61	44	17	11	1	10	50	43	7

ಮಂಜೂರಾದ ಹುದ್ದೆಗಳ ಸಂಬಂಧದ ನ್ಯೂನತೆಗಳನ್ನು ಸರಿಪಡಿಸಿಕೊಂಡು ಗುಂಪುವಾರು ಹುದ್ದೆವಾರು 371(ಜೆ) ಅಡಿಯಲ್ಲಿ ಗುರುತಿಸಲಾದ ಹುದ್ದೆಗಳು, ಭರ್ತಿ ಮಾಡಲಾದ ಹುದ್ದೆಗಳು ಹಾಗೂ ಖಾಲಿ ಉಳಿದ ಹುದ್ದೆಗಳ ವಿವರಗಳನ್ನು **ಅನುಬಂಧ-24**ರಲ್ಲಿ ವಿವರಿಸಿದೆ.

33.8. ಮಂಜೂರಾಗಿರುವ ಹುದ್ದೆಗಳ ಸಮೂಹವಾರು ವರ್ಗೀಕರಣದಲ್ಲಿನ ವ್ಯತ್ಯಾಸಗಳು:

ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾನಿಲಯಕ್ಕೆ ಮಂಜೂರಾಗಿರುವ ಹುದ್ದೆಗಳಲ್ಲಿ ಹೈದ್ರಾಬಾದ್ -ಕರ್ನಾಟಕ ಪ್ರದೇಶ ಸ್ಥಳೀಯ ವ್ಯಕ್ತಿಗಳಿಗೆ ಅನ್ವಯವಾಗುವಂತೆ ಸ್ಥಳೀಯ ವೃಂದ ರಚಿಸಿ ಸರ್ಕಾರದ ಅನುಮೋದನೆ ಪಡೆದು ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/3/2013-14 ಪಿ.ನಂ:1308 ದಿನಾಂಕ:27-10-2017 ರಲ್ಲಿ ಪ್ರಕಟಿಸಲಾಗಿರುತ್ತದೆ.

ಆದರೆ ಎ, ಬಿ, ಮತ್ತು ಸಿ ಸಮೂಹಗಳ ಹುದ್ದೆಗಳನ್ನು ವರ್ಗೀಕರಿಸುವಾಗ ಕೆಲವು ಸಮೂಹಗಳು ವ್ಯತ್ಯಾಸವಾಗಿರುತ್ತದೆ ವಿವರಗಳು ಕೆಳಕಂಡಂತಿರುತ್ತವೆ.

ಕ್ರ ಸಂ	ಹುದ್ದೆಗಳ ಹೆಸರು, ವೇತನ ಶ್ರೇಣಿ, ನೇಮಕಾತಿ ಅನುಪಾತದ ವಿವರ	ವೇತನ ಶ್ರೇಣಿ	ನೇಮಕಾತಿ ಅನುಪಾತ (ನೇ.ನೇ/ಮು)	ಮಂಜೂರಾದ ಒಟ್ಟು ಹುದ್ದೆಗಳು	ಅಧಿಸೂಚನೆಯಲ್ಲಿ ಪರಿಗಣಿಸಿರುವ ಸಮೂಹ	ವಾಸ್ತವಾಗಿ ಹುದ್ದೆಯ ಸಮೂಹ
1	Joint Director	144200-218200 Level-14	100:000	1	ಸಮೂಹ-B	ಸಮೂಹ -A
2	Deputy Director	131400-217100 Level-13	100:000	3	ಸಮೂಹ-B	ಸಮೂಹ -A
3	Asst Engineer (Civil)	69250-134200	100:100	2	ಸಮೂಹ-B	ಸಮೂಹ -A
4	Asst. Engineer (Electrical)	69250-134200	100:100	1	ಸಮೂಹ-B	ಸಮೂಹ -A
5	Assistant Director	69250-134200	100:000	2	ಸಮೂಹ-C	ಸಮೂಹ-B
6	Assistant Translators	65950-124900	100:000	2	ಸಮೂಹ-C	ಸಮೂಹ-B
7	Computer Programmer	65950-124900	100:100	2	ಸಮೂಹ-C	ಸಮೂಹ -A
8	Translator	61300-112900	100:100	1	ಸಮೂಹ-C	ಸಮೂಹ -A

	ಒಟ್ಟು ಹುದ್ದೆಗಳು			**14**		

ಮೇಲ್ಕಂಡ ವಿವರಗಳಂತೆ ಮಂಜೂರಾದ ಹುದ್ದೆಗಳ ಸಮೂಹದಲ್ಲಿ ಉಂಟಾಗಿರುವ ವ್ಯತ್ಯಾಸಗಳಿಂದಾಗಿ ಹೈದ್ರಾಬಾದ್–ಕರ್ನಾಟಕ ಪ್ರದೇಶಕ್ಕೆ ಮೀಸಲಿರಿಸಲಾದ ಹುದ್ದೆಗಳಲ್ಲಿ ವ್ಯತ್ಯಾಸಗಳು ಉಂಟಾಗುತ್ತದೆ. ಪ್ರಾದೇಶಿಕ ನಿರ್ದೇಶಕರ ಒಟ್ಟು ಹುದ್ದೆ 21 ರಲ್ಲಿ 10 ಹುದ್ದೆಗಳನ್ನು ಮಾತ್ರ ಪರಿಗಣಿಸಿ ಹೆಚ್ಚುವರಿ 11 ಹುದ್ದೆಗಳನ್ನು ಕೈಬಿಟ್ಟು ಮಂಜೂರಾದ ಹುದ್ದೆಗಳನ್ನು ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾಕದ–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವ್ಯಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು–**2013** ರ ರೀತ್ಯ ಮಂಜೂರಾದ ಹುದ್ದೆಗಳನ್ನು ಸಮೂಹವಾರು ಮರುಸಂರಚಿಸಿ, ಪರಿಷ್ಕರಿಸಿ ಸರ್ಕಾರದಿಂದ ಅನುಮೋದನೆ ಪಡೆದು ಹೈದ್ರಾಬಾದ್–ಕರ್ನಾಟಕ ಪ್ರದೇಶಕ್ಕೆ ಮೀಸಲಿರಿಸಲಾದ ಹುದ್ದೆಗಳನ್ನು ನಿಗಧಿಪಡಿಸಿ ಅಧಿಸೂಚಿತ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಲಾಗಿದೆ.

33.9 ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆಯದೆ 75 ಕಾಲಿಕ ವೇತನ ಶ್ರೇಣಿ ತಾತ್ಕಾಲಿಕ ನೌಕರರನ್ನು ಪಾಯಂಗೊಳಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:55 /ದಿ:17–07–2025)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಯಲಯದ ಅಧಿಕೃತ ಜ್ಞಾಪನ ಸಂಖ್ಯೆ:ಕರಾಮುಪ/ಆವಿ/ಸಿಬ್ಬಂದಿ–2/1001/2022–23, ದಿನಾಂಕ:01–08–2022 ರಲ್ಲಿ ಒಟ್ಟು 75 ವಿವಿಧ ಹುದ್ದೆಗಳಲ್ಲಿ ತಾತ್ಕಾಲಿಕ ನೌಕರರಾಗಿ ಕಾರ್ಯ ನಿರ್ವಹಿಸುತ್ತಿದ್ದ ನೌಕರರನ್ನು ಕಾಲಿಕ ವೇತನ ಶ್ರೇಣಿ ಪಾಯಂಗೊಳಿಸಲಾಗಿರುತ್ತದೆ.

ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆಯದೆ 75 ವಿವಿಧ ಕಾಲಿಕ ವೇತನ ಶ್ರೇಣಿ ತಾತ್ಕಾಲಿಕ ನೌಕರರನ್ನು ಪಾಯಂಗೊಳಿಸಿ 2024–25 ನೇ ಸಾಲಿನಲ್ಲಿ ಪಾತಿಸಲಾಗಿರುವ ವೇತನ ಹಾಗೂ ಇತರ ಭತ್ಯೆಗಳು, ಗಳಿಕೆ ರಜೆ ನಗದೀಕರಣ, 7ನೇ ವೇತನ ಆಯೋಗದ ವ್ಯತ್ಯಾಸ ಮೊತ್ತಗಳ ಪಾವತಿ ವಿವರಗಳು ಕೆಳಕಂಡಂತಿರುತ್ತವೆ.

ಕ್ರಮ ಸಂಖ್ಯೆ	ವೇತನ ಭತ್ಯೆಗಳ ವಿವರ	**ಪಾವತಿ ಮೊತ್ತ ರೂ.**
1	**ವೇತನ ಹಾಗೂ ಭತ್ಯೆಗಳು**	44925479
2	ತುಟ್ಟಿ ಭತ್ಯೆ ವ್ಯತ್ಯಾಸ ಜನವರಿ–24	236025
3	ತುಟ್ಟಿ ಭತ್ಯೆ ವ್ಯತ್ಯಾಸ ಆಗಸ್ಟ್–24 ರಿಂದ ಸೆಪ್ಟೆಂಬರ್–24	293695
4	ತುಟ್ಟಿ ಭತ್ಯೆ ವ್ಯತ್ಯಾಸ ಜುಲೈ–24	54728
5	ಗಳಿಕೆ ರಜೆ ನಗದೀಕರಣ –1	776137
6	ಗಳಿಕೆ ರಜೆ ನಗದೀಕರಣ –2	876452
7	7 ನೇ ವೇತನ ವ್ಯತ್ಯಾಸ	471077
	ಒಟ್ಟು ಮೊತ್ತ ರೂ.	**4,76,33,593**

ಸದರಿ ಪಾಯಮಾತಿಗಳಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧಿನಿಯಮ–22(ಡಿ)ರ ಅನ್ವಯ ಪರಿನಿಯಮವನ್ನು ರೂಪಿಸಿ ಮಾನ್ಯ ರಾಜ್ಯಪಾಲರಿಂದ ಅನುಮೋದನೆ ಪಡೆದು ತದನಂತರ ಪಾಯಂಗೊಳಿಸುವ ಆಧಿಕೃತ ಜ್ಞಾಪನವನ್ನು ಹೊರಡಿಸುವುದನ್ನು ಅಗತ್ಯಪಡಿಸಿರುತ್ತದೆ.

ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 54 ಯುಎಸ್‌ವಿ 2022 ದಿನಾಂಕ:12–09–2022. ಸುತ್ತೋಲೆಯಲ್ಲಿ ನೌಕರರ ನೇಮಕಾತಿ, ಪದೋನ್ನತಿ, ಹುದ್ದೆಗಳ ಉನ್ನತೀಕರಣ ಸೃಜನೆ, ಬಡ್ತಿ ನೀಡುವ ಸಂದರ್ಭದಲ್ಲಿ ಸೂಕ್ತ ಪರನಿಯಮಗಳನ್ನು ರೂಪಿಸಿ ನಿಯಮಾನುಸಾರ ಮಾನ್ಯ ರಾಜ್ಯಪಾಲರ ಅನುಮೋದನೆ ಪಡೆಯುವಲ್ಲಿ ಅಗತ್ಯಕ್ರಮ ವಹಿಸಲು ಸೂಚಿಸಲಾಗಿರುತ್ತದೆ.

2022–23ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಕಂಡಿಕೆ ಸಂಖ್ಯೆ:21.3 ಹಾಗೂ 2023–24 ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಕಂಡಿಕೆ ಸಂಖ್ಯೆ:21.3 ರಲ್ಲಿ ನೇಮಕಾತಿಯ ಸಂಬಂಧವಾಗಿ ಯಾವುದೇ ಪರಿನಿಯಮ ರಚಿಸದಿರುವುದು ಹಾಗೂ ವಿಶ್ವವಿದ್ಯಾನಿಯಲದ ಕುಲಾಧಿಪತಿಗಳ ಅನುಮೋದನೆ ಪಡೆಯದಿರುವುದರಿಂದ ಸದರಿ ಖಾಯಮಾತಿ ಪ್ರಕ್ರಿಯೆಯು ನಿಯಮಬಾಹಿರವಾದ ನೇಮಕಾತಿಯಾಗಿರುವುದನ್ನು ಸುಧೀರ್ಘವಾಗಿ ವಿವರಿಸಲಾಗಿರುತ್ತದೆ. ಈ ಸಂಬಂಧ ಕೈಗೊಂಡ ಕ್ರಮಗಳ ಬಗ್ಗೆ ಸೂಕ್ತ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:55 /ದಿ:17–07–2025 ನ್ನು ನೀಡಲಾಗಿರುತ್ತದೆ.

ವಿಶ್ವವಿದ್ಯಾನಿಲಯ ಪತ್ರ ಸಂಖ್ಯೆ:84/2023–24 ದಿನಾಂಕ:14–08–2025 ರಲ್ಲಿ ಲೆಕ್ಕಪರಿಶೋಧನೆಯು ಅಪೇಕ್ಷಿಸಿರುವ ಅಂಶಗಳಲ್ಲಿ ಅನುಪಾಲನೆಯನ್ನು ನೀಡದೇ, ವ್ಯವಸ್ಥಾಪನಾ ಮಂಡಳಿಯ ತೀರ್ಮಾನದಂತೆ ನೇಮಕಾತಿ ಮಾಡಲಾಗಿರುತ್ತದೆ ಎಂಬ ಉತ್ತರವನ್ನು ಲೆಕ್ಕಪರಿಶೋಧನೆಯಲ್ಲಿ ಪರಿಗಣಿಸಲು ನಿಯಮಗಳಲ್ಲಿ ಅವಕಾಶಗಳು ಇರುವುದಿಲ್ಲ. ಡಾ: ಕೆ. ಭಕ್ತವತ್ಸಲ, ಮಾನ್ಯ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು, ಬೆಂಗಳೂರು ಇವರ ಏಕಸದಸ್ಯ ಸತ್ಯ ಶೋಧನಾ ಸಮಿತಿ ನೀಡಿರುವ ವರದಿಯನ್ವಯ ಅಂತಿಮ ಕ್ರಮದ ವರದಿಯಾಗಿ ಸದರಿ ಖಾಯಮಾತಿಗಳಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧಿನಿಯಮ–22(ಡಿ)ರ ಅನ್ವಯ ಪರಿನಿಯಮವನ್ನು ರೂಪಿಸಿ ಮಾನ್ಯ ರಾಜ್ಯ ಪಾಲರಿಂದ ಅನುಮೋದನೆ ಪಡೆದು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

ಆದುದರಿಂದ ಅನುಮೋದನೆ ಪಡೆಯದೇ 75 ವಿವಿಧ ಕಾಲಿಕ ವೇತನ ಶ್ರೇಣಿ ತಾತ್ಕಾಲಿಕ ನೌಕರರಿಗೆ ಪಾವತಿಸಿರುವ ಒಟ್ಟು ಮೊತ್ತ ರೂ.4,76,33,593/–ಗಳನ್ನು **ಆಕ್ಷೇಪಣೆಗೆ ಸೂಚಿಸಿದೆ.** ವಿವರಗಳನ್ನು **<u>ಅನುಬಂಧ–25</u>** ರಲ್ಲಿ ವಿವರಿಸಿದೆ.

33.10 ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆಯದೆ 30 ನೇರನೇಮಕಾತಿ ಪ್ರದಸ ಹುದ್ದೆಗಳನ್ನು ಪದೋನ್ನತಿ ನಿಡಿರುವುದು: (ವಿಚಾರಣಾ ಪತ್ರ ಸಂಖ್ಯೆ:25/ದಿ:03–07–2025)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪರಿನಿಯಮ ಸಂಖ್ಯೆ: XXXV–Statute relating to qualification and method of recruitment (including amendment) to the post of Deputy Registrar/Assistant Registrar/Superintendent/ Senior Assistant/First Division Clerk in KSOU. ರ ಪರಿನಿಯಮದಲ್ಲಿ ಮಂಜೂರಾಗಿರುವ ಒಟ್ಟು 77 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿಯಡಿ ಶೇ.50 ರಷ್ಟು ಹುದ್ದೆಗಳು ಹಾಗೂ ಶೇ.50 ರಷ್ಟು ಹುದ್ದೆಗಳನ್ನು ಮುಂಬಡ್ತಿ ಮೂಲಕ ನೇಮಕಾತಿ ಮಾಡುವುದನ್ನು ನಿಗದಿಪಡಿಸಲಾಗಿರುತ್ತದೆ.

ಪ್ರಥಮ ದರ್ಜೆ ಸಹಾಯಕರ ಒಟ್ಟು 32 ನೇರ ನೇಮಕಾತಿಯ ಹುದ್ದೆಗಳಲ್ಲಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪರಿನಿಯಮ ಸಂಖ್ಯೆ:XXXV–Statute relating to qualification and method of recruitment(including amendment) to the post of Deputy Registrar/Assistant Registrar/Superintendent/ Senior Assistant/First Division Clerk in KSOU ರಲ್ಲಿನ ನಿಯಮ ಹಾಗೂ ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 54 ಯುಎಸ್‌ವಿ 2022 ದಿನಾಂಕ:12–09–2022 ರ ಸುತ್ತೋಲೆ ಸೂಚನೆಗಳನ್ನು ಉಲ್ಲಂಘಿಸಿ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಲ್ಲಿ <u>ನೇರ ನೇಮಕಾತಿ ಮೂಲಕ ಭರ್ತಿ</u> ಮಾಡಬೇಕಾದ ಹುದ್ದೆಗಳ ಎದುರಾಗಿ ವಿಶ್ವವಿದ್ಯಾನಿಯಲದ ಕಛೇರಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–2/776/2022–23, ದಿನಾಂಕ:25–10–2022ದಲ್ಲಿ ಒಟ್ಟು 30 ಪ್ರಥಮ ದರ್ಜೆ ಸಹಾಯಕ ಹುದ್ದೆಗಳನ್ನು <u>ಬಡ್ತಿ ಮೂಲಕ</u> ಭರ್ತಿ ಮಾಡಲಾಗಿರುತ್ತದೆ. ಪರಿನಿಯಮಗಳನ್ನು ರಚಿಸದೇ ಹುದ್ದೆಗಳ ಸೃಜನೆ ಮಾಡಿ ನೇಮಕಾತಿ ಹಾಗೂ ಪದೋನ್ನತಿ, ಹುದ್ದೆಗಳ ಉನ್ನತೀಕರಣಗಳ ಸಂಬಂಧ ಕ್ರಮ ವಹಿಸದೇ, ಪರಿನಿಯಮವನ್ನು ರಚಿಸಿ ಕುಲಾಧಿಪತಿಗಳಿಂದ ಅನುಮೋದನೆ ಪಡೆದು ಕ್ರಮವಹಿಸುವಂತೆ ಸೂಚಿಸಲಾಗಿರುತ್ತದೆ.

27 ನೌಕರರು ಪ್ರಥಮ ದರ್ಜೆ ಸಹಾಯಕರ ಹುದ್ದೆಯ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಾಗಿದ್ದು ಕಾರ್ಯ ನಿರ್ವಹಿಸುತ್ತಿದ್ದಾರೆ. ಸದರಿ ಮುಂಬಡ್ತಿಯನ್ನು 2022–23ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ: 21.6 ಹಾಗೂ 2023–24ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ:21.10 ರಲ್ಲಿ ನೇಮಕಾತಿಯು ನಿಯಮ ಬಾಹಿರವಾಗಿರುವುದನ್ನು ಸುಧೀರ್ಘವಾಗಿ ಉಲ್ಲೇಖಿಸಲಾಗಿರುತ್ತದೆ. ಈ ಸಂಬಂಧವಾಗಿ ಅನುಮೋದಿಸಲಾಗಿರುವ ಪರಿನಿಯಮಗಳು, ಸರ್ಕಾರಿ ಆದೇಶಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:**25**/ದಿ:**03–07–2025** ನ್ನು ನೀಡಲಾಗಿತ್ತು. ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ: ಕರಾಮುವಿ/ಆಪ/ಸಿಬ್ಬಂದಿ–02/985/2025–26 ದಿನಾಂಕ:29–08–2025ರಲ್ಲಿ ಕುಲಾಧಿಪತಿಗಳವರಿಂದ ಪರಿನಿಯಮಕ್ಕೆ ಅನುಮೋದನೆ ಪಡೆದಿರುವ ಯಾವುದೇ ಮಾಹಿತಿಯು ಹಾಜರುಪಡಿಸಿರುವುದಿಲ್ಲ. ಸದರಿ ಉತ್ತರವನ್ನು ಲೆಕ್ಕಪರಿಶೋಧನೆಯಲ್ಲಿ ಪರಿಗಣಿಸಲು ಅವಕಾಶಗಳಿರುವುದಿಲ್ಲ.

ನೇರನೇಮಕಾತಿ ಹುದ್ದೆಗಳನ್ನು ಮುಂಬಡ್ತಿ ಹುದ್ದೆಗಳಾಗಿ ಪರಿವರ್ತಿಸಿ ಮುಂಬಡ್ತಿ ನೀಡಿರುವುದಕ್ಕೆ ಪರಿನಿಯಮ ರಚಿಸಿ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆದು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. 2024–25 ನೇ ಸಾಲಿನಲ್ಲಿ ಪಾವತಿಸಲಾಗಿರುವ ವೇತನ ಮತ್ತು ಇತರ ಭತ್ಯೆಗಳು ಹಾಗೂ ಇತರ ಆರ್ಥಿಕ ಸೌಲಭ್ಯಗಳ ವಿವರಗಳಗಳು ಕೆಳಕಂಡಂತಿರುತ್ತವೆ.

ಕ್ರಮ ಸಂಖ್ಯೆ	ವೇತನ ಭತ್ಯೆಗಳ ವಿವರ	ಪಾವತಿ ಮೊತ್ತ ರೂ.
1	ವೇತನ ಹಾಗೂ ಭತ್ಯೆಗಳು	21000398
2	ತುಟ್ಟಿ ಭತ್ಯೆ ವ್ಯತ್ಯಾಸ ಜನವರಿ–24	109191
3	ತುಟ್ಟಿ ಭತ್ಯೆ ವ್ಯತ್ಯಾಸ ಜುಲೈ–24 ರಿಂದ ಸೆಪ್ಟೆಂಬರ್–24	139137
4	ತುಟ್ಟಿ ಭತ್ಯೆ ವ್ಯತ್ಯಾಸ ಜುಲೈ–24	25534
5	ಗಳಿಕೆ ರಜೆ ನಗದೀಕರಣ –1	403459
6	ಗಳಿಕೆ ರಜೆ ನಗದೀಕರಣ –2	236303
7	7ನೇ ವೇತನ ವ್ಯತ್ಯಾಸ	231099
	ಒಟ್ಟು ಮೊತ್ತ ರೂ.	**22145121**

ನಿಯಮ ಬಾಹೀರವಾಗಿ 27 ನೌಕರರಿಗೆ ನೀಡಿರುವ ಮುಂಬಡ್ತಿ ಆದೇಶವನ್ನು ಹಿಂಪಡೆದು ಕ್ರಮಬದ್ಧಗೊಳಿಸಲು ಸೂಚಿಸಿದೆ. ಈ ನಿಯಮಬಾಹಿರ ಮುಂಬಡ್ತಿಗೆ ಕಾರಣರಾಗಿರುವ, ಕುಲಪತಿಗಳು, ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ನಿಧಿಗೆ ಜಮಾ ಮಾಡಿ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೆ ಪಾವತಿ ಮೊತ್ತ ರೂ.**2,21,45,121/– ಗಳನ್ನು ವಸೂಲಾತಿಗೆ ಸೂಚಿಸಿದೆ**. ಉದ್ಯೋಗಿವಾರು ಮಾಹಿತಿಯನ್ನು **ಅನುಬಂಧ–26** ರಲ್ಲಿ ವಿವರಿಸಿದೆ.

33.11 ಪಿ. ಶ್ರೀನಿವಾಸ, ಡೇಟಾ ಎಂಟ್ರಿ ಆಪರೇಟರ್‌ರವರಿಗೆ ವೃಂದ ಮತ್ತು ನೇಮಕಾತಿ ನಿಯಮ ಉಲ್ಲಂಘಿಸಿ ಶೀಘ್ರಲಿಪಿಗಾರರಾಗಿ ಪದೋನ್ನತಿ ನೀಡಿರುವುದು: (ವಿಚಾರಣಾ ಪತ್ರ ಸಂಖ್ಯೆ:65 /ದಿ:25–07–2025)

ಶ್ರೀ ಪಿ. ಶ್ರೀನಿವಾಸ, ಡೇಟಾ ಎಂಟ್ರಿ ಆಪರೇಟರ್‌ರವರಿಗೆ ಕಛೇರಿ ಆದೇಶ ಸಂಖ್ಯೆ: ಕರಾಮುವಿ/ ಆಪ/ಸಿಬ್ಬಂದಿ–2/776/2021–22, ದಿನಾಂಕ:29–10–2022 ರಲ್ಲಿ ಶೀಘ್ರಲಿಪಿಗಾರರಾಗಿ (ವೇತನ ಶ್ರೇಣಿ:30350–58250) ಪದೋನ್ನತಿ ನೀಡಿರುವ ಬಗ್ಗೆ ಸೇವಾವಹಿಯ ಪುಟ ಸಂಖ್ಯೆ:20 ರಲ್ಲಿ ನಮೂದಿಸಲಾಗಿದೆ. ಮುಂಬಡ್ತಿ ನೀಡಿರುವ ಕಡತವನ್ನು ಪರಿಶೀಲಿಸಲಾಗಿ ಸದರಿ ಕಛೇರಿ ಆದೇಶದಲ್ಲಿ "ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಡೇಟಾ ಎಂಟ್ರಿ ಆಪರೇಟರ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಪಿ. ಶ್ರೀನಿವಾಸ, ಇವರಿಗೆ ಖಾಲಿ ಇರುವ ಶೀಘ್ರಲಿಪಿಗಾರ ಹುದ್ದೆಗೆ ಎದುರಾಗಿ (ಶೀಘ್ರಲಿಪಿಗಾರ ಹುದ್ದೆಯ ಪರಿನಿಯಮ ಭಾಗಶಃ ತಿದ್ದುಪಡಿ) ಪರಿನಿಯಮ–2022 ಕ್ಕೆ ಅಂಕಿತ ದೊರಕುವ ಷರತ್ತಿಗೊಳಪಟ್ಟು ರೂ.30350–58250 ರ ವೇತನ ಶ್ರೇಣಿಯಲ್ಲಿ ಪದೋನ್ನತಿ ನೀಡಿ ಆದೇಶಿಸಲಾಗಿರುವುದನ್ನು 2023–24 ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಕಂಡಿಕೆ ಸಂಖ್ಯೆ:21.14 ರಲ್ಲಿ ಸಮಗ್ರವಾಗಿ ಉಲ್ಲೇಖಿಸಿ ಮುಂಬಡ್ತಿಯನ್ನು ಆಕ್ಷೇಪಿಸಲಾಗಿರುತ್ತದೆ.

ವ್ಯಂದ ಮತ್ತು ನೇಮಕಾತಿ ನಿಯಮಗಳಂತೆ English Senior Typewriting ಮತ್ತು English Senior Shorthand ಉತ್ತೀರ್ಣರಾಗಿರುವ ಸಂಬಂಧ ಹಾಗೂ ಸದರಿ ಆಕ್ಷೇಪಣೆಯ ಸಂಬಂಧವಾಗಿ ಕೈಗೊಂಡ ಕ್ರಮ ಹಾಗೂ ರಚಿಸಲಾಗಿದ್ದ ಶೀಘ್ರಲಿಪಿಗಾ ಹುದ್ದೆಯ ಪರಿನಿಯಮ ಭಾಗಶ: ತಿದ್ದುಪಡಿ ಪರಿನಿಯಮ–2022 ರ ಪ್ರತಿ ಹಾಗೂ ಸದರಿ ಪರಿನಿಯಮವು ಕುಲಾಧಿಪತಿಗಳಿಂದ ಅನುಮೋದಿತವಾದ ದೃಢೀಕೃತ ಪರಿನಿಯಮದ ಪ್ರತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:65/ದಿ:25–07–2025 ನ್ನು ನೀಡಲಾಗಿರುತ್ತದೆ.

ವಿಶ್ವವಿದ್ಯಾನಿಲಯವು ಪ್ರತಿಕ್ರಿಯಿಸಿ, ಪತ್ರ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/101/2022–23 ದಿನಾಂಕ:21–10–2022 ರ ರನ್ನಯ ಶೀಘ್ರಲಿಪಿಗಾರ ಹುದ್ದೆಯ ವಿದ್ಯಾರ್ಹತೆ ಭಾಗಶ: ತಿದ್ದುಪಡಿಗೆ (ಶೀಘ್ರಲಿಪಿಗಾರರ ಹುದ್ದೆಯ ಪರಿನಿಯಮ–2022) ಅಂಕಿತ ದೊರಕುವ ಷರತ್ತಿಗೊಳಪಟ್ಟು ಡೇಟಾ ಎಂಟ್ರಿ ಆಪರೇಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ. ವಿ.ಶ್ರೀನಿವಾಸ, ಮಂಜೂರಾದ ಹುದ್ದೆಗಳು ಒಟ್ಟು 08 ಹುದ್ದೆಗಳಲ್ಲಿ ನೇರನೇಮಕಾತಿ 4 ಹುದ್ದೆಗಳು, ಮುಂಬಡ್ತಿ 4 ಹುದ್ದೆಗಳಲ್ಲಿ ಇವರಿಗೆ ಖಾಲಿ ಇರುವ ಶೀಘ್ರಲಿಪಿಗಾರ ಹುದ್ದೆಗೆ ಪದೋನ್ನತಿ ನೀಡಲಾಗಿರುತ್ತದೆ. ಈವರೆಗೆ ಪರಿನಿಯಮವು ಕುಲಾಧಿಪತಿಗಳಿಂದ ಅನುಮೋದನೆ ಪಡೆದಿರುವುದಿಲ್ಲ. ಶ್ರೀಘ್ರಲಿಪಿಗಾರರ ವೇತನ ಶ್ರೇಣಿಯಲ್ಲಿ ವೇತನ ನಿಗದಿಪಡಿಸಿರುವುದಿಲ್ಲ, ಸದರಿಯವರು ಡಾಟಾ ಎಂಟ್ರಿ ಆಪರೇಟರ್ ವೇತನ ಶ್ರೇಣಿಯಲ್ಲಿಯೇ ವೇತನ ಪಾವತಿಸಲಾಗುತ್ತಿದೆ. English Senior Typewriting ಮತ್ತು English Senior Shorthand ಪರೀಕ್ಷೆಗಳಲ್ಲಿ ಉತ್ತೀರ್ಣಗೊಂಡ ಪ್ರಮಾಣ ಪತ್ರಗಳು ಸಲ್ಲಿಕೆಯಾಗಿರುವುದಿಲ್ಲ ಎಂದು ಮಾಹಿತಿ ನೀಡಿರುತ್ತಾರೆ.

ವ್ಯಂದ ಮತ್ತು ನೇಮಕಾತಿ ನಿಯಮಗಳಂತೆ ನಿರ್ದಿಷ್ಟ ವಿದ್ಯಾರ್ಹತೆ ಹೊಂದದಿರುವುದು ಹಾಗೂ ಪರಿನಿಯಮ ಅನುಮೋದನೆ ಕಾಯ್ದಿರಿಸಿ ನಿಯಮಬಾಹೀರವಾಗಿ ನೀಡಲಾದ ಬಡ್ತಿ ಆದೇಶವನ್ನು ಹಿಂಪಡೆದು ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

33.12 ಮುನಿಸ್ವಾಮಿ, ಕಾಲಿಕ ವೇತನ ಶ್ರೇಣಿ ದ್ವೀತೀಯ ದರ್ಜೆ ಗುಮಾಸ್ತರು ಇವರಿಗೆ ಮರು ನಿಯೋಜನೆ (Redeployment) ಮೂಲಕ ಸಹಾಯಕ ನಿರ್ದೇಶಕರು ಗ್ರೂಪ್ ಬಿ ಹುದ್ದೆಗೆ ನಿಯಮ ಬಾಹಿರವಾಗಿ ನೇಮಕಾತಿ ಮಾಡಿರುವುದು: (ವಿಚಾರಣಾ ಪತ್ರ ಸಂಖ್ಯೆ:33/ದಿ:09–07–2025)

ಶ್ರೀ. ಮುನಿಸ್ವಾಮಿ, ದ್ವಿತೀಯ ದರ್ಜೆ ಗುಮಾಸ್ತರು ಕಾಲಿಕ ವೇತನ ಶ್ರೇಣಿ ತಾತ್ಕಾಲಿಕ ನೌಕರರು ಇವರನ್ನು ಕರಾಮುವಿ ಆದೇಶ: ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/1001/2022–23 ದಿನಾಂಕ:01–08–2022 ರ ಆದೇಶದಲ್ಲಿ 10 ವರ್ಷ ಪೂರೈಸಿರುವ 75 ತಾತ್ಕಾಲಿನ ನೌಕರರನ್ನು ದಿನಾಂಕ:01–06–2022 ರಿಂದ ಅನ್ವಯವಾಗುವಂತೆ ಖಾಯಂ ಗೊಳಿಸಿರುತ್ತಾರೆ.

ಕರಾಮುವಿ ಆದೇಶ: ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–2/992/2020–21 ದಿನಾಂಕ:31–01–2023. ರಲ್ಲಿ ದ್ವಿತೀಯ ದರ್ಜೆ ಸಹಾಯಕರು ಇವರನ್ನು ಮರು ನಿಯೋಜನೆ (Redeployment) ಮೂಲಕ ಸಹಾಯಕ ನಿರ್ದೇಶಕರರ ಹುದ್ದೆಗೆ ನೇಮಕಾತಿ ಮಾಡಿ ಆದೇಶಿಸಿರುತ್ತಾರೆ.

75 ಜನ ಕಾಲಿಕ ನೌಕರರನ್ನು ಖಾಯಂಗೊಳಿಸಿರುವ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಲ್ಲಿನ ನೇಮಕಾತಿಯೇ ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಣೆಯಲ್ಲಿ ನಿಯಮ ಬಾಹೀರ ನೇಮಕಾತಿ ಎಂದು ಉಲ್ಲೇಖಿಸಲಾಗಿರುತ್ತದೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳ–1958 ರಲ್ಲಿ ಮರು ನಿಯೋಜನೆ (Redeployment)ಗೆ ಅವಕಾಶಗಳು ಇರುವುದಿಲ್ಲ. ಯಾವುದೇ ಪರಿನಿಯಮ ರಚಿಸಿ ಕುಲಾಧಿಪತಿಗಳಿಂದ ಅನುಮೋದನೆ ಪಡೆಯದಿರುವುದರಿಂದ ನೇಮಕಾತಿಯು ನಿಯಮಬಾಹೀರವಾಗಿರುತ್ತದೆ.

ಸದರಿ ಅಂಶವನ್ನು 2022–23 ರ ಲೆಕ್ಕಪರಿಶೋಧನಾ ವರದಿ ಕಂಡಿಕೆ ಸಂಖ್ಯೆ:21.7 ಹಾಗೂ 2023–24 ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಕಂಡಿಕೆ ಸಂಖ್ಯೆ:21.11 ರಲ್ಲಿ ವಿವರಿಸಿ ಆಕ್ಷೇಪಿಸಿ ಸದರಿ ನೇಮಕಾತಿಯನ್ನು ರದ್ದುಪಡಿಸಿ ಪಾವತಿಸಲಾದ ವೇತನ ಭತ್ಯೆಗಳನ್ನು ವಸೂಲಿಸಿ ಲೆಕ್ಕಪರಿಶೋಧನೆಗೆ ಮಾಹಿತಿ ನೀಡಲು ಸೂಚಿಸಲಾಗಿರುತ್ತದೆ. ಸದರಿ ಲೆಕ್ಕಪರಿಶೋಧನಾ ವರದಿ ಕಂಡಿಕೆಗೆ ಕೈಗೊಂಡ ಕ್ರಮದ ವರದಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:33/ದಿ:09–07–2025ನ್ನು ನೀಡಲಾಗಿದ್ದು,

ಅನುಪಾಲನಾ ಪತ್ರ ದಿನಾಂಕ:25-11-2025 ರಲ್ಲಿ ಈ ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವಿಚಾರಣಾ ಪತ್ರಗಳಿಗೆ ನೀಡಲಾಗಿದ್ದ ಉತ್ತರವನ್ನೇ ಅನುಪಾಲನಾ ವರದಿಯಲ್ಲಿ ಲಗತ್ತಿಸಿ ಪರಿಗಣಿಸಲು ಕೋರಲಾಗಿರುತ್ತದೆ. ಅಂತಿಮ ಕ್ರಮದ ವರದಿಯನ್ನು ಸಲ್ಲಿಸದಿರುವುದರಿಂದ ಅನುಪಾಲನೆಯ ಸಮರ್ಥನೆಯನ್ನು ಲೆಕ್ಕಪರಿಶೋಧನೆಯಲ್ಲಿ ಪರಿಗಣಿಸಲು ಅವಕಾಶಗಳು ಇರುವುದಿಲ್ಲ.

ಮರು ನಿಯೋಜನೆ (Re-deployment) ಮಾಡಲು ಯಾವುದೇ ಪರಿನಿಯಮ ಕುಲಾಧಿಪತಿಗಳಿಂದ ಅನುಮೋದಿಸಿಕೊಳ್ಳದೇ ನೇಮಕಾತಿಗೆ ರಚಿಸಲಾದ ಸಮಿತಿ ಅಧ್ಯಕ್ಷರು, ಸದಸ್ಯರು ಹಾಗೂ ಕುಲಸಚಿವರನ್ನು ನೇರ ಹೊಣೆಗಾರರಾಗಿರುತ್ತಾರೆ.

ದ್ವಿತೀಯ ದರ್ಜೆ ಸಹಾಯಕರು (ಕಾಲಿಕ ವೇತನ ಶ್ರೇಣಿ) ಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ನೌಕರರನ್ನು ಪಾಯಂಗೊಳಿಸಿರುವ ನೇಮಕಾತಿಯು ನಿಯಮ ಬಾಹಿರವಾಗಿರುವುದರಿಂದ ಸದರಿಯವರಿಗೆ ನೀಡಲಾಗಿರುವ ಸಹಾಯಕ ನಿರ್ದೇಶಕರ ಮರು ನಿಯೋಜನೆ (Redeployment) ನೇಮಕಾತಿಯನ್ನು ಕೂಡಲೇ ಹಿಂಪಡೆದು ಆದೇಶಿಸಿ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

2024-25 ನೇ ಸಾಲಿನಲ್ಲಿ ಪಾವತಿಸಲಾದ ಒಟ್ಟು ವೇತನ ಮತ್ತು ಇತರೆ ಭತ್ಯೆಗಳ ಮೊತ್ತ ರೂ.**10,71,763/- ವಸೂಲಾತಿಗೆ ಸೂಚಿಸಲಾಗಿದೆ.**

33.13 ಸುಧೀರ್, ಸಹಾಯಕ ಇಂಜಿನಿಯರ್ ಇವರಿಗೆ ನಿಯಮ ಉಲ್ಲಂಘಿಸಿ ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗೆ ಮುಂಬಡ್ತಿ ನೀಡಿರುವುದು: (ವಿಚಾರಣಾ ಪತ್ರ ಸಂಖ್ಯೆ:35/ದಿ:05-07-2025)

ಶ್ರೀ ಸುಧೀರ್, ಸಹಾಯಕ ಇಂಜಿನಿಯರ್ ಇವರು ಕಾಲಿಕ ವೇತನ ಶ್ರೇಣಿಯಲ್ಲಿ ತಾತ್ಕಾಲಿಕ ಸಹಾಯಕ ಇಂಜಿನೀಯರ್ ಆಗಿ ಕಾರ್ಯ ನಿರ್ವಹಿಸುತ್ತಿದ ಇವರನ್ನು ಕರಾಮುವಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/1001/2022-23 ದಿನಾಂಕ:01-08-2022 ರ ಆದೇಶದಲ್ಲಿ ಪಾಯಂ ಗೊಳಿಸಲಾದ 75 ಉದ್ಯೋಗಿಗಳಲ್ಲಿ ಇವರನ್ನು ಪಾಯಂಗೊಳಿಸಲಾಗಿದೆ.

ಹಾಗೂ ಕರಾಮುವಿ ಆದೇಶ: ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-1/1041/2022-23 ದಿನಾಂಕ:28-03-2023. ರಲ್ಲಿ ಸದರಿಯವರಿಗೆ ಸಹಾಯಕ ಇಂಜಿನಿಯರ್ ಹುದ್ದೆಯಿಂದ, ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗೆ ಮುಂಬಡ್ತಿ ನೀಡಿರುತ್ತಾರೆ.

ಕರಾಮುವಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/1001/2022-23 ದಿನಾಂಕ:01-08-2022ರ ಆದೇಶದಲ್ಲಿ 10 ವರ್ಷ ಪೂರೈಸಿರುವ 75 ತಾತ್ಕಾಲಿನ ನೌಕರರನ್ನು ದಿನಾಂಕ:01-06-2022 ರಿಂದ ಅನ್ವಯವಾಗುವಂತೆ ಪಾಯಂಗೊಳಿಸಿ ಹೊರಸಿರುವ ಆದೇಶವೇ ನಿಯಮಬಾಹಿರವಾಗಿರುವುದರಿಂದ ಸದರಿ ನೌಕರರಿಗೆ ಸಹಾಯಕ ಇಂಜಿನೀಯರ್ ಹುದ್ದೆಯಿಂದ ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗೆ ಮುಂಬಡ್ತಿ ನೀಡಿರುವುದು ನಿಯಮಬಾಹಿರವಾಗುತ್ತದೆ.

ವ್ಯಂದ ಮತ್ತು ನೇಮಕಾತಿ ನಿಯಮಗಳನ್ನು ಉಲ್ಲಂಘಿಸಿ ನೇಮಕಾತಿ ಮಾಡಿರುವ ಸಂಬಂಧವಾಗಿ 2022-23 ರ ಲೆಕ್ಕಪರಿಶೋಧನಾ ವರದಿ ಕಂಡಿಕೆ ಸಂಖ್ಯೆ:21.3 ಮತ್ತು 2023-24 ರ ಲೆಕ್ಕಪರಿಶೋಧನಾ ವರದಿ ಕಂಡಿಕೆ ಸಂಖ್ಯೆ:21.12 ರಲ್ಲಿ ನಿಯಮಬಾಹೀರ ನೇಮಕಾತಿ ಕುರಿತು ವಿವರವಾಗಿ ಉಲ್ಲೇಖಿಸಲಾಗಿರುತ್ತದೆ.

ಸದರಿ ಲೆಕ್ಕಪರಿಶೋಧನಾ ವರದಿ ಕಂಡಿಕೆಗಳಿಗೆ ಕೈಗೊಂಡ ಕ್ರಮದ ವರದಿಯನ್ನು ಹಾಗೂ 2024-25 ನೇ ಸಾಲಿನಲ್ಲಿ ಸದರಿ ಉದ್ಯೋಗಿಗೆ ನೀಡಲಾಗಿರುವ ಹುದ್ದೆ ಹಾಗೂ ಪಾವತಿಸಲಾದ ವೇತನ ಹಾಗೂ ಇತರೇ ಆರ್ಥಿಕ ಸೌಲಭ್ಯಗಳ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:**35/ದಿ:05-07-2025** ನ್ನು ನೀಡಲಾಗಿರುತ್ತದೆ.

ಅನುಪಲಾನಾ ಪತ್ರ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-02/985/2025-26 ದಿನಾಂಕ:25-11-2025 ರಲ್ಲಿ ಈ ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವಿಚಾರಣಾ ಪತ್ರಗಳಿಗೆ ನೀಡಲಾಗಿದ್ದ ಉತ್ತರವನ್ನೇ ಅನುಪಾಲನಾ ವರದಿಯಲ್ಲಿ ಲಗತ್ತಿಸಿ ಪರಿಗಣಿಸಲು ಕೋರಲಾಗಿರುತ್ತದೆ. ಸದರಿ ಅನುಪಾಲನೆಯನ್ನು ಪರಿಗಣಿಸಲು ಅವಕಾಶಗಳು ಇರುವುದಿಲ್ಲ. ಸಹಾಯಕ ಇಂಜಿನಿಯರ್ (ಕಾಲಿಕ ವೇತನ ಶ್ರೇಣಿ) ಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ನೌಕರರನ್ನು ಪಾಯಂಗೊಳಿಸಿರುವ ನೇಮಕಾತಿಯು ನಿಯಮಬಾಹಿರವಾಗಿರುವುದರಿಂದ

ಸದರಿಯವರಿಗೆ ನೀಡಲಾಗಿರುವ ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗೆ ನೀಡಲಾಗಿರುವ ಮುಂಬಡ್ತಿಯನ್ನು ಕೂಡಲೇ ಹಿಂಪಡೆದು ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

2024–25 ನೇ ಸಾಲಿನಲ್ಲಿ ಪಾವತಿಸಲಾದ ಒಟ್ಟು ವೇತನ ಮತ್ತು ಇತರ ಭತ್ಯೆಗಳ **ಮೊತ್ತ ರೂ.13,11,165/–**

ವಸೂಲಾತಿಗೆ ಸೂಚಿಸಲಾಗಿದೆ.

33.14 ಉಪಕುಲಸಚಿವರ 10 ಹುದ್ದೆ ಸೃಜನೆಗಾಗಿ ರಚಿಸಲಾದ ಕರಡು ಪರಿನಿಯಮಕ್ಕೆ ಕುಲಾಧಿಪತಿಗಳ ಅನುಮೋದನೆ ಕಾಯ್ದಿರಿಸಿ, ನಿಯಮ 32 ರನ್ವಯ ಸ್ವತಂತ್ರ ಪ್ರಭಾರದಲ್ಲಿರಿಸಿರುವುದು:

(ವಿಚಾರಣಾ ಪತ್ರ ಸಂಖ್ಯೆ:11/ದಿ:25–06–2025 & 86/ದಿ:14–08–2025)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಂಜೂರಾದ ಬೋಧಕೇತರ ಹುದ್ದೆಗಳಿಗೆದುರಾಗಿ ಕಾರ್ಯ ನಿರ್ವಹಿಸುತ್ತಿದ್ದ ಅಧಿಕಾರಿ/ಸಿಬ್ಬಂದಿಗಳಿಗೆ 2024–25ನೇ ಸಾಲಿನಲ್ಲಿ ನೀಡಲಾದ ವಿವಿಧ ಬಡ್ತಿಗಳ ಸಂಬಂಧ ಆದೇಶಗಳು, ಕಡತಗಳು ಸಂಬಂಧಪಟ್ಟ ಸರ್ಕಾರಿ ಆದೇಶಗಳು ಹಾಗೂ ಪೂರಕ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:11/ದಿ:25–06–2025 ನ್ನು ನೀಡಲಾಗಿದ್ದು; ಹಾಜರುಪಡಿಸಲಾದ ಮಾಹಿತಿಯನ್ವಯ 10 ಉಪಕುಲಸಚಿವರ ಹುದ್ದೆಗಳ ಸೃಜನೆಗಾಗಿ ಪರಿನಿಯಮ "Statutes Governing the Creation and Institution of Non–Teaching Post Deputy Registrar Administrative Post–established by the Karnataka State Open University across Karnataka State. ರಚಿಸಿ, ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ:ಕರಾಮುವಿ/ಆವಿ/ಯುಎ–1/ಪರಿನಿಯಮ–9/09/2024–25 ದಿನಾಂಕ:19–02–2025 ರಲ್ಲಿ ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸಲಾಗಿದೆ.

ಸದರಿ ಪರಿನಿಯಮವು ಕುಲಾಧಿಪತಿಗಳ ಅನುಮೋದನೆಯನ್ನು ಕಾಯ್ದಿರಿಸಿ ಸೃಜಿಸಲಾದ 10 ಉಪಕುಲಸಚಿವರ ಹುದ್ದೆಗಳಿಗೆ ವಿಶ್ವವಿದ್ಯಾನಿಲಯದ ಕಛೇರಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–02/1157/ 2024–25 ದಿನಾಂಕ: 15–03–2025 ಸಮ ಸಂಖ್ಯೆಯ ವಿವಿಧ ಪ್ರತ್ಯೇಕ ಆದೇಶಗಳಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ–32 ರಡಿಯಲ್ಲಿ ಸ್ವತಂತ್ರ ಪ್ರಭಾರದಲ್ಲಿರಿಸಿ ಆದೇಶಿಸಲಾಗಿರುತ್ತದೆ.

ಯಾವುದೇ ಪರಿನಿಯಮವನ್ನು ರಚಿಸಿ ಜಾರಿಗೊಳಿಸುವುದಕ್ಕೂ ಮೊದಲು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಾಯ್ದೆ–1994 ಅಧ್ಯಾಯ–V, ರ ಕಾಯಿದೆ–23(04)ರ ಅಧಿನಿಯಮದಲ್ಲಿ, "ಹೊಸ ಪರಿನಿಯಮ ಅಥವಾ ಈಗಿರುವ ಪರಿನಿಯಮಕ್ಕೆ ತಿದ್ದುಪಡಿ ಅಥವಾ ನಿರಸನಗೊಳಿಸಿ ಮಾಡಲಾದ ಪರಿನಿಯಮವು, ಅದಕ್ಕೆ **ಕುಲಾಧಿಪತಿಗಳ ಒಪ್ಪಿಗೆ**" ದೊರೆತ ಹೊರತು ಮಾನ್ಯವಾಗತಕ್ಕದಲ್ಲ ಎಂಬುದನ್ನು ಅಗತ್ಯ ಪಡಿಸಿರುತ್ತದೆ. ಸದರಿ ಅಧಿನಿಯಮದನ್ವಯ ರಚಿಸಲಾದ ಪರಿನಿಯಮಗಳಿಗೆ ಕುಲಾಧಿಪತಿಗಳ ಅನುಮೋದನೆ ಪಡೆದುಕೊಂಡ ನಂತರ ವಿವಿಧ ಹುದ್ದೆಗಳಿಗೆ ಸ್ವತಂತ್ರ ಪ್ರಭಾರದಲ್ಲಿಸುವುದು ಕ್ರಮವಾಗಿರುತ್ತದೆ. ಆದರೆ ಈ ಕ್ರಮವನ್ನು ಅನುಸರಿಸದೇ ಹುದ್ದೆಗಳ ಮಂಜೂರಾತಿ ಪಡೆಯುವುದನ್ನು ಕಾಯ್ದಿರಿಸಿ 10 ಉಪಕುಲಸಚಿವರ ಹುದ್ದೆಗಳು ಹಾಗೂ ಈ ನಿಮಿತ್ತವಾಗಿ ತೆರವಾಗುವ 10 ಅಧೀಕ್ಷಕ ಹುದ್ದೆಗಳು, 10 ಹಿರಿಯ ಸಹಾಯಕ ಹುದ್ದೆಗಳು ಹಾಗೂ 10 ಪ್ರಥಮ ದರ್ಜೆ ಸಹಾಯಕ ಹುದ್ದೆಗಳಿಗೆ ಕೆ.ಸಿ.ಎಸ್.ನಿಯಮ 32ರಲ್ಲಿ ಸ್ವತಂತ್ರ ಪ್ರಭಾರದಲ್ಲಿರಿಸಿ ಆದೇಶಿಸಲಾಗಿರುತ್ತದೆ.

ಕ್ರಮ ಸಂಖ್ಯೆ	ಮುಂಬಡ್ತಿ ಪೂರ್ವದ ಹುದ್ದೆ	ಮುಂಬಡ್ತಿ ನಂತರದ ಹುದ್ದೆ	ಮುಂಬಡಿ ನೀಡಿ 32ರಡಿಯಲ್ಲಿ ಸ್ವತಂತ್ರ ಪ್ರಭಾರದಲ್ಲಿರಿಸಿರುವ ಒಟ್ಟು ಹುದ್ದೆಗಳು
1	ಸಹಾಯಕ ಕುಲಸಚಿವ	ಉಪಕುಲಸಚಿವ(ಪ್ರಭಾರ)	10
2	ಅಧೀಕ್ಷಕ	ಸಹಾಯಕ ಕುಲಸಚಿವ (ಪ್ರಭಾರ)	10
3	ಹಿರಿಯ ಸಹಾಯಕ	ಅಧೀಕ್ಷಕ(ಪ್ರಭಾರ)	10

4	ಪ್ರದಗು	ಹಿರಿಯ ಸಹಾಯಕ (ಪ್ರಭಾರ)	10
		ಪ್ರಭಾರ ನೀಡಲಾಗಿರುವ ಒಟ್ಟು ಹುದ್ದೆಗಳು	40

ಖಾಲಿ ಉಳಿದಿರುವ ಹುದ್ದೆಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ–32 ರಡಿ ಪ್ರಭಾರ ನೀಡಲು ಅವಕಾಶವಿದ್ದು ಸದರಿ ಸೃಜಿಸಲಾದ ಹುದ್ದೆಗಳು ಕುಲಾಧಿಪತಿಗಳಿಂದ ಅನುಮೋದನೆ ಕಾಯ್ದಿರಿಸಿ ಸ್ವತಂತ್ರ ಪ್ರಭಾರ ನೀಡಿರುವುದು ನಿಯಮ ಉಲ್ಲಂಘನೆಯಾಗಿರುತ್ತದೆ ಈ ಸಂಬಂಧ ವಿಚಾರಣಾ ಪತ್ರ ಸಂಖ್ಯೆ:86/ದಿ:14–08–2025 ನ್ನು ನೀಡಲಾಗಿದೆ. ಅನುಪಾಲನಾ ವರದಿಯನ್ನು ಪತ್ರ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–2/985/2025–26 ದಿನಾಂಕ:06–09–2025 ರಲ್ಲಿ ನೀಡಲಾಗಿದೆ.

ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿನ ಸೇವೆಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವ ನಿಟ್ಟಿನಲ್ಲಿ ಹಾಗೂ ಆಡಳಿತ ನಿರ್ವಹಣೆಯ ದೃಷ್ಟಿಯಿಂದ ಸಹಾಯಕ ಕುಲಸಚಿವ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಉಪಕುಲಸಚಿವ ಹುದ್ದೆಯ ಪದೋನ್ನತಿಗೆ ಅವಕಾಶ ಕಲ್ಪಿಸುವ ದೃಷ್ಟಿಯಿಂದ ದಿನಾಂಕ:17–08–2024 ರಂದು ನಡೆದ 179 ನೇ ವ್ಯವಸ್ಥಾಪನಾ ಮಂಡಳಿ ಸಭೆಯ ವಿಷಯ ಸಂಖ್ಯೆ:179.15 ರನ್ವಯ ಉಪಕುಲಸಚಿವ ಹುದ್ದೆ ಸೃಜನೆಯ ಪರಿನಿಯಮ ಮತ್ತು ದಿನಾಂಕ:21–02–2025 ರಂದು ನಡೆದ 182 ನೇ ವ್ಯವಸ್ಥಾಪನಾ ಮಂಡಳಿ ಸಭೆಯ ವಿಷಯ ಸಂಖ್ಯೆ: 182.23 ರನ್ವಯ ಉಪಕುಲಸಚಿವ ಹುದ್ದೆ ಪದೋನ್ನತಿಗೆ ಸಂಬಂಧಿಸಿ ನಿಯಮದ ತಿದ್ದುಪಡಿಯ ಕರಡು ಪರಿನಿಯಮಗಳನ್ನು ಸರ್ಕಾರದ ಮುಖ್ಯಾಂತರ ಘನವೆತ್ತ ಕುಲಾಧಿಪತಿಗಳಿಂದ ಅಂಕಿತ ಪಡೆಯಲು ದಿನಾಂಕ: 20–02–2025 ಮತ್ತು 12–03–2025 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ–1) ಬೆಂಗಳೂರು–1 ಇವರಿಗೆ ಸಲ್ಲಿಸಲಾಗಿದೆ. 182ನೇ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನದಂತೆ 10 ಉಪಕುಲಸಚಿವ ಹುದ್ದೆ ಸೃಜನೆ ಹಾಗೂ ಉಪಕುಲಸಚಿವ ಹುದ್ದೆ ಪದೋನ್ನತಿ ತಿದ್ದುಪಡಿ ಕರಡು ಪರಿನಿಯಮಗಳಿಗೆ ಮಾನ್ಯ ಕುಲಾಧಿಪತಿಗಳ ಅಂಕಿತವನ್ನು ಕಾಯ್ದಿರಿಸಿ ಸೃಜನೆಯಾಗುವ ಉಪಕುಲಸಚಿವರ ಹುದ್ದೆಗಳಿಗೆ ಎದುರಾಗಿ ಹತ್ತು ಸಹಾಯಕ ಕುಲಸಚಿವರನ್ನು ಸೃಜನೆಯಾಗುವ ಹತ್ತು ಉಪಕುಲಸಚಿವರ ಹುದ್ದೆಗೆ ಕೆ.ಸಿ.ಎಸ್ ನಿಯಮ –32 ರನ್ವಯ ಸ್ವತಂತ್ರ ಪ್ರಭಾರದಲ್ಲಿರಿಸಿ ಕೆ.ಸಿ.ಎಸ್.ಆರ್ ನಿಯಮ–68 ರನ್ವಯ ಪ್ರಭಾರ ಭತ್ಯೆಯನ್ನು ಪಡೆಯುವ ಸಂಬಂಧವಾಗಿ ದಿನಾಂಕ: 15–03–2025 ರಂದು ಆದೇಶ ಹೊರಡಿಸಲಾಗಿರುತ್ತದೆ. ಹಾಗೂ ಸದರಿ ಹುದ್ದೆಗಳಿಗೆ ಎದುರಾಗಿ ಅನುಕ್ರಮವಾಗಿ ಹತ್ತು ಅಧೀಕ್ಷಕರು, ಹತ್ತು ಹಿರಿಯ ಸಹಾಯಕರು ಮತ್ತು ಹತ್ತು ಪ್ರಥಮ ದರ್ಜೆ ಸಹಾಯಕರುಗಳಿಗೆ ಅಂತರ್ ಜೇಷ್ಠತೆ ಮತ್ತು ಮೀಸಲಾತಿ ಆಧಾರದನ್ವಯ ಕೆ.ಸಿ.ಎಸ್ ನಿಯಮ–32 ರನ್ವಯ ಸ್ವತಂತ್ರ ಪ್ರಭಾರದಲ್ಲಿರಿಸಿ ಕೆ.ಸಿ.ಎಸ್. ನಿಯಮ–68 ರನ್ವಯ ಪ್ರಭಾರ ಭತ್ಯೆಯನ್ನು ಪಡೆಯುವ ಸಂಬಂಧ ದಿನಾಂಕ: 21–03–2025 ರಂದು ಆದೇಶ ಹೊರಡಿಸಲಾಗಿರುತ್ತದೆ ಎಂದು ವ್ಯವಸ್ಥಾಪನಾ ಮಂಡಲಿಯ ತೀರ್ಮಾನದ ಪ್ರತಿಯನ್ನು ಲಗತ್ತಿಸಿ ಉತ್ತರ ನೀಡಿರುತ್ತಾರೆ. ಸದರಿ ಅನುಪಾಲನೆಯು ಅಂತಿಮ ಕ್ರಮದ ಉತ್ತರವಾಗಿರುವುದಿಲ್ಲ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಾಯ್ದೆ–1994 ಅಧ್ಯಾಯ–V ರ ಕಾಯ್ದೆ–23(04)ರ ಅಧಿನಿಯಮದ ಉಲ್ಲಂಘನೆ ಸಂಬಂಧವಾಗಿ ಯಾವುದೇ ಅನುಪಾಲನೆಯನ್ನು ನೀಡಿರುವುದಿಲ್ಲ. ಆದ್ದರಿಂದ ನೀಡಲಾಗಿರುವ ಸ್ವತಂತ್ರ ಪ್ರಭಾರ ವ್ಯವಸ್ಥೆಯು ನಿಯಮ ಬಾಹಿರವಾಗಿದ್ದು; ಸ್ವತಂತ್ರ ಪ್ರಭಾರ ನೀಡಲಾಗಿರುವ ಹಾಗೂ ಪ್ರಭಾರ ಭತ್ಯೆ ಮಂಜೂರು ಮಾಡಿರುವ ಆದೇಶಗಳನ್ನು ಕೂಡಲೇ ಹಿಂಪಡೆದು ಕ್ರಮಬದ್ಧಗೊಳಿಸಲು ಸೂಚಿಸಲಾಗಿದೆ. ಹಾಗೂ 2024–25ನೇ ಸಾಲಿಗೆ ಸಂಬಂಧಿಸಿದ ಪ್ರಭಾರ ಭತ್ಯೆ ಮೊತ್ತಗಳನ್ನು 2025–26ನೇ ಸಾಲಿನಲ್ಲಿ ಪಾವತಿಸಲಾಗಿದೆ. ಸದರಿ ನಿಯಮಬಾಹಿರ ಪಾವತಿ ಮೊತ್ತಗಳನ್ನು ಸಂಬಂಧಿಸಿದ ಸಿಬ್ಬಂದಿಗಳಿಂದ ವಸೂಲಿಸಿ ನಿಧಿಗೆ ಜಮಾ ಮಾಡಿ ಮಾಹಿತಿಯನ್ನು 2025–26ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

ಸ್ವತಂತ್ರ ಪ್ರಭಾರದಲ್ಲಿರಿಸಲಾಗಿರುವ ಉದ್ಯೋಗಿಗಳ ವಿವರಗಳನ್ನು ಹುದ್ದೆವಾರು **ಅನುಬಂಧ–27** ರಲ್ಲಿ ವಿವರಿಸಿರುವ ವರದಿಗೆ ಲಗತ್ತಿಸಿದೆ.

33.15. ನೇರನೇಮಕಾತಿ ಉಪನಿರ್ದೇತಕರ ಹುದ್ದೆಗಳಿಗೆ ನಿಯಮ ಉಲ್ಲಂಘಿಸಿ ಸ್ವತಂತ್ರ ಪ್ರಭಾರ ನೀಡಿ ಪ್ರಭಾರ ಭತ್ಯೆ ಮಂಜೂರು ಮಾಡಿರುವುದು: (ವಿಚಾರಣಾ ಪತ್ರ ಸಂಖ್ಯೆ:094/ದಿ:18–08–2025)

ವಿಶ್ವವಿದ್ಯಾನಿಲಯದ Draft Statutes KSOU to "Statutes relating to Qualifications & Method of Recruitment and other conditions of service for the post of Director, Joint Director, Deputy Director, Assistant Director in Karnataka State Open University" ಕರಡು ಪರಿನಿಯಮದ ಅನುಮೋದನೆಗಾಗಿ ಕುಲಾಧಿಪತಿಗಳಿಗೆ ಕಳುಹಿಸಲಾದ ದಿನಾಂಕ:12-03-2025ರ ಕರಡು ಪರಿನಿಯಮದಲ್ಲಿ, ನೇರನೇಮಕಾತಿ "ಉಪನಿರ್ದೇಶಕರ ಹುದ್ದೆ" ಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಿಕೊಳ್ಳಲು ಅನುವಾಗುವಂತೆ ನಿಯಮಾನುಸಾರ ಕರಡು ಪರಿನಿಯಮ ರಚಿಸಿ ಅನುಮೋದನೆ ಪಡೆಯಲು ಮಾನ್ಯ ಕುಲಾಧಿಪತಿಗಳಿಗೆ ದಿನಾಂಕ: 20-02-2025 ರಲ್ಲಿ ಸಲ್ಲಿಸಲಾಗಿರುತ್ತದೆ.

ಮಂಜೂರಾದ ಉಪನಿರ್ದೇಶಕರ 03 ಹುದ್ದೆಗಳು ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ಹುದ್ದೆಗಳಾಗಿದ್ದು ಅದರಲ್ಲಿ ಒಂದು ಹುದ್ದೆಯು 371(j) ನಿಯಮಕ್ಕೆ ಮೀಸಲಿರಿಸಿದ್ದು ಉಳಿದ 02 ನೇರ ನೇಮಕಾತಿ ಮೂಲಕ ಭರ್ತಿಮಾಡಬೇಕಾದ ಹುದ್ದೆಗಳಾಗಿರುತ್ತವೆ. ಸದರಿ ಉಪನಿರ್ದೇಶಕರ ಹುದ್ದೆಗಳ ಮಂಜೂರಾತಿ, ಭರ್ತಿ ಹಾಗೂ ಖಾಲಿ ಉಳಿದಿರುವ ಹುದ್ದೆಗಳ ವಿವರಗಳು ಕೆಳಕಂಡಂತಿರುತ್ತವೆ.

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ಮಂಜೂರಾದ ಒಟ್ಟು ಹುದ್ದೆಗಳು	ನೇರನೇಮಕಾತಿ ವಿಧಾನ		ಭರ್ತಿ ಮಾಡಲಾದ ಒಟ್ಟು ಹುದ್ದೆಗಳು	ನೇರನೇಮಕಾತಿ ವಿಧಾನ		ಖಾಲಿ ಉಳಿದ ಒಟ್ಟು ಹುದ್ದೆಗಳು	ನೇರನೇಮಕಾತಿ ವಿಧಾನ	
			ನೇರ ನೇಮಕಾತಿ ಹುದ್ದೆಗಳ ಸಂಖ್ಯೆ	ಮುಂಬಡ್ತಿ ಹುದ್ದೆಗಳ ಸಂಖ್ಯೆ		ನೇರ ನೇಮಕಾತಿ ಹುದ್ದೆಗಳ ಸಂಖ್ಯೆ	ಮುಂಬಡ್ತಿ ಹುದ್ದೆಗಳ ಸಂಖ್ಯೆ		ನೇರ ನೇಮಕಾತಿ ಹುದ್ದೆಗಳ ಸಂಖ್ಯೆ	ಮುಂಬಡ್ತಿ ಹುದ್ದೆಗಳ ಸಂಖ್ಯೆ
								(3-6)	(4-7)	(5-8)
1	2	3	4	5	6	7	8	9	10	11
1	ಉಪ ನಿರ್ದೇಶಕರು	3	3	0	0	0	0	3	3	0

ಮೇಲ್ಕಂಡ ವಿವರಗಳಂತೆ ಖಾಲಿ ಉಳಿದಿರುವ 03 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾಗಿರುವ ಹುದ್ದೆಗಳ ಸಂಬಂಧದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮಾರ್ಪಡಿಸಿ ಮುಂಬಡ್ತಿ ಮೂಲಕ ಭರ್ತಿಮಾಡುವ ಸಂಬಂಧ ಪರಿನಿಯಮ ರಚಿಸಿ ಮಾನ್ಯ ಕುಲಾಧಿಪತಿಗಳ ಅನುಮೋಧನೆಗಾಗಿ ಸಲ್ಲಿಸಲಾಗಿರುತ್ತದೆ. ಅನುಮೋಧನೆ ಪಡೆಯುವುದು ಬಾಕಿ ಉಳಿದಿರುತ್ತದೆ.

ಈ ಸಂದರ್ಭದಲ್ಲಿ ಪರಿನಿಯಮ ಅನುಮೋಧನೆಯನ್ನು ಕಾಯ್ದಿರಿಸಿ ವಿಶ್ವವಿದ್ಯಾನಿಲಯದ ಕಛೇರಿ ಆದೇಶ ಸಂಖ್ಯೆ:ಕರಾಮುಎ/ಆಎ/ಸಿಬ್ಬಂದಿ-02/1157/2025ದಿನಾಂಕ:15-03-2025ರಲ್ಲಿ ಈ ಕೆಳಕಂಡ ಸಹಾಯಕ ಕುಲಸಚಿವರುಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ-32 ರ ಅನ್ವಯ ಉಪನಿರ್ದೇಶಕರ ಹುದ್ದೆಗಳಲ್ಲಿ ಸ್ವತಂತ್ರ ಪ್ರಭಾರದಲ್ಲಿರಿಸಿ ನಿಯಮ-68 ರಡಿಯಲ್ಲಿ ಪ್ರಭಾರ ಭತ್ಯೆಯನ್ನು ಮಂಜೂರು ಮಾಡಿ ಆದೇಶಿಸಲಾಗಿರುತ್ತದೆ. ವಿವರಗಳು ಕೆಳಕಂಡಂತಿರುತ್ತದೆ.

ಕ್ರಮ ಸಂಖ್ಯೆ	ಅಧಿಕಾರಿ/ನೌಕರರ ಹೆಸರು	ಕೆ.ಸಿ.ಎಸ್ ನಿಯಮ 32 ರ ಪ್ರಭಾರ ಪೂರ್ವದ ಹುದ್ದೆ	ಕೆ.ಸಿ.ಎಸ್ ನಿಯಮ 32 ರ ಪ್ರಭಾರ ಹುದ್ದೆ	ಕೆ.ಸಿ.ಎಸ್ ನಿಯಮ 32 ರಡಿ ಪ್ರಭಾರ ನೀಡಲಾದ ದಿನಾಂಕ	ವಾಸ್ತವವಾಗಿ ಕೆ.ಸಿ.ಎಸ್ ನಿಯಮ 32 ರಡಿ ಪ್ರಭಾರ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕ
1	ಸುರೇಶ	ಸಹಾಯಕ ಕುಲಸಚಿವ	ಉಪನಿರ್ದೇಶಕ(ಪ್ರಭಾರ)	15.03.2025	ದಿನಾಂಕ:17.03.2025 ರ ಪೂರ್ವಾಹ್ನ
2	ವಿರುಪಾಕ್ಷಯ್ಯ ಬಿ.ಜಿ	ಸಹಾಯಕ ಕುಲಸಚಿವ	ಉಪನಿರ್ದೇಶಕ(ಪ್ರಭಾರ)	15.03.2025	ದಿನಾಂಕ: 17.03.2025 ರ ಪೂರ್ವಾಹ್ನ

ಮೇಲ್ಕಂಡಂತೆ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಾಯ್ದೆ-1994 ಅಧ್ಯಾಯ-V, ರ ಕಾಯಿದೆ-23(04)** ಅಧಿನಿಯಮದ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಸದರಿ ಅಧಿನಿಯಮದಲ್ಲಿ "ಹೊಸ ಪರಿನಿಯಮ ಅಥವಾ ಈಗಿರುವ ಪರಿನಿಯಮಕ್ಕೆ ತಿದ್ದುಪಡಿ ಮಾಡಿ ಅಥವಾ ನಿರಸನಗೊಳಿಸಿ ಮಾಡಲಾದ ಪರಿನಿಯಮವು, ಅದಕ್ಕೆ **ಕುಲಾಧಿಪತಿಗಳ ಒಪ್ಪಿಗೆ ದೊರೆಯದ ಹೊರತು ಮಾನ್ಯವಾಗುತಕ್ಕದಲ್ಲ** ಎಂದು ಅಗತ್ಯಪಡಿಸಿರುತ್ತದೆ. ಸದರಿ ನಿಯಮದನ್ವಯ ಕುಲಾಧಿಪತಿಗಳ ಅನುಮೋದನೆ ದೊರೆತ ನಂತರವೇ ಮುಂಬಡ್ತಿ ಅಥವಾ ಸ್ವಂತಂತ್ರ ಪ್ರಭಾರ ನೀಡುವುದು ಕ್ರಮವಾಗಿರುತ್ತದೆ. ಆದರೆ ಸದರಿ ನಿಯಮವನ್ನು ಉಲ್ಲಂಘಿಸಿ ಕುಲಾಧಿಪತಿಗಳ ಅನುಮೋದನೆ ಕಾಯ್ದಿರಿಸಿ ಸ್ವತಂತ್ರ

ಪ್ರಭಾರದಲ್ಲಿ ಉಪನಿರ್ದೇಶಕರ ಹುದ್ದೆಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ-32 ರಡಿ ಸ್ವತಂತ್ರ ಪ್ರಭಾರ ನೀಡಿರುವುದು ಹಾಗೂ ನಿಯಮ-68 ರಡಿಯಲ್ಲಿ ಪ್ರಭಾರ ಭತ್ಯೆ ನೀಡಿರುವ ಸಂಬಂಧವಾಗಿ ಸೂಕ್ತ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ವಿಚಾರಣಾ ಪತ್ರ ಸಂಖ್ಯೆ:094/ದಿ:18-08-2025 ನೀಡಲಾಗಿತ್ತು. ವಿಶ್ವವಿದ್ಯಾನಿಲಯದ ಅನುಪಾಲನಾ ವರದಿ ಸಂಖ್ಯೆ: ಕರಾಮುವಿ/ಆಪಿ/ಸಿಬ್ಬಂದಿ-2/985/2025-26 ದಿನಾಂಕ:06-09-2025 ರಲ್ಲಿ ನೀಡಲಾದ ವಿವರಗಳು ಈಗಿರುತ್ತದೆ.

ವಿಶ್ವವಿದ್ಯಾನಿಲಯದಲ್ಲಿನ ವಿವಿಧ ವಿಭಾಗಗಳಲ್ಲಿನ ಸೇವೆಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವ ನಿಟ್ಟಿನಲ್ಲಿ ಹಾಗೂ ಆಡಳಿತದ ನಿರ್ವಹಣೆಯ ದೃಷ್ಟಿಯಿಂದ ಸಹಾಯಕ ಕುಲಸಚಿವರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಉಪ ನಿರ್ದೇಶಕರು ಹುದ್ದೆಯ ಪದೋನ್ನತಿಗೆ ಅವಕಾಶ ಕಲ್ಪಿಸುವ ದೃಷ್ಟಿಯಿಂದ ದಿನಾಂಕ:21-02-2025 ರಂದು ನಡೆದ 182ನೇ ವ್ಯವಸ್ಥಾಪನಾ ಮಂಡಳಿ ಸಭೆ (ವಿಷಯ ಸಂಖ್ಯೆ: 182.21) ರನ್ವಯ ಕರಡು ಪರಿನಿಯಮವನ್ನು ಸರ್ಕಾರದ ಮುಖ್ಯಾಂತರ ಘನತೆವೆತ್ತ ಕುಲಾಧಿಪತಿಗಳಿಂದ ಅಂಕಿತ ಪಡೆಯಲು ಮತ್ತು 12-03-2025 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1) ಬೆಂಗಳೂರು-1 ಇವರಿಗೆ ಸಲ್ಲಿಸಲಾಗಿದೆ.

ವಿಶ್ವವಿದ್ಯಾನಿಲಯದ 182ನೇ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನದನ್ವಯ ಕರಡು ಪರಿನಿಯಮಕ್ಕೆ ಮಾನ್ಯ ಕುಲಾಧಿಪತಿಗಳ ಅಂಕಿತವನ್ನು ಕಾಯ್ದಿರಿಸಿ ಇಬ್ಬರು ಸಹಾಯಕ ಕುಲಸಚಿವರನ್ನು ನೇರ ನೇಮಕಾತಿ ಉಪನಿರ್ದೇಶಕ ಹುದ್ದೆಗೆ ಕೆ.ಸಿ.ಎಸ್.ನಿಯಮ 32ರನ್ವಯ ಸ್ವತಂತ್ರದಲ್ಲಿರಿಸಿ ಕೆ.ಸಿ.ಎಸ್. ನಿಯಮ 68ರ ಅನ್ವಯ ಪ್ರಭಾರ ಭತ್ಯೆಯನ್ನು ಪಡೆಯುವ ಸಂಬಂಧ ದಿನಾಂಕ: 15-03-2025 ರಂದು ಆದೇಶ ಹೊರಡಿಸಲಾಗಿರುತ್ತದೆ.

ಸದರಿ ಅನುಪಾಲನೆಯು ಅಂತಿಮ ಕ್ರಮದ ಉತ್ತರವಾಗಿರುವುದಿಲ್ಲ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಾಯ್ದೆ-1994 ಅಧ್ಯಾಯ-Vರ ಕಾಯಿದೆ-23(04)ರ ಅಧಿನಿಯಮದ ಉಲ್ಲಂಘನೆ ಸಂಬಂಧವಾಗಿ ಯಾವುದೇ ಅನುಪಾಲನೆಯನ್ನು ನೀಡಿರುವುದಿಲ್ಲ. ಆದ್ದರಿಂದ ನೀಡಲಾಗಿರುವ ಸ್ವತಂತ್ರ ಪ್ರಭಾರ ವ್ಯವಸ್ಥೆಯು ನಿಯಮ ಬಾಹಿರವಾಗಿದ್ದು ಸ್ವತಂತ್ರ ಪ್ರಭಾರ ನೀಡಲಾಗಿರುವ ಹಾಗೂ ಪ್ರಭಾರ ಭತ್ಯೆ ಮಂಜೂರು ಮಾಡಿರುವ ಆದೇಶಗಳನ್ನು ಕೂಡಲೇ ಹಿಂಪಡೆದು ಕ್ರಮಬದ್ಧಗೊಳಿಸಲು ಸೂಚಿಸಲಾಗಿದೆ. ಹಾಗೂ 2024-25ನೇ ಸಾಲಿಗೆ ಸಂಬಂಧಿಸಿದ ಪ್ರಭಾರ ಭತ್ಯೆ ಮೊತ್ತಗಳನ್ನು 2025-26ನೇ ಸಾಲಿನಲ್ಲಿ ಪಾವತಿಸಲಾಗಿದೆ. ಸದರಿ ನಿಯಮಬಾಹಿರ ಪಾವತಿ ಮೊತ್ತಗಳನ್ನು ಸಂಬಂಧಿಸಿದ ಸಿಬ್ಬಂದಿಗಳಿಂದ ವಸೂಲಿಸಿ ನಿಧಿಗೆ ಜಮಾ ಮಾಡಿ ಮಾಹಿತಿಯನ್ನು 2025-26ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

33.16. ಪ್ರಥಮ ದರ್ಜೆ ಸಹಾಯಕರ ಹುದ್ದೆಯಲ್ಲಿ, ಪ್ರಭಾರದ ಅವಧಿಯನ್ನು ನಿಯಮ ಬಾಹಿರವಾಗಿ ಪರಿಗಣಿಸಿ ಹಿರಿಯ ಸಹಾಯಕರ ಹುದ್ದೆಗೆ ಮುಂಬಡ್ತಿ ನೀಡಿರುವುದು: (ವಿಚಾರಣಾ ಪತ್ರ ಸಂಖ್ಯೆ:205/ದಿ:06-12-2025)

ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕರಾಮುವಿ/ಆಪಿ/ಸಿಬ್ಬಂದಿ-02/950/2022-23, ದಿನಾಂಕ:28-10-2022 ರಲ್ಲಿ 8 ಪ್ರಥಮ ದರ್ಜೆ ಸಹಾಯಕರು ಹಾಗೂ ಆದೇಶ ಸಂಖ್ಯೆ:ಕರಾಮುವಿ/ಆಪಿ/ಸಿಬ್ಬಂದಿ-02/776/2022-23, ದಿನಾಂಕ:31-10-2022 ರಲ್ಲಿ 2 ನೌಕರರಿಗೆ ಪ್ರಥಮ ದರ್ಜೆ ಸಹಾಯಕರಿಂದ ಹಿರಿಯ ಸಹಾಯರ ಹುದ್ದೆಗೆ ಮುಂಬಡ್ತಿ ನೀಡಲಾಗಿರುತ್ತದೆ. 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಕಂಡಿಕೆ ಸಂಖ್ಯೆ:21.5, 2023-24 ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಕಂಡಿಕೆ ಸಂಖ್ಯೆ:21.6 ರಲ್ಲಿ ಸದರಿ ಹುದ್ದೆಗಳನ್ನು ಹೈದ್ರಾಬಾದ್- ಕರ್ನಾಟಕ 371 (ಜೆ) ಅಡಿ ನೇರ ನೇಮಕಾತಿ ಮೀಸಲು ಹುದ್ದೆಗಳಿಗೆ ಸಾಮಾನ್ಯ ಅಭ್ಯರ್ಥಿಗಳನ್ನು ಪರಿಗಣಿಸಿ ಮುಂಬಡ್ತಿ ನೀಡಲಾಗಿರುತ್ತದೆ, ಹಾಗೂ ಪ್ರಭಾರ ನೀಡಲಾದ ಅವಧಿಯನ್ನು ಪರಿಗಣಿಸಲಾಗಿರುವುದು ನಿಯಮ ಬಾಹಿರ ಎಂದು ಆಕ್ಷೇಪಣೆ ವ್ಯಕ್ತಪಡಿಸಲಾಗಿರುಗಿರುತ್ತದೆ.

ಈ ಸಂಬಂಧ ನೀಡಲಾದ ವಿಚಾರಣಾ ಪತ್ರ ಸಂಖ್ಯೆ:203/ದಿ:30-11-2025 ಕ್ಕೆ ಅನುಪಾಲನಾ ವರದಿ ಪತ್ರ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/985/2025-26 ದಿನಾಂಕ:05-12-2025 ನೀಡಲಾದ ಅನುಪಾಲನಾ ಉತ್ತರದಲ್ಲಿ ಸದರಿ ಹುದ್ದೆಗಳು ನೇರ ನೇಮಕಾತಿ ಹುದ್ದೆಗಳಾಗಿರುವುದಿಲ್ಲ ವಾಸ್ತವವಾಗಿ ಸದರಿ ಹತ್ತು ಹುದ್ದೆಗಳು ಮುಂಬಡ್ತಿ ನೀಡಬಹುದಾಗಿದ್ದ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಾಗಿದ್ದು, ಸದರಿ ಹತ್ತು ಹುದ್ದೆಗಳಲ್ಲಿ 02 ಹುದ್ದೆಗಳನ್ನು ಹೈದ್ರಾಬಾದ-ಕರ್ನಾಟಕ 371 (ಜೆ) ಮೀಸಲು ಹುದ್ದೆಗಳ ಸಂಬಂಧ ಅರ್ಹ ಅಭ್ಯರ್ಥಿಗಳು ಲಭ್ಯವಾಗದ ಹಿನ್ನೆಲೆಯಲ್ಲಿ ಸಾಮಾನ್ಯ ಅಭ್ಯರ್ಥಿಗಳನ್ನು ಪರಿಗಣಿಸಿ ಒಟ್ಟು 10 ಪ್ರಥಮ ದರ್ಜೆ ಸಹಾಯಕರುಗಳಿಗೆ ಹಿರಿಯ ಸಹಾಯಕರ ಹುದ್ದೆಗೆ ಮುಂಬಡ್ತಿ ನೀಡಲಾಗಿರುತ್ತದೆ ಎಂದು ಅನುಪಾಲನೆ ನೀಡಿರುತ್ತಾರೆ.

ಈ ಸಂಬಂಧವಾದ ಅನುಪಾಲನೆಯನ್ನು ಪರಿಶೀಲಿಸಲಾಗಿದ್ದು ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಿಗೆ ಮುಂಬಡ್ತಿ ನೀಡಲು ಪ್ರಥಮ ದರ್ಜೆ ಸಹಾಯಕರರ ಹುದ್ದೆಯಲ್ಲಿ ಕನಿಷ್ಠ 03 ವರ್ಷಗಳ ಸೇವೆಯನ್ನು ನಿಗದಿಪಡಿಸಲಾಗಿರುತ್ತದೆ. ಆದರೆ, ಮುಂಬಡ್ತಿ ನೀಡಲಾದ ಎಲ್ಲಾ 10 ಅಭ್ಯರ್ಥಿಗಳು ಬಡ್ತಿ ನೀಡಿದ ದಿನಾಂಕಕ್ಕೆ 03 ವರ್ಷಗಳ ಸೇವೆಯನ್ನು ಪ್ರಥಮ ದರ್ಜೆ ಸಹಾಯಕರ ಹುದ್ದೆಯಲ್ಲಿ ಪೂರೈಸಿರುವುದಿಲ್ಲ.

ಮುಂಬಡ್ತಿಯಲ್ಲಿ ಪ್ರಥಮ ದರ್ಜೆ ಸಹಾಯಕರ ಹುದ್ದೆಯ "ಪ್ರಭಾರದ ಅವಧಿ" ಯನ್ನು ಪರಿಗಣಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಉಲ್ಲಂಘಿಸಿ ಮುಂಬಡ್ತಿ ನೀಡಿ ಆರ್ಥಿಕ ಸೌಲಭ್ಯಗಳನ್ನು ನೀಡಲಾಗಿರುತ್ತದೆ. ಪ್ರಭಾರದ ಅವಧಿಯನ್ನು ಪರಿಗಣಿಸಿರುವ ವಿವರ ಕೆಳಕಂಡಂತಿರುತ್ತವೆ.

ಕ್ರಮ ಸಂಖ್ಯೆ	ಉದ್ಯೋಗಿಯ ಹೆಸರು	ಮುಂಬಡ್ತಿ ಪೂರ್ವದ ಹುದ್ದೆ	ಮುಂಬಡ್ತಿ ನಂತರದ ಹುದ್ದೆ	ಪ್ರಥಮ ದರ್ಜೆ ಸಹಾಯಕ ಹುದ್ದೆಯ ಪ್ರಭಾರದ ಅವಧಿ		ಪ್ರಥಮ ದರ್ಜೆ ಸಹಾಯಕರ ಹುದ್ದೆಯ ಅವಧಿ		ಮುಂಬಡ್ತಿಗೆ ಅರ್ಹವಾದ ವಾಸ್ತವ ದಿನಾಂಕ
				ಅವಧಿ	ಸೇವಾವಧಿ YY/MM/DD	ಅವಧಿ	ಸೇವಾವಧಿ YY/MM/DD	
1	ಜಗದೀಶ ಹೆಚ್ ಕೆ	ಪ್ರಥಮ ದರ್ಜೆ ಸಹಾಕರು	ಹಿರಿಯ ಸಹಾಯಕರು	15-02-2019 To 04-12-2020	01:09:19	01-02-2021 To 27-10-2022	01:08:26	01-02-2024
2	ರಾಜೇಶ ವ	ಪ್ರಥಮ ದರ್ಜೆ ಸಹಾಕರು	ಹಿರಿಯ ಸಹಾಯಕರು	15-02-2019 To 04-12-2020	01:09:19	01-02-2021 To 27-10-2022	01:08:26	01-02-2024
3	ಜಯಪ್ಪ ಸಿ	ಪ್ರಥಮ ದರ್ಜೆ ಸಹಾಕರು	ಹಿರಿಯ ಸಹಾಯಕರು	15-02-2019 To 04-12-2020	01:09:19	01-02-2021 To 27-10-2022	01:08:26	01-02-2024
4	ಸರಸ್ವತಿ ಎಂ	ಪ್ರಥಮ ದರ್ಜೆ ಸಹಾಕರು	ಹಿರಿಯ ಸಹಾಯಕರು	15-02-2019 To 04-12-2020	01:09:19	01-02-2021 To 27-10-2022	01:08:26	01-02-2024
5	ಶೋಭಾ ಎ.ಆರ್	ಪ್ರಥಮ ದರ್ಜೆ ಸಹಾಕರು	ಹಿರಿಯ ಸಹಾಯಕರು	15-02-2019 To 04-12-2020	01:09:19	01-02-2021 To 27-10-2022	01:08:26	01-02-2024
6	ಶ್ರೀಧರ ಎಸ್	ಪ್ರಥಮ ದರ್ಜೆ ಸಹಾಕರು	ಹಿರಿಯ ಸಹಾಯಕರು	15-02-2019 To 04-12-2020	01:09:19	01-02-2021 To 27-10-2022	01:08:26	01-02-2024
7	ತಿಮ್ಮಯ್ಯ ಕೆ	ಪ್ರಥಮ ದರ್ಜೆ ಸಹಾಕರು	ಹಿರಿಯ ಸಹಾಯಕರು	15-02-2019 To 04-12-2020	01:09:19	01-02-2021 To 30-10-2022	01:08:29	01-02-2024
8	ಪೂರ್ಣಿಮಾ	ಪ್ರಥಮ ದರ್ಜೆ ಸಹಾಕರು	ಹಿರಿಯ ಸಹಾಯಕರು	15-02-2019 To 04-12-2020	01:09:19	01-02-2021 To 30-10-2022	01:08:29	01-02-2024
9	ಪುಷ್ಪ ಲತಾ ಎಂ. ಬಿ (371 J)	ಪ್ರಥಮ ದರ್ಜೆ ಸಹಾಕರು	ಹಿರಿಯ ಸಹಾಯಕರು	15-02-2019 To 04-12-2020	01:09:19	01-02-2021 To 27-10-2022	01:08:26	01-02-2024

10	ನಿಂಗರಾಜು (371 J)	ಪ್ರಥಮ ದರ್ಜೆ ಸಹಾಯಕ	ಹಿರಿಯ ಸಹಾಯಕರು	15-02-2019 To 04-12-2020	01-09-19	01-02-2021 To 27-10-2022	01-04-26	01-02-2024

ಮೇಲ್ಕಂಡ ಪ್ರಥಮ ದರ್ಜೆ ಸಹಾಯಕರುಗಳನ್ನು ಹಿರಿಯ ಸಹಾಯಕರುಗಳ ಹುದ್ದೆಗೆ ಮುಂಬಡ್ತಿ ನೀಡಲಾದ ದಿನಾಂಕ:28-10-2022 ರಿಂದ ಅನ್ವಯವಾಗುವಂತೆ ಪರಿಗಣಿಸಿರುವುದನ್ನು ದಿನಾಂಕ:01-02-2024 ರಿಂದ ಹಿರಿಯ ಸಹಾಯಕರ ಹುದ್ದೆಯಲ್ಲಿ ಪರಿಗಣಿಸಿ ವೇತನ ನಿಗದೀಕರಣವನ್ನು ಪರಿಷ್ಕರಿಸಿ ವ್ಯತ್ಯಾಸದ ಮೊತ್ತವನ್ನು ಲೆಕ್ಕಾಚಾರ ಮಾಡಿ ಸಂಬಂಧಪಟ್ಟ ನೌಕರರಿಂದ ವಸೂಲಿಸಿ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:205/ದಿ:06-12-2025 ನ್ನು ನೀಡಲಾಗಿದ್ದು ಯಾವುದೇ ಅನುಪಾಲನೆಯನ್ನು ನೀಡಿರುವುದಿಲ್ಲ.

ಈ ಹಿಂದಿನ ಸಾಲಿನ ವರದಿಗಳಲ್ಲಿ ಸದರಿಯವರಿಗೆ ನೀಡಲಾದ ಮುಂಬಡ್ತಿ ನಿಯಮಬಾಹೀರವಾಗಿರುವುದನ್ನು ಉಲ್ಲೇಖಿಸಿದ್ದರೂ ಈವರೆಏಗೂ ಸದರಿ ಉದ್ಯೋಗಿಗಳ ವೇತನ ಮರು-ನಿಗದಿಪಡಿಸಿ ವ್ಯತ್ಯಾಸದ ಮೊತ್ತವನ್ನು ಸದರಿಯವರಿಂದ ವಸೂಲಿಸಿರುವ ಯಾವುದೇ ಕ್ರಮವನ್ನು ಕೈಗೊಳ್ಳದೇ ಸದರಿ ವೇತನದಲ್ಲಿಯೇ ಮುಂದುವರೆಸಿ 2024-25 ರಲ್ಲಿಯೂ ವೇತನ ಪಾವತಿಸಲಾಗಿರುತ್ತದೆ.

ಸದರಿ ನಿಯಮ ಬಾಹೀರ ಮುಂಬಡ್ತಿಗಳಿಂದ ತೆರವಾದ ಹುದ್ದೆಗಳ ಎದುರು ನೇಮಕವಾಗಿರುವ ಇನ್ನಿತರೇ ವೃಂದದ ಹುದ್ದೆಗಳ ಸಂಬಂಧದ ಮಾಹಿತಿಯು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಸದರಿ ಮುಂಬಡ್ತಿಯಿಂದ ತೆರವಾದ ಹುದ್ದೆಗಳ ಸಂಬಂಧವಾಗಿ ನೀಡಲಾಗಿರುವ ಮುಂಬಡ್ತಿ ವಿವರಗಳು ಹಾಗೂ ಸದರಿಯವರಿಗೆ ನೀಡಲಾಗಿರುವ ಬಡ್ತಿ ದಿನಾಂಕಗಳನ್ನು ಪರಿಷ್ಕರಿಸಿ ವೇತನ ನಿಗದಿಪಡಿಸಿ ವ್ಯತ್ಯಾಸದ ಮೊತ್ತಗಳನ್ನು ಲೆಕ್ಕಚಾರಮಾಡಿ ವಸೂಲಿಸಿ ನಿಧಿಗೆ ಜಮಾ ಮಾಡಿ ಮಾಹಿತಿಯನ್ನು ಹಾಜರುಪಡಿಸುವವರೆಗೆ 2024-25 ನೇ ಸಾಲಿನಲ್ಲಿ ಪಾವತಿಸಲಾದ ಒಟ್ಟು ಮೊತ್ತ **ರೂ.96,69,335/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ವಿವರಗಳನ್ನು **ಅನುಬಂಧ-28**ರಲ್ಲಿ ನೀಡಲಾಗಿದೆ.

33.17 ಕುಲಾಧಿಪತಿಗಳ ಅನುಮೋದನೆ ಪಡೆಯದೆ ವಿವಿಧ ಸ್ವರೂಪದ ತಾತ್ಕಾಲಿಕ ನೌಕರರ ನೇಮಕಾತಿ ಮಾಡಿರುವುದು: (ವಿಚಾರಣಾ ಪತ್ರ ಸಂಖ್ಯೆ:8/ದಿ:25-06-2025 ಹಾಗೂ 105/ದಿ:19-08-2025)

ವಿಶ್ವವಿದ್ಯಾನಿಯದಲ್ಲಿ ಖಾಲಿ ಉಳಿದಿರುವ ಬೋಧಕೇತರ ಹುದ್ದೆಗಳಿಗೆ ಕರಾಮುವಿ ಕಾಯ್ದೆ-1992ರ ಮೊದಲನೇ ಪರಿನಿಯಮ 2(9) iii ಮತ್ತು iv ರಲ್ಲಿ ಪ್ರದತ್ತವಾದ ಅಧಿಕಾರದಂತೆ ಮಾನ್ಯ ಕುಲಪತಿಗಳು 2024-25 ನೇ ಸಾಲಿನಲ್ಲಿ **<u>ತಾತ್ಕಾಲಿಕ ಮತ್ತು ಕಾಲಿಕ ವೇತನ ಶ್ರೇಣಿಯಡಿಯಲ್ಲಿ ನೇಮಕಮಾಡಲಾದ ಹುದ್ದೆಗಳ ವಿವರಗಳನ್ನು ಪ್ರತ್ಯೇಕವಾಗಿ</u>** ಹಾಜರುಪಡಿಸುವುದು ಹಾಗೂ ಸದರಿ ತಾತ್ಕಾಲಿಕ/ಕಾಲಿಕೆ ವೇತನಶ್ರೇಣಿಯಡಿ ನೇಮಕಾತಿಗೆ ಸರ್ಕಾರದ ಆರ್ಥಿಕ ಇಲಾಖೆಯಿಂದ ಪಡೆಯಲಾದ ಅನುಮೋದನಾ ಆದೇಶಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:8/ದಿ:25-06-2025ನ್ನು ನೀಡಲಾಗಿರುತ್ತದೆ. ಅನುವಾಲನಾ ವರದಿಯ ಪತ್ರ ಸಂಖ್ಯೆ: ಕರಾಮುವಿ/ಆಖಿ/ ಸಿಬ್ಬಂದಿ-2/1165/2025-26 ದಿನಾಂಕ:11-11-2025 ರಲ್ಲಿ ಸರ್ಕಾರದಿಂದ ವಿಶ್ವವಿದ್ಯಾನಿಲಯಕ್ಕೆ ಮಂಜೂರಾಗಿರುವ ಖಾಲಿ ಹುದ್ದೆಗಳಿಗೆ ಎದುರಾಗಿ ಯಾವುದೇ ತಾತ್ಕಾಲಿಕ ನೌಕರರನ್ನು ನೇಮಕಾತಿ ಮಾಡಿರುವುದಿಲ್ಲ. ಆದರೆ, ಕರಾಮುವಿ ಕಾಯ್ದೆ-1992ರ ಮೊದಲನೇ ಪರಿನಿಯಮ 2(9) iii ಮತ್ತು iv ರಲ್ಲಿ ಪ್ರದತ್ತವಾದ ಅಧಿಕಾರದಂತೆ ಮಾನ್ಯ ಕುಲಪತಿಗಳು, ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ಕಚೇರಿ/ಪ್ರಾದೇಶಿಕ ಕೇಂದ್ರಗಳ ತುರ್ತು ಸುಸೂತ್ರ ನಿರ್ವಣೆಗಾಗಿ ಕಾಲಿಕ ವೇತನ ಶ್ರೇಣಿ, ಗ್ರೇಡ್‌ಪೇ (+), ಗ್ರೇಡ್‌ಪೇ (-) ಮತ್ತು ತಾತ್ಕಾಲಿಕ ನೌಕರರನ್ನು ನೇಮಿಸಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ ಮಾಹಿತಿಯನ್ವಯ ನೇಮಕ ಮಾಡಿಕೊಂಡಿರುವ ವಿವಿಧ ಸ್ವರೂಪದ ತಾತ್ಕಾಲಿಕ ನೌಕರರ ವಿವರ ಕೆಳಕಂಡಂತಿರುತ್ತವೆ.

ವಿವಿಧ ಸ್ವರೂಪದ ತಾತ್ಕಾಲಿಕ ನೌಕರರ ವಿವರ ಪಟ್ಟಿ

ಕ್ರಮ ಸಂಖ್ಯೆ	ತಾತ್ಕಾಲಿನ ನೌಕರರ ಸ್ವರೂಪ	ತಾತ್ಕಾಲಿನ ನೌಕರರ ವಿವರ	ತಾತ್ಕಾಲಿನ ನೌಕರರ ಸ್ವರೂಪ	ಒಟ್ಟು ನೌಕರರ ಸಂಖ್ಯೆ
1	ಕಾಲಿಕ ವೇತನ ಶ್ರೇಣಿ ನೌಕರರು	ಕಾಲಿಕ ವೇತನ ಶ್ರೇಣಿ	9	9
2	ಗ್ರೇಡೆಡ್‌ಪೇ (ಮನೆಬಾಡಿಗೆ ಸಹಿತ)	ಗ್ರೇಡೆಡ್ ಪೇ ನೌಕರರು (ಮನೆಬಾಡಿಗೆ ಸಹಿತ)	141	
		ಪ್ರಾದೇಶಿಕ ನಿರ್ದೇಶಕರು	17	158
3	ಗ್ರೇಡೆಡ್ ಪೇ ನೌಕರರು (ಮನೆಬಾಡಿಗೆ ರಹಿತ)	ಗ್ರೇಡೆಡ್ ಪೇ ನೌಕರರು (ಮನೆಬಾಡಿಗೆ ರಹಿತ)	56	56
4	ತಾತ್ಕಾಲಿಕ ನೌಕರರು	ತಾತ್ಕಾಲಿಕ ನೌಕರರು	925	
		ಪ್ರಾದೇಶಿಕ ನಿರ್ದೇಶಕರು	24	
		ದೃಶ್ಯ ಮತ್ತು ಸ್ಟುಡಿಯೋ ವಿಭಾಗ	9	
		ಶ್ರವ್ಯ ಸ್ಟುಡಿಯೋ ವಿಭಾಗ	2	960
		ಒಟ್ಟು ಹುದ್ದೆಗಳ ಸಂಖ್ಯೆ:	**1183**	**1183**

ಸದರಿ ಹುದ್ದೆಗಳನ್ನು 2010–12ನೇ ಸಾಲಿನಿಂದ 2024–25ನೇ ಸಾಲಿನವರೆಗಿನ ವಿವಿಧ ವರ್ಷಗಳಲ್ಲಿ ನೇಮಕಾತಿ ಮಾಡಲಾಗಿದ್ದು ಕೆಲವು ಹುದ್ದೆಗಳನ್ನು ಪ್ರತಿ 06 ತಿಂಗಳುಗಳಿಗೆ ಮುಂದುವರೆಸುತ್ತಾ ಬರಲಾಗಿದೆ.

ತಾತ್ಕಾಲಿಕವಾಗಿ ನೇಮಕ ಮಾಡಲಾಗಿರುವ, ವಿವಿಧ ಸ್ವರೂಪದ ನೇಮಕಾತಿಗಳ ಘೋಷ್ವಾರೆ						
ಕ್ರಮ ಸಂಖ್ಯೆ	ವಿವರ	ತಾತ್ಕಾಲಿಕ ನೌಕರರು	ಕಾಲಿಕ ವೇತನ ನೌಕರರು	ಗ್ರೇಡೆಡ್ ಪೇ (ಮನೆಬಾಡಿಗೆ ಸಹಿತ)	ಗ್ರೇಡೆಡ್ ಪೇ (ಮನೆಬಾಡಿಗೆ ರಹಿತ)	ಒಟ್ಟು
1	ಮಂಜೂರಾದ ಪದನಾಮ	880	9	152	52	1093
2	ಮಂಜೂರಾತಿ ಇಲ್ಲದ ಪದನಾಮ	80	0	6	4	90
	ಒಟ್ಟು ಹುದ್ದೆಗಳು	**960**	**9**	**158**	**56**	**1183**

ಸದರಿ ತಾತ್ಕಾಲಿಕ ಹುದ್ದೆಗಳನ್ನು ಮಂಜೂರಾದ ಪದನಾಮ ಎದುರು ಪರಿಗಣಿಸಿದಾಗ **1093** ಹುದ್ದೆಗಳು, ಹಾಗೂ ಉಳಿದ **90** ಪದನಾಮಗಳು ಇಲ್ಲದ ಹುದ್ದೆಗಳು ಒಳಗೊಂಡಂತೆ ಒಟ್ಟು **1183** ಹುದ್ದೆಗಳನ್ನು ತಾತ್ಕಾಲಿಕ ನೆಲೆಯಲ್ಲಿ ಭರ್ತಿ ಮಾಡಲಾಗಿರುತ್ತದೆ. ವಿವಿಧ ತಾತ್ಕಾಲಿಕ ನೇಮಕಾತಿ ಹುದ್ದೆಗಳನ್ನು ಆಯಾ ಪದನಾಮಗಳ ಎದುರು ಪರಿಗಣಿಸಿ ಲೆಕ್ಕಾಚಾರ ಮಾಡಿದಲ್ಲಿ, ಮಂಜೂರಾದ **343** ಹುದ್ದೆಗಳಲ್ಲಿ ಖಾಲಿ ಇರುವ **226** ಹುದ್ದೆಗಳ ಎದುರಾಗಿ ಒಟ್ಟು **1183** ಹುದ್ದೆಗಳನ್ನು ನೇಮಕಾತಿ ಮಾಡಿಕೊಲ್ಲಾಗಿರುತ್ತದೆ. ನೇಮಕಾತಿ ಮಾಡಿಕೊಳ್ಳಲು ಅವಕಾಶವಿದ್ದ ಸಂಖ್ಯೆಗಳಿಗಿಂತ ಒಟ್ಟು **957** ಹುದ್ದೆಗಳನ್ನು ಹೆಚ್ಚುವರಿಯಾಗಿ ನೇಮಕ ಮಾಡಿಕೊಳ್ಳಾಗಿರುತ್ತದೆ. ಘೋಷ್ವಾರೆ ವಿವರಗಳು ಕೆಳಕಂಡಂತಿರುತ್ತವೆ.

ಕ್ರಮ ಸಂಖ್ಯೆ	ಹುದ್ದೆಯ ಗುಂಪು & ಪದನಾಮ	ಗುಂಪಿನ	ಮಂಜೂರಾದ ಹುದ್ದೆಗಳು			ತಾತ್ಕಾಲಿನ ನೌಕರರ ನೇಮಕಾತಿ ವಿವಿಧ ಸ್ವರೂಪವಾರು ವಿವರ					ಹುದ್ದೆಗಳಿಗಿಂತ ಹೆಚ್ಚುವರಿ ನೇಮಕಾತಿ
			ಮಂಜೂರಾದ ಹುದ್ದೆಗಳು	ಭರ್ತಿ ಮಾಡಲಾದ ಹುದ್ದೆಗಳು	ಖಾಲಿ ಇರುವ ಹುದ್ದೆಗಳು	Temporary	Time Scale	Graded Pay (+HRA)	Graded Pay (–HRA)	ತಾತ್ಕಾಲಿಕ ನೇಮಕಾತಿ ಒಟ್ಟು ಹುದ್ದೆಗಳು	

					(4-5)					(7:10)	(6-1)
1	2	3	4	5	6	7	8	9	10	11	12
1	ಮಂಜೂರಾತಿ ಇರಿಯುವ ಹುದ್ದೆಗಳಲ್ಲಿನ ನೇಮಕಾತಿ	A,B,C,D	343	117	226	880	9	152	52	1093	-867
2	ಮಂಜೂರಾತಿ ಇಲ್ಲದ ಒಟ್ಟು ಹುದ್ದೆಗಳು	-	0	0	0	80	0	6	4	90	-90
ಒಟ್ಟು			343	117	226	960	9	158	56	1183	-957

ಸಮೂಹವಾರು, ಹುದ್ದೆವಾರು ವಿವಿಧ ತಾತ್ಕಾಲಿಕ ನೌಕರರ ವಿವರಗಳನ್ನು ಅನುಬಂಧ-29 ರಲ್ಲಿ ಹಾಗೂ 2018-19 ನೇ ಸಾಲಿನಿಂದ 2024-25ನೇ ಸಾಲಿನವರೆಗೆ ತಾತ್ಕಾಲಿಕ ನೌಕರರ ನೇಮಕಾತಿ ವಿವರಗಳನ್ನು ಅನುಬಂಧ 29 (ಎ) ರಲ್ಲಿ ವಿವರಿಸಿದೆ.

ಮೇಲ್ಕಂಡ ವಿವರಗಳಂತೆ ವಿಶ್ವವಿದ್ಯಾನಿಲಯಕ್ಕೆ ಮಂಜೂರಾಗಿರುವ ಹುದ್ದೆಗಳ ಎದುರಾಗಿ ಭರ್ತಿ ಮಾಡದೆ ಖಾಲಿ ಹುದ್ದೆಗಳ ಎದುರಾಗಿ ತಾತ್ಕಾಲಿಕ ನೌಕರರನ್ನು ನೇಮಕ ಮಾಡಿಕೊಳ್ಳುವುದು ಕ್ರಮವಾಗಿರುತ್ತದೆ. ಆದರೆ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಹುದ್ದೆಗಳ ಎದುರಾಗಿ ತಾತ್ಕಾಲಿಕ ನೇಮಕಾತಿ ಮಾಡಿಕೊಳ್ಳದೇ, ಕರಾಮುವಿ ಕಾಯ್ದೆ-1992ರ ಮೊದಲನೇ ಪರಿನಿಯಮ 2(9)iii ಮತ್ತು iv ರಲ್ಲಿ ಪ್ರದತ್ತವಾದ ಅಧಿಕಾರದಂತೆ ಮಾನ್ಯ ಕುಲಪತಿಗಳು ವ್ಯವಸ್ಥಾಪನಾ ಮಂಡಳಿಯ ಅನುಮೋಧನೆಯಂತೆ ವಿವಿಧ ಸ್ವರೂಪದ ತಾತ್ಕಾಲಿಕ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ.

ಸದರಿ ಕಾಲಿಕವೇತನ ಶ್ರೇಣಿ ನೌಕರರು, ಗ್ರೇಡೆಡ್ ಪೇ-ಮನೆಬಾಡಿಗೆ ಸಹಿತ, ಗ್ರೇಡೆಡ್ ಪೇ-ಮನೆಬಾಡಿಗೆ ರಹಿತ ಮತ್ತು ತಾತ್ಕಾಲಿಕ ನೌಕರರ ಸಂಬಂಧವಾಗಿ ವಿವಿಧ ರೀತಿಯಲ್ಲಿ ವೇತನ, ಇತರೇ ಭತ್ಯೆಗಳು ಮತ್ತು ಆರ್ಥಿಕ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಕರ್ನಾಟಕ ನಾಗರೀಕ ಸೇವಾ ನಿಯಮ-112, 114 ಮತ್ತು 118 ರಂತೆ ಕ್ರಮವಾಗಿ ಗಳಿಕೆ ರಜೆ, ಪರಿವರ್ತಿತ ರಜೆ, ಮತ್ತು ಗಳಿಕೆ ರಜೆ ನಗದೀಕರಣ ಸೌಲಭ್ಯವನ್ನು ನಿಯಮಬಾಹೀರವಾಗಿ ವಿಸ್ತರಿಸಲಾಗಿರುತ್ತದೆ.

ನೇಮಕಾತಿ ಪ್ರಾಧಿಕಾರ, ವೇತನ ನಿಗಧಿ ಪ್ರಾಧಿಕಾರ, ನೀಡಲಾಗಿರುವ ಆರ್ಥಿಕ ಸೌಲಭ್ಯಗಳು ಮತ್ತು ಸೇವಾ ಷರತ್ತುಗಳ ವಿವರಗಳನ್ನು ಸ್ವರೂಪವಾರು ತಾತ್ಕಾಲಿಕ ಹುದ್ದೆಗಳನ್ನಯ ವಿವರಿಸಿ ಅನುಬಂಧ-30ರಲ್ಲಿ ನಮೂದಿಸಲಾಗಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಾಯಿದೆ-1994, ಅಧ್ಯಾಯ-V ನಿಯಮ-22 (ಡಿ)ರಲ್ಲಿ ವಿಶ್ವವಿದ್ಯಾನಿಲಯದ ಉಪಾಧ್ಯಾಯರು ಮತ್ತು ಇತರ ಉದ್ಯೋಗಿಗಳ ನೇಮಕಾತಿ, ಅವರ ಉಪಲಬ್ಧಿಗಳು ಮತ್ತು ಅವರ ಸೇವಾ ಷರತ್ತುಗಳ ಸಂಬಂಧವಾಗಿ ಸೂಕ್ತ ಪರಿನಿಯಮಗಳನ್ನು ರೂಪಿಸುವುದನ್ನು ಅಗತ್ಯಪಡಿಸಿರುತ್ತದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಾಯಿದೆ-1994, ಅಧ್ಯಾಯ-V ನಿಯಮ-23 (4) ರಲ್ಲಿ ಹೊಸ ಪರಿನಿಯಮ ಅಥವಾ ಈಗಿರುವ ಪರಿನಿಯಮಕ್ಕೆ ತಿದ್ದುಪಡಿ ಮಾಡಿ ಅಥವಾ ನಿರಸನಗೊಳಿಸಿ ಮಾಡಲಾದ ಪರಿನಿಯಮವು ಅದಕ್ಕೆ ಕುಲಾಧಿಪತಿಯವರಿಂದ ಒಪ್ಪಿಗೆ ದೊರೆಯದ ಹೊರತು ಮಾನ್ಯವಾಗತಕ್ಕುದಲ್ಲ, ಎಂಬುದನ್ನು ಅಗತ್ಯಪಡಿಸಿರುತ್ತದೆ.

ಮೇಲ್ಕಂಡ ಅಧಿನಿಯಮದಲ್ಲಿ ಅಗತ್ಯಪಡಿಸಿರುವಂತೆ ತಾತ್ಕಾಲಿಕ ನೌಕರರ ಸಂಬಂಧವಾಗಿ ಯಾವುದೇ ಪರಿನಿಯಮವನ್ನು ರೂಪಿಸಿರುವುದಿಲ್ಲ ಹಾಗೂ ಸದರಿ ವಿವಿಧ ಸ್ವರೂಪದ ತಾತ್ಕಾಲಿಕ ನೌಕರರ ಸಂಬಂಧವಾಗಿ ನೇಮಕಾತಿ, ಉಪಲಬ್ಧಿಗಳು ಮತ್ತು ಅವರ ಸೇವಾ ಷರತ್ತುಗಳ ಸಂಬಂಧ ಯಾವುದೇ ಪರಿನಿಯಮವನ್ನು ಮಾನ್ಯ ಕುಲಾದಿಪತಿಗಳಿಂದ ಅನುಮೋದನೆ ಪಡೆಯದೆ ಮಾನ್ಯ ಕುಲಪತಿಗಳ ಆದೇಶದಂತೆ ವಿವಿಧ ತಾತ್ಕಾಲಿಕ ನೇಮಕಾತಿಗಳನ್ನು ಮಾಡಿಕೊಂಡು ವಿವಿಧ ರೀತಿಯ ವೇತನಗಳು, ವಿವಿಧ ರೀತಿಯ ಆರ್ಥಿಕ ಸೌಲಭ್ಯಗಳು ಹಾಗೂ ವಿವಿಧ ರೀತಿಯ ರಜಾ ಸೌಲಭ್ಯಗಳು ಹಾಗೂ ವಿವಿಧ ರೀತಿಯ ಪಿಎಫ್, ಇಎಸ್‌ಐ ಹಾಗೂ ಇತರೇ ಸೌಲಭ್ಯಗಳನ್ನು ಪಾವತಿಸಲಾಗುತ್ತಿದೆ. ಒಟ್ಟು 08 ಸ್ವರೂಪದ ವೇತನ ಮತ್ತು ಇತರ ಆರ್ಥಿಕ ಹಾಗೂ ಸೇವಾ ಸೌಲಭ್ಯಗಳನ್ನು ನೀಡಲಾಗಿರುತ್ತದೆ. ಹಾಗೂ ಈ

ಹಿಂದಿನ ಸಾಲುಗಳಲ್ಲಿ ಸದರಿ ವಿವಿಧ ಸ್ವರೂಪದ ತಾತ್ಕಾಲಿಕ ನೌಕರರಲ್ಲಿ ತಾತ್ಕಾಲಿಕ ನೌಕರರನ್ನು ಗ್ರೇಡೆಡ್ ಪೇ ನೌಕರರಾಗಿ ಪರಿವರ್ತಿಸುವುದು. ತಾತ್ಕಾಲಿಕ ನೌಕರರ ಹುದ್ದೆಗಳನ್ನು ಒಂದು ಹುದ್ದೆಯಿಂದ ಮುಂದಿನ ಹುದ್ದೆಗಳಿಗೆ ಪರಿವರ್ತಿಸಿ (ಪದನಾಮ ಬದಲಾವಣೆ) ವೇತನ ಸೌಲಭ್ಯಗಳನ್ನು ಪಾವತಿಸಲಾಗುತ್ತಿದೆ.

ನಿಯಮಾನುಸಾರ ಸಿ ಮತ್ತು ಡಿ ಸಮೂಹದ ಗುಂಪಿನ ಹುದ್ದೆಗಳಿಗೆ ತಾತ್ಕಾಲಿಕವಾಗಿ ನೇಮಕ ಮಾಡಬಹುದಾಗಿದ್ದು ಸಮೂಹ ಎ ಮತ್ತು ಬಿ ವರ್ಗದ ಹುದ್ದೆಗಳನ್ನು ತಾತ್ಕಾಲಿಕವಾಗಿ ನೇಮಕಮಾಡುವುದು ವಿಶ್ವವಿದ್ಯಾನಿಲಯದ ರಹಸ್ಯ, ಗೌಪ್ಯತೆ, ವಸ್ತುನಿಷ್ಠತೆ, ದಕ್ಷತೆ, ಗುಣಮಟ್ಟ ಹಾಗೂ ಪ್ರಾಮಾಣಿಕತೆಗಳನ್ನು ಕಾಯ್ದುಕೊಳ್ಳುವುದು ಪ್ರಶ್ನಾರ್ಹವಾಗುತ್ತದೆ.

ಸದರಿ ತಾತ್ಕಾಲಿಕ ನೇಮಕಾತಿಗಳ ಸಂಬಂಧವಾಗಿ ಈ ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ನಿಯಮ ಉಲ್ಲಂಘಿಸಿ ನೇಮಕಾತಿ ಮಾಡಿರುವ ಸವಿವರವಾಗಿ ಉಲ್ಲೇಖಿಸಲಾಗಿರುತ್ತದೆ.

2024–25ನೇ ಸಾಲಿನಲ್ಲಿಯೂ ಕೆಳಕಂಡಂತೆ ಹೊಸದಾಗಿ ತಾತ್ಕಾಲಿಕ ನೌಕರರನ್ನು ನೇಮಕ ಮಾಡಲಾಗಿರುತ್ತದೆ.

ಕ್ರ.ಸಂ	ಹುದ್ದೆಗಳ ವಿವರ	ನೇಮಕ ಮಾಡಲಾಗಿರುವ ಒಟ್ಟು ಹುದ್ದೆಗಳು
1	ಅಟೆಂಡರ್	66
2	ಕಂಪ್ಯೂಟರ್‌ಪ್ರೋಗ್ರಾಮರ್	1
3	ಡಾಟಾ ಎಂಟ್ರಿ ಆಪರೇಟರ್	69
4	ಡಾಕ್ಟರ್	1
5	ಡ್ರೈವರ್	2
6	ಗಾರ್ಡನರ್	3
7	ಸೇವಕರು	37
8	ದ್ವಿತೀಯ ದರ್ಜೆ ಸಹಾಯಕರು	82
9	ಸಿಸ್ಟಂ ಎಂಜಿನಿಯರ್	1
	ಒಟ್ಟು ಹುದ್ದೆಗಳು	**262**
	ಸರ್ಕಾರದಿಂದ ಮಂಜೂರಾಗದಿರುವ ಹುದ್ದೆಗಳು	
1	ಸಹಾಯಕ ಅಭಿಯಂತರರು	2
2	ಲ್ಯಾಬ್ ಅಸಿಸ್ಟೆಂಟ್	1
3	ಸ್ಕ್ಯಾವೆಂಜರ್	2
	ಒಟ್ಟು ಹುದ್ದೆಗಳು	**5**
ಒಟ್ಟು ತಾತ್ಕಾಲಿಕ ನೇಮಕಾತಿ ಹುದ್ದೆಗಳು		**267**

ಮೇಲ್ಕಂಡ ನೇಮಕಾತಿಗಳ ಸಂಬಂಧವಾಗಿ ಕರಾಮುವಿ ಕಾಯ್ದೆ–1992ರ ಅಧಿನಿಯಮ ಸಂಖ್ಯೆ:22 (ಡಿ) ಮತ್ತು ಅಧಿನಿಯಮ ಸಂಖ್ಯೆ:23 (4)ರನ್ವಯ ತಾತ್ಕಾಲಿಕ ನೌಕರರ ನೇಮಕಾತಿಗೆ ಸಂಬಂಧಪಟ್ಟಂತೆ ಉದ್ಯೋಗಿಗಳ ನೇಮಕಾತಿ, ಅವರ ಉಪಲಬ್ಧಿಗಳು ಮತ್ತು ಅವರ ಸೇವಾ ಷರತ್ತುಗಳನ್ನು ಒಳಗೊಂಡ ಪರಿನಿಯಮಕ್ಕೆ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ.

ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 145 ಯುಎನ್‌ಇ 2021 ದಿನಾಂಕ:06-04-2021ರಲ್ಲಿನ ಸರ್ಕಾರದ ಸೂಚನೆಯಂತೆ ಸರ್ಕಾರದ ಪೂರ್ವಾನುಮೋದನೆ ಪಡೆಯದ ಹೊರತು ಯಾವುದೇ ತಾತ್ಕಾಲಿಕ ಹುದ್ದೆಗಳ ನೇಮಕಾತಿ ಮಾಡಿಕೊಳ್ಳುವಂತಿಲ್ಲ.

ಕರಾಮುಏ ಕಾಯ್ದೆ-1992ರ ಮೊದಲನೇ ಪರಿನಿಯಮ ಎರಡನೇ ಅನುಸೂಚಿ 8(2)(i) ರಲ್ಲಿ ಅಗತ್ಯಪಡಿಸಿರುವಂತೆ ಹಣಕಾಸು ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸಿದ ತರುವಾಯ, ಅಡಳಿತಾತ್ಮಕ, ಲಿಪಿಕ ಮತ್ತು ಇತರ ಅವಶ್ಯಕ ಹುದ್ದೆಗಳನ್ನು ಸೃಜಿಸುವುದು ಮತ್ತು ಅದರ ನೇಮಕಾತಿ ರೀತಿಯನ್ನು ನಿರ್ದಿಷ್ಟಪಡಿಸಿರುವಂತೆ ಹಣಕಾಸು ಸಮಿತಿಯಿಂದ ಪಡೆಯಲಾದ ಶಿಫಾರಸ್ಸು ವಿವರಗಳನ್ನು ಪಡೆಯುವಲ್ಲಿ ಕೈಗೊಂಡ ಕ್ರಮದ ವಿವರಗಳು ಹಾಗೂ ಶಿಫಾರಸ್ಸು ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವುದು ಒಳಗೊಂಡಂತೆ ಉಲ್ಲೇಖಿತ ಅಧಿನಿಯಮ ಮತ್ತು ಸರ್ಕಾರದ ಸುತ್ತೋಲೆಯಲ್ಲಿನ ಸೂಚನೆಯಗಳನ್ನು ಪಾಲಿಸುವ ಕ್ರಮದಲ್ಲಿ ನೇಮಿಸಿಕೊಳ್ಳಲಾದ ಒಟ್ಟು 267 ಹುದ್ದೆಗಳ ನೇಮಕಾತಿಗೆ ಸಂಬಂಧವಾಗಿ ಈ ಕೆಳಕಂಡ ಮಾಹಿತಿಗಳು ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:105/ವಿ:19-08-2025 ನೀಡಿತ್ತು.

- 2024-25 ನೇ ಶೈಕ್ಷಣಿಕ ಅವಧಿಗೆ ನೇಮಿಸಿಕೊಳ್ಳಲಾದ ಒಟ್ಟು 267 ಹುದ್ದೆಗಳ ನೇಮಕಾತಿ ಅಗತ್ಯತೆಯ ಸಂಬಂಧವಾಗಿ ವಿವಿಧ ಶಾಖೆಗಳಿಂದ ಪಡೆಯಲಾದ "ಹೆಚ್ಚುವರಿ ಕಾರ್ಯಭಾರ" ಕ್ಕೆ ಸಂಬಂಧ ಪಟ್ಟಂತೆ ಅಗತ್ಯ ವಿರುವ ಸಿಬ್ಬಂದಿಗಳ ಸಂಖ್ಯೆ ಮತ್ತು ಹುದ್ದೆಗಳಿಗೆ ಸಂಬಂಧಪಟ್ಟಂತೆ ವಿವರಗಳು.
- ವ್ಯವಸ್ಥಾಪನಾ ಮಂಡಳಿಯಿಂದ ಪಡೆಯಲಾದ ಅನುಮೋದನೆ ವಾಖಲೆಗಳು.
- ನೇಮಕಾತಿ ಸಂಬಂಧವಾಗಿ ಸಾರ್ವಜನಿಕವಾಗಿ ಪ್ರಕಟಿಸಲಾದ ಪ್ರಕಟಣೆ ಹಾಗೂ ಪ್ರಕಟಣೆಯನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾದ ಸಂಬಂಧ ಮಾಹಿತಿ.
- ಪ್ರತಿ ತಾತ್ಕಾಲಿಕ ಹುದ್ದೆಗೆ ನಿಗದಿಪಡಿಸಲಾದ ಕನಿಷ್ಠ ವಿದ್ಯಾರ್ಹತೆ, ಹಾಗೂ ಮಾಹೆವಾರು ಸಂಚಿತ ವೇತನ, ಗೌರವ ಸಂಧಾವನೆ, ಕ್ರೋಢೀಕೃತ ವೇತನಗಳ ವಿವರ.
- ನಿಗದಿಪಡಿಸಿರುವ ಇತರೇ ಹೆಚ್ಚುವರಿ ತಾಂತ್ರಿಕ ಜ್ಞಾನದ ವಿವರಗಳು.
- ಕಾರ್ಯಾನುಭವಕ್ಕೆ ವಿಧಿಸಲಾಗಿರುವ ಷರತ್ತುಗಳು.
- ನೀಡಲಾಗುವ ವೇತನ ಭತ್ಯೆಗಳು ಹಾಗೂ ಇತರೇ ಸೇವಾ ಸೌಲಭ್ಯಗಳ ಮಾಹಿತಿ.
- ತಾತ್ಕಾಲಿಕ ನೇಮಕಾತಿಯ ಇತರೇ ಷರತ್ತು ಅಥವಾ ನಿಬಂಧನೆಗಳ ಮಾಹಿತಿ.
- ತಾತ್ಕಾಲಿಕ ನೇಮಕಾತಿಯಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ಪಿಆಸು ಇ 39 ಹೈಕಕೋ 2018 ಬೆಂಗಳೂರು ದಿನಾಂಕ: 21-06-2018 ರ ರೀತ್ಯ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಮೀಸಲು ಹುದ್ದೆಗಳ ಆದೇಶಗಳು.
- ಒಟ್ಟು 267 ತಾತ್ಕಾಲಿಕ ಹುದ್ದೆಗಳ ನೇಮಕಾತಿಯಲ್ಲಿ ಪಾಲಿಸಬೇಕಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸರ್ಕಾರದ ಅಧಿನಿಯಮ The Karnataka Scheduled Castes. Scheduled Tribes and other Back ward Classes (Reservation of Appointment Etc) Act-1990 – Section –3(c) ರಲ್ಲಿ ಅಗತ್ಯಪಡಿಸಿರುವಂತೆ ತಾತ್ಕಾಲಿಕ ನೇಮಕಾತಿಗಳಲ್ಲಿಯೂ ಎಸ್ಸಿ/ಎಸ್ಟಿ ವರ್ಗದವರಿಗೆ ನಿಯಮಾನುಸಾರ ಮೀಸಲಿರಿಸಿ ಭರ್ತಿ ಮಾಡಲಾದ ಹುದ್ದೆಗಳ ವಿವರಗಳು.
- ತಾತ್ಕಾಲಿಕ ನೇಮಕಾತಿಗೆ ರಚಿಸಲಾದ "ನೇಮಕಾತಿ ಪ್ರಾಧಿಕಾರ"ವು ಒಳಗೊಂಡ ಅಧ್ಯಕ್ಷರು, ಕಾರ್ಯದರ್ಶಿಗಳು, ಸದಸ್ಯರುಗಳು ಹಾಗೂ ಇತರೇ ಸದಸ್ಯರ ಹಾಗೂ ನೇಮಕಾತಿ ಆದೇಶದ ಮಾಹಿತಿ.
- ನೇಮಕಾತಿಯ ಸ್ವರೂಪಗಳಾದ ನೇರ ನೇಮಕಾತಿ ಅಥವಾ ಸಂದರ್ಶನ ಆಧಾರಿತ ನೇಮಕಾತಿ ಅಥವಾ ಮೆರಿಟ್ ಆಧಾರದ ಸಂಬಂಧ ಮಾಹಿತಿ.
- ನೇಮಕಾತಿಗೆ ಅರ್ಜಿ ಸಲ್ಲಿಸುವ ಅವಧಿ, ಅಂತಿಮ ಪಟ್ಟಿ ಪ್ರಕಟಣೆ, ಸಾರ್ವಜನಿಕರಿಂದ ಸ್ವೀಕರಿಸಲಾದ ಆಕ್ಷೇಪಣೆಗಳ ಸಂಬಂಧ ಮಾಹಿತಿ.
- ತಾತ್ಕಾಲಿಕ ನೌಕರರ ನೇಮಕಾತಿಗೆ ನಿಗದಿಪಡಿಸಲಾದ ಅರ್ಜಿನಮೂನೆ ಹಾಗೂ ಪಡೆದಿರುವ ದಾಖಲೆಗಳ ಕಡತಗಳ ಮಾಹಿತಿ.

- ತಾತ್ಕಾಲಿನ ನೌಕರನ್ನು ನೇಮಕಾತಿ ಮಾಡಿರುವ ದಿನಾಂಕ ಹಾಗೂ ನೌಕರರ ವಾಸ್ತವಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕಗಳ ಮಾಹಿತಿ.
- ತಾತ್ಕಾಲಿಕ ನೇಮಕಾತಿಯು ಶುದ್ದ "ತಾತ್ಕಾಲಿಕವಾಗಿರುವ" ಬಗ್ಗೆ ಉದ್ಯೋಗಿಗಳಿಗೆ ಮನವರಿಕೆಯಾಗಿರುವ ಮಾಹಿತಿ.
- ತಾತ್ಕಾಲಿಕ ನೇಮಕಾತಿಯು ಪಾರದರ್ಶಕ ಹಾಗೂ ನ್ಯಾಯ ಸಮ್ಮತ ನಡೆದಿರುವುದನ್ನು ಸಮರ್ಥಿಸಲು ಅಳವಡಿಸಿಕೊಂಡಿರುವ ಕ್ರಮಗಳ ಮಾಹಿತಿ. ಈ ವಿಚಾರಣಾ ಪತ್ರಕ್ಕೆ ಯಾವುದೇ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ಇದರಿಂದಾಗಿ ನೇಮಕವಾದ ವಿವಿಧ ನೌಕರರರಿಗೆ ಯಾವ ಹುದ್ದೆಗೆ ಯಾವ ವಿದ್ಯಾರ್ಹತೆ ಪಡೆಯಬೇಕಾದ ಶ್ರೇಣಿ ಅಥವಾ ಪಡೆಯಬೇಕಾಗಿರುವ ಅನುಭವಗಳು, ವೇತನ ಭತ್ಯೆಗಳ ಸ್ವರೂಪ, ಸೇವಾ ಸೌಲಭ್ಯಗಳ ವಿವರಗಳು ಷರತ್ತುಗಳನ್ನು ಅಧಿಕೃತವಾಗಿ ಘೋಷಿಸಿರುವ ವಿವರಗಳು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.

ಈಗಾಗಲೇ ನೇಮಕವಾಗಿರುವ ತಾತ್ಕಾಲಿಕ ನೌಕರರ ಭೌತಿಕ ಮತ್ತು ಮಾನಸಿಕ ಸ್ಥಿತಿಗತಿಗಳ ಪರಿಶೀಲನೆ ನಡೆಸಿರುವ ವಿವರಗಳು ಲೆಕ್ಕಪರಿಶೋಧನೆಗೆ ಲಭ್ಯವಾಗಿರುವುದಿಲ್ಲ. ಇದರಿಂದಾಗಿ ತಾತ್ಕಾಲಿಕ ನೇಮಕಾತಿಯಲ್ಲಿ ವಿದ್ಯಾರ್ಹತೆ, ತಾಂತ್ರಿಕ ಕೌಶಲ್ಯ, ಅನುಭವಗಳನ್ನು ಪರಿಗಣಿಸಿ ನೇಮಕಾತಿ ಮಾಡಿಕೊಂಡಿರುವ ಯಾವುದೇ ಮಾಹಿತಿಗಳು ಲೆಕ್ಕಪರಿಶೋಧನೆಗೆ ಲಭ್ಯವಾಗಿರುವುದಿಲ್ಲ. ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಹುದ್ದೆಗಳನ್ನು ಪರಿನಿಯಮಗಳ ಮೂಲಕ ಸೃಜಿಸಿ ಕುಲಾಧಿಪತಿಗಳಿಂದ ಅನುಮೋದನೆ ಪಡೆದು, ಅವುಗಳನ್ನು ಭರ್ತಿ ಮಾಡುವ ಕ್ರಮದಲ್ಲಿ ಖಾಯಂ ನೇಮಕಾತಿ ಅಥವಾ ತಾತ್ಕಾಲಿಕ ನೇಮಕಾತಿ ಸ್ವರೂಪಗಳನ್ನು ವಿಸ್ತೃತವಾಗಿ ರಚಿಸಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳುವುದು ಕ್ರಮವಾಗಿರುತ್ತದೆ.

ಕರಾಮುವಿ ಕಾಯ್ದೆ–1992ರ ಮೊದಲನೇ ಪರಿನಿಯಮ ಎರಡನೇ ಅನುಸೂಚಿ 8(2)(i) ರಲ್ಲಿ ಅಗತ್ಯಪಡಿಸಿರುವಂತೆ ಹಣಕಾಸು ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸಿದ ತರುವಾಯ, ಆಡಳಿತಾತ್ಮಕ, ಲಿಪಿಕ ಮತ್ತು ಇತರ ಅವಶ್ಯಕ ಹುದ್ದೆಗಳನ್ನು ಸೃಜಿಸುವುದು ಮತ್ತು ಅದರ ನೇಮಕಾತಿ ರೀತಿಯನ್ನು ನಿರ್ದಿಷ್ಟಪಡಿಸಿರುವಂತೆ ಹಣಕಾಸು ಸಮಿತಿಯಿಂದ ಶಿಫಾರಸ್ಸು ಪಡೆದಿರುವುದಿಲ್ಲ.

ಕರಾಮುವಿ ಕಾಯ್ದೆ–1992ರ ಮೊದಲನೇ ಪರಿನಿಯಮ 2(9)iii ಮತ್ತು iv.ರ ಅಧಿನಿಯಮದಂತೆ ಕುಲಪತಿಗಳಿಗೆ ಅರ್ಜಿತವಾಗಿರುವ ಅಧಿಕಾರವು "**ಯಾವುದೇ ಹುದ್ದೆಗೆ ಯಾವುದೇ ಸಂಖ್ಯೆಯ ಹುದ್ದೆಗಳಿಗೆ ಒಂದು ಬಾರಿ (One time) ಮಾತ್ರ ತಾತ್ಕಾಲಿಕವಾಗಿ ನೇಮಕ**" ಮಾಡಿಕೊಳ್ಳಬಹುದಾಗಿದ್ದು, ಸುಮಾರು ಸರಾಸರಿ 5 ವರ್ಷದಿಂದ ಮುಂದುವರೆಸುತ್ತಾ ಬಂದಿರುವುದು, ಕರಾಮುವಿ ಕಾಯ್ದೆ–1992ರ ಮೊದಲನೇ ಪರಿನಿಯಮ 2(9)iii ಮತ್ತು iv.ರ **ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ.** ಸದರಿ ಅಧಿನಿಯಮದ ಅಧಿಕಾರವನ್ನು "**ತಪ್ಪಾಗಿ ಅರ್ಥೈಸಿಕೊಂಡು**" ತಾತ್ಕಾಲಿಕ/ಕಾಲಿಕ/ ಗ್ರೇಡೆಡ್‌ಪೇ ನೌಕರರನ್ನು ನಿಯಮ ಉಲ್ಲಂಘಿಸಿ ಮುಂದುವರೆಸುತ್ತಿರುವುದು ಕೂಡ ನಿಯಮ ಬಾಹೀರವಾಗಿರುತ್ತೆ.

ನಿಯಮ ಬಾಹಿರ ನೇಮಕಾತಿ ಹಾಗೂ ಮುಂದುವರೆಸಿರುವ ಸಂಬಂಧವಾಗಿ ಪಾವತಿಸಿರುವ ಮೊತ್ತಗಳ ವಿವರಗಳು ಕೆಳಕಂಡಂತಿರುತ್ತವೆ.

ಕ್ರಮ ಸಂಖ್ಯೆ	ತಾತ್ಕಾಲಿಕ ನೇಮಕಾತಿಯ ಸ್ವರೂಪ	ನೌಕರರ ಸಂಖ್ಯೆ	2024–25ನೇ ಸಾಲಿನಲ್ಲಿ ಪಾವತಿಸಲಾದ ಒಟ್ಟು ಮೊತ್ತ ರೂ.	ಒಟ್ಟು ಮೊತ್ತ ರೂ.	ವಿವರಿಸಿರುವ ಅನುಬಂಧ ಸಂಖ್ಯೆ
1	ಕಾಲಿಕ ವೇತನ ಶ್ರೇಣಿ ನೌಕರರು	9	53,88,372		ಅನುಬಂಧ – 31
2	ಗ್ರೇಡೆಡ್‌ಪೇ (ಮನೆಬಾಡಿಗೆ ಸಹಿತ)	141	5,41,36,525		ಅನುಬಂಧ –32
3	ಪ್ರಾದೇಶಿಕ ನಿರ್ದೇಶಕರು (ಗ್ರೇಡೆಡ್‌ಪೇ)	17	2,39,83,197		ಅನುಬಂಧ – 33
4	ಗ್ರೇಡೆಡ್ ಪೇ ನೌಕರರು (ಮನೆಬಾಡಿಗೆ ರಹಿತ)	56	2,05,05,310		ಅನುಬಂಧ – 34
5	ತಾತ್ಕಾಲಿಕ ನೌಕರರು	925	13,80,08,520		ಅನುಬಂಧ – 35
6	ಪ್ರಾದೇಶಿಕ ನಿರ್ದೇಶಕರು (ತಾತ್ಕಾಲಿಕ)	24	1,15,13,632		ಅನುಬಂಧ – 35

7	ದೃಶ್ಯ ಮತ್ತು ಸ್ಟುಡಿಯೋ ವಿಭಾಗ	9	33,77,261		ಅನುಬಂಧ – 35
8	ಶ್ರವ್ಯ ಸ್ಟುಡಿಯೋ ವಿಭಾಗ	2	3,77,133		ಅನುಬಂಧ – 35
	ಒಟ್ಟು ಪಾವತಿ ಮೊತ್ತ ರೂ.	**1183**	**25,72,89,950**		

ಅಧಿನಿಯಮ ಹಾಗೂ ಸರ್ಕಾರದ ನಿರ್ದೇಶನಗಳನ್ನು ಉಲ್ಲಂಘಿಸಿ ನೇಮಕಾತಿ ಮಾಡಿಕೊಂಡಿರುವ ನೌಕರರನ್ನು ಕೂಡಲೇ ಬಿಡುಗಡೆಗೊಳಿಸಿ ಕ್ರಮಬದ್ಧಗೊಳಿಸಲು ಸೂಚಿಸಿದೆ.

ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ತಾತ್ಕಾಲಿಕ ಸಿಬ್ಬಂದಿಗಳ ನೇಮಕಾತಿ ಸಂಬಂಧವಾಗಿ ಶಾಖೆವಾರು, ವಿಭಾಗವಾರು ಕಾರ್ಯ ಒತ್ತಡಗಳ ಆಧಾರದಲ್ಲಿ ಅಗತ್ಯ ತಾತ್ಕಾಲಿಕ ನೌಕರರ ನೇಮಕಾತಿ ವೇತನ, ರಜೆ, ಇತರೇ ಆರ್ಥಿಕ ಸೌಲಭ್ಯಗಳ ಸೂಕ್ತ ಪರಿನಿಯಮ ರೂಪಿಸಿ ಕುಲಾಧಿಪತಿಗಳಿಂದ ಅನುಮೋದನೆ ಪಡೆಯುವಲ್ಲಿ ಅಗತ್ಯಕ್ರಮ ವಹಿಸಲು ಹಾಗೂ 2024–25 ನೇ ಸಾಲಿನಲ್ಲಿ ಪಾವತಿಸಲಾದ ಒಟ್ಟು ಮೊತ್ತ **ರೂ.25,72,89,950/–** ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.

33.18 ಶ್ರೀ. ಲೋಕೇಶ್.ಜಿ ಎಸ್. ಸಂಯೋಜನಾಧಿಕಾರಿ(ತಾತ್ಕಾಲಿಕ)ರವರಿಗೆ ಮಂಜೂರಾತಿ ಇಲ್ಲದ ಎಸ್ಟೇಟ್ ಆಫೀಸರ್ ಹುದ್ದೆಗೆ ಗ್ರೇಡೆಡ್ ಪೇ ಅಡಿಯಲ್ಲಿ ತಾತ್ಕಾಲಿಕ ನೌಕರರನ್ನಾಗಿ ನೇಮಿಸಿರುವುದು:

(ವಿಚಾರಣಾ ಪತ್ರ ಸಂಖ್ಯೆ:34/ದಿ:05–07–2025)

ಶ್ರೀ. ಲೋಕೇಶ್.ಜಿ ಎಸ್. ಸಂಯೋಜನಾಧಿಕಾರಿ (ತಾತ್ಕಾಲಿಕ) ಇವರನ್ನು ಕರಾಮುವಿ ಆದೇಶ ಸಂಖ್ಯೆ: ಕರಾಮುವಿ/ಆಪ/ಸಿಬ್ಬಂದಿ–2/977/2022–23 ದಿನಾಂಕ:27–09–2022ರ ಕರಾಮುವಿ ಆದೇಶದಲ್ಲಿ ಪದನಾಮ ಬದಲಾವಣೆ ಮಾಡಿ ಕಾಲಿಕ ವೇತನ ಶ್ರೇಣಿ (Graded Pay) ಅಡಿಯಲ್ಲಿ ಎಸ್ಟೇಟ್ ಆಫೀಸರ್ ಹುದ್ದೆಗೆ ನೇಮಕ ಮಾಡಿ ಇಂಜಿನೀಯರಿಂಗ್ ವಿಭಾಗಕ್ಕೆ ನಿಯೋಜಿಸಿರುವುದು ಕರ್ನಾಟಕ ಸರ್ಕಾರ ಸುತ್ತೋಲೆ ಸಂಖ್ಯೆ:ಇಡಿ 54 ಯುಎಸ್‌ವಿ 2022 ದಿನಾಂಕ:12–09–2022ರ ಸುತ್ತೋಲೆಯ ಉಲ್ಲಂಘನೆಯಾಗಿರುತ್ತದೆ. ಸದರಿ ಆದೇಶದಂತೆ ನೌಕರರ ನೇಮಕಾತಿ ಪದೋನ್ನತಿ, ಹುದ್ದೆಗಳ ಉನ್ನತೀಕರಣ, ಬಡ್ತಿ ಮತ್ತು ಸೇವಾ ಷರತ್ತುಗಳಿಗೆ ಸೂಕ್ತ ಪರಿನಿಯಮ ರಚಿಸಿಕೊಳ್ಳದೇ ಶ್ರೀ. ಲೋಕೇಶ್.ಜಿ ಎಸ್. ಸಂಯೋಜನಾಧಿಕಾರಿ(ತಾತ್ಕಾಲಿಕ) ಇವರಿಗೆ ಮಂಜೂರಾತಿ ಇಲ್ಲದ ಎಸ್ಟೇಟ್ ಆಫೀಸರ್ ಹುದ್ದೆಗೆ ಗ್ರೇಡೆಡ್ ಪೇ ಅಡಿಯಲ್ಲಿ ನೇಮಿಸಿರುವುದನ್ನು 2022–23 ರ ಲೆಕ್ಕಪರಿಶೋಧನಾ ವರದಿ ಕಂಡಿಕೆ ಸಂಖ್ಯೆ:21.15 ಮತ್ತು 2022–23 ರ ಲೆಕ್ಕಪರಿಶೋಧನಾ ವರದಿ ಕಂಡಿಕೆ ಸಂಖ್ಯೆ:21.9 ರಲ್ಲಿ ನಿಯಮಬಾಹೀರವಾಗಿರುವುದನ್ನು ಉಲ್ಲೇಖಿಸಿ ಸುಧೀರ್ಘವಾಗಿ ವಿವರಿಸಲಾಗಿದೆ. ಸದರಿ ಲೆಕ್ಕಪರಿಶೋಧನಾ ವರದಿ ಕಂಡಿಕೆ ತೀರುವಳಿಗೆ ಕೈಗೊಂಡ ಕ್ರಮದ ವರದಿ ಹಾಗೂ 2024–25 ನೇ ಸಾಲಿನಲ್ಲಿ ಸದರಿಯವರಿಗೆ ನೀಡಲಾಗಿರುವ ಹುದ್ದೆ, ವೇತನ ಮತ್ತು ಇತರೇ ಭತ್ಯೆಗಳ ಮಾಹಿತಿಯನ್ನು ಲೆಕ್ಕಪರಿತೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:34/ದಿ:05–07–2025 ನೀಡಲಾಗಿದ್ದು ಅನುಪಾಲನಾ ಪತ್ರ ಸಂಖ್ಯೆ:ಕರಾಮುವಿ/ಆಪ/ಸಿಬ್ಬಂದಿ–2/1185/2025–26 ದಿನಾಂಕ:25–11–2025 ರಲ್ಲಿ ಲೆಕ್ಕಪರಿತೋಧನೆಯ ಅಪೇಕ್ಷಿಸಿರುವ ಪರಿನಿಯಮ ಅನುಮೋದನೆ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ಸದರಿ ಅನುಪಾಲನಾ ವರದಿಯನ್ನು ಪರಿಗಣಿಸಲು ಅವಕಾಶಗಳು ಇರುವುದಿಲ್ಲ.

ಅನುಶಾಸನ ರಚಿಸಿ ಕುಲಾಧಿಪತಿಗಳ ಅನುಮೋದನೆ ಪಡೆಯದೆ ನಿಯಮ ಉಲ್ಲಂಘಿಸಿ ಗ್ರೇಡೆಡ್‌ಪೇ (ಮನೆಬಾಡಿಗೆಯೊಂದಿಗೆ) (Graded pay + HRA) ನೌಕರನ್ನು ನೇಮಿಸಿಕೊಳ್ಳಲಾಗಿರುತ್ತದೆ. 2024–25 ನೇ ಸಾಲಿನಲ್ಲಿ ಪಾವತಿಸಲಾದ ವೇತನ & ಭತ್ಯೆಗಳು ಹಾಗೂ ಇತರ ಆರ್ಥಿಕ ಸೌಲಭ್ಯಗಳ ವಿವರ ಪಟ್ಟಿ ಅನುಬಂಧ–32 ರ ತಾತ್ಕಾಲಿನ ನೌಕರರ ಅನುಬಂಧದ ಕ್ರಮ ಸಂಖ್ಯೆ 59 ರಲ್ಲಿ ನೀಡಲಾಗಿದೆ. ತಾತ್ಕಾಲಿಕ ನೌಕರರ ಹುದ್ದೆ ಬದಲಾವಣೆಯು ನಿಯಮ ಬಾಹೀರವಾಗಿರುತ್ತದೆ. ಗ್ರೇಡೆಡ್ ಪೇ ಎಸ್ಟೇಟ್ ಆಫಿಸರ್ ಹುದ್ದೆಯ ಆದೇಶವನ್ನು ಹಿಂಪಡೆದು ಮಾಹಿತಿ ಹಾಜರುಪಡಿಸಲು ಸೂಚಿಸಲಾಗಿದೆ. ಹಾಗೂ 2024–25ನೇ ಸಾಲಿನಲ್ಲಿ ಪಾವತಿಸಲಾದ **ರೂ.6,61,270/–** ಗಳನ್ನು (ಗ್ರೇಡೆಡ್‌ಪೇ (+ಮನೆಬಾಡಿಗೆ ಯೊಂದಿಗೆ) ಮೇಲಿನ ಕಂಡಿಕೆ ಸಂಖ್ಯೆ 34.17 ರಲ್ಲಿ ಆಕ್ಷೇಪಣೆಗೆ ಸೂಚಿಸಲಾಗಿದೆ.

33.19 ವಿವಿಧ ಸ್ವರೂಪದ ತಾತ್ಕಾಲಿಕ ನೌಕರರ ಕಾರ್ಯಒತ್ತಡ (Work Load) ಅನ್ವಯ ನೌಕರರ ಸಂಖ್ಯೆಯನ್ನು ನಿರ್ದಿಷ್ಟಪಡಿಸದೆ ಅನಗತ್ಯವಾಗಿ ನೇಮಕಾತಿ ಮಾಡಿಕೊಂಡಿರುವುದು:

2024-25ನೇ ಸಾಲಿನ ವರೆಗೆ ಒಟ್ಟು 1183 ವಿವಿಧ ಸ್ವರೂಪದ ತಾತ್ಕಾಲಿಕ ನೌಕರರನ್ನು ವಿವಿಧ ವರ್ಷಗಳಿಂದ ನೇಮಕಾತಿ ಮಾಡಿಕೊಂಡು ಬರಲಾಗುತ್ತಿದೆ. ಆದರೆ ತಾತ್ಕಾಲಿಕ ನೌಕರರ ನೇಮಕಾತಿಯ ಅಗತ್ಯತೆಯನ್ನು ವಿವರಿಸುವಂತೆ ವಿಶ್ವವಿದ್ಯಾನಿಲಯದ ವಿವಿಧ ಶಾಖೆಗಳು ಮತ್ತು ಪ್ರಾದೇಶಿಕ ಕೇಂದ್ರಗಳಲ್ಲಿರುವ ಕಾರ್ಯಒತ್ತಡ (Work Load) ಕಾಲ ಕಾಲಕ್ಕೆ ಅಗತ್ಯವಿರುವ ವಿವಿಧ ಸ್ವರೂಪದ ಹುದ್ದೆಗಳನ್ನು ನಿರ್ದಿಷ್ಟಪಡಿಸಿರುವುದಿಲ್ಲ. ಅಲ್ಲದೇ ಶಾಖೆಗಳು ಮತ್ತು ಪ್ರಾದೇಶಿಕ ಕೇಂದ್ರಗಳಿಗೆ ಅಲ್ಲಿನ ವಿದ್ಯಾರ್ಥಿಗಳ ನೊಂದಣಿಯನ್ನು ಮಾನದಂಡವಾಗಿಸಿಕೊಂಡು ಯಾವ ಯಾವ ಹುದ್ದೆಗಳನ್ನು ನೇಮಿಸುವುದು ಸೂಕ್ತ ಎಂಬ ಅಂಶಗಳಲ್ಲಿ ವಾಸ್ತವ ಸ್ಥಿತಿಯನ್ನು ಪರಿಶೀಲಿಸಲು ಯಾವುದೇ ಕ್ರಮಗಳನ್ನು ಕೈಗೊಂಡಿರುವುದಿಲ್ಲ. ಇದರಿಂದಾಗಿ ಶಾಖೆವಾರು ಪ್ರಾದೇಶಿಕ ಕೇಂದ್ರವಾರು ನೇಮಿಸಿಕೊಂಡಿರುವ ವಿವಿಧ ತಾತ್ಕಾಲಿಕ ನೌಕರರ ಸಂಖ್ಯೆಯು ಅಗತ್ಯಕ್ಕೆ ಅನುಗುಣವಾಗಿರುತ್ತದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಹಾಜರುಪಡಿಸಲಾದ ದಾಖಲೆಗಳು ಮತ್ತು ಮಾಹಿತಿಯನ್ವಯ ನೇಮಕಮಾಡಲಾಗಿರುವ ವಿವಿಧ ಸ್ವರೂಪದ ಹುದ್ದೆಗಳನ್ನು ಶಾಖೆವಾರು ಪ್ರಾದೇಶಿಕ ಕೇಂದ್ರವಾರು ಕ್ರೋಢೀಕರಿಸಿದಲ್ಲಿ ಪ್ರತಿ ಶಾಖೆ ಮತ್ತು ಪ್ರಾದೇಶಿಕ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಘೋಷ್ವಾರೆ ವಿವರಗಳು ಕೆಳಕಂಡಂತಿರುತ್ತವೆ.

ಕಾಲಿಕ ವೇತನ, ಗ್ರೇಡೆಡ್‌ಪೇ(+), ಗ್ರೇಡೆಡ್‌ಪೇ(-), ತಾತಾತ್ಕಾಲಿಕ, ನೌಕರರು ಕಾರ್ಯನಿರ್ವಹಿಸುತ್ತಿರುವ ಶಾಖೆ/ಕೇಂದ್ರವಾರು ವಿವರ ಪಟ್ಟಿ			
ಕ್ರ.ಸಂ	ಕಾರ್ಯ ನಿರ್ವಹಿಸುತ್ತಿರುವ ವಿಭಾಗ	ಪ್ರಾದೇಶಿಕ ಕೇಂದ್ರ	ಒಟ್ಟು ವಿವಿದ ಸ್ವರೂಪದ ತಾತ್ಕಾಲಿಕ ನೌಕರರ ಸಂಖ್ಯೆ
1	Bagalakote	Bagalakote	8
2	Bangaluru-01 (Bapujinagara) (CBI)	Bengaluru	12
3	Bangaluru-02 (Malleshwaram)	Bengaluru	8
4	Ballary	Ballary	9
5	Bangaluru-04 (Madiwala)	Bengaluru	3
6	Belagavi	Belagavi	5
7	Bengaluru-03 (Yalahanka)	Bengaluru	6
8	Bengaluru-05 (K.R Puram)	Bengaluru	4
9	Bengaluru-06 (Magadi Main Road, Sunkadkatte)	Bengaluru	7
10	Dept. Higher Education	Bengaluru	1
11	Huz Bhavan	Bengaluru	1
12	Bidar	Bidar	8
13	Bijapura	Bijapura	8
14	Chamarajanagara	Chamarajanagara	30
15	Chikkaballapura	Chikkaballapura	26
16	Chitradurga	Chitradurga	7
17	Davanagere	Davanagere	16
18	Dharawada	Dharawada	7
19	Gadag	Gadag	8
20	Hassan	Hassan	17
21	Haveri	Haveri	7
22	Hosapete	Hosapete	5
23	Kalaburgi	Kalaburgi	8
24	Karwara	Karwara	1
25	Kolara	Kolara	9
26	Kollegala	Kollegala	29
27	Koppala	Koppala	8
28	Madikeri	Madikeri	6

29	Mandya	Mandya	29
30	Mangaluru	Mangaluru	6
31	Digital Academic Platefarm	Mysuru	3
32	Admission Section	Mysuru	28
33	Akkamahadevi Peeta	Mysuru	2
34	Audio Video & Studio	Mysuru	3
35	Audio Visual Studio Depratment	Mysuru	2
36	Authority Section (General)	Mysuru	8
37	CIQA Cell	Mysuru	5
38	Competative Exam Training Centre	Mysuru	5
39	Cyber Security Cell	Mysuru	1
40	Day Care Centre	Mysuru	2
41	Dean (A.C)	Mysuru	14
42	Dean (S.C)	Mysuru	25
43	Dept. of M.Com.	Mysuru	6
44	Dept. of Urdu	Mysuru	1
45	Dept. of Alumini	Mysuru	3
46	Dept. of Anciant History Archology	Mysuru	4
47	Dept. of Bio-Chemistry	Mysuru	4
48	Dept. of Biology	Mysuru	1
49	Dept. of Bio-Technology	Mysuru	3
50	Dept. of Chemistry	Mysuru	3
51	Dept. of Commerce	Mysuru	4
52	Dept. of Computer Science	Mysuru	8
53	Dept. of Economics	Mysuru	4
54	Dept. of Education	Mysuru	7
55	Dept. of English	Mysuru	4
56	Dept. of Environment Science	Mysuru	6
57	Dept. of Food Science and Nutrition	Mysuru	4
58	Dept. of Foreign Language	Mysuru	3
59	Dept. of Geography	Mysuru	4
60	Dept. of Hindi	Mysuru	6
61	Dept. of History	Mysuru	4
62	Dept. of Information Technology	Mysuru	2
63	Dept. of Kannada	Mysuru	6
64	Dept. of Library and Information Science	Mysuru	2
65	Dept. of M.B.A	Mysuru	8
66	Dept. of Mass Communication & Journalism	Mysuru	4
67	Dept. of Mathematics	Mysuru	6
68	Dept. of Micro Biology	Mysuru	5
69	Dept. of MSW	Mysuru	3
70	Dept. of Physics	Mysuru	3
71	Dept. of Political Science	Mysuru	8
72	Dept. of Psychology	Mysuru	1
73	Dept. of Public Administration	Mysuru	4
74	Dept. of Sanskrit	Mysuru	6
75	Dept. of Skill Development	Mysuru	1
76	Dept. of Sociology	Mysuru	8
77	Dept. of Studies in Linguistics	Mysuru	6

78	Dept. of Telugu	Mysuru	2
79	Dept. of Traslation	Mysuru	4
80	Dept. of Urdu	Mysuru	5
81	Dept. of Womens Studies & Research Center	Mysuru	2
82	Dept. of Zoology	Mysuru	2
83	Dept.of Botony	Mysuru	1
84	Deptation to BBMP Bangalore	Mysore	1
85	Dharawada & Karwara (I.C)	Mysore	1
86	Dr. Babu Jagajeevan Ram Peeta	Mysuru	4
87	Dr.B.R Ambedkar Peeta	Mysuru	2
88	Engineering Section	Mysuru	166
89	Exam Branch	Mysuru	106
90	Finance Branch	Mysuru	30
91	From & To Section	Mysuru	3
92	General Section	Mysuru	19
93	Health Centre	Mysuru	7
94	IT & ICT Cell	Mysuru	23
95	Kuvempu Peeta	Mysuru	5
96	Learner Wellfare Centre	Mysuru	11
97	Legal Cell (General)	Mysuru	6
98	Lesson Section	Mysuru	45
99	Library	Mysuru	17
100	Mahathma Ghandi Peeta	Mysuru	1
101	NAAC Cell	Mysuru	8
102	NAD/ABC Cell	Mysuru	8
103	Placement Cell	Mysuru	5
104	PMEB Cell	Mysuru	1
105	Prasaranga	Mysuru	8
106	R & D Cell	Mysuru	1
107	Registrar Personal Section	Mysuru	6
108	SC/ST Cell	Mysuru	7
109	Shravya Studio	Mysuru	1
110	Store Section (General)	Mysuru	5
111	Student Wellfare Cell	Mysuru	5
112	Swamy Vivekananda Peeta	Mysuru	6
113	VC Personal Section	Mysuru	4
114	Vehicle Section (General)	Mysuru	11
115	Visual Studio Department	Mysuru	9
116	Piriyapattana	Piriyapattana	25
117	Raichur	Raichur	5
118	Ramanagara	Ramanagara	19
119	Shivamogga	Shivamogga	15
120	Thumakuru	Thumakuru	11
121	Udupi	Udupi	5
122	Yadagiri	Yadagiri	6
		ಒಟ್ಟು ಹುದ್ದೆಗಳ ಸಂಖ್ಯೆ	1183

ಮೇಲ್ಕಂಡ ವಿವರಗಳಂತೆ ವಿಶ್ವವಿದ್ಯಾನಿಲಯದ ವಿವಿಧ ಶಾಖೆಗಳು ಮತ್ತು ಪ್ರಾದೇಶಿಕ ಕೇಂದ್ರಗಳಿಗೆ ಸಂಬಂಧಿಸಿದಂತೆ ಅತಿ ಹೆಚ್ಚು ತಾತ್ಕಾಲಿಕ ನೌಕರರನ್ನು ನೇಮಕ ಮಾಡಲಾದ ಶಾಖೆಗಳಾದ ಇಂಜಿನೀಯರಿಂಗ್ ವಿಭಾಗ, ಪರೀಕ್ಷಾಂಗ ವಿಭಾಗಕ್ಕೆ ನೇಮಕವಾಗಿರುವ ತಾತ್ಕಾಲಿಕ ನೌಕರರ ಶಾಶ್ವತ ಸಿಬ್ಬಂದಿಗಳು ಮತ್ತು ತಾತ್ಕಾಲಿಕ ಸಿಬ್ಬಂದಿಗಳ ಮಾಹಿತಿ ಹಾಗೂ ನೀಡಲಾಗಿರುವ ಕಾರ್ಯ ಹಂಚಿಕೆ

ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ, **ವಿಚಾರಣಾ ಪತ್ರ ಸಂಖ್ಯೆ:130/ದಿನಾಂಕ:23-09-2025.** ಹಾಗೂ **ವಿಚಾರಣಾ ಪತ್ರ ಸಂಖ್ಯೆ:131/ದಿ:23-09-2025** ನೀಡಿ ಈ ಕೆಳಕಂಡ ಅಂಶಗಳಿಗೆ ಮಾಹಿತಿ ಕೋರಲಾಗಿರುತ್ತದೆ.

- ಇಂಜಿನೀಯರಿಂಗ್/ಪರೀಕ್ಷಾಂಗ ವಿಭಾಗದಲ್ಲಿ ಕಾರ್ಯ ಒತ್ತಡಕ್ಕೆ ಅನುಗುಣವಾಗಿ ಅಗತ್ಯವಿರುವ ತಾಂತ್ರಿಕ ಸಿಬ್ಬಂದಿಗಳು, ಕಛೇರಿ ಅಧಿಕಾರಿ ಸಿಬ್ಬಂದಿಗಳು ಹಾಗೂ ಡಿ ವರ್ಗದ ಉದ್ಯೋಗಿಗಳ ಸಂಖ್ಯೆಯನ್ನು ನಿಗದಿಪಡಿಸಲಾಗಿರುವ ಸಂಬಂಧದ ಮಾಹಿತಿ.
- ವಿವಿಧ ಅಧಿಕಾರಿ ಮತ್ತು ಸಿಬ್ಬಂದಿಗಳ ಅಗತ್ಯತೆಯನ್ನು ಯಾವ ಆಧಾರದಲ್ಲಿ ನಿಗದಿಪಡಿಸಲಾಗಿದೆ, ಅಗತ್ಯವಿರುವ ಅಧಿಕಾರಿ/ಸಿಬ್ಬಂದಿಗಳ ಹುದ್ದೆಗಳನ್ನು ಅಧಿಕೃತವಾಗಿ ಘೋಷಣೆ ಮಾಡಿರುವ ಆದೇಶದ ಪ್ರತಿಗಳು.
- ಈಗಾಗಲೇ ನೇಮಕವಾಗಿರುವ ಶಾಶ್ವತ ಅಧಿಕಾರಿ ನೌಕರರ ಮತ್ತು ತಾತ್ಕಾಲಿಕ ಸಿಬ್ಬಂದಿಗಳ ವಿವರಗಳು.
- ದಿನಾಂಕ:31-03-2025 ರಲ್ಲಿದ್ದಂತೆ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳು/ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಲಾಗಿರುವ ಕಾರ್ಯ ಹಂಚಿಕೆ ಆದೇಶದ ಪ್ರತಿ.
- ಇಂಜಿನೀಯರಿಂಗ್/ಪರೀಕ್ಷಾಂಗ ವಿಭಾಗಕ್ಕೆ ಅಗತ್ಯವಿರುವ ಅಧಿಕಾರಿ/ಸಿಬ್ಬಂದಿಗಳು, ನೇಮಕ ಮಾಡಲಾಗಿರುವ ಸಿಬ್ಬಂದಿಗಳು, ಬಾಕಿ ಉಳಿದಿರುವ ಸಿಬ್ಬಂದಿಗಳ ಮಾಹಿತಿ.

ಮೇಲ್ಕಂಡ ವಿವರಗಳ ಸಂಬಂಧವಾಗಿ ಯಾವುದೇ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ಹಾಜರುಪಡಿಸಲಾದ ಲೆಕ್ಕಪತ್ರಗಳನ್ವಯ ವಿವಿಧ ವಿಭಾಗ, ಪ್ರಾದೇಶಿಕ ಕೇಂದ್ರಗಳಿಗೆ ನೇಮಿಸಲಾಗಿರುವ ವಿವಿಧ ಸ್ವರೂಪದ ತಾತ್ಕಾಲಿಕ ನೌಕರರ ವಿವರಗಳನ್ನು ಅನುಬಂಧ-36 ರಲ್ಲಿ ವಿವರಿಸಲಾಗಿದೆ.

ತಾತ್ಕಾಲಿಕ ನೌಕರರ ಲೆಕ್ಕಪತ್ರಗಳನ್ನು ಪರಿಶೀಲಿಸಿದಾಗ ಕೆಲವು ಶೈಕ್ಷಣಿಕ ವಿಷಯಗಳ ಬೋಧನೆಯನ್ನು ಸ್ವರೂಪವು ಆನ್‌ಲೈನ್‌ಮೂಲಕವಾಗಿ ನೀಡಲಾಗುತ್ತಿದ್ದು, ತಾಂತ್ರಿಕತೆಯನ್ನು ಸಾಕಷ್ಟು ಅಳವಡಿಸಿಕೊಂಡಿರುವುದರಿಂದ ಈಗಾಗಲೇ ನೇಮಕ ಮಾಡಿರುವ ತಾತ್ಕಾಲಿಕ ನೌಕರರ ಸಂಖ್ಯೆಯು ವಿಶ್ವವಿದ್ಯಾನಿಲಯದ ಶಾಖೆ ಮತ್ತು ಪ್ರಾದೇಶಿಕ ಕೇಂದ್ರಗಳಿಗೆ ಅಗತ್ಯಕ್ಕಿಂತ ಹೆಚ್ಚುವರಿಯಾಗಿ ನೇಮಕಮಾಡಿಕೊಂಡಿರುವುದು ಮೇಲು ನೋಟಕ್ಕೆ ಕಂಡುಬರುತ್ತದೆ.

ವಿಶ್ವವಿದ್ಯಾನಿಲಯದ ವಿವಿಧ ಶಾಖೆಗಳು ಮತ್ತು ಪ್ರಾದೇಶಿಕ ಕೇಂದ್ರಗಳಿಗೆ ಕಾರ್ಯ ಒತ್ತಡ ಮತ್ತು ಅಗತ್ಯವಿರುವ ವಿವಿಧ ಸಿಬ್ಬಂದಿಗಳ ಸ್ವರೂಪವನ್ನು ನಿಗದಿಪಡಿಸಿ ಅಧಿಸೂಚನೆ ಹೊರಡಿಸಿ, ಕಾಲಕಾಲಕ್ಕೆ ಸಿಬ್ಬಂದಿಗಳ ಸಂಖ್ಯೆಯನ್ನು ಮಾರ್ಪಡಿಸಿಕೊಳ್ಳಲು ಅನುವಾಗುವಂತೆ ತಾತ್ಕಾಲಿಕ ನೌಕರರ, ನೌಮಕಾತಿ, ವೇತನ ಸೌಲಭ್ಯಗಳು, ರಜಾ ನಿಯಮಗಳು ಹಾಗೂ ಇತರೇ ಸೇವಾ ಸೌಲಭ್ಯಗಳನ್ನು ನಿರ್ದಿಷ್ಟವಾಗಿ ಸ್ಪಷ್ಟಪಡಿಸಿಕೊಂಡು ಸೂಕ್ತ ಪರಿನಿಯಮವನ್ನು ರಚಿಸಿ ಕುಲಾಧಿಪತಿಗಳಿಂದ ಅನುಮೋದನೆ ಪಡೆದು ತಾತ್ಕಾಲಿಕ ನೌಕರರ ನೇಮಕಾತಿಯನ್ನು ಕಾರ್ಯ ಒತ್ತಡಕ್ಕೆ ಅನುಗುಣವಾಗಿ ಕ್ರಮಬದ್ಧಗೊಳಿಸಿಕೊಂಡು ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

33.20 ಬೋಧಕ ಹಾಗೂ ಬೋಧಕೇತರ ನೌಕರರಿಗೆ ನೀಡಲಾದ ವಿವಿಧ ಮುಂಗಡಗಳು ಬಾಕಿ ಇರುವುದು:

(ವಿಚಾರಣಾ ಪತ್ರ ಸಂಖ್ಯೆ:51/ದಿ:11.07.2025 ಹಾಗೂ 161/ದಿ:14.10.2025)

ವಿಶ್ವವಿದ್ಯಾನಿಲಯದ ಬೋಧಕ ಹಾಗೂ ಬೋಧಕೇತರ ನೌಕರರಿಗೆ ನೀಡಲಾದ ಹಬ್ಬದ ಮುಂಗಡ, ಗಣಕ ಯಂತ್ರ ಖರೀದಿ ಮುಂಗಡ, ವಾಹನ ಖರೀದಿ ಮುಂಗಡ, ಗೃಹ ನಿರ್ಮಾಣ ಮುಂಗಡ, ಸೋಲಾರ್ ಮುಂಗಡ ಹಾಗೂ ಇತರೇ ಮುಂಗಡಗಳ ಸಂಬಂಧವಾಗಿ ಮಂಜೂರು ಮಾಡಲಾದ ಆದೇಶಗಳು, ವಸೂಲಿಸಲಾದ ಮೊತ್ತಗಳು ಮತ್ತು ಬಾಕಿ ವಾರ್ಷಿಕ ಲೆಕ್ಕಪತ್ರಗಳನ್ನು ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:51/ದಿ:11.07.2025 ಹಾಗೂ 161/ದಿ:14.10.2025ನ್ನು ನೀಡಲಾಗಿದ್ದು, ಹಾಜರುಪಡಿಸಲಾದ ವಹಿಗಳು ಹಾಗೂ ದೃಢೀಕೃತ ಮಾಹಿತಿಗಳನ್ವಯ ವಿವಿಧ ಮುಂಗಡಗಳ ಪಾವತಿ, ವಸೂಲಿ ಮತ್ತು ಬಾಕಿ ವಿವರಗಳು ಕೆಳಕಂಡಂತಿರುತ್ತವೆ.

ಕ್ರಮ ಸಂಖ್ಯೆ	ಮುಂಗಡದ ವಿವರ	01-04-2024 ಕ್ಕೆ ಪ್ರಾರಂಭಿಕ ಶಿಲ್ಕು	2024-25 ನೇ ಸಾಲಿಗೆ ಪಾವತಿ	ಒಟ್ಟು	2024-25 ನೇ ಸಾಲಿಗೆ ವಸೂಲಿ	31-03-2025 ಕ್ಕೆ ಬಾಕಿ ಮೊತ್ತ

						ರೂ.
1	ಹಬ್ಬದ ಮುಂಗಡ	3,41,470	37,30,500	40,71,970	33,36,450	7,35,52
2	ಗೃಹ ನಿರ್ಮಾಣ ಮುಂಗಡ	0	0	0	0	0
3	ಗಣಕ ಯಂತ್ರ ಮುಂಗಡ	1,01,232	0	1,01,232	48,000	53,232
4	ವಾಹನ ಖರೀದಿ ಮುಂಗಡ	0	0	0	0	0
5	ಸೋಲಾರ್ ಮುಂಗಡ	0	0	0	0	0
6	ಇತರೇ ಮುಂಗಡಗಳು	0	0	0	0	0
	ಒಟ್ಟು ಮೊತ್ತ ರೂ.	**4,42,702**	**34,55,500**	**41,73,202**	**33,84,450**	**7,88,752**

33.21 ಬೋಧಕ ಹಾಗೂ ಬೋಧಕೇತರ ನೌಕರರ ವೇತನದಲ್ಲಿ ಕಟಾಯಿಸಲಾದ ವೃತ್ತಿ ತೆರಿಗೆ, ಆದಾಯ ತೆರಿಗೆ ಮತ್ತು ಸಾಮೂಹಿಕ ಜೀವ ವಿಮೆ ಮೊತ್ತಗಳ ವಿವರಗಳನ್ನು ವೇತನ ಬಟವಾಡೆ ವಹಿಯಲ್ಲಿ ದಾಖಲಿಸದಿರುವುದು:

(ವಿಚಾರಣಾ ಪತ್ರ ಸಂಖ್ಯೆ:49/ದಿ:11-07-2025)

ಬೋಧಕೇತರ ನೌಕರರಿಗೆ ಮಾಸಿಕವಾಗಿ ಕಟಾವಣೆ ಮಾಡಲಾದ ವೃತ್ತಿತೆರಿಗೆ, ಆದಾಯ ತೆರಿಗೆ ಮತ್ತು ಗ್ರೂಪ್ ಇನ್ಸುರೆನ್ಸ್ ಮೊತ್ತಗಳನ್ನು ಸಂಬಂಧಪಟ್ಟ ಇಲಾಖೆಯ ಲೆಕ್ಕಶೀರ್ಷಿಕೆ ಜಮಾ ಮಾಡಲಾದ ವಿವರಗಳು ಕಡತಗಳು ಹಾಗೂ ಪೂರಕ ಚಲನ್‌ಗಳನ್ನು ಒಳಗೊಂಡ ಮಾಹಿತಿಯನ್ನು ಲೆಕ್ಕಪರಿತೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:49/ದಿ:11-07-2025 ನ್ನು ನೀಡಲಾಗಿದ್ದು, ಯಾವುದೇ ಅನುಪಾಲನೆಯನ್ನು ನೀಡಿರುವುದಿಲ್ಲ. ವೇತನಗಳಲ್ಲಿ ಕಟಾಯಿಸಲಾದ ವೃತ್ತಿ ತೆರಿಗೆ, ಆದಾಯ ತೆರಿಗೆ, ಸಾಮೂಹಿಕ ಜೀವ ವಿಮೆಗಳ ವಂತಿಕೆಗಳನ್ನು ಪಾವತಿಸಿರುವ ವಿವರಗಳನ್ನು ಪ್ರತಿ ಮಾಹೆಯ ವೇತನ ಬಟವಾಡೆ ವಹಿಯಲ್ಲಿ ದಾಖಲಿಸಿರುವುದಿಲ್ಲ.

ಸದರಿ ಮಾಹಿತಿಯ ವಿವರಗಳನ್ನು ಪಾವತಿಸಲಾದ ಧನಾದೇಶ ಸಂಖ್ಯೆ ದಿನಾಂಕ ಮೊತ್ತಗಳ ವಿವರಗಳನ್ನು ದಾಖಲಿಸಿ ವೇತನ ಬಟವಾಡೆ ವಹಿ ನಿರ್ವಹಿಸಲು ಸೂಚಿಸಿದೆ.

33.22 ಸಂಕೀರ್ಣ ಖಾತೆಯ ಲೆಕ್ಕಪತ್ರಗಳ ಬಗ್ಗೆ: (ವಿಚಾರಣಾ ಪತ್ರ ಸಂಖ್ಯೆ:098/ದಿನಾಂಕ:18-08-2025)

ವಿಶ್ವವಿದ್ಯಾನಿಲಯದ ಸಂಕೀರ್ಣ ಖಾತೆಯನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಉಳಿತಾಯ ಖಾತೆ ಸಂಖ್ಯೆ:54035421315 ರಲ್ಲಿ ನಿರ್ವಹಿಸಲಾಗಿದ್ದು ಸದರಿ ಖಾತೆಗೆ 2024-25 ನೇ ಸಾಲಿನಲ್ಲಿ ಜಮೆಯಾದ ಸ್ವೀಕೃತಿಗಳು ಹಾಗೂ ಪಾವತಿ ವಿವರಗಳು ನಗದು ಪುಸ್ತಕ ಹಾಗೂ ದಿನಾಂಕ:31-03-2025 ರ ಅಂತ್ಯಕ್ಕೆ ಖಾತೆಯಲ್ಲಿ ಉಳಿದಿರುವ ಅಂತಿಮ ಶಿಲ್ಕಿನ ಮೊತ್ತ ಹಾಗೂ ಸದರಿ ಅಂತಿಮ ಶಿಲ್ಕು ಯಾವ ಯಾವ ಬಾಬ್ತುಗಳ ಮೊತ್ತಗಳು ಎಂಬ ಬಗ್ಗೆ ಮಾಹಿತಿಯನ್ನು ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:98/ದಿ:18-08-2025 ನೀಡಲಾಗಿದ್ದು, ಹಾಜರುಪಡಿಸಲಾದ ಲೆಕ್ಕಪತ್ರಗಳನ್ವಯ ಸದರಿ ಖಾತೆ ಜಮ-ಖರ್ಚು ವಿವರಗಳು ಕೆಳಕಂಡಂತಿರುತ್ತವೆ.

2024-25ನೇ ಸಾಲಿನ ಜಮಾ-ಖರ್ಚು ಪಟ್ಟಿ ಸಂಕೀರ್ಣ ಖಾತೆ					
ಜಮಾ			ಖರ್ಚು		
SL	**PARTICULARS**	**Total**	**SL**	**Total**	**Expenditure**
1	COMPUTER ADVANCE	48,000	1	COMPUTER ADVANCE	0
2	EGIS		2	EGIS	960
3	EPF	3,21,78,961	3	EPF	3,02,47,535
4	EPF INTEREST & DAMAGE AMOUNT	85,801	4	EPF INTEREST & DAMAGE AMOUNT	0
5	ESI	40,29,670	5	ESI	39,41,800

6	ESI INTEREST & DAMAGE AMOUNT	2,274	6	ESI INTEREST & DAMAGE AMOUNT	0
7	FESTIVAL ADVANCE	34,12,378	7	FESTIVAL ADVANCE	0
8	GILS	6,925	8	GILS	0
9	GIS	4,110	9	GIS UOM	0
10	GIS UOM	480	10	HOUSE RENT ALLOWANCE & WATER CHARGES (UOM)	75,892
11	HOUSE RENT ALLOWANCE & WATER CHARGES (UOM)	75,892	11	INTEREST AMOUNT	0
12	INTEREST AMOUNT	3,62,843	12	IT Amount Refunding	1,34,397
13	IT REFUND AMOUNT	0	13	IT SHWETHA FO	20000
14	IT SHWETHA & JAGADEESH BABU	40,000	14	KGID AMOUINT OF FINANCE OFFICER	12,000
15	KGID AMOUINT OF FINANCE OFFICER	12,000	15	KSOU QUARTERS RENT AMOUNT	0
16	KSOU QUARTERS RENT AMOUNT	0	16	LIC	17,526
17	LIC SHEWETHA & JAGADEESH BABU	9,613	17	LIC SHEWETHA	6,880
18	MISCELLANEOUS	24,134	18	MISCELLANEOUS	0
19	NCTE PERFORMANCE APPRAISAL REPORT	35,420	19	NCTE PERFORMANCE APPRAISAL REPORT	0
20	NON TEACHING ASSOCIATION FEES	5180	20	NON TEACHING ASSOCIATION FEES	0
21	NPS EMPLOYEE & EMPLOYER CONTRIBUTION	14,628	21	NPS EMPLOYEE & EMPLOYER CONTRIBUTION	0
22	NPS EMPLOYEE CONTRIBUTION DIFFERENCE DA AMOUNT KLN Murthy	4,470	22	NPS EMPLOYEE CONTRIBUTION DIFFERENCE DA AMOUNT KLN Murthy	0
23	PROFESSIONAL TAX	18,59,338	23	PROFESSIONAL TAX	52,32,426
24	RECOVERY AMOUNT	69,752	24	RECOVERY AMOUNT	0
25	SHEWETHA NPS 10%	20,355	25	SHEWETHA NPS 10%	0
26	SHEWETHA NPS 14%	28,496	26	SHEWETHA NPS 14%	0
27	SOLAR ADVANCE	831	27	SOLAR ADVANCE	0
28	TEACHING ASSOCIATION FEES	50	28	TEACHING ASSOCIATION FEES	0
29	UGC PORTAL/Adm & Bed Fee	1,88,800	29	UGC PORTAL/Adm & Bed Fee	2,36,081
30	WRONG DEPOSIT	7	30	WRONG DEPOSIT	0
ಒಟ್ಟು ಸ್ವೀಕೃತಿಗಳು		4,25,20,408	ಒಟ್ಟು ಪಾವತಿಗಳು		3,9925,497
ಪ್ರಾರಂಭಿಕ ಶಿಲ್ಕು ರೂ.		1,00,48,804	ಅಂತಿಮ ಶಿಲ್ಕು ರೂ.		1,26,43,714
ಒಟ್ಟು ಮೊತ್ತ ರೂ.		5,25,69,212	ಒಟ್ಟು ಮೊತ್ತ ರೂ.		5,25,69,212

- ಅಕ್ಟೋಬರ್-2022 ರಿಂದ ಮಾರ್ಚ್-2024 ರ ವರೆಗಿನ ಅವಧಿಯಲ್ಲಿ ವಸೂಲಿಸಲಾದ ಒಟ್ಟು ವೃತ್ತಿ ತೆರಿಗೆ ಮೊತ್ತ ರೂ.27,86,616/- ಗಳನ್ನು 2024-25 ನೇ ಸಾಲಿನಲ್ಲಿ ಪಾವತಿಸಲಾಗಿರುತ್ತದೆ. 18 ತಿಂಗಳುಗಳು ಏಳಂಬಕ್ಕೆ ಯಾವುದು ವಿವರಣೆಯು ಲಭ್ಯವಾಗಿರುವುದಿಲ್ಲ. ಸರ್ಕಾರದ ಬೊಕ್ಕಸಕ್ಕೆ ಪಾವತಿಸಬೇಕಾದ ಮೊತ್ತವನ್ನು ವಿಶ್ವವಿದ್ಯಾನಿಲಯದ ನಿಧಿಯಲ್ಲಿಯೇ ಇಟ್ಟುಕೊಳ್ಳುವುದು ಒಂದು ಗುರುತರವಾದ ಅಪರಾಧವಾಗುತ್ತದೆ. ಈದಕ್ಕೆ ಹಣಕಾಸು ಅಧಿಕಾರಿಗಳು ನೇರ ಹೊಣೆಗಾರರಾಗಿದ್ದು, ಸರ್ಕಾರಕ್ಕೆ ಜಮೆ ಮಾಡಬೇಕಾದ ಮೊತ್ತಗಳನ್ನು ಸಂಕೀರ್ಣ ಖಾತೆಯಲ್ಲಿಯೇ ಉಳಿಸಿಕೊಳ್ಳಲಾಗಿರುತ್ತದೆ.
- ಪಿಎಫ್ ಮತ್ತು ಇಎಸ್ಐ ವಂತಿಕೆ ಮೊತ್ತಗಳನ್ನು ಸಂಬಂಧಪಟ್ಟ ನೌಕರರ ಖಾತೆಗೆ ಪಾವತಿಸದೆ ವಿಶ್ವವಿದ್ಯಾನಿಲಯದ ಖಾತೆಯಲ್ಲಿಯೇ ಉಳಿಸಿಕೊಳ್ಳಲಾಗಿರುತ್ತದೆ. ಈದಕ್ಕೆ ಇಲಾಖೆಯಿಂದ ವಿಧಿಸಬಹುದಾದ ದಂಡಗಳಿಗೆ ಹಣಕಾಸು ಅಧಿಕಾರಿಗಳೇ ನೇರ ಹೊಣೆಗಾರರಾಗಿರುತ್ತಾರೆ.
- 2024-25 ನೇ ಸಾಲಿನಲ್ಲಿ ಕಟಾಯಿಸಲಾಗಿದ್ದು ಪಾವತಿಸದೇ ಬಾಕಿ ಉಳಿದ ಮೊತ್ತಗಳ ಇವರಗಳು ಕೆಳಕಂಡಂತಿರುತ್ತವೆ.

2024-25 ನೇ ಸಾಲಿನಲ್ಲಿ ಸ್ವೀಕೃತಿಗಳು	42520408
2024-25 ನೇ ಸಾಲಿನಲ್ಲಿ ಪಾವತಿಗಳು	30768944
2024-25ನೇ ಸಾಲಿಗೆ ಹೊಂದಾಣಿಕೆ/ಪಾವತಿ ಬಾಕಿ ಉಳಿದ ಮೊತ್ತ ರೂ.	11751464

- 2024-25ನೇ ಸಾಲಿನಲ್ಲಿ ಸ್ವೀಕರಿಸಲಾಗಿದ್ದು; ಪಾವತಿಸದೇ ವಿಶ್ವವಿದ್ಯಾನಿಲಯದ ಖಾತೆಯಲ್ಲಿಯೇ ಉಳಿಸಿಕೊಳ್ಳಲಾಗಿದ್ದು ಸದರಿ ಮೊತ್ತಗಳಲ್ಲಿ ಹೊಂದಾಣಿಕೆ ಹಾಗೂ ಸಂಬಂಧಪಟ್ಟ ಇಲಾಖೆಯ ಲೆಕ್ಕಶೀರ್ಷಿಕೆಗಳಿಗೆ ಜಮಾ ಮಾಡಿ ಮಾಹಿತಿಯನ್ನು ಹಾಜರುಪಡಿಸುವವರೆಗೆ ಬಾಕಿ ಉಳಿದ ಮೊತ್ತ **ರೂ.117,51,464/- ಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ.**

  ಸ್ವೀಕೃತಿ, ಪಾವತಿ ಮತ್ತು ಬಾಕಿ ವಿವರಗಳನ್ನು ಅನುಬಂಧ-37ರಲ್ಲಿ ವಿವರಿಸಿದೆ.

34. ಪಿಂಚಣಿ ನಿಧಿ

34.1 ಪಿಂಚಣಿ ನಿಧಿ (Pension Fund) ನಿರ್ವಹಣೆ:

(ವಿಚಾರಣಾ ಪತ್ರ ಸಂಖ್ಯೆ:137/ದಿನಾಂಕ:25-09-2025)

ವಿಶ್ವವಿದ್ಯಾನಿಲಯವು, ತನ್ನ ಬೋಧಕ ಮತ್ತು ಬೋಧಕೇತರ ನೌಕರರ ಪಿಂಚಣಿ ಮತ್ತು ಕುಟುಂಬ ಪಿಂಚಣಿ ನಿಧಿ ನಿರ್ವಹಣೆಗೆ ತನ್ನದೇ ಆದ ಪರಿನಿಯಮವನ್ನು ಸೃಜಿಸಿರುವುದಿಲ್ಲ, ಸದರಿ ಪಿಂಚಣಿ ನಿಧಿ ನಿರ್ವಹಣೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಪರಿನಿಯಮ The Mysore University Pension Statutes-1979, Section-22 ರಲ್ಲಿ ನಿರ್ವಹಿಸಲಾಗುತ್ತಿದೆ. ಸದರಿ ಅಧಿನಿಯಮದಲ್ಲಿ ಪಿಂಚಣಿ ನಿಧಿಯ ವಂತಿಕೆ ಪಾವತಿಯ ಕ್ರಮವನ್ನು ಈ ರೀತಿ ನಿರ್ದಿಷ್ಟಪಡಿಸಲಾಗಿರುತ್ತದೆ.

"Annual contribution by the University to be made either in monthly instalments or in a single instalment at any time before the close of the financial year, equal to ***10 per cent of the total pay drawn by the employee*** governed by these Statutes during the year"

ಮೇಲ್ಕಂಡಂತೆ ಪರಿನಿಯಮದಲ್ಲಿ ಪಿಂಚಣಿ ವಂತಿಕೆಯನ್ನು ಪಾವತಿಸುವ ಕ್ರಮವಾಗಿ 2024-25 ನೇ ಸಾಲಿನಲ್ಲಿ ಪಾವತಿಸಬೇಕಾದ ಪಿಂಚಣಿ ವಂತಿಕೆ ಮೊತ್ತದ ಲೆಕ್ಕಾಚಾರ, ಪಾವತಿಸಿರುವ ಮತ್ತು ಪಾವತಿಗೆ ಬಾಕಿ ಉಳಿದಿರುವ ಪಿಂಚಣಿ ವಂತಿಕೆ ಮೊತ್ತದ ವಿವರಗಳು ಕೆಳಕಂಡಂತಿರುತ್ತವೆ.

ಕ್ರಮ ಸಂಖ್ಯೆ	ವೇತನ ಪಾವತಿ ವಿವರ	2024-25 ನೇ ಸಾಲಿನಲ್ಲಿ ಪಾವತಿಸಲಾದ ಒಟ್ಟು ಮೊತ್ತ ರೂ.	ಪಿಂಚಣಿ ನಿಧಿಗೆ ಶೇ 10 ರ ದರದಲ್ಲಿ ವಂತಿಕೆ ಪಾವತಿ ಮೊತ್ತ ರೂ.
1	ಶಾಸನಬದ್ಧ ಅಧಿಕಾರಿಗಳ ವೇತನ	143,04,580	14,30,458
2	ಬೋಧಕ ನೌಕರರ ವೇತನ & ಭತ್ಯೆಗಳು	16,70,97,975	167,09,798

3	ಬೋಧಕೇತರ ನೌಕರರ ವೇತನ & ಭತ್ಯೆಗಳು	22.56.62.146	2.25.66.215
ಪಾವತಿಸಬೇಕಾದ ಪಿಂಚಣಿ ನಿಧಿ ವಂತಿಕೆ ಮೊತ್ತ ರೂ.		**40.70.64.701**	**4.07.06.470**

ಪಾವತಿಸಬೇಕಾದ ಪಿಂಚಣಿ ನಿಧಿ ವಂತಿಕೆ, ಪಾವತಿ ಮತ್ತು ಬಾಕಿ ವಿವರ ಪಟ್ಟಿ		
ಕ್ರ.ಸಂ	ಪಿಂಚಣಿ ನಿಧಿ ವಿವರ	ವಿವರ
1	2024-25 ನೇ ಸಾಲಿಗೆ ಪಾವತಿಸಬೇಕಾದ ಪಿಂಚಣಿ ವಂತಿಕೆ ಮೊತ್ತ ರೂ.	4.07.06.470
2	2024-25 ನೇ ಸಾಲಿನಲ್ಲಿ ಪಾವತಿಸಿರುವ ಪಿಂಚಣಿ ವಂತಿಕೆ ಮೊತ್ತ ರೂ.	2.00.00.000
3	2024-25 ನೇ ಸಾಲಿನಲ್ಲಿ ಪಾವತಿಗೆ ಬಾಕಿ ಉಳಿದಿರುವ ಪಿಂಚಣಿ ವಂತಿಕೆ ನಿಧಿ ಮೊತ್ತ ರೂ.	**2,07,06,470**

ಈ ಸಂಬಂಧವಾಗಿ **ಲೆಕ್ಕಪರಿತೋಧನಾ ವಿಚಾರಣಾ ಪತ್ರ ಸಂಖ್ಯೆ:137/ದಿ:25-09-2025** ನ್ನು ನೀಡಲಾಗಿದ್ದು ಹಾಜರುಪಡಿಸಲಾದ ಅನುಪಾಲನಾ ವರದಿಯಲ್ಲಿ ನಿಯಮಾನುಸಾರ ಪಿಂಚಣಿ ವಂತಿಕೆಯನ್ನು ನಿರ್ವಹಿಸಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ವಿಶ್ವವಿದ್ಯಾನಿಲಯದ ಪಿಂಚಣಿ ನಿಧಿಯನ್ನು ಎಸ್.ಬಿ.ಐ. ಬ್ಯಾಂಕ್ ಉಳಿತಾಯ ಖಾತೆಯ:54035421279 ರಲ್ಲಿ ನಿರ್ವಹಿಸಲಾಗಿದ್ದು, ಪಿಂಚಣಿ ವಂತಿಕೆ ನಿಧಿ ಬಾಕಿ ಮೊತ್ತ ರೂ.2.07.06.470/- ಗಳನ್ನು ಪಿಂಚಣಿ ನಿಧಿಖಾತೆಗೆ ಜಮಾ ಮಾಡಿ ಮಾಹಿತಿಯನ್ನು ಲೆಕ್ಕಪರಿತೋಧನೆಗೆ ಹಾಜರುಪಡಿಸುವವರೆಗೆ **ರೂ.2,07,06,470/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

34.2 ಪಿಂಚಣಿ ಮತ್ತು ಕುಟುಂಬ ಪಿಂಚಣಿ ಪ್ರಾಧಿಕರಣದ ಬಗ್ಗೆ: (ವಿಚಾರಣಾ ಪತ್ರ ಸಂಖ್ಯೆ:23/ ದಿ:03-07-2025)

ವಿಶ್ವವಿದ್ಯಾನಿಲಯದಲ್ಲಿ ನಿವೃತ್ತರಾದ ನೌಕರರ ಪಿಂಚಣಿ ಮತ್ತು ಕುಟುಂಬ ಪಿಂಚಣಿ ಪ್ರಾಧೀಕರಣ ಅಧಿಕಾರವನ್ನು ಕುಲಸಚಿವರಿಂದ ಮಂಜೂರಾತಿ ಪಡೆದು ಪ್ರಾಧಿಕರಿಸುವ ಅಧಿಕಾರವನ್ನು ಪರಿನಿಯಮ The Mysore University Pension Statutes -1979, Section -22 ಪ್ರಕರಣ-14 ರಲ್ಲಿ ಹಣಕಾಸು ಅಧಿಕಾರಿಗಳಿಗೆ ನೀಡಲಾಗಿರುತ್ತದೆ. ಸದರಿ ಅಧಿನಿಯಮದನ್ವಯ ಪಿಂಚಣಿ ಮತ್ತು ಕುಟುಂಬ ಪಿಂಚಣಿಗಳನ್ನು ಪ್ರಾಧಿಕರಿಸಲಾಗುತ್ತಿದೆ.

2024-25 ನೇ ಸಾಲಿನಲ್ಲಿ ನಿವೃತ್ತರಾದ, ಸೇವೆಯಲ್ಲಿರುವಾಗಲೇ ಮೃತರಾದ ನೌಕರರ ಸಂಬಂಧವಾಗಿ ಪ್ರಾಧೀಕರಿಸಲಾದ ನಿವೃತ್ತಿ ವೇತನ ಮತ್ತು ಕುಟುಂಬ ಪಿಂಚಣಿ ಪ್ರಕರಣಗಳ ಮಾಹಿತಿಯನ್ನು ಲೆಕ್ಕಪರಿತೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:23/ ದಿ:**03-07-2025** ನೀಡಲಾಗಿದ್ದು, ಪಿಂಚಣಿ ಮತ್ತು ನಿವೃತ್ತಿ ಪಿಂಚಣಿ ಪ್ರಕರಣಗಳ ಘೋಷ್ವಾರೆ ವಿವರಗಳು ಕೆಳಕಂಡಂತಿರುತ್ತವೆ.

ಕ್ರಮ ಸಂಖ್ಯೆ	ವಿವರ	ಪ್ರಾಧೀಕರಿಸಲಾದ ಒಟ್ಟು ಪ್ರಕರಣಗಳು
1	ನಿವೃತ್ತಿ ವೇತನ ಪ್ರಾಧೀಕರಣ ಪ್ರಕರಣಗಳ ಸಂಖ್ಯೆ	1
2	ಕುಟುಂಬ ಪಿಂಚಣಿ ಪ್ರಾಧೀಕರಣ ಸಂಖ್ಯೆ: (ಒಪಿಎಸ್)	2
3	ಕುಟುಂಬ ಪಿಂಚಣಿ ಪ್ರಾಧೀಕರಣ ಸಂಖ್ಯೆ: (ಎನ್‌ಪಿಎಸ್)	5
	ಒಟ್ಟು ಪ್ರಕರಣಗಳು	8

ಮೇಲ್ಕಂಡ ಪಿಂಚಣಿ ಪ್ರಾಧೀಕರಣ ವಿವರಗಳನ್ನು ಅನುಬಂಧ-38ರಲ್ಲಿ ವಿವರಿಸಿದೆ.

ಪಿಂಚಣಿ ಪ್ರಕರಣಗಳ ಸಂಖ್ಯೆಯ ಘೋಷ್ವಾರೆ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ವಿವರ	ಬೋಧಕ ವರ್ಗ			ಬೋಧಕೇತರ ವರ್ಗ			ಒಟ್ಟು
		ಪಿಂಚಣಿ ಪ್ರಕರಣಗಳ ಸಂಖ್ಯೆ	ಕುಟುಂಬ ಪಿಂಚಣಿ ಪ್ರಕರಣಗಳ ಸಂಖ್ಯೆ	ಒಟ್ಟು	ಪಿಂಚಣಿ ಪ್ರಕರಣಗಳ ಸಂಖ್ಯೆ	ಕುಟುಂಬ ಪಿಂಚಣಿ ಪ್ರಕರಣಗಳ ಸಂಖ್ಯೆ	ಒಟ್ಟು	
1	ದಿನಾಂಕ: 01-04-2024 ಕ್ಕೆ ಪ್ರಾರಂಭಿಕ ಸಂಖ್ಯೆ	39	7	46	51	44	95	141

2	2024–25 ರಲ್ಲಿ ಪ್ರಾಧೀಕರಿಸಿ ಸೇರ್ಪಡೆಯಾದ ಪ್ರಕರಣಗಳು			0	1	7	8	8
3	ಒಟ್ಟು ಪ್ರಕರಣಗಳು (1–2)	39	7	46	52	51	103	149
4	2024–25 ರಲ್ಲಿ ಪರಿವರ್ತನೆಯಾದ ಪ್ರಕರಣಗಳು	0		0	1		1	1
5	2024–25 ರಲ್ಲಿ ಮುಕ್ತಾಯವಾದ ಪ್ರಕರಣಗಳು	2		2	1	0	1	3
6	ಪರಿವರ್ತನೆ/ಮುಕ್ತಾಯವಾದ ಒಟ್ಟು ಪ್ರಕರಣಗಳು (4+5)	2	0	2	2	0	2	4
7	ದಿನಾಂಕ: 31–03–2025ಕ್ಕೆ ಚಾಲ್ತಿಯಲ್ಲಿರುವ ಪ್ರಕರಣಗಳು	37	7	44	50	51	101	145

2024–25ನೇ ಸಾಲಿನಲ್ಲಿ ನಿವೃತ್ತಿ ಹೊಂದಿ ರಾಷ್ಟ್ರೀಯ ಪಿಂಚಣಿ ಯೋಜನೆಯಡಿಯಲ್ಲಿ ನಿವೃತ್ತಿ/ಮರಣ ಹೊಂದಲಾದ ನೌಕರರುಗಳಿಗೆ ನೀಡಲಾದ ನಿವೃತ್ತಿ/ಮರಣ ಆರ್ಥಿಕ ಸೌಲಭ್ಯಗಳ ವಿವರಗಳು ಕೆಳಕಂಡಂತಿರುತ್ತವೆ.

ಕ್ರಮ ಸಂಖ್ಯೆ	ವಿವರ	ಪ್ರಾಧೀಕರಿಸಲಾದ ಒಟ್ಟು ಪ್ರಕರಣಗಳು
1	ಡಿಸಿಆರ್‌ಜಿ ಪಾವತಿ ಪ್ರಕರಣಗಳು (ಬೋಧಕೇತರ ನೌಕರರು)	2
2	ಗಳಿಕೆ ರಜೆ ನಗದೀಕರಣ ಪ್ರಕಣಗಳು (ಬೋಧಕೇತರ ನೌಕರ)(ತಾತ್ಕಾಲಿಕ)	1
3	ಗಳಿಕೆ ರಜೆ ನಗದೀಕರಣ ಪ್ರಕಣಗಳು (ಬೋಧಕ ಸಿಬ್ಬಂದಿ)	1
	ಒಟ್ಟು ಪ್ರಕರಣಗಳು	4

2024–25ನೇ ಸಾಲಿನಲ್ಲಿ ಪಿಂಚಣಿ, ಕುಟುಂಬ ಪಿಂಚಣಿ ಹಾಗೂ ನಿವೃತ್ತಿ ಸೌಲಭ್ಯಗಳ ಸಂಬಂಧವಾಗಿ ಭರಿಸಲಾದ ವೆಚ್ಚಗಳು ವಾರ್ಷಿಕ ಲೆಕ್ಕಪತ್ರಗಳಂತೆ ಕೆಳಕಂಡಂತಿರುತ್ತವೆ.

ಕ್ರಮ ಸಂಖ್ಯೆ	ವಿವರ	ಮೊತ್ತ
1	ಪಿಂಚಣಿ/ಕುಟುಂಬಪಿಂಚಣಿ (ಬೋಧಕ&ಬೋಧಕೇತರ)	9,38,53,373
2	ನಿವೃತ್ತಿ ಸೌಲಭ್ಯಗಳು (ಬೋಧಕ & ಬೋಧಕೇತರ) (ಉಪದಾನ, ಪರಿವರ್ತಿತ ಪಿಂಚಣಿ ಮೌಲ್ಯ)	64,63,808
	ಒಟ್ಟು ಮೊತ್ತ ರೂ.	**10,03,17,181**

ಮೇಲ್ಕಂಡ ವಿವರಗಳನ್ವಯ ಬೋಧಕ ಮತ್ತು ಬೋಧಕೇತರ ನೌಕರರಿಗೆ ಪ್ರತ್ಯೇಕವಾಗಿ ಪಿಂಚಣಿ ಮತ್ತು ಕುಟುಂಬ ಪಿಂಚಣಿ ಹಾಗೂ ನಿವೃತ್ತ ಸೌಲಭ್ಯಗಳ ವೆಚ್ಚಗಳ ವರ್ಗೀಕರಣ ನಿರ್ವಹಿಸಿರುವುದಿಲ್ಲ. ವಾರ್ಷಿಕ ಲೆಕ್ಕಪತ್ರಗಳಲ್ಲಿಯೂ ಕೂಡ ಘೋಷ್ವಾರೆ ವೆಚ್ಚಗಳನ್ನು ಮಾತ್ರ ದಾಖಲಿಸಲಾಗಿರುತ್ತದೆ. ಪಿಂಚಣಿ/ಕುಟುಂಬ ಪಿಂಚಣಿ ಪಾವತಿಯ ಬಟವಾಡೆ ವಹಿಯಲ್ಲಿ ವರ್ಷಾಂತ್ಯಕ್ಕೆ ಪಾವತಿಸಲಾದ ಪಿಂಚಣಿ, ಕುಟುಂಬ ಪಿಂಚಣಿ ಹಾಗೂ ನಿವೃತ್ತಿ ಸೌಲಭ್ಯಗಳ ವಿವರವಾದ ಘೋಷ್ವಾರೆ ಮಾಹಿತಿಯನ್ನು ದಾಖಲಿಸಿ ಲೆಕ್ಕಪತ್ರಗಳನ್ನು ನಿರ್ವಹಿಸಲು ಸೂಚಿಸಿದೆ.

34.3 ಪಿಂಚಣಿ ಮತ್ತು ಕುಟುಂಬ ಪಿಂಚಣಿ ಪ್ರಾಧೀಕರಣದ ವಹಿ ನಿರ್ವಹಿಸದಿರುವುದು:

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದದ ಬೋಧಕ ಮತ್ತು ಬೋಧಕೇತರ ನೌಕರರ ಸಂಬಂಧ ನಿವೃತ್ತಿ ಮತ್ತು ಕುಟುಂಬ ಪಿಂಚಣಿಗಳನ್ನು ಕಡತದಲ್ಲಿ ಪ್ರಾಧೀಕರಿಸಲಾಗುತ್ತಿದ್ದು ಪಿಂಚಣಿ ಪ್ರಾಧೀಕರಣ ಆದೇಶ (Pention Payment Order) ಸಂಖ್ಯೆಗಳನ್ನು ನೀಡಲಾಗುತ್ತಿದ್ದೆ, ಆದರೆ ಸದರಿ ಪ್ರಾಧೀಕರಿಸಲಾದ ಪಿಂಚಣಿ ವಿವರಗಳನ್ನು ದಾಖಲಿಸುವ ಪಿಂಚಣಿ ಪ್ರಾಧೀಕರಣ ಆದೇಶದ ವಹಿ (Pention Payment Order Register) ನ್ನು ನಿರ್ವಹಿಸಿರುವುದಿಲ್ಲ.

ಪಿಂಚಣಿ ಪ್ರಾಧೀಕರಿಸಿ ತದ ನಂತರದಲ್ಲಿ ಹೊಸ ವೇತನ ಶ್ರೇಣಿಗನುಗುಣವಾಗಿ ನಿಗದಿಪಡಿಸಲಾದ ಪಿಂಚಣಿ ಅಥವಾ ಕುಟುಂಬ ಪಿಂಚಣಿಗಳ ವಿವರಗಳು, ಹಾಗೂ ಕರ್ನಾಟಕ ಸರ್ಕಾರದ ಆದೇಶದ ಸಂಖ್ಯೆ: ಆಇ(ವಿಶೇಷ) 120 ಪಿಇಎನ್ 2018, ದಿನಾಂಕ:11-01-2019 ರನ್ವಯ ಪಿಂಚಣಿ/ಕುಟುಂಬ ಪಿಂಚಣಿದಾರರಿಗೆ ಹೆಚ್ಚುವರಿ ಪಿಂಚಣಿ ಪ್ರಮಾಣಗಳನ್ನು ಈ ಕೆಳಕಂಡಂತೆ ಮಂಜೂರು ಮಾಡಲಾಗಿದ್ದು ಸದರಿ ಆದೇಶದನ್ವಯ ಹೆಚ್ಚುವರಿ ಪಿಂಚಣಿ/ಕುಟುಂಬ ಪಿಂಚಣಿ ಪಡೆದಿರುವ ಪಿಂಚಣಿದಾರರ ವಿವರಗಳು ಕೆಳಕಂಡಂತಿರುತ್ತವೆ.

ಕ್ರ.ಸಂ	ಪಿಂಚಣಿ/ಕುಟುಂಬ ಪಿಂಚಣಿದಾರರ ವಯಸ್ಸು	ಹೆಚ್ಚುವರಿ ಪಿಂಚಣಿ/ಕುಟುಂಬ ಪಿಂಚಣಿ ಪ್ರಮಾಣ ಶೇ.	ಬೋಧಕ		ಬೋಧಕೇತರ		ಒಟ್ಟು ಪಿಂಚಣಿದಾರರ ಸಂಖ್ಯೆ
			ಪಿಂಚಣಿ	ಕುಟುಂಬ ಪಿಂಚಣಿ	ಪಿಂಚಣಿ	ಕುಟುಂಬ ಪಿಂಚಣಿ	
1	80 ರಿಂದ 85 ಒಳಗೆ	20%	3	1	2	–	6
2	85 ರಿಂದ 90 ಒಳಗೆ	30%	1	–	2	–	3
3	90 ರಿಂದ 95 ಒಳಗೆ	40%	–	–	–	–	–
4	95 ರಿಂದ 100 ಒಳಗೆ	50%	–	–	–	–	–
5	100 ರಿಂದ ಮೇಲ್ಪಟ್ಟು	100%	–	–	–	–	–
ಒಟ್ಟು ಸಂಖ್ಯೆ			4	1	4	0	9

ಪಿಂಚಣಿ ಪ್ರಾಧೀಕರಣ ವಹಿಯಲ್ಲಿ ಸದರಿ **ಹೆಚ್ಚುವರಿ ಪಿಂಚಣಿ** ಯನ್ನು ವಿವರಗಳನ್ನು ಸಂಬಂಧಪಟ್ಟ ಪಿಂಚಣಿ/ಕುಟುಂಬ ಪಿಂಚಣಿದಾರರ ವೈಯಕ್ತಿಕ ಖಾತೆಗಳಲ್ಲಿ ದಾಖಲಿಸುವ, ಕ್ರಮವಾಗಿ ಪಿಂಚಣಿ ಪ್ರಾಧೀಕರಣ ಆದೇಶದ ವಹಿ (PensionPayment Order Register) ನಿರ್ವಹಿಸುವ ಅಗತ್ಯವಿರುತ್ತದೆ.

ಪಿಂಚಣಿ ಮತ್ತು ಕುಟುಂಬ ಪಿಂಚಣಿದಾರರಿಗೆ ನಿಗದಿಪಡಿಸಲಾದ ಮೂಲ ಪಿಂಚಣಿ, ಜನ್ಮ ದಿನಾಂಕ ಪ್ರಾಧಿಕರಿಸಲಾದ ಪಿಂಚಣಿ ಮೊತ್ತ ಮತ್ತು ಇತರ ಸೌಲಭ್ಯಗಳು ಹಾಗೂ ಹೊಸ ವೇತನ ಶ್ರೇಣಿಗೆ ಅನುಗುಣವಾಗಿ ನಿಗದಿಪಡಿಸಲಾದ ಕನಿಷ್ಟ ಪಿಂಚಣಿ, ಹಾಗೂ ಫಿಟ್‌ಮೆಂಟ್ ಅನ್ವಯ ನಿಗದಿಪಡಿಸಲಾದ ಪಿಂಚಣಿ ಮೊತ್ತಗಳು ಹಾಗೂ ನೀಡಲಾಗಿರುವ ಹೆಚ್ಚುವರಿ ಪಿಂಚಣಿ ಪ್ರಮಾಣಗಳ ವಿವರಗಳನ್ನು ಪ್ರತಿ ಪಿಂಚಣಿದಾರರ ವೈಯಕ್ತಿಕ ಖಾತೆಯಲ್ಲಿ ದಾಖಲಿಸಿ ಕ್ರಮಬದ್ಧವಾಗಿ **ಪಿಂಚಣಿ ಮತ್ತು ಕುಟುಂಬ ಪಿಂಚಣಿ ಪ್ರಾಧಿಕರಣದ ವಹಿ** ನಿರ್ವಹಿಸಿಸಲು ಸೂಚಿಸಿದೆ.

34.4 ಶ್ರೀ ತಿಮ್ಮೇಗೌಡ, ಪರಿಚಾರಕ, ನಿಯಮ ಬಾಹಿರವಾಗಿ ವಿಲೀನಗೊಂಡ ನೌಕರರಿಗೆ ನಿವೃತ್ತಿ ಸೌಲಭ್ಯವಾಗಿ ಗಳಿಕೆ ರಜೆ ನಗದೀಕರಣ ಸೌಲಭ್ಯ ನೀಡಿರುವುದು: (ವಿಚಾರಣಾ ಪತ್ರ ಸಂಖ್ಯೆ:207/ದಿನಾಂಕ:06-12-2025)

ವಿಶ್ವವಿದ್ಯಾನಿಯಲಯದ ಅಧಿಕೃತ ಜ್ಞಾಪನ ಸಂಖ್ಯೆ:ಕರಾಮುಏ/ಆಪ/ಸಿಬ್ಬಂದಿ-2/1001/2022-23, ದಿನಾಂಕ: 01-08-2022 ರಲ್ಲಿ ಒಟ್ಟು 75 ವಿವಿಧ ಹುದ್ದೆಗಳಲ್ಲಿ ಕಾಲಿಕ ವೇತನ ಶ್ರೇಣಿ ತಾತ್ಕಾಲಿಕ ನೌಕರರಾಗಿ ಕಾರ್ಯ ನಿರ್ವಹಿಸುತ್ತಿದ್ದ ನೌಕರರನ್ನು ಖಾಯಂಗೊಳಿಸಲಾಗಿರುವ ಆದೇಶದಲ್ಲಿ ಶ್ರೀ. ತಿಮ್ಮೇಗೌಡ, ಪರಿಚಾರಕರೂ ಒಬ್ಬರಾಗಿರುತ್ತಾರೆ. ಸದರಿ ಕಾಲಿಕ ವೇತನ ಶ್ರೇಣಿ ನೌಕರರನ್ನು ಖಾಯಂಗೊಳಿಸಿರುವ ಆದೇಶವು ನಿಯಮ ಬಾಹಿರವಾಗಿರುವುದನ್ನು ಉಲ್ಲೇಖಿಸಿ ಈ ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ನೇಮಕಾತಿಯನ್ನು ಆಕ್ಷೇಪಿಸಲಾಗಿರುತ್ತದೆ. ಸದರಿ ನೌಕರರ ಖಾಯಮಾತಿ ಸಂಬಂಧವಾಗಿ ಸೂಕ್ತ ಅನುಮೋದನೆಯನ್ನು ಮಾನ್ಯ ಕುಲಾಧಿಪತಿಗಳಿಂದ ಪಡೆಯದೇ ನಿವೃತ್ತಿವರೆಗೂ ಮುಂದುವರೆಸಿಕೊಂಡು ಬರಲಾಗಿರುತ್ತದೆ.

KSOU (Adoption of Service Rules of State Government) Statutes–2009. ರಲ್ಲಿ

The provisions of Karnataka Civil Service Rules, Karnataka Financial Code and Manual of Contingent Expenditure, with its amendments, clarifications and connected Govrnment Orders issued from time to time by the state Government, shall be adopted mutatis mutandis (Subject to modification stated here in below) for use in the Karnataka State open university Until the university makes its own statutes governing these provision.

ಎಂಬುದನ್ನು ಸ್ಪಷ್ಟಪಡಿಸಿರುತ್ತದೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ನು ಯಥಾವತ್ತಾಗಿ ಅಳವಡಿಕೊಂಡಿದ್ದರೂ, ಯಾವುದೇ ನಿಯಮಗಳಲ್ಲಿ ಅವಕಾಶಗಳಿಲ್ಲ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡಿ ಪಾವತಿಸುತ್ತಿರುವ ಕ್ರಮವು ಜಾರಿಯಲ್ಲಿರುವ ನಿಯಮಗಳಿಗೆ ವಿರುದ್ಧವಾಗಿರುತ್ತದೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು ಅನ್ವಯವಾಗದ ಸದರಿ ನೌಕರರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ–112, 114 ಮತ್ತು 118 ರಂತೆ ಕ್ರಮವಾಗಿ ಗಳಿಕೆ ರಜೆ, ಪರಿವರ್ತಿತ ರಜೆ, ಮತ್ತು ಗಳಿಕೆ ರಜೆ ನಗದೀಕರಣ ಸೌಲಭ್ಯವನ್ನು ನಿಯಮಬಾಹಿರವಾಗಿ ವಿಸ್ತರಿಸಲಾಗಿರುತ್ತದೆ.

ಸದರಿ ನೌಕರರ ನೇಮಕಾತಿ, ವೇತನ ನಿಗದೀಕರಣ ಹಾಗೂ ಇತರೇ ಸೌಲಭ್ಯಗಳ ಮಂಜೂರಾತಿಯೇ ನಿಯಮ ಬಾಹಿರವಾಗಿದ್ದು ಸದರಿಯವರಿಗೆ ಕಛೇರಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–2/1098/2024–25 ದಿನಾಂಕ:30–05–2024 ರಲ್ಲಿ ನೌಕರರಿಗೆ 203 ದಿನಗಳ ನಿವೃತ್ತಿ ಗಳಿಕೆ ರಜೆ ನಗದೀಕರಣ ಸೌಲಭ್ಯದ ಮೊತ್ತ ರೂ.2,31,900/– ಗಳನ್ನು ಸಾಮಾನ್ಯ ನಿಧಿಯ ಧನಾದೇಶ ಸಂಖ್ಯೆ:313587 ದಿನಾಂಕ:18–07–2024 ರಲ್ಲಿ ಪಾವತಿಸಲಾಗಿರುತ್ತದೆ.

ಸದರಿ ನೌಕರರನ್ನು ಕಾಲಿಕ ವೇತನ ನೌಕರರಿಂದ ಖಾಯಂಗೊಳಿಸಿ ನೇಮಿಸಿರುವ ನೇಮಕಾತಿಯು ಮಾನ್ಯ ರಾಜ್ಯಪಾಲರಿಂದ ಅನುಮೋದನೆಪಡೆಯದಿರುವುದರಿಂದ ಇವರು ಖಾಯಂ ನೌಕರರೆಂದು ಪರಿಗಣಿಸಲು ಬರುವುದಿಲ್ಲ. ಹಾಗೂ ಯಾವುದೇ ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸಲು ನಿಯಮಗಳಲ್ಲಿ ಅವಕಾಶಗಳಿರುವುದಿಲ್ಲ. ಈ ಸಂಬಂಧವಾಗಿ ವಿಚಾರಣಾ ಪತ್ರ ಸಂಖ್ಯೆ:**207**/ದಿ:**06–12–2025** ನೀಡಲಾಗಿದ್ದು ನೀಡಲಾದ ಅನುಪಾಲನಾ ವರದಿ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/985/2025–26 ದಿನಾಂಕ:06–01–2026 ರಲ್ಲಿ ಅಪೇಕ್ಷಿಸುವ ಅಂಶಗಳಿಗೆ ಉತ್ತರ ನೀಡಿರುವುದಿಲ್ಲ, ಬದಲಾಗಿ ನೌಕರರ ನೇಮಕಾತಿಯು ಕುರಿತು ವಿವರಿಸಲಾಗಿರುತ್ತದೆ.

ನಿಯಮಗಳಲ್ಲಿ ಅವಕಾಶವಿಲ್ಲದೇ ನಿವೃತ್ತ ವಿಲೀನ ನೌಕರರಿಗೆ ಪಾವತಿಸಲಾಗಿರುವ ನಿವೃತ್ತಿ ಗಳಿಕೆ ರಜೆ ನಗದೀಕರಣ ಮೊತ್ತವನ್ನು ಸಂಬಂಧಪಟ್ಟ ಮಂಜೂರಾತಿ ಪ್ರಾಧಿಕಾರದಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ನಿಧಿಗೆ ಜಮಾ **ಮಾಡುವವರೆಗೆ ರೂ.2,31,900/– ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ.**

34.5 ರಾಷ್ಟ್ರೀಯ ಪಿಂಚಣಿ ಯೋಜನೆ:

(ಅ) ರಾಷ್ಟ್ರೀಯ ಪಿಂಚಣಿ ಯೋಜನೆ (National pention Scheme) ಯ ವಂತಿಕೆ, ಸಂಗ್ರಹಣೆ, ಪಾವತಿ ಮತ್ತು ಬಾಕಿ: (ವಿಚಾರಣಾ ಪತ್ರ ಸಂಖ್ಯೆ:95/ದಿ:18–08–2025)

ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಾಷ್ಟ್ರೀಯ ಪಿಂಚಣಿ ಯೋಜನೆ (National pention Scheme) ಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರು ಬೋಧಕೇತರ ನೌಕರರ ಸಂಬಂಧವಾಗಿ ಅಧಿಕಾರಿ/ನೌಕರರ ವಂತಿಕೆ ಹಾಗೂ ಉದ್ಯೋಗದಾತರಾದ ವಿಶ್ವವಿದ್ಯಾನಿಲಯದ ವಂತಿಕೆಯನ್ನು ನಿಯಮಮಾನುಸಾರ ಮಾಸಿಕ ವೇತನ ಬಿಲ್ಲುಗಳಲ್ಲಿ ಕಟಾಯಿಸಿರುವ ಹಾಗೂ ಸಂಬಂಧಪಟ್ಟ ಅಧಿಕಾರಿ ನೌಕರರ ಪ್ರಾನ್ ಖಾತೆಗಳಿಗೆ ಜಮೆಯಾಗಿರುವ ಮಾಹೆವಾರು ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿದೆ. ಹಾಗೂ ದಿನಾಂಕ:**31–03–2025** ರ ಅಂತ್ಯಕ್ಕೆ ಅಧಿಕಾರಿ ಸಿಬ್ಬಂದಿಗಳ ಪ್ರಾನ್ ಖಾತೆಗಳಿಗೆ ವಂತಿಕೆ ಪಾವತಿಯು ಬಾಕಿ ಉಳಿದಿರುವ ಮಾಹೆವಾರು ವಿವರಗಳನ್ನು ಸಿಬ್ಬಂದಿವಾರು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:95/ದಿ:18–08–2025 ನೀಡಲಾಗಿದೆ. ಹಾಜರುಪಡಿಸಲಾದ ಮಾಹಿತಿಯನ್ವಯ ಎನ್‌ಪಿಎಸ್ ಖಾತೆಯ ಜಮಾ–ಬಾರ್ಜು ವಿವರಗಳು ಕೆಳಕಂಡಂತಿರುತ್ತವೆ.

ಎನ್‌ಪಿಎಸ್ ಖಾತೆಯ ಜಮಾ-ಖರ್ಚು ವಿವರ ಪಟ್ಟಿ					
ಜಮಾ			ಖರ್ಚು		
ಕ್ರಮ ಸಂಖ್ಯೆ	ವಿವರ	ಮೊತ್ತ	ಕ್ರಮ ಸಂಖ್ಯೆ	ವಿವರ	ಮೊತ್ತ
1	ಉದ್ಯೋಗಿಯ ವಂತಿಕೆ ಮೊತ್ತ	3,08,57,054	1	ಎನ್‌ಪಿಎಸ್ ವಂತಿಕೆ ಅಪ್‌ಲೋಡೆಡ	6,76,69,929
2	ವಿಶ್ವವಿದ್ಯಾನಿಲಯದ ವಂತಿಕೆ ಮೊತ್ತ	4,36,93,844	2	ಹಿಂದಿನ ಸಾಲಿನ ವಂತಿಕೆ ಪಾವತಿ	10,69,537
3			3	ಉದ್ಯೋಗಿ ವಂತಿಕೆ ಮರುಪಾವತಿ	69,201
			4	ತ್ರೈಮಾಸಿಕ ಅಪ್‌ಲೋಡ್ ಮೆಚ್ಚ	44,277
ಒಟ್ಟು ಸ್ವೀಕೃತಿ		7,25,50,898	ಒಟ್ಟು ಪಾವತಿ		6,88,52,944
01-04-2024 ಕ್ಕೆ ಪ್ರಾರಂಭ ಶಿಲ್ಕು		1,67,68,777	31-03-2025 ಕ್ಕೆ ಅಂತಿಮ ಶಿಲ್ಕು		2,0466,731
ಒಟ್ಟು ಮೊತ್ತ		8,93,19,675	ಒಟ್ಟು ಮೊತ್ತ		8,93,19,675

2024-25 ನೇ ಸಾಲಿನಲ್ಲಿ ಅಪ್‌ಲೋಡ್ ಮಾಡಬೇಕಾದ, ಅಪ್‌ಲೋಡ್ ಮಾಡಲಾದ ಮತ್ತು ಅಪ್‌ಲೋಡ್‌ಗೆ ಬಾಕಿ ವಂತಿಗೆ ಮೊತ್ತಗಳ ವಿವರಗಳು ಕೆಳಕಂಡಂತಿರುತ್ತವೆ.

2024-25 ನೇ ಸಾಲಿನಲ್ಲಿ ಎನ್‌ಪಿಸ್ ಅಪ್‌ಲೋಡ್ ಮಾಡಬೇಕಾದ ಮೊತ್ತ, ಅಪ್‌ಲೋಡ್ ಮಾಡಿರುವ ಮೊತ್ತ ಮತ್ತು ಅಪ್‌ಲೋಡ್‌ಗೆ ಬಾಕಿ ಉಳಿದ ಮೊತ್ತಗಳ ವಿವರ ಪಟ್ಟಿ		
1	2024-25 ನೇ ಸಾಲಿನಲ್ಲಿ ಸ್ವೀಕೃತಿ ವಂತಿಕೆ	7,25,50,898
2	2024-25 ನೇ ಸಾಲಿನಲ್ಲಿ ಅಪ್‌ಲೋಡ್ ಮೊತ್ತ	6,76,69,929
3	2024-25 ನೇ ಸಾಲಿನಲ್ಲಿ ಅಪ್‌ಲೋಡ್ ಬಾಕಿ ಮೊತ್ತ ರೂ.	48,80,969

ಮೇಲಿನಂತೆ **2024-25**ನೇ ಸಾಲಿಗೆ ಎನ್‌ಪಿಎಸ್ ವಂತಿಕೆ ಮೊತ್ತ ರೂ.**48,80,969/-** ಗಳು ಅಪ್‌ಲೋಡ್‌ಗೆ ಬಾಕಿ ಇದ್ದು ಸದರಿ ಮೊತ್ತಗಳನ್ನು ಸಂಬಂಧಪಟ್ಟ ನೌಕರರ ಪ್ರಾನ್ ಖಾತೆಗೆ ಜಮಾ ಮಾಡಿ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೆ **ರೂ.48,80,969/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ವಿವರಗಳನ್ನು ಅನುಬಂಧ ಸಂಖ್ಯೆ- 19 ರಲ್ಲಿ ವಿವರಿಸಿದೆ.

(ಆ) ನೂತನ ಪಿಂಚಣಿ ವಂತಿಕೆ ಯೋಜನೆಗೆ (NPS) ಎನ್.ಪಿ.ಎಸ್ ಘಟಕ (NPS Implementation Cell) ಕಾರ್ಯ ನಿರ್ವಹಿಸದಿರುವುದು: (ವಿಚಾರಣಾ ಪತ್ರ ಸಂಖ್ಯೆ: 133/ದಿನಾಂಕ:24-09-2025)

ಸರ್ಕಾರದ ಆದೇಶ ಸಂಖ್ಯೆ:FD (Spl) 28 pen 2009. Dated 29-03-2010 ರ ಅನ್ವಯ ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೂತನ ಪಿಂಚಣಿವಂತಿಕೆ ಯೋಜನೆ ವ್ಯಾಪ್ತಿಗೆ ಒಳಪಡುವ ನೌಕರರ ವಂತಿಕೆ ಕಟಾವಣೆ ಮತ್ತು ಪ್ರಾನ್ ಖಾತೆಗಳಿಗೆ ವಂತಿಕೆ ಮೊತ್ತಗಳನ್ನು ಜಮಾ ಮಾಡುವ ಬಗ್ಗೆ ವಿವರವಾಗಿ ತಿಳಿಸಲಾಗಿರುತ್ತದೆ. ಸದರಿ ಆದೇಶದನ್ವಯ ವಿಶ್ವವಿದ್ಯಾನಿಲಯವು ಅಧಿಸೂಚನೆ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-28779/200910 ಪಿನಂ:1726 ದಿನಾಂಕ:18-03-2017 ರಲ್ಲಿ ಎನ್‌ಪಿಎಸ್ ಘಟಕಕ್ಕೆ ಅಗತ್ಯ ಸಿಬ್ಬಂದಿಗಳನ್ನು ನೇಮಿಸಿ ಎನ್‌ಪಿಎಸ್ ಸಂಬಂಧಿಸಿದಂತೆ ಸರ್ಕಾರಿ ಆದೇಶದಲ್ಲಿ ಸೂಚಿಸಿರುವಂತೆ ಕಾರ್ಯನಿರ್ವಹಿಸಿ ನಿಗದಿಪಡಿಸಿರುವ ವಹಿಗಳು ಹಾಗೂ ಲೆಕ್ಕಪತ್ರಗಳನ್ನು ನಿರ್ವಹಿಸಿ ನಿಯಮಾನುಸಾರ ಎನ್‌ಪಿಎಸ್ ವಂತಿಕೆಯನ್ನು ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳ ಪ್ರಾನ್ ಖಾತೆಗೆ ಅಪ್‌ಲೋಡ್ ಮಾಡಲು ಸೂಚಿಸಲಾಗಿರುತ್ತದೆ.

ಉಲ್ಲೇಖಿತ ಸರ್ಕಾರಿ ಆದೇಶ ಹಾಗೂ ವಿಶ್ವವಿದ್ಯಾನಿಲಯದ ಆದೇಶಗಳನ್ವಯ ಈ ಕೆಳಕಂಡ ದಾಖಲೆಗಳನ್ನು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಬೇಕಾಗಿರುತ್ತದೆ.

01. Details of all registered with the CRA for the NPS.

02. Statement of subscribers Transactions.

03. Subscriber's retierements details.

04. Detials of Government backlog contribution.

05. The NPS Cell shall monitor timely payment of the contributions and resolve issues related to missing contributions.

ಎನ್‌ಪಿಎಸ್ ಖಾತೆಯ 2024–25ನೇ ಸಾಲಿನ ಜಮಾ ಖರ್ಚು ತಃಖ್ತೆಯಂತೆ ಎನ್‌ಪಿಎಸ್ ಖಾತೆಗೆ ಅಪ್‌ಲೋಡ್ ಮಾಡಬೇಕಾದ ರೂ.48,80,969/– ಬಾಕಿ ಉಳಿದಿರುವ ಮೊತ್ತ ಸೇರಿದಂತೆ ಒಟ್ಟು ರೂ.204,66,731/– ಮೊತ್ತವು ಬಾಕಿ ಉಳಿದಿರುತ್ತದೆ. ದಿನಾಂಕ:01–04–2024 ಕ್ಕೆ ಅಪ್‌ಲೋಡ್‌ಗೆ ಬಾಕಿ ಮೊತ್ತ ರೂ.1,67,68,777/– ಗಳಿಗೆ ಯಾವುದೇ ಮಾಹಿತಿಯು ಲೆಕ್ಕಪರಿಶೋಧನೆಗೆ ಲಭ್ಯವಾಗಿರುವುದಿಲ್ಲ. ಇದರಿಂದಾಗಿ ಸಂಬಂಧಪಟ್ಟ ಅಧಿಕಾರಿ/ನೌಕರರಿಗೆ ಲಭ್ಯವಾಗಬಹುದಾದ ನಿವೃತ್ತಿ ಸೌಲಭ್ಯಗಳಲ್ಲಿ ವ್ಯತ್ಯಾಸ ಉಂಟಾಗುವ ಸಾಧ್ಯತೆಗಳಿದ್ದು ಈ ಪರಿಣಾಮದಿಂದ ಉದ್ಯೋಗಿಗೆ ನಷ್ಟ ಉಂಟಾಗುವ ಸಾಧ್ಯತೆಗಳು ಇದ್ದು, ಆರ್ಥಿಕ ಶಿಸ್ತು ಕಾಪಾಡುವಲ್ಲಿನ ವೈಫಲ್ಯವಾಗಿರುತ್ತದೆ.

ಅಪ್‌ಲೋಡ್‌ಗೆ ಬಾಕಿ ಉಳಿದಿರುವ ಮೊತ್ತ **ರೂ.2,04,66,731/–** ಗಳು ಬೃಹತ್ತಾದ ಮೊತ್ತವಾಗಿದ್ದು, ನಿಯಮಾನುಸಾರ ವಂತಿಕೆಯನ್ನು ಸಂಬಂಧಪಟ್ಟ ಉದ್ಯೋಗಿಯ ಪ್ರಾನ್ ಖಾತೆಗೆ ಅಪ್‌ಲೋಡ್ ಮಾಡುವಲ್ಲಿ ನಿಯೋಜಿಸಲಾದ ಎನ್.ಪಿ.ಎಸ್ ಘಟಕವು ವಿಫಲವಾಗಿರುತ್ತದೆ. ಎನ್‌ಪಿಎಸ್ ಘಟಕದ ಈ ವಿಫಲತೆಗೆ ಸೂಕ್ತ ಮಾಹಿತಿ ಹಾಗೂ ಬಾಕಿ ಮೊತ್ತವನ್ನು ಅಪ್‌ಲೋಡ್ ಮಾಡಲು ವಿಳಂಬವಾಗಿರುವುದಕ್ಕೆ ಸೂಕ್ತ ಮಾಹಿತಿ ಹಾಗೂ ಮೇಲ್ಕಂಡ ವಿವರಗಳಂತೆ ನಿರ್ವಹಿಸಬೇಕಾದ ವಹಿಗಳು ಮತ್ತು ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವುದು ಹಾಗೂ ಅಂತಿಮ ತಿಲ್ಲು ಯಾವ ಯಾವ ಉದ್ಯೋಗಿಗಳಿಗೆ ಸಂಬಂಧಿಸಿದ ಮೊತ್ತವಾಗಿರುತ್ತದೆ ಎಂಬ ಮಾಹಿತಿಯನ್ನು ಹಾಜರುಪಡಿಸಲು ಕೋರಿ **ವಿಚಾರಣಾ ಪತ್ರ ಸಂಖ್ಯೆ:** 133/ದಿ:24–09–2025ನ್ನು ನೀಡಲಾಗಿದೆ.

ಅದಕ್ಕೆ ಹಣಕಾಸು ಅಧಿಕಾರಿಗಳು ಎನ್‌ಪಿಎಸ್ ಘಟಕಕ್ಕೆ ನೀಯೋಜಿತವಾದ ಸಿಬ್ಬಂದಿಗಳು ವಿಶ್ವವಿದ್ಯಾನಿಲಯದ ಇತರೇ ವಿಭಾಗಗಳಿಗೆ ನೇಮಕವಾಗಿದ್ದು, ಸದರಿ ಹುದ್ದೆಗಳಿಗೆ ಪರ್ಯಾಯ ಸಿಬ್ಬಂದಿಗಳನ್ನು ಈ ವರೆಎಗೆ ನಿಯೋಜಿಸಿರುವುದಿಲ್ಲವೆಂದು ಹಾಗೂ ಎನ್‌ಪಿಎಸ್ ವಂತಿಕೆ ಮೊತ್ತಗಳಲ್ಲಿ ದೋಧಕರ ವರ್ಗದವರಿಗೆ ಮೊತ್ತ ಪಾವತಿಸಲು ಬಾಕಿ ಇರುವುದಾಗಿ ವಿವರಣೆ ನೀಡಿರುತ್ತಾರೆ.

ಎನ್‌ಪಿಎಸ್ ಖಾತೆ ಅಂತಿಮ ತಿಲ್ಕಿನಲ್ಲಿ ಸಿಬ್ಬಂದಿವರ್ಗದವರ ಪ್ರಾನ್ ಖಾತೆಗೆ ಹಾಗೂ ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿಗೆ ಜಮೆಯಾಗಬೇಕಾದ ಮೊತ್ತಗಳು ಹಾಗೂ ಇತರ ಹೊಂದಾಣಿಕೆ ವಿವರಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಹಾಗೂ ಎನ್‌ಪಿಎಸ್ ವಂತಿಕೆ ಮೊತ್ತಗಳ ಸಮರ್ಪಕ ನಿರ್ವಹಣೆ ಹಾಗೂ ನಿಗದಿಪಡಿಸಿದ ನಮೂನೆಯಲ್ಲಿ ಲೆಕ್ಕಪತ್ರಗಳನ್ನು ನಿರ್ವಹಿಸಲು ಅನುವಾಗುವಂತೆ ಎನ್.ಪಿ.ಎಸ್ ಘಟಕ (NPS Implementation Cell) ಕ್ಕೆ ನಿಯಮಾನುಸಾರ ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸಿ ಘಟಕವನ್ನು ಕ್ರಿಯಾಶೀಲಗೊಳಿಸಲು ಸೂಚಿಸಿದೆ.

34.6 ರಾಷ್ಟ್ರೀಯ ಪಿಂಚಣಿ ಯೋಜನೆ ನಿಧಿಯಿಂದ ತ್ರೈಮಾಸಿಕ ಅಪ್‌ಲೋಡ್ ವೆಚ್ಚ ಪಾವತಿಸಿರುವುದು:

2024–25 ನೇ ಸಾಲಿನಲ್ಲಿ ಎನ್‌ಪಿಎಸ್ ಸಂಬಂಧ ವಂತಿಕೆ ಮೊತ್ತಗಳನ್ನು ಸಂಬಂಧಪಟ್ಟ ಉದ್ಯೋಗಿಗಳ ಪ್ರಾನ್ ಖಾತೆಗಳಿಗೆ ವಂತಿಕೆ ಮೊತ್ತಗಳನ್ನು ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡಲು ಈ ಕೆಳಗಿನಂತೆ ಅಪ್‌ಲೋಡ್ ಶುಲ್ಕಗಳನ್ನು ಸಾಮಾನ್ಯ ನಿಧಿಯಿಂದ ಪಾವತಿಸುವ ಬದಲು ಎನ್‌ಪಿಎಸ್ ಖಾತೆಯಿಂದ ಭರಿಸಲಾಗಿರುತ್ತದೆ.

ಎನ್‌ಪಿಎಸ್ ಮೊತ್ತವನ್ನು ಅಪ್‌ಲೋಡ್ ಮಾಡಲು ತ್ರೈಮಾಸಿಕವಾಗಿ ಎನ್‌ಎಸ್‌ಟಿಎಸ್ ಸಂಸ್ಥೆಗೆ ಶುಲ್ಕ ಪಾವತಿ ವಿವರ ಪಟ್ಟಿ						
ಕ್ರಮ ಸಂಖ್ಯೆ	ಸ್ವೀಕೃತಿ ದಾರರು	ಪಾವತಿ ವಿವರ	ಧನಾದೇ ಸಂಖ್ಯೆ	ದಿನಾಂಕ	ಮೊತ್ತ ರೂ	ಷರಾ

1	NSDL Quarterly Charges	Quarterly Bill Charges from Jan 2024 to Mar 2024 to Protean e-Gov Technologies Limited. Mumbai through NEFT.	067458	10.06.2024	10829	ತ್ರೈಮಾಸಿಕ ಅಪ್‌ಲೋಡ
2	NSDL Quarterly Charges	Quarterly Bill Charges from April 2024 to June 2024 Protean e-Gov. Technologies Limited. Mumbai through NEFT.	067464	09.09.2024	9424	ತ್ರೈಮಾಸಿಕ ಅಪ್‌ಲೋಡ
3	NSDL Quarterly Charges	Quarterly Bill Charges from July 2024 to Sept 2024 Protean e-Gov. Technologies limited. Mumbai through NEFT.	067470	27.01.2025	13396	ತ್ರೈಮಾಸಿಕ ಅಪ್‌ಲೋಡ
4	NSDL Quarterly Charges	Quarterly Bill Charges from Oct 2024 to Dec 2024 Protean e-Gov. Technologies limited. Mumbai through NEFT.	067473	15.03.2025	10628	ತ್ರೈಮಾಸಿಕ ಅಪ್‌ಲೋಡ
		ಒಟ್ಟು ಮೊತ್ತ ರೂ.			**44277**	

ಮೇಲ್ಕಂಡ ವಿವರಗಳಂತೆ ಪಾವತಿಸಲಾದ ಅಪ್‌ಲೋಡ್ ಮೊತ್ತವನ್ನು ಸಾಮಾನ್ಯ ನಿಧಿ ಖಾತೆಯಿಂದ, ಎನ್‌ಪಿಎಸ್ ಖಾತೆಗೆ ವರ್ಗಾಯಿಸುವವರೆಗೆ ಪಾವತಿ ಮೊತ್ತ **ರೂ.44,277/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

34.7 ಡಿಫೈನ್ಡ್ ಕುಟುಂಬ ಪಿಂಚಣಿ ಪ್ರಾಧಿಕರಿಸಿ ಎನ್‌ಪಿಎಸ್ ಖಾತೆಯಲ್ಲಿ ಉದ್ಯೋಗದಾತರ ವಂತಿಕೆ ಮೊತ್ತವನ್ನು ವಿಶ್ವವಿದ್ಯಾನಿಲಯದ ಖಾತೆಗೆ ಹಿಂಪಡೆಯದಿರುವುದು: (ವಿಚಾರಣಾ ಪತ್ರ ಸಂಖ್ಯೆ:127/ದಿನಾಂಕ:19-09-2025)

ಸರ್ಕಾರದ ಆದೇಶ ಸಂಖ್ಯೆ:ಆಇ 34 ಪಿಇಎನ್ 2018, ದಿನಾಂಕ:23-06-2018, ದಿನಾಂಕ:01-04-2006 ರಂದು ಮತ್ತು ತದನಂತರ ಸರ್ಕಾರಿ ಸೇವೆಗೆ ಸೇರಿದ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ (New Defined Pension Contribution) ಕೊಡುಗೆ ಯೋಜನೆಯಡಿ ಬರುವ ಸರ್ಕಾರಿ ನೌಕರರಿಗೆ ನಿವೃತ್ತಿ ಉಪದಾನ, ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿ ಸೌಲಭ್ಯವನ್ನು ದಿನಾಂಕ:01-04-2018 ರಿಂದ ಜಾರಿಗೆ ಬರುವಂತೆ ವಿಸ್ತರಿಸಿ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಆಇ 34 ಪಿಇಎನ್ 2018 (ಭಾ), ದಿನಾಂಕ:19-08-2021 ಮಾರ್ಗಸೂಚನೆಗಳನ್ವಯ ದಿನಾಂಕ:01-04-2018 ರಂದು ಮತ್ತು ತದನಂತರ ಸೇವೆಯಲ್ಲಿರುವಾಗಲೇ ಮೃತರಾದ ನೌಕರರ ನಾಮ ನಿರ್ದೇಶಿತರ ಲಿಖಿತ ಆಯ್ಕೆ ಮೇರೆಗೆ ಕುಟುಂಬ ಪಿಂಚಣಿ ಪಾವತಿಗಾಗಿ ಸ್ವೀಕೃತಗೊಂಡ ಪ್ರಸ್ತಾವನೆಗಳ ಸಂಬಂಧವಾಗಿ ಪಿಂಚಣಿ ಪ್ರಾಧಿಕರಣ ಹಾಗೂ ಮರಣ ಉಪದಾನವನ್ನು ಪ್ರಾಧಿಕರಿಸುವ ಸಂಬಂಧವಾಗಿ ಮೇಲ್ಕಂಡ ಸರ್ಕಾರಿ ಆದೇಶಗಳನ್ನು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕರಾಮುಎ/ಆಎ/ಸಿಬ್ಬಂದಿ-2/779/2022-23, ದಿನಾಂಕ:24-01-2023 ಯಥಾವತ್ತಾಗಿ ಅಳವಡಿಸಿಕೊಂಡಿರುತ್ತದೆ. ಮೃತ ನೌಕರರ ನಾಮ ನಿರ್ದೇಶಿತರ ಲಿಖಿತ ಆಯ್ಕೆ ಮೇರೆಗೆ ಕುಟುಂಬ ಪಿಂಚಣಿ ಪಾವತಿಗಾಗಿ ಸಂಬಂಧಪಟ್ಟ ಡಿಡಿಓ ರವರು ಸ್ವೀಕರಿಸಿದ ಪ್ರಸ್ತಾವನೆಗಳನ್ವಯ ಮೃತ ನೌಕರನ ಪ್ರಾನ್ ಖಾತೆಯಲ್ಲಿರುವ ವಿಶ್ವವಿದ್ಯಾನಿಲಯವು ಪಾವತಿಸಲಾದ ವಂತಿಕೆ ಮೊತ್ತವನ್ನು ವಿಶ್ವವಿದ್ಯಾನಿಲಯವು ಹಿಂಪಡೆಯಲು ಒಪ್ಪಿಗೆ ಪಡೆದು, NSDL CRA ರವರಲ್ಲಿ CLAIM ID ಅನ್ನು Annexure-I ನಮೂನೆಯಲ್ಲಿ ತುಂಬಿಸಿ claim ID ಜನರೇಟ್ ಮಾಡಿ AUTHORIZE ಮಾಡಿ ವಿಶ್ವವಿದ್ಯಾನಿಲಯವು ನಿಯಮಾನುಸಾರ ಪಾವತಿಸಲಾದ ಪಿಂಚಣಿ ವಂತಿಕೆ ಮೊತ್ತವನ್ನು ಹಿಂಪಡೆದು ಪಿಂಚಣಿ ಮತ್ತು ಮರಣ ಉಪದಾನವನ್ನು ಲೆಕ್ಕಾಚಾರ ಮಾಡಿ ಪ್ರಾಧಿಕರಿಸಿ ಪಾವತಿಸಬೇಕಾಗಿರುತ್ತೆ.

ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಕರಾಮುಎ/ಆಎ/ಸಿಬ್ಬಂದಿ-2/779/2022-23, ದಿನಾಂಕ: 24-01-2023 ದನ್ವಯ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರಿಗೆ ಎನ್‌ಪಿಎಸ್ ನೌಕರರ ನಾಮನಿರ್ದೇಶಿತರಿಗೆ ಸದರಿ ಮೃತ ನೌಕರರ NPS ಖಾತೆಯಲ್ಲಿ ವಿಶ್ವವಿದ್ಯಾನಿಲಯವು ಪಾವತಿಸಲಾದ ವಂತಿಕೆ ಮೊತ್ತವನ್ನು ಎನ್‌ಎಸ್‌ಡಿಎಲ್ ಸಂಸ್ಥೆಯಿಂದ ನಿಯಮಾನುಸಾರ ಹಿಂಪಡೆದಿರುವುದಿಲ್ಲ. ಸದರಿ ಮೊತ್ತವನ್ನು ಹಿಂಪಡೆಯುವುದು ಬಾಕಿ ಉಳಿದಿದ್ದರೂ, ಒಟ್ಟು 5 ಕುಟುಂಬ ಪಿಂಚಣಿ ಪ್ರಕರಣಗಳಲ್ಲಿ ನಿಯಮಬಾಹಿರವಾಗಿ **ರೂ.32,54,555/-** ಡಿಫೈನ್ಡ್ ಕುಟುಂಬ ಪಿಂಚಣಿ ಪ್ರಾಧಿಕರಿಸಿ ಹಾಗೂ ಮರಣ ಉಪದಾನವನ್ನು ಮಂಜೂರುಮಾಡಿ ಪಾವತಿಸಲಾಗಿದೆ. ವಿವರಗಳನ್ನು ಅನುಬಂಧ-40 ರಲ್ಲಿ ನೀಡಲಾಗಿದೆ.

ಮೃತ ನೌಕರರ NPS Transaction Statement for Tier I Account ಪಟ್ಟಿಯನ್ವಯ ನೌಕರರ ಪ್ರಾನ್ ಖಾತೆಯಲ್ಲಿ ಅಂತಿಮ ಶಿಲ್ಕಿನ ಮೊತ್ತಗಳು (ಉದ್ಯೋಗಿ ಮತ್ತು ಉದ್ಯೋಗದಾತರ ವಂತಿಕೆ) ಈ ಕೆಳಕಂಡಂತಿರುತ್ತವೆ.

ಕ್ರ.ಸಂ	ನಿವೃತ್ತಿ/ಮರಣ ಹೊಂದಿದ ಅಧಿಕಾರಿ & ನೌಕರರ ಹೆಸರು (ಪಿಂಚಣಿ ಸ್ವರೂಪ)	ಪದನಾಮ	ಕುಟುಂಬ ಪಿಂಚಣಿ ಪಡೆದವರ ವಿವರ	PRAN NO.	ದಿನಾಂಕ 19-09-2025ಕ್ಕೆ ಖಾತೆಯಲ್ಲಿರುವ ಅಂತಿಮ ಶಿಲ್ಕು ರೂ.
1	ಲೇಟ್ ಗೋವಿಂದು ಜಿ.ಕೆ. (ಮರಣ ಪ್ರಕರಣ)	ಹಿರಿಯ ಸಹಾಯಕ	ಸಾವಿತ್ರಿ ಎಲ್ (ಕುಟುಂಬ ಪಿಂಚಣಿ)	110141533381	12,18,529
2	ಲೇಟ್ ರತ್ನಮ್ಮ ವಿ (ಮರಣ ಪ್ರಕರಣ)	ದ್ವಿ.ದ.ಗು	ಶಿವಕುಮಾರ್.ಎಂ. (ಕುಟುಂಬ ಪಿಂಚಣಿ)	110131436349	11,09,180
3	ಲೇಟ್ ಗಿರೀಶ್ ಸಿ ಜೆ. (ಮರಣ ಪ್ರಕರಣ)	ದ್ವಿ.ದ.ಗು	ಪ್ರೀತಿ.ಜೆ.ಎನ್. (ಕುಟುಂಬ ಪಿಂಚಣಿ)	110191437089	9,60,571
4	ಲೇಟ್ ಶಶಿಕುಮಾರ್ ಎಸ್ ಎ. (ಮರಣ ಪ್ರಕರಣ)	ಸಹಾಯಕ ಅಭಿಯಂತರರು	ತಶಿರೇಖಾ.ಡಿ. (ಕುಟುಂಬ ಪಿಂಚಣಿ)	110181436923	24,80,655
5	ಲೇಟ್ ಶಿವಣ್ಣ ಎನ್, (ಮರಣ ಪ್ರಕರಣ)	ದ್ವಿ.ದ.ಗು	ವಸಂತ (ಕುಟುಂಬ ಪಿಂಚಣಿ)	110181437098	10,94,661
				ಒಟ್ಟು ಮೊತ್ತ ರೂ.	**68,63,596**

ಮೇಲಿನಂತೆ ದಿನಾಂಕ:19-09-2025 ರಲ್ಲಿ ಖಾತೆಯಲ್ಲಿರುವ ಅಂತಿಮ ಶಿಲ್ಕು ರೂ.68,63,596/- ಗಳನ್ನು ಹಾಗೂ ಹಿಂಪಡೆಯುವ ದಿನಾಂಕದವರೆಗೆ ಖಾತೆಯಲ್ಲಿ ಕ್ರೋಢೀಕೃತ ಮೊತ್ತದಲ್ಲಿ ನಿಯಮಾನುಸಾರ ವಿಶ್ವವಿದ್ಯಾನಿಲಯದ ವಂತಿಕೆ ಮೊತ್ತ ಹಾಗೂ ನೌಕರರ ವಂತಿಕೆ ಮೊತ್ತಗಳ ವಿವರಗಳನ್ನು ವರ್ಗೀಕರಿಸಿ ವಿಶ್ವವಿದ್ಯಾನಿಲಯವು ಪಾವತಿಸಲಾಗಿರುವ ಮೊತ್ತವನ್ನು ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿಕೊಳ್ಳಬೇಕಾಗಿರುವ ಬಗ್ಗೆ **ವಿಚಾರಣಾ ಪತ್ರ ಸಂಖ್ಯೆ**:127/ದಿ:19-09-2025 ನೀಡಲಾಗಿದ್ದು, ಅದಕ್ಕೆ ಸಂಬಂಧಪಟ್ಟ ಇಲಾಖೆಯಿಂದ ಮೊತ್ತವನ್ನು ವಿಶ್ವದ್ಯಾನಿಲಯದ ಖಾತೆಗೆ ವರ್ಗಾಯಿಸುವಲ್ಲಿನ ತಾಂತ್ರಿಕ ಕಾರಣಗಳನ್ನು ವಿವರಿಸಿ, ಮುಂದಿನ ದಿನಗಳಲ್ಲಿ ಅಗತ್ಯ ಕ್ರಮವಹಿಸುವುದಾಗಿ ಉತ್ತರ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ದಿನಾಂಕ:19-09-2025 ರ ವರೆಗೆ ಖಾತೆಯಲ್ಲಿರುವ ಮೊತ್ತ ರೂ.**68,63,596**/- ಹಾಗೂ ಹಿಂಪಡೆಯುವ ದಿನಾಂಕದವರೆವಿಗೆ ಪ್ರಾನ್ ಖಾತೆಯಲ್ಲಿ ಅರ್ಜಿಕವಾಗುವ ಮೊತ್ತಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ ಜಮಾ ಮಾಡಬೇಕಾದ ಮೊತ್ತವನ್ನು ಲೆಕ್ಕಾಚಾರ ಮಾಡಿ ಸಾಮಾನ್ಯ ನಿಧಿಗೆ ಜಮೆ ಮಾಡಿ ಮಾಹಿತಿಯನ್ನು ಹಾಜರುಪಡಿಸುವವರೆಗೆ ವಸೂಲಾತಿಗೆ ಸೂಚಿಸಲಾಗಿದೆ. ಹಾಗೂ **2024-25**ನೇ ಸಾಲಿನಲ್ಲಿ ಪಾವತಿಸಲಾದ ಕುಂಟುಂಬ ಪಿಂಚಣಿ ಸೌಲಭ್ಯಗಳ ಧನಾದೇಶ ಸಂಖ್ಯೆ:103836/ಗಿ9-09-2024 ರಲ್ಲಿ ಒಟ್ಟು ಮೊತ್ತ **ರೂ.47,86,532**/-ಗಳನ್ನು ಪಾವತಿಸಲಾಗಿದ್ದು, ಸದರಿ ಮೊತ್ತವನ್ನು **ಆಕ್ಷೇಪಣೆಯಲ್ಲಿಡಲಾಗಿದೆ**. ವಿವರಗಳನ್ನು ಅನುಬಂಧ-40 ರಲ್ಲಿ ವಿವರಿಸಿದೆ.

35. ಪ್ರಯಾಣ ಭತ್ಯೆಗಳು

35.1 ಪರೀಕ್ಷಾ ಕಾರ್ಯ ಹಾಗೂ ಶೈಕ್ಷಣಿಕ ಕಾರ್ಯ ನಿರ್ವಹಿಸಿದ ಬೋಧಕ ವರ್ಗದವರಿಗೆ ನಿಯಮ ಮೀರಿ ಹೆಚ್ಚುವರಿ ಪ್ರಯಾಣ ಭತ್ಯೆ, ದಿನಭತ್ಯೆ, ಸ್ಥಳೀಯ ಭತ್ಯೆ ಹಾಗೂ ಪರೀಕ್ಷಾ ಕಾರ್ಯ ವೆಚ್ಚ ಪಾವತಿಸಿರುವುದು: (ವಿಚಾರಣಾ ಪತ್ರ ಸಂ:92/16.08.2025 108/20.08.2025, 192/07.11.2025)

ಪರೀಕ್ಷಾ ಕಾರ್ಯ ಹಾಗೂ ಉತ್ತರ ಪತ್ರಿಕೆಗಳ ಮೌಲ್ಯಮಾಪನ, ಪ್ರೌಢ ಪ್ರಬಂಧಗಳ ಮೌಲ್ಯಮಾಪನ, ಪ್ರಾಯೋಗಿಕ ಪರೀಕ್ಷೆಗಳ ಮೌಲ್ಯಮಾಪನ ಕಾರ್ಯಗಳಲ್ಲಿ ಹಾಗೂ ಇತರೆ ಪರೀಕ್ಷಾ ಕರ್ತವ್ಯ ನಿರ್ವಹಿಸಿದ ಖಾಯಂ, ಬೋಧಕ/ ಬೋಧಕೇತರ ಮತ್ತು ತಾತ್ಕಾಲಿಕ ನೌಕರರಿಗೆ, ಕರ್ನಾಟಕ ನಾಗರೀಕ ಸೇವಾ ನಿಯಮ ಹಾಗೂ ಸರ್ಕಾರದ ಆದೇಶದ, ಮಾರ್ಗಸೂಚಿಗಳನ್ನು ಮೀರಿ ಪ್ರಯಾಣಭತ್ಯೆ, ದಿನಭತ್ಯೆ, ಸ್ಥಳೀಯ ಭತ್ಯೆ ಪರೀಕ್ಷಾ ಕಾರ್ಯ ಸಂಭಾವನೆ ಹಾಗೂ ಇತರೆ ಭತ್ಯೆಗಳನ್ನು ಹೆಚ್ಚುವರಿಯಾಗಿ ನೀಡಿರುವುದು ಲೆಕ್ಕತಪಾಸಣೆಯಲ್ಲಿ ಕಂಡು ಬಂದಿರುತ್ತದೆ. ವಿವರವನ್ನು ಅನುಬಂಧ-41 ರಲ್ಲಿ ನೀಡಿದೆ.

- ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯಡಿ ಕಾರ್ಯನಿರ್ವಹಿಸುವುದರಿಂದ, ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಗಳನ್ನು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ–1958 ರ ನಿಯಮ–451ರ ಪರಿಷ್ಕೃತ ಪ್ರಯಾಣ ದರಗಳ ಸರಕಾರದ ಆದೇಶ ಸಂಖ್ಯೆ: ಆಇ 1 ಸನತಿ 2019, ಬೆಂಗಳೂರು, ದಿನಾಂಕ:11.01.2019ರಲ್ಲಿ ನಿರ್ದಿಷ್ಟಪಡಿಸಿರುವ ದರಗಳಿಗನುಗುಣವಾಗಿ ಭತ್ಯೆಗಳನ್ನು ಪಾವತಿಸಬೇಕಾಗುತ್ತದೆ. ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ನೀಡುವುದರ ಜೊತೆಗೆ ಸ್ಥಳೀಯ ಭತ್ಯೆ ಮತ್ತು ಉಪಹಾರ ವೆಚ್ಚ ಮುಂತಾದವುಗಳನ್ನು ಪಾವತಿಸಲು ಕೆ.ಸಿ.ಎಸ್.ಆರ್ ನಿಯಮಗಳು ಅಥವಾ ಸರ್ಕಾರದ ಸ್ಥಾಯಿ ಆದೇಶಗಳಡಿ ಅವಕಾಶವಿರುವುದಿಲ್ಲ.

- ಕರ್ನಾಟಕ ಶಿಕ್ಷಣ ಅಧಿನಿಯಮ, 1983 ರ ಪ್ರಕರಣ 28 ರಲ್ಲಿ ಈ ಕೆಳಗಿನಂತೆ ಉಲ್ಲೇಖಿಸಲಾಗಿದೆ "ಪರೀಕ್ಷೆಗೆ ಸಂಬಂಧಪಟ್ಟ ಕೆಲಸಗಳನ್ನು ಮಾಡುವುದು ಶಿಕ್ಷಣ ಸಂಸ್ಥೆಗಳ ನೌಕರರ ಕರ್ತವ್ಯವಾಗಿರುವುದು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ಒಪ್ಪಂದದಲ್ಲಿ ಅಥವಾ ಯಾವುದೇ ನ್ಯಾಯಾಲಯದ ಅಥವಾ ನ್ಯಾಯಾಧಿಕರಣದ ಯಾವುದೇ ತೀರ್ಪಿನಲ್ಲಿ, ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಯಾವುದೇ ಪರೀಕ್ಷೆಯ ಸಂಬಂಧದಲ್ಲಿ ತನಗೆ ವಹಿಸಿಕೊಡಲಾದ ಯಾವುದೇ ಕೆಲಸ ಮಾಡುವುದು ಪ್ರತಿಯೊಂದು ಶಿಕ್ಷಣ ಸಂಸ್ಥೆಯ ಅಧಿಕಾರಿಯ, ಉಪಾಧ್ಯಾಯನ ಅಥವಾ ಇತರ ನೌಕರನ ಮತ್ತು ಯಾವುದೇ ಶಿಕ್ಷಣ ಸಂಸ್ಥೆಯ ಸೇವೆಯಲ್ಲಿರುವ ಅಥವಾ ಅದರಿಂದ ವೇತನ ಅಥವಾ ಸಂಭಾವನೆಯನ್ನು ಪಡೆಯುವ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿರತಕ್ಕದ್ದು."

- ವಿಶ್ವವಿದ್ಯಾನಿಲಯದ ಪರಿಸಿಯಮ Xರ ಕ್ರಸಂ. 31 ರಲ್ಲಿ ಈ ಕೆಳಗಿನಂತೆ ಉಚ್ಚರಿಸಲಾಗಿದೆ. "ಪರೀಕ್ಷಾ ಸಂಭಾವನೆಯನ್ನು ಮುಂದುವರಿಸದಿರುವುದು ಯಾವುದೇ ಕಾನೂನಿನಲ್ಲಿ ಅಥವಾ ಒಡಂಬಡಿಕೆಯಲ್ಲಿ ಅಥವಾ ನ್ಯಾಯಾಲಯದಿಂದ ನೀಡಲಾಗಿರುವ ತೀರ್ಪಿನಲ್ಲಿ/ನ್ಯಾಯಾಜ್ಞೆಯಲ್ಲಿ ಏನೇ ಹೇಳಿದ್ದರೂ, 1983ರ ಕರ್ನಾಟಕ ಶಿಕ್ಷಣ ಅಧಿಸೂಚನೆಯ 28ನೆಯ ಪ್ರಕರಣದ ಮೇರೆಗೆ, ಪರೀಕ್ಷಾ ಕಾರ್ಯನಿರ್ವಹಣೆ ಕಡ್ಡಾಯ ಕರ್ತವ್ಯವಾಗಿರುತ್ತದೆ. ವಿಶ್ವವಿದ್ಯಾನಿಲಯಗಳಲ್ಲಿನ ಮತ್ತು ಕಾಲೇಜುಗಳಲ್ಲಿನ ಪರೀಕ್ಷಾ ಸಂಬಂಧಿ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ಹೆಚ್ಚಿನ ಸಂಭಾವನೆ ಪಾವತಿಗೆ ಯಾವುದೇ ಪ್ರಾವಧಾನವನ್ನೂ ಮಾಡಲಾಗಿಲ್ಲ. ತಮ್ಮ ಶೈಕ್ಷಣಿಕ ಪ್ರಕಾರ್ಯಗಳ ಭಾಗವೆಂಬಂತೆ, ಮೌಲ್ಯಮಾಪನ ಮತ್ತು ಸಾರಣೀಕರಣವೂ ಸೇರಿದಂತೆ, ಉಪನ್ಯಾಸಕರು ಪರೀಕ್ಷಾ ಸಂಬಂಧವಾದ ತಮ್ಮ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು, ಹಾಗೂ ಇದಕ್ಕಾಗಿ ಅವರು ಯಾವುದೇ ಹೆಚ್ಚಿನ ಸಂಭಾವನೆ ಪಾವತಿಗೆ ಅರ್ಹರಾಗಿರುವುದಿಲ್ಲ. ಆದರೆ, ಪರೀಕ್ಷಾ ಕಾರ್ಯಕ್ಕಾಗಿ ಅವರು ಕೈಗೊಂಡ ಪ್ರಯಾಣಗಳಿಗಾಗಿ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ಮೇರೆಗೆ ಸಂದಾಯಾರ್ಹವಾಗಿರುವ ಪ್ರಯಾಣ ಭತ್ಯೆ/ತುಟ್ಟಿ ಭತ್ಯೆಗಳಿಗೆ ಅವರು ಅರ್ಹರಾಗಿರುತ್ತಾರೆ."

- ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ದಿನಾಂಕ:18/07/2018ರ ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳಲ್ಲಿನ ಶಿಕ್ಷಕರು ಮತ್ತು ಇತರೆ ಶೈಕ್ಷಣಿಕ ಸಿಬ್ಬಂದಿಗಳ ನೇಮಕಾತಿಯ ಕನಿಷ್ಠ ಅರ್ಹತೆಗಳು ಮತ್ತು ಉನ್ನತ ಶಿಕ್ಷಣದ ಗುಣಮಟ್ಟ ನಿರ್ವಹಣೆಯ ಕ್ರಮಗಳ ಯು.ಜಿ.ಸಿ. ನಿಯಮಾವಳಿಗಳು, 2018 ರ ನಿಯಮ 17.0(I)(ix) ರಲ್ಲಿ ಶಿಕ್ಷಕರ ಜವಾಬ್ದಾರಿಗಳ ಕುರಿತು ಈ ಕೆಳಗಿನಂತೆ ನಿಯಮಿಸಲಾಗಿದೆ.

"ಕಾಲೇಜು ಮತ್ತು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಜವಾಬ್ದಾರಿಗಳಿಗೆ ಸಂಬಂಧಿಸಿದ ಕಾರ್ಯಗಳಾದ ಪ್ರವೇಶಾತಿ, ವಿದ್ಯಾರ್ಥಿಗಳ ಸಲಹೆ & ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಸೇರಿದಂತೆ ವಿಶ್ವವಿದ್ಯಾನಿಲಯ ಮತ್ತು ಕಾಲೇಜಿನ ಪರೀಕ್ಷಾ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದಲ್ಲಿ ತೊಡಗಿಕೊಂಡು ಸಹಕರಿಸುವುದು ಅಧ್ಯಾಪಕರುಗಳ ವೃತ್ತಿಪರ ಸಂಹಿತೆ ಮತ್ತು ಜವಾಬ್ದಾರಿಯಾಗಿರುತ್ತದೆ."

ಸರ್ಕಾರದ ನಿಯಮಗಳನ್ನು ಮೀರಿ ಸ್ಥಳೀಯ ಭತ್ಯೆ/ ಉಪಹಾರ ವೆಚ್ಚ ಹಾಗೂ ಹೆಚ್ಚುವರಿಯಾಗಿ ಪ್ರಯಾಣಭತ್ಯೆ/ದಿನಭತ್ಯೆಗಳನ್ನು ಪಾವತಿಸಲು ಅವಕಾಶವಿರುವ ಸರ್ಕಾರದ ಆದೇಶಗಳ ಪ್ರತಿ ಅಥವಾ ಪರಿನಿಯಮ ಮಾಡಿಕೊಂಡಿದ್ದಲ್ಲಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವಂತೆ ಪಚಾರಣಾ ಪತ್ರ ಸಂ:92/16.08.2025 108/20.08.2025, 192/07.11.2025 ರಲ್ಲಿ ಕೋರಲಾಗಿದ್ದು, ವಿಶ್ವವಿದ್ಯಾನಿಲಯವು ಹೊರಡಿಸಿರುವ ಸ್ಥಾಯಿ ಆದೇಶದ ಅನುಸಾರ ಬೋಧಕ ಮತ್ತು ಬೋಧಕೇತರ ವರ್ಗದವರ

ಪ್ರಯಾಣ ಭತ್ಯೆ ಮತ್ತು ದಿನಭತ್ಯೆಗಳನ್ನು, ಪರೀಕ್ಷಾ ಕಾರ್ಯ ವೆಚ್ಚಗಳನ್ನು ಪಾವತಿಸಲಾಗಿದೆ ಎಂದು ಅನುಪಾಲನಾ ವರದಿಯನ್ನು ಸಲ್ಲಿಸಿರುತ್ತಾರೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಡಿ 15 ಯುಓವಿ2009 ಬೆಂಗಳೂರು ದಿನಾಂಕ:04-11-2010ರಂತೆ KSOU (Adoption of service rules of State Government) Statutes-2009ಕ್ಕೆ ಮಾನ್ಯ ಕುಲಾಧಿಪತಿಗಳು ಅಂಕಿತ ನೀಡಿದ್ದು, ವಿಶ್ವವಿದ್ಯಾನಿಲಯವು ಸದರಿ ಪರಿನಿಯಮದಂತೆ ಪ್ರಯಾಣ ಭತ್ಯೆ ಹಾಗೂ ಇತರೆ ಭತ್ಯೆಗಳನ್ನು ಪಾವತಿಸದೇ ಹೆಚ್ಚುವರಿಯಾಗಿ ಪಾವತಿಸಿರುವುದು ಪರಿನಿಯಮ ಹಾಗೂ ಸರ್ಕಾರದ ಆದೇಶಗಳ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಹೆಚ್ಚುವರಿ ಭತ್ಯೆಗಳ ಪಾವತಿಗೆ ಮಾನ್ಯ ಕುಲಾಧಿಪತಿಗಳ ಅನುಮೋದನೆ ದೊರೆತಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ವಿಶ್ವವಿದ್ಯಾನಿಲಯದವರು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಪಾಯಂ, ಬೋಧಕ/ಬೋಧಕೇತರ ಮತ್ತು ತಾತ್ಕಾಲಿಕ ನೌಕರರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮ ಹಾಗೂ ಸರ್ಕಾರದ ಆದೇಶದ ಮಾರ್ಗಸೂಚಿಗಳನ್ನು ಮೀರಿ ಪ್ರಯಾಣ ಭತ್ಯೆ/ದಿನಭತ್ಯೆಗಳನ್ನು ಹಾಗೂ ಇತರೆ ಭತ್ಯೆಗಳನ್ನು ಹೆಚ್ಚುವರಿಯಾಗಿ ಪಾವತಿಸುತ್ತಿರುವ ಬಗ್ಗೆ ಹಿಂದಿನ ಲೆಕ್ಕ ಪರಿಶೋಧನಾ ವರದಿಗಳಲ್ಲಿ ವಸೂಲಾತಿಗೆ ಸೂಚಿಸಿದ್ದರು ಪರಿನಿಯಮಗಳನ್ನು ರಚಿಸದೇ ಪ್ರಸಕ್ತ ಸಾಲಿನಲ್ಲಿಯು ಅದನ್ನೇ ಮುಂದುವರೆಸಿ ಭತ್ಯೆಗಳನ್ನು ಹೆಚ್ಚುವರಿಯಾಗಿ ನೀಡಿರುವ ಒಟ್ಟು ಮೊತ್ತ **ರೂ.1,25,33,989/-** ಗಳನ್ನು ವಿಶ್ವವಿದ್ಯಾನಿಲಯದ **ಕುಲಸಚಿವರು(ಪರೀಕ್ಷಾಂಗ) ಮತ್ತು ಹಣಕಾಸು ಅಧಿಕಾರಿಗಳಿಂದ ವಸೂಲಾತಿಗೆ ಸೂಚಿಸಿದೆ.**

35.2 ಸಂಪರ್ಕ ಕಾರ್ಯಕ್ರಮ, ಪಿ.ಹೆಚ್.ಡಿ ಆರ್.ಎ.ಸಿ ಕಾರ್ಯಕ್ರಮ ಹಾಗೂ ಇತರೆ ಶೈಕ್ಷಣಿಕ ಕಾರ್ಯಕ್ರಮ ನಿರ್ವಹಿಸಿರುವುದಕ್ಕೆ ನಿಯಮ ಮೀರಿ ಹೆಚ್ಚುವರಿಯಾಗಿ ರೂ.26,51,276/-ಗಳನ್ನು ಪ್ರಯಾಣ ಭತ್ಯೆ, ದಿನಭತ್ಯೆ ಹಾಗೂ ಸ್ಥಳೀಯ ಭತ್ಯೆ ಪಾವತಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:195/ದಿ:07.11.2025)

ಸಾಮಾನ್ಯ ನಿಧಿ ವಾತೆಯ ಪಾವತಿ ವೋಚರ್‌ಗಳನ್ನು ಪರಿಶೀಲಿಸಲಾಗಿ ಸಂಪರ್ಕ ಕಾರ್ಯಕ್ರಮ, ಪ್ರಾಧ್ಯಾಪಕ ಹಾಗೂ ಸಹ ಪ್ರಾಧ್ಯಾಪಕ ನೇಮಕಾತಿ ಸಂಬಂಧ ಸಂದರ್ಶನಕ್ಕಾಗಿ, ಪಿ.ಹೆಚ್.ಡಿ ಕೋರ್ಸ್ ಆರ್.ಎ.ಸಿ. ಸಭೆ, ವಿಶ್ವವಿದ್ಯಾನಿಲಯದ ಪರಿನಿಯಮವನ್ನು ಪರಿಶೀಲಿಸುವ ಸಭೆ, ವೃತ್ತಿ ಪದೋನ್ನತಿ ಸಂಬಂಧ ಸಭೆ ಹಾಗೂ ಸಿ.ಬಿ.ಸಿ.ಎಸ್. ಸಿದ್ದಪಾಠಗಳ ಸ್ನಾತಕ ಸಂಪಾದಕ ಮಂಡಳಿ ಸಭೆ ಇತ್ಯಾದಿ ಕಾರ್ಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಬೋಧಕ ವರ್ಗದವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ ಹಾಗೂ ಸರಕಾರದ ಆದೇಶ ಮೀರಿ ಪ್ರಯಾಣ ಭತ್ಯೆ,ದಿನಭತ್ಯೆ, ಸ್ಥಳೀಯ ಭತ್ಯೆ ಹಾಗೂ ಸಭಾ ಭತ್ಯೆಗಳನ್ನು ಹೆಚ್ಚುವರಿಯಾಗಿ ಪಾವತಿಸಲಾಗಿದೆ. ವಿವರಗಳು ಕೆಳಕಂಡಂತಿದೆ.

ಕ್ರಮ ಸಂಖ್ಯೆ	ವಿವರ	ಮೊತ್ತ
1	ಸಾಮಾನ್ಯ ನಿಧಿಯಿಂದ ಕರಾಮುವಿಯ ಪ್ರಾಧ್ಯಾಪಕ ವರ್ಗದವರಿಗೆ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ಹೆಚ್ಚುವರಿ ಪಾವತಿಸಿರುವುದು.	ರೂ.2,46,208/-
02	ಹೆಚ್ಚುವರಿ ಪ್ರಮಾಣ ಭತ್ಯೆ ಹಾಗೂ ವಾಸ್ತವ್ಯದ ವೆಚ್ಚ ಪಾವತಿಸಿರುವುದು.	ರೂ.96,756/-
03	ಕೆ.ಎಸ್.ಓ.ಯು ನ ಬೋಧಕ ಸಿಬ್ಬಂದಿಗಳು ವಿವಿಧ ಸಭೆಗಳಿಗೆ ಹಾಜರಾದ ಕಾರಣ ಭತ್ಯೆ ಪಾವತಿಸಿರುವ ವಿವರ	ರೂ.3,71,100/-
04	ಸಾಮಾನ್ಯ ನಿಧಿಯಿಂದ ವಿಶ್ವವಿದ್ಯಾನಿಲಯದ ಹೊರಗಿನ ಪ್ರಾಧ್ಯಾಪಕ ವರ್ಗದವರಿಗೆ ಪ್ರಯಾಣ ಭತ್ಯೆ/ದಿನ ಭತ್ಯೆ ಹೆಚ್ಚುವರಿಯಾಗಿ ಮತ್ತು ಸ್ಥಳೀಯ ಭತ್ಯೆ ಪಾವತಿಸಿರುವುದು	ರೂ.19,37,212/-
	ಒಟ್ಟು	**ರೂ.26,51,276/-**

ಸರ್ಕಾರದ ನಿಯಮ ಮೀರಿ ಸ್ಥಳೀಯ ಭತ್ಯೆ ಹಾಗೂ ಹೆಚ್ಚುವರಿಯಾಗಿ ಪ್ರಯಾಣ ಭತ್ಯೆ/ದಿನಭತ್ಯೆ ಪಾವತಿಸಿರುವುದಕ್ಕೆ ಸಂಬಂಧಿತ ಆದೇಶದ ಪ್ರತಿ/ದಾಖಲೆಗಳೊಂದಿಗೆ ಸೂಕ್ತ ವಿವರಣೆಯನ್ನು ಕೋರಿ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:195/ದಿ:07.11.2025ನ್ನು ಜಾರಿ ಮಾಡಲಾಗಿ ವಿಶ್ವವಿದ್ಯಾನಿಲಯದವರು "ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ತೀರ್ಮಾನಿಸಿದಂತೆ, ಕುಲಪತಿಗಳಿಂದ ಅನುಮೋದನೆ ಪಡೆದು ಪಾವತಿಸಲಾಗಿದೆ. ಪ್ರಸ್ತುತ ಕೆ.ಸಿ.ಎಸ್. ನಿಯಮಾನುಸಾರ ಪಾವತಿಸಲಾಗುತ್ತಿದೆ" ಎಂದು ತಿಳಿಸಿರುತ್ತಾರೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಇಡಿ/99/ಯುಎನ್ಇ/99, ದಿನಾಂಕ:15.11.1999, ಆದೇಶ ಸಂಖ್ಯೆ:ಇಡಿ/100/ಯುಎನ್ಇ/99, ದಿನಾಂಕ: 15.11.1999 ಹಾಗೂ ಆದೇಶ ಸಂಖ್ಯೆ:ಇಡಿ/188/ಆಇ/99, ದಿನಾಂಕ: 15.11.1999 ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಗಳು-1958 ನಿಯಮ-28ರ ಉಪನಿಯಮಗಳಲ್ಲಿ ಸೂಚಿಸಿರುವಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಆಇ1/ಸನಿತಿ/2019, ಬೆಂಗಳೂರು, ದಿನಾಂಕ:11.01.2019ರಲ್ಲಿನ ದರಗಳನ್ನು ಮೀರಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಕೆಲಸ ಕಾರ್ಯಗಳಿಗೆ ಹಾಜರಾದ ಬೋಧಕ ಸಿಬ್ಬಂದಿಗಳಿಗೆ ಹೆಚ್ಚುವರಿಯಾಗಿ ಪ್ರಯಾಣಭತ್ಯೆ, ದಿನಭತ್ಯೆ ಹಾಗೂ ಸ್ಥಳೀಯ ಭತ್ಯೆಯನ್ನು ಪಾವತಿಸಲಾಗಿರುತ್ತದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ:ಕರಾಮುವಿ/ಯುಎ-1/446/2010-11/01,ದಿನಾಂಕ: 14.12.2010ರಲ್ಲಿ ಕೆ.ಸಿ.ಎಸ್.ಆರ್, ಕೆ.ಎಫ್.ಸಿ ಮತ್ತು ಎಂ.ಸಿ.ಇ ನಿಯಮಾವಳಿಗಳನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳುವ ಸಂಬಂಧ ಪರಿನಿಯಮ, "ಕೆಎಸ್ಒಯು (ರಾಜ್ಯ ಸರ್ಕಾರದ ಸೇವಾ ನಿಯಮ ಅಳವಡಿಕೆ) ಪರಿನಿಯಮಗಳು, 2009" ನ್ನು ಅಧಿಸೂಚಿಸಿರುತ್ತದೆ. ಸದರಿ ಪರಿನಿಯಮಗಳಂತೆ ಕೆ.ಸಿ.ಎಸ್.ಆರ್ ನಿಯಮಗಳಡಿಯಲ್ಲಿಯೇ ದಿನಭತ್ಯೆ, ಪ್ರಯಾಣಭತ್ಯೆ ಮತ್ತಿತರ ಭತ್ಯೆಗಳನ್ನು ಪಾವತಿಸಬೇಕಾಗಿರುತ್ತದೆ. ಇದನ್ನು ಉಲ್ಲಂಘಿಸಿ ವಿಶ್ವವಿದ್ಯಾನಿಲಯದ ಸಮಿತಿಗಳಲ್ಲಿ ತೀರ್ಮಾನ ತೆಗೆದುಕೊಳ್ಳಲು ಅವಕಾಶ ಇರುವುದಿಲ್ಲವಾದ್ದರಿಂದ **ಅನುಬಂಧ-42 ಹಾಗೂ ಅನುಬಂಧ-42(ಎ), (ಬಿ) ಮತ್ತು (ಸಿ)ರಲ್ಲಿ** ವಿವರಿಸಿರುವ ಒಟ್ಟು ಮೊತ್ತ **ರೂ.26,51,276/-ಗಳನ್ನು ಕುಲಸಚಿವರು ಮತ್ತು ಹಣಕಾಸು ಅಧಿಕಾರಿಯವರಿಂದ ವಸೂಲಿಸಲು** ಸೂಚಿಸಿದೆ.

35.3 ಕೆ.ಸಿ.ಎಸ್.ಆರ್. ನಿಯಮ ಉಲ್ಲಂಘಿಸಿ ಪ್ರಯಾಣ ಭತ್ಯೆ, ದಿನಭತ್ಯೆಗಳ ಸಭಾ ಭತ್ಯೆ, ಪಾವತಿಸಿರುವುದು:

(ವಿಚಾರಣಾ ಪತ್ರ ಸಂಖ್ಯೆ: 147/ದಿ:03-10-2025)

ವಿಶ್ವವಿದ್ಯಾನಿಲಯದ ಬೋಧಕ/ಬೋಧಕೇತರ ನೌಕರರು ಹಾಗೂ ಅಧಿಕಾರಿಗಳಿಗೆ ಪಾವತಿಸುತ್ತಿರುವ ಸಭಾ ಭತ್ಯೆ, ಪ್ರಯಾಣ ಭತ್ಯೆ, ದಿನಭತ್ಯೆಗಳಿಗೆ Karnataka State Open University (Adoption of Service Rules of State Government) Statutes-2009 ರ ಅನುಶಾಸನದಲ್ಲಿ ಕರ್ನಾಟಕ ಸರ್ಕಾರದ ನಾಗರೀಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಸಾದಿಲ್ವಾರು ವೆಚ್ಚಗಳ ಕೈಪಿಡಿಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿರುತ್ತದೆ. ಸದರಿ ಅನುಶಾಸನದ ಈ ರೀತಿ ಯಾಗಿರುತ್ತದೆ.

"The Provisions of Karnataka Civil Service Rules, Karnataka Financial Code and Manual of Contigent Expenditure, With its amendments, clarifications and connected Government orders issued from time to time by the state Government, shall be adopted mutatis mutandis (Subject to modification stated here in below) for use in the Karnataka State Open university. Until the university makes its own Statutes governing these provisions.

Any reference to State Government and Govrnment servant in said rules shall be construed as references to "Board of Management" and Employees of the University respectively"

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧಿನಿಯಮ-1992 ಅಧ್ಯಾಯ-5 ನಿಯಮ-22 (ಡಿ) ರನ್ವಯ ವಿಶ್ವವಿದ್ಯಾನಿಲಯದ ಉಪಾಧ್ಯಾಯರು ಮತ್ತು ಇತರ ಉದ್ಯೋಗಿಗಳ ನೇಮಕಾತಿ, ಅವರ ಉಪಲಬ್ಧಿಗಳು ಮತ್ತು ಅವರ ಸೇವಾ ಷರತ್ತುಗಳಿಗೆ ಪರಿನಿಯಮಗಳನ್ನು

ರಚಿಸಬೇಕಾಗುತ್ತದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧಿನಿಯಮ–1992 ಅಧ್ಯಾಯ–5 ನಿಯಮ–23 (4)ರ ಅನ್ವಯ ಹೊಸ ಪರಿನಿಯಮ ಅಥವಾ ಈಗಿರುವ ಪರಿನಿಯಮಕ್ಕೆ ತಿದ್ದುಪಡಿ ಮಾಡಿ ಅಥವಾ ನಿರಸನಗೊಳಿಸಿ ಮಾಡಲಾದ ಪರಿನಿಯಮವು. ಅದು ಕುಲಪತಿಯವರಿಂದ ಒಪ್ಪಿಗೆ ದೊರೆಯದ ಹೊರತು ಮಾನ್ಯವಾಗತಕ್ಕುದಲ್ಲ. ಎಂದು ಅಗತ್ಯಪಡಿಸಿರುತ್ತದೆ. ಆದರೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/856/2012–13 ದಿನಾಂಕ:18–05–2012 ರಲ್ಲಿ

- 1(ಅ) ಪ್ರಯಾಣ ಭತ್ಯೆ ಹಾಗೂ ವಿಶೇಷ ಭತ್ಯೆಗಳು.
- ವಿವಿಧ ಸಮಿತಿಗಳ ಸದಸ್ಯರುಗಳಿಗೆ ಪಾವತಿಸಲು ಪರಿಷ್ಕರಿಸಿರುವ ವಿವಿಧ ರೀತಿಯ ಭತ್ಯೆಗಳು.

III (ಅ) ಕಛೇರಿ ಕೆಲಸಗಳ ನಿಮಿತ್ತ ಹೊರ ರಾಜ್ಯಗಳಿಗೆ ತೆರಳುವ ಅಧಿಕಾರಿಗಳೀಗೆ, ಬೋಧಕೇತರುಗಳಿಗೆ ಹಾಗೂ ಸಮ್ಮೇಳನಗಳಿಗೆ ತೆರಳುವ ಅಧಿಕಾರಿಗಳು/ಬೋಧಕ ವರ್ಗದವರ ಪ್ರಯಾಣ ಭತ್ಯೆ, ಮತ್ತು ದಿನಭತ್ಯೆಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳಲ್ಲಿ ನಿಗದಿಪಡಿಸಿರುವ ದರಗಳನ್ನು ಪರಿಷ್ಕರಿಸಿ ನಿಗದಿಪಡಿಸಿ ಪಾವತಿಸಲಾಗುತ್ತಿದೆ.

ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–2/856/2012–13 ದಿನಾಂಕ:18–05–2012 ರ ಆದೇಶದ ಪರಿಷ್ಕರಣೆಯು Karnataka State Open University (Adoption of Service Rules of State Government) Statutes–2009 ರ **ಅನುಶಾಸನಕ್ಕೆ ವಿರುದ್ಧವಾಗಿರುವಂತೆ** ಕಂಡುಬರುತ್ತದೆ. ಪರಿಷ್ಕರಿಸಲಾದ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಗಳನ್ನು ನಿಯಮಾನುಸಾರ ಅನುಶಾಸನ ರಚಿಸಿ, **ಕುಲಾಧಿಪತಿಗಳಿಂದ ಒಪ್ಪಿಗೆ** ಪಡೆದ ನಂತರದಲ್ಲಿ ಸದರಿ ಪರಿಷ್ಕೃತ ಆದೇಶವನ್ನು ಜಾರಿಗೊಳಿಸುವುದು ಕ್ರಮವಾಗುತ್ತದೆ. ಆದರೆ ಪ್ರಯಾಣ ಭತ್ಯೆಗಳನ್ನು ಪರಷ್ಕರಿಸಿ ನಿಯಮಾನುಸಾರ ಅನುಮೋದನೆ ಪಡೆಯದೆ ಪರಿಷ್ಕೃತ ದರಗಳನ್ನು ಪಾವತಿಸಿರುವುದು ನಿಯಮಗಳ ಉಲ್ಲಂಘನೆಯಾಗಿರುತ್ತದೆ. ಸದರಿ ಅಂಶವನ್ನು ಈ ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ಉಲ್ಲೇಖಿಸಿ ಕರ್ನಾಟಕ ನಾಗರೀಕ ಸೇವಾ ನಿಯಮಗಳಿಗೆ ವಿರುದ್ಧವಾಗಿ ಹೆಚ್ಚುವರಿ ಪ್ರಯಾಣ ಭತ್ಯೆ ಹಾಗೂ ಇತರ ಭತ್ಯೆಗಳನ್ನು ಪಾವತಿಸಿರುವ ಮೊತ್ತಗಳನ್ನು ವಸೂಲಾತಿಗೆ ಸೂಚಿಸಲಾಗಿರುತ್ತದೆ.

ಆದರೂ 2024–25ನೇ ಸಾಲಿನಲ್ಲಿಯೂ ಪರಿಷ್ಕೃತ ದರಗಳಲ್ಲಿ ಪ್ರಯಾಣ ಮತ್ತು ಇತರೇ ಭತ್ಯೆಗಳನ್ನು ಪಾವತಿಸಿರುವ ಮಾಹಿತಿಯನ್ನು ಹಾಜರುಪಡಿಸಲು ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 147/ದಿ:03–10–2025 ನೀಡಲಾಗಿದ್ದು, ಅನುಪಾಲನಾ ವರದಿ ಸಂಖ್ಯೆ:ಕರಾಮುವಿ/ಆಸಾವಿ/11/11–60/2025–26 ದಿನಾಂಕ:31–10–205ರಲ್ಲಿ Karnataka State Open University (Adoption of Service Rules of State Government) Statutes–2009 ರ ಪರಿನಿಯಮವು ನಿರಸನಗೊಳಿಸದೆ ಪರಿಷ್ಕರಿಸಿರುವುದನ್ನು ಕೈಬಿಟ್ಟು ಕೆಸಿಎಸ್ಆರ್ ನಿಯಮದಂತೆ ಪ್ರಯಾಣ ಭತ್ಯೆ ಪಾವತಿಸಲಾಗುತ್ತಿದೆ ಎಂಬ ಮಾಹಿತಿಯನ್ನು ನೀಡಿರುತ್ತಾರೆ.

2024–25 ರಲ್ಲಿ ಸದರಿ ಪರಿಷ್ಕೃತ ನಿಯಮದಂತೆ ಪಾವತಿಸಲಾದ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ ವ್ಯತ್ಯಾಸದ ವಿವರಗಳು ಕೆಳಕಂಡಂತಿರುತ್ತವೆ.

ಕ್ರಮ ಸಂಖ್ಯೆ	ವಿವರ	ಪಾವತಿಸಿರುವ ಮೊತ್ತ	ಪಾವತಿಸಬೇಕಾದ ಮೊತ್ತ	ಹೆಚ್ಚುವರಿ ಪಾವತಿ ವ್ಯತ್ಯಾಸ
1	ಪ್ರಯಾಣ ಭತ್ಯೆ	70862	29614	**41248**
2	ದಿನಭತ್ಯೆ	192660	103450	**89210**
	ಒಟ್ಟು ಮೊತ್ತ ರೂ.	**263522**	**133064**	**130458**

ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/856/2012–13 ದಿನಾಂಕ:18–05–2012 ಆದೇಶವನ್ನು ಹಿಂಪಡೆದು ಹಾಗೂ ಮೇಲ್ಕಂಡ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿ ಸಿಬ್ಬಂದಿಗಳಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿಗೆ ಜಮಾ ಮಾಡಿ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೆ **ರೂ.1,30,458/– ಗಳನ್ನು ವಸೂಲಾತಿಗೆ ಸೂಚಿಸಿದೆ.** ವಿವರಗಳನ್ನು **ಅನುಬಂಧ–43**ರಲ್ಲಿ ನಮೂದಿಸಿದೆ.

35.4. ರಜಾ ಪ್ರವಾಸ ರಿಯಾಯಿತಿ ಸೌಲಭ್ಯಕ್ಕೆ ವಾಸ್ತವಿಕ ವಿಮಾನ ವೆಚ್ಚ ಪಾವತಿಸಿರುವುದು.

ಕೆ.ಸಿ.ಎಸ್.ಆರ್. ನಿಯಮ550 ಟಿಪ್ಪಣಿ1 ರನ್ವಯ ಯಾವುದೇ ಸರ್ಕಾರಿ ನೌಕರರಿಗೆ ವಿಮಾನ ಅಥವಾ ಎ.ಸಿ. 1st Class ರೈಲು ಪ್ರವಾಸವನ್ನು ರಿಯಾಯಿತಿ ಪಡೆಯಲು ಅರ್ಹರಿರುವುದಿಲ್ಲ. ಆದರೇ, ವಿಮಾನ ಪ್ರಯಾಣಕ್ಕಾಗಿ ಸರ್ಕಾರಿ ನೌಕರನ ಕೋರಿಕೆಯಂತೆ ಸಕ್ಷಮ ಪ್ರಧಿಕಾರದಿಂದ ಅನುಮತಿ ಪಡೆದು ವಿಮಾನ ಪ್ರಯಾಣ ಕೈಗೊಳ್ಳಬಹುದು. ಆದರೇ, ಸರ್ಕಾರಿ ನೌಕರರಿಗೆ ಪ್ರಯಾಣಭತ್ಯೆಯ ನಿಯಮದ ಪ್ರಕಾರ ಅವನು ಅರ್ಹನಾಗಿರುವ ಪ್ರಯಾಣದ ವರ್ಗಕ್ಕೆ ಸೀಮಿತವಾಗಿರುತ್ತದೆ.

ಸಾಮಾನ್ಯ ನಿಧಿ ಖಾತೆಯ ಪಾವತಿ ವೋಚರ್‌ಗಳನ್ನು ಪರಿಶೀಲಿಸಲಾಗಿ ಈ ಕೆಳಗೆ ವಿವರಿಸಿರುವ ಭೋಧಕ/ಭೋಧಕೇತರ ಸಿಬ್ಬಂದಿಗಳಿಗೆ ರಜಾ ಪ್ರವಾಸ ರಿಯಾಯಿತಿ ಸೌಲಭ್ಯಕ್ಕಾಗಿ ವಾಸ್ತವಾಗಿ ಭರಿಸಿರುವ ವೆಚ್ಚವನ್ನು ಮರುಭರಿಕೆ ಮಾಡಲಾಗಿರುತ್ತದೆ.

ಕ್ರ ಸಂ	ಭೋಧಕ ಸಿಬ್ಬಂದಿಯ ಹೆಸರು	ವೋಚರ್ ಸಂಖ್ಯೆ/ಮಾಹೆ	ಧನಾದೇಶ ಸಂಖ್ಯೆ/ ದಿನಾಂಕ	ಪಾವತಿಸಿರುವ ಮೊತ್ತ	ಅರ್ಹತಾ ಮೊತ್ತ	ಹೆಚ್ಚುವರಿ ಪಾವತಿ	ಪ್ರಯಾಣದ ವಿವರ	ಷರಾ
01	ಪ್ರೋ.ಕಾಂಬ್ಳೆ ಅಶೋಕ್	39/ಜನವರಿ	638163 ದಿ:09.01.25	ರೂ.29.316/-	ರೂ.15000/-	ರೂ.14316/-	ಮೈಸೂರು ನಿಂದ ಉತ್ತರ ಪೂರ್ವದ ವಾಗ್‌ಡೋಗ್ರಾ	(ಮೈಸೂರು ನಿಂದ ಹೌರಾಹ್ ಗೆ ರೈಲಿನಲ್ಲಿ ತಲಾ ರೂ.5000/- ಹಾಗೂ ಹೌರಾಹ್ ನಿಂದ ಬೈಗುರಿ ರೂ.1500/- ಟೋಕರ್ ಸಾರಿಗೆ ರೂ.1000/- ಒಟ್ಟು ರೂ.7500/- ರಂತೆ ಇಬ್ಬರಿಗೆ ರೂ.15000/-
02	ದೀಪಶ್ರೀ, ಸಹಾಯಕ ಕುಲಸಚಿವರು	182/ಜನವರಿ	638215 ದಿ:28.01.25	ರೂ.46,667/-	ರೂ.30000/-	ರೂ.16.667/-	ಬೆಂಗಳೂರು ನಿಂದ ಅಂಡಮಾನ್ ಮತ್ತು ನಿಕೋಬಾರ್	ಮೈಸೂರು ನಿಂದ ಚೆನ್ನೈತಲಾ ರೂ.1000/- ಚೆನ್ನೈ ನಿಂದ ಸಮುದ್ರದ ಮೂಲಕ ರೂ.9000/- ಒಟ್ಟು ರೂ.10000/- ರಂತೆ 03 ಜನರಿಗೆ ರೂ.30000/-
ಒಟ್ಟು				ರೂ.75,983/-	ರೂ.45000/-	ರೂ.30983/-		

ಕೆ.ಸಿ.ಎಸ್.ಆರ್. ನಿಯಮದಂತೆ ಅರ್ಹವಿರುವ ರಜಾ ಪ್ರವಾಸ ರಿಯಾಯಿತಿ ಮೊತ್ತ ಪಾವತಿಸದೇ, ನಿಯಮ ಉಲ್ಲಂಘಿಸಿ ವಾಸ್ತವಿಕ ವಿಮಾನ ವೆಚ್ಚ ಪಾವತಿಸಿರುವುದಕ್ಕೆ ವಿವರಣೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:79/06.08.2025 ಹಾಗೂ 100/18.08.2025 ರಲ್ಲಿ ಕೋರಲಾಗಿ, ವಿಶ್ವವಿದ್ಯಾನಿಲಯದವರು ಯಾವುದೇ ಅನುಪಾಲನಾ ವರದಿಯನ್ನು ನೀಡಿರುವುದಿಲ್ಲ. ಕಾರಣ ಮೇಲೆ ವಿವರಿಸಿರುವಂತೆ ಹೆಚ್ಚುವರಿಯಾಗಿ ಮರುಭರಿಕೆ ಮಾಡಿರುವ **ಮೊತ್ತ ರೂ.30,983/- ಗಳನ್ನು ಸಂಬಂಧಿಸಿದವರಿಂದ ವಸೂಲಿಸಲು** ಸೂಚಿಸಿದೆ.

36. ಪರೀಕ್ಷಾ ಕಾರ್ಯಗಳಿಗೆ ಪಾವತಿ

36.1 ಪರೀಕ್ಷಾ ನಿಧಿ ಖಾತೆಯಿಂದ ಪರೀಕ್ಷಾ ಕೇಂದ್ರಗಳಿಗೆ ಪಾವತಿಸಲಾಗಿರುವ ಪರೀಕ್ಷಾ ಕೇಂದ್ರ ಎ.ಸಿ. ಬಿಲ್ಲುಗಳಿಗೆ ಎನ್.ಡಿ.ಸಿ. ವೋಚರ್ ಸಲ್ಲಿಸದಿರುವುದು: (ವಿಚಾರಣಾ ಪತ್ರ ಸಂಖ್ಯೆ:124/ದಿ:18.9.2025)

2024–25ನೇ ಸಾಲಿನ ಪರೀಕ್ಷಾ ನಿಧಿ ಖಾತೆಯಿಂದ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷಾ ವೆಚ್ಚಗಳನ್ನು ಭರಿಸಲು ವಿವಿಧ ದಿನಾಂಕಗಳಂದು ಪರೀಕ್ಷಾ ಕೇಂದ್ರಗಳಿಗೆ ಎ.ಸಿ ಬಿಲ್ಲಿನ ಮೂಲಕ ಒಟ್ಟು ರೂ.104.22.000/– ಗಳನ್ನು ಪಾವತಿಸಲಾಗಿದ್ದು, ಸದರಿ ಮೊತ್ತದ ರೂ.5,90,000/– ಗಳಿಗೆ ಎನ್.ಡಿ.ಸಿ ವೋಚರ್ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ವಿವರಗಳನ್ನು **ಅನುಬಂಧ–44** ರಲ್ಲಿ ನೀಡಲಾಗಿದೆ. ಸದರಿ ಬಿಲ್ಲುಗಳಿಗೆ ಸಲ್ಲಿಸಲಾಗಿರುವ ಎನ್.ಡಿ.ಸಿ ವೋಚರ್ಗಳ ಪರಿಶೀಲನೆಯಲ್ಲಿ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತದೆ.

ಅ) ಸಾದಿಲ್ವಾರು ವೆಚ್ಚ ಕೈಪಿಡಿ 1958 ನಿಯಮ 37(8) ರ ಪ್ರಕಾರ ಎನ್.ಡಿ.ಸಿ ಬಿಲ್ಲುಗಳನ್ನು ಎ.ಸಿ ಬಿಲ್ಲನ್ನು ಡ್ರಾ ಮಾಡಲಾದ ಮುಂದಿನ ತಿಂಗಳ ಮೊದಲ ವಾರದ ಮುಕ್ತಾಯದ ಒಳಗೆ ಮೇಲು ಸಹಿ ಅಧಿಕಾರಿಗಳಿಗೆ ಸಲ್ಲಿಸಬೇಕಾಗಿರುತ್ತದೆ. ಆದರೆ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಕಛೇರಿಗಳಲ್ಲಿ ಕನಿಷ್ಠ 4 ದಿನಗಳಿಂದ 278 ದಿನಗಳವರೆಗೆ ತಡವಾಗಿ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಎ.ಸಿ ಬಿಲ್ಲಿನಲ್ಲಿ ಡ್ರಾ ಮಾಡಿರುವ ಉಳಿಕೆ ಹಣವನ್ನು ಎಂ.ಸಿ.ಇ ನಿಯಮ 36(4)ರಂತೆ ತಡಮಾಡದೆ ಸಂಬಂಧಪಟ್ಟ ಖಾತೆಗೆ ಜಮಾ ಮಾಡಬೇಕಿದ್ದು, ತಡವಾಗಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಲಾಗುತ್ತಿದೆ. ಹೀಗೆ ವಿಳಂಭವಾಗಿ ಎನ್.ಡಿ.ಸಿ ಸಲ್ಲಿಸುವ ಹಾಗೂ ಬಾಕಿ ಮೊತ್ತವನ್ನು ಜಮೆ ಮಾಡುವವರಿಂದ ವಿಳಂಬದ ಅವಧಿಗೆ ಅನ್ವಯವಾಗುವ ದರದಲ್ಲಿ ಬಡ್ಡಿಯನ್ನು ವಸೂಲಿಸಲು ಸೂಚಿಸಲಾಗಿದೆ.

ಇ) ತುರ್ತಲ್ಲದ ಪಾವತಿಗಳಿಗೆ ಕಡ್ಡಾಯವಾಗಿ ಡಿಸಿ ಬಿಲ್ಲುಗಳ ಮೂಲಕ ವೆಚ್ಚ ಭರಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳದೆ ಇರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

ಮೇಲಿನ ಅಂಶಗಳಿಗೆ ಸೂಕ್ತ ಸ್ಪಷ್ಟೀಕರಣವನ್ನು ದಾಖಲಾತಿಗಳೊಂದಿಗೆ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:124/ದಿ:18.9.2025 ನೀಡಿದ್ದು ಯಾವುದೇ ಅನುಪಾಲನ ವರದಿ ನೀಡಿರುವುದಿಲ್ಲ. ಆದ್ದರಿಂದ ಹಾಜರು ಪಡಿಸದೇ ಇರುವ ಎನ್.ಡಿ.ಸಿ ಬಿಲ್ಲುಗಳನ್ನು **ರೂ.5,90,000/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

36.2 ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಲು ಹಾಗೂ ಒಂದು ಪರೀಕ್ಷಾ ಕೇಂದ್ರಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಆಯ್ಕೆ ಮಾನದಂಡಗಳ ಮಾಹಿತಿ ಹಾಗೂ ಸ್ವಂತ ಕಟ್ಟಡ ಇದ್ದರೂ ಖಾಸಗಿ ಕಾಲೇಜುಗಳಿಗೆ ಶುಲ್ಕ ಪಾವತಿಸಿರುವುದು:

(ವಿಚಾರಣಾ ಪತ್ರ ಸಂಖ್ಯೆ:70/ದಿ:29.07.2025, 138/ದಿ:25.09.2025 ಹಾಗೂ 179/ದಿ:25–09–2025)

ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕರಾಮುಎ/ಬಿ.ಇಡಿ.ಎಂಬಿಎ/ಸ.ಅ.ಪ್ರ.ಪ/ಸಂ.ಆ./2018–19 ದಿನಾಂಕ: 23.2.20219 ರಲ್ಲಿ ರೂ.40/– ಪ್ರತಿ ಅಭ್ಯರ್ಥಿಗೆ ಪ್ರತಿ ಅವಧಿಗೆ ಮತ್ತು 100 ಕ್ಕಿಂತ ಕಡಿಮೆ ಇರುವ ಅಭ್ಯರ್ಥಿಗಳ ಪ್ರತಿ ಅವಧಿಗೆ ರೂ.5000/– ರಂತೆ ನಿಗದಿಪಡಿಸಿದೆ. ಹೀಗೆ ಶುಲ್ಕ ನಿಗದಿಪಡಿಸಿರುವುದಕ್ಕೆ ಸರ್ಕಾರದಿಂದ ಅನುಮೋದನೆಪಡೆದಿರುವ ದಾಖಲೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:179/ದಿ:25–09–2025 ರಲ್ಲಿ ಕೋರಲಾಗಿತ್ತು. ಅದಕ್ಕೆ ವಿಶ್ವವಿದ್ಯಾನಿಲಯವು ಪರಿನಿಯಮವನ್ನು ರಚಿಸಿ ಸರ್ಕಾರದ ಅನುಮೋದನೆಗೆ ಕಳುಹಿಸಲಾಗಿದೆ. ಪರೀಕ್ಷಾ ಕಾರ್ಯ ಸುಗಮವಾಗಿ ನಡೆಸಲು ಸರ್ಕಾರದ ಅನುಮೋದನೆಯನ್ನು ಕಾಯ್ದಿರಿಸಿ ಸ್ಥಾಯಿ ಆದೇಶ ಹೊರಡಿಸಲಾಗಿದೆ ಎಂದು ಉತ್ತರಿಸಿರುತ್ತಾರೆ. ಅದರಂತೆ, 2024–25 ನೇ ಸಾಲಿನಲ್ಲಿ ಪರೀಕ್ಷಾ ಶುಲ್ಕ ಪಾವತಿಸಿರುವ ಒಟ್ಟು 166107 ವಿದ್ಯಾರ್ಥಿಗಳ ಸಂಖ್ಯೆಗಳಿಗನುಗುಣವಾಗಿ ಮೇ –2024 ನೇ ಮಾಹೆಯಲ್ಲಿ ನಡೆಯುವ CBCS ಸೆಮಿಸ್ಟಾರ್ ಪರೀಕ್ಷೆಗಳನ್ನು ನಡೆಸಲು 33 ಕೇಂದ್ರಗಳಿಗೆ ಹಾಗೂ ಏಪ್ರಿಲ್/ಮೇ–2024 ಯು.ಜಿ./ಪಿ.ಜಿ. NON CBCS ಪರೀಕ್ಷೆಗಳನ್ನು ನಡೆಸಲು 44 ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಿಕೊಂಡು ರೂ.2,55,93,322/–ಗಳನ್ನು ಪಾವತಿಸಲಾಗಿದೆ. ಈ ಸಂಬಂಧ ಯು.ಜಿ.ಸಿ. ನಿಯಮದಂತೆ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಜಿಲ್ಲಾವಾರು ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷಾ ಕೇಂದ್ರಗಳ ಆಯ್ಕೆಗೆ ಹಾಗೂ ಒಂದು ಪರೀಕ್ಷಾ ಕೇಂದ್ರಕ್ಕೆ ವಿದ್ಯಾರ್ಥಿಗಳ ಸಂಖ್ಯೆಗಳ ಆಯ್ಕೆಗೆ ಮಾನದಂಡಗಳ ಪೂರ್ಣ ಮಾಹಿತಿ ಹಾಗೂ ನಿಯಮ/ಆದೇಶ ಮಾಡಿಕೊಂಡಿದ್ದಲ್ಲಿ ದಾಖಲೆಗಳನ್ನು ನೀಡುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:70/ದಿ:29.07.2025 ನ್ನು ನೀಡಿದ್ದು ಯಾವುದೇ ಅನುಪಾಲನ ವರದಿ ನೀಡಿರುವುದಿಲ್ಲ. ಮುಂದುವರೆದು, ಕೆಳಗೆ ವಿವರಿಸಿರುವಂತೆ ವಿಶ್ವವಿದ್ಯಾನಿಲಯದ ಸ್ವಂತ ಕಟ್ಟಡಗಳಿರುವ ಪ್ರಾದೇಶಿಕ ಕೇಂದ್ರಗಳು ಇದ್ದರೂ ಬೇರೆ ಪರೀಕ್ಷಾ ಕೇಂದ್ರಗಳನ್ನು ಆಯ್ಕೆಮಾಡಿ ಪಾವತಿಸಲಾಗಿದೆ.

ಕ್ರಸಂ	ಪ್ರಾದೇಶಿಕ ಕೇಂದ್ರಗಳ ಹೆಸರು	ವಿದ್ಯಾರ್ಥಿಗಳ ಸಂಖ್ಯೆ	ಪರೀಕ್ಷಾ ಕೇಂದ್ರಗಳ ಹೆಸರು	ವಿದ್ಯಾರ್ಥಿಗಳ ಸಂಖ್ಯೆ	ಪರೀಕ್ಷಾ ಕೇಂದ್ರಗಳಿಗೆ ಪಾವತಿಸಿದವ ಮೊತ್ತ	ಪರಾ
1	ಬಳ್ಳಾರಿ	342	ಶ್ರೀ ಕೃಷ್ಣಾ ಡಿಗ್ರಿ ಕಾಲೇಜ್, ಬಳ್ಳಾರಿ	1360	ಎ.ಸಿ. ಬಿಲ್. ರೂ.2.00.000/-	ಅಕ್ಟೋಬರ್/ನವೆಂಬರ್-2024
2	ಮೈಸೂರು ಕೇಂದ್ರ ಕಛೇರಿ	2161	ಬಿ.ಬಿ.ಎಲ್. ಟ್ರಸ್ಟ್, ಸರಸ್ವತಿಪುರಂ, ಮೈಸೂರು	661 2033	ಎ.ಸಿ. ಬಿಲ್. ರೂ.1.00.000/- ರೂ.2.00.000/- ಡಿ.ಸಿ.ಬಿಲ್ ರೂ.2.92.382/- =4.92.382/-	ಜೂನ್/ಜುಲೈ 2024 ಅಕ್ಟೋಬರ್/ನವೆಂಬರ್ 2024
3	ಮಂಗಳೂರು ಕೇಂದ್ರ ಕಛೇರಿ ಕಾಮಗಾರಿ ಪೂರ್ಣಗೊಂಡ ದಿನಾಂಕ:23.02.24	-	ಬೆಸೆಂಟ ಗ್ರೂಪ್ ಆಫ್ ಇನ್ಸಟಿಟ್ಯೂಶನ್, ಮಂಗಳೂರು	168 558 1744	ಎ.ಸಿ. ಬಿಲ್. ರೂ.20,000/- ರೂ.80.000/- ರೂ.2.00.000/- ಡಿ.ಸಿ.ಬಿಲ್ ರೂ.3.66.552/- =6.66,552/-	ಮೇ 2024 ಜೂನ್/ಜುಲೈ 2024 ಅಕ್ಟೋಬರ್/ನವೆಂಬರ್ 2024
4	ಧಾರವಾಡ ಕಾಮಗಾರಿ ಪೂರ್ಣಗೊಂಡ ದಿನಾಂಕ:27.10.23	-	ಕನಕದಾಸ ಶಿಕ್ಷಣ ಸಮಿತಿ, ಧಾರವಾಡ	751 2690	ಎ.ಸಿ. ಬಿಲ್. ರೂ.1,00.000/- ರೂ.2.00.000/- ಡಿ.ಸಿ.ಬಿಲ್ ರೂ. 1.61.352/- =4.61.352/-	ಜೂನ್/ಜುಲೈ 2024 ಅಕ್ಟೋಬರ್/ನವೆಂಬರ್ 2024
5	ರಾಮನಗರ ಕಾಮಗಾರಿ ಪೂರ್ಣಗೊಂಡ ದಿನಾಂಕ:19.10.23	-	ಶಾಂತಿನಿಕೇತನ ಗ್ರೂಪ್ ಆಫ್ ಇನ್ಸಟಿಟ್ಯೂಶನ್, ರಾಮನಗರ	106 320 1034	ಎ.ಸಿ. ಬಿಲ್. ರೂ.15,000/- ರೂ.50.000/- ರೂ.1,50,000/- ಡಿ.ಸಿ.ಬಿಲ್ ರೂ. 1.95.594/- =4.10.594/-	ಮೇ 2024 ಜೂನ್/ಜುಲೈ 2024 ಅಕ್ಟೋಬರ್/ನವೆಂಬರ್ 2024

ಮೇಲಿನ ಅಂಶಗಳಿಗೆ ವಿವರಣೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:138/ದಿ:25.09.2025 ನ್ನು ನೀಡಲಾಗಿತ್ತು. ಅದಕ್ಕೆ ಕುಲಸಚಿವ(ಪರೀಕ್ಷಾಂಗ) ರವರು ಕುಲಪತಿಗಳ ಅನುಮೋದನೆ/ನಿರ್ದೇಶನದಂತೆ ಎಲ್ಲಾ ಪರೀಕ್ಷಾ ಕೇಂದ್ರಗಳು ಒಳಗೊಂಡಂತೆ ವಿಭಜಿಸಿ ಪರೀಕ್ಷಾ ಕೇಂದ್ರಗಳನ್ನು ನೀಡಲಾಗಿರುತ್ತದೆ ಹಾಗೂ ಮಂಗಳೂರು, ಧಾರವಾಡ ಹಾಗೂ ರಾಮನಗರ ಪ್ರಾದೇಶಿಕ ಕೇಂದ್ರದ ಕಾಮಗಾರಿ ಪೂರ್ಣಗೊಂಡಿರದ ಕಾರಣ ಈ ಹಿಂದೆ ನೀಡುತ್ತಿದ್ದ ವಿದ್ಯಾ ಸಂಸ್ಥೆಯವರಿಗೆ ಪರೀಕ್ಷಾ ಕೇಂದ್ರ ನೀಡಲಾಗಿದೆ ಎಂದು ಉತ್ತರಿಸಿರುತ್ತಾರೆ.

The Gazette of India Extraordinary –Part III–Sec 4 Annexure II A ರನ್ವಯ ವಿಶ್ವವಿದ್ಯಾನಿಲಯದ ನೇರ ನಿಯಂತ್ರಣದಲ್ಲಿರುವ ಸಂಸ್ಥೆಗಳಲ್ಲಿಯೇ ಪರೀಕ್ಷೆಗಳನ್ನು ನಡೆಸಬೇಕಾಗಿರುತ್ತದೆ. ಅಲ್ಲದೇ, ಸರ್ಕಾರಿ ಶಾಲೆ ಅಥವಾ ಕಾಲೇಜುಗಳಲ್ಲಿ ಅಥವಾ ಸಂಯೋಜಿತ ಕಾಲೇಜುಗಳಲ್ಲಿ ಪರೀಕ್ಷೆಗಳನ್ನು ನಡೆಸಬೇಕಾಗಿರುತ್ತದೆ ಹಾಗೂ ಯಾವುದೇ ಪರೀಕ್ಷಾ ಕೇಂದ್ರಗಳನ್ನು ಯಾವುದೇ ಖಾಸಗಿ ಸಂಸ್ಥೆಗೆ ನೀಡಬಾರದು.

ಮಂಗಳೂರು, ಧಾರವಾಡ ಹಾಗೂ ರಾಮನಗರ ಪ್ರಾದೇಶಿಕ ಕೇಂದ್ರದ ಕಾಮಗಾರಿಯನ್ನು ಕ್ರಮವಾಗಿ ಫೆಬ್ರವರಿ-24 ಹಾಗೂ ಆಗಸ್ಟ್-23 ರಂದು ಪೂರ್ಣಗೊಳಿಸಿ ವಿಶ್ವವಿದ್ಯಾನಿಲಯಕ್ಕೆ ಕಟ್ಟಡವನ್ನು ಹಸ್ತಾಂತರಿಸಿರುತ್ತಾರೆ. ಆದರೂ, ವಿಶ್ವವಿದ್ಯಾನಿಲಯವು ಯು.ಜಿ.ಸಿ. ನಿಯಮಗಳನ್ನು ಉಲ್ಲಂಘಿಸಿ ವಿಶ್ವವಿದ್ಯಾನಿಲಯದ ನೇರ ನಿಯಂತ್ರಣದಲ್ಲಿರುವ ಪ್ರಾದೇಶಿಕ ಕೇಂದ್ರಗಳಲ್ಲಿ ಪರೀಕ್ಷೆಗಳನ್ನು ನಡೆಸದೇ ಖಾಸಗಿ ಸಂಸ್ಥೆಗಳಲ್ಲಿ ಪರೀಕ್ಷೆಗಳನ್ನು ನಡೆಸಿರುವ ವೆಚ್ಚ **ರೂ.22,30,880/-ಗಳನ್ನು ಸಂಬಂಧಿಸಿದವರಿಂದ ವಸೂಲಿಸಲು ಸೂಚಿಸಿದೆ.**

36.3 ಪರೀಕ್ಷಾ ಪ್ರಶ್ನೆ ಪತ್ರಿಕೆಗಳ ಮುದ್ರಣ ಕಾರ್ಯ ನಿರ್ವಹಿಸಲು ಹೆಚ್ಚುವರಿಯಾಗಿ ಕರಾರು ಒಪ್ಪಂದ ಮಾಡಿಕೊಂಡು ಹೆಚ್ಚುವರಿ ಮೊತ್ತ ಪಾವತಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:73/ದಿ:04.08.2025)

ಪರೀಕ್ಷಾ ಪ್ರಶ್ನೆ ಪತ್ರಿಕೆಗಳ ಮುದ್ರಣ ಕಾರ್ಯ ನಿರ್ವಹಿಸಲು ಹೆಚ್ಚುವರಿಯಾಗಿ ಕರಾರು ಒಪ್ಪಂದ ಮಾಡಿಕೊಂಡು ದಿನಾಂಕ:28.07.2023 ರಂದು ಮಾಡಿರುವ ಸ್ಥಾಯಿ ಆದೇಶದಂತೆ ಪ್ರಶ್ನೆ ಪತ್ರಿಕೆಗಳು ಓ.ಎಂ.ಆರ್ ಮತ್ತು ಸಿ.ಇ.ಟಿ ಪರೀಕ್ಷೆಯ ಗೌಪ್ಯತಾ ಕಾರ್ಯ ನಿರ್ವಹಿಸಲು ಮೆ॥ ವೈ ಎಸ್.ಹೈಟೆಕ್ ಸೆಕ್ಯೂರ್ ಪ್ರಿಂಟ್ ಪ್ರೈ.ಲಿ ಹೈದರಾಬಾದ್ ರವರೊಂದಿಗೆ ದಿನಾಂಕ:28.07.2023 ರಿಂದ 27.07.2025 ರವರೆಗೆ 02 ವರ್ಷಕ್ಕೆ ಕರಾರು ಒಪ್ಪಂದ ಮಾಡಿಕೊಂಡು 2024–25ನೇ ಸಾಲಿಗೆ ಒಟ್ಟು ರೂ.4,16,86,488/– ಗಳನ್ನು ಪಾವತಿಸಲಾಗಿದೆ. ಅದೇ ಕೆಲಸಕ್ಕೆ ಹೆಚ್ಚುವರಿಯಾಗಿ ಮೆ॥ ಪ್ರಿಂಟೆಕ್ ಸಿಸ್ಟಮ್ಸ್, ಹೈದರಾಬಾದ್ ರವರೊಂದಿಗೆ ಸ್ಥಾಯಿ ಆದೇಶದಂತೆ ದಿನಾಂಕ:11.08.2023 ರನ್ವಯ ದಿನಾಂಕ:11.08.2023 ರಿಂದ 10.08.2025 ರವರೆಗೆ 02 ವರ್ಷಕ್ಕೆ ಕರಾರು ಒಪ್ಪಂದ ಮಾಡಿಕೊಂಡು 2024–25ನೇ ಸಾಲಿಗೆ ಒಟ್ಟು ರೂ.1,23,85,674/– ಗಳನ್ನು ಪಾವತಿಸಲಾಗಿದೆ. ದ್ವಿ ಕರಾರು ಮಾಡಿಕೊಂಡಿರುವ ಬಗ್ಗೆ ಸೂಕ್ತ ಸ್ಪಷ್ಟೀಕರಣ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:73/ದಿ:04.08.2025 ರಲ್ಲಿ ಕೋರಲಾಗಿ ಕುಲಸಚಿವರು (ಪರೀಕ್ಷಾಂಗ) ಇವರು ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆಪತ್ರಿಕೆಗಳನ್ನು ನಿಗದಿತ ಸಮಯದಲ್ಲಿ ತಲುಪಿಸಲು ಸಮಯದ ಅಭಾವದ ಹಿತದೃಷ್ಟಿಯಿಂದ 2023 ರಿಂದ ತುರ್ತು ಸಂದರ್ಭಗಳಲ್ಲಿ ಪ್ರಶ್ನೆಪತ್ರಿಕೆಗಳನ್ನು ಮುದ್ರಣ ಮಾಡಲು ಮತ್ತೊಂದು ಮುದ್ರಕರೊಂದಿಗೆ ಆಡಳಿತ ಮಂಡಳಿ ಪ್ರಾಧಿಕಾರವು ನಿರ್ಣಯ ಕೈಗೊಂಡು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಪ್ರಿಂಟೆಕ್ ಸಿಸ್ಟಮ್ಸ್ ಹೈದರಾಬಾದ್ ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎಂದು ಉತ್ತರಿಸಿರುತ್ತಾರೆ.

ವಿಶ್ವವಿದ್ಯಾನಿಲಯದ ಪರೀಕ್ಷಾ ವೇಳಾ ಪಟ್ಟಿಗಳು ಕನಿಷ್ಠ ಮೂರು ತಿಂಗಳ ಮುಂಚೆಯಿಂದ ಶೈಕ್ಷಣಿಕ ಸಭೆ ಹಾಗೂ ಆಡಳಿತ ಸಭೆಯಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ. ಅದರಂತೆ ಪ್ರಶ್ನೆ ಪತ್ರಿಕೆ ಮುದ್ರಣ ಕಾರ್ಯ ಕೈಗೊಳ್ಳಬೇಕಾಗುವ ಬಗ್ಗೆ ಅದರ ತೀವ್ರತೆ ಹಾಗೂ ತುರ್ತು ಸಂದರ್ಭಗಳನ್ನು ಮೆ॥ ವೈ ಎಸ್.ಹೈಟೆಕ್ ಸೆಕ್ಯೂರ್ ಪ್ರಿಂಟ್ ಪ್ರೈ.ಲಿ ಹೈದರಾಬಾದ್ ಇವರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳುವಾಗ Annexure– I ರ ಕ್ರಮ ಸಂಖ್ಯೆ 03 ಮತ್ತು 06 ರಲ್ಲಿನ ಷರತ್ತು ವಿಧಿಸಲಾಗಿದೆ. ಆದಾಗ್ಯೂ ಮೆ॥ ಪ್ರಿಂಟೆಕ್ ಸಿಸ್ಟಮ್ಸ್, ಹೈದರಾಬಾದ್ ರವರೊಂದಿಗೆ ತುರ್ತು ಸಂದರ್ಭಗಳಲ್ಲಿ ಎಂದು ಕಾರಣ ನೀಡಿ ಹೆಚ್ಚುವರಿ ಕರಾರು ಮಾಡಿಕೊಂಡು ರೂ.1,23,85,674/– ಗಳನ್ನು ಪಾವತಿಸಲಾಗಿದೆ.

ವಿಶ್ವವಿದ್ಯಾನಿಲಯಗಳಿಗೆ ಪ್ರಶ್ನೆ ಪತ್ರಿಕಗಳ ಮುದ್ರಣ ಕಾರ್ಯದಲ್ಲಿ ಗೌಪ್ಯತೆಯನ್ನು ಕಾಪಾಡುವ ಉದ್ದೇಶದಿಂದ ಪ್ರಶ್ನೆ ಪತ್ರಿಕಗಳ ಮುದ್ರಣಕ್ಕಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಹಾಗೂ ಸ್ಪರ್ಧಾತ್ಮಕತೆ ತರುವ ನಿಟ್ಟಿನಲ್ಲಿ ಜಾರಿಯಾದ ಕೆಟಿಪಿಪಿ ಕಾಯ್ದೆ 1999 ಹಾಗೂ ನಿಯಮಗಳು 2000 ಗಳ ಅಡಿಯಲ್ಲಿ ಮೇಲಿನ ಸಂಸ್ಥೆಗಳಿಂದ ಪ್ರಶ್ನೆ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡಲು ಸರ್ಕಾರದಿಂದ 4ಜಿ ವಿನಾಯಿತಿ (4G Exemption) ಪಡೆಯಬೇಕಾಗಿದ್ದು, 4ಜಿ ವಿನಾಯಿತಿ ಪಡೆದಿದ್ದಲ್ಲಿ ಆದೇಶದ ಪ್ರತಿಯನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:103/ದಿ:18.08.2025ರಲ್ಲಿ ಕೋರಲಾಗಿ ವಿವಿ. ಅವರು ನೀಡಿರುವ ಅನುಪಾಲನಾವರದಿಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಪ್ರಶ್ನೆ ಪತ್ರಿಕೆ ಮುದ್ರಣಕ್ಕೆ ಸಂಬಂಧಿಸಿದಂತೆ ಅಧಿನಿಯಮ 4(ಜಿ) ಅಡಿಯಲ್ಲಿ ವಿನಾಯ್ತಿ ನೀಡಿರುವ ಸರ್ಕಾರದ ಪತ್ರ ಸಂಖ್ಯೆ:PWD 433 FC–3/2003 Dated: 19.08.2003 ರಲ್ಲಿ ಅಧಿಸೂಚನೆ ಹೊರಡಿಸಿರುತ್ತಾರೆ. ಆದರೆ ದ್ವಿ ಕರಾರು ಮಾಡಿಕೊಳ್ಳುವುದರಿಂದ ಗೌಪ್ಯತೆ ಕ್ಷೀಣಿಸುವುದಲ್ಲದೇ ಸರ್ಕಾರವು ಗೌಪ್ಯತಾ ಉದ್ದೇಶದಿಂದ ವಿಶ್ವವಿದ್ಯಾನಿಲಯಗಳಿಗೆ ನೀಡಿರುವ 4(ಜಿ) ಅಡಿಯಲ್ಲಿ ಕೆಟಿಪಿಪಿ ಅನ್ವಯಿಕೆಯಿಂದ ವಿನಾಯಿತಿಯ ಉದ್ದೇಶವನ್ನು ಪಾಲಿಸುವಲ್ಲಿ ವಿಫಲವಾಗುವುದಲ್ಲದೇ, ಉದ್ದೇಶಪೂರ್ವಕವಾಗಿ ಪಾರದರ್ಶಕತೆ ಮತ್ತು ಸ್ಪರ್ಧಾತ್ಮಕತೆಯ ಅನುಪಸ್ಥಿತಿಯನ್ನು ಸೃಷ್ಟಿಸಿದಂತಾಗಿದೆ. ಪತ್ರಿಕೆಗಳು, ಓ.ಎಂ.ಆರ್ ಮತ್ತು ಸಿ.ಇ.ಟಿ ಪರೀಕ್ಷೆಯ ಗೌಪ್ಯತಾ ಉದ್ದೇಶವನ್ನು ಉಲ್ಲಂಘಿಸಿರುವ ಬಗ್ಗೆ ಹಿಂದಿನ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಿಸಿದ್ದರೂ ಪ್ರಸಕ್ತ ಸಾಲಿನಲ್ಲಿ ಕ್ರಮಕ್ಕೆಗೊಳ್ಳದೇ ಒಂದೇ ಕಾರ್ಯಕ್ಕೆ ಎರಡು ಸಂಸ್ಥೆಗಳೊಂದಿಗೆ ಕರಾರು ಒಪ್ಪಂದ ಮುಂದುವರೆಸಲಾಗಿದೆ ಆದ್ದರಿಂದ ಪಾವತಿಸಲಾದ ಒಟ್ಟು ಮೊತ್ತ **ರೂ. 1,23,85,674/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

36.4 ಪರೀಕ್ಷಾ ಪ್ರಶ್ನೆ ಪತ್ರಿಕೆಗಳ ಮುದ್ರಣ ಕಾರ್ಯಕ್ಕೆ ಕರಾರು ನವೀಕರಿಸುವಾಗ ಒಪ್ಪಂದದ ಅನುಬಂಧಗಳಲ್ಲಿರುವ ವಿಶೇಷಣಗಳಿಗೆ ಹೆಚ್ಚುವರಿ ದರ ನಿಗಧಿ ಪಡಿಸಿ ಪಾವತಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:107/ದಿ:19.8.2025)

ದಿನಾಂಕ:28.07.2023 ರಂದು ಮಾಡಿರುವ ಸ್ಥಾಯಿ ಆದೇಶದಂತೆ ಪ್ರಶ್ನೆ ಪತ್ರಿಕೆಗಳು ಓ ಆರ್ ಮತ್ತು ಸಿ ಇ ಟಿ ಪರೀಕ್ಷೆಯ ಗೌಪ್ಯತಾ ಕಾರ್ಯ ನಿರ್ವಹಿಸಲು ಮೈ ಎಸ್ ಹೈಸೆಕ್ಯೂರ್ ಪ್ರಿಂಟ್ ಪ್ರೈ ಲಿ ಹೈದರಾಬಾದ್ ರವರೊಂದಿಗೆ ದಿನಾಂಕ:28.07.2023 ರಿಂದ 27.07.2025 ರವರೆಗೆ 02 ವರ್ಷಕ್ಕೆ ಮತ್ತು ಅದೇ ಕೆಲಸಕ್ಕೆ ಹೆಚ್ಚುವರಿಯಾಗಿ ದಿನಾಂಕ:11.08.2023 ರಂದು ಮಾಡಿರುವ ಸ್ಥಾಯಿ ಆದೇಶದಂತೆ, ಪ್ರಿಂಟೆಕ್ ಸಿಸ್ಟಮ್ಸ್ ಹೈದರಾಬಾದ್ ರವರೊಂದಿಗೆ ದಿನಾಂಕ:11.08.2023 ರಿಂದ 10.08.2025 ರವರೆಗೆ 02 ವರ್ಷಕ್ಕೆ ಅನ್ವಯವಾಗುವಂತೆ ಶೇ.10%ರ ದರದಲ್ಲಿ ವಿಶೇಷಣಗಳ ದರಗಳನ್ನು ಹೆಚ್ಚಿಸಿ ದರ ನಿಗಧಿಮಾಡಲು ಕರಾರು ಒಪ್ಪಂದ ಮಾಡಿಕೊಂಡಿದ್ದು, ಕರಾರಿನ ಅನುಬಂಧ–I ರ 10ನೇ ವಿಶೇಷಣದಂತೆ ಪ್ರತಿ ವರ್ಷವೂ ಶೇ. 10%ರ ದರದಲ್ಲಿ ವಿಶೇಷಣಗಳ ದರಗಳನ್ನು ಹೆಚ್ಚಿಸಿದ್ದರೂ ಸಹ ಕೋಷ್ಟಕ–1 ರ C ಯಲ್ಲಿ ನಮೂದಿಸಿರುವ ದರಗಳಷ್ಟಾಗುತ್ತಿತ್ತು. ಆದರೆ ದಿನಾಂಕ;18–07–23 ರಿಂದ 28–07–23ರ ಅಂತರದಲ್ಲಿಯೇ ಹಿಂದಿನ ದರಗಳಿಗಿಂತ, ಕೆಳಗಿನ ಕೋಷ್ಟಕದಲ್ಲಿನ B ಯಲ್ಲಿ ನಮೂದಿಸಿರುವ ದರಗಳಂತೆ ಹೆಚ್ಚಿನ ದರಗಳಲ್ಲಿ ನವೀಕೃತ ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ.

ಕೋಷ್ಟಕ–1 **(ರೂ. ಮೊತ್ತಗಳಲ್ಲಿ)**

Sl.No	Annexure-2	Charges and Rates			
		A	B	C	D
1	**Types setting Charages per Page**	19th July 2021– 18th July 2023	28th July 2022 to 27th July 2025 & 11th Aug 2023 to 10th Aug 2025	**IF 10% Increased on YoY basis price as on 28–07–2023 (A+20%)**	**Extra Charges % (B–C÷100)/C.**
		Rate	**Rate**		
	For Matter in English Only	175	275	210	30.95
	For matter other than english(Hindi,Marathi,Sanskrit,Kannada,Malayalam,Tamil,Telugu and Bilingual papers)	215	340	258	31.78
	For Mathematical/Engineering Papers(Having mathematical symbols/Equations in more than 5 lines in a page. having sketches/Tables more than 1 in a page	215	340	258	31.78
2	Proof reading charges per page:For each of the afore said languages	30	45	36	25.00
3	Processing Charges per page:Butter paper output charges to enable printing	35	55	42	30.95
4	Plate/Master making charges per page: To enable printing	72	115	86.4	33.10
5	Printing charges per page For First 1000 copies or part thereoff	145	230	174	32.18
	For Every additional 1000 copies or part there off	145	230	174	32.18

6	Folding charges per every 100 copies or part there off form consisting of 3 to 4 pages	25	40	30	33.33
	Form consisting of 5 or more pages	30	45	36	25.00
7	Gathering charges for form consisting more thant 4 pages for every such 100 copies or part there off	12	20	14.4	38.89
8	Pinning charges for form consisting more than 4 pages.For every such 100 copies or part there off	20	30	24	25.00
9	numbering charges per every 100 copies or part there off	35	55	42	30.95
10	Binding Charges			0	
	1.(Inner cover) per Opaque polypet envelop including counting, inserting, label pasting, Alfa numeric heat sealing	25	40	30	33.33
	2.(outer cover) per Opaque polypet envelop including counting, inserting, label pasting, Alfa numeric heat sealing	25	40	30	33.33
11	centre wise packing per Opaque polypet	25	40	30	33.33
12	Bundling charges Per bundle covered with plastic shrink wrapping	180	285	216	31.94
13	Daywise packing Cost of labour operations for packing of day wise packing	180	285	216	31.94
14	Session wise packing Cost of labour operations for packing of session wise packing	180	285	216	31.94
15	Paper cost(60 GSM cream wove paper manufactured by A grade size=2000 sheets of Dy1/4 size) as and when pringing order is placed, peinter shall purchase suited local market/paper mill as per prevailig market price 10% handling charges added on the market price and 5% spoilage will be added to the consumed, subject to a minimum of 1000 pages for jobs of quantity less than 1000	1800	2830	2160	31.02
16	Transportation and Delivery charges will be added extra.	40000	60000	48000	25.00
	Average			**32.65**	

Annexure-3					
(ರೂ. ಪೈಸೆಗಳಲ್ಲಿ)					
Sl.No	**Description**				

1	Processing Charges Scanning of OMR Sheets– in one place results processing and declaring the rank preparing the statement as per your requirement.(Work execution will be KSOU/Designated place, necessary arrangements like UPS Power,Air contioned Room to scan should be provided by KSOU. Guest house accommodation also should be provided by KSOU)	25	40	30	33.33

2	OMR in Two/Three parts original printed in 2 colour on front side, single color on back side 100 GSM/Carbonless coatin on the back side and Duplicate will be printed on 70/60 GSM paper carbonless coation on front and backside– Triplicate will be printed 70/60 GSM Carbonless coating front side	25	40	30	33.33
3	Envelop'S:			0	
	Envelope for inserting university copy in (Blue Colour cover size:12x9 1/2 GSM:140	20	30	24	25.00
4	Envelope for insertingAnswers filled copy in (Blue Colour cover size:12x7 GSM:120	20	30	24	25.00
5	Envelope for inserting Student Information filled copy in (Blue Colour cover size:12x5 GSM:120	20	30	24	25.00
	Average				**28.33**

ಈ ಬಗ್ಗೆ ಹಿಂದಿನ ಸಾಲಿನ ವರದಿಯಲ್ಲಿ ಆಕ್ಷೇಪಿಸಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ತಾವು ಕೈಗೊಂಡ ಕ್ರಮದ ಬಗ್ಗೆ ಹಾಗೂ ದರ ಸಂಧಾನ ಮಾಡಿಕೊಳ್ಳದಿರುವ ಕುರಿತು ಸೂಕ್ತ ಸಮಜಾಯಿಷಿ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:107/ದಿ:19.8.2025 ರಲ್ಲಿ ಕೋರಲಾಗಿ ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿ ಒಡಂಬಡಿಕೆಯಲ್ಲಿ ಶೇ.10% ಹೆಚ್ಚುವರಿ ದರವು ಒಡಂಬಡಿಕೆ ಆದ ಎರಡನೇ ವರ್ಷಕ್ಕೆ ವಿಶೇಷತೆಯ ದರಗಳಿಗೆ ಮಾತ್ರ ಸೀಮಿತವಾಗಿರುತ್ತದೆ ಎಂದು ಹಾಗೂ ಮೇಲಿನ ಕೋಷ್ಟಕದಲ್ಲಿನ D ಯಲ್ಲಿ ನಮೂದಿಸಿರುವ ಶೇಕಡಾವಾರು ದರಗಳನ್ನು ಹೆಚ್ಚಿಸಿರುವುದಕ್ಕೆ ಯಾವುದೇ ವಿವರಣೆ ನೀಡಿರುವುದಿಲ್ಲ. ಹೀಗಾಗಿ, ದರಗಳನ್ನು ಹೆಚ್ಚಿಸಿ ಕರಾರು ನವೀಕರಿಸಿದುವುದರಿಂದ ವಿಶ್ವವಿದ್ಯಾನಿಲಯಕ್ಕೆ ಅನುಬಂಧ–45 ರಲ್ಲಿ ವಿವರಿಸಿರುವಂತೆ **ರೂ.99,66,094/–** ಆರ್ಥಿಕ ನಷ್ಟ ಉಂಟಾಗಿದ್ದು, ಸದರಿ ಮೊತ್ತವನ್ನು **ವಸೂಲಾತಿಗೆ ಸೂಚಿಸಿದೆ.**

36.5. ವಿ.ವಿ ಯ ಕಛೇರಿ ಆದೇಶವಿಲ್ಲದೆ ಪಿ.ಹೆಚ್.ಡಿ ಮೌಖಿಕ ಪರೀಕ್ಷೆಯಲ್ಲಿ ಭಾಗವಹಿಸಿದ್ದ ಪ್ರಾಧ್ಯಾಪಕರಿಗೆ ರೂ.3,000/–ಗಳನ್ನು ಪಾವತಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:186/ ದಿ:29.10.2025)

ಕ.ರಾ.ಮು.ವಿ ಯ 2024–25ನೇ ಸಾಲಿನ ಪರೀಕ್ಷಾ ನಿಧಿ ಖಾತೆಯ ಮಾರ್ಚ್–2025 ಮಾಹೆಯ ಪಾವತಿ ವೋಚರ್‌ಗಳನ್ನು ಪರಿಶೀಲಿಸಲಾಗಿ ವೋಚರ್ ಸಂಖ್ಯೆ:70 ರಲ್ಲಿ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪಿ.ಹೆಚ್.ಡಿ ಮೌಖಿಕ ಪರೀಕ್ಷೆಯಲ್ಲಿ

ಭಾಗವಹಿಸಿದ್ದ ಅಧಿಕಾರಿಗಳು ಮತ್ತು ಪ್ರಾಧ್ಯಾಪಕರಿಗೆ ಸಂಭಾವನೆ ಪಾವತಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಪೂರಕ ದಾಖಲೆಗಳನ್ನು ಪರಿಶೀಲಿಸಲಾಗಿ ಕಛೇರಿ ಆದೇಶ ಸಂಖ್ಯೆ: ಕರಾಮುಏ/ಪಏ/ಪಿ.ಹೆಚ್.ಡಿ/ರಾಜ್ಯಶಾಸ್ತ್ರ/03/2024-25, ದಿನಾಂಕ:03.12.2024 ಮತ್ತು ಹಾಜರಾತಿ ಪಟ್ಟಿಯನ್ನು ಪರಿಶೀಲಿಸಿದ್ದು, ಪಾವತಿ ವೋಚರ್‌ಗಳ ಜೊತೆ ಪರಿಶೀಲಿಸಿದಾಗ, ಡಾ.ಅಶೋಕ್ ಕುಮಾರ್ ಏ.ಪಾಳೇದ್, ಸಹ ಪ್ರಾಧ್ಯಾಪಕರು ಇವರಿಗೆ ರೂ.3,000/- ಗಳನ್ನು ಮೌಲ್ಯಮಾಪನ ಭತ್ಯೆ ಪಾವತಿಯಾಗಿರುತ್ತದೆ. ಆದರೆ ಸದರಿಯವರು ಭಾಗವಹಿಸುವ ಬಗ್ಗೆ ಪೂರಕ ದಾಖಲೆಗಳಲ್ಲಿ ವಿವರ ಇರುವುದಿಲ್ಲ ಇದಕ್ಕೆ ಸಂಬಂಧಿಸಿದಂತೆ ವಿವರಣೆಯನ್ನು ಕೋರಿ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:186/ ದಿ:29.10.2025ನ್ನು ನೀಡಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ವಿ.ವಿ ಯವರು ದಿನಾಂಕ:25.11.2025 ರಂದು ಅನುಪಾಲನ ವಿವರವನ್ನು ಸಲ್ಲಿಸಿದ್ದು, ಇದರಲ್ಲಿ ಲಗತ್ತಿಸಿರುವ ಕಛೇರಿ ಆದೇಶ ಸಂಖ್ಯೆ, ದಿನಾಂಕ, ಪಿ.ಹೆಚ್.ಡಿ ಮೌಖಿಕ ಪರೀಕ್ಷೆಯ ವಿಷಯ, ಸಂಶೋಧನಾರ್ಥಿಯ ವಿವರದಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆ. ಆದ್ದರಿಂದ ಡಾ.ಅಶೋಕ್ ಕುಮಾರ್ ಏ.ಪಾಳೇದ್, ಸಹ ಪ್ರಾಧ್ಯಾಪಕರು ಇವರಿಗೆ ಪಾವತಿಸಿರುವ **ರೂ.3,000/- ಗಳನ್ನು ವಸೂಲಾತಿಗೆ** (ಆದಾಯ ತೆರಿಗೆ ಸೇರಿ) ಸೂಚಿಸಲಾಗಿದೆ.

36.6. ಪ್ರಶ್ನೆಪತ್ರಿಕೆ ಮುದ್ರಕರಿಗೆ ಮುದ್ರಣ ವೆಚ್ಚ ಪಾವತಿಯಲ್ಲಿ ಎಂ.ಓ.ಯುನ ಅನುಬಂಧ 2 ರ ಕ್ರಸಂ. 15ನ್ನು ಉಲ್ಲಂಘಿಸಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟಉಂಟಾಗಿರುವುದು: (ವಿಚಾರಣಾ ಪತ್ರ ಸಂಖ್ಯೆ:167/ದಿ:16.10.2025)

ಮುಕ್ತ ವಿಶ್ವವಿದ್ಯಾನಿಲಯದ ಪ್ರಶ್ನೆ ಪತ್ರಿಕೆ ಮುದ್ರಣಕ್ಕೆ ಸಂಬಂಧಿಸಿದಂತೆ ವಿವಿಯು ಮೆ.ವೈ.ಎಸ್ ಹೈಟೆಕ್ ಸೆಕ್ಯೂರ್ ಪ್ರಿಂಟ್ (ಪ್ರೈ) ಲಿಮಿಟೆಡ್ ಹೈದರಬಾದ್ ಮತ್ತು ಮೆ. ಪ್ರಿಂಟೆಕ್ ಸಿಸ್ಟಮ್ಸ್ 1(ಪ್ರೈ) ಲಿಮಿಟೆಡ್ ಹೈದರಬಾದ್ ರವರೊಂದಿಗೆ ಮಾಡಿಕೊಂಡಿರುವ ಕರಾರು ಒಪ್ಪಂದವನ್ನು ಪರಿಶೀಲಿಸಿದಾಗ ಎಂ.ಓ.ಯುನ ಅನುಬಂಧ 2 ರ ಕ್ರ.ಸಂ. 15 ರಲ್ಲಿ ಮುದ್ರಣಕ್ಕೆ ಬೇಕಾದ 60 GSM Cream wove paper ನ ಖರೀದಿಯಲ್ಲಿ "subject to a minimum of 1,000 pages for jobs of quantity less than 1,000", ಎಂಬ ಷರತ್ತಿರುತ್ತದೆ. ಆದರೆ ಮುದ್ರಕರು ಪ್ರಶ್ನೆಪತ್ರಿಕೆ ಮುದ್ರಣ ಮಾಡಿ ಸರಬರಾಜು ಮಾಡಿರುವ ಬಿಲ್ಲಿನಲ್ಲಿ ಬೇಡಿಕೆ ಪಟ್ಟಿಯಲ್ಲಿನ ಬೇಡಿಕೆಯನ್ನು ಒಟ್ಟಾರೆಯಾಗಿ (IN TOTAL) ಪರಿಗಣಿಸದೇ, ಪ್ರತ್ಯೇಕವಾಗಿ ಒಂದು ಪ್ರಶ್ನೆಪತ್ರಿಕೆ ಬೇಡಿಕೆಯನ್ನು 1000ಕ್ಕಿಂತ ಕಡಿಮೆ ಎಂದು ಪರಿಗಣಿಸಿ ಪ್ರತೀ ಪ್ರಶ್ನೆ ಪತ್ರಿಕೆಯ ಬೇಡಿಕೆಯ ಪರಿಮಾಣವನ್ನು 1000ಕ್ಕೆ ಮಾರ್ಪಡು ಮಾಡಿಕೊಂಡಿರುವುದರಿಂದ ಅನುಬಂಧ-46ರಲ್ಲಿ ವಿವರಿಸಿರುವಂತೆ ವಿಶ್ವವಿದ್ಯಾನಿಲಯಕ್ಕೆ GST ಒಳಗೊಂಡಂತೆ **ರೂ.56,36,769/-ಗಳ** ಆರ್ಥಿಕ ನಷ್ಟ ಉಂಟಾಗಿರುತ್ತದೆ. ಈ ಸಂಬಂಧ ಸೂಕ್ತ ವಿವರಣೆಯನ್ನು ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:167/ದಿ:16.10.2025ರಲ್ಲಿ ಕೋರಲಾಗಿತ್ತು. ಅದಕ್ಕೆ ದಿನಾಂಕ:10.11.2025 ರಂದು ನೀಡಿರುವ ಅನುಪಾಲನಾ ವರದಿಯಂತೆ, ಹಾಲಿ ಮುದ್ರಕರೊಂದಿಗೆ ಮಾಡಿಕೂಂಡಿರುವ ಒಡಂಬಡಿಕೆಯ ಅವಧಿಯು 2024-25ನೇ ಸಾಲಿನಲ್ಲಿ ಚಾಲ್ತಿಯಲ್ಲಿದ್ದ ಕಾರಣ ವಿಶ್ವವಿದ್ಯಾನಿಲಯವು ಮುದ್ರಕರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯ ನಿಯಮಗಳ ಪ್ರಕಾರ ಹುಂಡಿಯನ್ನು ಪಾವತಿಸಲಾಗುತ್ತಿದ್ದು, ಇದರ ಮಾಹಿತಿ ಸಂಬಂಧವಾಗಿ ಈಗಾಗಲೇ ಆಡಳಿತಾತ್ಮಕ ಅಧಿಕಾರಿಗಳ ಗಮನಕ್ಕೆ ತರಲಾಗಿದ್ದು, ಈ ಸಂಬಂಧ ಮುಂದಿನ 2025-26ನೇ ಸಾಲಿನಲ್ಲಿ ಮುದ್ರಕರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವಾಗ ಲೆಕ್ಕಪರಿಶೋಧನೆಯಲ್ಲಿ ಉಲ್ಲೇಖಿಸಿರುವ ಅಂಶಗಳನ್ನು ಪರಿಗಣಿಸಿ ಸೂಕ್ತ ಕ್ರಮವಹಿಸಲಾಗುವುದು ಎಂದು ತಿಳಿಸಿರುತ್ತಾರೆ.

ವಿಶ್ವವಿದ್ಯಾನಿಲಯವು ನೀಡಿರುವ ಅನುಪಾಲನಾ ವರದಿಯನ್ನು ಗಮನಿಸಿದಾಗ ಮೆ.ವೈ.ಎಸ್ ಹೈಟೆಕ್ ಸೆಕ್ಯೂರ್ ಪ್ರಿಂಟ್ (ಪ್ರೈ) ಲಿಮಿಟೆಡ್ ಹೈದರಬಾದ್ ಮತ್ತು ಮೆ. ಪ್ರಿಂಟೆಕ್ ಸಿಸ್ಟಮ್ಸ್ (ಪ್ರೈ) ಲಿಮಿಟೆಡ್ ಹೈದರಬಾದ್ ರವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವಾಗ ಸೂಕ್ಷ್ಮತೆಗಳನ್ನು ಪರಿಶೀಲಿಸದೆ ಇರುವುದು ವ್ಯಕ್ತವಾಗುತ್ತದೆ. ಆದ್ದರಿಂದ ಮೇಲೆ ವಿವರಿಸಿರುವಂತೆ ಹೆಚ್ಚುವರಿಯಾಗಿ ಬಳಸದ ಹಾಳೆಗಳಿಗೆ ಪಾವತಿಸಿರುವ ಮೊತ್ತ **ರೂ.56,36,769/-ಗಳನ್ನು** ಸಂಬಂಧಿಸಿದ ಪರೀಕ್ಷಾ ವಿಭಾಗದವರಿಂದ **ವಸೂಲಿಸಲು** ಹಾಗೂ ಇವರ ವಿರುದ್ಧ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದೆ.

37. ಇಂಜಿನಿಯರಿಂಗ್ ವಿಭಾಗದ ಸ್ವೀಕೃತಿ ಮತ್ತು ವೆಚ್ಚಗಳು

37.1 ಕೋಲಾರ ಪ್ರಾದೇಶಿಕ ಕೇಂದ್ರದ ಕಟ್ಟಡ ಬಾಡಿಗೆ ಮೊತ್ತಕ್ಕೆ ಚಲನ್ ಹಾಜರುಪಡಿಸದಿರುವುದು ಹಾಗೂ ಜಿಎಸ್‌ಟಿ ಸಂಗ್ರಹಿಸದಿರುವುದು: (ವಿಚಾರಣಾ ಪತ್ರ ಸಂಖ್ಯೆ:171/ದಿ:27-10-2025)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋಲಾರ ಪ್ರಾದೇಶಿಕ ಕೇಂದ್ರದ ಕಟ್ಟಡವನ್ನು ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯಯಕ್ಕೆ ದಿನಾಂಕ: 01-08-2014 ರಿಂದ ಬಾಡಿಗೆ ನೀಡಲಾಗಿದ್ದು, ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ-401 ರಲ್ಲಿನ ನಿಯಮಗಳನ್ವಯ **ದ್ವಿಪಕ್ಷೀಯ ಹಿತಾಸಕ್ತಿ**ಗಳನ್ನು ಕಾಯ್ದುಕೊಂಡು ಕಾನೂನು ಸಲಹೆ ಪಡೆಯದೆ ಒಪ್ಪಂದ ಪತ್ರ ಮಾಡಿಕೊಳ್ಳಲಾಗಿರುತ್ತದೆ. ಕರ್ನಾಟಕ ಲೋಕೋಪಯೋಗ ಇಲಾಖೆ ಸಂಹಿತೆ-2014 ರ ಅಧ್ಯಾಯ-22 ನಿಯಮ-318(6) ರ ಅನ್ವಯ ನಿಗದಿಪಡಿಸಬೇಕಾಗಿರುವ ಬಾಡಿಗೆ ಮೊತ್ತವನ್ನು ನಿಗದಿಪಡಿಸದೇ ವ್ಯವಸ್ಥಾಪನಾ ಮಂಡಳಿ ನಿರ್ಣಯ ದಿನಾಂಕ:03-06-2017 ರಂತೆ ಕನಿಷ್ಠ ಬಾಡಿಗೆ (Nominal Rent) ರೂ.10,000-00 ನಿಗದಿಗೊಳಿಸಿ ಬಾಡಿಗೆ ನೀಡಲಾಗಿರುತ್ತದೆ. ಒಪ್ಪಂದ ಪತ್ರದಲ್ಲಿರುವ ನ್ಯೂನತೆಗಳು ಈ ಕೆಳಕಂಡಂತಿರುತ್ತದೆ.

01. ಒಪ್ಪಂದ ಪತ್ರ ಕಂಡಿಕೆ ಸಂಖ್ಯೆ: 03 ರಲ್ಲಿ ಬಾಡಿಗೆ ಅವಧಿಯನ್ನು ಮುಂದಿನ ಆದೇಶದವರೆಗೆ ಎಂದು ನಿಗದಿಪಡಿಸಲಾಗಿದ್ದು, ಅವಧಿಯನ್ನು ನಿರ್ದಿಷ್ಟಪಡಿಸಿರುವುದಿಲ್ಲ.

02. Goods and Service Tax (CGST) Act Section-7 ರ ಅನ್ವಯ ಜಿಎಸ್‌ಟಿ ಮೊತ್ತಗಳ ಯಾವುದೇ ಉಲ್ಲೇಖಗಳು ಒಪ್ಪಂದ ಪತ್ರದಲ್ಲಿರುವುದಿಲ್ಲ.

03. ಬಾಡಿಗೆ ನೀಡಿರುವ ಸಂಬಂಧ ಭದ್ರತಾ ಠೇವಣಿಯಾಗಿ ಯಾವುದೇ ಮುಂಗಡವನ್ನು ವಸೂಲಿಸಿರುವ ಉಲ್ಲೇಖಗಳು ಒಪ್ಪಂದ ಪತ್ರದಲ್ಲಿರುವುದಿಲ್ಲ.

ಹಾಗೂ ಒಪ್ಪಂದ ಪತ್ರದ ಷರತ್ತು ಸಂಖ್ಯೆ: 09 ರಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯ ಪಾವತಿಸುವುದು ಒಂದನೇ ಪಾರ್ಟಗೆ ಸೇರಿರುತ್ತದೆ ಎಂದು ನಿಬಂಧನೆ ವಿಧಿಸಲಾಗಿದ್ದು; ಈ ವರೆವಿಗೆ ಸ್ವತ್ತಿನ ಸಂಬಂಧವಾಗಿ ಸ್ಥಳೀಯ ತೆರಿಗೆ ಪಾವತಿಸಿರುವ ಯಾವುದೇ ಮಾಹಿತಿಯು ಲೆಕ್ಕಪರಿಶೋಧನೆಗೆ ಲಭ್ಯವಾಗಿರುವುದಿಲ್ಲ. Goods and Service Tax (CGST)Act Section-7 ರಂತೆ ಸರಕು ಸೇವಾ ತೆರಿಗೆ ವಸೂಲಿಸುವ ಸಂಬಂಧವಾಗಿ ಯಾವುದೇ ವಿವರಗಳು ಕಡತದಲ್ಲಿ ಲಭ್ಯವಾಗಿರುವುದಿಲ್ಲ. ಅಲ್ಲದೇ ಸರಕು ಸೇವಾ ತೆರಿಗೆ ಅನ್ವಯವಾಗುವ ದಿನಾಂಕದಿಂದ ಹೊಸ ಒಪ್ಪಂದ ಪತ್ರವನ್ನು ಮಾಡಿಕೊಂಡಿರುವುದಿಲ್ಲ. ಸದರಿ ಕಟ್ಟಡ ಬಾಡಿಗೆ ನೀಡಲಾದ ದಿನಾಂಕದಿಂದ ಬೇಡಿಕೆ, ವಸೂಲಿ ಮತ್ತು ಬಾಕಿ ವಿವರಗಳು ಕೆಳಕಂಡಂತಿರುತ್ತವೆ.

ವಿವರ		ಬಾಡಿಗೆ	ಜಿಎಸ್‌ಟಿ	ಒಟ್ಟು ಮೊತ್ತ
1	ದಿನಾಂಕ: 01-04-2024 ಕ್ಕೆ ಪ್ರಾರಂಭಿಕ ಶಿಲ್ಕು	0	1,44,000	1,44,000
2	2024-25 ನೇ ಸಾಲಿನ ಬೇಡಿಕೆ	1,20,000	21,600	1,41,600
3	ಒಟ್ಟು	1,20,000	1,65,600	2,85,600
4	2024-25 ನೇ ಸಾಲಿನ ವಸೂಲಿ	1,10,000	0	1,10,000
5	31-03-2025 ಕ್ಕೆ ಅಂತಿಮ ಶಿಲ್ಕು	10,000	1,65,600	1,75,600

ಮೇಲ್ಕಂಡ ವಿವರಗಳಂತೆ 2024–25 ನೇ ಸಾಲಿನಲ್ಲಿ ವಸೂಲಿಸಲಾದ ಬಾಡಿಗೆ ಮೊತ್ತ ರೂ.110000/– ಗಳು ಕರಾಮುವಿ ನಿಧಿಗೆ ಜಮೆಯಾಗಿರುವ ಸಂಬಂಧ ಪರಿಶೀಲಿಸಲು ಯಾವುದೇ ಮಾಹಿತಿಯನ್ನು ಹಾಜರಪಡಿಸಿರುವುದಿಲ್ಲ. ಒಪ್ಪಂದ ಪತ್ರದ ನ್ಯೂನತೆಗಳು, ಹಾಗೂ ಬಾಡಿಗೆ ಮೊತ್ತಗಳ ಜಮೆಗಳ ಸಂಬಂಧ ಮಾಹಿತಿ ಹಾಗೂ ಒಪ್ಪಂದ ಪತ್ರದಲ್ಲಿ ನ್ಯೂನತೆಗಳಿಗೆ ಸಂಬಂಧಿಸಿಂತೆ ಸೂಕ್ತ ಮಾಹಿತಿಯನ್ನು ಹಾಜರುಪಡಿಸಲು ಕೋರಿ **ವಿಚಾರಣಾ ಪತ್ರ ಸಂಖ್ಯೆ:**171/ದಿ:27–10–2025ನ್ನು ನೀಡಲಾಗಿರುತ್ತದೆ. ನೀಡಲಾದ ಅನುಪಾಲನಾ ಪತ್ರ ಸಂಖ್ಯೆ: ಕರಾಮುವಿ/ಮಯುಇಡಿ/48/2025–26 ದಿನಾಂಕ:06–11–2025ರಲ್ಲಿ ಕಟ್ಟಡವನ್ನು ಬಾಡಿಗೆ ನೀಡಲಾದ ಕ್ರಮದ ವಿವರಗಳಿಂದ ಕೂಡಿರುತ್ತದೆ. ಬಾಡಿಗೆ ಜಿಎಸ್‌ಟಿ ವಸೂಲಿಗಳ ಬಗ್ಗೆ ಯಾವುದೇ ಮಾಹಿತಿ ನೀಡದಿರುವುದರಿಂದ ಅನುಪಾಲನೆಯನ್ನು ಒಪ್ಪಲು ಅವಕಾಶಗಳು ಇರುವುದಿಲ್ಲ.

2024–25 ನೇ ಸಾಲಿನಲ್ಲಿ ವಸೂಲಿಸಲಾದ ಬಾಡಿಗೆ ಮೊತ್ತ ರೂ.1,10,000/– ಗಳು ಕರಾಮುವಿ ನಿಧಿಗೆ ಜಮೆಯಾಗಿರುವ ಮಾಹಿತಿ ಹಾಜರುಪಡಿಸುವವರೆಗೆ ರೂ.**1,10,000**/– ಗಳನ್ನು **ಆಕ್ಷೇಪಣೆಯಲ್ಲಿಡಲಾಗಿದೆ.** ಹಾಗೂ ದಿನಾಂಕ:01–08–2014 ರಿಂದ 31–03–2025 ರ ವರೆಗಿನ ಬಾಡಿಗೆ ಮೊತ್ತಗಳಿಗೆ ಜಿಎಸ್‌ಟಿ ಮೊತ್ತ **ರೂ.1,65,600/– ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ** ಜಿಎಸ್‌ಟಿ ಇಲಾಖೆಯ ಲೆಕ್ಕಶೀರ್ಷಿಕೆಗೆ ಜಮಾ ಮಾಡಿ ಮಾಹಿತಿ ಹಾಜರುಪಡಿಸುವವರೆಗೆ ವಸೂಲಾತಿಗೆ ಸೂಚಿಸಲಾಗಿದೆ. ವಿವರಗಳನ್ನು ಅನುಬಂಧ–47 ರಲ್ಲಿ ವಿವರಿಸಿದೆ.

37.2 ಮಂಡಕಳ್ಳಿ ಗ್ರಾಮದಲ್ಲಿರುವ 10 ಎಕರೆ ಜಾಗ ಹಾಗೂ ಶೈಕ್ಷಣಿಕ ಭವನ ಕಟ್ಟಡಕ್ಕೆ ಬಾಡಿಗೆ ಕಡಿಮೆ ನಿಗದಿಪಡಿಸಿ ನಷ್ಟಪಡಿಸಿರುವುದು ಹಾಗೂ ಒಪ್ಪಂದ ಪತ್ರದಲ್ಲಿನ ನ್ಯೂನತೆಗಳು: (ವಿಚಾರಣಾ ಪತ್ರ ಸಂಖ್ಯೆ:168/ದಿ:23–10–2025)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಸೇರಿರುವ ಮೈಸೂರಿನ ಮಂಡಕಳ್ಳಿಯ ಪ್ರದೇಶದಲ್ಲಿ ಸುಮಾರು 3735 ಚ.ಮೀ ಗಳಲ್ಲಿ ನಿರ್ಮಿಸಲಾಗಿರುವ ಶೈಕ್ಷಣಿಕ ಭವನ ಕಟ್ಟಡವನ್ನು ಒಳಗೊಂಡಂತೆ ಹತ್ತು ಎಕರೆ ವಿಸ್ತೀರ್ಣದ ಪೂರ್ಣ ಪ್ರದೇಶವನ್ನು ಕರ್ನಾಟಕ ಸರ್ಕಾರದ ಆದೇಶ ಸಂ: ITBT 34 ADM 2022, Bengaluru, Dated:16th April, 2022ರಲ್ಲಿ ಅನುಮೋದಿಸಿರುವಂತೆ ಸರ್ಕಾರದ ITBT ಇಲಾಖೆಗೆ ಒಳಪಡುವ ಕೆ.ಐ.ಟಿ.ಎಸ್ KITS (ಕರ್ನಾಟಕ ಇನ್ನೋವೇಷನ್ & ಟೆಕ್ನಾಲಜಿ ಸೊಸೈಟಿ) ಸಂಸ್ಥೆಯವರು ಒದಗಿಸುವ ರೂ.30.00 ಕೋಟಿ ಅನುದಾನ ನೆರವಿನೊಂದಿಗೆ, ಕೆ.ಡಿ.ಇ.ಎಂ KDEM (ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್)ರವರ ಮೂಲಕ "Beyond Bengaluru Initiative"ನ ಒಂದು ಭಾಗವಾಗಿ "The Global Technology Centre plug and play facility" ಯೋಜನೆಯನ್ನು ಸ್ಥಾಪಿಸಿ ನಡೆಸುವ ಉದ್ದೇಶಕ್ಕಾಗಿ ಬಾಡಿಗೆ ಆಧಾರದ ಮೇಲೆ ನೀಡುವಂತೆ ನಿರ್ದೇಶಿಸಲಾಗಿದೆ. ಈ ಸಂಬಂಧ, ತ್ರಿಪಕ್ಷೀಯ ಕರಾರು (Tripartite Agreement) ಒಪ್ಪಂದವಾಗಿರುತ್ತದೆ ಮತ್ತು ದಿನಾಂಕ:20–10–2022ರ ಕೆ.ಡಿ.ಇ.ಎಂ ಮತ್ತು ಕೆ.ಎಸ್.ಓ.ಯು ನೊಂದಿಗಿನ ಗುತ್ತಿಗೆ ಕರಾರಿನ ಅನುಸಾರ ಸದರಿ ಸ್ಥಳವನ್ನು 30 ವರ್ಷಗಳ ಅವಧಿಗೆ ವಾರ್ಷಿಕ ರೂ.14,50,000/– ಗಳ ಬಾಡಿಗೆಯನ್ನು ಮುಕ್ತ ವಿಶ್ವವಿದ್ಯಾನಿಲಯಕ್ಕೆ ಪಾವತಿಸುವಂತೆ ಹಾಗೂ ಈ ಬಾಡಿಗೆಯನ್ನು ಪ್ರತಿ 05 ವರ್ಷಕ್ಕೊಮ್ಮೆ ಪುನರ್ ನಿಗದಿಪಡಿಸಿಕೊಳ್ಳುವಂತೆ Clause 2 – Rent' ನಲ್ಲಿ ತಿಳಿಸಿರುತ್ತಾರೆ. ಹಾಗೂ ಕೆ.ಡಿ.ಇ.ಎಂ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಹಾಗೂ ವಿಶ್ವವಿದ್ಯಾನಿಲಯದ ಕುಲಸಚಿವರು ಇವರು ಸಬ್ ರಜಿಸ್ತಾರ ಮೈಸೂರು(ಉತ್ತರ) ರವರ ಕಛೇರಿಯಲ್ಲಿ ದಸ್ತಾವೇಜು ಸಂಖ್ಯೆ:10699 ರಲ್ಲಿ ದಿನಾಂಕ:01–02–2023 ರಂದು ಮುದ್ರಾಂಕ ಶುಲ್ಕ ರೂ.49,400/– ಗಳನ್ನು ಪಾವತಿಸಿ ಕರಾರು ಪತ್ರ ವನ್ನು ನೋಂದಾಯಿಸಲಾಗಿದೆ.

ಮುಂದುವರೆದು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ: ಕರಾಮುವಿವಿ/ಯುಇಡಿ/ 70/2022–23, ದಿನಾಂಕ:12–12–2022ರಲ್ಲಿ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮೈಸೂರು ರವರನ್ನು ಮಂಡಕಳ್ಳಿಯ 10 ಎಕರೆ ವಿಸ್ತೀರ್ಣ ಪ್ರದೇಶದಲ್ಲಿ ನಿರ್ಮಿಸಿರುವ ಕಟ್ಟಡ ಮತ್ತು ಸದರಿ ಜಾಗಕ್ಕೆ ಬಾಡಿಗೆ ದರ ನಿಗದಿಪಡಿಸಿಕೊಡುವಂತೆ ಕೋರಿ ಪತ್ರ ಬರೆಯಲಾಗಿ, ಲೋಕೋಪಯೋಗಿ ಇಲಾಖೆ, ಕಾರ್ಯಪಾಲಕ ಇಂಜಿನಿಯರ್ ರವರ ಕಚೇರಿ, ಮೈಸೂರು ರವರ ಪತ್ರ ಸಂ: ಕಾಇಂ:ಲೋಇ:ಮೈಎಮೈ:ತಇಂ–1:2022–23, ದಿನಾಂಕ:08–03–2023ರಲ್ಲಿ ಸದರಿ ಕಟ್ಟಡಕ್ಕೆ ಮಾಹೆಯಾನ ರೂ.14,61,800/–ಗಳನ್ನು ನಿಗದಿಪಡಿಸಿದೆ.

ಆದರೆ, ತ್ರಿಪಕ್ಷೀಯ ಕರಾರಿನ ಅನುಸಾರ ಪ್ರತಿ ವರ್ಷಕ್ಕೆ ರೂ.14,50,000/–ಗಳ ಬಾಡಿಗೆ ಹಾಗೂ ಪ್ರತಿ 05 ವರ್ಷಕ್ಕೊಮ್ಮೆ ಪುನರ್ ನಿಗದಿಪಡಿಸಿಕೊಳ್ಳುವಂತೆ ಹಾಗೂ ಇತರೆ ಷರತ್ತಿಗೊಳಪಟ್ಟು ಸದರಿ ಜಾಗವನ್ನು 30 ವರ್ಷಗಳ ಅವಧಿಗೆ ಕೆ.ಡಿ.ಇ.ಎಂ ಸಂಸ್ಥೆಗೆ ಬಾಡಿಗೆಗೆ ನೀಡುವುದರ ಬಗ್ಗೆ ದಿನಾಂಕ:**21–01–2023** ರಂದು ನಡೆದ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಕೈಗೊಂಡಿರುವ ತೀರ್ಮಾನದಂತೆ, ದಿನಾಂಕ:**01–02–2023** ರಲ್ಲಿ ಮತ್ತೊಮ್ಮೆ ಗುತ್ತಿಗೆ ಕರಾರು ಮಾಡಿಕೊಂಡು, ಸದರಿ ಕರಾರಿನಲ್ಲಿ ನಿಗದಿಯಾಗಿರುವ ವಾರ್ಷಿಕ ಬಾಡಿಗೆ ದರ ಮತ್ತು ಗುತ್ತಿಗೆದಾರರ ಬಾಡಿಗೆ ಪಾವತಿಯ ಬಾಧ್ಯತೆಯು 01 ಜನವರಿ 2023 ರಿಂದ ಪ್ರಾರಂಭವಾಗುವುದಾಗಿ ತಿಳಿಸಲಾಗಿದೆ. ಅದರಂತೆ ವಿಶ್ವವಿದ್ಯಾನಿಲಯದ ಪತ್ರ ಸಂ: ಕರಾಮುಎ/ಯುಇಡಿ/71/2022–23, ದಿನಾಂಕ:**27–02–2023**ರನ್ವಯ ಸದರಿ ಕಟ್ಟಡ ಮತ್ತು 10 ಎಕರೆ ಜಾಗವನ್ನು ಕಿಟ್ಸ್ ಮತ್ತು ಕೆ.ಡಿ.ಇ.ಎಂ ರವರಿಗೆ ಹಸ್ತಾಂತರಿಸಿರುವುದು ಕಂಡು ಬಂದಿರುತ್ತದೆ.

ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ–401 ರಲ್ಲಿನ ನಿಯಮಗಳನ್ವಯ **ದ್ವಿಪಕ್ಷೀಯ ಹಿತಾಸಕ್ತಿ**ಗಳನ್ನು ಕಾಯ್ದುಕೊಂಡು ಕಾನೂನು ಸಲಹೆ ಪಡೆಯದೆ ಒಪ್ಪಂದ ಪತ್ರ ಮಾಡಿಕೊಳ್ಳಲಾಗಿರುತ್ತದೆ. ನಿಗದಿಪಡಿಸಿರುವ ಮಾಸಿಕ ಬಾಡಿಗೆ ಮೊತ್ತ ರೂ.14,61,800/– ಗಳ ಮೇಲೆ ಸರಕು ಮತ್ತು ಸೇವಾ ತೆರಿಗೆ ಮೊತ್ತ ರೂ.2,63,124/– ಮಾಹೆಯಾನ ವಸೂಲಿಸಿ ಸಂಬಂಧಪಟ್ಟ ಇಲಾಖಾ ಲೆಕ್ಕಶೀರ್ಷಿಕೆಗೆ ಜಮಾ ಮಾಡಬೇಕಾಗಿರುತ್ತದೆ.

ಜಾಗ ಹಾಗೂ ಶೈಕ್ಷಣಿಕ ಭವನ ಕಟ್ಟಡವನ್ನು ಬಾಡಿಗೆ ನೀಡಿದ ದಿನಾಂಕದಿಂದ ವಸೂಲಿಸಬೇಕಾದ ಬಾಡಿಗೆ, ಜಿಎಸ್‌ಟಿ, ಬೇಡಿಕೆ, ಪಾವತಿ ಹಾಗೂ ಬಾಕಿ ಮೊತ್ತಗಳನ್ವಯ ಬಾಕಿ ಮೊತ್ತವನ್ನು ವಸೂಲಿಸುವಲ್ಲಿ ಹಾಗೂ ಒಪ್ಪಂದ ಪತ್ರವನ್ನು ಪರಿಷ್ಕರಿಸುವ ಸಂಬಂಧ ಕೈಗೊಳ್ಳಲಾದ ಕ್ರಮದ ವರದಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ **ವಿಚಾರಣಾ ಪತ್ರ ಸಂಖ್ಯೆ**:168/**ದಿ**:23–10–2025ನ್ನು ನೀಡಲಾಗಿರುತ್ತದೆ. ಅನುಪಾಲನಾ ವರದಿ ಪತ್ರ ಸಂಖ್ಯೆ: ಕರಾಮುಎ/ಯುಇಡಿ/48/2025–26 ದಿನಾಂಕ:14–11–2025ರಲ್ಲಿ ಸಂಬಂಧಪಟ್ಟ ಇಲಾಖೆಯೊಂದಿಗೆ ಪತ್ರ ವ್ಯವಹಾರ ನಡೆಸಲಾಗಿದೆ ಎಂಬ ಉತ್ತರವನ್ನು ನೀಡಿರುತ್ತಾರೆ. ಸದರಿ ಉತ್ತರವು ಅಂತಿಮ ಕ್ರಮವ ಅನುಪಾಲನೆಯಾಗಿರುವುದಿಲ್ಲ.

2024–25ನೇ ಸಾಲಿಗೆ ಬಾಡಿಗೆ ಬೇಡಿಕೆ, ವಸೂಲಿ ಮತ್ತು ಬಾಕಿ ವಿವರಗಳ ಫೋಷ್ಠಾರೆಯು ಕೆಳಕಂಡಂತಿರುತ್ತದೆ.

ಬಾಡಿಗೆ ಬೇಡಿಕೆ, ವಸೂಲಿ ಮತ್ತು ಬಾಕಿ ವಿವರ

	ವಿವರ	ಬಾಡಿಗೆ	ಜಿಎಸ್‌ಟಿ	ಒಟ್ಟು ಬಾಡಿಗೆ ಮೊತ್ತ ರೂ.
1	ದಿನಾಂಕ: 01–04–2024 ಕ್ಕೆ ಪ್ರಾರಂಭಿಕ ಶಿಲ್ಕು	1,76,50,853	34,38,154	2,10,89,007
2	2024–25 ನೇ ಸಾಲಿನ ಬೇಡಿಕೆ	1,75,41,600	31,57,488	2,06,99,088
3	ಒಟ್ಟು ಮೊತ್ತ	3,51,92,453	65,95,642	4,17,88,095
4	2024–25 ರ ವಸೂಲಿ	14,50,000	0	14,50,000
5	31–03–2025 ಕ್ಕೆ ಅಂತಿಮ ಶಿಲ್ಕು ರೂ.	3,37,42,453	65,95,642	4,03,38,095

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರು ನಿಗದಿಪಡಿಸಲಾದ ಬಾಡಿಗೆ ಮೊತ್ತವನ್ನು ವಿಧಿಸದೇ ಕಡಿಮೆ ಬಾಡಿಕೆ ನಿಗದಿಪಡಿಸಿರುವುದು ಅದಕ್ಕೆ ಸಂಬಂಧಪಟ್ಟಂತೆ ಜಿಎಸ್‌ಟಿ ಮೊತ್ತಗಳನ್ನು ಸಂಗ್ರಹಿಸದಿರುವುದು, ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿರುತ್ತಿದೆ. ಈ ಹಿಂದಿನ ಸಾಲಿನ

ಲೆಕ್ಕಪರಿಶೋಧನಾ ವರದಿಯಲ್ಲಿಯೂ ಆಕ್ಷೇಪಣೆಗಳನ್ನು ಉಲ್ಲೇಖಿಸಲಾಗಿದ್ದರೂ ಅಂತಿಮ ಕ್ರಮ ವಹಿಸದಿರುವುದನ್ನು ಲೆಕ್ಕಪರಿಶೋಧನೆಯು ಗಂಭೀರವಾಗಿ ಪರಿಗಣಿಸುತ್ತದೆ.

ಲೋಕೋಪಯೋಗಿ ಇಲಾಖೆಯು ಲೆಕ್ಕಾಚಾರಮಾಡಿ ನಿಗದಿಪಡಿಸಿರುವ ದರದಲ್ಲಿ ಬಾಡಿಗೆ ವಸೂಲಿಸದೆ ವಿಶ್ವವಿದ್ಯಾನಿಲಯಕ್ಕೆ ಗಣನೀಯ ನಷ್ಟ ಉಂಟಾಗಿರುತ್ತದೆ. ಈ ಒಪ್ಪಂದದ ಪತ್ರವನ್ನು ಸೂಕ್ತ ರೀತಿಯಲ್ಲಿ ಪರಿಷ್ಕರಿಸುವುದು ಸೇರಿದಂತೆ ಬಾಡಿಗೆ ನೀಡಲಾದ ದಿನದಿಂದ ನಿಯಮಾನುಸಾರ ಬಾಡಿಗೆ ಮತ್ತು ಜಿಎಸ್‌ಟಿ ಮೊತ್ತಗಳನ್ನು ವಸೂಲಿಸಿ ನಿಧಿಗೆ ಜಮಾಮಾಡಿ ಜಿಎಸ್‌ಟಿ ಮೊತ್ತಗಳನ್ನು ಸಂಬಂಧಪಟ್ಟ ಇಲಾಖೆಯ ಲೆಕ್ಕಶೀರ್ಷಿಕೆಗೆ ಜಮಾ ಮಾಡುವವರೆಗೆ ದಿನಾಂಕ:31–03–2025 ಕ್ಕೆ ಬಾಕಿ ಉಳಿದ ಒಟ್ಟು ಮೊತ್ತ **ರೂ.4,03,38,095/–ಗಳನ್ನು ವಸೂಲಾತಿಗೆ** ಸೂಚಿಸಲಾಗಿದೆ. ವಿವರಗಳನ್ನು ಅನುಬಂಧ–48 ರಲ್ಲಿ ವಿವರಿಸಿದೆ.

37.3 ವಿಜಯನಗರ ಶೈಕ್ಷಣಿಕ ಭವನ ಬಾಡಿಗೆ ಪಾವತಿಗೆ ಚಲನ್ ಹಾಜರುಪಡಿಸದಿರುವುದು:

(ವಿಚಾರಣಾ ಪತ್ರ ಸಂಖ್ಯೆ:163/ದಿ:23–10–2025)

ವಿಶ್ವವಿದ್ಯಾನಿಲಯದ ಒಪ್ಪಂದ ಪತ್ರದ ದಿನಾಂಕ:03–11–2022ರಂತೆ ಶೈಕ್ಷಣಿಕ ಭವನ, ವಿಜಯನಗರ ಕಟ್ಟಡದ ಬಾಡಿಗೆ ಬೇಡಿಕೆ, ವಸೂಲಿ ಮತ್ತು ಬಾಕಿ ವಿವರಗಳನ್ನು ಪರಿಶೀಲಿಸಲಾಗಿದ್ದು, ವಿವರಗಳು ಕೆಳಕಂಡಂತಿರುತ್ತವೆ.

ಬಾಡಿಗೆ ಬೇಡಿಕೆ, ವಸೂಲಿ ಮತ್ತು ಬಾಕಿ ವಿವರ				
ಕ್ರ.ಸಂ	ವಿವರ	ಬಾಡಿಗೆ	ಜಿಎಸ್‌ಟಿ	ಒಟ್ಟು ಬಾಡಿಗೆ ಮೊತ್ತ ರೂ.
1	ದಿನಾಂಕ: 01–04–2024 ಕ್ಕೆ ಪ್ರಾರಂಭಿಕ ಶಿಲ್ಕು	23,655	4,258	27,913
2	2024–25 ನೇ ಸಾಲಿನ ಬೇಡಿಕೆ	2,83,860	51,095	3,34,955
3	ಒಟ್ಟು ಮೊತ್ತ	3,07,515	55,353	3,62,868
4	2024–25 ರ ವಸೂಲಿ	2,83,860	51,095	3,34,955
5	31–03–2025 ಕ್ಕೆ ಅಂತಿಮ ಶಿಲ್ಕು ರೂ.	23,655	4,258	27,913

ಮೇಲ್ಕಂಡ ವಿವರಗಳಂತೆ ವಿದ್ಯಾನಿಲಯದ ನಿಧಿಗೆ ಜಮೆಯಾಗಿರುವ ರೂ.2,83,860/– ಹಾಗೂ ಸರಕು ಸೇವಾ ತೆರಿಗೆ ವಸೂಲಿ ಮೊತ್ತ ರೂ.51,095/– ಗಳು ಜಮೆಯಾಗಿರುವ ಯಾವುದೇ ಮಾಹಿತಿ ಲೆಕ್ಕಪರಿಶೋಧನೆಗೆ ಲಭ್ಯವಾಗಿರುವುದಿಲ್ಲ. ಹಾಗೂ ವಸೂಲಿಸಲಾದ ಸರಕು ಸೇವಾ ತೆರಿಗೆ ಮೊತ್ತ ರೂ.51,095/– ಗಳನ್ನು ಸಂಬಂಧಪಟ್ಟ ಲೆಕ್ಕಶೀರ್ಷಿಕೆಗ ಜಮೆಮಾಡಿರುವ ಸಂಬಂಧ ಯಾವುದೇ ಮಾಹಿತಿಯೂ ಕೂಡ ಲೆಕ್ಕಪರಿಶೋಧನೆಗೆ ಲಭ್ಯವಾಗಿರುವುದಿಲ್ಲ.

ಈ ಸಂಬಂಧವಾದ ಒಪ್ಪಂದ ಪತ್ರವನ್ನು ಪರಿಶೀಲಿಸಿದ್ದು ಈ ಕೆಳಕಂಡ ನ್ಯೂನತಗಳನ್ನು ಪರಿಶೀಲಿಸಲಾಗಿತ್ತದೆ.

1. ಒಪ್ಪಂದ ಪತ್ರದಲ್ಲಿ ಐದು ವರ್ಷಗಳ ಅವಧಿ ನೀಲಾಗಿರುತ್ತದೆ. ಪ್ರತಿ ವರ್ಷ ಬಾಡಿಗೆ ಮೊತ್ತವನ್ನು ಶೇಕಡಾವಾರು ಹೆಚ್ಚಿಸುವ ಯಾವುದೇ ಷರತ್ತುಗಳನ್ನು ವಿಧಿಸಿರುವುದಿಲ್ಲ.

2. ಕಟ್ಟಡದ ಬಾಡಿಗೆ ಸಂಬಂಧವಾಗಿ ಪಡೆದಿರುವ ಭದ್ರತಾ ಠೇವಣಿ ಮೊತ್ತಗಳ ಮಾಹಿತಿ ಲಭ್ಯವಾಗಿರುವುದಿಲ್ಲ.

3. ಪ್ರತಿ ಮಾಹೆಯಲ್ಲಿ ಪಾವತಿಸಬೇಕಾದ ಬಾಡಿಗೆಯನ್ನು ಪಾವತಿಸುವಲ್ಲಿನ ವಿಳಂಬಕ್ಕೆ ನಿಯಮಾನುಸಾರ ಬಡ್ಡಿ ಷರತ್ತನ್ನು ವಿಧಿಸಿರುವುದಿಲ್ಲ.

4. ಕರ್ನಾಟಕ ಆರ್ಥಿಕ ಸಂಹಿತೆ ನಿಯಮ–401 ರನ್ವಯ ಒಪ್ಪಂದ ಮಾಡಿಕೊಳ್ಳುವ ಸಂಬಂಧವಾಗಿ ಕಾನೂನು ಸಲಹೆ ಪಡೆದಿರುವುದಿಲ್ಲ.

ಮೇಲ್ಕಂಡ ಅಂಶಗಳ ಸಂಬಂಧವಾಗಿ ಲೆಕ್ಕಪರಿಶೋಧನೆಗೆ ಸೂಕ್ತ ಮಾಹಿತಿ ಹಾಜರುಪಡಿಸಲು ಕೋರಿ **ವಿಚಾರಣಾ ಪತ್ರ ಸಂಖ್ಯೆ:**163/**ದಿ:**23–10–2025 ನ್ನು ನೀಡಲಾಗಿದೆ. ಯಾವುದೇ ಅನುಪಾಲನೆಯನ್ನು ಹಾಜರುಪಡಿಸಿರುವುದಿಲ್ಲ. ಈ ಸಂಬಂಧವಾಗಿ ವಸೂಲಿಸಲಾದ ಬಾಡಿಗೆ ಹಾಗೂ ಜಿಎಸ್‌ಟಿ ಮೊತ್ತಗಳು ಎವಿ ಖಾತೆಗೆ ಜಮೆಯಾಗಿರುವ ವಿವರ ಹಾಗೂ **ಜಿಎಸ್‌ಟಿ** ಮೊತ್ತವನ್ನು ಸಂಬಂಧಪಟ್ಟ ಇಲಾಖೆಯ ಲೆಕ್ಕಶೀರ್ಷಿಕೆಗೆ ಜಮಾ ಮಾಡಿರುವ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೆ 2024–25ನೇ ಸಾಲಿನ ವಸೂಲಿ ಮೊತ್ತ **ರೂ.3,34,955/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ವಿವರಗಳನ್ನು ಅನುಬಂಧ–49ರಲ್ಲಿ **ವಿವರಿಸಿದೆ**.

37.4 ಕ್ಯಾಂಟೀನ್ ಕಟ್ಟಡ ಬಾಡಿಗೆ ಪಾವತಿಗೆ ಚಲನ್ ಹಾಜರುಪಡಿಸದಿರುವುದು ಹಾಗೂ ಜಿಎಸ್‌ಟಿ ಸಂಗ್ರಹಿಸದಿರುವುದು:
(ವಿಚಾರಣಾ ಪತ್ರ ಸಂಖ್ಯೆ:**168A/ದಿ:24–10–2025**)

ವಿಶ್ವವಿದ್ಯಾನಿಲಯದ ಕ್ಯಾಂಟೀನ್ ಕಟ್ಟಡವನ್ನು ದಿನಾಂಕ:04–12–2024 ರಿಂದ ಬಾಡಿಗೆ ನೀಡಲಾಗಿದ್ದು ಕರ್ನಾಟಕ ಪಿಡಬ್ಲ್ಯೂಡಿ ಇಲಾಖೆಯಿಂದ ಬಾಡಿಗೆ ಲೆಕ್ಕಾಚಾರ ಮಾಡಿಸಿ ನಿಗದಿಪಡಿಸಿರುವ ಲೆಕ್ಕಾಚಾರದ ಪಟ್ಟಿಯನ್ನು ಹಾಜರುಪಡಿಸಿರುವುದಿಲ್ಲ.

ಒಪ್ಪಂದ ಪತ್ರದಲ್ಲಿ ನಿಗದಿಪಡಿಸಿರುವ ಬಾಡಿಗೆ ಮೊತ್ತ ರೂ.7,200/– ಗಳಲ್ಲಿ ಜಿಎಸ್‌ಟಿ ಮೊತ್ತವನ್ನು ಸೇರಿಸಿ ನಿಗದಿಪಡಿಸಲಾಗಿರುತ್ತದೆ. ನಿಯಮದಂತೆ ನಿಗದಿಪಡಿಸಲಾದ ಬಾಡಿಗೆ ಮೊತ್ತದ ಮೇಲೆ ಸರಕು ಸೇವಾ ತೆರಿಗೆ ವಿಧಿಸಬೇಕಾಗಿರುತ್ತದೆ. ಕ್ಯಾಂಟೀನ್ ಕಟ್ಟಡವನ್ನು ಒಂದು ವರ್ಷದ ಅವಧಿಗೆ ನೀಡಲಾಗಿದ್ದು ಪ್ರತಿ ತಿಂಗಳ 5ನೇ ದಿನಾಂಕಕ್ಕೆ ಒಂದಿನ ತಿಂಗಳ ಬಾಡಿಗೆಯನ್ನು ಪಾವತಿಸಲು ಷರತ್ತು ವಿಧಿಸಲಾಗಿರುತ್ತದೆ ಆದರೆ ಬಾಡಿಗೆ ಪಾವತಿಯು ವಿಳಂಬವಾದಲ್ಲಿ ವಿಧಿಸಬಹುದಾದ ಬಡ್ಡಿ/ದಂಡಗಳ ವಿವರಗಳು ಷರತ್ತುಗಳಲ್ಲಿ ಇರುವುದಿಲ್ಲ.

ಸಮಿತಿಯು ಆಹಾರ ಪದಾರ್ಥಗಳ ದರಗಳನ್ನು ನಿಗದಿಪಡಿಸಿರುವ ಮಾಹಿತಿಯು ಹಾಗೂ ಭದ್ರತಾ ಠೇವಣಿ/ಮುಂಗಡ ಪಡೆದಿರುವ ವಿವರಗಳು ಲಭ್ಯವಾಗಿರುವುದಿಲ್ಲ.

2024–25 ನೇ ಸಾಲಿನ ಬಾಡಿಗೆ ಬೇಡಿಕೆ, ವಸೂಲಿ ಮತ್ತು ಬಾಕಿ ವಿವರಗಳು ಈ ಕೆಳಕಂಡಂತಿರುತ್ತವೆ.

ವಿವರ	ಬಾಡಿಗೆ	ಜಿಎಸ್‌ಟಿ	ಒಟ್ಟು
ದಿನಾಂಕ: 04–12–2024 ಕ್ಕೆ ಪ್ರಾರಂಭಿಕ ಶಿಲ್ಕು	0	0	0
2024–25 ರ ಬೇಡಿಕೆ	24,408	4,392	28,800
ಒಟ್ಟು ಮೊತ್ತ	24,408	4,392	28,800
2024–25 ಕ್ಕೆ ವಸೂಲಿ	18,305	3,295	21,600
31–03–2025 ಕ್ಕೆ ಅಂತಿಮ ಶಿಲ್ಕು	6,103	1,097	7,200

ಮೇಲಿನಂತೆ ವಸೂಲಿಸಿರುವ ಒಟ್ಟು ರೂ.21,600/- ಗಳಲ್ಲಿ ಬಾಡಿಗೆ ಮೊತ್ತ ರೂ.18305/- ಗಳು ವಿಶ್ವವಿದ್ಯಾನಿಲಯಕ್ಕೆ ಜಮೆಯಾಗಿರುವ ಹಾಗೂ ಸಂಗ್ರಹಿಸಲಾದ ಸರಕು ಮತ್ತು ಸೇವಾ ತೆರಿಗೆ ಮೊತ್ತ ರೂ.3295/- ಗಳಿಗೆ ಜಿಎಸ್‌ಟಿ ಪಾವತಿ ಚಲನ್‌ಗಳು ಲಭ್ಯವಾಗಿರುವುದಿಲ್ಲ. ಈ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ:168A/ದಿ:24-10-2025 ನ್ನು ನೀಡಲಾಗಿದ್ದು, ಅನುಪಾಲನಾ ಪತ್ರ ಸಂಖ್ಯೆ:ಕರಾಮುವಿ/ಯುಇಡಿ/48/2025-26 ದಿನಾಂಕ:11-12-2025ರಲ್ಲಿ ಭದ್ರತಾ ಕೇವಣಿ ಮೊತ್ತ ಸ್ವೀಕರಿಸಲಾಗಿರುತ್ತದೆ ಎಂದು ಮಾಹಿತಿ ನೀಡಿರುತ್ತಾರೆ. ಆದರೆ ಡಿಡಿ ಸಂಖ್ಯೆ, ದಿನಾಂಕ ಮೊತ್ತ ಮತ್ತು ಎಫ್ ನಿಧಿಗೆ ಜಮಾ ಮಾಡಲಾದ ವಿವರಗಳನ್ನು ಹಾಜರುಪಡಿಸಿರುವುದಿಲ್ಲ. ಉಳಿದಂತೆ ಸ್ವೀಕರಿಸಲಾದ ಬಾಡಿಗೆ ಮೊತ್ತ ರೂ.18,305/- ಹಾಗೂ ಸಂಗ್ರಹಿಸಲಾದ ಜಿಎಸ್‌ಟಿ ಮೊತ್ತ ರೂ.1,097/- ಗಳು ಇಲಾಖೆಗೆ ಜಮೆ ಮಾಡಲಾದ ವಿವರಗಳನ್ನು ಹಣಕಾಸು ಇಲಾಖೆಯಿಂದ ಪಡೆದು ಹಾಜರುಪಡಿಸಲಾಗುವುದು ಎಂದು ಅನುಪಾಲನೆ ನೀಡಿರುತ್ತಾರೆ.

ಬಾಡಿಗೆ ಮೊತ್ತಗಳು ವಿಶ್ವವಿದ್ಯಾನಿಲಯದ ನಿಧಿಗೆ ಜಮೆಯಾದ ವಿವರ ಹಾಗೂ ಜಿಎಸ್‌ಟಿ ಮೊತ್ತವನ್ನು ಇಲಾಖೆಯ ಲೆಕ್ಕಶೀರ್ಷಿಕೆಗೆ ಜಮಾ ಮಾಡಲಾದ ವಿವರಗಳನ್ನು ಹಾಜರುಪಡಿಸುವವರೆಗೆ ಬಾಡಿಗೆ ಮೊತ್ತ ರೂ.**21,600**/- ಗಳನ್ನು **ಆಕ್ಷೇಪಣೆಯಲ್ಲಿಡಲು** ಹಾಗೂ ದಿನಾಂಕ:31-03-2025 ರ ಅಂತ್ಯಕ್ಕೆ ಬಾಕಿ ಮೊತ್ತ **ರೂ.7,200/- ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ.** ಬಾಡಿಗೆ ಬೇಡಿಕೆ, ವಸೂಲಿ ಮತ್ತು ಬಾಕಿ ವಿವರಗಳನ್ನು ಅನುಬಂಧ-50 ರಲ್ಲಿ ವಿವರಿಸಿದೆ.

37.5 ಟೆಂಡರ್ ನಮೂನೆ ಮಾರಾಟದ ಶುಲ್ಕ ವಿಶ್ವವಿದ್ಯಾನಿಲಯದ ಖಾತೆಗೆ ಜಮೆಯಾಗಿರುವ ಚಲನ್ ಹಾಜರುಪಡಿಸದಿರುವುದು: (ವಿಚಾರಣಾ ಪತ್ರ ಸಂಖ್ಯೆ:193/ದಿನಾಂಕ:07-11-2025)

ವಿಶ್ವವಿದ್ಯಾನಿಲಯದ ಇಂಜಿನೀಯರಿಂಗ್ ವಿಭಾಗದಲ್ಲಿ ವಿವಿಧ ಕಾಮಗಾರಿಗಳಿಗೆ ನೀಡಲಾದ ಟೆಂಡರ್ ಶುಲ್ಕದ ಮೇಲೆ ಶೇ.18 ರ ದರದಲ್ಲಿ ಸಂಗ್ರಹಿಸಲಾದ ಜಿಎಸ್‌ಟಿ ಮೊತ್ತಗಳು ಇಲಾಖೆಗೆ ಜಮೆಯಾಗಿರುವುದಕ್ಕೆ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

2024-25ನೇ ಸಾಲಿನಲ್ಲಿ ಒಟ್ಟು ರೂ.18,880/- ಗಳನ್ನು ಟೆಂಡರ್ ಮಾರಾಟ ಮೊತ್ತ ಸಂಗ್ರಹಿಸಲಾಗಿದ್ದು, ರೂ.16,000/-ಗಳು ಜಿಎಸ್‌ಟಿ ರೂ.2,880/-ಗಳಾಗಿರುತ್ತದೆ. ಸದರಿ ಮೊತ್ತಗಳು ವಿಶ್ವವಿದ್ಯಾನಿಲಯದ ಖಾತೆಗೆ ಜಮೆಯಾಗಿರುವ ಬಗ್ಗೆ ಹಾಗೂ ಸಂಗ್ರಹಿಲಾದ ಜಿಎಸ್‌ಟಿ ಮೊತ್ತವನ್ನು ಸಂಬಂಧಪಟ್ಟ ಇಲಾಖೆಯ ಲೆಕ್ಕಶೀರ್ಷಿಕೆಗೆ ಜಮಾ ಮಾಡಲಾದ ಮಾಹಿತಿಯನ್ನು ಹಾಜರುಪಡಿಸಲು ಕೋರಿ **ವಿಚಾರಣಾ ಪತ್ರ ಸಂಖ್ಯೆ:**193/**ದಿ:**07-11-2025 ನ್ನು ನೀಡಲಾಗಿದ್ದು, ಅನುಪಾಲನಾ ವರದಿ ಪತ್ರ ಸಂಖ್ಯೆ:ಕರಾಮುವಿ/ಯುಇಡಿ/48/2025-26 ದಿನಾಂಕ:28-11-2025 ರಲ್ಲಿ ಹಣಕಾಸು ವಿಭಾಗದಿಂದ ಪಡೆಯಬಹುದಾಗಿದೆ ಎಂದು ಉತ್ತರಿಸಿರುತ್ತಾರೆ.

2024-25ನೇ ಸಾಲಿನಲ್ಲಿ ಸಂಗ್ರಹವಾದ ಟೆಂಡರ್ ಮಾರಾಟ ಶುಲ್ಕಗಳು ಹಾಗೂ ಜಿಎಸ್‌ಟಿ ಮೊತ್ತಗಳು ಈ ಕೆಳಕಂಡಂತಿರುತ್ತವೆ.

ಟೆಂಡರ್ ನಮೂನೆ ಶುಲ್ಕ	ಜಿಎಸ್‌ಟಿ@ 18%	ಒಟ್ಟು ಮೊತ್ತ ರೂ.
16,000	2,880	18,880

ಮೇಲಿನಂತೆ ಸಂಗ್ರಹಿಸಲಾದ ಮೊತ್ತವನ್ನು ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಿರುವ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರರುಪಡಿಸುವವರೆಗೆ **ರೂ.18,880/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ವಿವರಗಳನ್ನು ಅನುಬಂಧ-51 ರಲ್ಲಿ ನಮೂದಿಸಿದೆ.

37.6 ಇಂಜಿನಿಯರಿಂಗ್ ವಿಭಾಗದಲ್ಲಿನ ವಾಸ್ತವ ವೆಚ್ಚಗಳಿಗೂ ಹಣಕಾಸು ವಿಭಾಗದ ಲೆಕ್ಕಶೀರ್ಷಿಕೆವಾರು ವೆಚ್ಚಗಳಿಗೂ ವ್ಯತ್ಯಾಸಗಳು: (ವಿಚಾರಣಾ ಪತ್ರ ಸಂಖ್ಯೆ:178/**ದಿ:**28-10-2025)

ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯದ ನಿಲಯದ ಇಂಜಿನೀಯರಿಂಗ್ ವಿಭಾಗಕ್ಕೆ ಒಟ್ಟು 17 ಲೆಕ್ಕಶೀರ್ಷಿಕೆಯಲ್ಲಿ ಆಯ-ವ್ಯಯ ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಪ್ರತಿ ಲೆಕ್ಕಶೀರ್ಷಿಕೆಯಲ್ಲಿ ಕಾಯ್ದಿರಿಸಿದ ಮೊತ್ತಗಳಿಗೆ

ಅನುಗುಣವಾಗಿ ಇಂಜಿನೀಯರಿಂಗ್ ವಿಭಾಗದ ವೆಚ್ಚಗಳಿಗೂ ಹಣಕಾಸು ಶಾಖೆಯಲ್ಲಿ ಲೆಕ್ಕಶೀರ್ಷಿಕೆವಾರು ಪಾವತಿಸಲಾದ ಮೊತ್ತಗಳಿಗೂ ವ್ಯತ್ಯಾಸಗಳನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾಗಿರುತ್ತದೆ. ವಿವರಗಳು ಕೆಳಕಂಡಂತಿರುತ್ತವೆ.

ಇಂಜಿನಿಯರಿಂಗ್ ಕಾಮಗಾರಿಗಳ 2024-25 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆವಾರು ಆಯ-ವ್ಯಯ, ಪಾವತಿ ಮತ್ತು ವ್ಯತ್ಯಾಸದ ವಿವರ ಪಟ್ಟಿ									
ಕ್ರಮ ಸಂಖ್ಯೆ		ಲೆಕ್ಕಶೀರ್ಷಿಕೆ ವಿವರ	ಶೀರ್ಷಿಕೆ	ಉಪ ಶೀರ್ಷಿಕೆ	ಆಯ-ವ್ಯಯ ಅವಕಾಶದ ಮೊತ್ತ	ಪರಿಷ್ಕೃತ ಆಯ-ವ್ಯಯ ಅವಕಾಶದ ಮೊತ್ತ	ಇಂಜಿನೀಯರಿಂಗ್ ವಿಭಾಗದ ವೆಚ್ಚ	ಹಣಕಾಸು ವಿಭಾಗದ ವೆಚ್ಚ	ಇಂಜಿನೀಯರಿಂಗ್ ವಿಭಾಗದ ಮತ್ತು ಹಣಕಾಸು ವಿಭಾಗದ ವೆಚ್ಚಗಳ ವ್ಯತ್ಯಾಸ
1	2	3	4	5	6	7	8	9	10
1	1	ಜಲಮೂಲ ದುರಸ್ತಿ ಹಾಗೂ ತೆರೆಗಳು	22	214	1200000	1200000	1103847	1103847	0
2	2	ವೀಕ್ಷಣಾ ಉಪಕರಣಗಳು/ ಕಛೇರಿ ಸಲಕರಣೆಗಳು	22	217	10000000	5000000	2835057	2835057	0
3	3	ಅಧಿಕಾರಿಗಳ ಗೃಹ ನಿರ್ಮಾಣ	22	234	1000000	500000	0	0	0
4	4	ಅಧೀನ ಸಿಬ್ಬಂದಿ ವಸತಿ ಸಮುಚ್ಚಯಗಳ ನಿರ್ಮಾಣ	22	262	300000	0	0	0	0
5	5	ದೊಡ್ಡ ಕಾಮಗಾರಿಗಳು	22	271	500000000	70000000	36342688	35097832	1244856
6	6	ಸಣ್ಣ ಕಾಮಗಾರಿಗಳು	22	272	20000000	6000000	4238149	4237848	301
7	7	ಕಟ್ಟಡಗಳ ನಿರ್ಮಾಣ ಮತ್ತು ದುರಸ್ತಿ	22	273	6000000	1850000	1690369	1834592	-144223
8	8	ಸಂಸ್ಕೃತ ವಿಶ್ವವಿದ್ಯಾಲಯದ ಕಟ್ಟಡ ನಿರ್ಮಾಣ ಕಾಮಗಾರಿಗಳು	22	293	0	136000000	124653839	124652784	1055
9	9	ಸರ್ಕಾರಿ/ ಅನುದಾನಿತ ಶಾಲೆಗಳ ದುರಸ್ತಿ ಸ್ವೀಕರಿಸಿದ	22	296	0	46500000	40192568	40162821	29747
10	10	ವಾಹನಗಳ ನಿರ್ವಹಣೆ ಹಾಗೂ ವಿವಿಧ ಜಲಕಾರ್ಯಾಂತ್ರಿಕ ಉಪಕರಣ ವೆಚ್ಚ	22	320	7000000	6000000	604889	5241384	-4636495
11	11	ವಾಹನಗಳ ಖರೀದಿ	22	322	3500000	0	0	0	0
12	12	ತೋಟಗಳ ನಿರ್ವಹಣೆಯ ವಿವರ	22	329	300000	50000	33260	33260	0
13	13	ಪ್ರಾದೇಶಿಕ ಕೇಂದ್ರಗಳ ನಿರ್ಮಾಣ ವೆಚ್ಚದ	22	341	80000000	370000000	345590332	230134675	115455657
14	14	ಕಛೇರಿ ಸಾರಿಗ್ಗಾಯ ವೆಚ್ಚದ	22	350	300000	120000	103253	103253	0
		ಲೆಕ್ಕಶೀರ್ಷಿಕೆ 22 ಒಟ್ಟು			**1796000000**	**643220000**	**557388251**	**445437353**	**111950898**
15	1	ಪಡೆತಾ ಸಿಬ್ಬಂದಿಗಳ ಕೂಡಾ ವೆಚ್ಚದ ವಿವರ.	69	212	130000000	35000000	33514370	33514370	0
16	2	ಪೊಲೀಸ್ ವೆಚ್ಚದ ವಿವರ ಶೀರ್ಷಿಕೆ	69	266	500000	300000	271948	257763	14185
17	3	ವಿದ್ಯುಚ್ಛಕ್ತಿಗಳ ಮುದ್ರಣ/ಕಛೇರಿ ವಸ್ತುಗಳು ಹಾಗೂ ಇತರೆ ಮುದ್ರಣ ವೆಚ್ಚದ ವಿವರ.	69	283	120000000	30000000	28879609	28893409	-13800
		ಲೆಕ್ಕಶೀರ್ಷಿಕೆ 69 ಒಟ್ಟು			**250500000**	**65300000**	**62665927**	**62665542**	**385**

		ಲೆಕ್ಕಶೀರ್ಷಿಕೆ 22 ಮತ್ತು 69 ಒಟ್ಟು ಮೊತ್ತ ರೂ.			430180000	708528000	628654178	508102895	111951283

ಇಂಜಿನಿಯರಿಂಗ್ ವಿಭಾಗದ ಲೆಕ್ಕಶೀರ್ಷಿಕೆವಾರು ಭರಿಸಲಾದ ವೆಚ್ಚಗಳನ್ನು ಹಣಕಾಸು ವಿಭಾಗದ ವೆಚ್ಚಗಳ ಲೆಕ್ಕಪತ್ರಗಳೊಂದಿಗೆ ತಾಳೆ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ **ವಿಚಾರಣಾ ಪತ್ರ** ಸಂಖ್ಯೆ:178/ದಿ:28-10-2025 ನೀಡಲಾಗಿದೆ. ಯಾವುದೇ ಅನುಪಾಲನೆ ನೀಡಿರುವುದಿಲ್ಲ. ವಿಭಾಗದ ಬಿಲ್ಲು ವಹಿಯ ಮೊತ್ತಗಳು ಮತ್ತು ಹಣಕಾಸು ಶಾಖೆಯ ವಾರ್ಷಿಕ ಲೆಕ್ಕಪತ್ರಗಳಲ್ಲಿ ವ್ಯತ್ಯಾಸಗಳನ್ನು ಸರಿಪಡಿಸಿಕೊಂಡು ಲೆಕ್ಕಪತ್ರಗಳನ್ನು ನಿರ್ವಹಿಸಲು ಸೂಚಿಸಿದೆ.

37.7 ಇಂಜಿನಿಯರಿಂಗ ವಿಭಾಗದ ಆಯ-ವ್ಯಯ ಅವೈಜ್ಞಾನಿಕವಾಗಿರುವುದು:

ಲೆಕ್ಕಶೀರ್ಷಿಕೆ ಮತ್ತು ಉಪಶೀರ್ಷಿಕೆವಾರು ಆಯ-ವ್ಯಯ ಅವಕಾಶಗಳ ಸಂಬಂಧ ನಿಗದಿಪಡಿಸಿದ ಮಾನದಂಡಗಳು ಲೆಕ್ಕಪರಿಶೋಧನೆಗೆ ಲಭ್ಯವಾಗಿರುವುದಿಲ್ಲ. ಹಾಗೂ ಮುಖ್ಯವಾಗಿ ಈ ಕೆಳಕಂಡ ಲೆಕ್ಕಶೀರ್ಷಿಕೆಗಳಲ್ಲಿ ಆಯ-ವ್ಯಯ ಮತ್ತು ಪರಿಷ್ಕೃತ ಆಯ-ವ್ಯಯಗಳಲ್ಲಿ ದೊಡ್ಡ ಕಾಮಗಾರಿಗಳು, ಸಣ್ಣ ಕಾಮಗಾರಿಗಳು ಮತ್ತು ಪ್ರಾದೇಶಿಕ ಕೇಂದ್ರಗಳ ನಿರ್ಮಾಣಗಳು, ಹೊಸ ಕಾಮಗಾರಿಗಳು, ಮುಂದುವರೆದ ಕಾಮಗಾರಿಗಳ ಕ್ರೀಯಾ ಯೋಜನೆಯು ಲಭ್ಯವಾಗಿರುವುದಿಲ್ಲ.

ಕ್ರಮ ಸಂಖ್ಯೆ		ಲೆಕ್ಕಶೀರ್ಷಿಕೆ ವಿವರ	ಶೀರ್ಷಿಕೆ	ಉಪ ಶೀರ್ಷಿಕೆ	ಆಯ-ವ್ಯಯ ಅವಕಾಶದ ಮೊತ್ತ	ಪರಿಷ್ಕೃತ ಆಯ-ವ್ಯಯ ಅವಕಾಶದ ಮೊತ್ತ
1	2	3	4	5	6	7
1	5	ದೊಡ್ಡ ಕಾಮಗಾರಿಗಳು	22	271	5,00,00,000	7,00,00,000
2	6	ಸಣ್ಣ ಕಾಮಗಾರಿಗಳ	22	272	2,00,00,000	60,00,000
3	13	ಪ್ರಾದೇಶಿಕ ಕೇಂದ್ರಗಳ ನಿರ್ಮಾಣ ವೆಚ್ಚದ	22	341	8,00,00,000	37,00,00,000

ಲೆಕ್ಕಶೀರ್ಷಿಕೆವಾರು ಈ ಹಿಂದಿನ ಮೂರು ವರ್ಷಗಳ ವಾಸ್ತವ ವೆಚ್ಚಗಳು ಹಾಗೂ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಂದಾಜು ಪಟ್ಟಿಗಳ ಅನ್ವಯ ಆಯ-ವ್ಯಯವನ್ನು ಅನುಮೋದನೆ ಪಡೆಯುವಲ್ಲಿ ಅಗತ್ಯ ಕ್ರಮ ವಹಿಸಲು ಸೂಚಿಸಿದೆ.

37.8 ಇಂಜಿನಿಯರಿಂಗ್ ವಿಭಾಗದ ಕಾಮಗಾರಿಗಳ ಸಂಬಂಧ "ಅಧಿಕಾರ ಪ್ರತ್ಯಾಯೋಜನೆ" (Deligation of Power) ಬಗ್ಗೆ: (ವಿಚಾರಣಾ ಪತ್ರ ಸಂಖ್ಯೆ:181/ದಿ:29-10-2025)

ವಿಶ್ವವಿದ್ಯಾನಿಲಯದ ಇಂಜಿನೀಯರಿಂಗ್ ವಿಭಾಗದ ಕಾಮಗಾರಿಗಳಿಗೆ ಈ ಕೆಳಕಂಡ ಅಂಶಗಳಲ್ಲಿ ಕುಲಾಧಿಪತಿಗಳಿಂದ ಅನುಮೋದನೆ ಪಡೆದಿರುವ ಆರ್ಥಿಕ ಪ್ರತ್ಯಾಯೋಜನೆ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:181/ದಿ:29-10-2025ನ್ನು ನೀಡಲಾಗಿತ್ತು

* ಆಯ-ವ್ಯಯ ಅವಕಾಶಗಳಂತೆ ಕ್ರಿಯಾ ಯೋಜನೆಗೆ ಅನುಮೋದನೆ ಪಡೆದಿರುವುದು.
* ಕಾಮಗಾರಿ ಅಂದಾಜುಪಟ್ಟಿಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ

* ಕಾಮಗಾರಿ ಸಂಬಂಧ ಪರಿಷ್ಕೃತ ಅಂದಾಜುಪಟ್ಟಿಗಳ ಅನುಮೋದನೆ.

* ಕಾಮಗಾರಿ ಪರಿಮಾಣಗಳ ವ್ಯತ್ಯಾಸಗಳ ಅನುಮೋದನೆ. ಕಾಮಗಾರಿ ಅಳತೆಗಳ ಪರಿಶೀಲನೆ.

* ಟೆಂಡರ್ ಆಹ್ವಾನಿಸುವುದು ಹಾಗೂ ಅನುಮೋದಿಸುವುದು.

* ಕಾಮಗಾರಿ ಪರಿಮಾಣಗಳು ಶೇ.125 ಕ್ಕೂ ಅಧಿಕವಾದಲ್ಲಿ ಮಂಜೂರಾತಿ ಪ್ರಾಧಿಕಾರ.

* ಹಾಗೂ ಇಂಜಿನೀಯರಿಂಗ್ ವಿಭಾಗಕ್ಕೆ ನೀಡಲಾಗಿರುವ ಇತರೇ ಆಡಳಿತಾತ್ಮ ಮತ್ತು ಆರ್ಥಿಕ ಅಧಿಕಾರಗಳ ಪ್ರತ್ಯಾಯೋಜನೆ ನೀಡಿರುವ ದಾಖಲೆ.

* ಈ ಸಂಬಂಧವಾಗಿ ರಚಿಸಲಾಗಿರುವ ಪರಿನಿಯಮ.

ಅದಕ್ಕೆ ಎಕ್ಸಿಪೆಡ್ಯಾನಿಲಯದ ಅನುಪಾಲನಾ ಪತ್ರ ಸಂಖ್ಯೆಕರಾಮುಎ/ಯುಇಡಿ/48/2025-26 ದಿ:09-12-2025 ರಲ್ಲಿ ಕೆಳಗಿನಂತೆ ವಿವರಣೆ ನೀಡಲಾಗಿದೆ.

- ಆಯ-ವ್ಯಯವನ್ನು ಹಣಕಾಸು ಸಮಿತಿ ಶಿಫಾರಸ್ಸು ಮೇರೆಗೆ, ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡುತ್ತದೆ.
- ಆಡಳಿತಾತ್ಮಕ ಮಂಜೂರಾತಿಯನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನದಂತೆ ಕುಲಸಚಿವರು ನೀಡುತ್ತಾರೆ.
- ತಾಂತ್ರಿಕ ಮಂಜೂರಾತಿಯನ್ನು ರೂ.100.00 ಲಕ್ಷ ಮಿತಿಯೊಳಗೆ ಕಾರ್ಯಪಾಲಕ ಅಭಿಯಂತರರು, ರೂ.100.00 ಲಕ್ಷ ಮೀರಿದ ಅಂದಾಜುಗಳಿಗೆ ಕಟ್ಟಡ ಸಮಿತಿ ಅನುಮೋದನೆ ಪಡೆದು, ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಅನುಮೋದನೆ ಪಡೆದು ಕಾರ್ಯಪಾಲಕ ಅಭಿಯಂತರರು ತಾಂತ್ರಿಕ ಮಂಜೂರಾತಿಯನ್ನು ನೀಡುತ್ತಾರೆ.
- ಪರಿಷ್ಕೃತ ಅಂದಾಜುಗಳಿಗೆ ಕಟ್ಟಡ ಸಮಿತಿಯಿಂದ ಅನುಮತಿಯನ್ನು ಪಡೆದು ವ್ಯವಸ್ಥಾಪನಾ ಮಂಡಳಿ ಅನುಮೋದನೆ ಪಡೆದು ಕುಲಸಚಿವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಕಾರ್ಯಪಾಲಕ ಅಭಿಯಂತರರು ನೀಡಿರುತ್ತಾರೆ.
- ಕಾಮಗಾರಿ ಅಳತೆಗಳನ್ನು Project Management Consultant, 100%, Assistant Engineer (Temp) 100%, Assistant Executive Engineer-100%, ಅಳತೆಗಳ ಪರಿಶೀಲನೆಯನ್ನು Executive Engineer -25% ರಂತೆ ಕೈಗೊಳ್ಳುತ್ತಿದ್ದಾರೆ.
- ಉಪ ಕಾರ್ಯದರ್ಶಿ-I ರಾಜ್ಯ ಮಟ್ಟದ ಟೆಂಡರ್ ಬುಲೆಟಿನ್ ಅಧಿಕಾರಿ ಇವರ ಮೂಲಕ ಕುಲಸಚಿವರು ಪ್ರಕಟಣೆ ನೀಡಿರುತ್ತಾರೆ. ಹಾಗೂ ಟೆಂಡರ್ ಅನುಮೋದನೆ ನೀಡಿರುತ್ತಾರೆ.
- ಕಾಮಗಾರಿ ಪರಿಮಾಣಗಳು ಶೇ.125 ಕ್ಕಿಂತ ಹೆಚ್ಚುವರಿಯಾಗಿದ್ದಲ್ಲಿ ಕಟ್ಟಡ ಸಮಿತಿ ಹಾಗೂ ವ್ಯವಸ್ಥಾಪನಾ ಮಂಡಳಿ ಸಭೆಯಿಂದ ಅನುಮೋದನೆಯನ್ನು ಪಡೆಯಲಾಗುತ್ತಿದೆ ಎಂದು ಉತ್ತರಿಸಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ:PWD 423 FC-1 2018 Bangalore, Dated:24-09-2018 ರಲ್ಲಿ ನಿಗದಿಪಡಿಸಿರುವ ಆಡಳಿತಾತ್ಮಕ ಮತ್ತು ತಾಂತ್ರಿಕ ಅಧಿಕಾರ ಪ್ರತ್ಯಾಯೋಜನೆಗಳಿಗೆ ಪರ್ಯಾಯವಾಗಿ ಅಳವಡಿಸಿಕೊಂಡಿರುವುದಕ್ಕೆ ಅಧಿಕಾರ ಪ್ರತ್ಯಾಯೋಜನೆಗಳಿಗೆ ಅನುಮೋದನೆಯಾದ ಪರಿನಿಯಮ ಅಥವಾ ಸರ್ಕಾರದ ಪತ್ರಗಳು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಮೇಲ್ಕಂಡ ಅಧಿಕಾರಗಳು ಅಧಿಕೃತವಾಗಿ ಪ್ರತ್ಯಾಯೋಜನೆಯಾಗಿರುವ ಬಗ್ಗೆ ಯಾವುದೇ ದಾಖಲೆಗಳು ಲೆಕ್ಕಪರಿಶೋಧನೆಗೆ ಲಭ್ಯವಾಗಿರುವುದಿಲ್ಲ. ಸದರಿ ಅಂಶಗಳ ಸಂಬಂಧವಾಗಿ ಸೂಕ್ತ ಪರಿನಿಯಮ ರಚಿಸಿ ಅನುಮೋದನೆ ಪಡೆಯುವಲ್ಲಿ ಅಗತ್ಯ ಕ್ರಮವಹಿಸಲು ಸೂಚಿಸಿದೆ.

37.9 ಕಟ್ಟಡ ಸಮಿತಿಗೆ ಪರಿನಿಯಮ ಅನುಮೋದನೆ ಪಡೆಯದಿರುವುದು:

ಇಂಜಿನೀಯರಿಂಗ್ ವಿಭಾಗದಲ್ಲಿ ಪ್ಯಾಕೇಜ್ ಕಾಮಗಾರಿಗಳ ಸಂಬಂಧವಾಗಿ ತಾಂತ್ರಿಕ ಮಂಜೂರಾತಿಯನ್ನು "ಕಟ್ಟಡ ಸಮಿತಿ" ಯ ದಿನಾಂಕ:31-07-2021 ರಂದು ನಡೆದ 25 ನೇ ಸಮಿತಿಯಲ್ಲಿ ತಾಂತ್ರಿಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ಕಟ್ಟಡ ಸಮಿತಿಯ ಅಧ್ಯಕ್ಷರು, ಕಾರ್ಯದರ್ಶಿ, ಸಂಚಾಲಕರು, ಸದಸ್ಯರು ಮತ್ತು ಆಹ್ವಾನಿತರ ವಿವರಗಳು ಕೆಳಕಂಡಂತಿರುತ್ತವೆ.

ಕ್ರಮ	ಸಮಿತಿ ಪದಾಧಿಕಾರಿಗಳ	ಪದನಿಮಿತ್ತ ಅಧಿಕಾರಿಗಳ ವಿವರ

ಸಂಖ್ಯೆ	ವಿವರ	
1	ಅಧ್ಯಕ್ಷರು	ಕುಲಪತಿಗಳು, ಕರ್ನಾಟಕ ರಾಜ್ಯಮುಕ್ತವಿಶ್ವವಿದ್ಯಾನಿಲಯ,ಮೈಸೂರು
2	ಸದಸ್ಯರು	ವಿಧಾನ ಪರಿಷತ್‌ಸದಸ್ಯರು, ಕರ್ನಾಟಕ ಸರ್ಕಾರ
3	ಸದಸ್ಯ ಕಾರ್ಯದರ್ಶಿ	ಕುಲಸಚಿವರು, ಕರ್ನಾಟಕ ರಾಜ್ಯಮುಕ್ತವಿಶ್ವವಿದ್ಯಾನಿಲಯ,ಮೈಸೂರು
4	ಸದಸ್ಯರು	ಹಣಕಾಸು ಅಧಿಕಾರಿಗಳು, ಕರ್ನಾಟಕ ರಾಜ್ಯಮುಕ್ತವಿತ್ತವಿದ್ಯಾನಿಲಯ,ಮೈಸೂರು
5	ಸದಸ್ಯರು	ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಮೈಸೂರು ವೃತ್ತ ಮೈಸೂರು.
6	ಸದಸ್ಯರು	ಅಧೀಕ್ಷಕ ಅಭಿಯಂತರರು(ವಿದ್ಯುತ್) ಕಾರ್ಯ ಮತ್ತು ಪಾಲನ ನಗರ ವೃತ್ತ, ಜೋಡಿ ಬಸವೇಶ್ವರ ರಸ್ತೆ ಕುವೆಂಪು ನಗರ, ಮೈಸೂರು
7	ಸಂಚಾಲಕರು	ಕಾರ್ಯಾಪಾಲಕ ಅಭಿಯಂತರರು, ಕರ್ನಾಟಕ ರಾಜ್ಯಮುಕ್ತವಿಶ್ವವಿದ್ಯಾನಿಲಯ,ಮೈಸೂರು
8	ಆಹ್ವಾನಿತರು	ಮೆ: ಗಿರೀಶ್, ಎಂ.ಸ್ವಾಮಿ, ವಾಸ್ತುಶಿಲ್ಪಿ ಮತ್ತು ಎನ್ಯಾಸಗಾರರು, ಬೆಂಗಳೂರು.

ಮೇಲಿನಂತೆ ಪ್ಯಾಕೇಜ್ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿ ನೀಡಲಾದ "ಕಟ್ಟಡ ಸಮಿತಿಯ" ರಚನೆ ಮತ್ತು ಕಾರ್ಯವಿಧಾನಗಳು ಹಾಗೂ ನೀಡಲಾದ ಅಧಿಕಾರಗಳ ಸರ್ಕಾರದಿಂದ ಹೊರಡಿಸಲಾದ ಆದೇಶವನ್ನಾಗಲಿ ಅಥವಾ ರಚಿಸಲಾಗಿರುವ ಪರಿನಿಯಮವನ್ನಾಗಲಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ಸದರಿ ಅಂಶವನ್ನು ಈ ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ಉಲ್ಲೇಖಿಸಲಾಗಿದ್ದು ಈ ವರೆವಿಗೂ ಸದರಿ ಕಟ್ಟಡ ಸಮಿತಿಯು ನಿಯಮಾನುಸಾರ ರಚನೆಯಾಗಿರುವ ಬಗ್ಗೆ ಯಾವುದೇ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಶಾಸನ ಬದ್ದವಾಗಿ ರಚಿತವಾಗದ ಕಟ್ಟಡ ಸಮಿತಿಯು ತೆಗೆದುಕೊಳ್ಳುವ ಯಾವುದೇ ತೀರ್ಮಾನಗಳು ಅಥವಾ ನಡಾವಳಿಗಳು ಪ್ರಶ್ನಾರ್ಹವಾಗುತ್ತವೆ.

ಕಟ್ಟಡ ಸಮತಿಯ ರಚನೆ, ಅಧಿಕಾರಗಳ ಸ್ವರೂಪ, ವ್ಯಾಪ್ತಿ, ಆರ್ಥಿಕ ಅಧಿಕಾರಗಳು ಮತ್ತು ಕಾರ್ಯಸೂಚಿಗಳನ್ನು ಸರ್ಕಾರದಿಂದ ನಿರ್ದಿಷ್ಟಪಡಿಸುವ ಸಂಬಂಧವಾಗಿ ಸೂಕ್ತ ಪರಿನಿಯಮಗಳನ್ನು ರೂಪಿಸಿಕೊಂಡು ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆಯುವಲ್ಲಿ ಅಗತ್ಯ ಕ್ರಮವಹಿಸಲು ಸೂಚಿಸಲಾಗಿದೆ.

37.10 ಪ್ಯಾಕೇಜ್ ಕಾಮಗಾರಿಗಳಲ್ಲಿ ಹೆಚ್ಚುವರಿ ಟೆಂಡರ್ ಪ್ರಿಮಿಯಂ, ಹೆಚ್ಚುವರಿ ಪರಿಮಾಣ ಮತ್ತು ಇಐಆರ್‌ಎಲ್ ಮೊತ್ತಗಳನ್ನು ಪಾವತಿಸಿರುವುದು ಹಾಗೂ ಇತರೇ ನ್ಯೂನತೆಗಳ ಬಗ್ಗೆ:

(ವಿಚಾರಣಾ ಪತ್ರ ಸಂಖ್ಯೆ:189/ದಿನಾಂಕ: 30-10-2025)

(ಅ) 2021-22ನೇ ಸಾಲಿನಲ್ಲಿ ಪ್ರಾರಂಭಿಸಿ 2024-25ನೇ ಸಾಲಿನಲ್ಲಿ ಮುಕ್ತಾಯಗೊಳಿಸಲಾದ ಈ ಕೆಳಕಂಡ ಲೆಕ್ಕತೀರ್ಪಿಕೆಗಳಲ್ಲಿ ಒಟ್ಟು 21 ಕಾಮಗಾರಿಗಳಲ್ಲಿ 20 ಕಾಮಗಾರಿಗಳನ್ನು ನಿರ್ವಹಿಸಿ ಪ್ಯಾಕೇಜ್ ಕಾಮಗಾರಿ ಮುಕ್ತಾಯಗೊಳಿಸಲಾಗಿರುತ್ತದೆ. ಕಾಮಗಾರಿ ವಿವರಗಳು ಕೆಳಕಂಡಂತಿರುತ್ತವೆ.

ಕ್ರಮ ಸಂಖ್ಯೆ		ಲೆಕ್ಕತೀರ್ಪಿಕೆ ವಿವರ	ತೀರ್ಪಿಕೆ	ಉಪ ತೀರ್ಪಿಕೆ	ಕ್ರಮ ಸಂಖ್ಯೆ		ಕಾಮಗಾರಿ ಹೆಸರು
1	2	3	4	5	6		7
1	3	ದೊಡ್ಡ ಕಾಮಗಾರಿಗಳು	22	271	1	1	Construction & Upgradation of Manasa Blaock at KSOU Campus
					2	2	Construction & Upgradation of Hamsa Blaock at KSOU Campus
2	6	ಸಂಸ್ಕೃತ ವಿಶ್ವವಿದ್ಯಾಲಯದ ಕಟ್ಟಡ ನಿರ್ಮಾಣ ಕಾಮಗಾರಿಗಳ	22	293	1	3	Construction of Buildings for Karnataka Sanskrit University and Regional/Student Learning Support Centre of KSOU at Tippasandra Village Ramanagar District
3	7	ಸರ್ಕಾರಿ/ ಅನುದಾನಿತ ಶಾಲೆಗಳ ದತ್ತು ಸ್ವೀಕಾರದ	22	296	1	4	Construction & Upgradation of KSOU Adopted Schools: Devaraj Girls Independent Undergraduate

							College, Devraj Urs Road Devaraj Mohalla, At Mysuru
					2	5	Construction & Upgradation of KSOU Adopted Schools For: Government Higher Primary School, Metagalli At Mysuru
					3	6	Construction & Upgradation of KSOU Adopted Schools: At Malavalli Taluk Mandya District
					4	7	Construction & Upgradation of KSOU Adopted Schools: Government Higher Primary School, at Janatha Vidyalaya Kuluve Sirsi.
					5	8	Construction & Upgradation of KSOU Adopted Schools: Karnataka Public School, At Hanbal, Sakleshpur Taluk Hassan District
					6	9	Construction & Upgradation of KSOU Adopted Schools for: Government Higher Primary School, Yadavagiri At Mysuru
					7	10	Construction & Upgradation of KSOU Adopted Schools: DEJAGOW Trust Kuvempu School, Brindavan Layout At Mysuru
					8	11	Construction & Upgradation of KSOU Adopted Schools for: Governmetn Higher Primary School, At Sankighatta, Magadi Taluk Ramanagara District (**Not-exicuted**)
					9	12	Construction & Upgradation of KSOU Adopted Schools for: GHS & HGPS Malleswaram Guthalli, Yeshvanthapura At Bangalore
					10	13	Construction & Upgradation of KSOU Adopted Schools for:Aralakuppe Pandavapura Taluk Mandya District
					11	14	Construction & Upgradation of KSOU Adopted Schools for: Government Higher Primary School, Kumbarakoppal at Mysuru
					12	15	Construction & Upgradation of KSOU Adopted Schools for: Undergraduate College Peoples Park Nazarbad at Mysuru (**Not-exicuted**)
					13	16	Construction & Upgradation of KSOU Adopted Schools for: School Building At Hale Yalanduru At chitradurga Distrit
					14	17	Construction & Upgradation of KSOU Adopted Schools At

							Government School At Devalapura Mandya District
					15	18	Construction & Upgradation of KSOU Adopte Schools (At Devalapura)Nagamangala Taluk Mandya District
					16	19	Construction & Upgraddation of KSOU Adoped School at High School Building At Alur, Chitradurga District
4	18	ಪ್ರಾದೇಶಿಕ ಕೇಂದ್ರಗಳ ನಿರ್ಮಾಣ ಮೆಚ್ಚದ	22	341	1	20	Construction of Regional /Student Learning Support Center At Mangalore
					2	21	Construction of Regional /Student Learning Support Center At Dharwad
ಒಟ್ಟು					21		

ಮೇಲ್ಕಂಡ ಪ್ಯಾಕೇಜ್ ಕಾಮಗಾರಿಗಳಿಗೆ ಟೆಂಡರ್ ಆಹ್ವಾನ ದರ ಸಂಧಾನ, ಪರಿಷ್ಕೃತ ಅಂದಾಜು ಹಾಗೂ ವಾಸ್ತವ ಕಾಮಗಾರಿಗಳ ಘೋಷ್ವಾರೆ ಮೊತ್ತವು ಕೆಳಕಂಡಂತಿರುತ್ತದೆ. ವಿವರಗಳನ್ನು **ಅನುಬಂಧ-52** ರಲ್ಲಿ ಲಗತ್ತಿಸಿದೆ.

ಕ್ರ.ಸಂ	ವಿವರ	ಕಾಮಗಾರಿ ವಿವರಗಳು	ಮೊತ್ತ ರೂ.
1	ಕಾಮಗಾರಿ ಅಂದಾಜು/ಟೆಂಡರ್ ಮೊತ್ತ/ದರಸಂದಾನ ವಹಿಸಲಾದ ಮೊತ್ತಗಳ ವಿವರ	ಮೂಲ ಅಂದಾಜು ಪಟ್ಟ ಮೊತ್ತ	**86,97,00,000**
2		ಟೆಂಡರ್‌ಗಿಟ್ಟ ಮೊತ್ತ	**7606,,99,539**
3		ಗುತ್ತಿಗೆದಾರ ನಮೂದಿಸಿದ ಮೊತ್ತ	**94,2848,,200**
4		ಅಂದಾಜು ಪಟ್ಟಗಿಂತ ಹೆಚ್ಚುವರಿ ಮೊತ್ತ (3–2)	**18,21,48,661**
5		ದರ ಸಂದಾನದಲ್ಲಿ ಕಡಿಮೆ ಮಾಡಲಾದ ಮೊತ್ತ	**28,48,200**
6		ಅಂತಿಮವಾಗಿ ಕಾಮಗಾರಿ ವಹಿಸಲಾದ ಮೊತ್ತ (3–5)	**94,80,00,000**
7		ಅಂದಾಜು ಪಟ್ಟಗಿಂತ ಹೆಚ್ಚುವರಿ ಶೇಕಡಾ ಪ್ರಮಾಣ (2/6 %)	**23.57**
8	ಪರಿಷ್ಕೃತ ಅಂದಾಜು/ವರ್ಕ್‌ಸ್ಲಿಪ್ ಇಎಆರ್‌ಎಲ್	Up to 125%	**75,0693,,175**
9		Above 125%	**11,29,45,470**
10		EIRL	**7,63,61,328**
11		Revised Estimate (8+9+10)	**93,99,99,973**
12		ಕಾಮಗಾರಿ ವಹಿಸಲಾದ ಮೊತ್ತಕ್ಕಿಂತ ಮೊತ್ತಕ್ಕಿಂತ ಅಧಿಕವಾದ ಮೊತ್ತ	**–27**
13		ಅಂದಾಜು ಮೊತ್ತಕ್ಕಿಂತ ಅಧಿಕವಾದ ಮೊತ್ತದ ಶೇ. ಪ್ರಮಾಣ	**23.57**
14	ಕಾಮಗಾರಿ ಅನುಷ್ಠಾನದ ಅಂತಿಮ ಬಿಲ್ಲಿನ ಮೊತ್ತ	ಕಾಮಗಾರಿ ಅನುಷ್ಠಾನದ ಅಂತಿಮ ಬಿಲ್ಲಿನ ಮೊತ್ತ	**88,71,53,657**
15		ಉಳಿತಾಯ/ಹೆಚ್ಚುವರಿ (11–14)	**5,28,46,316**

ಮೆಲಿನಂತೆ ಪ್ಯಾಕೇಜ್ ಕಾಮಗಾರಿಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ, ಟೆಂಡರ್ ಆಹ್ವಾನ, ದರಸಂದಾನ, ಪರಿಷ್ಕೃತ ಅಂದಾಜು ಪಟ್ಟ ಅನುಮೋದನೆ ಹಾಗೂ ಇತರೇ ವಿವರಗಳ ಅನುಮೋದನಾ ವಿವರಗಳು ಕೆಳಕಂಡಂತಿರುತ್ತವೆ.

ಕ್ರಮ ಸಂಖ್ಯೆ	ವಿವರ	ಸಕ್ಷಮ ಪ್ರಾಧಿಕಾರ	ಅನುಮೋದನೆ/ಒಪ್ಪಿಗೆ ಪ್ರಾಧಿಕಾರ	ಅನುಮೋದನೆ/ ಮಂಜೂರಾತಿ ದಿನಾಂಕ
1	ಅಂದಾಜು ಪಟ್ಟ ಸಿದ್ಧಪಡಿಸಿದವರು	–	Girish M Swammy Consultant,Bangalore	–

2	ತಾಂತ್ರಿಕ ಅನುಮೋದನೆ	Executive Engineer University Engineering Division Karnataka State Open University MYSURU	Technically Approved Vide In 25th Building Committee Meeting held on 31-07-2021	31-07-2021
3	ಆಡಳಿತಾತ್ಮಕ ಮಂಜೂರಾತಿ ನೀಡಿರುವವರು	ಕುಲಸಚಿವರು, ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.	Administrative Approved vide in Special 54th Board of Management Meeting held on 17-08-2021	17-08-2021
4	ಟೆಂಡರ್ ಆಹ್ವಾನಿಸುವವರು	ಕುಲಸಚಿವರು, ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.	-	
5	ಟೆಂಡರ್ ಪ್ರಕಟಣೆ	ಉಪ ಕಾರ್ಯದರ್ಶಿ-1 ರಾಜ್ಯ ಮಟ್ಟದ ಟೆಂಡರ್ ಬುಲೆಟಿನ್ ಅಧಿಕಾರಿ ಇವರ ಮೂಲಕ ಕುಲಸಚಿವರು ಪ್ರಕಟಣೆ ನೀಡಿರುತ್ತಾರೆ	-	02-09-2021
6	ಟೆಂಡರ್ ಒಪ್ಪಿಕೊಂಡವರು	ಕುಲಸಚಿವರು, ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.	-	11-08-2021
7	ದರ ಸಂದಾನ ಮಾಡಿದವರು	ಕುಲಪತಿಗಳು & ಕುಲಸಚಿವರು ಹಣಕಾಸು ಅಧಿಕಾರಿಗಳು & ಕಾರ್ಯಪಾಲಕ ಅಭಿಯಂತರರು	ಸಂದಾನ ಸಭೆ	15-11-2021
8	ಟೆಂಡರ್ ಪ್ರೀಮಿಯಂ ಅನುಮೋದನೆ (Above 5%)	ಕುಲಸಚಿವರು, ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.	ವ್ಯವಸ್ಥಾಪನಾ ಮಂಡಳಿ, (BOM)	19-11-2021
9	ಕಾರ್ಯಾದೇಶ ನೀಡಿದವರು	ಕುಲಸಚಿವರು, ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.	ವ್ಯವಸ್ಥಾಪನಾ ಮಂಡಳಿ, (BOM)	09-12-2021
10	ಪರಿಷ್ಕೃತ ಟೆಂಡರ್ ಅನುಮೋದನೆ ನೀಡಿರುವವರು		--	--
	ತಾಂತ್ರಿಕ ಅನುಮೋದನೆ	Executive Engineer University Engineering Division Karnataka State Open University MYSURU	Technically Approved Vide In 26 th Building Committee Meeting held on 16-06-2022	16-06-2022
	ಆಡಳಿತಾತ್ಮಕ ಮಂಜೂರಾತಿ ನೀಡಿರುವವರು	ಕುಲಸಚಿವರು, ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.	Administrative Approved vide in 168 th Board of Management Meeting held on 17-06-2022	17-06-2022
11	ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿದವರು MEASURMENT BOOK	Project Management Consultant. 100% Assistant Engineer (Temp) 100% Assistant Executive Engineer -100%	--	--
12	ಅಳತೆಗಳ ಪರಿಶೀಲನೆ	Executive Engineer -25%	--	--
13	ಬಿಲ್ಲುಗಳ ಸಹಿ	Project Management Consultant. Assistant Engineer (Temp) Assistant Executive Engineer Exicutive Engineer	--	--
14	ಬಿಲ್ಲುಗಳ ಪಾವತಿ ಅನುಮೋದನೆ ನೀಡಿದವರು	ಕುಲಪತಿಗಳು ಕುಲಸಚಿವರು	--	--

- ಪ್ಯಾಕೇಜ್ ಕಾಮಗಾರಿ ಟೆಂಡರ್ ಆಹ್ವಾನದ ಅವಧಿಯನ್ನು 09 ರಿಂದ 11 ದಿನಗಳನ್ನು ನೀಡಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ:ಆಡ 195 ಪೆಚ್ಚ-12/11, ದಿನಾಂಕ:30-03-2011 ರ ಅನುಸಾರ ರೂ.2.00(ಎರಡು ಕೋಟಿ)ಗೂ ಮೀರಿದ ಮೊತ್ತದ ಕಾಮಗಾರಿಗಳಿಗೆ 60 ದಿನಗಳ ಟೆಂಡರ್ ಅವಧಿಯನ್ನು ನಿಗದಿಪಡಿಸಬೇಕಾಗುತ್ತದೆ. 2023-24ನೇ ಸಾಲಿನ ವರದಿ ಕಂಡಿಕೆ

25.4ರಲ್ಲಿ ಉಲ್ಲೇಖಿಸಲಾಗಿರುತ್ತದೆ. ಇದರಿಂದಾಗಿ ಟೆಂಡರ್ ಆಹ್ವಾನದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳದಿರುವುದು ಕಂಡಂಬಂದಿರುತ್ತದೆ.

- ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕ:17–08–2021 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 54ನೇ ಸಭೆಯಲ್ಲಿ ಕುಲಸಚಿವರು ಅನುಮೋದನೆ ನೀಡಿರುತ್ತಾರೆ.
- ತಾಂತ್ರಿಕ ಅನುಮೋದನೆಯನ್ನು ದಿನಾಂಕ:31–07–2021 ರಂದು ನಡೆದ 25ನೇ ಕಟ್ಟಡ ಸಮಿತಿಯಲ್ಲಿ ಅನುಮೋದನೆ ಪಡೆದು ವಿಶ್ವವಿದ್ಯಾನಿಲಯದ ಸಹಾಯಕ ಕಾರ್ಯಪಾಲಕ ಅಭಿಯಂತರರು ನೀಡಿರುತ್ತಾರೆ.
- ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ದಿನಾಂಕ:17–06–2022 ರಂದು ನಡೆದ 168 ನೇ ವ್ಯವಸ್ಥಾಪನಾ ಮಂಡಳಿಯಲ್ಲಿ ಕುಲಸಚಿವರು ಅನುಮೋದನೆ ನೀಡಿರುತ್ತಾರೆ.
- ಪರಿಷ್ಕೃತ ಅಂದಾಜುಪಟ್ಟಿಗೆ ತಾಂತ್ರಿಕ ಮಂಜೂರಾತಿಯನ್ನು ದಿನಾಂಕ: 16–06–2022 ರಂದು ನಡದಿ 26 ಕಟ್ಟಡ ಸಮಿತಿಯಲ್ಲಿ ಕುಲಸಚಿವರು ಅನುಮೋದನೆ ನೀಡಿರುತ್ತಾರೆ.
- ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:PWD 423 FC–1 2018 Bangalore, Dated:24–09–2018 ರಲ್ಲಿ ಕಾಮಗಾರಿಗಳ ಸಂಬಂಧವಾಗಿ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ, ಪರಿಷ್ಕೃತ ಅಂದಾಜುಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಅಧಿಕಾರಗಳನ್ನು ನಿರ್ದಿಷ್ಟಪಡಿಸಲಾಗಿರುತ್ತದೆ. ಸದರಿ ಆದೇಶವನ್ನು ಆಳವಡಿಸಿಕೊಂಡಿರುವ ಅಥವಾ ಪರ್ಯಾಯವಾಗಿ ವಿಶ್ವವಿದ್ಯಾನಿಲಯವು ರೂಪಿಸಿಕೊಂಡು ಸರ್ಕಾರದ ಅನುಮೋದನೆ ಪಡೆದಿರುವ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.
- ಪ್ಯಾಕೇಜ್ ಕಾಮಗಾರಿಯ ಟೆಂಡರ್ ಪ್ರಿಮಿಯಂ ಅಂದಾಜು ಮೊತ್ತಕ್ಕಿಂದ ಶೇ.23.57 ಆಗಿದ್ದು, ಅಂದಾಜು ಮೊತ್ತಕ್ಕಿಂತ ಹೆಚ್ಚುವರಿಯಾಗಿ ಸಲ್ಲಿಸಲಾದ ಟೆಂಡರ್ ಪ್ರೀಮಿಯಂ ಮೊತ್ತವು ಶೇ.5 ಕ್ಕಿಂತ ಹೆಚ್ಚುವರಿಯಾಗಿದ್ದಲ್ಲಿ, ಸಮರ್ಥನೀಯ ಕಾರಣಗೊಳೊಂದಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆಯುವುದನ್ನು ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 128 ವೆಚ್ಚ–12/2021 ದಿನಾಂಕ: 30–07–2022 ರಲ್ಲಿ ನಿರ್ದಿಷ್ಟಪಡಿಸಲಾಗಿರುತ್ತದೆ. ಸದರಿ ಸುತ್ತೋಲೆಯನ್ವಯ ಟೆಂಡರ್ ಪ್ರೀಮಿಯಂ ಶೇ.23.57 ಅಧಿಕವಾಗಿದ್ದು ಸದರಿ ಟೆಂಡರ್ ಪ್ರಿಮಿಯಂ ಮೊತ್ತವನ್ನು ದಿನಾಂಕ: 19–11–2021ರಲ್ಲಿ ನಡೆದ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಅನುಮೋದನೆ ಪಡೆದು ಕುಲಸಚಿವರು ಹೆಚ್ಚುವರಿ ಟೆಂಡರ್ ಪ್ರೀಮಿಯಂ ಟೆಂಡರ್ ಅನುಮೋದಿಸಿರುತ್ತಾರೆ. ವ್ಯವಸ್ಥಾಪನಾ ಮಂಡಳಿ ಸದರಿ ಅಧಿಕಾರವು ಶಾಸನಭದ್ದವಾಗಿ ಅರ್ಜಿತವಾಗಿರುವ ಅಧಿಕಾರದ ಪ್ರತ್ಯಾಯೋಜಿಸಿರುವ ಯಾವುದೇ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಸದರಿ ಆಂಶವನ್ನು 2023–24ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಕಂಡಿಕೆ 25.6 ರಲ್ಲಿಯೇ ಪ್ರಸ್ತಾಪಿಸಲಾಗಿರುತ್ತದೆ.
- ವಿಶ್ವವಿದ್ಯಾನಿಲಯದ ಅಧಿಕಾರ ಪ್ರತ್ಯಾಯೋಜನೆಗೆ ರಚಿಸಲಾದ ಪರಿನಿಯಮವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.
- ಕಟ್ಟಡ ಸಮಿತಿಯು ಶಾಸನಾತ್ಮಕವಾಗಿ ರಚಿತವಾಗಿರುವ ಬಗ್ಗೆ ಯಾವುದೇ ಸರ್ಕಾರದ ಆದೇಶ ಅಥವಾ ಅನುಮೋದಿತ ಪರಿನಿಯಮಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ ಕಟ್ಟಡ ಸಮಿತಿಯ ಅಧಿಕಾರವ್ಯಾಪ್ತಿ, ಗರಿಷ್ಠ ಆರ್ಥಿಕ ಅಧಿಕಾರಗಳು ಎಷ್ಟು ಮೊತ್ತದ ಕಾಮಗಾರಿಗಳಿಗೆ ಅನುಮೋದನೆ ನೀಡಬಹುದು ಎಂಬ ಅಂಶವು ಸ್ಪಷ್ಟವಾಗಿರುವುದಿಲ್ಲ.
- ಲೋಕೋಪಯೋಗಿ ಇಲಾಖಾ ಸಂಹಿತೆಯ ಅನುಚ್ಛೇದ–184 (14) (ಡಿ) ರಲ್ಲಿ ತಿಳಿಸಿರುವಂತೆ ಈ ರೀತಿಯ ಹೆಚ್ಚುವರಿ ಪಾವತಿ ಸಂಧರ್ಭಗಳಲ್ಲಿ ಗುತ್ತಿಗೆದಾರರೊಂದಿಗೆ ಮೂರಕ ಕರಾರು ಒಪ್ಪಂದ ಮಾಡಿಕೊಂಡ ಬಗೆಗಿನ ಪ್ರತಿಗಳ ದಾಖಲೆಗಳು.
- ಹೆಚ್ಚುವರಿ ಪರಿಮಾಣ ಮತ್ತು ಹೆಚ್ಚುವರಿ ಅಂಶಗಳ ಉದ್ಭವಿಸುವಿಕೆಗೆ ಸಂಬಂಧಿಸಿದಂತೆ ಸಿದ್ಧಪಡಿಸಲಾದ ಸ್ಥಳ ಪರಿಶೀಲನೆಯ ವರದಿಗಳು ಹಾಗೂ ತಾಂತ್ರಿಕ ಪರಿಶೀಲನಾ ವರದಿ (Inspection Notes or Reports) ಗಳ ದಾಖಲೆಗಳು.
- ಹೆಚ್ಚುವರಿ ಕಾರ್ಯ ನಿರ್ವಹಿಸಲು ಗುತ್ತಿಗೆದಾರರಿಗೆ ನೀಡಲಾದ ಕಾರ್ಯಾದೇಶದ ಪ್ರತಿ ಮತ್ತು ಗುತ್ತಿಗೆದಾರರು ಹೆಚ್ಚುವರಿ ಕಾರ್ಯ ನಿರ್ವಹಿಸಲು ಕಾರ್ಯಾದೇಶಕ್ಕಾಗಿ ಸಲ್ಲಿಸಿದ ಲಿಖಿತ ಮನವಿಗಳ ದಾಖಲೆಗಳು.
- ಆಯಾಯ ಸ್ಥಳೀಯ ಪ್ರಾಧಿಕಾರಗಳಿಂದ ಪಡೆದ ಕಟ್ಟಡ ನಿರ್ಮಾಣ ಪರವಾನಗಿಯ ದಾಖಲೆಗಳು.

- ಪ್ಯಾಕೇಜ್ ಕಾಮಗಾರಿಗಳ ಸಂಬಂಧ ಅಂತಿಮ ಬಿಲ್ಲುಗಳನ್ನು 2024-25ನೇ ಸಾಲಿನಲ್ಲಿ ಪಾವತಿಸಲಾಗಿದ್ದು, ಪ್ಯಾಕೇಜ್ ಕಾಮಗಾರಿ ವಹಿಸಲಾದ ಮೊತ್ತ ರೂ.94,00,00,000/- ಗಳಾಗಿದ್ದು, ಶೇ.125 ರಷ್ಟರ ವರೆಗೆಗಿನ ಮೊತ್ತ ರೂ.75,06,93,174/- ಮತ್ತು ಶೇ 125ಕ್ಕಿಂತ ಹೆಚ್ಚುವರಿ ಪರಿಮಾಣಗಳ ಒಟ್ಟು ಮೊತ್ತ ರೂ.11,29,45,470/- ಮತ್ತು ಇಐಆರ್‌ಎಲ್ ಮೊತ್ತ ರೂ.76361328/- ಸೇರಿದಂತೆ ಪರಿಷ್ಕೃತ ಕಾಮಗಾರಿ ಮೊತ್ತವು ರೂ.93,99,99,973/- ಗಳಾಗಿರುತ್ತದೆ. ಸದರಿ ಮೊತ್ತವು ಅಂದಾಜು ಮೊತ್ತದ ಒಳಗೆ ಇದ್ದರೂ ಶೇ.125 ಕ್ಕೂ ಅಧಿಕವಾದ ಹೆಚ್ಚುವರಿ ಪರಿಮಾಣಗಳ ಸಂಬಂಧ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 17 ಯುಎನ್‌ಇ 2020, ದಿನಾಂಕ:24-06-2020ರ ಆದೇಶದಂತೆ ವರ್ಕ್ ಸ್ಲಿಪ್ ಮತ್ತು ಇ.ಐ.ಆರ್.ಎಲ್. ಅಂದಾಜುಗಳಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯಬೇಕಾಗುತ್ತದೆ. ಈ ಸಂಬಂಧ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:190/ದಿ:04-11-2025 ನೀಡಲಾಗಿದ್ದು, ಅನುಪಾಲನಾ ವರದಿ ಪತ್ರ ಸಂಖ್ಯೆ:ಕರಾಮುವಿ/ಯುಇಡಿ/48/2025-26 ದಿನಾಂಕ:08-12-2025 ರಲ್ಲಿ 26ನೇ ಕಟ್ಟಡ ಸಮಿತಿ ಸಭೆ ಮತ್ತು 166ನೇ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ವಿಷಯವನ್ನು ಮಂಡಿಸಿ ಅನುಮೋದನೆ ಪಡೆಮ ಕುಲಸಚಿವರು ಅನುಮೋದನೆ ನೀಡಿರುತ್ತಾರೆ ಎಂದು ವಿವರಿಸಿರುತ್ತಾರೆ. ವರ್ಕ್‌ಸ್ಲಿಪ್ ಮತ್ತು ಇಐಆರ್‌ಎಲ್ ಸಂಬಂಧ ಅನುಮೋದನೆ ನೀಡುವ ಪ್ರಾಧಿಕಾರವನ್ನು ವಿಶ್ವವಿದ್ಯಾನಿಲಯವು ಶಾಸನಬದ್ಧವಾಗಿ ನಿಗದಿಪಡಿಸಿಕೊಂಡಿರುವುದಿಲ್ಲ.
- ಕಟ್ಟಡ ಸಮಿತಿ ಮತ್ತು ವ್ಯವಸ್ಥಾಪನಾ ಮಂಡಳಿಗೆ ಅಧಿಕಾರವು ಶಾಸನಬದ್ಧವಾಗಿ ಅರ್ಜಿತವಾಗಿರುವ ಯಾವುದೇ ಮಾಹಿತಿಯು ಲೆಕ್ಕಪರಿಶೋಧನೆಗೆ ಲಭ್ಯವಾಗಿರುವುದಿಲ್ಲ. ಈ ಎಲ್ಲ ಅಂಶಗಳ ಸಂಬಂಧವಾಗಿ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:204/ ದಿ:12-11-2025 ನೀಡಲಾಗಿದ್ದು, ಅನುಪಾಲನಾ ವರದಿ ಪತ್ರ ಸಂಖ್ಯೆ:ಕರಾಮುವಿ/ಯುಇಡಿ/ 48/2025-26 ದಿನಾಂಕ:12-12-2025 ರಲ್ಲಿ ವ್ಯವಸ್ಥಾಪನಾ ಮಂಡಳಿಯ ತೀರ್ಮಾನಗಳ ಬಗ್ಗೆ ಮಾತ್ರ ವಿವರಿಸಲಾಗಿರುತ್ತದೆ. ಲೆಕ್ಕಪರಿಶೋಧನೆ ಅಪೇಕ್ಷಿತ ಮಾಹಿತಿಗೆ ಪೂರಕವಾಗಿರುವುದಿಲ್ಲ.
- ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994 ರ ನಿಯಮ-36(A) ರ ಖನಿಜ ರವಾನೆ ಪರವಾನಿಗೆ (MDP) (Mineral Despatch Permit) ಪಡೆಯದೆ ಅನಧಿಕೃತವಾಗಿ ಸಾಗಾಣಿಕೆ ಮಾಡಿಕೊಂಡು ಕಾಮಗಾರಿಗಳಲ್ಲಿ ಬಳಸಲಾದ ಖನಿಜಗಳ ಪ್ರಮಾಣಗಳಿಗೆ ಅನುಗುಣವಾಗಿ ನಿಗದಿತ ದರಗಳಲ್ಲಿ ನಿಗದಿಪಡಿಸಲಾದ ದರಗಳನ್ವಯ ಲೆಕ್ಕಾಚಾರ ಮಾಡಲಾದ ರಾಜಧನ ಮೊತ್ತದ ಶೇ.40 ರಷ್ಟು ಮೊತ್ತವನ್ನು ಹೆಚ್ಚುವರಿ ಮೊತ್ತವನ್ನಾಗಿ ಪಾವತಿಸಬೇಕಾಗುತ್ತದೆ. ಹಾಗೂ ಶೇ.10 ರಷ್ಟು ಮೊತ್ತವನ್ನು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ವಂತಿಕೆ ಮೊತ್ತವನ್ನು ಪಾವತಿಸಬೇಕಾಗುತ್ತದೆ. ನಿರ್ದೇಶಕರು, ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರೂ ಇವರ ಸುತ್ತೋಲೆ ಸಂಖ್ಯೆ:ಗಭೂಇ/ಡಿಸಿಬಿ/ಡಿಸಿಬಿ ತ:ಖೆ/2019-20 ದಿನಾಂಕ:07-11-2023 ರಲ್ಲಿ ಸರ್ಕಾರಿ ಕಾಮಗಾರಿಗಳಲ್ಲಿ ಬಳಕೆ ಮಾಡುವ ಉಪಖನಿಜಗಳೀಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಗಣಿ ಗುತ್ತಿಗೆದಾರರಿಂದ ಖನಿಜ ರವಾನೆ ಪರವಾನಿಗೆಗಳನ್ನು ಕಡ್ಡಾಯಗೊಳಿಸುವ ಕ್ರಮಗಳನ್ನು ಸ್ಪಷ್ಟಪಡಿಸಲಾಗಿರುತ್ತದೆ. ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರೂ ಇವರ ಸುತ್ತೋಲೆ ಸಂಖ್ಯೆ:ಗಭೂಇ/ಕಗಗು/ಡಿಸಿಬಿ/ತ:ಖೆ/2023-24/11213/ ದಿನಾಂಕ:26-02-2024 ರಲ್ಲಿ ಒಂದು ವೇಳೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಮಂಜೂರಾದ ಕಲ್ಲುಗಣಿ ಗುತ್ತಿಗೆದಾರರಿಂದ ಖನಿಜ ಸಾಗಾಣಿಕೆ ಪರವಾನಿಗೆ ಪಡೆಯದೇ ಖನಿಜವನ್ನು ಕಾಮಗಾರಿಗಳಲ್ಲಿ ಬಳಸಿಕೊಂಡಿದ್ದಲ್ಲಿ ಅಂತಹ ಪ್ರಕರಣಗಳಿಗೆ ಕಾಮಗಾರಿ ಬಿಲ್ಲುಗಳನ್ನು ತೀರುವಳಿಗೊಳಿಸದೇ ಸಂಬಂಧಪಟ್ಟ ಜಿಲ್ಲೆಯ ಉಪನಿರ್ದೇಶಕರು/ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ರವರಿಗೆ ಕಾಮಗಾರಿ ಗುತ್ತಿಗೆದಾರರು/ಗಣಿ ಗುತ್ತಿಗೆದಾರರಿಂದ ರಾಜಧನದ 05 ಪಟ್ಟು ದಂಡ, ರಾಜಧನದ ಶೇ.40 ರಷ್ಟು ಹೆಚ್ಚುವರಿ ಪಾವತಿ (Adition Payment) ಮತ್ತು

ರಾಜಧನದ ಶೇ.10 ರಷ್ಟು ಡಿಎಂಎಫ್ ನಿಧಿಯನ್ನು ಹಾಗೂ ಗಣಿ ಗುತ್ತಿಗೆದಾರರಿಗೆ ಅನ್ವಯಿಸುವ ತೆರಿಗೆ ಪಾವತಿಸಿದ ಪ್ರಕರಣಗಳನ್ನು ಖಚಿತಪಡಿಸಿಕೊಂಡ ನಂತರ ಕಾಮಗಾರಿ ಬಿಲ್ಲುಗಳನ್ನು ತೀರುವಳಿಗೊಳಿಸಲು ಕ್ರಮವಹಿಸುವುದನ್ನು ಸ್ಪಷ್ಟಪಡಿಸಲಾಗಿರುತ್ತದೆ. ಈ ಅಂಶಗಳಲ್ಲಿ ಸಂಬಂಧಪಟ್ಟ ಇಲಾಖೆಯಿಂದ ಎಂಡಿಪಿ ಪಡೆದಿರುವ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:189/ದಿನಾಂಕ: 30-10-2025 ನೀಡಲಾಗಿದ್ದು, ಅನುಸರಣಾ ಪತ್ರ ಸಂಖ್ಯೆ:ಕರಾಮುಎ/ಮಯುಇಡಿ/48/2025-26 ದಿನಾಂಕ: 29-11-2025 ರಲ್ಲಿ ಗುತ್ತಿಗೆದಾರರು ಸದರಿ ಎಸ್ಆರ್ ಕಾಮಗಾರಿ ಕೆಲಸಗಳಿಗೆ ಕಾಮಗಾರಿಯು Specification ಗಳ ಅನುಸಾರ ಬಳಕೆಯಲ್ಲಿ ಗುತ್ತಿಗೆದಾರರು ಕಲ್ಲುಗಣಿ ಗುತ್ತಿಗೆದಾರರಿಗೆ ನೇರ ಸಂಪರ್ಕ ಹೊಂದದ ಕಾರಣ ಈ ಮೊದಲು ನಿಗದಿಯಾದ ರೀತಿಯಲ್ಲಿಯೇ Royalty ಮೊತ್ತಗಳನ್ನು ಕಾಮಗಾರಿಗೆ ಬಳಸಲಾದ ಉಪಖನಿಜಗಳ ಅನುಸಾರ ಕಟಾಯಿಸಲು ಕ್ರಮವಹಿಸಲಾಗಿರುತ್ತದೆ. ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ Rolty ಮೊತ್ತವನ್ನು ಗುತ್ತಿಗೆದಾರರ ಹುಂಡಿಯಲ್ಲಿ RA ಬಿಲ್‌ಗಳಿಗೆ ಅನುಗುಣವಾಗಿ PWD ಇಲಾಖೆ ದರಸೂಚಿ ಅನ್ವಯ ಕಾಮಗಾರಿಗಳಲ್ಲಿ RMC ಬಳಕೆಗೆ Royalty Constant ಅಳವಡಿಸಿಕೊಂಡು Royalty ಮೊತ್ತವನ್ನು ಲೆಕ್ಕಾಚಾರ ಮಾಡಿ ಸರ್ಕಾರವು ನಿಗದಿಪಡಿಸಿರುವ ದರಗಳಲ್ಲಿ ರಾಜಧನ ಮೊತ್ತಗಳನ್ನು ಲೆಕ್ಕಾಚಾರ ಮಾಡಿ ಪ್ರತಿ ಬಿಲ್ಲಿನಲ್ಲಿಯೂ ಕಡಿತ ಮಾಡಲಾಗಿದ್ದು, ಇನ್ನು ಮುಂದೆ ಕಾಮಗಾರಿಗಳ ಸಂಬಂಧ ಬಳಸಲಾಗುವ ಖನಿಜಗಳಿಗೆ ಎಂಡಿಪಿ ಪಡೆಯಲು ಕ್ರಮವಹಿಸಲಾಗುವುದು ಎಂಬ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ನೀಡಿರುತ್ತಾರೆ. ಆದರೂ ಈ ಕ್ರಮವು ಸರ್ಕಾರಿ ಆದೇಶಗಳ ನಿರ್ದೇಶನಗಳಿಗೆ ವಿರುದ್ಧವಾಗಿರುತ್ತದೆ. ಕಾಮಗಾರಿಗಳ ಸಂಬಂಧ ಬಳಸಲಾಗುವ ವಿವಿಧ ಖನಿಜಗಳ ಸಂಬಂಧವಾಗಿ ನಿಯಮಾನುಸಾರ ಡಿಎಂಎಫ್‌ಟಿ ಪಡೆದು ಕಾಮಗಾರಿಗಳನ್ನು ನಿರ್ವಹಿಸುವಲ್ಲಿ ಅಗತ್ಯ ಕ್ರಮ ವಹಿಸಲು ಸೂಚಿಸಿದೆ.

- 2022-23 ರಿಂದ 2024-25ನೇ ಸಾಲಿನವರೆಗೆ ಪ್ಯಾಕೇಜ್ ಕಾಮಗಾರಿ ಸಂಬಂಧ ಪಾವತಿಸಲಾಗಿರುವ ಮೊತ್ತದ ವಿವರಗಳನ್ನು **ಅನುಬಂಧ – 53 ರಲ್ಲಿ** ಲಗತ್ತಿಸಿದೆ.
- 2024-25ನೇ ಸಾಲಿನಲ್ಲಿ ಮುಂದುವರೆದ ಕಾಮಗಾರಿಗಳು ಯಾವುದೂ ಇರುವುದಿಲ್ಲ.

2024-25ನೇ ಸಾಲಿನಲ್ಲಿ ಪ್ಯಾಕೇಜ್ ಕಾಮಗಾರಿಗಳಿಗೆ ಪಾವತಿಸಲಾದ ವಿವರಗಳು ಕೆಳಕಂಡಂತಿರುತ್ತವೆ.

ಕ್ರಮ ಸಂಖ್ಯೆ	ಧನಾದೇಶ ಸಂಖ್ಯೆ	ಧನಾದೇಶ ದಿನಾಂಕ	ಮೊತ್ತ
1	313592	22-07-2024	10,07,18,406
2	313756	03-09-2024	19,40,88,520
3	638089	21-12-2024	9,26,02,415
		ಒಟ್ಟು ಮೊತ್ತ ರೂ.	**38,74,09,341**

ಮೇಲೆ ವಿವರಿಸಲಾಗಿರುವ ಅಂಶಗಳಲ್ಲಿ ಮಂಜೂರಾತಿ ಅಧಿಕಾರಗಳ ಸಂಬಂಧ ಸೂಕ್ತ ಸರ್ಕಾರದ ಆದೇಶಗಳು ಅನಮೋದಿಸಲಾದ ಪರಿನಿಯಮಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೆ 2024-25ನೇ ಸಾಲಿನಲ್ಲಿ ಪ್ಯಾಕೇಜ್ ಕಾಮಗಾರಿ ಸಂಬಂಧ ಪಾವತಿಸಲಾಗಿರುವ ಮೊತ್ತ **ರೂ.38,74,09,341/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

(ಆ) ಧಾರವಾಡ, ಬೆಂಗಳೂರು ಮತ್ತು ಮಂಗಳೂರು ಪ್ರಾದೇಶಿಕ ಕೇಂದ್ರಗಳ ಕಟ್ಟಡ ನಿರ್ಮಾಣ ಹಾಗೂ ವಿವಿಧ ಜಿಲ್ಲೆಯ ಸರ್ಕಾರಿ ಶಾಲೆಗಳನ್ನು ವಾಸ್ತುಶಿಲ್ಪ, ವಿನ್ಯಾಸ ಮತ್ತು ಒಳಾಂಗಣದ ಸೇವೆ, ವಿಸ್ತೃತ ಯೋಜನಾ ವರದಿ(ಡಿ.ಪಿ.ಆರ್) ತಯಾರಿಸಲು ಸೇವೆ ಪಡೆದು ಪಾವತಿಸಿರುವ ಬಗ್ಗೆ.

ಮಂಗಳೂರು, ಧಾರವಾಡ, ರಾಮನಗರಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ ಲಭ್ಯವಿರುವ ಜಾಗದಲ್ಲಿ ಪ್ರಾದೇಶಿಕ ಕೇಂದ್ರ/ ವಿದ್ಯಾರ್ಥಿಗಳ ಕಲಿಕಾ ಸಲಹಾ ಕೇಂದ್ರ ಕಟ್ಟಡಗಳನ್ನು ಮತ್ತು ವಿಶ್ವವಿದ್ಯಾನಿಲಯದ ಆವರಣದಲ್ಲಿ ಹಂಸ ಮತ್ತು ಮಾನಸ ಕಟ್ಟಡ ನಿರ್ಮಾಣ ಹಾಗೂ 16 ಸರ್ಕಾರಿ ಶಾಲೆಗಳನ್ನು ವಾಸ್ತುಶಿಲ್ಪ ವಿನ್ಯಾಸ ಮತ್ತು ಒಳಾಂಗಣ ಸೇವೆ ಪಡೆಯಲು ಹಾಗೂ ಪ್ರಾಜೆಕ್ಟ್ ಮ್ಯಾನೇಜ್ ಮೆಂಟ್ ಕನ್ಸಲ್ಟೆನ್ಸಿ(PMC) ಸೇವೆ ಪಡೆದು 2024–25ನೇ ಸಾಲಿನಲ್ಲಿ ಈ ಕೆಳಗಿನಂತೆ ಪಾವತಿಸಲಾಗಿದೆ.

ಕ್ರ.ಸಂ.	ವೋಚರ್ ನಂ.	ಚೆಕ್ ಸಂ./ ದಿನಾಂಕ	ವಿವರಗಳು	ಮೊತ್ತ ರೂ. ಗಳಲ್ಲಿ	ಸಂಸ್ಥೆಯ ಹೆಸರು
1	HDFC 2	000134/02–09–2024	3 ನೇ ಭಾಗಶಃ ಬಿಲ್ಲು	62,35,749/–	ಮೆ॥ ಗಿರೀಶ ಎಂ. ಸ್ವಾಮಿ ಕನ್ಸಲ್ಟೆನ್ಸಿ, ಬೆಂಗಳೂರು
2	115	6380/22.11.2024	4 ನೇ ಭಾಗಶಃ ಬಿಲ್ಲು	52,84,533/–	
3	000133/02–09–2024	000133/02–09–2024	5 ನೇ ಭಾಗಶಃ ಬಿಲ್ಲು	58,54,839/–	Infra Support Engineering Consultants Pvt. Ltd.

ಮೇಲಿನಂತೆ ವಾಸ್ತುಶಿಲ್ಪ ವಿನ್ಯಾಸ ಮತ್ತು ಒಳಾಂಗಣ ಸೇವೆ ಹಾಗೂ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆನ್ಸಿ (PMC) ಸೇವೆಯನ್ನು ಪಡೆಯಲು ಈ ಕೆಳಕಂಡ ಅಂಶಗಳಿಗೆ ದಾಖಲೆಗಳೊಂದಿಗೆ ವಿವರಣೆ ನೀಡಲು ಕೋರಿ ವಿಚಾರಣಾ ಪತ್ರ ಸಂಖ್ಯೆ:194/ವಿ:07–10–2025 ನ್ನು ನೀಡಲಾಗಿತ್ತು. ಅದಕ್ಕೆ ವಿ.ವಿ. ನೀಡಿರುವ ವಿವರಣೆಯನ್ನು ನಮೂದಿಸಲಾಗಿದೆ.

1. ಮುಂದುವರೆದ ಕಾಮಗಾರಿಗಳಿಗೆ ಕ್ರಿಯಾಯೋಜನೆ ಸಿದ್ಧಪಡಿಸಿರುವುದಿಲ್ಲ.

2. ಸಲಹಾ ಸೇವೆ ಪಡೆಯುವುದಕ್ಕೆ ವ್ಯವಸ್ಥಾಪನಾ ಮಂಡಳಿಯಿಂದ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿದೆ.

3. ಕೆ. ಡಬ್ಲು 4 ಟೆಂಡರ್ ದಾಖಲೆ ಸೆಕ್ಷನ್–4 ಆರ್ಥಿಕ ಬಿಡ್ ನಮೂನೆ 4A, 4B, ಮತ್ತು 4C ಗಳಲ್ಲಿ ಅಂದಾಜು ಮೊತ್ತಕ್ಕೆ ದರಗಳನ್ನು ಮೊತ್ತಗಳಲ್ಲಿ ನಮೂದಿಸಲು ಸೂಚಿಸಲಾಗಿದೆ. ಅದರಂತೆ ಬಿಡ್‌ದಾರರು ದರಗಳನ್ನು ಕ್ರಮವಾಗಿ ರೂ.1,91,20,000/– ಹಾಗೂ ರೂ.1,7061,507/– ಗಳನ್ನು ನಮೂದಿಸಿರುತ್ತಾರೆ. ಆದರೇ ವಿಶ್ವವಿದ್ಯಾನಿಲಯದ ಕಾರ್ಯಾದೇಶ ಪತ್ರದಲ್ಲಿ ಶೇ.2.39 ಹಾಗೂ ಶೇ.1.9 ಎಂದು ನಮೂದಿಸಿ ಕಾರ್ಯಾದೇಶ ನೀಡಲಾಗಿದೆ ಹಾಗೂ ಅದರಂತೆಯೇ ಪಾವತಿಸಲಾಗಿದೆ.

ನಮೂದಿಸಿರುವ ಮೊತ್ತವನ್ನು ಅಂದಾಜು ಮೊತ್ತಕ್ಕೆ ಹೋಲಿಕೆ ಮಾಡಿ ಸೇವಾಶುಲ್ಕವನ್ನು ಶೇಕಡದಲ್ಲಿ ಕಾರ್ಯಾದೇಶ ನೀಡಿರುವುದಾಗಿ ಉತ್ತರಿಸಿರುತ್ತಾರೆ.

5. ಶಾಲಾ ಕಟ್ಟಡಗಳಿಗೆ ಶಾಲಾ ಶಿಕ್ಷಣ ಇಲಾಖೆಯಲ್ಲೇ ವಿನ್ಯಾಸ ಮತ್ತು ಅಂದಾಜು ಪಟ್ಟಗಳಿದ್ದು, ಹೊಸದಾಗಿ ಸಮಾಲೋಚಕರನ್ನು ನೇಮಿಸಿಕೊಂಡು ಅದನ್ನು ಪುನಃ ಪಡೆಯುವ ಔಚಿತ್ಯತೆ ಸ್ಪಷ್ಟವಾಗುವುದಿಲ್ಲ. ಒಂದೇ ಕಾಮಗಾರಿಗೆ ಶಿಕ್ಷಣ ಇಲಾಖೆಯ ಲೆಕ್ಕ ತೀರ್ಮಿಕೆಯಲ್ಲಿಯು ಪಾವತಿಯಾಗುವ ಸಂಭವವಿರುವುದರಿಂದ ಮತ್ತು ಪಡೆದ ಶಾಲೆಗಳಲ್ಲಿ ಕಟ್ಟಡ, ಕ್ರೀಡಾಂಗಣ ನಿರ್ಮಿಸಲು ಶಾಲಾ ಶಿಕ್ಷಣ ಇಲಾಖೆಯವರೊಡನೆ ಒಡಂಬಡಿಕೆ ಮಾಡಿಕೊಂಡಿರುವ ಅಥವಾ ಅನುಮತಿ ಪಡೆದಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಶಾಲಾ ಕಟ್ಟಡಗಳ ದುರಸ್ಥಿ ಮತ್ತು ಅಭಿವೃದ್ಧಿಗೆ ವಾಸ್ತುಶಿಲ್ಪ, ವಿನ್ಯಾಸ ಮತ್ತು ಒಳಾಂಗಣದ ಸೇವೆ, ವಿಸ್ತೃತ ಯೋಜನಾ ವರದಿ (ಡಿ.ಪಿ.ಆರ್) ತಯಾರಿಸುವುದರ ಔಚಿತ್ಯತೆ ಅರ್ಥವಾಗುವುದಿಲ್ಲ.

ಸರ್ಕಾರಿ ಶಾಲೆಗಳಲ್ಲಿ ದುರಸ್ತಿ ಹಾಗೂ ಕಟ್ಟಡ ಕಾಮಗಾರಿಗಳನ್ನು ಮಾತ್ರ ನಿರ್ವಹಿಸುವುದಕ್ಕೆ ಸಮಿತವಾಗಿದ್ದು, ಶಿಕ್ಷಣ ಇಲಾಖೆಯೊಂದಿಗೆ ಒಡಂಬಡಿಕೆ ಮಾಡಿವಂತೆ ಮಾಹಿತಿ ಇಲ್ಲದ ಕಾರಣ ಒಡಂಬಡಿಕೆ ಮಾಡಿಕೊಂಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

6. ಮೆ॥ ಗಿರೀಶ್.ಎಂ. ಸ್ವಾಮಿ ಕನ್ಸಲ್‌ಟೆನ್ಸಿ, ಬೆಂಗಳೂರು ಹಾಗೂ Infra Support Engineering Consultants Pvt. Ltd.ರವರಿಂದ ಪ್ರೊಫಾರ್ಮ ಇನ್‌ವಾಯ್ಸ್ (ದರಪಟ್ಟಿ) ಪಡೆದುಕೊಂಡು ಹಣ ಪಾವತಿಸಿರುವುದು ನಿಯಮಬಾಹಿರವಾಗಿರುತ್ತದೆ.

ಇಲಾಖೆಗಳಿಂದ ನಿಗಧಿಗೊಳಿಸಿದ ಮಾನದಂಡಗಳ ಪ್ರಕಾರ ನಿಯಮದ ಪ್ರಕಾರ ಇನ್‌ವಾಯ್ಸ್ ಪಡೆದು ಪಾವತಿಸಲಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ.

7. ಕಾರ್ಯಾದೇಶದಲ್ಲಿ ಆಯ್ಕೆಯಾಗಿರುವ ಶಾಲೆಗಳ ಪಟ್ಟಿಯನ್ನು ನಮೂದಿಸದೇ, ಯಾವ ಶಾಲೆಗಳ ವಾಸ್ತುಶಿಲ್ಪ, ಮತ್ತು ಒಳಾಂಗಣದ ವಿನ್ಯಾಸ ನೀಡಲು ಸೂಚಿಸಲಾಗಿದೆ ಎಂದು ಲೆಕ್ಕಪರಿಶೋಧನೆಗೆ ಸ್ಪಷ್ಟವಾಗಿರುವುದಿಲ್ಲ.

ನಿರ್ದಿಷ್ಟ ಶಾಲೆಗಳ ಪಟ್ಟಿಯನ್ನು ಸಲ್ಲಿಸಿ ವಾಸ್ತುಶಿಲ್ಪ ಮತ್ತು ವಿನ್ಯಾಸ ನೀಡುವಂತೆ ಸೂಚಿಸಲಗಿರುತ್ತದೆ ಎಂದು ಉತ್ತರಿಸಿರುತ್ತಾರೆ.

8. ಪ್ರತ್ಯೇಕವಾಗಿ ವಾಸ್ತುಶಿಲ್ಪ, ಮತ್ತು ಒಳಾಂಗಣದ ವಿನ್ಯಾಸಕ್ಕಾಗಿ ಗುತ್ತಿಗೆ ನೀಡಿದ್ದರೂ ಪ್ರಾದೇಶಿಕ ಕೇಂದ್ರ/ ವಿದ್ಯಾರ್ಥಿಗಳ ಕಲಿಕಾ ಸಲಹಾ ಕೇಂದ್ರ ಮತ್ತು ವಿಶ್ವವಿದ್ಯಾನಿಲಯದ ಆವರಣದಲ್ಲಿ ಹಂಸ ಮತ್ತು ಮಾನಸ ಕಟ್ಟಡ ಹಾಗೂ 16 ಸರ್ಕಾರಿ ಶಾಲೆಗಳ ಕಟ್ಟಡಗಳ ನಿರ್ಮಾಣದಲ್ಲಿ ಅಂದಾಜು ಪರಿಮಾಣಕ್ಕಿಂತ ಶೇ.125 ಹೆಚ್ಚುವರಿ ಹಾಗೂ ಇ.ಐ.ಆರ್.ಎಲ್.ಗಳನ್ನು ಪಾವತಿಸಲಾಗಿದೆ. ಹಾಗಾಗಿ ವಾಸ್ತುಶಿಲ್ಪ ಹಾಗೂ ಒಳಾಂಗಣ ವಿನ್ಯಾಸದ ಅಂದಾಜುಗಳ ಕಾರ್ಯವನ್ನು ಸರಿಯಾಗಿ ನಿರ್ವಹಿಸದೇ ಇದ್ದರೂ ಮೆಃ ಗಿರೀಶ ಎಂ. ಸ್ವಾಮಿ ಕನ್ಸಲ್‌ಟೆನ್ಸಿ, ಬೆಂಗಳೂರು ಇವರಿಗೆ ರೂ.1,15,20,282/- ಗಳನ್ನು ಪಾವತಿಸಿರುವುದಕ್ಕೆ ವಿವರಣೆ.

ಶಾಲಾ ಅಭಿವೃದ್ಧಿ ಮಂಡಳಿ ಸಮಿತಿ ರವರು ಸೂಚಿಸಿರುವಂತೆ ಹೆಚ್ಚುವರಿ ಅಂಶ ಹಾಗೂ ಇ.ಐ.ಆರ್.ಎಲ್. ಒಳಗೊಂಡಂತೆ ಅಂದಾಜು ಸಿದ್ದಪಡಿಸಲಾಗಿದೆ ಎಂದು ಉತ್ತರಿಸಿರುತ್ತಾರೆ.

9. ಧಾರವಾಡ ಹಾಗೂ ರಾಮನಗರ ಪ್ರಾದೇಶಿಕ ಕೇಂದ್ರ/ ವಿದ್ಯಾರ್ಥಿಗಳ ಕಲಿಕಾ ಕೇಂದ್ರ ಕಟ್ಟಡ ನಿರ್ಮಾಣಕ್ಕೆ ಸಕ್ಷಮ ಪ್ರಾಧಿಕಾರದಿಂದ ಕಟ್ಟಡ ಪರವಾನಗಿ ಪತ್ರ ಹಾಗೂ ಅನುಮೋದಿತ ನೀಲಿ ನಕ್ಷೆಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವುದು.

ಇಲಾಖೆಯ ಮಾನದಂಡಗಳ ಪ್ರಕಾರ ಇಲಾಖೆಯವರು ಅನುಮತಿ ಕೋರಿಲ್ಲವಾದ್ದರಿಂದ ಈ ಬಗ್ಗೆ ಕ್ರಮವಹಿಸಲು ಸಾಧ್ಯವಾಗಿರುವುದಿಲ್ಲ ಮುಂದಿನ ದಿನಗಳಲ್ಲಿ ಕ್ರಮವಹಿಸಲಾಗುವುದು ಎಂದು ಉತ್ತರಿಸಿರುತ್ತಾರೆ.

ಕೆ.ಪಿ.ಡಬ್ಲ್ಯೂ ಕೋಡ್ ಸಂಖ್ಯೆ-1 ರ ಅನುಬಂಧ-IV DPR Preparation Charges ರಲ್ಲಿ ಕಾಮಗಾರಿ ಕೆಲಸಗಳಿಗೆ ಸಲಹಾ ಶುಲ್ಕಗಳನ್ನು ಹಾಗೂ ಪರತ್ತುಗಳನ್ನು ವಿಧಿಸಿದೆ. ಅದರಂತೆ ರೂ.10.00 ರಿಂದ 100.00 ಕೋಟಿ ವೆಚ್ಚದ ಕಾಮಗಾರಿಗಳಿಗೆ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆನ್ಸಿ (PMC) ಶುಲ್ಕ ಶೇ.1.75 ಗಳನ್ನು ನಿಗದಿಪಡಿಸಲಾಗಿದೆ. ಆದರೇ, ವಿ.ವಿ. ನಿಲಯವು ಶೇ.1.9 ರಂತೆ ಪಾವತಿಸಿರುತ್ತಾರೆ. ಹಾಗೂ ಸಲಹಾ ಸಂಸ್ಥೆಯು ಮುಖ್ಯ ಇಂಜಿನಿಯರ್, ಬಂದರು ಮತ್ತು ಒಳನಾಡು ಇಲಾಖೆ ಇವರ ಪಟ್ಟಿಯಲ್ಲಿ ಸೇರಿರಬೇಕು, ಸದರಿ ವೆಚ್ಚವನ್ನು ಕಾಮಗಾರಿ ಅಂದಾಜು ಪಟ್ಟಿಯಲ್ಲಿ ಸೇರಿರಬೇಕು, ಹಾಗೂ ಕಾಮಗಾರಿ ನೀಲಿನಕ್ಷೆಗಳು, ವಿನ್ಯಾಸಗಳು ಸಕ್ಷಮ ಪ್ರಾಧಿಕಾರಗಳಿಂದ ಅನುಮೋದಿಸಿರಬೇಕು. ಈ ಅಂಶಗಳಿಗೆ ವಿ.ವಿ. ನಿಲಯವು ಯಾವುದೇ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಕಾರಣ ವಾಸ್ತು ಶಿಲ್ಪ ವಿನ್ಯಾಸ ಹಾಗೂ ಪ್ರಾಜೇಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆನ್ಸಿ (PMC) ಗಳಿಗೆ ಪಾವತಿಸಿರುವ ಮೊತ್ತ ರೂ. 1,73,75,121/- ಗಳನ್ನು **ಆಕ್ಷೇಪಣೆಗೆ ಸೂಚಿಸಿದೆ. ಒಟ್ಟು ಮೊತ್ತ (ರೂ.38,74,09,341+ರೂ.1,73,75,121) ರೂ.40,47,84,462/-ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.**

38 ಸಾದಿಲ್ವಾರು ವೆಚ್ಚಗಳು

38.1 ವಾಹನಗಳಿಗೆ ಹೊಸ ಟೈಯರ್ ಖರೀದಿ ಪೂರ್ವದಲ್ಲಿ ಮತ್ತು ನಂತರದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ

ದೃಢೀಕರಣ ಪತ್ರ ಪಡೆಯದೆ ವೆಚ್ಚ ಭರಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:174/28.10.202)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಸಾಮಾನ್ಯ ನಿಧಿ ವೋಚರ್‌ಗಳನ್ನು ಪರಿಲಿತೀಲಿಸಲಾಗಿ ವಾಹನಗಳಿಗೆ ಹೊಸ ಟೈಯರ್ ಖರೀದಿ ಹಾಗೂ ಬಿಡಿಭಾಗಗಳನ್ನು ಅಳವಡಿಸಿ ರಿಪೇರಿ (Major Repairs) ಸಂಬಂಧ ರೂ.3,77,362/–ಗಳ ವೆಚ್ಚ ಭರಿಸಲಾಗಿದೆ. ವಿವರಗಳನ್ನು ಅನುಬಂಧ-[illegible] ನೀಡಲಾಗಿದೆ. ಈ ವೆಚ್ಚಕ್ಕೆ ಸಂಬಂಧಿಸಿದಂತೆ ಸಾರಿಗೆ ಇಲಾಖೆಯಿಂದ (RTO) ಪಡೆದ ಪ್ರಮಾಣ ಪತ್ರವನ್ನು ಹಾಗೂ ಹೊಸ ಟೈರುಗಳನ್ನು ಖರೀದಿಸಿರುವುದಕ್ಕೆ ದಾಸ್ತಾನು ವಹಿ, ವಾಹನಗಳ ನಿರ್ವಹಣೆ, ದುರಸ್ಥಿ ಹಾಗೂ ವಾಹನಗಳಿಗೆ ಹೊಸ ಟೈಯರ್ ಖರೀದಿಸಿ ಅಳವಡಿಸಿರುವ ವೆಚ್ಚ ಭರಿಸುವ ಪೂರ್ವದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಂದ ದುರಸ್ಥಿಯ ಮುನ್ನ ಹಾಗೂ ನಂತರ ದೃಢೀಕರಣವನ್ನು ಪಡೆಯಬೇಕಾಗಿದ್ದು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರವನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 174/ 28.10.2025ರಲ್ಲಿ ಕೋರಲಾಗಿ, ವಿಶ್ವವಿದ್ಯಾನಿಲಯದವರು ವಾಹನಗಳ ಅಧಿಕೃತ ಕಂಪನಿಯ ಸ್ಥಳೀಯ ಸರಬರಾಜು ಸಂಸ್ಥೆಗಳಿಂದ ಖರೀದಿಸಲಾಗಿದ್ದು, ಸಂದರ್ಭನುಸಾರ ವಾಹನವನ್ನು ಸುಸ್ಥಿತಿಯಲ್ಲಿಡಲು ಸದರಿ ಅಧಿಕೃತ ಸಂಸ್ಥೆಗಳ ಸರ್ವಿಸ್ ಸೆಂಟರ್‌ಗಳಿಂದಲೇ ಹೊಸ ಟೈಯರ್ ಖರೀದಿ ಹಾಗೂ ಸರ್ವೀಸ್ ಮಾಡಿಸಲಾಗಿದೆ ಹಾಗೂ ದಿ:03.10.2019 ಮತ್ತು 19.05.2022 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮೈಸೂರು ರವರಿಗೆ ಪರಿತೀಲನಾ ವರದಿ ನೀಡುವಂತೆ ಪತ್ರ ಬರೆಯಲಾಗಿ, ಈ ಸಂಬಂಧ ಪರಿತೀಲನಾ ವರದಿಯನ್ನು ನೀಡಿರುವುದಿಲ್ಲ ಎಂದು ತಿಳಿಸಿರುತ್ತಾರೆ ಹಾಗೂ ಕರ್ನಾಟಕ ಸರ್ಕಾರಿ ಆದೇಶ ಸಂಖ್ಯೆ:ಎಫ್. ಡಿ6ಟಿಸಿಇ, ದಿನಾಂಕ:15.12.1992 ರನ್ವಯ ನಿಗದಿಪಡಿಸಲಾಗಿರುವ ಕಿಲೋಮೀಟರ್‌ಗಳನ್ನು ಕ್ರಮಿಸಿದ ಸಂದರ್ಭದಲ್ಲಿ ವಾಹನಗಳಿಗೆ ಸಂದರ್ಭಾನುಸಾರ ಅಗತ್ಯ ಟೈರು ಹಾಗೂ ವಾಹನಗಳನ್ನು ಅಧಿಕೃತ ಸಂಸ್ಥೆಗಳಿಂದಲೇ ಅಳವಡಿಸಿಕೊಳ್ಳಲಾಗಿದೆ ಹಾಗೂ ಆಡಿಟ್ ಸೂಚನೆಯಂತೆ, ವಾಹನಗಳ ರಿಪೇರಿ/ಸರ್ವೀಸ್ ಇತ್ಯಾದಿ ಕಾರ್ಯಗಳನ್ನು ನೆರವೇರಿಸುವ ಸಂಬಂಧ ಆರ್.ಟಿ.ಓ ಪರಿತೀಲನಾ ವರದಿಯ ದೃಢೀಕರಣವನ್ನು ಪ್ರಸಕ್ತ ಸಾಲಿನಿಂದ ಪಡೆಯಲಾಗುತ್ತಿದೆ ಎಂದು ಅನುಪಾಲನಾ ವರದಿ ಸಲ್ಲಿಸಿರುತ್ತಾರೆ.

ಆದರೆ, ಪ್ರಸಕ್ತ ಸಾಲಿನಲ್ಲಿ ವಾಹನಗಳ ರಿಪೇರಿ/ಸರ್ವೀಸ್ ಇತ್ಯಾದಿ ಕಾರ್ಯಗಳನ್ನು ನೆರವೇರಿಸುವ ಸಂಬಂಧ ಆರ್.ಟಿ.ಓ ಪರಿತೀಲನಾ ವರದಿಯ ದೃಢೀಕರಣವನ್ನು ಪಡೆಯದ ಕಾರಣ ವಿಶ್ವವಿದ್ಯಾನಿಲಯದ ವತಿಯಿಂದ ನೀಡಿರುವ ಉತ್ತರವು ಸಮರ್ಥನೀಯವಾಗಿರುವುದಿಲ್ಲ. ಆದ್ದರಿಂದ ವಾಹನಗಳಿಗೆ ರಿಪೇರಿ/ಸರ್ವೀಸ್ ಕಾರ್ಯ ಹಾಗೂ ಹೊಸ ಟೈಯರ್ ಖರೀದಿಸಿ ವೆಚ್ಚ ಭರಿಸಿರುವ ಒಟ್ಟು ಮೊತ್ತ **ರೂ.3,77,362/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

38.2. ಪ್ರಾದೇಶಿಕ ಕೇಂದ್ರ ಕಟ್ಟಡಗಳಿಗೆ ಪಿ.ಡಬ್ಲ್ಯೂ.ಡಿ ಇಂಜಿನಿಯರ್‌ರವರಿಂದ ಕಟ್ಟಡವನ್ನು ಮೌಲ್ಯಮಾಪನ ಮಾಡಿಸಿ ಬಾಡಿಗೆ ದರ ನಿಗದಿಪಡಿಸದೆ ಬಾಡಿಗೆ ಪಾವತಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:160/13.10.2025)

ಸಾಮಾನ್ಯ ನಿಧಿ ಖಾತೆಯ ವೋಚರ್‌ಗಳನ್ನು ಪರಿತೀಲಿಸಿದಾಗ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳಾದ ಬೆಂಗಳೂರು 1,2,3 ಮತ್ತು 4, ಕಲ್ಬುರ್ಗಿ, ಮಂಗಳೂರು, ರಾಮನಗರ, ಕಾರವಾರ, ಉಡುಪಿ, ಬೆಳಗಾವಿ ಮತ್ತು ಮಡಿಕೇರಿ ಒಟ್ಟು 11 ಖಾಸಗಿ ಕಟ್ಟಡಗಳನ್ನು ಬಾಡಿಗೆಗೆ ಪಡೆದು, ಬಾಡಿಗೆ ಮತ್ತು ಕಟ್ಟಡ ನಿರ್ವಹಣೆಗೆ ಒಟ್ಟು ರೂ.28,10,786/– ಪಾವತಿಸಲಾಗಿದೆ ವಿವರಗಳನ್ನು ಅನುಬಂಧ–55 ರಲ್ಲಿ ನೀಡಿದೆ. ಸದರಿ ಕಟ್ಟಡಗಳನ್ನು ಬಾಡಿಗೆ ಪಡೆಯಲು ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆಯ ಕಂಡಿಕೆ–22 ರಂತೆ ಒಳನಾಡು ಸಾರಿಗೆ ಮತ್ತು ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರು ಪರಿತೀಲಿಸಿ ಮೌಲ್ಯಮಾಪನ ಮಾಡಿಸಿ ಬಾಡಿಗೆ ದರ ನಿಗದಿಪಡಿಸಬೇಕಾಗಿರುತ್ತದೆ. ಸದರಿ ನಿಯಮವನ್ನು ಪಾಲಿಸದೆ ಬಾಡಿಗೆ ಪಡೆದಿರುವುದಕ್ಕೆ ವಿವರಣೆ ನೀಡುವಂತೆ ಮತ್ತು ದರ ನಿಗದಿಪಡಿಸಿರುವ ಕಡತಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:160/13.10.2025ರಲ್ಲಿ ಕೋರಲಾಗಿ, ಬೆಂಗಳೂರು–4 ಮತ್ತು

ಬೆಳಗಾವಿ ಪ್ರಾದೇಶಿಕ ಕೇಂದ್ರಗಳ ಕಟ್ಟಡ ಬಾಡಿಗೆಯನ್ನು ಲೋಕೋಪಯೋಗಿ ಇಲಾಖೆಯಿಂದ ಮೌಲ್ಯ ಮಾಪನ ಮಾಡಿಸಿ ಬಾಡಿಗೆ ದರ ನಿಗದಿಪಡಿಸಿದೆ ಎಂದು, ಅನುಪಾಲನಾ ವರದಿ ನೀಡಿ ದರ ನಿಗದಿಪಡಿಸಿರುವ ಪತ್ರವನ್ನು ಹಾಜರುಪಡಿಸಲಾಗಿರುತ್ತದೆ. ಆದ್ರೆ, ಲೋಕೋಪಯೋಗಿ ಇಲಾಖೆಯಿಂದ ದರ ನಿಗದಿಪಡಿಸದೇ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಳಗಾವಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಬಾಡಿಗೆ ದರ ನಿಗದಿಪಡಿಸಲಾಗಿರುತ್ತದೆ" ಹಾಗಾಗಿ ನೀಡಿರುವ ಉತ್ತರವೂ ಸಮಂಜಸವಾಗಿರದ ಕಾರಣ ನಿಯಮಾನುಸಾರ **ಕಟ್ಟಡವನ್ನು ಬಾಡಿಗೆ ನಿಗದಿಪಡಿಸದೇ ಪಾವತಿಸಲಾಗಿರುವ ಒಟ್ಟು ರೂ.28.10.786/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ಹಾಗೂ ಕಾರ್ಯಪಾಲಕ ಅಭಿಯಂತರರು, ಒಳನಾಡು ಸಾರಿಗೆ ಮತ್ತು ಲೋಕೋಪಯೋಗಿ ಇಲಾಖೆಯವರನ್ನು ಸಂಪರ್ಕಿಸಿ ಬಾಡಿಗೆ ನಿಗದಿಪಡಿಸಿಕೊಳ್ಳಲು ಸೂಚಿಸಿದೆ.

38.3. ಸಿದ್ದಪಾಠಗಳ ಬರವಣಿಗೆಯ ಡಿಟಿಪಿ ಕಾರ್ಯಕ್ಕಾಗಿ ಪಾವತಿಸಿರುವುದು:

(ವಿಚಾರಣಾ ಪತ್ರ ಸಂಖ್ಯೆ:74/05.08.2025, 101/18.08.2025 ಹಾಗೂ 119/16.09.2025)

ಸಾಮಾನ್ಯ ನಿಧಿ ಖಾತೆಯ ಪಾವತಿ ವೋಚರ್‌ಗಳನ್ನು ಪರಿಶೀಲಿಸಲಾಗಿ ಈ ಕೆಳಗೆ ವಿವರಿಸಿರುವ ವಿಷಯಗಳ ಸಿದ್ದಪಾಠಗಳ ಬರವಣಿಗೆಗಾಗಿ ರೂ.1,86,525/–ಗಳನ್ನು ಡಿಟಿಪಿ ವೆಚ್ಚ ಭರಿಸಲಾಗಿದೆ.

ಕ್ರಮ ಸಂಖ್ಯೆ	ವಿಷಯ	ವೋಚರ್ ಸಂಖ್ಯೆ ಮತ್ತು ಮಾಹೆ	ಮೊತ್ತ ರೂ.ಗಳಲ್ಲಿ	ಧನಾದೇಶ ಸಂಖ್ಯೆ/ದಿನಾಂಕ	ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಸಿಬ್ಬಂದಿಗಳ ಸಂಖ್ಯೆ
1	ವಾಣಿಜ್ಯ ವಿಭಾಗ	21–ಜೂನ್	2790/–	313321 ದಿ:06.06.2024	4
2	ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ	179–ಜುಲೈ	20,560/–	313619 ದಿ:31.07.2024	4
3	ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ	181/ಜುಲೈ	8125/–		
4	ರಾಜ್ಯ ಶಾಸ್ತ್ರ	9–ಆಗಸ್ಟ್	40,695/–	3131649 ದಿ:03.08.2024	4
5	ಸಮಾಜ ಶಾಸ್ತ್ರ	8–ಆಗಸ್ಟ್	51,110/–		8
6	ಸಮಾಜ ಶಾಸ್ತ್ರ ವಿಭಾಗ	61/ನವೆಂಬರ್	28145/–	638032/33 ದಿ:06.12.2024	
7	ಎಂ.ಎ ಪ್ರತಿಕೋದ್ಯಮ ಮತ್ತು ಸಮೂಹ ಸಂವಹನವಿಭಾಗ	68/ಜನವರಿ–25	35,100/–	638163/64 ದಿ:09.01.2025	4
		ಒಟ್ಟು	1,86,525/–		

ವಿಶ್ವವಿದ್ಯಾನಿಲಯದಲ್ಲಿ 204 ಸಂಖ್ಯೆ ತಾತ್ಕಾಲಿಕ ಹಾಗೂ 2 ಸಂಖ್ಯೆ ಖಾಯಂ ಡೇಟಾ ಎಂಟ್ರಿ ಆಪರೇಟರ್ ಕಂ ಬೆರಳಚ್ಚುಗಾರರು ಕರ್ತವ್ಯ ನಿರ್ವಹಿಸುತ್ತಿದ್ದರೂ ಸಹ ಲಭ್ಯವಿರುವ ಮಾನವ ಸಂಪನ್ಮೂಲವನ್ನು ಉಪಯೋಗಿಸಿಕೊಳ್ಳದೇ ಡಿಟಿಪಿ ಸೇವೆಯನ್ನು ಹೊರಗಿನಿಂದ ಪಡೆದು ವೆಚ್ಚ ಭರಿಸಿರುವುದಕ್ಕೆ ಏವರಣೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:74/05.08.2025, 101/18.08.2025 ಹಾಗೂ 119/16.09.2025 ರಲ್ಲಿ ಕೋರಲಾಗಿ, ಅದಕ್ಕೆ ವಿಶ್ವವಿದ್ಯಾನಿಲಯವು ಅನುವಾದ ಮಾಡಲು ಪಾಠದ ಗಾತ್ರ ಮತ್ತು ತಾಂತ್ರಿಕ ಪದಗಳ ಅನುವಾದಕ್ಕೆ ಸಾಕಾಗುವುದಿಲ್ಲ ಎಂದು ಅನುವಾದಕರು ತಿಳಿಸಿರುವುದರಿಂದ ಅನುವಾದಕರನ್ನು ಸಮಾಧಾನಪಡಿಸಲು ಪಾವತಿಸಲಾಗಿದೆ ಎಂದು ಹಾಗೂ ವಿಭಾಗಗಳಲ್ಲಿ ತಾತ್ಕಾಲಿಕ ಸಿಬ್ಬಂದಿಗಳು ಇರದೇ ಇರುವುದರಿಂದ ಡಿಟಿಪಿ ಸೇವೆಯನ್ನು ಹೊರಗಿನಿಂದ ಪಡೆಯಲಾಗಿದೆ ಎಂದು ಉತ್ತರಿಸಿರುತ್ತಾರೆ.

ಮೇಲಿನ ಕೋಷ್ಟಕದಲ್ಲಿನ ವಿಭಾಗಗಳಲ್ಲಿ ತಾತ್ಕಾಲಿಕ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದರೂ ಡಿಟಿಪಿ ಸೇವೆಯನ್ನು ಹೊರಗಿನಿಂದ ಪಡೆದು ಪಾವತಿಸಿರುವ ಮೊತ್ತ **ರೂ.1,86,525/--ಗಳನ್ನು ವಿಶ್ವವಿದ್ಯಾನಿಲಯದ ತಾತ್ಕಾಲಿಕ ಸಿಬ್ಬಂದಿಗಳಿಂದ ವಸೂಲಿಸಿ** ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲು ಸೂಚಿಸಿದೆ.

38.4 ಬಾಹ್ಯ ಪ್ರಾಧ್ಯಾಪಕರುಗಳನ್ನು ಬಳಸಿ ಸಂಪರ್ಕ/ಸಮಾಲೋಚನಾ ಕಾರ್ಯಕ್ರಮಗಳನ್ನು ಆಯೋಜಿಸಿ ಸಂಭಾವನೆ ಪಾವತಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:113/03.09.2025)

ಸಾಮಾನ್ಯ ನಿಧಿ ಖಾತೆಯ ಪಾವತಿ ವೋಚರುಗಳನ್ನು ಪರಿಶೀಲಿಸಿದಾಗ ವಿಶ್ವವಿದ್ಯಾನಿಲಯದ ಪ್ರಥಮ ಮತ್ತು ದ್ವೀತಿಯ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ವಿವಿಧ ಸ್ನಾತಕ, ಸ್ನಾತಕೋತ್ತರ ಪದವಿ, ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸುಗಳ ತರಗತಿಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಕಲಿಕಾ ಕೇಂದ್ರಗಳಲ್ಲಿ ಸಂಪರ್ಕ/ಸಮಾಲೋಚನಾ ಕಾರ್ಯಕ್ರಮಗಳನ್ನು ನೇರವಾಗಿ/ಆನ್‌ಲೈನ್ ಮೂಲಕ ಆಯೋಜಿಸಿ ಈ ಸಂಪರ್ಕ ಕಾರ್ಯಕ್ರಮಗಳಲ್ಲಿ ಭಾಗಿಯಾದ ಬಾಹ್ಯ ಪ್ರಾಧ್ಯಾಪಕರುಗಳಿಗೆ ಗೌರವ ಸಂಭಾವನೆಯಾಗಿ ಒಟ್ಟು ರೂ.1,05,99,102/--ಗಳನ್ನು ಪಾವತಿಸಲಾಗಿದ್ದು, ಪಾವತಿ ವೌಚರಗಳನ್ನು ಅನುಬಂಧ [illegible] ನೀಡಲಾಗಿದೆ. ಈ ಸಂಬಂಧ ಪ್ರಸಕ್ತ ಸಾಲಿನಲ್ಲಿ ವಿಷಯವಾರು ಎಷ್ಟು ಸಂಪರ್ಕ ಕಾರ್ಯಕ್ರಮಗಳನ್ನು ನಡೆಸಲಾಗಿದೆ, ಸಂಪರ್ಕ ಕಾರ್ಯಕ್ರಮಗಳನ್ನು ನಡೆಸಲು ಯು.ಜಿ.ಸಿ. ನಿಯಮಾವಳಿಗಳು, ಆಂತರಿಕ ಅಧ್ಯಾಪಕರಿಗೆ ಹಾಗೂ ಬಾಹ್ಯ ಅಧ್ಯಾಪಕರಿಗೆ ಸಂಪರ್ಕ ಕಾರ್ಯಕ್ರಮಗಳನ್ನು ನಡೆಸಲು ನಿಗದಿಪಡಿಸಿರುವ ಅನುಪಾತ ಎಷ್ಟು, ಬಾಹ್ಯ ಅಧ್ಯಾಪಕರನ್ನು ನೇಮಕ ಮಾಡಲು ಸಮಿತಿ ರಚಿಸಿದ್ದಲ್ಲಿ ಸಮಿತಿ ಆದೇಶಗಳು, ಸಂಭಾವನೆ ನಿಗದಿಪಡಿಸಿರುವ ಮಾನದಂಡಗಳು, ವಿಶ್ವವಿದ್ಯಾನಿಲಯದ ಸ್ಟುಡಿಯೋ ಮತ್ತು ವಿಡಿಯೋ ವಿಭಾಗದಿಂದ ತಯಾರಿಸಲಾದ ವಿಡಿಯೋಗಳನ್ನು ಬಳಸಿಕೊಂಡಿರುವ ವಿವರ ಹಾಗೂ ಸಂಭಾವನೆ ಪಾವತಿಗೆ ಅನುಮೋದಿತ ಪರಿನಿಯಮಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:113/03.09.2025ರಲ್ಲಿ ಕೋರಲಾಗಿ ವಿಶ್ವವಿದ್ಯಾನಿಲಯದ ಡೀನ್(ಶೈಕ್ಷಣಿಕ) ರವರು ತಮ್ಮ ವಿಭಾಗದಲ್ಲಿ ಮಾಹಿತಿ ಲಭ್ಯವಿರುವುದಿಲ್ಲ ಅನುಪಾಲನಾ ವರದಿ ನೀಡಿರುತ್ತಾರೆ. ಡೀನ್ (ಅಧ್ಯಯನ ಕೇಂದ್ರ) ರವರು ಪ್ರತಿ ಅವ್ಯತ್ತಿಯ ಪ್ರತಿ ವಿಷಯವಾರು ಒಂದೊಂದು ಸೆಮಿಸ್ಟರ್‌ಗೆ ಒಂದು ಸಂಪರ್ಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಬಾಹ್ಯ ಅಧ್ಯಾಪಕರ ನೇಮಕಾತಿ ಸಂಬಂಧದ ಮಾಹಿತಿಯನ್ನು ಡೀನ್ (ಶೈಕ್ಷಣಿಕ) ವಿಭಾಗದಿಂದ ಹಾಗೂ ಸ್ಟುಡಿಯೋ ಮತ್ತು ವಿಡಿಯೋ ವಿಭಾಗವು ಪ್ರತ್ಯೇಕ ವಿಭಾಗವಾಗಿರುವುದರಿಂದ ಆ ವಿಭಾಗದಿಂದಲೇ ಮಾಹಿತಿ ಪಡೆಯಬಹುದಾಗಿದೆ ಎಂದು ಅನುಪಾಲನಾ ವರದಿ ನೀಡಿರುತ್ತಾರೆ. ಲೆಕ್ಕಪರಿಶೋಧನೆಯು ಕೋರಿರುವ ಮೇಲಿನ ಅಂಶಗಳಿಗೆ ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ.

ಮುಂದುವರೆದು ಮುಕ್ತ ವಿಶ್ವವಿದ್ಯಾನಿಲಯವು ಪರಿಣಾಮಕಾರಿ ಮತ್ತು ಉತ್ತಮ ಗುಣಮಟ್ಟದ ದೂರ ಶಿಕ್ಷಣ ಸೌಲಭ್ಯವನ್ನು ವಿದ್ಯಾರ್ಥಿಗಳಿಗೆ ತಲುಪಿಸುವ ಸಲುವಾಗಿ ತನ್ನದೇ ಸ್ವಂತ ಸ್ಟುಡಿಯೋ ಮತ್ತು ವಿಷಯ ಪರಿಣಿತ ಪ್ರಾಧ್ಯಾಪಕರುಗಳನ್ನು ಹೊಂದಿದ್ದು, ಇವರ ಸೇವೆ ಬಳಸಿಕೊಂಡು ವಿಷಯವಾರು ಥಿಯರಿ ಮತ್ತು ಪ್ರಾಯೋಗಿಕ ತರಗತಿಗಳ ವೀಡಿಯೋಗಳನ್ನು ಚಿತ್ರೀಕರಿಸಿ ಅವುಗಳನ್ನು ಮುಕ್ತ ವಿಶ್ವವಿದ್ಯಾನಿಲಯ ಯೂಟ್ಯೂಬ್ ಸಾಮಾಜಿಕ ಜಾಲತಾಣಗಳಲ್ಲಿ ಅಪ್ಲೋಡ್ ಮಾಡಿ ಕಲಿಕಾರ್ಥಿಗಳಿಗೆ ಯಾವುದೇ ಸಮಯದಲ್ಲಿ, ಎಲ್ಲಿಂದ ಬೇಕಾದರೂ ತಮ್ಮ ಪಠ್ಯಕ್ರಮಕ್ಕನುಗುಣವಾಗಿ ವಿಷಯವಾರು ತರಗತಿಗಳಿಗೆ ಸಂಬಂಧಿಸಿದ ವೀಡಿಯೋಗಳನ್ನು ವೀಕ್ಷಿಸುವ/ಡೌನ್‌ಲೋಡ್ ಮಾಡಿಕೊಳ್ಳುವ ಸೌಲಭ್ಯವನ್ನು ಕಲ್ಪಿಸಿದ್ದರೆ ಕಲಿಕಾರ್ಥಿಗಳಿಗೆ ಮತ್ತಷ್ಟು ಅನುಕೂಲಕರವಾಗುತಿತ್ತು. ಅಲ್ಲದೇ ಈ ರೀತಿ ಬಾಹ್ಯ ಪರಿಣಿತರಿಗೆ ಸಂಭಾವನೆ ರೂಪದಲ್ಲಿ ಪಾವತಿಸುತ್ತಿರುವ ಈ ಅನಗತ್ಯ ವೆಚ್ಚವನ್ನೂ ತಪ್ಪಿಸಬಹುದಾಗಿತ್ತು.

ವಿಶ್ವವಿದ್ಯಾನಿಲಯವು ಪರಿಣಾಮಕಾರಿ ಮತ್ತು ಉತ್ತಮ ಗುಣಮಟ್ಟದ ದೂರ ಶಿಕ್ಷಣ ಸೌಲಭ್ಯವನ್ನು ವಿದ್ಯಾರ್ಥಿಗಳಿಗೆ ತಲುಪಿಸುವ ಸಲುವಾಗಿ ತನ್ನದೇ ಸ್ವಂತ ಸ್ಟುಡಿಯೋ ಮತ್ತು ವಿಷಯ ಪರಿಣಿತ ಪ್ರಾಧ್ಯಾಪಕರುಗಳನ್ನು ಹೊಂದಿದ್ದು, ಇದರ ಸೇವೆಯನ್ನು ಉಪಯೋಗಿಸಿಕೊಳ್ಳದೇ ಬಾಹ್ಯ ಪ್ರಾಧ್ಯಾಪಕರನ್ನು ಬಳಸಿಕೊಂಡು ಪರಿನಿಯಮವನ್ನು ಮಾಡದೇ ಸಂಭಾವನೆ ಪಾವತಿಸಿರುವುದರ ಔಚಿತ್ಯದ ಕುರಿತು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ ಆದ್ದರಿಂದ ಮೇಲ್ಕಾಣಿಸಿದ ಮೊತ್ತ **ರೂ.1,05,99,102/--ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

38.5. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೂಲಕ ಜಾಹೀರಾತು ಪ್ರಕಟಣೆ ಮಾಡದೆ ಖಾಸಗಿ ಸಂಸ್ಥೆಗಳಿಂದ ಪ್ರಕಟಣೆ ಮಾಡಿ ಜಾಹೀರಾತು ವೆಚ್ಚ ಭರಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:106/19.08.2025)

ಜಾಹೀರಾತು ವೆಚ್ಚಗಳ ಪಾವತಿ ವೋಚರ್‌ಗಳನ್ನು ಪರಿಶೀಲಿಸಲಾಗಿ, ಜಾಹೀರಾತುಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಮತ್ತು ಏಜೆನ್ಸೀಸ್ ಲಿಮಿಟೆಡ್ ಸಂಸ್ಥೆಯ ಮುಖಾಂತರ ಜಾಹೀರಾತು ಬಿಡುಗಡೆ ಮಾಡದೆ ಖಾಸಗಿ ಸಂಸ್ಥೆಗಳಿಂದ ಪ್ರಕಟಣೆ ಮಾಡಿ ರೂ.64,29,810/- ಗಳನ್ನು ಪಾವತಿಸಲಾಗಿದೆ. ವಿವರಗಳನ್ನು ಅನುಬಂಧ-57 ರಲ್ಲಿ ನೀಡಲಾಗಿದೆ.

ಸರ್ಕಾರದ ಸುತ್ತೋಲೆ ಸಂಖ್ಯೆ:ವಾಪ್ರಯು/94/ವಾಪ್ರಜಾ/06 ದಿನಾಂಕ:20.11.2006 ರನ್ವಯ, ಸರ್ಕಾರದ ಎಲ್ಲಾ ಇಲಾಖೆಗಳು ಹಾಗೂ ಎಲ್ಲಾ ಅಂಗಸಂಸ್ಥೆಗಳು ಪತ್ರಿಕೆಗಳಲ್ಲಿ ಪ್ರಕಟಿಸಬೇಕಾಗುವ ತಮ್ಮ ಎಲ್ಲಾ ಜಾಹೀರಾತುಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಮಾರ್ಕೇಟಿಂಗ್ ಕನ್ಸಲ್ಟೆನ್ಸಿ ಮತ್ತು ಏಜೆನ್ಸೀಸ್ ಲಿಮಿಟೆಡ್ ಸಂಸ್ಥೆಯ ಮುಖಾಂತರ ಜಾಹೀರಾತು ಬಿಡುಗಡೆ ಮಾಡಬೇಕಾಗಿರುತ್ತದೆ. ಆದರೆ, ವಿಶ್ವವಿದ್ಯಾನಿಲಯವು ಸದರಿ ಸಾಲಿನಲ್ಲಿ ಪ್ರವೇಶಾತಿ ಪ್ರಚಾರದ ಹಾಗೂ ಇತರೆ ಜಾಹೀರಾತುಗಳನ್ನು ವಿವಿಧ ಖಾಸಗಿ ಸಂಸ್ಥೆಗಳ ಮೂಲಕ ಪ್ರಕಟಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಖಾಸಗಿ ಸಂಸ್ಥೆಗಳಿಂದ ಜಾಹೀರಾತು ಬಿಡುಗಡೆ ಮಾಡಿರುವುದಕ್ಕೆ ಪೂರಕ ದಾಖಲೆಗಳೊಂದಿಗೆ ಸೂಕ್ತ ವಿವರಣೆ ನೀಡುವಂತೆ, ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:106/19.08.2025ರಲ್ಲಿ ಕೋರಲಾಗಿ, ಮುಕ್ತ ವಿಶ್ವವಿದ್ಯಾನಿಲಯದವರು "ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಎ ಕ್ಯಾಟಗರಿಯಲ್ಲಿ ಜಾಹೀರಾತು ಪ್ರಕಟಿಸಲು ಮಾನ್ಯತೆ ಪಡೆದಿರುವ ಅಧಿಕೃತ ಸಂಸ್ಥೆಯಾದ Avanti Advertising Pvt Ltd ಇವರಿಂದ ಸರ್ಕಾರವು ನಿಗದಿಪಡಿಸಿರುವ ಡಿಎಪಿ ದರದಲ್ಲಿಯೇ ಕನ್ನಡ ಮತ್ತು ಇಂಗ್ಲಿಷ್ ದಿನಪತ್ರಿಕೆಗಳಲ್ಲಿ ಜಾಹೀರಾತು ಪ್ರಚುರಪಡಿಸಲು ಕಾರ್ಯಾದೇಶ ನೀಡಲಾಗಿದೆ ಹಾಗೂ ವಾರ್ತಾ ಇಲಾಖೆಯಲ್ಲಿ ಅವರ್ತನಾ ಪದ್ಧತಿಯಲ್ಲಿ ಅವರು ನಿಗದಿಪಡಿಸುವ ಪತ್ರಿಕೆಗಳಿಗೆ ಜಾಹೀರಾತು ನೀಡಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದ ಹಿನ್ನೆಲೆಯಲ್ಲಿ ವಿಶ್ವವಿದ್ಯಾಯನಿಲಯವು ಅಗತ್ಯವೆನಿಸಿದ್ದ, ಸಂದರ್ಭದಲ್ಲಿ ಹೆಚ್ಚಿನ ವಿದ್ಯಾರ್ಥಿಗಳನ್ನು ತಲುಪುವ ದೃಷ್ಟಿಯಿಂದ ಸರ್ಕಾರದ ಮಾನ್ಯತೆ ಪಡೆದ ಜಾಹೀರಾತು ಸಂಸ್ಥೆಯ ಮೂಲಕ ಸರ್ಕಾರದ ನಿಗದಿತ ಡಿಎಪಿ ದರದಲ್ಲಿ ಜಾಹೀರಾತು ನೀಡಲಾಗುತ್ತಿದೆ ಎಂದು ಉತ್ತರಿಸಿರುತ್ತಾರೆ. ಹಾಗೂ The Hindu Group ಮೈಸೂರು ಇವರು The Hindu career counselling 2023ರಲ್ಲಿ ನಡೆಸುತ್ತಿದ್ದ ಕಾರ್ಯಕ್ರಮಕ್ಕೆ ವಿಶ್ವವಿದ್ಯಾನಿಲಯದ ಪರವಾಗಿ ಪ್ರಚುರಪಡಿಸಲಾಗುವುದು ಎಂದು ತಿಳಿಸಿ ಪತ್ರ ನೀಡಿದ ಹಿನ್ನೆಲೆಯಲ್ಲಿ 2023-24ನೇ ಸಾಲಿನಲ್ಲಿ ದಿ ಹಿಂದೂ ಗ್ರೂಪ್‌ನ ಕೆರಿಯರ್ ಮ್ಯಾಗ್ನಿನ್ ಗೈಡೆನ್ಸ್ ಹ್ಯಾಂಡ್ ಬುಕ್‌ನಲ್ಲಿ ಜಾಹೀರಾತು ನೀಡಲು ಪ್ರಾಯೋಜಕತ್ವ ಮೊತ್ತ ಪಾವತಿಸಲಾಗಿರುತ್ತದೆ ಎಂದು ವಿವರಣೆ ನೀಡಿರುತ್ತಾರೆ. ಅನುಬಂಧದಲ್ಲಿ ವಿವರಿಸಿರುವ ಬಿಲ್ಲುಗಳಲ್ಲಿರುವ ಮೊತ್ತವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ದೃಢೀಕರಿಸದೇ ಇರುವುದರಿಂದ ಇದು ಸರ್ಕಾರದ ಆದೇಶಕ್ಕೆ ವಿರುದ್ಧವಾಗಿದ್ದು, ಖಾಸಗಿ ಸಂಸ್ಥೆಗಳ ಮೂಲಕ ಜಾಹೀರಾತು ಪ್ರಕಟಣೆ ಮಾಡಿ ವೆಚ್ಚ ಭರಿಸಲಾಗಿರುತ್ತದೆ. ಹಾಗೂ ವಿಶ್ವವಿದ್ಯಾನಿಲಯದಲ್ಲಿ ಪ್ರತ್ಯೇಕ ಅಧಿಕಾರ ಪ್ರತ್ಯಾಯೋಜನೆ ಇಲ್ಲದ ಕಾರಣ, ಸರ್ಕಾರದ ಸಾಮಾನ್ಯ ವಿತ್ತಾಧಿಕಾರದ ಸರ್ಕಾರಿ ಆದೇಶ ಸಂಖ್ಯೆ: FD 08 TFP 2023 dated:28.10.2024ರನ್ವಯ ಇಲಾಖಾ ಮುಖ್ಯಸ್ಥರಿಗೆ ಜಾಹೀರಾತಿಗಾಗಿ ವಾರ್ಷಿಕ 20 ಲಕ್ಷಗಳವರೆಗೆ ವೆಚ್ಚಭರಿಸಲು ಅವಕಾಶವಿರುತ್ತದೆ. ಸದರಿ ಪಾವತಿಯು 20 ಲಕ್ಷಕ್ಕಿಂತ ಅಧಿಕವಾಗಿರುವುದರಿಂದ ಸದರಿ ನಿಯಮದ ಉಲ್ಲಂಘನೆಯಾಗಿರುತ್ತದೆ. ಹಾಗಾಗಿ ಖಾಸಗಿ ಸಂಸ್ಥೆಯವರಿಗೆ ಪಾವತಿಸಲಾಗಿರುವ ಜಾಹೀರಾತು ಪ್ರಕಟಣೆ ಮೊತ್ತ **ರೂ.64,29,810/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

38.6 ಇಎಸ್‌ಐ ವಂತಿಗೆ ಕಟಾಯಿಸದೇ ಇರುವುದಕ್ಕೆ Propasal Damages ಮೊತ್ತ ರೂ.5,55,818/- ಗಳನ್ನು ಹಾಗೂ ದಂಡ ಮೊತ್ತ ರೂ.4,19,391/-ಗಳನ್ನು ಕಾರ್ಮಿಕರ ರಾಜ್ಯ ವಿಮಾ ನಿಗಮ, ಮೈಸೂರು ಇವರಿಗೆ ಪಾವತಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:16/27.06.2025 ಹಾಗೂ 77/05.08.2025)

ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೌಕರರ ದಿ:01.03.2011 ರಿಂದ 28.02.2016ರ ಅವಧಿಯ ಇಎಸ್‌ಐ ವಂತಿಗೆ ಕಟಾಯಿಸದೇ ಇರುವುದಕ್ಕೆ Propasal Damages ಮೊತ್ತ ರೂ.5,55,818/- ಗಳನ್ನು ಹಾಗೂ 2017 ರಿಂದ 2022 ರವರೆಗೆ ಅವಧಿಯ ಇಎಸ್‌ಐ ವಂತಿಗೆ ಮೊತ್ತಕ್ಕೆ ಬಡ್ಡಿಯನ್ನು ತಡವಾಗಿ ಪಾವತಿಸಿದ್ದರಿಂದ ದಂಡ ಮೊತ್ತ ರೂ.4,19,391/-ಗಳನ್ನು ಕಾರ್ಮಿಕರ ರಾಜ್ಯ ವಿಮಾ ನಿಗಮ, ಮೈಸೂರು ಇವರಿಗೆ ಪಾವತಿಸಿದೆ.

ಕಾರ್ಮಿಕರ ರಾಜ್ಯ ವಿಮಾ ನಿಗಮ, ಮೈಸೂರು ಇವರು ವಿಶ್ವವಿದ್ಯಾನಿಲಯಕ್ಕೆ ಭೆಟಿ ನೀಡಿ ಜೂನ್–2017 ರಿಂದ ಮೇ–2022 ರವರೆಗೆ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ನೌಕರರ ವೇತನ ಪಾವತಿ ಮಾಡಿರುವ ಹುಂಡಿಗಳು, ಬಟವಾಡೆ ಪುಸ್ತಕಗಳನ್ನು ಹಾಗೂ ವೇತನ ಪಾವತಿಯಾಗಿರುವ ಪಟ್ಟಿಗಳನ್ನು ತಪಾಸಣೆ ಮಾಡಿದಾಗ ರೂ.36,96,038/– ಇಎಸ್ಐ ವಂತಿಗೆ ಪಾವತಿಸದೇ ಇರುವುದರಿಂದ ಇಎಸ್ಐ (ಸಾಮಾನ್ಯ) ಕಾಯ್ದೆ–1950ರ ನಿಯಮ 29, 31 ಮತ್ತು 33 ರನ್ವಯ ಇಎಸ್ಐ ವಂತಿಗೆ ಮೊತ್ತ ಪಾವತಿಸುವಂತೆ ನೋಟಿಸ್ ನೀಡಲಾಗಿರುತ್ತದೆ.

ಅದರನ್ವಯ ಇಎಸ್ಐ ಬಡ್ಡಿ ಮೊತ್ತವನ್ನು ತಡವಾಗಿ ಪಾವತಿಸಿರುವುದಕ್ಕೆ ಸಂಬಂಧಿಸಿದಂತೆ ದಂಡ ಮೊತ್ತ ರೂ.4,19,391/–ಗಳನ್ನು ಮಾರ್ಚ್–25 ಮಾಹೆಯ ವೋಚರ್ ಸಂಖ್ಯೆ:09 ಧನಾದೇಶ ಸಂಖ್ಯೆ:638374 ದಿ:04.03.2025 ರಲ್ಲಿ ಕಾರ್ಮಿಕ ರಾಜ್ಯ ವಿಮಾ ನಿಗಮಕ್ಕೆ ಪಾವತಿಸಲಾಗಿದೆ. ದಂಡ ಪಾವತಿಗೆ ಕಾರಣರಾದ ಅಧಿಕಾರಿ ಸಿಬ್ಬಂದಿಗಳ ವಿರುದ್ಧ ಕೈಗೊಂಡ ಕ್ರಮದ ಬಗ್ಗೆ ವಿವರಣೆ ಕೋರಿ ವಿಚಾರಣಾ ಪತ್ರ ಸಂಖ್ಯೆ:16/27.06.2025ನ್ನು ನೀಡಲಾಗಿತ್ತು. ವಿಶ್ವವಿದ್ಯಾನಿಲಯವು "ಬಡ್ಡಿ ಮೊತ್ತವನ್ನು ತಡವಾಗಿ ಪಾವತಿಸಿರುವುದಕ್ಕೆ ದಂಡ ಮೊತ್ತವನ್ನು ಮಾನ್ಯ ಕುಲಪತಿಗಳು ಕುಲಸಚಿವರ ಆದೇಶದ ಮೇರೆಗೆ ಪಾವತಿಸಲಾಗಿದೆ." ಎಂದು ಅನುಪಾಲನಾ ವರದಿ ನೀಡಿರುತ್ತಾರೆ.

ಮುಂದುವರೆದು, ದಿ:01.03.2011 ರಿಂದ 28.02.2016ರ ಅವಧಿಗೆ ESI ವಂತಿಕೆಯನ್ನು ಕಟಾಯಿಸದೇ ಇರುವುದಕ್ಕೆ ESI ನಿಯಮ 75(1)(ಜಿ) ಅನುಸಾರ Propasal Damages ಪಾವತಿಗಾಗಿ ಘನ ಉಚ್ಚನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿ ನ್ಯಾಯಾಲಯವು ಮೊತ್ತವನ್ನು ಪಾವತಿಸಬೇಕೆಂದು ಆದೇಶ ಮಾಡಲಾಗಿ ವೋಚರ್ ಸಂಖ್ಯೆ:211 ಧನಾದೇಶ ಸಂಖ್ಯೆ:638090 ದಿ:23.12.2024 ರಲ್ಲಿ ರೂ.5,55,818/–ಗಳನ್ನು ESI ಸಂಸ್ಥೆಗೆ ಪಾವತಿಸಲಾಗಿದೆ. ಈ ಬಗ್ಗೆ ವಿವರಣೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:77/05.08.2025ರಲ್ಲಿ ಕೋರಲಾಗಿ, ವಿಶ್ವವಿದ್ಯಾನಿಲಯದವರು "ಘನ ಉಚ್ಚನ್ಯಾಯಾಲಯವು Damages ಮೊತ್ತವನ್ನು ಪಾವತಿಸಲು ಸೂಚಿಸಿರುವುದರಿಂದ ಪಾವತಿಸಲಾಗಿದೆ" ಎಂದು ತಿಳಿಸಿರುತ್ತಾರೆ.

ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ–3ರ ಪ್ರಕಾರ ಸರ್ಕಾರದ ಅಧಿಕಾರಿ/ನೌಕರನ್ನು ತನ್ನ ಎಲ್ಲಾ ಆರ್ಥಿಕ ವಹಿವಾಟನ್ನು ಸರಿಯಾಗಿ ನಿರ್ವಹಿಸುವುದು ಮತ್ತು ಎಲ್ಲಾ ಖಾತೆಗಳು ಮತ್ತು ರಿಟರ್ನ್ಗಳನ್ನು ನಿಖರವಾಗಿ ಮತ್ತು ತ್ವರಿತವಾಗಿ ಸಲ್ಲಿಸುವುದು ಹಣ ಬಟವಾಡೆ ಅಧಿಕಾರಿಯ ಜವಾಬ್ದಾರಿಯಾಗಿರುತ್ತದೆ. ಆದರೇ ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ನಿಗದಿತ ಸಮಯದಲ್ಲಿ ಇಎಸ್ಐ ಮೊತ್ತ ಪಾವತಿಸದೇ, ವಿಧಿಸಿದ ಬಡ್ಡಿ ಮೊತ್ತವನ್ನು ಸಹ ಸಕಾಲಕ್ಕೆ ಪಾವತಿಸದೇ 2017 ರಿಂದ 2022 ರವರೆಗೆ ಅವಧಿಯ ಇಎಸ್ಐ ವಂತಿಗೆ ಮೊತ್ತಕ್ಕೆ ಬಡ್ಡಿವನ್ನು ತಡವಾಗಿ ಪಾವತಿಸಿದ್ದರಿಂದ ದಂಡ ಮೊತ್ತ ರೂ.4,19,391/–ಗಳನ್ನು ಹಾಗೂ Propasal Damages ಮೊತ್ತ **ರೂ.5,55,818/–ಗಳನ್ನು** ಪಾವತಿಸಿರುವುದಕ್ಕೆ ಸಂಬಂಧಿಸಿದವರನ್ನು ಹೊಣೆಗಾರರನ್ನಾಗಿಸಿ **ರೂ.9,75,209/–ಗಳನ್ನು ವಸೂಲಿ** ಮಾಡಲು ಸೂಚಿಸಿದೆ.

38.7. ಭದ್ರತಾ ಸೇವೆಯನ್ನು MS KSF–9 Corporate Service Pvt Ltd, Bengaluru ರವರಿಂದ ಪಡೆದು ಭದ್ರತಾ ಸೇವಾ ಶುಲ್ಕ ಪಾವತಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:196/7.11.2025)

ಸಾಮಾನ್ಯ ನಿಧಿ ಖಾತೆಯ ವೋಚರ್ಗಳನ್ನು ಪರಿಶೀಲಿಸಲಾಗಿ ಮುಕ್ತಗಂಗೋತ್ರಿ ಆವರಣದಲ್ಲಿರುವ ವಿವಿಧ ಕಟ್ಟಡಗಳು, ಜಿಲ್ಲಾ ಕೇಂದ್ರಗಳಲ್ಲಿರುವ ಪ್ರಾದೇಶಿಕ ಕೇಂದ್ರಗಳ ಸ್ಥಿರ ಮತ್ತು ಚರ ಆಸ್ತಿಗಳ ಸಂರಕ್ಷಣೆಗಾಗಿ ಭದ್ರತಾ ಸಿಬ್ಬಂದಿಗಳ ಸೇವೆ ಪಡೆದು ರೂ.3,35,14,370/–ಗಳನ್ನು MS KSF–9 Corporate Service Pvt Ltd, Bengaluru ರವರಿಗೆ ಪಾವತಿಸಲಾಗಿದೆ. ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ ಭದ್ರತಾ ಸಿಬ್ಬಂದಿಗಳ ಹುದ್ದೆ ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಭದ್ರತಾ ಸಿಬ್ಬಂದಿಗಳ ವಿವರ ಹಾಗೂ ಖಾಲಿ ಹುದ್ದೆಗೆ ಎದುರಾಗಿ MS KSF–9 Corporate Service Pvt Ltd, Bengaluru ರವರಿಂದ ಭದ್ರತಾ ಸಿಬ್ಬಂದಿ ಸೇವೆ ಪಡೆಯುತ್ತಿರುವ ಕುರಿತು ದಾಖಲೆಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:196/7.11.2025ರಲ್ಲಿ ಕೋರಲಾಗಿ, ವಿಶ್ವವಿದ್ಯಾನಿಲಯದ ಕಾರ್ಯಪಾಲಕ ಅಭಿಯಂತರರು ರಾಜ್ಯಾದಂತ ಅಗತ್ಯವಿರುವ ವಿವಿಧ ವೃಂದದ ಬೋಧಕೇತರ ಹುದ್ದೆಗಳಿಗೆ ಸರ್ಕಾರದ ಪೂರ್ವ ಅನುಮತಿ ಪಡೆದು 2007ನೇ ಸಾಲಿನಲ್ಲಿ ಸೃಜನೆ ಮಾಡಿ ತಾತ್ಕಾಲಿಕ ನೇಮಕ ಮಾಡಿಕೊಳ್ಳಲಾಗಿದೆ. ಹುದ್ದೆಗಳ ಸೃಜನೆ ಮಾಡುವ ಸಂದರ್ಭದಲ್ಲಿ ಭದ್ರತಾ ಹುದ್ದೆಗಳನ್ನು ಸೃಜನೆ ಮಾಡಿರುವುದಿಲ್ಲ ಆದುದರಿಂದ ಟೆಂಡರ್ ಆಹ್ವಾನಿಸಿ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸೇವೆ ಪಡೆಯಲಾಗಿದೆ ಎಂದು ಉತ್ತರ ನೀಡಿರುತ್ತಾರೆ.

ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 145 ಯುಎನ್ಇ 2021 ಬೆಂಗಳೂರು, ದಿನಾಂಕ: 06.04.2021ರಂತೆ ಮಂಜೂರಾದ ಹುದ್ದೆಗಳಲ್ಲಿ ಖಾಲಿ ಹುದ್ದೆಗಳಿಗೆ ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ತಾತ್ಕಾಲಿಕ ಆಧಾರದ ಮೇಲೆ ಬೋಧಕ ಮತ್ತು

ಬೋಧಕೇತರ ಸಿಬ್ಬಂದಿಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರದ ಅನುಮತಿಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಆದಾಗ್ಯೂ ಮಂಜೂರಾತಿ ಇಲ್ಲದ ಹುದ್ದೆಗಳಿಗೆ ಸರ್ಕಾರದಿಂದ ಅನುಮತಿ ಪಡೆಯದೆ ಹೊರಗುತ್ತಿಗೆ ಸೇವೆಪಡೆದು ವೇತನ ಪಾವತಿಸಲಾಗಿದೆ. ಹೀಗಾ **ಹೊರಗುತ್ತಿಗೆ ಮೂಲಕ ಭದ್ರತಾ ಸೇವೆ ಪಡೆದು** MS KSF–9 Corporate Service Pvt Ltd, Bengaluru ರವರಿಗೆ ಪಾವತಿಸಿರುವ ಮೊತ್ತ ರೂ.3,35,14,370/–ಗಳನ್ನು **ಆಕ್ಷೇಪಣೆಯಲ್ಲಿಡಲಾಗಿದೆ.**

38.8. ಸ್ವಯಂ ಕಲಿಕಾ ಸಾಮಗ್ರಿಗಳನ್ನು (SLM) ಬಾಹ್ಯ ಬರಹಗಾರರಿಂದ ಹೆಚ್ಚುವರಿಯಾಗಿ ಸಿದ್ಧಪಾಠಗಳನ್ನು ಬರೆಸಿ ಪಾವತಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ120/16.09.2025)

ವಿಶ್ವವಿದ್ಯಾನಿಲಯ ಅನುದಾನ ಆಯೋಗ (ಯುಜಿಸಿ)ದ ಅಧಿಸೂಚನೆ ಸಂಖ್ಯೆ: No. F. 1–1/2020(DEB–I)/ 04.09.2020ಯ ಭಾಗ–III ರ ಕ್ರ.ಸಂ.13(B)(ii) ರನ್ವಯ At least 60 per cent. of Self Learning Materials shall be developed by the in–house faculty of the Higher Educational Institution and the remaining per cent. of the materials can be sourced from available resources such as other Higher Educational Institutions, Open Educational Resources (OER), and SWAYAM, duly approved by the statutory authorities of the Higher Educational Institution ಎಂದು ಅಧಿಸೂಚಿಸಿರುತ್ತದೆ. ಇದರನ್ವಯ ಸ್ವಯಂ ಕಲಿಕಾ ಸಾಮಗ್ರಿಗಳನ್ನು (SLM) ಸಿದ್ಧಪಡಿಸಬೇಕಾಗಿರುತ್ತದೆ.

ಅದರಂತೆ ವಿಶ್ವವಿದ್ಯಾನಿಲಯದವರು ಸ್ವಯಂ ಕಲಿಕಾ ಸಾಮಗ್ರಿಗಳನ್ನು **ಕನಿಷ್ಠ ಶೇಕಡ 60** ರಷ್ಟನ್ನು ಆಂತರಿಕ ಬೋಧಕರಿಂದ ಸಿದ್ಧಪಡಿಸುವುದು ಹಾಗೂ ಉಳಿಕೆ (ಶೇಕಡ 40)ರಷ್ಟು ಸ್ವಯಂ ಕಲಿಕಾ ಸಾಮಗ್ರಿಗಳನ್ನು ಬಾಹ್ಯ ಮೂಲಗಳು ಮತ್ತು ಇನ್ನಿತರ ಮೂಲಗಳಿಂದ ಸಿದ್ಧಪಡಿಸಬೇಕಾಗಿರುತ್ತದೆ. ಆದರೆ, ವಿಶ್ವವಿದ್ಯಾನಿಲಯವು ಸದರಿ ನಿಯಮವನ್ನು ಉಲ್ಲಂಘಿಸಿ, 2024–25ನೇ ಆರ್ಥಿಕ ವರ್ಷಗಳಲ್ಲಿ ಅನುಬಂಧ–58 ರಲ್ಲಿ ವಿವರಿಸಿರುವಂತೆ ಕನಿಷ್ಠ ಶೇ. 60 ಕ್ಕಿಂತ ಕಡಿಮೆ ಸ್ವಯಂ ಕಲಿಕಾ ಸಾಮಗ್ರಿಗಳನ್ನು (SLM) ಆಂತರಿಕ ಬೋಧಕರಿಂದ ಸಿದ್ಧಪಡಿಸಿರುವುದು ಹಾಗೂ **ಶೇ.40**ಕ್ಕಿಂತ ಅಧಿಕ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಬಾಹ್ಯ ಬರಹಗಾರರಿಂದ ಸಿದ್ಧಪಡಿಸಿರುವುದರಿಂದ ಹೆಚ್ಚುವರಿಯಾಗಿ ಮೊತ್ತ **ರೂ.1,47,15,000/–ಗಳನ್ನು** ಪಾವತಿಸಲಾಗಿದೆ. ಹೀಗೆ ವಿಶ್ವವಿದ್ಯಾನಿಲಯದ ಅನುದಾನ ಆಯೋಗ (ಯುಜಿಸಿ)ದ ಅಧಿಸೂಚನೆಯನ್ನು ಉಲ್ಲಂಘಿಸಿ ಹೆಚ್ಚುವರಿಯಾಗಿ ಪಾವತಿಸಿರುವುದಕ್ಕೆ ವಿವರಣೆಯನ್ನು ಕೋರಿ ನೀಡಲಾದ ವಿಚಾರಣಾ ಪತ್ರ ಸಂಖ್ಯೆ120/16.09.2025 ನ್ನು ಜಾರಿಮಾಡಲಾಗಿ ವಿಶ್ವವಿದ್ಯಾನಿಲಯದವರು "ಸಿದ್ಧಪಾಠಗಳ ಗುಣಮಟ್ಟ, ವಿಷಯ ವಿಶ್ಲೇಷಣೆಗೆ ನುರಿತ ತಜ್ಞರು ಮತ್ತು ಪರಿಣತರಿಂದ ಬರವಣಿಗೆ ಮಾಡಿಸಬೇಕಾಗಿರುತ್ತದೆ ಹಾಗೂ ಕೆಲವು ವಿಭಾಗಗಳಲ್ಲಿ ಖಾಯಂ ಪ್ರಾಧ್ಯಾಪಕರು ಕಡಿಮೆ ಇರುವುದರಿಂದ ಹೆಚ್ಚಿನ ಕಾರ್ಯದೊತ್ತಡ ತಪ್ಪಿಸಲು ಹಾಗೂ ವಿಶ್ವವಿದ್ಯಾನಿಲಯದ ಆದೇಶದಂತೆ ಸಿದ್ಧಪಾಠ ಬರವಣಿಗೆ ಮಾಡಲಾಗಿದೆ" ಎಂದು ಅನುಪಾಲನಾವರದಿ ನೀಡಿರುತ್ತಾರೆ.

ಸ್ವಯಂ ಕಲಿಕಾ ಸಾಮಗ್ರಿಗಳನ್ನು (SLM) ಸಿದ್ಧಪಡಿಸುವುದು ಆಂತರಿಕ ಬೋಧಕರ ಆದ್ಯ ಕರ್ತವ್ಯವಾಗಿದ್ದು, ಮೇಲಿನ ವಿಶ್ವವಿದ್ಯಾನಿಲಯದ ಅನುದಾನ ಆಯೋಗ (ಯುಜಿಸಿ)ದ ಅಧಿಸೂಚನೆಯನ್ವಯ **ಕನಿಷ್ಠ ಶೇ.60 ರಷ್ಟನ್ನಾದರು** ಸಿದ್ಧಪಡಿಸಬೇಕಾಗಿರುತ್ತದೆ. ಆದರೆ ಕನಿಷ್ಠ ಶೇ.60 ರಷ್ಟನ್ನೂ ಸಿದ್ಧಪಡಿಸದೇ ಬಾಹ್ಯ ಬರಹಗಾರರಿಂದ ಹೆಚ್ಚುವರಿಯಾಗಿ ಸಿದ್ಧಪಡಿಸಿಕೊಂಡಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಒಟ್ಟು **ರೂ.1,47,15,000/–ಗಳ** ಆರ್ಥಿಕ ನಷ್ಟವಾಗಿರುತ್ತದೆ. ವಿಶ್ವವಿದ್ಯಾನಿಲಯಕ್ಕೆ ನಷ್ಟವಾಗಿರುವ ಮೊತ್ತವನ್ನು ಈ ನಷ್ಟಕ್ಕೆ ಕಾರಣರಾದ ಡೀನ್ (ಶೈಕ್ಷಣಿಕ)ರವರನ್ನು ಹೊಣೆಗಾರರನ್ನಾಗಿಸಿ **ವಸೂಲಿ** ಮಾಡಿ ವಿಶ್ವವಿದ್ಯಾನಿಲಯಕ್ಕೆ ಜಮೆ ಮಾಡಲು ಸೂಚಿಸಿದೆ.

38.9. ವಿಶ್ವವಿದ್ಯಾನಿಲಯದಲ್ಲಿ Digital Academic Platform ಸೇವೆ ಪಡೆದು ಸೇವಾ ಶುಲ್ಕ ಪಾವತಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:71/ದಿ:29.07.2025 ಮತ್ತು 139/ದಿ:25.09.2025)

ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ಸಂಪೂರ್ಣ ಪೆಪರ್ ಲೆಸ್ ಮಾಡಿ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರುಗಳು ಸಮಾಲೋಚನೆ ನಡೆಸಲು ಅನುಕೂಲವಾಗುವ ಉದ್ದೇಶದಿಂದ Digital Academic Platform ಸೇವೆಯನ್ನು ಪಡೆಯಲು ಜೆಮ್ ಪೋರ್ಟಲ್‌ನಲ್ಲಿ ದಿನಾಂಕ:09.03.2023 ರಂದು ಬಿಡ್ ಆಹ್ವಾನಿಸಿ ಮೆ: Edu Easy India

Pvt Ltd. Hubballi ಇವರೊಂದಿಗೆ ಪ್ರತಿ ವಿದ್ಯಾರ್ಥಿಗೆ ರೂ.287/–ರಂತೆ ದಿನಾಂಕ:29.03.2023ರಂದು ಕರಾರು ಒಪ್ಪಂದ ಮಾಡಿಕೊಂಡು 2024–25ನೇ ಸಾಲಿನಲ್ಲಿ ಕೆಳಗಿನಂತೆ ಪಾವತಿಸಲಾಗಿದೆ.

ಕ್ರಮ.ಸಂ	ಚೆಕ್ ಸಂಖ್ಯೆ/ದಿನಾಂಕ	ವೋಚರ್ ಸಂ./ದಿನಾಂಕ	ಬಿಲ್ಲು ವಿವರ	ಮೊತ್ತ ರೂ.ಗಳಲ್ಲಿ
1	HDFC 313340/12.06.2024	85/12.06.2024	50866 ವಿದ್ಯಾರ್ಥಿಗಳ ಮಾಹಿತಿಯನ್ನು Digital Academic Platform ಲ್ಲಿ ಮಾಹಿತಿ ಅಳವಡಿಸಿರುವುದು.	1,45,98,522/-
2	SBI 637989/27.11.2024	161/27.11.2024	25566 ವಿದ್ಯಾರ್ಥಿಗಳ ಮಾಹಿತಿಯನ್ನು Digital Academic Platformಲ್ಲಿ ಮಾಹಿತಿ ಅಳವಡಿಸಿರುವುದು.	73,37,432/-
			ಒಟ್ಟು	2,19,35,954/-

Digital Academic Platform ಸೇವೆ ಪಡೆದಿರುವ ಕಡತ ಪರಿಶೀಲಿಸಿದಾಗ ಕೆಳಗಿನ ಅಂಶಗಳಿಗೆ ವಿವರಣೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:71/ದಿ:29.07.2025 ಮತ್ತು 139/ದಿ:25.09.2025 ರನ್ನು ಜಾರಿ ಮಾಡಲಾಗಿರುತ್ತದೆ.

1. ವಿಶ್ವವಿದ್ಯಾನಿಲಯದ ಬೋಧಕರಿಂದ Digital Academic Platform ಅವಶ್ಯಕತೆ ಬಗ್ಗೆ ಅಭಿಪ್ರಾಯ ಪಡೆದಿರುವ ಪತ್ರಗಳು.

2. ಸೇವೆಗಳನ್ನು ಪಡೆಯಲು ತಯಿಸ್ಯಯದಲ್ಲಿ ಅವಕಾಶ ಮಾಡಿಕೊಂಡಿರುವ ವಿವರ.

3. ವಿಶ್ವವಿದ್ಯಾನಿಲಯದಲ್ಲಿ "Admission to Examination END to END ERP Software" ಅನ್ನು ಪ್ರತ್ಯೇಕವಾಗಿ ಸುಮಾರು ರೂ.3.00 ಕೋಟಿ ವೆಚ್ಚದಲ್ಲಿ ಸಿದ್ದಪಡಿಸಿದ್ದು, ಸದರಿ ತಂತ್ರಾಂಶದಲ್ಲಿ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುವಾಗ ಎಲ್ಲಾ ಮಾಹಿತಿಯನ್ನು ಅಳವಡಿಸಿ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಪಡೆಯಬಹುದಾಗಿರುತ್ತದೆ. ಆದುದರಿಂದ Digital Academic Platform–Completion of certain task related to internal Assessment marks and student data for Various semester" ಎಂಬ ಸೇವೆಯನ್ನು "Admission to Examination" ತಂತ್ರಾಂಶದಲ್ಲಿಯೇ ಅಳವಡಿಸಿಕೊಳ್ಳಬಹುದಾಗಿತ್ತು. ಆದಾಗ್ಯೂ "MS Edu easy india pvt ltd ರವರಿಗೆ ಪ್ರತಿ ವಿದ್ಯಾರ್ಥಿಗೆ ರೂ.287/– ಗಳಂತೆ 76,432 ವಿದ್ಯಾರ್ಥಿಗಳಿಗೆ 2024–25ನೇ ಸಾಲಿನಲ್ಲಿ ರೂ.2,19,35,954/– ಗಳನ್ನು ಪಾವತಿಸಿರುವುದಕ್ಕೆ ವಿವರಣೆ.

4. ಪ್ರತಿ ವಿದ್ಯಾರ್ಥಿಗೆ Digital Academic Platform ನ್ನು ಸಿದ್ದಪಡಿಸಲು ರೂ.287/–ರಂತೆ ದರ ನಿಗದಿಪಡಿಸಿರುವುದಕ್ಕೆ ಪರಿಗಣಿಸಿರುವ ಮಾನದಂಡಗಳು.

5. ಸೇವೆಗಳನ್ನು ಪಡೆಯಲು ವಿಶ್ವವಿದ್ಯಾನಿಲಯದ ಕುಲಸಚಿವರಿಗೆ ಹಾಗೂ ಕುಲಪತಿಗಳಿಗೆ ಆರ್ಥಿಕ ಪ್ರತ್ಯಾಯೋಜನೆ ಪರಿನಿಯಮಗಳು

6. ಕಾರ್ಯಾದೇಶ ನೀಡಿದ ದಿನಾಂಕ:09.03.2023 ರಿಂದ ಮಾರ್ಚ್–2025ರವರೆಗೆ MS Edu easy india pvt ltdರವರಿಗೆ ಎಷ್ಟು ವಿದ್ಯಾರ್ಥಿಗಳಿಗೆ Digital Academic Platform ತಂತ್ರಾಂಶದಲ್ಲಿ ಸೇವೆಯನ್ನು ನೀಡಲಾಗಿದೆ ಎಂಬ ವಿವರ ಹಾಗೂ ಬಿಲ್ಲುಗಳನ್ನು ಪಾವತಿಸುವಾಗ ವಿಷಯವಾರು ವಿಭಾಗವಾರು ವಿದ್ಯಾರ್ಥಿಗಳಿಗೆ Digital Academic

Platform ಅಳವಡಿಸಿ ಉಪಯೋಗಿಸುತ್ತಿರುವ ಬಗ್ಗೆ ಸಂಬಂಧಪಟ್ಟ ವಿಭಾಗ ಮುಖ್ಯಸ್ಥರಿಂದ ದೃಢೀಕರಣವನ್ನು ಹಾಜರುಪಡಿಸಿರುವುದು.

7. ಸರ್ಕಾರಿ ಆದೇಶ ಸಂಖ್ಯೆ:FD611 EXP–12/2023 ಬೆಂಗಳೂರು ದಿನಾಂಕ:03.02.2024ರನ್ವಯ ಶೇ.5 ರಷ್ಟು ರೂ.10,96,799/–ಭದ್ರತಾ ಠೇವಣಿ ಪಡೆಯಬೇಕಾಗಿದ್ದು, ಭದ್ರತಾ ಠೇವಣಿಯನ್ನು ಕೇವಲ ರೂ.9/– ಗಳನ್ನು ಮಾತ್ರ ಪಡೆದಿದ್ದು, ಕಾರಣ ಶೇ.5 ರಂತೆ ಭದ್ರತಾ ಠೇವಣಿ ಪಡೆಯಲು ಸೂಚಿಸಿದೆ.

8. ವಿಶ್ವವಿದ್ಯಾನಿಲಯದಲ್ಲಿ ಪ್ರತ್ಯೇಕ ಅಧಿಕಾರ ಪ್ರತ್ಯಾಯೋಜನೆ ಇಲ್ಲದ ಕಾರಣ, ಸರ್ಕಾರದ ಸಾಮಾನ್ಯ ವಿತ್ತಾಧಿಕಾರದ ಸರ್ಕಾರಿ ಆದೇಶ ಸಂಖ್ಯೆ:FD08TFP2023 dated: 28.10.2024 ರನ್ವಯ Divisional Level Officers ಗೆ 1.00 ಕೋಟಿ ಮೌಲ್ಯ ಹಾಗೂ ಇಲಾಖಾ ಮುಖ್ಯಸ್ಥರಿಗೆ 2.5 ಕೋಟಿ ಮೌಲ್ಯದ ಅಂದಾಜು ಮೊತ್ತದ ಸರಕು ಮತ್ತು ಸೇವೆಯ ಸಂಗ್ರಹಣೆಗೆ ಅವಕಾಶವಿರುತ್ತದೆ. ಮೇಲಿನ ಸೇವೆಗೆ ಈಗಾಗಲೇ 4 ಕೋಟಿಗೂ ಹೆಚ್ಚಿನ ಮೊತ್ತ ಪಾವತಿಸಲಾಗಿರುತ್ತದೆ. ಹಾಗಾಗಿ ಸರ್ಕಾರದಿಂದ ಅನುಮೋದನೆ ಪಡೆದಿರುವ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

ವಿಶ್ವವಿದ್ಯಾನಿಲಯದವರು ಅನುಪಾಲನಾ ವರದಿಯಲ್ಲಿ ವ್ಯವಸ್ಥಾಪನಾ ಮಂಡಲಿ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸದರಿ ಸೇವೆಯನ್ನು ಅಳವಡಿಸಿಕೊಳ್ಳಲಾಗಿದೆ, ದರ ನಿಗದಿಯ ಬಗ್ಗೆ Technical Experts Committeನ ಸಭೆಯ ತೀರ್ಮಾನದಂತೆ ವ್ಯವಸ್ಥಾಪನ ಮಂಡಲಿ ಸಭೆಯಲ್ಲಿ ಅನುಮೋದನೆ ಪಡೆದು ಕ್ರಮವಹಿಸಲಾಗಿದೆ. Digital Academic Platform ಸೇವೆ ಹಾಗೂ "Admission to Examination END to END ERP Software ಬೇರೆ ಬೇರೆ ಸೇವೆಗಳು ಎಂದು ತಿಳಿಸಿರುತ್ತಾರೆ.

ಮುಂದುವರೆದು, Digital Academic Platform ಸೇವೆಯನ್ನು ಶೈಕ್ಷಣಿಕ ಚಟುವಟಿಕೆಗಳನ್ನು ಪೇಪರ್‌ಲೆಸ್ ಮಾಡಲು ವಿದ್ಯಾರ್ಥಿಗಳಿಗೆ ಮಾಹಿತಿ ತಿಳಿಸಲು, ವಿಡಿಯೋ ತರಗತಿಗಳನ್ನು ನಡೆಸಲು, ಸಿದ್ಧಪಾಠಗಳನ್ನು ನೀಡಲು ಹಾಗೂ ಇತ್ಯಾದಿ ಉದ್ದೇಶಕ್ಕಾಗಿ ಬಳಸಲಾಗಿರುತ್ತದೆ. ಆದರೆ 2024–25ನೇ ಸಾಲಿನಲ್ಲಿ ಸಿದ್ಧಪಾಠಗಳ ಮುದ್ರಾಣಕ್ಕಾಗಿ ರೂ.2,88,93,404/– ಸಂಪರ್ಕ ಕಾರ್ಯಕ್ರಮಕ್ಕೆ ರೂ.1,05,99,102/–ಗಳ ವೆಚ್ಚಭರಿಸಲಾಗಿದೆ. ಆಧುನಿಕ ತಂತ್ರಜ್ಞಾನದ ಬಳಕೆ ಮಾಡುವಾಗ ವೆಚ್ಚಗಳು ಕಡಿಮೆಯಾಗಬೇಕು. ಹೀಗೆ ಹಿಂದಿನ ವ್ಯವಸ್ಥೆ ಹಾಗೂ ಆಧುನಿಕ ವ್ಯವಸ್ಥೆ ಎರಡು ವೆಚ್ಚ ಮಾಡುವುದರಿಂದ ಹೆಚ್ಚುವರಿ ವೆಚ್ಚಮಾಡಿದಂತಾಗುತ್ತದೆ. ಅಲ್ಲದೇ ಪ್ರವೇಶಾತಿ ಪಡೆದ ನಂತರ ವಿದ್ಯಾರ್ಥಿಗಳ ವಿವರವನ್ನು ಪುನಃ Digital Academic Platform ನಲ್ಲಿ ದಾಖಲಿಸಿ ಪ್ರತಿ ವಿದ್ಯಾರ್ಥಿಗೆ Platform ಸೃಜನೇ ಮಾಡಲಾಗುತ್ತಿದೆ. ಪ್ರವೇಶಾತಿ ಸಾಫ್ಟ್‌ವೇರ್‌ನಲ್ಲಿಯೇ ಈ ಸೇವೆಯನ್ನು ಅಭಿವೃದ್ಧಿ ಪಡಿಸಬಹುದಾಗಿತ್ತು. ಹಾಗೂ ಮೆ: Edu Easy India Pvt Ltd. Hubballi ಇವರು ನೀಡಿರುವ ಪತ್ರದಲ್ಲಿನ ಅಂಶಗಳನ್ನು ಹಾಗೂ ಪ್ರತಿ ವಿದ್ಯಾರ್ಥಿಗೆ ರೂ.287/– ದರ ಅದನ್ನೇ ಯಥಾವತ್ತಾಗಿ ಟೆಂಡರ್ ದಾಖಲೆಗಳಲ್ಲಿ ಷರತ್ತು ವಿಧಿಸಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಈ ಎಲ್ಲಾ ಅಂಶಗಳಿಂದ ಇದು ಅನಾವಶ್ಯಕ ವೆಚ್ಚವೆಂದು ಹಾಗೂ ಮೇಲೆ ತಿಳಿಸಿರುವ ನ್ಯೂನತೆಗಳಿಗೆ ದಾಖಲೆ/ಆದೇಶಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸುವವರೆಗೆ 2024–25ನೇ ಸಾಲಿನಲ್ಲಿ ಮೆ: Edu Easy India Pvt Ltd. Hubballi ಇವರಿಗೆ ಪಾವತಿಯಾದ ಒಟ್ಟು **ರೂ.2,19,35,954/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

38.10. Studio equipments & Video Conference unitಗಳನ್ನು ಖರೀದಿ ಮಾಡಿ ವೆಚ್ಚ ಭರಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:146/ದಿ:03.10.2025 ಮತ್ತು 165/ದಿ:15.10.2025)

Studio equipments & Video Conference unit ಅನ್ನು ಜೆಮ್ ಮೂಲಕ ಟೆಂಡರ್ ಆಹ್ವಾನಿಸಿ M/S Sumukha Office Solutions ರವರಿಂದ ಖರೀದಿಸಿ ಡಿಸೆಂಬರ್–2025ರ ಮಾಹೆಯ ವೋಚರ್ ಸಂಖ್ಯೆ:82 ಚೆಕ್ ಸಂಖ್ಯೆ:638040 ದಿ:09.12.2024ರಲ್ಲಿ ರೂ.99,05,000/–ಗಳನ್ನು ಪಾವತಿಸಲಾಗಿದೆ. ಸದರಿ ಪಾವತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳಿಗೆ ವಿವರಣೆ/ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:146/ದಿ:03.10.2025 ಮತ್ತು 165/ ದಿ:15.10.2025ಅನ್ನು ಜಾರಿ ಮಾಡಲಾಗಿ ವಿಶ್ವವಿದ್ಯಾನಿಲಯವು ನೀಡಿರುವ ಉತ್ತರಗಳನ್ನು ಅಳವಡಿಸಲಾಗಿದೆ.

1. ದಿ:22.01.2024ರಂದು ಕಾರ್ಯಾದೇಶ ನೀಡಲಾಗಿದ್ದು, ಬ್ಯಾಂಕ್ ಗ್ಯಾರಂಟಿಯನ್ನು ದಿ:21.11.2024ರಂದು ಪಡೆಯಲಾಗಿದ್ದು, ಕಾರ್ಯಾದೇಶ ನೀಡಿ 10 ತಿಂಗಳ ನಂತರ ಬ್ಯಾಂಕ್ ಗ್ಯಾರಂಟಿ ಪಡೆದಿರುವುದಕ್ಕೆ ವಿವರಣೆ ಹಾಗೂ ಸರ್ಕಾರಿ ಆದೇಶ ಸಂಖ್ಯೆ:FD611

EXP-12/2023 ಬೆಂಗಳೂರು ದಿ:03.02.2024ರನ್ವಯ ಶೇ.5 ರಷ್ಟು ಭದ್ರತಾ ಠೇವಣಿ ಪಡೆಯಬೇಕಾಗಿದ್ದು, ಶೇ.3 ರಷ್ಟು ಭದ್ರತಾ ಠೇವಣಿ ಪಡೆದಿರುವುದಕ್ಕೆ ವಿವರಣೆ ಹಾಗೂ Bank Confirmation ಅನ್ನು ಹಾಜರುಪಡಿಸಲು ಕೋರಲಾಗಿ, ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಬಾಕಿ ಶೇ.2 ನ್ನು ಭದ್ರತಾ ಠೇವಣಿ ಪಡೆಯಲಾಗುವುದು ಎಂದು ಅನುಪಾಲನಾ ವರದಿ ನೀಡಿರುತ್ತಾರೆ.

2. ಜಿಲ್ ದಿ:22.01.2024 ಇದ್ದು, ಯಾವ ದಿನಾಂಕದಲ್ಲಿ ಸರಬರಾಜು ಮಾಡಲಾಗಿದೆ ಹಾಗೂ 11 ತಿಂಗಳು ತಡವಾಗಿ ಬಿಲ್ಲು ಪಾವತಿ ಮಾಡಿರುವುದಕ್ಕೆ ವಿವರಣೆ ಕೋರಲಾಗಿ, ಸರಬರಾಜುದಾರರು ತಡವಾಗಿ ಹುಂಡಿ ಸಲ್ಲಿಸಿದ ಕಾರಣ ತಡವಾಗಿ ಹುಂಡಿ ಪಾವತಿಸಲಾಗಿದೆ ಎಂದು ತಿಳಿಸಿದ್ದು, ಬಜೆಟ್ ಕೈಪಿಡಿ ನಿಯಮದಲ್ಲಿ ಆರ್ಥಿಕ ವರ್ಷಾಂತ್ಯಕ್ಕೆ ಬಾಕಿಯಿರುವ ಹೊಣೆಗಾರಿಕೆ ವಿವರವನ್ನು ಸಿದ್ಧಪಡಿಸಬೇಕಾಗಿದ್ದು, ಸದರಿ ಕ್ರಮ ಅನುಸರಿಸಿರುವುದಿಲ್ಲ.

3. ದೃಶ್ಯ ಸ್ಟುಡಿಯೋ ವಿಭಾಗದಲ್ಲಿ ಸಲಕರಣೆಗಳನ್ನು ದಾಸ್ತಾನಿಗೆ ತಗೆದುಕೊಂಡು ಉಪಯೋಗಿಸುತ್ತಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುವಂತೆ ಕೋರಲಾಗಿ ಐಟಿ ವಿಭಾಗದಲ್ಲಿ ದಾಸ್ತಾನು ಪಡೆದಿರುವ ವಿವರವನ್ನು ಹಾಜರುಪಡಿಸಿರುತ್ತಾ ಆದರೆ, ದೃಶ್ಯ ಸ್ಟುಡಿಯೋ ವಿಭಾಗದಲ್ಲಿ ದಾಸ್ತಾನು ಪಡೆದಿರುವ ದಾಖಲೆ ಹಾಜರುಪಡಿಸಿರುವುದಿಲ್ಲ.

4. ಸದರಿ ಸಲಕರಣೆಗಳನ್ನು ಬಳಸಿಕೊಂಡು ಎಷ್ಟು ವಿಡಿಯೋಗಳನ್ನು ತಯಾರಿಸಲಾಗಿದೆ ಹಾಗೂ ಸದರಿ ವಿಡಿಯೋಗಳನ್ನು ವಿದ್ಯಾರ್ಥಿಗಳು ಬಳಕೆ ಮಾಡಿರುವ ಕುರಿತು ವರದಿಗಳನ್ನು ದೃಶ್ಯ ಸ್ಟೂಡಿಯೋ ವಿಭಾಗದಿಂದ ಪಡೆಯಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ.

5. ಬಿಲ್ಲಿನ ಕ್ರಮ ಸಂಖ್ಯೆ:57 ರಲ್ಲಿ ಸಾರಿಗೆ ವೆಚ್ಚ ರೂ.25,000/-ಗಳನ್ನು ಪಾವತಿಸಲಾಗಿದೆ. ಕರಾರಿನಲ್ಲಿ Supply and Installation ಎಂದು ಆದೇಶಿಸಲಾಗಿರುವುದರಿಂದ ಸಾಗಾಣಿಕ ವೆಚ್ಚವನ್ನು ಸರಬರಾಜು ಸಂಸ್ಥೆಯು ಭರಿಸದೇ ಹೆಚ್ಚುವರಿ ವೆಚ್ಚ ವಿಧಿಸಿರುವುದಕ್ಕೆ ವಿವರಣೆ ಕೋರಲಾಗಿದೆ ಸದರಿ ಸಂಸ್ಥೆಯವರ ಮುಂಬರುವ ಹುಂಡಿಯಲ್ಲಿ ಏಟಾಯಿಸಲಾಗುವುದು ಎಂದು ಉತ್ತರ ನೀಡಿರುತ್ತಾರೆ.

ಕರ್ನಾಟಕ ಆರ್ಥಿಕ ಸಂಹಿತೆ 1958ರ ಆರ್ಟಿಕಲ್ 15 ರ ಉಲ್ಲಂಘನೆಯಾಗಿ ಹೆಚ್ಚುವರಿಯಾಗಿ ಪಾವತಿಸಿರುವ ಸಾಕಾಣಿಕ ವೆಚ್ಚ **ರೂ.25,000/-ಗಳನ್ನು ವಸೂಲಿಸಲು ಹಾಗೂ ರೂ.98,80,000/- ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.**

38.11. ಫೋಟೋ ಕಾಪಿಯರ್ ಯಂತ್ರಗಳಿಗೆ ವಾರ್ಷಿಕ ನಿರ್ವಹಣೆಯ ಸರ್ವೀಸ್ ಕಾರ್ಯ ನಿರ್ವಹಿಸಿರುವುದಕ್ಕೆ ಪಾವತಿಮಾಡಿರುವುದು: (ವಿಚಾರಣಾ ಪತ್ರ ಸಂಖ್ಯೆ:129/ದಿ:22.09.2025)

ವಿಶ್ವವಿದ್ಯಾನಿಲಯದಲ್ಲಿ ವಿವಿಧ ವಿಭಾಗ ಹಾಗೂ 36 ಪ್ರಾದೇಶಿಕ ಕೇಂದ್ರಗಳಿಗೆ ಒಟ್ಟು 93 ಫೋಟೋ ಕಾಪಿಯರ್ ಯಂತ್ರಗಳು ಇರುತ್ತವೆ. ಅದರಲ್ಲಿ 69 ಫೋಟೋ ಕಾಪಿಯರ್ ಯಂತ್ರಗಳ ನಿರ್ವಹಣೆಗಾಗಿ ಮೂರು ವರ್ಷಗಳ ಅವಧಿಗೆ ರೂ.74,15,872/- ಕರಾರು ಮಾಡಿಕೊಂಡು, ಈ ಕೆಳಗಿನಂತೆ MS Sumukha Office Solutions, Mysuru ರವರಿಗೆ ಪಾವತಿಸಲಾಗಿದೆ.

ಕ್ರ.ಸಂ	ವೋಚರ್ ಸಂಖ್ಯೆ/ಮಾಹೆ	ಚೆಕ್ಕೆ ಸಂಖ್ಯೆ /ದಿನಾಂಕ	ಮೊತ್ತ ರೂ.ಗಳಲ್ಲಿ	ವಿವರ
01	92/ನವೆಂಬರ್-2024	637964 ದಿ:19.11.2024	6,17,989/-	ಮೊದಲ ಹಂತ
02	96/ಫೆಬ್ರವರಿ-2025	638294 ದಿ:12.02.2025	6,17,989/-	ಎರಡನೇ ಹಂತ
03	373/ಮಾರ್ಚ್-2025	638473 ದಿ:28.03.2025	6,17,989/-	ಮೂರನೇ ಹಂತ

ಒಟ್ಟು	ರೂ.18,53,967/-	

ಸದರಿ ಪಾವತಿಗೆ ಸಂಬಂಧಿಸಿದಂತೆ ಟೆಂಡರ್ ಕಡತವನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳಿಗೆ ವಿವರಣೆ/ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:129/ದಿ:22.09.2025ನ್ನು ನಿಡಲಾಗಿರುತ್ತದೆ.

01. ಟೆಂಡರ್ ದಾಖಲೆಗಳಲ್ಲಿನ Scope of work ನಲ್ಲಿ The bidder will Provide the spares Hot roller, Pressure Roller etc...ಎಂದು ತಿಳಿಸಿ, As per this AMC the bidder will Charge consumables like Drum, Developer, Toner, and Spares are Trays, Cover Tray Handle, bypass Unit, Side Dore, A indication Cover & Power supply unit ಎಂದು ತಿಳಿಸಲಾಗಿದೆ. AMC ನಲ್ಲಿ consumables (ಟೋನರ್ ಹೊರತು ಪಡಿಸಿ) ಅನ್ನು ಸಹ ಒಳಗೊಂಡಂತೆ ಟೆಂಡರ್ ಆಹ್ವಾನಿಸಬಹುದಾಗಿರುತ್ತದೆ. ಫೋಟೋ ಕಾಪಿಯರ್ ಯಂತ್ರದಲ್ಲಿ ಸಾಮಾನ್ಯವಾಗಿ ದುರಸ್ಥಿಗೆ ಬರುವುದೇ Drum, Developer ಇವುಗಳನ್ನೇ ಹೊರತುಪಡಿಸಿ AMC ಪಡೆಸಿರುವುದು ಸಮಂಜಸವಲ್ಲ. Drum, Developer, Toner, and Spares are Trays, Cover Tray Handle, bypass Unit, Side Dore, indication Cover & Power supply unit ಗಳನ್ನು ಯಾವ ಆಧಾರದ ಮೇಲೆ consumables ಎಂದು ಪರಿಗಣಿಸಲಾಗಿದೆ ಎಂಬುದಕ್ಕೆ ವಿವರಣೆ ಕೋರಿಲಾಗಿ, ತಾಂತ್ರಿಕ ಪರಿಣಿತರ ಸಭೆಯ ತಿರ್ಮಾನದಂತೆ Consumables ಎಂದು ಪರಿಗಣಿಸಲಾಗಿದೆ ಎಂದು ಉತ್ತರಿಸಿರುತ್ತಾರೆ.

02. ಸರ್ಕಾರಿ ಆದೇಶ ಸಂಖ್ಯೆ:FD611 EXP-12/2023 ಬೆಂಗಳೂರು ದಿ:03.02.2024ರನ್ವಯ ಶೇ.5 ರಷ್ಟು ಭದ್ರತಾ ಠೇವಣಿ ಪಡೆಯಬೇಕಾಗಿದ್ದು, ಕೇಲವ ಶೇ.3ರಷ್ಟು ಇಎಂಡಿ ಮೊತ್ತ ಪಡೆದಿರುವುದಕ್ಕೆ ವಿವರಣೆ ಹಾಗೂ E-PBG No.00566EPGE2429501 ಮೊತ್ತ ರೂ.2,22,476/-ಗಳಿಗೆ ಸಂಬಂಧಿಸಿದಂತೆ ದಾಕಿ Bank Confirmation ಅನ್ನು ಹಾಜರುಪಡಿಸಲು ಕೋರಲಾಗಿ, ಶೇ.2 ರಷ್ಟನ್ನು ಭದ್ರತಾ ಠೇವಣಿ ಪಡೆಯಲಾಗುವುದು ಎಂದು ತಿಳಿಸಿದ್ದು Bank Confirmation ಹಾಜರುಪಡಿಸಿರುವುದಿಲ್ಲ.

03. ಕಾರ್ಯಾದೇಶವನ್ನು ದಿ:22.01.2024 ರಂದು ನೀಡಲಾಗಿದ್ದು, E-PBG ಅನ್ನು ದಿ:21.10.2024 ರಂದು ಪಡೆಯಲಾಗಿದ್ದು, ತಡವಾಗಿ ಪಡೆದಿರುವುದಕ್ಕೆ ವಿವರಣೆಯನ್ನು ಕೋರಲಾಗಿ, ಸಂಸ್ಥೆಯವರು ತಡವಾಗಿ ಸಲ್ಲಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.

04. 2021-22, 2022-23 ಹಾಗೂ 2023-24ನೇ ಸಾಲಿನಲ್ಲಿ ಫೋಟೋ ಕಾಪಿಯರ್‌ಗಳ ದುರಸ್ಥಿಗೆ ಭರಿಸಿರುವ ವೆಚ್ಚದ ಮಾಹಿತಿಯನ್ನು ಕೋರಲಾಗಿ 2019ನೇ ಸಾಲಿನಲ್ಲಿ ಸುಮಾರು 2 ಲಕ್ಷ ವೆಚ್ಚ ಮಾಡಿರುವುದಕ್ಕೆ ಕಛೇರಿ ಆದೇಶಗಳನ್ನು ಸಲ್ಲಿಸಿರುತ್ತಾರೆ.

05. ಅಂದಾಜು ಮೊತ್ತವನ್ನು ಸಿದ್ಧಪಡಿಸಿದಕ್ಕೆ ವಿವರಗಳನ್ನು ಹಾಜರುಪಡಿಸಿರುವುದಿಲ್ಲ.

06. ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿರುವ ಒಟ್ಟಾರೆ ಫೋಟೋ ಕಾಪಿಯರ್ ಯಂತ್ರಗಳ ವಿವರನ್ನು ಖರೀದಿ ವರ್ಷ ಹಾಗೂ ಇತ್ಯಾದಿ ವಿವರಗಳನ್ನು ಕೋರಲಾಗಿ ಕೇವಲ 93 ಕಾಪಿಯರ್ ಯಂತ್ರಗಳ ಪಟ್ಟಿ ನೀಡಲಾಗಿರುತ್ತದೆ. ಹಾಗಾಗಿ 69 ಕಾಪಿಯರ್ ಯಂತ್ರಗಳನ್ನು ಮಾತ್ರ ಏಕೆ ನಿರ್ವಹಣೆ ನೀಡಲಾಗಿ ಎಂದು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.

ಟೆಂಡರ್ ಕಡತಗಳನ್ನು ಪರಿಶೀಲಿಸಲಾಗಿ, M\S Sumukha Office Solutions, Mysuru ರವರು ಕಳೆದ ಸಾಲಿನಲ್ಲಿ ಕಾಪಿಯರ್ ಯಂತ್ರಗಳನ್ನು ವಿಶ್ವವಿದ್ಯಾನಿಲಯಕ್ಕೆ ಸರಬರಾಜು ಮಾಡಲಾಗಿರುತ್ತದೆ. ಸದರಿ ಸಂಸ್ಥೆಯವರೇ ಸ್ವಯಂ ಒಂದು ಪತ್ರವನ್ನು ಸಲ್ಲಿಸಿ, ವಾರ್ಷಿಕ ನಿರ್ವಹಣೆಯನ್ನು ನಿರ್ವಹಿಸುವುದಾಗಿ ತಿಳಿಸಿರುತ್ತಾರೆ. ಅದರನ್ವಯ ಕುಲಪತಿಯವರ ಅನುಮೋದನೆ ಮೇರೆಗೆ ಜೆಮ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸುಮುಖ ಸಂಸ್ಥೆಯವರು ನೀಡಿರುವ ಪತ್ರದಲ್ಲಿನ ಅಂಶಗಳನ್ನೇ ಯಥವತ್ತಾಗಿ ಟೆಂಡರ್ ದಾಖಲೆಗಳಲ್ಲಿ ಷರತ್ತುಗಳನ್ನು ವಿಧಿಸಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಅಲ್ಲದೇ ಹಾಜರುಪಡಿಸಲಾದ ದಾಖಲೆಗಳನ್ವಯ ವಾರ್ಷಿಕ ಸುಮಾರು 2 ರಿಂದ 3 ಲಕ್ಷಗಳನ್ನು ಕಾಪಿಯರ್ ಯಂತ್ರಗಳ ದುರಸ್ಥಿಗೆ ವೆಚ್ಚ ಮಾಡಲಾಗಿರುತ್ತದೆ. ಆದರೆ ಫೋಟೋ ಕಾಪಿಯರ್ ಯಂತ್ರಗಳ ನಿರ್ವಹಣೆಗಾಗಿ

ಮೂರು ವರ್ಷಗಳ ಅವಧಿಗೆ ರೂ.74,15,872/- ಕರಾರು ಮಾಡಿ ವಾರ್ಷಿಕ ರೂ.24,71,957/- ರಂತೆ 2024-25ನೇ ಸಾಲಿನ ಲೆಕ್ಕಪರಿಶೋಧನಾ ಅವಧಿಯಲ್ಲಿ **ರೂ.18,53,967/-ಗಳನ್ನು** ಪಾವತಿಸಿರುವುದು ಫಲಪ್ರದವಲ್ಲದ ವೆಚ್ಚವಾಗಿದ್ದು, ಸಂಬಂಧಿಸಿದವರಿಂದ ವಸೂಲಿಸಲು **ಸೂಚಿಸಿದೆ.**

38.12. ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಪ್ರವೇಶಾತಿ ಪೂರ್ವ ಸಮಾಲೋಚನೆ ನಡೆಸಿರುವುದಕ್ಕೆ ಪ್ರೋತ್ಸಾಹ ಧನವನ್ನು ಪಾವತಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:159/ದಿ:13.10.2025)

ಲೆಕ್ಕಶೀರ್ಷಿಕೆ "005-269" ರಡಿ ಅಧ್ಯಯನ ಕೇಂದ್ರಗಳ ನಿರ್ವಹಣೆಗಾಗಿ ರೂ.1,12,88,132/- ಗಳ ವೆಚ್ಚ ಭರಿಸಲಾಗಿರುತ್ತದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಗುರುತಿಸಿರುವ ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲಿ ಪ್ರವೇಶಾತಿ ಪೂರ್ವ ಸಮಾಲೋಚನೆ ಹಾಗೂ ಪ್ರವೇಶಾತಿ ಪ್ರಕ್ರಿಯೆ ನಡೆಸಿರುವುದಕ್ಕೆ ಪ್ರೋತ್ಸಾಹ ಧನವನ್ನು ಪಾವತಿಸಲಾಗಿದೆ. ಮೊದಲನೇ ವರ್ಷಕ್ಕೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪೂರ್ವ ಸಮಾಲೋಚನೆ ನಡೆಸಿರುವ ಪ್ರತಿ ವಿದ್ಯಾರ್ಥಿಯ ಬೋಧನಾ ಶುಲ್ಕದಲ್ಲಿ ಶೇ.20 ರಷ್ಟನ್ನು ಪ್ರೋತ್ಸಾಹ ಧನವಾಗಿ ನೀಡಲು ಮತ್ತು 50 ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪೂರ್ವ ಸಮಾಲೋಚನೆ ಪ್ರಕ್ರಿಯೆಯನ್ನು ನಡೆಸಿದ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಪ್ರತೀ ವಿದ್ಯಾರ್ಥಿಗೆ ರೂ.400/- ರಂತೆ ಪ್ರೋತ್ಸಾಹಧನ ನೀಡಲಾಗಿದೆ. ಪಾವತಿ ವಿವರ ಕೆಳಕಂಡಂತಿದೆ.

ಕ್ರಸಂ	ವಿದ್ಯಾರ್ಥಿಗಳ ಸಂಖ್ಯೆ	ವೋಚರ್ ಸಂಖ್ಯೆ/ಮಾಹೆ	ಚೆಕ್ ಸಂಖ್ಯೆ/ದಿನಾಂಕ	ಮೊತ್ತ (ರೂ.)	ಪರಾ
1	1248	122/ಆಗಸ್ಟ್	313712 ದಿ:28.08.2024	22,07,326/-	2022-23ನೇ ಸಾಲಿನ ಜನವರಿ ಅವೃತ್ತಿ ಮತ್ತು 2023-24ನೇ ಸಾಲಿನ ಜುಲೈ ಅವೃತ್ತಿಯ 05 ಕಲಿಕಾರ್ಥಿ ಕೇಂದ್ರಗಳ ಪ್ರೋತ್ಸಾಹ ಧನ
2	1259	123/ಆಗಸ್ಟ್	313715 ದಿ:29.08.2024	5,03,600/-	2022-23ನೇ ಸಾಲಿನ ಜನವರಿ ಅವೃತ್ತಿಯ 74 ಕಲಿಕಾರ್ಥಿ ಕೇಂದ್ರಗಳ ಪ್ರೋತ್ಸಾಹ ಧನ
3	1349	32/ಅಕ್ಟೋಬರ್	626369 ದಿ:08.10.2024	5,39,600/-	2023-24ನೇ ಸಾಲಿನ ಜನವರಿ ಅವೃತ್ತಿಯ 50ಕ್ಕಿಂತ ಕಡಿಮೆ ವಿದ್ಯಾರ್ಥಿಗಳ ಪ್ರವೇಶಾತಿ ಪಡೆದ 75 ಕಲಿಕಾರ್ಥಿ ಕೇಂದ್ರಗಳ ಪ್ರೋತ್ಸಾಹ ಧನ
4	4439	33/ಅಕ್ಟೋಬರ್	626369 ದಿ:08.10.2024	80,37,606/-	2023-24ನೇ ಸಾಲಿನ ಜನವರಿ ಅವೃತ್ತಿಯ 50ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳ ಪ್ರವೇಶಾತಿ ಪಡೆದ 34 ಕಲಿಕಾರ್ಥಿ ಕೇಂದ್ರಗಳ ಪ್ರೋತ್ಸಾಹ ಧನ
			ಒಟ್ಟು	**1,12,88,132/-**	

ಸದರಿ ಪಾವತಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:159/ದಿ:13.10.2025ನ್ನು ನೀಡಲಾಗಿರುತ್ತದೆ.

1. ಯಾವ ಮಾನದಂಡದ ಮೇಲೆ ಪ್ರೋತ್ಸಾಹ ಧನದ ಮೊತ್ತವನ್ನು ನಿಗದಿಪಡಿಸಲಾಗಿದೆ.
2. ಕಲಿಕಾರ್ಥಿ ಸಹಾಯ ಕೇಂದ್ರಗಳ ಆಯ್ಕೆ ಪ್ರಕ್ರಿಯೆ ಹಾಗೂ ಕಲಿಕಾರ್ಥಿ ಕೇಂದ್ರಗಳೊಂದಿಗೆ ಕರಾರು ಮಾಡಿಕೊಂಡಿರುವ ಕುರಿತು ದಾಖಲೆಗಳು.
3. ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ರೂಪಿಸುವ ಕುರಿತು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ ಕಾಯ್ದೆ-1999 ರಲ್ಲಿ ಅವಕಾಶವಿರುವ ಕುರಿತು ದಾಖಲೆಗಳು.

4. ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ ಕರ್ನಾಟಕದಲ್ಲಿರುವ ಏಕೈಕ ಮುಕ್ತ ವಿಶ್ವವಿದ್ಯಾನಿಲಯವಾಗಿದ್ದು, ರೂ1.14.55.645/– ಗಳನ್ನು ಪ್ರವೇಶಾತಿ ಸಂಬಂಧ ಜಾಹೀರಾತು ನೀಡಲು ಹಾಗೂ ಡಿಜಿಟಲ್ ಮಾರ್ಕೆಟಿಂಗ್‌ಗಾಗಿ ರೂ.45.70.000/–ಗಳನ್ನು ವೆಚ್ಚ ಭರಿಸಲಾಗಿದೆ. ಅಲ್ಲದೇ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ರೂ.1,12,88,132/–ಗಳನ್ನು ಪಾವತಿಸಿರುವ ಅಗತ್ಯತೆ ಕುರಿತು ವಿವರಣೆ.
5. ಒಟ್ಟಾರೆ ಎಷ್ಟು ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಆಯ್ಕೆ ಮಾಡಲಾಗಿದೆ. ಕಳೆದ 3 ವರ್ಷಗಳಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ವಿವರವನ್ನು ಹಾಜರುಪಡಿಸುವುದು.
6. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಿಮ್ಮದೇ ಪ್ರಾದೇಶಿಕ ಕೇಂದ್ರಗಳಿದ್ದು, ಅಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದರೂ ಸಹ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಆಯ್ಕೆ ಮಾಡಿ ವೆಚ್ಚಭರಿಸಿರುವುದಕ್ಕೆ ವಿವರಣೆ ನೀಡುವುದು.

ವಿಶ್ವವಿದ್ಯಾನಿಲಯದವರು ಅನುಪಾಲನಾ ವರದಿಯನ್ನು ನೀಡಿ "ಬಿಓಎಂ ಸಭೆಯ ತಿರ್ಮಾನದಂತೆ ಪ್ರೋತ್ಸಾಹಧನದ ಮೊತ್ತವನ್ನು ನಿಗದಿ ಮಾಡಿದೆ. ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ ಕಾಯ್ದೆ–1992 ರ 3(2) ರಲ್ಲಿನ ನಿಯಮದಲ್ಲಿ ಸ್ಥಾಪಿಸಲಾಗಿದೆ. ವಿದ್ಯಾರ್ಥಿಗಳಿಗೆ ಪೂರ್ವ ಸಮಾಲೋಚನೆ ಮತ್ತು ತರಗತಿಗಳನ್ನು ನಡೆಸುವ ಸಂಬಂಧ ಕಲಿಕಾ ಸಹಾಯ ಕೇಂದ್ರಗಳನ್ನು ಆಯ್ಕೆ ಮಾಡಲಾಗಿದೆ" ಎಂದು ತಿಳಿಸಿರುತ್ತಾರೆ. ಆದರೆ ನಿಯಮ 3(2)ರಲ್ಲಿ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲು ಅವಕಾಶ ನೀಡಿದೆ. ಕೇಂದ್ರಗಳ ಆಯ್ಕೆ ಪ್ರಕ್ರಿಯೆ ಹಾಗೂ ಕಲಿಕಾರ್ಥಿ ಸಹಾಯ ಕೇಂದ್ರಗಳೊಂದಿಗೆ ಮಾಡಿಕೊಂಡಿರುವ ಕಾರಾರು ಪತ್ರದ ವಿವರವನ್ನು ಹಾಜರುಪಡಿಸಿರುವುದಿಲ್ಲ. ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯು ಕರ್ನಾಟಕದಲ್ಲಿರುವ ಏಕೈಕ ಮುಕ್ತ ವಿಶ್ವವಿದ್ಯಾನಿಲಯವಾಗಿದ್ದು, ರೂ1,14,55,645/– ಗಳನ್ನು ಪ್ರವೇಶಾತಿ ಸಂಬಂಧ ಜಾಹೀರಾತು ನೀಡಲು ಹಾಗೂ ಡಿಜಿಟಲ್ ಮಾರ್ಕೆಟಿಂಗ್‌ಗಾಗಿ ರೂ.45,70,000/–ಗಳ ವೆಚ್ಚಭರಿಸಲಾಗಿದೆ. ಪ್ರತಿ ಜಿಲ್ಲೆ ಕೇಂದ್ರದಲ್ಲಿ ತಮ್ಮದೇ ಪ್ರಾದೇಶಿಕ ಕೇಂದ್ರದಲ್ಲಿನ ಮಾನವ ಸಂಪನ್ಮೂಲವನ್ನು ಬಳಸಿಕೊಂಡು ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಪಾವತಿಸಿರುವ ರೂ.1,12,88,132/– ಗಳ ವೆಚ್ಚವನ್ನು ತಪ್ಪಿಸಬಹುದಾಗಿತ್ತು. ಮುಂದಿನ ದಿನಗಳಲ್ಲಿ ಈ ಬಗ್ಗೆ ಕ್ರಮಕೈಗೊಂಡು ಪ್ರಾದೇಶಿಕ ಕೇಂದ್ರದಲ್ಲಿನ ಮಾನವ ಸಂಪನ್ಮೂಲವನ್ನು ಪ್ರವೇಶಾತಿ ಪೂರ್ವ ಸಮಾಲೋಚನೆಗೆ ಸಮರ್ಪಕವಾಗಿ ಬಳಸಿಕೊಳ್ಳಲು ಸೂಚಿಸಿದೆ.

38.13. ಡಿಜಿಟಲ್ ಮಾರ್ಕೆಟಿಂಗ್ ಸೇವೆಗಳನ್ನು ಪಡೆಯುವ ಸಲುವಾಗಿ ಮೆ. ಎನ್ ಪಿ ಯು ಸೊಲ್ಯೂಷನ್ಸ್ ಮತ್ತು ಸರ್ವೀಸಸ್, ಬೆಂಗಳೂರುರವರಿಗೆ ಪಾವತಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:102/ದಿ:18.08.2025)

ವಿಶ್ವವಿದ್ಯಾನಿಲಯವು ಡಿಜಿಟಲ್ ಮಾರ್ಕೆಟಿಂಗ್ ಸೇವೆಗಳನ್ನು ಪಡೆಯುವ ಸಲುವಾಗಿ ಮೆ.ಎನ್.ಪಿ.ಯು ಸೊಲ್ಯೂಷನ್ಸ್ ಮತ್ತು ಸರ್ವೀಸಸ್, ಬೆಂಗಳೂರು ರವರೊಂದಿಗೆ ದಿನಾಂಕ:17.08.2023ರಲ್ಲಿ ಮೂರು ವರ್ಷಗಳ ಅವಧಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ದಿನಾಂಕ:17.08.2023ರ ಕಾರ್ಯಾದೇಶ ಸಂಖ್ಯೆ:KSOU/Digital Marketing–85/2022–23ರಲ್ಲಿ ಕಾರ್ಯಾದೇಶ ನೀಡಲಾಗಿರುತ್ತದೆ. ಸದರಿ ಒಡಂಬಡಿಕೆಯ ಅನುಬಂಧ–ಎ ರಂತೆ ವಿಶ್ವವಿದ್ಯಾನಿಲಯವು ಡಿಜಿಟಲ್ ಮಾರ್ಕೆಟಿಂಗ್ ಸೇವೆಯಿಂದಾಗಿ ವಿಶ್ವವಿದ್ಯಾನಿಲಯಕ್ಕೆ ಪ್ರವೇಶಾತಿಯು ಗಣನೀಯ ಪ್ರಮಾಣದಲ್ಲಿ ಸುಧಾರಿಸುವುದರ ಜೊತೆಗೆ ಡಿಜಿಟಲ್ ಮಾರ್ಕೆಟಿಂಗ್ ಅಭಿಯಾನದ ಲೀಡ್ಸ್‌ಗಳ ಯಶಸ್ವಿ ಪರಿವರ್ತನೆಯನ್ನು ಖಚಿತಪಡಿಸಿಕೊಂಡನಂತರ ಬಿಲ್ ಪಾವತಿಸುವ ಷರತ್ತನ್ನೂ, ಅನುಬಂಧ–ಬಿ:–ಕಾರ್ಯ ವ್ಯಾಪ್ತಿಯಲ್ಲಿ, ಬಿಡ್‌ದಾರನು ಅವಶ್ಯಕ ಮಾನವ ಸಂಪನ್ಮೂಲಗಳನ್ನು ನಿಯೋಜಿಸಿ, ಸೇವೆಯ ಯೋಜನೆ ಮುಕ್ತಾಯಗೊಳ್ಳುವವರೆಗೆ Resident Software Engineer (both Technical & Operations) ರವರು ವಿಶ್ವವಿದ್ಯಾನಿಲಯದಲ್ಲಿ ಹಾಜರಿರುವುದರ ಜೊತೆಗೆ ಯೋಜನೆಗೆ ಸಂಬಂಧಿಸಿದ ಸಿಬ್ಬಂದಿ ವಿವರಗಳನ್ನು ಕುಲಸಚಿವರಿಗೆ ಸಲ್ಲಿಸುವಂತೆ ಮತ್ತು ವೈಶಿಷ್ಟ ಸಂಖ್ಯೆ 31 ರನ್ವಯ ಸಹಾಯವಾಣಿ (Helpdesk)ನ್ನು ಸ್ಥಾಪಿಸಿ ಮಾಸಿಕ ಸರಿಸುಮಾರು ಕನಿಷ್ಠ 4000 ರಿಂದ 5000ಗಳ ವಿಚಾರಣಾ/ಲೀಡ್ಸ್‌ಗಳನ್ನು ಉದ್ಭವವಾಗಿರಬೇಕು ಮತ್ತು ಸದರಿ ಕಾರ್ಯನಿರ್ವಹಣೆಯ ವರದಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕಾಗಿರುತ್ತದೆ. ವಿಶ್ವವಿದ್ಯಾನಿಲಯದ ಪ್ರವೇಶಾತಿಗಾಗಿ ಡಿಜಿಟಲ್ ಮಾರ್ಕೆಟಿಂಗ್ ಸೇವೆ ಒದಗಿಸಿರುವ **ಮೆ. ಎನ್ ಪಿ ಯು ಸೊಲ್ಯೂಷನ್ಸ್ ಮತ್ತು ಸರ್ವೀಸಸ್ ಸಂಸ್ಥೆಯವರಿಗೆ** ಈ ಕೆಳಗಿನಂತೆ ಪಾವತಿ ಮಾಡಲಾಗಿರುತ್ತದೆ.

ಕ್ರ.ಸಂ	ವೋಚರ್ ಸಂಖ್ಯೆ	ಚೆಕ್ ನಂ	ಮೊತ್ತ(ರೂ.ಗಳಲ್ಲಿ)
01	05/ಮೇ(ಹೆಚ್.ಡಿ.ಎಫ್.ಸಿ)	000129/28.05.2024	22,85,000/–

02	69/ಜನವರಿ–2025	638165/09.01.2025	22,85,000/–
ಒಟ್ಟು			**45,70,000/–**

ಸದರಿ ಪಾವತಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:102 ದಿ:18.08.2025ನ್ನು ನೀಡಲಾಗಿರುತ್ತದೆ. ಅದಕ್ಕೆ ವಿಶ್ವವಿದ್ಯಾನಿಲಯದವರು ಭಾಗಶಃ ಅಂಶಗಳಿಗೆ ನೀಡಿರುವ ಉತ್ತರವನ್ನು ಅಳವಡಿಸಲಾಗಿದೆ.

01. ಒಡಂಬಡಿಕೆಯ ಕ್ರ.ಸಂ.02 ಮತ್ತು 03ರಲ್ಲಿ 2023ರ ಜುಲೈ ಅವೃತ್ತಿಯ ಪ್ರವೇಶಾತಿಯಿಂದ 3 ವರ್ಷಗಳ ಅವಧಿಗೆ ರೂ.45,70,000/–ಗಳಿಗೆ ಡಿಜಿಟಲ್ ಮಾರ್ಕೆಟಿಂಗ್ ಸೇವೆಗಾಗಿ ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಆದರೆ 2023–24ನೇ ಸಾಲಿನಲ್ಲಿ ರೂ.22,85,000/– ಹಾಗೂ 2024–25ನೇ ಸಾಲಿನಲ್ಲಿ 45,70,000/–ಗಳು ಸೇರಿ ಒಟ್ಟು ರೂ.68,55,000/–ಗಳನ್ನು ಪಾವತಿಸಿದ್ದು, ರೂ.22,85,000/–ಗಳನ್ನು ಹೆಚ್ಚುವರಿಯಾಗಿ ಪಾವತಿಸಲಾಗಿದ್ದು, ವಿವರಣೆ ನೀಡುವಂತೆ ಕೋರಲಾಗಿ ಟೆಂಡರ್ ದಾಖಲೆಗಳಲ್ಲಿ ಪ್ರತಿ ವರ್ಷಕ್ಕೆ ದರಗಳನ್ನು ನಮೂದಿಸಲು ಸೂಚಿಸಲಾಗಿತ್ತು. ಅದರಂತೆ ಪ್ರತಿ ವರ್ಷದ ಸೇವೆಗೆ ರೂ.45,70,000/–ಗಳಂತೆ ಕಾರ್ಯಾದೇಶ ನೀಡಲಾಗಿದೆ. ಆದರೆ ಕಣ್ತಪ್ಪಿನಿಂದ ಒಡಂಬಡಿಕೆಯಲ್ಲಿ ಪ್ರತಿ ವರ್ಷ ಎಂಬ ಪದ ನಮೂದಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಹಾಗಾಗಿ ಒಡಂಬಡಿಕೆಯನ್ನು ತಿದ್ದುಪಡಿ ಮಾಡಿಕೊಳ್ಳಲು ಸೂಚಿಸಿದೆ.

02. ದಿ:17/08/2023 ರ ಒಡಂಬಡಿಕೆಯ ಅನುಬಂಧ–ಬಿ ಕಾರ್ಯ ವ್ಯಾಪ್ತಿಯಲ್ಲಿ, ಬಿಡ್ದಾರನು ಅವಶ್ಯಕ ಮಾನವ ಸಂಪನ್ಮೂಲಗಳನ್ನು ನಿಯೋಜಿಸಬೇಕಿದ್ದು, ಡಿಜಿಟಲ್ ಮಾರ್ಕೆಟಿಂಗ್ ಸೇವೆಯ ಯೋಜನೆ ಮುಕ್ತಾಯಗೊಳ್ಳುವವರೆಗೆ Resident Software Engineer, both Technical & Operations ರವರು ವಿಶ್ವವಿದ್ಯಾನಿಲಯದಲ್ಲಿ ಹಾಜರಿರಬೇಕು ಮತ್ತು ಈ ಯೋಜನೆಗೆ ಸಂಬಂಧಿಸಿದ ಸಿಬ್ಬಂದಿ ವಿವರಗಳನ್ನು ಕುಲಸಚಿವರಿಗೆ ಸಲ್ಲಿಸಬೇಕಾಗಿರುತ್ತದೆ. ಅದರಂತೆ Resident Software Engineer, both Technical & Operations ರವರ ವಿವರ, ಹಾಜರಾತಿ ವಿವರಗಳು ಮತ್ತು ಯೋಜನೆಗೆ ಸಂಬಂಧಿಸಿದ ಸಿಬ್ಬಂದಿ ವಿವರ (ವಿದ್ಯಾರ್ಹತೆ & ಕೌಶಲ್ಯಗಳನ್ನೊಳಗೊಂಡ)ಗಳು ಲೆಕ್ಕಪರಿಶೋಧನೆಗೆ ಲಭ್ಯವಾಗಿರುವುದಿಲ್ಲ.

03. ಡಿಜಿಟಲ್ ಮಾರ್ಕೆಟಿಂಗ್ ಸೇವೆಯನ್ನು ಪಡೆಯಲು ಟೆಂಡರ್ ಆಹ್ವಾನಿಸುವಲ್ಲಿ ಪೂರ್ವ ಅರ್ಹತಾ ಷರತ್ತಾಗಿ "Bidder should be a company registered and incorporated in Karnataka as their headquarters" ಎಂಬ ಷರತ್ತು ಪೂರೈಕೆದಾರರ ಭಾಗವಹಿಸುವಿಕೆಯನ್ನು ನಿರ್ಬಂಧಿಸಿದ್ದು, ಇದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000ರ ನಿಯಮ 27(1) ರಲ್ಲಿ ಟೆಂಡರ್ ಆಹ್ವಾನ ಪ್ರಾಧಿಕಾರವು ಟೆಂಡರುದಾರರ ಹಿಂದಿನ ಅನುಭವ & ಕಾರ್ಯಕ್ಷಮತೆ, ಸಿಬ್ಬಂದಿ, ಉಪಕರಣ, ಮತ್ತು ನಿರ್ಮಾಣ ಅಥವಾ ಉತ್ಪಾದನಾ ಸೌಲಭ್ಯಗಳ ಸಾಮರ್ಥ್ಯತೆ ಮತ್ತು ಆರ್ಥಿಕ ಸ್ಥಿತಿ ಮತ್ತು ಸಾಮರ್ಥ್ಯಗಳ ಆಧಾರಗಳಲ್ಲಿ ಪೂರ್ವ–ಅರ್ಹತಾ ಷರತ್ತುಗಳನ್ನು ನಿಗದಿಗೊಳಿಸುವಂತೆ ನಿಯಮಿಸಲಾಗಿದ್ದು, ಸರ್ಕಾರದ ಸುತ್ತೋಲೆ ಸಂಖ್ಯೆ: PWD 1359 SO/FC 2001(P–2) ದಿನಾಂಕ: 30.06.2003ರ ಕ್ರ.ಸಂ.(iii)ರಂತೆ ಅರ್ಹತಾ ಮಾನದಂಡಗಳು ಮತ್ತು ತಾಂತ್ರಿಕ ಅವಶ್ಯಕತೆಗಳು ನಿರ್ಬಂಧಿತ/ತಾರತಮ್ಯವಾಗಿರಬಾರದು ಎಂದು ಉಲ್ಲೇಖಿಸಿದ್ದರೂ ವಿಶ್ವವಿದ್ಯಾನಿಲಯವು ವಿಧಿಸಿರುವ ಅರ್ಹತಾ ಷರತ್ತುಗಳು ಕೆ.ಟಿ.ಪಿ.ಪಿ ನಿಯಮ 27(1)ಕ್ಕೆ ವಿರುದ್ಧವಾಗಿದೆ.

04. ವಿಶ್ವವಿದ್ಯಾನಿಲಯದಲ್ಲಿ ಪ್ರತ್ಯೇಕ ಅಧಿಕಾರ ಪ್ರತ್ಯಾಯೋಜನೆ ಇಲ್ಲದ ಕಾರಣ, ಸರ್ಕಾರದ ಸಾಮಾನ್ಯ ವಿತ್ತಾಧಿಕಾರದ ಸರ್ಕಾರಿ ಆದೇಶ ಸಂಖ್ಯೆ: FD 08 TFP 2023 dated: 28 .10.2024ರನ್ವಯ ಇಲಾಖಾ ಮುಖ್ಯಸ್ಥರಿಗೆ ಜಾಹೀರಾತಿಗಾಗಿ ವಾರ್ಷಿಕ ರೂ.20.00 ಲಕ್ಷಗಳವರೆಗೆ ವೆಚ್ಚಭರಿಸಲು ಅವಕಾಶವಿರುತ್ತದೆ. ಸದರಿ ಪಾವತಿಯು ರೂ.20.00 ಲಕ್ಷಕ್ಕಿಂತ ಅಧಿಕವಾಗಿರುವುದರಿಂದ ಸದರಿ ನಿಯಮದ ಉಲ್ಲಂಘನೆಯಾಗಿರುತ್ತದೆ.

05. ದಿ:17/08/2023 ರ ಒಡಂಬಡಿಕೆಯ ಪೀಠಿಕೆಯ ಕ್ರ.ಸಂ. 02 ರಂತೆ ಪ್ರಸ್ತುತ ಡಿಜಿಟಲ್ ಮಾರ್ಕೆಟಿಂಗ್ ಸೇವೆಯ ಯೋಜನೆಯು ವಿಶ್ವವಿದ್ಯಾನಿಲಯದ ಆಫ್ ಲೈನ್ ಮತ್ತು ಆನ್‌ಲೈನ್ ಪ್ರೋಗ್ರಾಮ್‌ಗಳಿಗೆ ಅನ್ವಯಿಸುತ್ತದೆ ಹಾಗೂ ಅನುಬಂಧ-ಬಿ ರಂತೆ ಸಾಮಾಜಿಕ ಜಾಲತಾಣದಲ್ಲಿ ಪ್ರಚುರ ಪಡಿಸುವ ಸಂಬಂಧದ ವಿಷಯದ ರಚನೆಯನ್ನು ಪ್ರಾಥಮಿಕವಾಗಿ ಕನ್ನಡ, ಆಂಗ್ಲ ಮತ್ತು ಹಿಂದಿ ಮೂರು ಭಾಷೆಗಳಲ್ಲಿ ರಚಿಸಲು ತಿಳಿಸಲಾಗಿದೆ. ಆದರೆ ಮೆ. ಎನ್ ಪಿ ಯು ಸೊಲ್ಯೂಷನ್ಸ್ ಮತ್ತು ಸರ್ವೀಸಸ್ ರವರು ಸಲ್ಲಿಸಿರುವ ದಾಖಲಾತಿಗಳಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಮಾತ್ರ ವಿಷಯಗಳನ್ನು ರಚಿಸಲಾಗಿದೆ. ಹಿಂದಿ ಭಾಷೆಯಲ್ಲಿ ರಚಿಸಿ ಪ್ರಚಾರ ಪಡಿಸದಿರುವ ಕುರಿತು ವಿವರಣೆ ನೀಡುವಂತೆ ಕೋರಲಾಗಿ ಹಿಂದಿ ಭಾಷೆಯಲ್ಲಿಯು ಪ್ರಚಾರ ಪಡಿಸಲಾಗಿದೆ ಎಂದು ಉತ್ತರಿಸಿದ್ದು, ಕೇವಲ ಲೀಡ್‌ಗಳ ಫೋಟೋ ಲಗತ್ತಿಸಿದೆ. ಆದರೆ ಬೇರೆ ಜಾಲತಾಣಗಳಲ್ಲಿ ಸದರಿ ಫೋಟೋ ಪ್ರಕಟಗೊಂಡ ಬಗ್ಗೆ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಪ್ರವೇಶಾತಿ ವಿವರ ಕೆಳಕಂಡಂತಿದೆ.

ಕ್ರ.ಸಂ	ಆಫ್‌ಲೈನ್ ಪ್ರವೇಶಾತಿ	ಆನ್ ಲೈನ್ ಪ್ರವೇಶಾತಿ
2022–23ನೇ ಸಾಲಿನಲ್ಲಿ ಪ್ರಥಮ ವರ್ಷಕ್ಕೆ ಪ್ರವೇಶಾತಿ	40087	-
2023–24ನೇ ಸಾಲಿನಲ್ಲಿ ಪ್ರಥಮ ವರ್ಷಕ್ಕೆ ಪ್ರವೇಶಾತಿ	42924	128
2024–25ನೇ ಸಾಲಿನಲ್ಲಿ ಪ್ರಥಮ ವರ್ಷಕ್ಕೆ ಪ್ರವೇಶಾತಿ	40001	719

ಮೇಲಿನ ಕೋಷ್ಟಕದಲ್ಲಿ ವಿವರಿಸಿದಂತೆ ಗಣನೀಯ ಮಟ್ಟದಲ್ಲಿ ವಿಶ್ವವಿದ್ಯಾನಿಲಯದ ಪ್ರವೇಶಾತಿ ಹೆಚ್ಚಾಗಿರುವುದಿಲ್ಲ. ಅಲ್ಲದೇ ಪ್ರವೇಶಾತಿ ಜಾಹೀರಾತನ್ನು ವೃತ್ತಪತ್ರಿಕೆಗಳಲ್ಲಿ ಬಿತ್ತರಿಸಲು ಪ್ರತ್ಯೇಕವಾಗಿ ಸುಮಾರು ರೂ.95.00 ಲಕ್ಷಗಳ ವೆಚ್ಚ ಭರಿಸಲಾಗಿದೆ. ಆದಾಗ್ಯೂ ಮೆ. ಎನ್ ಪಿ ಯು ಸೊಲ್ಯೂಷನ್ಸ್ ಮತ್ತು ಸರ್ವೀಸಸ್ ರವರೊಂದಿಗಿನ ಒಡಂಬಡಿಕೆಯಲ್ಲಿಯೂ ಮುದ್ರಣ/ವೃತ್ತಪತ್ರಿಕೆ ಮಾಧ್ಯಮದಲ್ಲಿ ಪ್ರವೇಶಾತಿಗಾಗಿ ಜಾಹಿರಾತನ್ನು ಒದಗಿಸುವ ಸೇವೆಯನ್ನು ಡಿಜಿಟಲ್ ಮಾರ್ಕೆಟಿಂಗ್ ಸೇವೆಯ ಯೋಜನೆಯಡಿಯಲ್ಲಿಯೂ ಪಡೆಯುತ್ತಿರುವುದು ಕರ್ನಾಟಕ ಆರ್ಥಿಕ ಸಂಹಿತೆ, 1958ರ ಅನುಚ್ಛೇದ 16ನ್ನು ಕಡೆಗಣಿಸಿದಂತಾಗುತ್ತದೆ. ದೂರ ಶಿಕ್ಷಣಕ್ಕೆ ಕರ್ನಾಟಕದಲ್ಲಿರುವ ಏಕೈಕ ಸಂಸ್ಥೆ ಕೆ.ಎಸ್.ಓ.ಯು ಆಗಿದ್ದರೂ ಸಹ ಹೀಗೆ ಒಂದೇ ತರನಾದ ಸೇವೆಗೆ ಪುನರಾವರ್ತಿತವಾಗಿ ಪಾವತಿ ಮಾಡಿದಂತಾಗುವುದಲ್ಲದೇ ವಿಶ್ವವಿದ್ಯಾನಿಲಯಕ್ಕೆ ಅನಗತ್ಯ ನಷ್ಟ ಉಂಟಾಗಿರುವುದನ್ನು ಲೆಕ್ಕಪರಿಶೋಧನೆಯು ಆಕ್ಷೇಪಿಸುತ್ತಾ ಮೆ. ಎನ್ ಪಿ ಯು ಸೊಲ್ಯೂಷನ್ಸ್ ಮತ್ತು ಸರ್ವೀಸಸ್ ಸಂಸ್ಥೆಗೆ ಪಾವತಿಸಲಾಗಿರುವ ಮೊತ್ತ **ರೂ.45,70,000/-** ಗಳನ್ನು **ಆಕ್ಷೇಪಣೆಯಲ್ಲಿಡಲಾಗಿದೆ.**

38.14. Admission to Examination END to END ERP Softwareನ Annual Maintenance, Operational Support and Server Hosting ಕಾರ್ಯವನ್ನು ನಿರ್ವಹಿಸಿರುವುದಕ್ಕೆ ಪಾವತಿಸಿರುವುದು. (ವಿಚಾರಣಾ ಪತ್ರ ಸಂಖ್ಯೆ:126/ದಿ:19.09.2025)

ವಿಶ್ವವಿದ್ಯಾನಿಲಯದ ಪ್ರವೇಶಾತಿ ಹಾಗೂ ಪರೀಕ್ಷಾ ಕಾರ್ಯಗಳಿಗೆ ಅವಶ್ಯಕವಿರುವ Admission to Examination END to END ERP Softwareನ Annual Maintenance, Operational Support and Server Hosting ಕಾರ್ಯವನ್ನು ನಿರ್ವಹಿಸಿರುವುದಕ್ಕೆ ನವೆಂಬರ್-2024ನೇ ಮಾಹೆಯ ವೋಚರ್ ಸಂಖ್ಯೆ-162ರಲ್ಲಿ ಚೆಕ್ ಸಂಖ್ಯೆ:637990 ದಿ:27.11.2024ರಲ್ಲಿ ಮೊದಲ ಹಂತವಾಗಿ ರೂ.48,28,000/-ಗಳನ್ನು MS Inhawk IT Solutions Pvt Ltd ರವರಿಗೆ ಪಾವತಿಸಲಾಗಿದ್ದು ಸದರಿ ಪಾವತಿಗೆ ಸಂಬಂಧಿಸಿದಂತೆ ಟೆಂಡರ್ ಕಡತವನ್ನು ಪರಿಶೀಲಿಸಲಾಗಿ ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿರುತ್ತದೆ.

01. ಸದರಿ ಟೆಂಡರ್ ಮೊತ್ತ ಪ್ರತಿ ವರ್ಷಕ್ಕೆ ರೂ.1.00 ಕೋಟಿ ಎಂದು ಅಂದಾಜಿಸಲಾಗಿದ್ದು, ಅದರಂತೆ ಟೆಂಡರ್ ಅನ್ನು 3 ವರ್ಷಗಳ ಸೇವೆಗೆ ಅಂದಾಜಿಸಲಾಗಿದ್ದು, ಟೆಂಡರ್ ಮೊತ್ತ ರೂ.3.00 ಕೋಟಿಗಳಾಗಿದ್ದರೂ ಸಹ ಟೆಂಡರ್‌ಗೆ ಅರ್ಜಿ ಸಲ್ಲಿಸಲು ಕೇವಲ 10 ದಿನಗಳ ಕಾಲಾವಕಾಶ ನೀಡಲಾಗಿದೆ. (ಕುಲಪತಿಗಳ ಆದೇಶದಂತೆ ಕಲಾವಕಾಶ ನೀಡಲಾಗಿದೆ ಎಂದು ತಿಳಿಸಿದೆ)

02. ಟೆಂಡರ್ ದಾಖಲೆಗಳಲ್ಲಿನ ಅನುಬಂಧ–03ರ Pre Qualification Criteriaದ ಅರ್ಹತಾ ಷರತ್ತುಗಳಲ್ಲಿ,

ಕ್ರಮ ಸಂ. 4 ರಲ್ಲಿ "The organization must have experience in work with open university for in pre admission and post admission process Also having experience for pre–examination process and post examination process." ಕ್ರಮ ಸಂ. 4 ರಲ್ಲಿ "Company working office in Mysuru–up to 5 years" ಎಂದು ತಿಳಿಸಲಾಗಿದೆ.

ಕರ್ನಾಟಕದಲ್ಲಿ ಅತಿ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವ ವಿಶ್ವವಿದ್ಯಾನಿಲಯ ಕೆ.ಎಸ್.ಓ.ಯು. 2022ಕ್ಕೂ ಮೊದಲು ಇತರೆ ವಿಶ್ವವಿದ್ಯಾನಿಲಯದಲ್ಲಿ ದೂರ ಶಿಕ್ಷಣವ್ಯವಸ್ಥೆ ಇದ್ದರೂ ಸಹ Software ಗಳನ್ನು ಉಪಯೋಗಿಸುತ್ತಿದ್ದ ವಿಶ್ವವಿದ್ಯಾನಿಲಯಗಳು ತಪ್ಪಿಸಿದಂತಾಗಿದೆ.

ಮುಂದುವರೆದು ತಾಂತ್ರಿಕ ಸಮಿತಿ ಸಭೆಯಲ್ಲಿ ಸೂಚಿಸಲಾದ ಅರ್ಹತಾ ಷರತ್ತುಗಳಲ್ಲಿ ಒಂದಕ್ಕಿಂತ ಹೆಚ್ಚಿನ ಅಂಶಗಳಲ್ಲಿ ಅನರ್ಹತೆ ಹೊಂದಿದ ಸಂಸ್ಥೆಗಳನ್ನು ಕೈಬಿಡಲಾಗಿದೆ ಎಂದು ದಾಖಲಾಗಿದ್ದು, ಹೀಗೆ ಒಂದು ಅರ್ಹತೆ ಹೊಂದಿಲ್ಲದಿದ್ದವರೂ ಸಹ ಟೆಂಡರ್ ಪ್ರಕ್ರಿಯಲ್ಲಿ ಭಾಗವಹಿಸಬಹುದು ಎಂಬ ಬಗ್ಗೆ ಟೆಂಡರ್ ದಾಖಲೆಯಲ್ಲಿ ಉಲ್ಲೇಖವಿರುವುದಿಲ್ಲ. ಸದರಿ ಷರತ್ತುಗಳು ಪೂರೈಕೆದಾರರ ಭಾಗವಹಿಸುವಿಕೆಯನ್ನು ನಿರ್ಬಂಧಿಸಿದ್ದು, ಇದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000ರ ನಿಯಮ 27(1) ರಲ್ಲಿ ಟೆಂಡರ್ ಆಹ್ವಾನ ಪ್ರಾಧಿಕಾರವು ಟೆಂಡರುದಾರರ ಹಿಂದಿನ ಅನುಭವ & ಕಾರ್ಯಕ್ಷಮತೆ, ಸಿಬ್ಬಂದಿ, ಉಪಕರಣ, ಮತ್ತು ನಿರ್ಮಾಣ ಅಥವಾ ಉತ್ಪಾದನಾ ಸೌಲಭ್ಯಗಳ ಸಾಮರ್ಥ್ಯತೆ ಮತ್ತು ಆರ್ಥಿಕ ಸ್ಥಿತಿ ಮತ್ತು ಸಾಮರ್ಥ್ಯಗಳ ಆಧಾರಗಳಲ್ಲಿ ಪೂರ್ವ – ಅರ್ಹತಾ ಷರತ್ತುಗಳನ್ನು ನಿಗಧಿಗೊಳಿಸುವಂತೆ ನಿಯಮಿಸಲಾಗಿದ್ದು, ಸರ್ಕಾರದ ಸುತ್ತೋಲೆ ಸಂಖ್ಯೆ: PWD 1359 SO/FC 2001(P–2) ದಿನಾಂಕ: 30.06.2003ರ ಕ್ರ.ಸಂ.(iii)ರಂತೆ ಅರ್ಹತಾ ಮಾನದಂಡಗಳು ಮತ್ತು ತಾಂತ್ರಿಕ ಅವಶ್ಯಕತೆಗಳು ನಿರ್ಬಂಧಿತ/ತಾರತಮ್ಯವಾಗಿರಬಾರದು ಎಂದು ಉಲ್ಲೇಖಿಸಿದ್ದರೂ ವಿಶ್ವವಿದ್ಯಾನಿಲಯವು ವಿಧಿಸಿರುವ ಅರ್ಹತಾ ಷರತ್ತುಗಳು ಕೆ.ಟಿ.ಪಿ.ಪಿ ನಿಯಮ 27(1)ಕ್ಕೆ ವಿರುದ್ಧವಾಗಿದೆ.

03. "Completion of certain task related to internal Assessment marks and student data for Various semester" ಎಂಬ ಕೆಲಸಕ್ಕಾಗಿMS Edu easy india pvt ltd ರವರಿಗೆ ಪ್ರತಿ ವಿದ್ಯಾರ್ಥಿಗೆ ರೂ.287/–ಗಳಂತೆ 25,566 ವಿದ್ಯಾರ್ಥಿಗಳಿಗೆ 2024–25ನೇ ಸಾಲಿನಲ್ಲಿ ರೂ.73,37,432/–ಗಳನ್ನು ಪಾವತಿಸಲಾಗಿದೆ. ತಮ್ಮ ವಿಶ್ವವಿದ್ಯಾನಿಲಯಕ್ಕಾಗಿಯೇ ಪ್ರತ್ಯೇಕವಾಗಿ ರೂ.3.00 ಕೋಟಿ ವೆಚ್ಚದಲ್ಲಿ Admission to Examination END to END ERP Software ಸಿದ್ದಪಡಿಸುವಾಗ ಸದರಿ ಅಂಶವನ್ನು ಸಹ ಅಳವಡಿಸಿಕೊಳ್ಳಬಹುದಾಗಿದ್ದು, ಪ್ರತ್ಯೇಕವಾಗಿ MS Edu easy india pvt ltd ರವರಿಗೆ ಹೆಚ್ಚುವರಿಯಾಗಿ ವೆಚ್ಚಭರಿಸಿರುವುದಕ್ಕೆ ವಿವರಣೆ ಕೋರಲಾಗಿ ಎರಡು ಪ್ರತ್ಯೇಕ ವಿಧದ ಸೇವೆ ಒದಗಿಸುವುದಾಗಿ ತಿಳಿಸಿದ್ದು, ಹೊಸದಾಗಿಯೇ ಸಾಫ್ಟ್‌ವೇರ್ ತಯಾರಿಸುವಾಗ ಎರಡನ್ನು ಒಂದೇ ಸಾಫ್ಟ್‌ವೇರ್‌ನಲ್ಲಿ ಅಳವಡಿಸಿ ವೆಚ್ಚವನ್ನು ಕಡಿಮೆ ಮಾಡಬಹುದಾಗಿತ್ತು.

04. 2019ರಲ್ಲಿAdmission to Examination END toEND ERP Software ಅನ್ನು ಸಿದ್ದಪಡಿಸಲು ರೂ.98,71,859/–ಗಳನ್ನು ಪಾವತಿಸಲಾಗಿರುತ್ತದೆ. ಆದರೆ ಸದರಿ ಸಾಲಿನಲ್ಲಿ ಕೇವಲ ನಿರ್ವಹಣೆಗಾಗಿ ಮಾತ್ರ ರೂ.96,56,000/–ಗಳಿಗೆ ಒಪ್ಪಂದ ಮಾಡಿರುವುದಕ್ಕೆ ವಿವರಣೆ ಕೋರಲಾಗಿ, ವಿವರಣೆ ನೀಡಿರುವುದಿಲ್ಲ.

05. ಆಯಾ–ವ್ಯಯದಲ್ಲಿ ಅವಕಾಶ ಮಾಡಿಕೊಂಡಿರುವ ಹಾಗೂ ಅಂದಾಜು ಮೊತ್ತವನ್ನು ಸಿದ್ಧಪಡಿಸಿದಕ್ಕೆ ವಿವರಗಳು.

ಮೇಲಿನ ಅಂಶಗಳಿಗೆ ವಿವರಣೆ/ಪೂರಕ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:126/ಬಿ.19.09.2025ನ್ನು ನೀಡಲಾಗಿತ್ತು. ಅದಕ್ಕೆ ವಿಶ್ವವಿದ್ಯಾನಿಲಯದವರು ಸಂಬಧಪಟ್ಟ ವಿಭಾಗದಿಂದ ಮಾಹಿತಿ

ಪಡೆಯಬಹುದಾಗಿದ್ದು, ಆಯಾ–ವ್ಯಯದಲ್ಲಿ ಅವಕಾಶ ಮಾಡಿಕೊಂಡಿರುವ ಹಾಗೂ ಕ್ರಿಯಾಯೋಜನೆ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಹೀಗೆ ಅಪೂರ್ಣ ಮಾಹಿತಿ ನೀಡಲಾಗಿದೆ.

ಉನ್ನತ ಶಿಕ್ಷಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಇವರ ಪತ್ರ ಸಂಖ್ಯೆ:ಇಡಿ/35/ಇಜಿಒವಿ/2020, ದಿನಾಂಕ:27.07.2021, ದಿನಾಂಕ:15.12.2022 ಹಾಗೂ ದಿನಾಂಕ:10.04.2023 ಗಳಲ್ಲಿ UUCMS ತಂತ್ರಾಂಶದ ಎಲ್ಲಾ moduleಗಳನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಲು ಮತ್ತು ಯಾವುದೇ ಹೊಸ ತಂತ್ರಾಂಶ ಖರೀದಿ, ಅಭಿವೃದ್ಧಿ ಮತ್ತು ಲೈಸೆನ್ಸ್ ನವೀಕರಣಗಳನ್ನು ಕೈಗೆತ್ತಿಕೊಳ್ಳದಾರದೆಂದು ಹಾಗೂ UUCMS ತಂತ್ರಾಂಶದಲ್ಲಿ 10 module ಗಳಿದ್ದು, ಹೊಸ ಶಿಕ್ಷಣ ನೀತಿರಡಿಯಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳಿಗೆ ಅನ್ವಯವಾಗುವಂತೆ Admission, Academic & Exam Module ಗಳನ್ನು ಒದಗಿಸಲಾಗಿದೆ. ದಿನಾಂಕ:23.03.2023 ರಂದು Financial Planning and Monitoring, Affiliation Module, Human Resource Module and Student Support System Module ಗಳನ್ನು ಲೋಕಾರ್ಪಣೆ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ Moduleಗಳನ್ನು ಕಡ್ಡಾಯವಾಗಿ ಬಳಸಬೇಕೆಂದು ನಿರ್ದೇಶಿಸಲಾಗಿದೆ. ಹಾಗೂ ಮೇಲಿನ ಆದೇಶವನ್ನು ಉಲ್ಲಂಘಿಸಿದಲ್ಲಿ ಸಂಬಂಧಪಟ್ಟ ಅಧಿಕಾರಿಯು ನೇರ ಹೊಣೆಯಾಗಿರುತ್ತಾರೆ ಮತ್ತು ವೆಚ್ಚಗಳನ್ನು ಭರಿಸಿದ್ದಲ್ಲಿ ಸದರಿಯವರಿಂದಲೇ ಭರಿಸಲಾಗಿವುದು ಎಂದು ನಿರ್ದೇಶಿಸಿರುತ್ತಾರೆ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಸಿಇಜಿ/08/ಎಡಿಎಂ/2017, ದಿ:23.03.2017ರಲ್ಲಿ ಇಲಾಖೆಗಳು ವೆಬ್‌ಸೈಟ್ ರಚಿಸಲು ಹಾಗೂ ಹೋಸ್ಟ್ ಮಾಡಲು ಇ–ಆಡಳಿತ ಕೇಂದ್ರದ ನೆರವನ್ನು ಪಡೆಯಬಹುದಿದ್ದು, ಕೇಂದ್ರವು ಇಲಾಖೆಗಳ ವೆಬ್‌ಸೈಟ್‌ನ್ನು ಹೋಸ್ಟ್ ಮಾಡುವುದರ ಜೊತೆಗೆ ಯಾವುದೇ ದೈನಂದಿನ ಬದಲಾವಣೆ/ಅಪ್‌ಡೇಟ್ ಮಾಡಲು ಇಲಾಖಾ ಅಧಿಕಾರಿಗಳಿಗೆ ತರಬೇತಿ ನೀಡುವುದಾಗಿ ತಿಳಿಸಿದೆ. ಅಲ್ಲದೇ ಸರ್ಕಾರದ ಆದೇಶ ಸಂ.ಖ್ಯೆ:ಸಿಆಸುಇ 281 ಇಜಿಎಂ 2020, ದಿ:15.02.2021ರಲ್ಲಿ ಸರ್ಕಾರಿ ಸಂಸ್ಥೆಗಳು ಅಧಿಕೃತ ಜಾಲತಾಣಗಳ ಕುರಿತು ಮಾರ್ಗದರ್ಶನ ಹಾಗೂ ಜಾಲತಾಣಗಳಲ್ಲಿ ಶಿಷ್ಟತೆ ಏಕರೂಪತೆಯಿಂದ ರೂಪಿಸಲು ಇ–ಆಡಳಿತ ಕೇಂದ್ರದ ನೆರವು ಪಡೆಯಲು ತಿಳಿಸಿದೆ. ಇ–ಆಡಳಿತ ಕೇಂದ್ರದಲ್ಲಿ ಜಾಲತಾಣಗಳನ್ನು ಉಚಿತವಾಗಿ ರಚಿಸಿಕೊಡುತ್ತಿರುವುದನ್ನು ಉಪಯೋಗಿಸಿಕೊಳ್ಳದೇ ಖಾಸಗಿಯವರಿಂದ ರಚಿಸಿಕೊಂಡು **ರೂ.48,28,000**/– ಗಳನ್ನು ವೆಚ್ಚಭರಿಸಿರುವುದು ಅನಾವಶ್ಯಕವಾಗಿ ವೆಚ್ಚಭರಿಸಿದಂತಾಗಿದ್ದು, ಕರ್ನಾಟಕ ಆರ್ಥಿಕ ಸಂಹಿತೆ, 1958ರ ಅನುಚ್ಛೇದ 15 ಮತ್ತು 16ನ್ನು ಕಡೆಗಣಿಸಿದಂತಾಗುತ್ತದೆ. ಹಾಗಾಗಿ ಸದರಿ ಮೊತ್ತವನ್ನು ಸಂಬಂಧಿಸಿದವರಿಂದ **ವಸೂಲಿಸಲು ಸೂಚಿಸಿದೆ.**

38.15 ಅಲ್ಲಮ ಇಕ್ಬಾಲ್ ಮುಕ್ತ ವಿಶ್ವವಿದ್ಯಾನಿಲಯ, ಇಸ್ಲಾಮಬಾದ್, ಪಾಕಿಸ್ತಾನದಲ್ಲಿನ ವಾರ್ಷಿಕ ಸಮ್ಮೇಳನಕ್ಕೆ ನೊಂದಣಿ ಶುಲ್ಕವನ್ನು ಪಾವತಿಸಿರುವುದು: (ವಿಚಾರಣಾ ಪತ್ರಸಂಖ್ಯೆ:76/ದಿ:05.08.2025)

ಅಲ್ಲಮ ಇಕ್ಬಾಲ್ ಮುಕ್ತ ವಿಶ್ವವಿದ್ಯಾನಿಲಯ, ಇಸ್ಲಾಮಬಾದ್, ಪಾಕಿಸ್ತಾನದ ವತಿಯಿಂದ ದಿ:15.10.2024 ರಿಂದ 17.10.2024ರವರೆಗೆ ನಡೆಯುವ 37ನೇ ವಾರ್ಷಿಕ ಸಮ್ಮೇಳನಕ್ಕೆ "Expanding Horizons: Innovation in Open and Distance Learning" ಎಂಬ ವಿಷಯವನ್ನು ಪ್ರಸ್ತುತ ಪಡಿಸಲು ಇ–ಮೇಲ್ ಮುಖಾಂತರ ಆಮಂತ್ರಣ ಬಂದ ಹಿನ್ನೆಲೆಯಲ್ಲಿ ಸಮ್ಮೇಳನದಲ್ಲಿ ಭಾಗವಹಿಸುವ ಸಂಬಂಧ ನೊಂದಣಿ ಶುಲ್ಕ ರೂ.97,232/–(350USD)ಗಳನ್ನು ಡಿಸೆಂಬರ್ ಮಾಹೆಯ ವೋಚರ್ ಸಂಖ್ಯೆ:114 ಧನಾದೇಶ ಸಂಖ್ಯೆ:638046 ದಿ:09.12.2024 ರಲ್ಲಿ ಮಾನ್ಯ ಕುಲಪತಿಗಳಿಗೆ ಪಾವತಿಸಲಾಗಿದೆ. ಆದರೆ ಸಮ್ಮೇಳನದ ಆಯೋಜಕರಿಂದ NOC, ದೊರೆಯದ ಕಾರಣ, ಸಮ್ಮೇಳನದಲ್ಲಿ ಭಾಗವಹಿಸಿರುವುದಿಲ್ಲ. ಹಾಗಾಗಿ ವಿಚಾರಣಾ ಪತ್ರ ಸಂಖ್ಯೆ: 76/ ದಿ:05.08.2025ರಲ್ಲಿ ನೊಂದಣಿ ಶುಲ್ಕವನ್ನು ಪಾವತಿಸಿರುವುದಕ್ಕೆ ಅಲ್ಲಮ ಇಕ್ಬಾಲ್ ಮುಕ್ತ ವಿಶ್ವವಿದ್ಯಾನಿಲಯದಿಂದ ಪಡೆದ ರಶೀದಿ/ಇತರೆ ದಾಖಲೆ, NOC ದೊರೆಯುವ ಮೊದಲೇ ನೊಂದಣಿ ಶುಲ್ಕವನ್ನು ಪಾವತಿಸಿರುವುದಕ್ಕೆ ವಿವರಣೆ ಹಾಗೂ NOC ದೊರೆಯದಿರುವ ಕುರಿತು ಸೂಕ್ತ ದಾಖಲೆಗಳು ಹಾಗೂ ಕಾರಣವನ್ನು ತಿಳಿಸುವಂತೆ ಕೋರಲಾಗಿ, ವಿಶ್ವವಿದ್ಯಾನಿಲಯದವರು "ಅಲ್ಲಮ ಇಕ್ಬಾಲ್ ಮುಕ್ತ ವಿಶ್ವವಿದ್ಯಾನಿಲಯವರು ಹಣ ಸ್ವೀಕರಿಸಲಾಗಿದೆ ಎಂದು ಮೇಲ್ ಮಾಡಲಾಗಿರುತ್ತದೆ ಎಂದು ತಿಳಿರುತ್ತಾರೆ. ನೊಂದಣಿ ಶುಲ್ಕ ಪಾವತಿಸಲು ಕೊನೆ ದಿನಾಂಕ ಎಂದು ತಿಳಿಸಿದ್ದರಿಂದ ಎನ್‌ಓಸಿ ದೊರೆಯುವ ಮೊದಲೇ ನೊಂದಣಿ ಶುಲ್ಕ ಪಾವತಿಸಲಾಗಿದೆ. ನಿರಂತರವಾಗಿ ಈ ಮೇಲ್ ಮೂಲಕ ಪತ್ರ ವ್ಯವಹಾರ ನಡೆಸಲಾಗಿದ್ದರೂ ಎನ್.ಓ.ಸಿ ನೀಡಲು ನಿರಾಕರಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ.

ಆದರೆ ಮೇಲ್ ಮೂಲಕ ಬಂದ ಆಮಂತ್ರಣ ಅಧಿಕೃತವಾಗಿ ಅಲ್ಲಮ ಇಕ್ಬಾಲ್ ಮುಕ್ತ ವಿಶ್ವವಿದ್ಯಾನಿಲಯದಿಂದಲೇ ಬಂದಿರುವ ಕುರಿತು ಹಾಗೂ ಅಧಿಕೃತವಾಗಿ ಆಯೋಜಕರಿಗೆ ಹಣ ಪಾವತಿಯಾಗಿರುವ ಕುರಿತು ಇ-ಮೇಲ್ ಮೂಲಕ ಬಂದ ಉತ್ತರದಿಂದ ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ನೊಂದಣಿ ಶುಲ್ಕ ಪಾವತಿಸಿಕೊಂಡ ನಂತರ ಆಯೋಜಕರು ಎನ್.ಓ.ಸಿ ನೀಡಲು ನಿರಾಕರಿಸಿರುವುದಕ್ಕೆ ಯಾವುದೇ ಸಮರ್ಪಕ ದಾಖಲೆ ನೀಡಿರುವುದಿಲ್ಲ. ಹಾಗೂ ಕರ್ನಾಟಕ ಆರ್ಥಿಕ ಸಂಹಿತೆ, 1958ರ ಅನುಚ್ಛೇದ 15 ಮತ್ತು 16ನ್ನು ಕಡೆಗಣಿಸಿದಂತಾಗುತ್ತದೆ. ಹಾಗಾಗಿ ಸದರಿ **ಮೊತ್ತ ರೂ.97,223/-ಗಳನ್ನು ಸಂಬಂಧಿಸಿದವರಿಂದ ವಸೂಲಿಸಲು ಸೂಚಿಸಿದೆ 38.16 ಬಿಡಿ ಬಿಡಿಯಾಗಿ ಪಿಠೋಪಕರಣಗಳನ್ನು ಖರೀದಿಸಿ ವೆಚ್ಚಭರಿಸಿರುವುದು.**

(ವಿಚಾರಣಾ ಪತ್ರಸಂಖ್ಯೆ:187/ದಿ:30.10.2025)

ವಿಶ್ವವಿದ್ಯಾನಿಲಯವು ಹಂಸ ಕಟ್ಟಡದಲ್ಲಿನ ಪ್ರವೇಶಾತಿ ವಿಭಾಗವನ್ನು ನವೀಕರಿಸಿದ ನಂತರ ಪ್ರವೇಶಾತಿ ವಿಭಾಗದ ಕಛೇರಿ ಕಾರ್ಯಗಳಿಗೆ ಅಗತ್ಯವಿರುವ ವಿವಿಧ ಬಗೆಯ ಪೀಠೋಪಕರಣಗಳನ್ನುGem Portalನ ಮೂಲಕ ರೂ.24,96,677/-ಗಳಿಗೆ ಖರೀದಿಸಲಾಗಿರುತ್ತದೆ. ವಿವರ ಕೆಳಕಂಡಂತಿರುತ್ತದೆ.

ಕ್ರ.ಸಂ	ವೋಚರ್ ಸಂಖ್ಯೆ /ಮಾಹೆ	ಚೆಕ್ ಸಂಖ್ಯೆ/ ದಿನಾಂಕ	ಮೊತ್ತ (ರೂ.ಗಳಲ್ಲಿ)	ಸರಬರಾಜು ಸಂಸ್ಥೆ ವಿವರ	ಐಟಂ ವಿವರ
01	12/ಫೆಬ್ರವರಿ	638264 ದಿ:03.02.25	5,64,100	MS Rishab Enter Prises, Mysore	Partitions Wooden and Plastic Moulded Chair with Arms
02	11/ಫೆಬ್ರವರಿ	638263 ದಿ:03.02.25	5,06,472	MS Maanav Enter Prises, Mysore	Executive Table, Executive Computer Table and Executive ETL
03	10/ಫೆಬ್ರವರಿ	638262 ದಿ:03.02.25	9,55,260	MS Decoration Office and Computer Furniture, Mysore	Table
04	14/ಫೆಬ್ರವರಿ	638266 ದಿ:03.02.25	4,70,845	MS First interior House of Furniture, Mysore	Osiya Revolving chair, Osiya HB Marvel Chair, OsiyaNon Revolving Chair
		Total	**24,96,677**		

ಮೇಲೆ ವಿವರಿಸಿರುವಂತೆ ಖರೀದಿಸಿರುವ ಪೀಠೋಪಕರಣಗಳನ್ನು ಒಟ್ಟಾರೆ ಮೌಲ್ಯವು ರೂ.24,96,677/-ಗಳಾಗಿರುವುದರಿಂದ ಕೆ.ಟಿ.ಪಿ.ಪಿಕಾಯ್ದೆ 1999 ಮತ್ತು ನಿಯಮಗಳು 2000 ಪ್ರಕಾರ ಟೆಂಡರ್ ಮೂಲಕ ಖರೀದಿಸಬೇಕಾಗಿರುತ್ತದೆ. ಆದಾಗ್ಯೂ ಟೆಂಡರ್ ಪ್ರಕ್ರಿಯೆ ನಡೆಸದೆ Gem Portalನಲ್ಲಿ ನೇರವಾಗಿ Comparison ಮಾಡಿ ಕಡಿಮೆ ದರ ನಮೂದಿಸಿರುವ ಸಂಸ್ಥೆಯಿಂದ ಖರೀದಿಸಿ ಪಾರದರ್ಶಕ ಕಾಯ್ದೆ&ನಿಯಮವನ್ನು ಉಲ್ಲಂಘಿಸಿರುವುದಕ್ಕೆ ಸಂಬಂಧಿಸಿದಂತೆ ವಿವರಣೆ ನೀಡುವಂತೆ ವಿಚಾರಣಾ ಪತ್ರಸಂಖ್ಯೆ:187/ದಿ:30.10.2025ನ್ನು ನೀಡಲಾಗಿತ್ತು. ಅದಕ್ಕೆ ವಿಶ್ವವಿದ್ಯಾನಿಲಯದವರು "ವಿವಿಧ ಮಾದರಿಯ ಪಿಠೋಪಕರಣಗಳಲ್ಲಿ ಪ್ರತಿಯೊಂದು ಪಿಠೋಪಕರಣಗಳ ಒಟ್ಟಾರೆ ಮೊತ್ತವು ರೂ.10.00 ಮಿತಿಯೊಳಗೆ ಇರುತ್ತದೆ. ಭಾರತ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕ ಸಚಿವಾಲಯವು ದಿನಾಂಕ:08.01.2022 ರಂದು ಆದೇಶವನ್ನು ಹೊರಡಿಸಿದ್ದು, ಸದರಿ ಆದೇಶದಲ್ಲಿ ಸರ್ಕಾರಿ ಇಲಾಖೆ/ಸಂಸ್ಥೆಗಳಿಗೆ ಅಗತ್ಯವಿರುವ ವಿವಿಧ ಬಗೆಯ ಪೀಠೋಪಕರಣಗಳನ್ನು ಖಾಸಗಿ ಮತ್ತು ಸ್ಥಳೀಯ ಮಾರುಕಟ್ಟೆಯಲ್ಲಿ ಖರೀದಿಸುವ ಅಥವಾ KPPP e-procurement ಮೂಲಕ ಟೆಂಡರ್ ಆಹ್ವಾನಿಸಿ ಖರೀದಿಸುವ ಬದಲು Govt E. market place (GEM)ನ ಮುಖಾಂತರವೆ ಖರೀದಿಸಲು ಅವಕಾಶವನ್ನು ಕಲ್ಪಿಸಿರುತ್ತದೆ. ಸದರಿGEM Govt E market place ತಂತ್ರಾಂಶವು

KPPP e-procurement ಗಿಂತಲೂ ಹೆಚ್ಚಿನ ಪಾರದರ್ಶಕತೆ (Transparency) ಇರುವುದರಿಂದ ಪೀಠೋಪಕರಣಗಳ ಒಟ್ಟಾರೆ ಮೊತ್ತವು ರೂ.10.00 ಲಕ್ಷಗಳಿಗಿಂತ ಕನಿಷ್ಠ ಮೊತ್ತವಾಗಿದ್ದರೆ ಅಂತಹ ಪೀಠೋಪಕರಣಗಳನ್ನು ಸರಬರಾಜುಮಾಡುವ ಸರಬರಾಜುದಾರರು ನಮೂದಿಸಿರುವ ದರಗಳ ಆಧಾರದ ಮೇಲೆ GEM Portal ತಂತ್ರಾಂಶವು ಆಂತರಿಕ ತುಲನಾತ್ಮಕ ಪ್ರಕ್ರಿಯೆಯನ್ನು ನಡೆಸಿ ಇತರರಿಗಿಂತ ಕನಿಷ್ಠ ದರವನ್ನು ನಮೂದಿಸಿರುವ ಸರಬರಾಜುದಾರರಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ ಕೆ.ಟಿ.ಪಿ.ಪಿಕಾಯ್ದೆ 1999 ಮತ್ತು ನಿಯಮಗಳು 2000 ಪ್ರಕಾರ 5 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಖರೀದಿಯನ್ನು ಟೆಂಡರ್ ಪ್ರಕ್ರಿಯೆ ಮೂಲಕ ಕೈಗೊಳ್ಳಬೇಕಾಗಿರುತ್ತದೆ. ಜೆಮ್ ಪೋರ್ಟಲ್‌ನಲ್ಲಿಯೇ ಟೆಂಡರ್ ಮೂಲಕ ಖರೀದಿ ಮಾಡದೇ ನೇರವಾಗಿ Comparison ಮಾಡಿ ಉದ್ದೇಶ ಪೂರಕವಾಗಿ ಬಿಡಿಬಿಡಿಯಾಗಿ ಖರೀದಿ ಮಾಡಿರುವುದರಿಂದ ಮೇಲೆ ಏವರಿಸಿರುವ ಮೊತ್ತ ರೂ.**24,96,677/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

38.17. ರಾಮನಗರ ನೂತನ ಪ್ರಾದೇಶಿಕ ಕೇಂದ್ರದಿಂದ ಪೀಠೋಪಕರಣಗಳನ್ನು ಮೈಸೂರಿನ ಕೇಂದ್ರ ಕಛೇರಿಗೆ ಸ್ಥಳಾಂತರಿಸಿರುವ ಸಂಬಂಧ ವೆಚ್ಚಭರಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:188/ದಿ:31.10.2025)

ರಾಮನಗರ ಜಿಲ್ಲೆಯ ತಿಪ್ಪಸಂದ್ರ ಗ್ರಾಮದಲ್ಲಿ ನಿರ್ಮಿಸಿರುವ ನೂತನ ಪ್ರಾದೇಶಿಕ ಕೇಂದ್ರದ ಕಟ್ಟಡದಲ್ಲಿ ಹೊಸದಾಗಿ ಅಳವಡಿಸಲಾಗಿರುವ ಹೆಚ್ಚುವರಿ ವಿವಿಧ ಬಗೆಯ ಪೀಠೋಪಕರಣಗಳನ್ನು ಮೈಸೂರಿನ ಕೇಂದ್ರ ಕಛೇರಿಗೆ ಸ್ಥಳಾಂತರಿಸಿರುವ ಸಂಬಂಧ ಫೆಬ್ರವರಿ ಮಾಹೆಯ ವೌಚರ್ ಸಂಖ್ಯೆ:07 ಚೆಕ್ ಸಂಖ್ಯೆ:638259 ದಿ:03.02.2025ರಲ್ಲಿ MS Sattva Enterprises, Mysore ರವರಿಗೆ ರೂ.99,120/-ಗಳನ್ನು ಪಾವತಿಸಲಾಗಿದೆ. ಸದರಿ ವೆಚ್ಚಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಅಂಶಗಳನ್ನು ಗಮನಿಸಲಾಗಿದೆ.

01. ಬಿಲ್ಲಿನಲ್ಲಿ Transport for Tippasandra Bangalore to Mysore Vijaya Nagar KSOU Building ಎಂದು ದರಪಟ್ಟಿ ಆಹ್ವಾನಿಸಲಾಗಿದ್ದು, ರಾಮನಗರದ ಪ್ರಾದೇಶಿಕ ಕೇಂದ್ರದಿಂದ ಮೈಸೂರಿಗೆ ಕಡಿಮೆ ಅಂತರವಿದ್ದು, ಬೆಂಗಳೂರಿನಿಂದ ಸಾಗಾಣಿಕೆ ಮಾಡಿರುವುದಾಗಿ ಬಿಲ್ಲಿನಲ್ಲಿ ಕ್ಲೈಂ ಮಾಡಿರುವುದರಿಂದ ಹೆಚ್ಚುವರಿ ವೆಚ್ಚ ಭರಿಸಲಾಗಿದೆ.

02. ದರಪಟ್ಟಿ ಪ್ರಕರಣೆಯಲ್ಲಿಯೂ ಸಹ Transport for Tippasandra Bangalore to Mysore VijayaNagar KSOU Building ಎಂದು ದರಪಟ್ಟಿ ಆಹ್ವಾನಿಸಲಾಗಿದೆ.

03. ದರಪಟ್ಟಿಯಲ್ಲಿ 4 Trip ಎಂದು ಪ್ರಕಟಣೆ ಮಾಡಲಾಗಿದ್ದು, ಹೆಚ್ಚಿನ capacity ಯಿರುವ ಟ್ರಕ್ ಬಳಸಿ ಒಂದೇ Trip ನಲ್ಲಿ ಸಾಗಾಣಿಕೆ ಮಾಡಬಹುದಾಗಿದ್ದರೂ, 4 Trip ಎಂದು ದರ ಆಹ್ವಾನಿಸಿರುವ ಔಚಿತ್ಯತೆ ತಿಳಿಸುವುದು.

04. ಪರೀಕ್ಷ ಕಾರ್ಯಗಳಿಗೆ ಸಂಬಂಧಿಸಿದಂತೆ ವೌಚರ್ ಸಂಖ್ಯೆ: 214(ಮಾರ್ಚ್ ಮಾಹೆ) ರಲ್ಲಿ 10ಟನ್ Load capacity ಯಿರುವ ಟ್ರಕ್‌ಅನ್ನು ಕಿ.ಮೀಗ ರೂ.70 ರಂತೆ(ಟೋಲ್ ವೆಚ್ಚಸೇರಿ)ಟ್ರಕ್‌ಅನ್ನು ಬಾಡಿಗೆಗೆ ಪಡೆಯಲಾಗಿದೆ. ಅದರಂತೆ ರಾಮನಗರ ಪ್ರಾದೇಶಿಕ ಕೇಂದ್ರವೂ 140 ಕಿ.ಮೀ ಅಂತರದಲ್ಲಿದ್ದು, ಸುಮಾರು ರೂ.10,000/- ವೆಚ್ಚವಾಗುತ್ತಿತ್ತು.

05. ವಿಶ್ವವಿದ್ಯಾನಿಲಯದಲ್ಲಿ ಎರಡು ಟ್ರಕ್ ವಾಹನಗಳಿದ್ದು, ಸದರಿ ವಾಹನಗಳನ್ನು ಬಳಸಿಕೊಳ್ಳದೇ ಹೆಚ್ಚುವರಿ ವೆಚ್ಚಭರಿಸಿದಂತಾಗಿದೆ.

ಮೇಲಿನ ಅಂಶಗಳಿಗೆ ಸಂಬಂಧಿಸಿದಂತೆ ಸೂಕ್ತ ವಿವರಣೆ ನೀಡುವಂತೆ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:188/ದಿ:31.10.2025ರಲ್ಲಿ ಕೋರಲಾಗಿ, ವಿಶ್ವವಿದ್ಯಾನಿಲಯದವರು ತಿಪ್ಪಸಂದ್ರ ಗ್ರಾಮವು ರಾಮನಗರ ಜಿಲ್ಲೆಯ ಗ್ರಾಮವಾಗಿರುತ್ತದೆ. ಸದರಿ ಜಿಲ್ಲೆಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯಂತಲೂ ಕರೆಯಲಾಗುತ್ತದೆ ಹಾಗೂ ತಿಪ್ಪಸಂದ್ರವೆಂಬ ಗ್ರಾಮವು ರಾಮನಗರ ಜಿಲ್ಲೆಯಲ್ಲಿದ್ದು ಬೆಂಗಳೂರು ಜಿಲ್ಲೆಯಲ್ಲಿ ಇರುವುದಿಲ್ಲ. ತಿಪ್ಪಸಂದ್ರ ಗ್ರಾಮ, ರಾಮನಗರ ಜಿಲ್ಲೆಯಿಂದಲೇ ಸಾಗಾಣಿಕೆ ಮಾಡಿದ್ದು, ಬೆಂಗಳೂರಿನಿಂದ ಸಾಗಾಣಿಕೆ ಮಾಡಿರುವುದಿಲ್ಲವಾದ್ದರಿಂದ ಸದರಿ ಹುಂಡಿಯಲ್ಲಿ ನಿಗದಿತ ಮೊತ್ತವನ್ನು ಮಾತ್ರ ಭರಿಸಿದ್ದು ಹೆಚ್ಚುವರಿ ವೆಚ್ಚವನ್ನು ಭರಿಸಿರುವುದಿಲ್ಲ.

ಪೀಠೋಪಕರಣಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಅವುಗಳನ್ನು ಒಂದೇ Trip ನಲ್ಲಿ ಸಾಗಿಸಲು ಬೃಹತ್ವಾಹನಕ್ಕೆ ಕಷ್ಟ ಸಾಧ್ಯವಾಗುತ್ತದೆ ಹಾಗೂ ಸದರಿ ಪ್ರಾದೇಶಿಕ ಕೇಂದ್ರದ ರಸ್ತೆ ತಿಪ್ಪಸಂದ್ರ ಗ್ರಾಮದ ಮೂಲಕ ಹಾದು ಹೋಗುವುದರಿಂದ ವಾಹನವನ್ನು ಚಲಾಯಿಸಲು ತುಂಬಾ ಕಷ್ಟವಾಗಿರುವುದರಿಂದ ಸಾಮಾನ್ಯ Truck ವಾಹನವನ್ನು ಬಾಡಿಗೆ ಪಡೆದು 04 Trip ನಲ್ಲಿ ಸಾಗಾಣಿಕೆ ಮಾಡಲಾಗಿರುತ್ತದೆ. ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಬಾಡಿಗೆ ಪಡೆಯಲಾಗುವ ವಾಹನದಲ್ಲಿ ಕೇವಲ ಪ್ರಶ್ನೆಪತ್ರಿಕೆ ಮತ್ತು ಉತ್ತರಪತ್ರಿಕೆಗಳನ್ನು ಮಾತ್ರ ಸಾಗಾಣಿಕೆ ಮಾಡಲಾಗುತ್ತದೆ.

ಆದರೆ ತಿಪ್ಪಸಂದ್ರ ಗ್ರಾಮ ರಾಮನಗರ ಪ್ರಾದೇಶಿಕ ಕೇಂದ್ರದಿಂದ ಮೈಸೂರಿನ ವಿಜಯನಗರ ಪ್ರಾದೇಶಿಕ ಕೇಂದ್ರಕ್ಕೆ ರವಾನಿಸಲಾಗುವ ಸಾಮಗ್ರಿಗಳು ವಿವಿಧ ಬಗೆಯ ಪೀಠೋಪಕರಣಗಳಾಗಿದ್ದು ಪೀಠೋಪಕರಣಗಳನ್ನು ಬಿಡಿ ಭಾಗಗಳಾಗಿ ಬೇರ್ಪಡಿಸಿ ಅತ್ಯಂತ ಜಾಗರೂಕತೆಯಿಂದ ಮೈಸೂರಿಗೆ ಸ್ಥಳಾಂತರಿಸಬೇಕಾಗಿರುತ್ತದೆ. ಹಾಗೂ ವಿವಿನಿಲಯದಲ್ಲಿ ಎರಡು ಸಣ್ಣ/ಮಧ್ಯಮ ಪ್ರಮಾಣದ ವಾಹನಗಳಿದ್ದು, ಸದರಿ ವಾಹನಗಳನ್ನು ಪರೀಕ್ಷಾ ವಿಭಾಗದ ಕೆಲಸ ಕಾರ್ಯಗಳಾದ ಪ್ರಶ್ನೆಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ವಿವಿಧ ಪ್ರಾದೇಶಿಕ ಕೇಂದ್ರಗಳಿಗೆ ಸ್ಥಳಾಂತರಿಸುವ ಕೆಲಸಕ್ಕೆ ಹಾಗೂ ಸಿದ್ಧಪಾಠ ವಿಭಾಗದ ಕೆಲಸ ಕಾರ್ಯಗಳಾದ ವಿವಿಧ ಸಿದ್ಧಪಾಠಗಳನ್ನು ರಾಜ್ಯಾದ್ಯಂತ ಇರುವ ವಿವಿಧ ಪ್ರಾದೇಶಿಕ ಕೇಂದ್ರಗಳಿಗೆ ಸಿದ್ಧಪಾಠಗಳನ್ನು ಸರಬರಾಜು/ರವಾನಿಸುವ ಕೆಲಸ ಕಾರ್ಯಗಳಿಗೆ ಆ ಸಂದರ್ಭದಲ್ಲಿ ನಿಯೋಜಿಸಿರುವುದರಿಂದ ಖಾಸಗಿ ವಾಹನವನ್ನು ಪಡೆಯಲಾಗಿರುತ್ತದೆ." ಎಂದು ತಿಳಿಸಿರುತ್ತಾರೆ. ಆದರೆ ರಾಮನಗರ ಜಿಲ್ಲೆಯ ತಿಪ್ಪಸಂದ್ರವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆ ಎಂದು ಕರೆಯುತ್ತಾರೆ ಎಂದು ತಿಳಿಸಿರುವುದು ಹಾಗೂ ಇತರೆ ಉತ್ತರಗಳು ಸಹ ಸಮರ್ಪಕವಾಗಿರುವುದಿಲ್ಲ. ಅಲ್ಲದೇ ವಿಶ್ವವಿದ್ಯಾನಿಲಯದ ವಾಹನಗಳಿಗೆ ವರ್ಷ ಪೂರ್ತಿ ಪರೀಕ್ಷಾ ಕೆಲಸವಿರುವುದಿಲ್ಲ. ಬಿಡುವಿನ ಅವಧಿಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವ ಸಂಪನ್ಮೂಲವನ್ನು ಬಳಸಿಕೊಂಡು ಸದರಿ ವೆಚ್ಚವನ್ನು ತಪ್ಪಿಸಬಹುದಾಗಿತ್ತು. ಹಾಗಾಗಿ ಸದರಿ ವೆಚ್ಚವು ತಪ್ಪಿಸಬಹುದಾದ ವೆಚ್ಚವಾಗಿರುತ್ತದೆ.

38.18. ಕರಾರು ಪತ್ರಗಳನ್ನು ಮಾಡಿಕೊಳ್ಳುವಾಗ ಕಡಿಮೆ ಮುದ್ರಾಂಕ ಶುಲ್ಕ(ಸ್ಟಾಂಪ್ ಡ್ಯೂಟಿ)ವನ್ನು ಸಂಗ್ರಹಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:200 ದಿನಾಂಕ:07.11.2025)

ಕರ್ನಾಟಕ ಮುದ್ರಾಂಕ ಕಾಯ್ದೆ 1957 ಕಲಂ 67 ಬಿ ರನ್ವಯ ನೋಂದಣೇತರ ದಸ್ತಾವೇಜುಗಳಿಂದ ಮುದ್ರಾಂಕ ಶುಲ್ಕ ಸಂಗ್ರಹಿಸಬೇಕಾಗಿರುತ್ತದೆ. ಕರ್ನಾಟಕ ಸ್ಟಾಂಪ್(ತಿದ್ದುಪಡಿ)ಅಧಿನಿಯಮ, 2021ರ ಆರ್ಟಿಕಲ್ 5(ಐ-ಡಿ)ರನ್ವಯ ಕರಾರು ಮೊತ್ತ 10 ಲಕ್ಷದವರೆಗೆ ರೂ.500/- ಹಾಗೂ ಪ್ರತಿ 10 ಲಕ್ಷಗಳ ಹೆಚ್ಚುವರಿ ಕರಾರು ಮೊತ್ತಕ್ಕೆ ರೂ.500/- ರಂತೆ ಗರಿಷ್ಠ 10 ಲಕ್ಷದವರೆಗೆ ಮುದ್ರಾಂಕ ಶುಲ್ಕ ಸಂಗ್ರಹಿಸಬೇಕಾಗಿರುತ್ತದೆ. ಅನುಬಂಧ-59ರಲ್ಲಿ ವಿವರಿಸಿರುವ ಕರಾರುಗಳಲ್ಲಿ ಸದರಿ ನಿಯಮವನ್ನು ಪಾಲಿಸದಿರುವುದು ಕಂಡು ಬಂದಿರುತ್ತದೆ. ಅನುಬಂಧದಲ್ಲಿ ವಿವರಿಸಿರುವಂತೆ ರೂ.75,500/-ಗಳ ಮುದ್ರಾಂಕ ಶುಲ್ಕವನ್ನು ಕಡಿಮೆ ವಸೂಲಿಸಿದ್ದು, ಸಂಬಂಧಿಸಿದವರಿಂದ ವಸೂಲಿಸಿ ನೊಂದಣಿ ಮತ್ತು ಮುದ್ರಾಂಕ ಇಲಾಖೆಯ ಲೆಕ್ಕತೀರ್ಷಿಕೆಗೆ ಜಮೆ ವಿವರಗಳನ್ನು ಹಾಜರುಪಡಿಸುವಂತೆ ಕೋರಲಾಗಿ ಲೆಕ್ಕತಪಾಸಣೆ ವಿಚಾರಣಾ ಪತ್ರ ಸಂಖ್ಯೆ:200 ದಿನಾಂಕ:07.11.2025 ರಲ್ಲಿ ಕೋರಲಾಗಿ ವಿಶ್ವವಿದ್ಯಾನಿಲಯದವರು ಸಂಬಂಧಪಟ್ಟ ಸಂಸ್ಥೆಯವರುಗಳಿಗೆ ಸದರಿ ಮಾಹಿತಿಯನ್ನು ನೀಡಿ ಮುದ್ರಾಂಕ ಶುಲ್ಕವನ್ನು ವಸೂಲಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿರುತ್ತಾರೆ. ಹಾಗಾಗಿ ಕಡಿಮೆ ಸಂಗ್ರಹಿಸಿರುವ ಮುದ್ರಾಂಕ ಶುಲ್ಕ **ರೂ.75,500/-ಗಳನ್ನು ಸಂಬಂಧಿಸಿದವರಿಂದ ವಸೂಲಿಸಿ** ನೊಂದಣಿ ಮತ್ತು ಮುದ್ರಾಂಕ ಇಲಾಖೆಯ ಲೆಕ್ಕತೀರ್ಷಿಕೆಗೆ ಜಮೆ ಮಾಡಿ, ಜಮಾ ಚಲನ್‌ಗಳನ್ನು ಹಾಜರುಪಡಿಸಲು ಸೂಚಿಸಿದೆ.

38.19. ಆನ್‌ಲೈನ್ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಲು ಶುಲ್ಕ ಹಂಚಿಕೆ ಮಾದರಿ ವ್ಯವಸ್ಥೆಯಲ್ಲಿ ಹೊರಗುತ್ತಿಗೆ (Outsourcing) ನೀಡಿ ಪಾವತಿಸಿರುವುದು: (ವಿಚಾರಣಾ ಪತ್ರ ಸಂಖ್ಯೆ:180/ದಿ:18.10.202)

ಮೆ.ತಲಿಸ್ಮಾ ಕಾರ್ಪೊರೆಷನ್ ಪ್ರೈವೇಟ್ ಲಿಮಿಟೆಡ್ ರವರಿಗೆ ವಿಶ್ವವಿದ್ಯಾನಿಲಯದ ಆನ್‌ಲೈನ್ ಕಾರ್ಯಕ್ರಮಗಳಿಗೆ ತಾಂತ್ರಿಕ ಎಲೆಕ್ಟ್ರಾನಿಕ್ ಮೂಲಸೌಕರ್ಯ ಸೇವೆಗಳನ್ನು ಸಿದ್ಧಪಡಿಸಿ ನಿರ್ವಹಿಸುವ ಸೇವೆಗೆ GEM ಪೋರ್ಟಲ್ ಮೂಲಕ ಟೆಂಡರ್ ಕರೆದು ಕರಾರು ಒಪ್ಪಂದ ಮಾಡಲಾಗಿರುತ್ತದೆ. ಅದರಂತೆ 2024-25ನೇ ಸಾಲಿನ ನವೆಂಬರ್ ಮಾಹೆಯ ವೋಚರ್ ಸಂಖ್ಯೆ:115 ರ ಧನಾದೇಶ

ಸಂಖ್ಯೆ:637967/20.11.2024 ರಲ್ಲಿ ರೂ.18,08,300/–ಗಳನ್ನು **ಮೆ.ತಲಿಸ್ಮಾ ಕಾರ್ಪೊರೆಷನ್ ಪ್ರೈವೇಟ್ ಲಿಮಿಟೆಡ್** ರವರಿಗೆ ಪಾವತಿಸಲಾಗಿರುತ್ತದೆ. ಸದರಿ ಟೆಂಡರ್ & ಕರಾರಿಗೆ ಸಂಬಂಧಿಸಿದಂತೆ ಈ ಕೆಳಗಿನ ನ್ಯೂನತೆಗಳನ್ನು ಗಮನಿಸಲಾಗಿದೆ.

1. ಪೂರ್ವ ಅರ್ಹತಾ ಮಾನದಂಡಗಳ ಕ್ರಸಂ.5 ರಲ್ಲಿ "The bidder should have a registered office in Karnataka" ಎಂಬ ನಿಬಂಧನೆಯನ್ನು ವಿಧಿಸಲಾಗಿದ್ದು, ನಿಬಂಧನೆಯು ಸೇವಾದಾರರ ಭಾಗವಹಿಸುವಿಕೆಯನ್ನು ನಿರ್ಬಂಧಿಸಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000ರ ನಿಯಮ 27(1)ಕ್ಕೆ ವಿರುದ್ಧವಾಗಿದ್ದು, ಸದರಿ ಷರತ್ತಿನ ಔಚಿತ್ಯತೆಯನ್ನು ತಿಳಿಸುವುದು.

2. ಶುಲ್ಕ ಹಂಚಿಕೆ ಮಾದರಿ (fee sharing model) ನ ಮುಖಾಂತರವೇ ಆನ್ ಲೈನ್ ಪೋಗ್ರಾಂ ಗಳನ್ನು ನಡೆಸಲು ಟೆಂಡರ್ ಕರೆಯುವ ತೀರ್ಮಾನಕ್ಕೆ ಅನುಸರಿಸಲಾದ ಮಾನದಂಡಗಳು/ಆಧಾರಗಳನ್ನು ಒದಗಿಸುವುದು.

3. ಬಿಡ್ ಮೌಲ್ಯ ಮೊತ್ತ ರೂ.500.00 ಲಕ್ಷಗಳಿಗೆ ಅಂದಾಜಿಸಲು ಅನುಸರಿಸಲಾದ ಮಾನದಂಡಗಳು/ ಆಧಾರಗಳನ್ನು ಒದಗಿಸುವುದು.

4. ಟೆಂಡರ್ ದಾಖಲೆಗಳಲ್ಲಿ ಶೇ.5 ರ ಬದಲಾಗಿ ಶೇ.3 ರ ದರದಲ್ಲಿ ಭದ್ರತಾ ಠೇವಣಿ ನೀಡಲು ತಿಳಿಸಿದ್ದು, ಸರ್ಕಾರಿ ಆದೇಶ ಸಂಖ್ಯೆ: FD611 EXP–12/2023, ದಿ:03.02.2024ರನ್ವಯಶೇ.5 ರಷ್ಟು ಭದ್ರತಾ ಠೇವಣಿ ಪಡೆಯಬೇಕಾಗಿದ್ದು, ಭದ್ರತಾ ಠೇವಣಿ ವಿವರ ಹಾಗೂ Bank Confirmation ಅನ್ನು ಹಾಜರುಪಡಿಸುವುದು.

5. 2023–24ನೇ ಸಾಲಿನ ಜುಲೈ ಅವೃತ್ತಿ ಕೇವಲ 22 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದು, ಜನವರಿ ಅವೃತ್ತಿಯಲ್ಲಿ 128 ವಿದ್ಯಾರ್ಥಿಗಳು ಮಾತ್ರ ಪ್ರವೇಶಾತಿ ಪಡೆದಿರುತ್ತಾರೆ. 5 ಕೋಟಿ ಅಂದಾಜು ಮೊತ್ತದಲ್ಲಿ ಯೋಜನೆಯನ್ನು ಸಿದ್ಧಪಡಿಸಿದ್ದು, ಅಗತ್ಯ ಪೂರ್ವ ತಯಾರಿಗಳನ್ನು ಮಾಡದೇ ಇರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಆನ್‌ಲೈನ್ ಕಾರ್ಯಕ್ರಮವನ್ನು ತಮ್ಮ ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳುವಾಗ ಯಾವ ಮಾನದಂಡಗಳ ಮೂಲಕ ಎಷ್ಟು ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯಬಹುದು ಎಂದು ಅಂದಾಜು ಮಾಡಲಾಗಿದೆ ಎಂಬ ಬಗ್ಗೆ ವಿವರ.

6. 2024–25ನೇ ಸಾಲಿನ ವಾರ್ಷಿಕ ಲೆಕ್ಕಪತ್ರದ ಲೆಕ್ಕಶಿರ್ಷಿಕೆ ಸಂಖ್ಯೆ: 285 ರಡಿ ರೂ.9,45,282/–ಗಳು ವೆಚ್ಚವಾಗಿರುವುದಾಗಿ ದಾಖಲಿಸಲಾಗಿದೆ. ಆದರೆ ವೋಚರ್ ನಲ್ಲಿ Payment head 285 ರಲ್ಲಿ ಭರಿಸಿದ್ದು, ಸದರಿ ವೆಚ್ಚ ರೂ.18,08,300/–ಗಳಿದ್ದು ವ್ಯತ್ಯಾಸಕ್ಕೆ ವಿವರಣೆಯನ್ನು ನೀಡಲು ಕೋರಿದೆ.

7. ಟೆಂಡರ್ ಮೊತ್ತ ರೂ.500 ಲಕ್ಷ ಗಳಾಗಿದ್ದರೂ ಸಹ ಟೆಂಡರ್ ಅವಧಿಯನ್ನು ಕೇವಲ 10 ದಿನ ನೀಡಿರುವುದಕ್ಕೆ ವಿವರಣೆ.

8. ಕರಾರು ಪತ್ರದ ದಿ:29.02.2024 ಇದ್ದು, ಕರಾರಿನಲ್ಲಿ ದಿ:01.02.2024 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವುದಾಗಿ ಕರಾರು ಮಾಡಿರುವುದಕ್ಕೆ ವಿವರಣೆ ನೀಡುವುದು.

9. ಸರ್ಕಾರದ ಆದೇಶ ಸಂಖ್ಯೆ:ಆಈ/576/ವೆಚ್ಚ–12/2018, ದಿ:22.05.2018 ರಲ್ಲಿ ಸೂಚಿಸಿರುವಂತೆ ದರ ಸಂಧಾನ ಮಾಡಿದೇ ವಿಶ್ವವಿದ್ಯಾನಿಲಯಕ್ಕೆ ನಷ್ಟ ಉಂಟುಮಾಡಿರುವುದಕ್ಕೆ ವಿವರಣೆ.

10. ಟೆಂಡರ್ ಕರಾರಿನ ಕ್ರಮ ಸಂಖ್ಯೆ10, 11 Disaster Recovery, In case of any disaster Data must be restored by Service Provider ಹಾಗೂAnnexure B ನಲ್ಲಿ ಸಹ data storage devices etc Purchased by Service Provider ಎಂದು ಕರಾರಾಗಿದ್ದರೂ ಸಹ Work Order ನಲ್ಲಿ Data back up to be created in the University Data Centre ಎಂದು ನಿಬಂಧನೆಯನ್ನು ವಿಧಿಸಲಾಗಿದ್ದು, ಸದರಿ ಷರತ್ತಿನ ಔಚಿತ್ಯತೆಯನ್ನು ಹಾಗೂ disaster Data ಯಾರು ನಿರ್ವಹಿಸಬೇಕು ಎಂಬುದರ ಸ್ಪಷ್ಟತೆ ತಿಳಿಸುವುದು.

11. ಎಶ್ವವಿದ್ಯಾನಿಲಯದಲ್ಲಿ ಪ್ರತ್ಯೇಕ ಅಧಿಕಾರ ಪ್ರತ್ಯಾಯೋಜನೆ ಇಲ್ಲದ ಕಾರಣ, ಸರ್ಕಾರದ ಸಾಮಾನ್ಯ ಏತ್ತಾಧಿಕಾರದ ಸರ್ಕಾರಿ ಆದೇಶ ಸಂಖ್ಯೆ: FD 08 TFP 2023 dated:28.10.2024ರನ್ವಯ Divisional Level Officersಗೆ 1.00 ಕೋಟಿ ಮೌಲ್ಯ ಹಾಗೂ ಇಲಾಖಾ ಮುಖ್ಯಸ್ಥರಿಗೆ ರೂ.2.5 ಕೋಟಿ ಮೌಲ್ಯದ ಅಂದಾಜು ಮೊತ್ತದ ಸರಕು ಮತ್ತು ಸೇವೆಯ ಸಂಗ್ರಹಣೆಗೆ ಅವಕಾಶವಿರುತ್ತದೆ. ಮೇಲಿನ ಎರಡು ಟೆಂಡರ್‌ಗಳ ಅಂದಾಜು ಮೊತ್ತ 5.00 ಕೋಟಿ ಆಗಿರುವುದರಿಂದ ಸರ್ಕಾರದಿಂದ ಅನುಮೋದನೆ ಪಡೆದಿರುವ ಕುರಿತು ದಾಖಲೆಗಳು.

12. ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 39 ಇಜಿಎಂ 2021 ಬೆಂಗಳೂರು ದಿ:10.05.2022 ರಲ್ಲಿ ಆದೇಶಿಸಿದಂತೆ ಸರ್ಕಾರದ ಎಲ್ಲಾ ಇಲಾಖೆಗಳಿಗೆ ಹಾರ್ಡ್‌ವೇರ್, ಸಾಫ್ಟ್‌ವೇರ್ ಇತರೇ ಐ ಟಿ ಪರಿಕರ ಮತ್ತು ಸೇವೆಗಳನ್ನು ಪಡೆಯುವ ಸಲುವಾಗಿ ಸೂಕ್ತ ಮಾರ್ಗದರ್ಶನ ನೀಡಲು, ಎಲ್ಲಾ ಇಲಾಖೆಗಳ ಇಲಾಖಾ ತಾಂತ್ರಿಕ ಸಲಹಾ ಸಮಿತಿಗಳಿಗೆ ತಾಂತ್ರಿಕ ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡಲಾಗಿದೆ. ಸದರಿ ಆದೇಶದಲ್ಲಿನ ಸದಸ್ಯರನ್ನು ತಾಂತ್ರಿಕ ಸಲಹಾ ಸಮಿತಿಯಲ್ಲಿ ನೇಮಿಸಿಕೊಳ್ಳದೇ, ಸದರಿ ಆದೇಶದ ಉಲ್ಲಂಘನೆ ಮಾಡಿರುವುದಕ್ಕೆ ವಿವರಣೆ.

ಮೇಲಿನ ನ್ಯೂನತೆಗೆ ಸಂಬಂಧಿಸಿದಂತೆ ವಿವರಣೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:180/ದಿ:18.10.2025ರಲ್ಲಿ ಕೋರಲಾಗಿ, ವಿಶ್ವವಿದ್ಯಾನಿಲಯದವರು "ದಿನಾಂಕ 21.12.2023 ರಂದು ನಡೆದ ಟೆಂಡರ್ ರಚನಾ ಸಲಹಾ ಮತ್ತು ಪರಿಶೀಲನಾ ಸಮಿತಿ ಸಭೆಯಲ್ಲಿ Bid document ಅನ್ನು ಅಂತಿಮಗೊಳಿಸಿರುತ್ತದೆ. ಮುಂದುವರೆದು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೇಂದ್ರ ಕಚೇರಿಯು ಕರ್ನಾಟಕದಲ್ಲಿರುವ ಹಿನ್ನೆಲೆಯಲ್ಲಿ "The bidder should have a registered office in Karnataka" ಎಂಬ ನಿಬಂಧನೆಯನ್ನು ವಿಧಿಸಲಾಗಿರುತ್ತದೆ. ವಿವಿಯ 62 ನೇ ಶೈಕ್ಷಣಿಕ ಮಂಡಳಿ (ವಿ.ಸಂ: 62.19) ಹಾಗೂ 175 (ವಿ.ಸಂ: 175.21) ನೇ ವ್ಯವಸ್ಥಾಪನಾ ಮಂಡಳಿ ಸಭೆಗಳ ತೀರ್ಮಾನಗಳನ್ವಯ ಶುಲ್ಕ ಹಂಚಿಕೆ ಮಾದರಿ (Fee Sharing Model) ನ ಮುಖಾಂತರ ಆನ್‌ಲೈನ್ ಪ್ರೋಗ್ರಾಂಗಳನ್ನು ನಡೆಸಲು ಟೆಂಡರ್ ಕರೆಯಲಾಗಿರುತ್ತದೆ. ದಿನಾಂಕ:21.12.2023 ರಂದು ನಡೆದ ಟೆಂಡರ್ ರಚನಾ ಸಲಹಾ ಮತ್ತು ಪರಿಶೀಲನಾ ಸಮಿತಿ ಸಭೆಯಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಲೆಕ್ಕವನ್ನು ಅಂದಾಜಿಸಿ ಬಿಡ್ ಮೌಲ್ಯ ಮೊತ್ತ ರೂ.500.00 ಲಕ್ಷಗಳೆಂದು ಅಂದಾಜಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ:ಆಇ 675 ವೆಚ್ಚ-12/2020, ದಿನಾಂಕ:22.12.2020 ರಂತೆ ಹಾಗೂ ದಿನಾಂಕ:25.01.2024 ರಂದು ನಡೆದ ಟೆಂಡರ್ ರಚನಾ ಸಲಹಾ ಮತ್ತು ಪರಿಶೀಲನಾ ಸಮಿತಿ ಸಭೆಯಲ್ಲಿ ಭದ್ರತಾ ಠೇವಣಿಯನ್ನು 3% ಗೆ ನಿಗದಿಪಡಿಸಲಾಗಿರುತ್ತದೆ. ವಿವಿಯ 62 ನೇ ಶೈಕ್ಷಣಿಕ ಮಂಡಳಿ (ವಿ.ಸಂ: 62.19) ಹಾಗೂ 175 (ವಿ.ಸಂ: 175.21) ನೇ ವ್ಯವಸ್ಥಾಪನಾ ಮಂಡಳಿ ಸಭೆಗಳ ತೀರ್ಮಾನಗಳನ್ವಯ ಶುಲ್ಕ ಹಂಚಿಕೆ ಮಾದರಿ (Fee Sharing Model) ಯ ಮುಖಾಂತರ ಆನ್‌ಲೈನ್ ಪ್ರೋಗ್ರಾಂಗಳನ್ನು ನಡೆಸಲು ಟೆಂಡರ್ ಕರೆಯಲಾಗಿರುತ್ತದೆ. ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಟೆಂಡರ್ ಅವಧಿಯನ್ನು ನಿಗಧಿಪಡಿಸಲಾಗಿದೆ. M/s. Talisma Corporation India Pvt Ltd., ರವರಿಗೆ ದಿನಾಂಕ:30.01.2024 ರಂದು ಕಾರ್ಯದೇಶ ನೀಡಿದ ಹಿನ್ನೆಲೆಯಲ್ಲಿ ದಿನಾಂಕ:01.02.2024 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದಂತೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಟೆಂಡರ್‌ನ ಅಂದಾಜು ಮೊತ್ತಕ್ಕಿಂತ ಹೆಚ್ಚಾಗಿಲ್ಲದ ಕಾರಣ ದರ ಸಂದಾನ ಕೈಗೊಂಡಿರುವುದಿಲ್ಲ. ಡಾಟಾವನ್ನು M/s. Talisma Corporation India Pvt Ltd., ರವರು ನಿರ್ವಹಿಸುತ್ತಿದ್ದು, ವಿದ್ಯಾರ್ಥಿಗಳ ಮಾಹಿತಿಯನ್ನು ಕೂಢೀಕರಿಸಲು ವಿಶ್ವವಿದ್ಯಾನಿಲಯದ Data Centre ನಲ್ಲಿ Backup ಪಡೆಯಲಾಗಿರುತ್ತದೆ. ಕರಾಮುಏ ಕಾಯ್ದೆಯ ಅಧ್ಯಾಯ– IV, 18. (2). (II) ರಲ್ಲಿ ವ್ಯವಸ್ಥಾಪನ ಮಂಡಳಿಯು ಎಲ್ಲಾ ಆಡಳಿತ ವ್ಯವಹಾರಗಳನ್ನು ನಡೆಸುವ, ಅಧಿಕಾರಗಳನ್ನು ಹೊಂದಿರುವ ಹಿನ್ನೆಲೆಯಲ್ಲಿ, ಮಾನ್ಯ ವ್ಯವಸ್ಥಾಪನಾ ಮಂಡಳಿಯ 173 ನೇ (ವಿಷಯ ಸಂಖ್ಯೆ: 173.18 ಹಾಗೂ 173.19) ಸಭೆಯಲ್ಲಿ ಅಂದಾಜು ವೆಚ್ಚ ರೂ.5.00 ಕೋಟಿ ವೆಚ್ಚದಲ್ಲಿ Data Centre £À Storage enhance ಮಾಡಲು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಕ್ರಮವಹಿಸಲಾಗಿರುತ್ತದೆ ಎಂಬ ಅಂಶವನ್ನು ಅವಗಾಹನೆಗೆ ತರಲಾಗಿದೆ. ಮಾನ್ಯ ಕುಲಪತಿಗಳ ಅನುಮೋದನೆಯಂತೆ ಎವಿಗೆ ತಾಂತ್ರಿಕ ಪರಿಣಿತರ ಸಲಹಾ ಸಮಿತಿ ರಚಿತವಾಗಿದ್ದು, ಸದರಿ ಸಮಿತಿಯ ಶಿಫಾರಸ್ಸಿನಂತೆ ಕ್ರಮವಹಿಸಲಾಗಿರುತ್ತದೆ." ಎಂದು ತಿಳಿಸಿರುತ್ತಾರೆ.

ವಿಶ್ವವಿದ್ಯಾನಿಲಯ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸುವ ಆದೇಶ/ನಿಯಮಗಳಿಗೆ ಬದ್ಧರಾಗಿರಬೇಕು. ಇದನ್ನು ಉಲ್ಲಂಘಿಸಿ ವಿಶ್ವವಿದ್ಯಾನಿಲಯದ ಸಮಿತಿಗಳಲ್ಲಿ ತೀರ್ಮಾನ ತೆಗೆದುಕೊಳ್ಳಲು ಅವಕಾಶ ಇರುವುದಿಲ್ಲವಾದ್ದರಿಂದ ಅಲ್ಲದೇ ದರ ಅಂದಾಜುಗಳನ್ನು ಮಾರುಕಟ್ಟೆ ಆಧಾರದ ಮೇಲೆ ಮಾಡಬೇಕೆ ವಿನಃ ಸಮಿತಿಗಳಲ್ಲಿ ತಿರ್ಮಾನಿಸಲು ಅವಕಾಶವಿರುವುದಿಲ್ಲ. ವ್ಯವಸ್ಥಾಪನ ಮಂಡಲಿ ಸಮಿತಿಯು ಸರ್ಕಾರದ ಆದೇಶಗಳನ್ನು ಮೀರಿ ತಿರ್ಮಾನ ಕೈಗೊಳ್ಳಲು ಅವಕಾಶವಿರುವುದಿಲ್ಲ. ಭದ್ರತಾ ಠೇವಣಿಯನ್ನು ಕರೋನಾ ಸಮಯದಲ್ಲಿ ಮಾತ್ರ ಶೇ.3 ರಷ್ಟು ನಿಗದಿಪಡಿಸಿತ್ತು. ಅಲ್ಲದೇ 2023-24ನೇ ಸಾಲಿನ ಲೆಕ್ಕತಪಾಸಣಾ ವರದಿಯ ಕಂಡಿಕೆ ಸಂಖ್ಯೆ-14.2ರಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದ ನಿಯಮಗಳ ಉಲ್ಲಂಘನೆಯ ಕುರಿತು ಉಲ್ಲೇಖಿಸಲಾಗಿರುತ್ತದೆ. ಮೇಲಿನ ನ್ಯೂನತೆಗಳಿಂದಾಗಿ ಮೆ.ತಲಿಸ್ಮಾ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್ ರವರಿಗೆ ಪಾವತಿಸಿರುವ ಮೊತ್ತ **ರೂ.18,08,300/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

38.20 ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿಯಿಂದ ಪರೀಕ್ಷೆಯವರೆಗೆ ತಂತ್ರಾಂಶ ಇದ್ದರೂ ಡಿಜಿಟಲ್ ಶೈಕ್ಷಣಿಕ ಹಾಗೂ ಡಿಜಿಟಲ್ ಮೌಲ್ಯಮಾಪನ ಎಂದು ತಂತ್ರಾಂಶಗಳನ್ನು ಬೇರೆ ಬೇರೆ ಸಂಸ್ಥೆಯವರಿಂದ ಸಿದ್ದಪಡಿಸಿರುವುದು:

(ವಿಚಾರಣಾ ಪತ್ರಸಂಖ್ಯೆ:141/ದಿ:26.09.2025)

ವಿಶ್ವವಿದ್ಯಾನಿಲಯದಲ್ಲಿ ವಿವಿಧ ವಿಭಾಗಗಳಲ್ಲಿ ವಿವಿಧ ಉದ್ದೇಶಕ್ಕಾಗಿ ಬಳಸುತ್ತಿರುವ ಎಲ್ಲಾ ತಂತ್ರಾಂಶಗಳ (**Software**) ಮಾಹಿತಿಯನ್ನು ಈ ಕೆಳಗಿನ ನಮೂನೆಯಲ್ಲಿ ಲೆಕ್ಕಪರಿಶೋಧನೆಗೆ ಹಾಜರುಪಡಿವಂತೆ ವಿಚಾರಣಾ ಪತ್ರಸಂಖ್ಯೆ:141/ದಿ:26.09.2025ರಲ್ಲಿ ಕೋರಲಾಗಿ ಈ ಕೆಳಗಿನಂತೆ ವಿವರಗಳನ್ನು ತಿಳಿಸಿರುತ್ತಾರೆ.

ಕ್ರ.ಸಂ	ತಂತ್ರಾಂಶದ ವಿವರ	ತಂತ್ರಾಂಶದವನ್ನು ಒದಗಿಸಿದ ಸಂಸ್ಥೆಯ ಹೆಸರು	ತಂತ್ರಾಂಶಕ್ಕಾಗಿ ಭರಿಸಿದ ಮೆಚ್ಚ	ತಂತ್ರಾಂಶದ ಕಾರ್ಯ	ತಂತ್ರಾಂಶದ ಬಳಕೆಯ ಪ್ರಾರಂಭದ ದಿನಾಂಕ	ವಾರ್ಷಿಕ ಕಾರ್ಯ ನಿರ್ವಹಣೆ ನೀಡಿರುವ ವಿವರ
1	Admission to Examination End to End ERP Software	M/s. KEONICS, Bangalore	98,71,859	ಪ್ರವೇಶಾತಿ ಹಾಗೂ ಪರೀಕ್ಷಾ ಕಾರ್ಯ ಚಟುವಟಿಕೆಗಳು	30.09.2019	ಪ್ರಸ್ತುತ M/s. Inhawk IT Solutions. Bangalore ರವರಿಗೆ ವಾರ್ಷಿಕ ನಿರ್ವಹಣೆ ನೀಡಲಾಗಿರುತ್ತದೆ.
2	Tally Prime Gold Multi User Software	M/s. Kushwanth Soft Solutions. Mysore.	63,720	Tally	31.07.2021	-
3	Library Remote Access Software	M/s. Knimbus Online Private Ltd.. New Delhi	4,95,600	Library Remote Access	07.09.2022	ಪ್ರಸ್ತುತ M/s. Knimbus Online Private Ltd.. ರವರಿಂದ Subscription ಪಡೆಯಲಾಗಿರುತ್ತದೆ
4	KSOU websites	M/s. Rait Communications, Bangalore	99,24,540	websites	23.01.2024	-
5	Digital	M/s. Edu Easy India	Per	ವಿದ್ಯಾರ್ಥಿಗಳ ಶೈಕ್ಷಣಿಕ	01.07.2023	-

	Academic Platform	Pvt Ltd	Student 287/-	ಕಾರ್ಯಚಟುವಟಿಕೆಗಳಿಗೆ		
6	Digital Evaluation Software	M/s. Convergent Wireless Communiactions Pvt. Ltd.	1,18,73,110	*ÀiË®å*ÀiÁ¥À£À	10.03.2022	–

ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿಯಿಂದ ಪರೀಕ್ಷೆವರೆಗೆ **End To End** ತಂತ್ರಾಂಶದಲ್ಲಿಯೇ ಡಿಜಿಟಲ್ ಶೈಕ್ಷಣಿಕ ಹಾಗೂ ಡಿಜಿಟಲ್ ಮೌಲ್ಯಮಾಪನ ತಂತ್ರಾಂಶಗಳ ನಿರ್ವಹಣೆಯನ್ನು ಕೈಗೊಳ್ಳಬಹುದಾಗಿರುತ್ತದೆ ಎಂದು ಲೆಕ್ಕಪರಿಶೋಧನೆಯು ಅಭಿಪ್ರಾಯಿಸಿರುತ್ತದೆ. ಇದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯು ಕಡಿಮೆಯಾಗುವ ಸಾಧ್ಯತೆಗಳು ಇರುತ್ತವೆ.

38.21 **Alumni Portal ಹಾಗೂ ಪ್ರಸಾರಂಗಕ್ಕೆ ಅವಶ್ಯವಿದ್ದ E-Commerce Portal ವೆಬ್‌ಸೈಟ್‌ಗಳನ್ನು ಕಾರ್ಯಾರಂಭಗೊಳಿಸದೇ ಸಂಸ್ಥೆಗೆ ಪಾವತಿಸಿರುವುದು. (ವಿಚಾರಣಾ ಪತ್ರ ಸಂಖ್ಯೆ:156/ದಿ:08.10.2025)**

2024–25ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ Design and Development of Web based content Mgt System website and Alumni Portal at KSOU ಗಾಗಿ ಜೆಮ್ ಮೂಲಕ ಟೆಂಡರ್ ಆಹ್ವಾನಿಸಿ M/S Rait Communications ರವರಿಗೆ ರೂ.99,24,540/–ಗೆ ಕರಾರು ಮಾಡಿ ಸಾಮಾನ್ಯ ನಿಧಿ ಖಾತೆ ಜನವರಿ–2025ರ ಮಾಹೆಯ ವೋಚರ್ ಸಂಖ್ಯೆ:208 ಚೆಕ್ ಸಂಖ್ಯೆ:638220 ದಿ:29.01.2025ರಲ್ಲಿ ರೂ.84,35,355/–ಗಳನ್ನು ಪಾವತಿಸಲಾಗಿದೆ. ಸದರಿ ಪಾವತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಗಮನಿಸಲಾಗಿದೆ.

1. ಸರ್ಕಾರದ ಆದೇಶ ಸಂಖ್ಯೆ:ಸಿಇಜಿ/08/ಎಡಿಎಂ/2017 ಬೆಂಗಳೂರು ದಿ:23.03.2017ರ ಆದೇಶದಲ್ಲಿ ಇಲಾಖೆಗಳು ವೆಬ್‌ಸೈಟ್ ರಚಿಸಲು ಹಾಗೂ ಹೋಸ್ಟ್ ಮಾಡಲು ಇ–ಆಡಳಿತ ಕೇಂದ್ರದ ನೆರವನ್ನು ಪಡೆಯಬಹುದಿದ್ದು, ಕೇಂದ್ರವು ಇಲಾಖೆಗಳ ವೆಬ್‌ಸೈಟ್‌ನ್ನು ಹೋಸ್ಟ್ ಮಾಡುವುದರ ಜೊತೆಗೆ ಯಾವುದೇ ದೈನಂದಿನ ಬದಲಾವಣೆ/ಅಪ್‌ಡೇಟ್ ಮಾಡಲು ಇಲಾಖಾ ಅಧಿಕಾರಿಗಳಿಗೆ ತರಬೇತಿ ನೀಡುವುದಾಗಿ ತಿಳಿಸಿದೆ. ಅಲ್ಲದೇ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 281 ಇಜಿಎಂ 2020 ಬೆಂಗಳೂರು ದಿ:15.02.2021 ರಲ್ಲಿ ಸರ್ಕಾರಿ ಸಂಸ್ಥೆಗಳು ಅಧಿಕೃತ ಜಾಲತಾಣಗಳ ಕುರಿತು ಮಾರ್ಗದರ್ಶನ ಹಾಗೂ ಜಾಲತಾಣಗಳಲ್ಲಿ ತಿಷ್ಟತೆ ಏಕರೂಪತೆಯಿಂದ ರೂಪಿಸಲು ಇ–ಆಡಳಿತ ಕೇಂದ್ರದ ನೆರವು ಪಡೆಯಲು ತಿಳಿಸಿದೆ. ಇ–ಆಡಳಿತ ಕೇಂದ್ರದಲ್ಲಿ ಜಾಲತಾಣಗಳನ್ನು ಉಚಿತವಾಗಿ ರಚಿಸಿಕೊಡುತ್ತಿರುವುದನ್ನು ಉಪಯೋಗಿಸಿಕೊಳ್ಳದೇ ಖಾಸಗಿಯವರಿಂದ ರಚಿಸಿಕೊಂಡು ರೂ.99,24,540/– ವೆಚ್ಚಭರಿಸಿರುವುದು ಅನಾವಶ್ಯಕವಾಗಿ ವೆಚ್ಚಭರಿಸಿದಂತಾಗಿದ್ದು, ವಿವರಣೆ ನೀಡುವಂತೆ ಕೋರಿದೆ.

2. ದಿ:23.01.2024ರಂದು ಕಾರ್ಯಾದೇಶ ನೀಡಲಾಗಿದ್ದು, ಬ್ಯಾಂಕ್ ಗ್ಯಾರಂಟಿಯನ್ನು ದಿ:08.05.2024ರಂದು ಒಂದು ವರ್ಷದವರೆಗೆ ಅಂದರೆ ದಿ:08.08.2025ರವರೆಗೆ ಪಡೆಯಲಾಗಿದ್ದು, ಟೆಂಡರ್ ದಾಖಲೆಗಳಲ್ಲಿ 14 ತಿಂಗಳಿಗೆ ಬ್ಯಾಂಕ್ ಗ್ಯಾರಂಟಿ ನೀಡಬೇಕಾಗಿ ತಿಳಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ:FD611 EXP–12/2023. ದಿ:03.02.2024ರನ್ವಯ ಶೇ.5 ರಷ್ಟು ಭದ್ರತಾ ಠೇವಣಿ ಪಡೆಯಬೇಕಾಗಿದ್ದು, ಶೇ.3 ರಷ್ಟು ಭದ್ರತಾ ಠೇವಣಿ ಪಡೆದಿರುವುದಕ್ಕೆ ವಿವರಣೆ.

3. ಕುಲಸಚಿವರ ಆದೇಶ ಸಂಖ್ಯೆ: KSOU/New Website related file/2017 C.NO 43124 ದಿ:20.01.2025ರಲ್ಲಿ Alumni & E–Commerce Portal ಗಳ ಕಾರ್ಯಗಳು ಸಂಪೂರ್ಣವಾಗದ ಕಾರಣ ಶೇ.60ರಷ್ಟು ಮೊತ್ತವನ್ನು ಪಾವತಿಸಲು ಹಾಗೂ ಉಳಿದ WCMS website Module ಗಳಿಗೆ ಶೇ.100 ಮೊತ್ತವನ್ನು ಪಾವತಿಸಲು ಆದೇಶ ಮಾಡಿ ರೂ.84,35,355/–ಗಳನ್ನು ಪಾವತಿಸಲಾಗಿರುತ್ತದೆ. ಆದರೆ ದಿ:21.09.2024ರಂದು Systems Analyst, DPAT(e–Governance) ರವರು ಕೆಲಸ ಪೂರ್ಣಗೊಂಡಿರುವುದಾಗಿದೆ ಮೂರನೇ ವ್ಯಕ್ತಿ ತಪಾಸಣೆ ವರದಿಯನ್ನು ಸಲ್ಲಿಸಿರುತ್ತಾರೆ.

ದಿ:21.09.2024ರಂದು ಪೂರ್ಣಗೊಂಡಿದೆ ಎಂದು ವರದಿ ನೀಡಿದ್ದರೂ ದಿ:20.01.2025ರ ಆದೇಶದಲ್ಲಿ ಪೂರ್ಣವಾಗಿರುವುದಿಲ್ಲ ಎಂದು ತಿಳಿಸಿರುವುದಕ್ಕೆ ವಿವರಣೆ.

4. ಪ್ರಸಾರಂಗದ ನಿರ್ದೇಶಕರ ಪತ್ರ ದಿ:22.11.2024ರಲ್ಲಿ Alumni & E-Commerce Portalಗಳ ಕೆಲಸ ಪೂರ್ಣಗೊಂಡಿರುವುದಿಲ್ಲ Payment gate way, Mobile app ಅಭಿವೃದ್ಧಿ ಆಗಿರುವುದಿಲ್ಲವೆಂದು ತಿಳಿಸಿದ್ದು, ಪ್ರಸ್ತುತ Alumni & E-Commerce Portal ವೆಬ್ ಸೈಟ್ ಸಿದ್ಧಪಡಿಸುವ ಕಾರ್ಯ ಪೂರ್ಣಗೊಂಡು ಕೆಲಸ ನಿರ್ವಹಿಸುತ್ತಿರುವ ಕುರಿತು ಮಾಹಿತಿಯನ್ನು ಹಾಜರುಪಡಿಸುವುದು.

5. Design and Development of Web based content Mgt System website and Alumni Portal ಇತ್ಯಾದಿ website ಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಸದರಿ website ಗಳ ಅವಶ್ಯಕತೆ ಇದ್ದ ಬಗ್ಗೆ ದಾಖಲೆಗಳು.

6. ಅಭಿವೃದ್ಧಿಪಡಿಸಲಾದ websiteಗಳ ಬಳಕೆಯ ವಿವರಗಳು, E-Commerce Portal ನಿಂದ ಮಾರಾಟವಾದ ಪುಸ್ತಕಗಳ ವಿವರ ಹಾಗೂ Alumni Portal ಬಳಕೆ ಮಾಡುತ್ತಿರುವ ವಿದ್ಯಾರ್ಥಿಗಳ ವಿವರವನ್ನು ಹಾಜರುಪಡಿಸುವುದು.

7. ದಿ:01.12.2023ರ ಐ.ಓ.ಎಂ ಸಭೆಯಲ್ಲಿ ಪ್ರಸ್ತಾಪಿಸಿದಂತೆ E-Commerce site for prasaranga ದ ವಾರ್ಷಿಕ ನಿರ್ವಹಣೆ ದಿ:09.11.2023ರಂದು ಹಾಗೂ Alumni Portal ನ ವಾರ್ಷಿಕ ನಿರ್ವಹಣೆ ದಿ:18.10.2022ರಂದು ಮುಕ್ತಾಯಗೊಂಡಿರುವುದಾಗಿ ತಿಳಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಯಾವಾಗ ಸದರಿ Website ಗಳನ್ನು ಅಭಿವೃದ್ಧಿಪಡಿಸಲಾಗಿದೆ, ಎಷ್ಟು ಹಣ ಪಾವತಿ ಮಾಡಲಾಗಿದೆ ಹಾಗೂ ಕರಾರು ಒಪ್ಪಂದದ ಪ್ರತಿಯ ವಿವರವನ್ನು ಹಾಜರುಪಡಿಸುವುದು.

8. 2022-23ನೇ ಸಾಲಿನ ನವೆಂಬರ್-2022 ಮಾಹೆಯ ವೋಚರ್ ಸಂಖ್ಯೆ:54 ಚೆಕ್ ಸಂಖ್ಯೆ:595238 ದಿ:14.11.2022 ರಲ್ಲಿ ರೂ.4,83,000/-ಗಳನ್ನು MS Coronas Multitech PVT LTD, Bengaluru ರವರಿಗೆ Alumni Portal ಅನ್ನು ಅಭಿವೃದ್ಧಿಪಡಿಸಿ ಒಂದು ವರ್ಷದ ವಾರ್ಷಿಕ ನಿರ್ವಹಣೆಗಾಗಿ ಪಾವತಿ ಮಾಡಲಾಗಿರುತ್ತದೆ. ಆದಾಗ್ಯೂ ಈ ಬಿಲ್ಲಿನಲ್ಲಿ ರೂ.15,11,300/-ಗಳನ್ನು ಪಾವತಿಸಲಾಗಿದೆ. ಹೀಗೆ ಎರಡು ಪ್ರತ್ಯೇಕ ಸಂಸ್ಥೆಗಳಿಂದ ವೆಬ್ಸೈಟ್ ಸಿದ್ಧಪಡಿಸಿರುವ ಬಗ್ಗೆ ಸೂಕ್ತ ವಿವರಣೆ ನೀಡುವುದು. ಹಾಗೂ ಖಾತೆ ಸಂಖ್ಯೆ:100129969117 ಯಲ್ಲಿ Alumni ಗಾಗಿ ಪ್ರತ್ಯೇಕ ಖಾತೆ ಇದ್ದು, ಪ್ರವೇಶಾತಿ ಪಡೆಯುವಾಗ ಪ್ರತಿ ವಿದ್ಯಾರ್ಥಿಗಳಿಂದ ರೂ.500/- ಗಳನ್ನು Alumni ಶುಲ್ಕ ಸಂಗ್ರಹಿಸುತ್ತಿದ್ದು 01.04.2024ಕ್ಕೆ ಸದರಿ ಖಾತೆಯಲ್ಲಿ ರೂ.4,06,34,458/-ಇದ್ದು, ಸದರಿ ಖಾತೆಯಿಂದಲೇ ವೆಚ್ಚಭರಿಸದೇ ಜಿ.ಆರ್.ಎ ಖಾತೆಯಿಂದ ವೆಚ್ಚಭರಿಸಿರುವುದಕ್ಕೆ ವಿವರಣೆ.

9. Website ಅಭಿವೃದ್ಧಿಗೆ ಸಂಬಂಧಿಸಿದ ಕಡತವನ್ನು ಪರಿಶೀಲಿಸಲಾಗಿ, ಕೆಎಸ್ಓಯು ಹೆಸರಿನಲ್ಲಿ www.ksoumysore.in ಎಂಬ ನಕಲಿ ವೆಬ್ಸೈಟ್ ಇರುವ ಕುರಿತು ಸೈಬರ್ ಕ್ರೈಮ್ ಪೋಲಿಸ್, ಮೈಸೂರು ಇವರಿಗೆ ಕುಲಸಚಿವರು ದಿ:18.04.2023 ರಂದು ದೂರು ನೀಡಲಾಗಿದ್ದು, ಎರಡು ವರ್ಷ 7 ತಿಂಗಳು ಕಳೆದರೂ ಸಹ ನಕಲಿ ವೆಬ್ ಸೈಟ್ ಚಾಲ್ತಿಯಲ್ಲಿದ್ದು ಈ ಬಗ್ಗೆ ಯಾವುದೇ ಕ್ರಮಕ್ಕೆಗೊಂಡಿಲ್ಲದಿರುವುದಕ್ಕೆ ವಿವರಣೆ ನೀಡುವುದು.

ಮೇಲಿನ ನ್ಯೂನತೆಗಳಿಗೆ ವಿವರಣೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:156/ದಿ:08.10.2025 ರಲ್ಲಿ ಕೋರಲಾಗಿ, ವಿಶ್ವವಿದ್ಯಾನಿಲಯ ಕುಲಸಚಿವರು/ಹಣಕಾಸು ಅಧಿಕಾರಿಗಳು ಯಾವುದೇ ವಿವರ ನೀಡಿರುವುದಿಲ್ಲ. ಆದರೆ ಪ್ರಸಾರಾಂಗ ವಿಭಾಗದ ನಿರ್ದೇಶಕರು Alumni ಗೆ ಸಂಬಂಧಿಸಿದ ಕೆಲಸಗಳು ಸಂಪೂರ್ಣಗೊಂಡಿರುವುದಿಲ್ಲ ಹಾಗೂ Mobile app ಅನ್ನು ಸಹ ಅಧಿಕೃತವಾಗಿ ತಮಗೆ ಹಸ್ತಾಂತರಿಸಿರುವುದಿಲ್ಲ. ಹಾಗೂ E commerce Portal (ಪ್ರಸಾರಾಂಗ ವೆಬ್ ಸೈಟ್) ಸಹ ಸಂಪೂರ್ಣವಾಗಿ ಕಾರ್ಯಾಚಾರಣೆಗೆ ಸಿದ್ಧವಾಗಿರುವುದಿಲ್ಲ. ಈ ಎರಡು ವೆಬ್ ಪೇಜ್ಗಳ ಕೆಲಸ ಪ್ರಗತಿಯಲ್ಲಿದ್ದರೂ ಕಾರ್ಯಾರಂಭಕ್ಕೆ ಸಿದ್ಧವಾಗಿಲ್ಲ ಎಂದು ತಿಳಿಸಿರುತ್ತಾರೆ. ಕ್ರ.ಸಂ 8 ರಲ್ಲಿ ತಿಳಿಸಿರುವಂತೆ 2022-23ನೇ ಸಾಲಿನಲ್ಲಿ Alumni Portal ವೆಬ್ಸೈಟ್ಗಾಗಿ ವೆಚ್ಚಭರಿಸಿದ್ದು, ಸದರಿ ಸಾಲಿನಲ್ಲಿಯೂ ರೂ.15,11,300/- ಗಳನ್ನು ವೆಚ್ಚಮಾಡಿರುವುದು ನಿಯಮಬಾಹಿರ. ಇದಕ್ಕೆ ಕಾರಣಕರ್ತರಾದ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಆಡಳಿತಾತ್ಮಕ ಕ್ರಮಕ್ಕೆಗೊಳ್ಳಲು ಸೂಚಿಸಿದೆ. E-commerce Portal ಇದುವರೆಗೂ ಕಾರ್ಯಾರಂಭ ಮಾಡದೇಯಿರುವುದರಿಂದ

ಭರಿಸಿರುವ ವೆಚ್ಚವು ಫಲಪ್ರದವಾಗಿರುವುದಿಲ್ಲ ಹಾಗೂ ಮೇಲೆ ತಿಳಿಸಿರುವ ಸರ್ಕಾರಿ ಆದೇಶದಂತೆ ಉಚಿತವಾಗಿ ಲಭ್ಯವಿರುವ ಸೇವೆಯನ್ನು ಬಳಸಿಕೊಳ್ಳದೇ ಭರಿಸಿರುವ ವೆಚ್ಚ **ರೂ.84,35,355/--ಗಳನ್ನು ಸಂಬಂಧಿಸಿದವರಿಂದ ವಸೂಲಿಸಲು ಸೂಚಿಸಿದೆ.**

38.22 Data Centre ನ Storage enhance ಮಾಡಲು ಹಾಗೂ Disaster Recovery Centre ಸ್ಥಾಪನೆಗಾಗಿ ವೆಚ್ಚಭರಿಸಿರುವುದು: (ವಿಚಾರಣಾ ಪತ್ರಸಂಖ್ಯೆ:158/ದಿ:10.10.2025)

ಸಾಮಾನ್ಯ ನಿಧಿ ಖಾತೆಯಲ್ಲಿ ಈ ಕೆಳಕಂಡ ವೋಚರ್‌ಗಳನ್ನು ಪರಿಶೀಲಿಸಲಾಗಿ, ಮುಕ್ತ ವಿಶ್ವವಿದ್ಯಾನಿಲಯದ ಡಾಟಾವನ್ನು ಸಂಗ್ರಹಿಸಲು ಪ್ರಸ್ತುತ ಇರುವ Data Centre ನ Storage enhance ಮಾಡಲು ಹಾಗೂDisaster Recovery Centre ಮಾಡಲು ವೆಚ್ಚಭರಿಸಲಾಗಿದೆ.

ಕ್ರಸಂ	ವಿವರ	ಪಂಕ್ತಿ	ವೋಚರ್ ಸಂಖ್ಯೆ/ಮಾಹೆ	ಚೆಕ್ ಸಂಖ್ಯೆ/ದಿನಾಂಕ	ಮೊತ್ತ (ರೂ.)	ಪದಾ
1	Upgradation of Data Centre & IT Infrastructure	M\S Digital Info Service, Bengaluru	12/ಜೂನ್	313313 ದಿ:03.06.2024	3,36,05,636	ಒಟ್ಟಾರೆ ರೂ.4,96,19,364/-ಗಳಿಗೆ ಕರಾರು ಒಪ್ಪಂದ ಮಾಡಿದ್ದು, ಶೇ.80 ರಷ್ಟು ಪಾವತಿಸಿದೆ.
2	Establishment of Disaster Recovery Centre	M\S Digital Info Service, Bengaluru	54/ಜೂನ್	313330 ದಿ:07.06.2024	3,24,53,799	ಒಟ್ಟಾರೆ ರೂ.4,96,14,482/-ಗಳಿಗೆ ಕರಾರು ಒಪ್ಪಂದ ಮಾಡಿದ್ದು, ಶೇ.80 ರಷ್ಟು ಪಾವತಿಸಿದೆ.
3	In house Data Centreನ ಎರಡನೇ ವರ್ಷದ ವಾರ್ಷಿಕ ನಿರ್ವಹಣೆ	ಮೆ.ಕ್ಯಾಡ್‌ಮ್ಯಾಕ್ಸ್ ಸಲೂಷನ್ಸ್ ಪ್ರೈ.ಲಿ. ಬೆಂಗಳೂರು	147/ಫೆಬ್ರುವರಿ	638322 ದಿ:18.02.2025	39.00.001	ಒಟ್ಟಾರೆ ರೂ.3,90.00,000/-ಗಳಿಗೆ ಕರಾರು ಒಪ್ಪಂದ ಮಾಡಿದ್ದು, ಅದರಂತೆ ಎರಡನೇ ವರ್ಷದ ವಾರ್ಷಿಕ ನಿರ್ವಹಣೆ ನಂತರ ಶೇ.10 ರಷ್ಟು ಮೊತ್ತ ಪಾವತಿಸಿದೆ.

ಸದರಿ ಪಾವತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಗಮನಿಸಲಾಗಿದೆ.

01. ಕರ್ನಾಟಕ ರಾಜ್ಯ ದತ್ತಾಂಶ ಕೇಂದ್ರ (Karnataka State Data Centre) ದಲ್ಲಿ ಉಚಿತವಾಗಿ ದತ್ತಾಂಶ ಸಂಗ್ರಾಹಕ್ಕೆ ಅವಕಾಶವಿದ್ದರೂ ಸಹ ಖಾಸಗಿಯವರಿಂದ ಸೇವೆ ಪಡೆದಿರುವುದಕ್ಕೆ ವಿವರಣೆ. (ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 281 ಇಜಿಎಂ 2020 ಬೆಂಗಳೂರು ದಿ:15.02.2021)

02. ವಿಶ್ವವಿದ್ಯಾನಿಲಯದಲ್ಲಿ ಪ್ರತ್ಯೇಕ ಅಧಿಕಾರ ಪ್ರತ್ಯಾಯೋಜನೆ ಇಲ್ಲದ ಕಾರಣ, ಸರ್ಕಾರದ ಸಾಮಾನ್ಯ ವಿತ್ತಾಧಿಕಾರದ ಸರ್ಕಾರಿ ಆದೇಶ ಸಂಖ್ಯೆ: FD 08 TFP 2023 dated: 28 .10.2024ರನ್ವಯDivisional Level Officersಗೆ 1.00 ಕೋಟ ಮೌಲ್ಯ ಹಾಗೂ ಇಲಾಖಾ ಮುಖ್ಯಸ್ಥರಿಗೆ 2.5 ಕೋಟ ಮೌಲ್ಯದ ಅಂದಾಜು ಮೊತ್ತದ ಸರಕು ಮತ್ತು ಸೇವೆಯ ಸಂಗ್ರಹಣೆಗೆ ಅವಕಾಶವಿರುತ್ತದೆ. ಮೇಲಿನ ಎರಡು ಟೆಂಡರ್‌ಗಳ ಅಂದಾಜು ಮೊತ್ತ 5.00 ಕೋಟ ಆಗಿರುವುದರಿಂದ ಸರ್ಕಾರದಿಂದ ಅನುಮೋದನೆ ಪಡೆದಿರುವ ಕುರಿತು ದಾಖಲೆಗಳು.

03. ದಿ:22.04.2021 ರಂದು ಮೆ.ಕ್ಯಾಡ್‌ಮ್ಯಾಕ್ಸ್ ಸಲೂಷನ್ಸ್ ಪ್ರೈ.ಲಿ. ಬೆಂಗಳೂರು ರವರೊಂದಿಗೆ ರೂ.3,90,00,000/–ಗೆ ಕರಾರು ಮಾಡಿ 10ಟಿ ಬಿ ಸಾಮರ್ಥ್ಯದ Data Centre ಅನ್ನು ನಿರ್ಮಿಸಲಾಗಿರುತ್ತದೆ. 10 ಟಿಬಿ Data Centre ರೂ.3,90,00,000/– ವೆಚ್ಚಭರಿಸಿದ್ದು, 200ಟಿಬಿ Data Centreಗೆ ಅಂದಾಜು ವೆಚ್ಚ ರೂ.5.00 ಕೋಟಿ ಎಂದು ಅಂದಾಜಿಸಿದ್ದು, ರೂ.4,96,19,364/–ಗಳಿಗೆ ಟೆಂಡರ್ ಅನುಮೋದನೆಯಾಗಿರುತ್ತದೆ. ಯಾವ ಮಾನದಂಡಗಳ ಮೇಲೆ ಟೆಂಡರ್ ಮೊತ್ತವನ್ನು ಅಂದಾಜು ಮಾಡಲಾಯಿತು ಹಾಗೂ 10ಟಿಬಿ ಸಾಮರ್ಥ್ಯದData Centreಅನ್ನು ಪ್ರಸ್ತುತ ಬಳಸಲಾಗುತ್ತಿದೆಯೇ? ಅಥವಾ ಸದರಿ Data Centreಅನ್ನು 200 ಟಿಬಿData Centreಜೊತೆ ಸೇರಿಸಲಾಗಿದೆಯೇ? ಸೇರಿಸಿದ್ದರೆ ಮೊದಲಿದ್ದ ಉಪಕರಣಗಳನ್ನು ಹೇಗೆ ಲೆಕ್ಕಚಾರ ಮಾಡಲಾಗಿದೆ ಹಾಗೂ ಪ್ರಸ್ತುತ 200 ಟಿಬಿ ಡಾಟಾ ಸೆಂಟರ್‌ಗಳಲ್ಲಿ ಎಷ್ಟು ಟಿಬಿಗಳಿಗೆ ದತ್ತಾಂಶ ಸಂಗ್ರಹವಾಗಿದೆ.

04. ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 39 ಇಜಿಎಂ 2021 ಬೆಂಗಳೂರು ದಿ:10.05.2022 ರಲ್ಲಿ ಆದೇಶಿಸಿದಂತೆ ಸರ್ಕಾರದ ಎಲ್ಲಾ ಇಲಾಖೆಗಳಿಗೆ ಹಾರ್ಡ್‌ವೇರ್, ಸಾಫ್ಟ್‌ವೇರ್ ಇತರೇ ಐ ಟಿ ಪರಿಕರ ಮತ್ತು ಸೇವೆಗಳನ್ನು ಪಡೆಯುವ ಸಲುವಾಗಿ ಸೂಕ್ತ ಮಾರ್ಗದರ್ಶನ ನೀಡಲು, ಎಲ್ಲಾ ಇಲಾಖೆಗಳ ಇಲಾಖಾ ತಾಂತ್ರಿಕ ಸಲಹಾ ಸಮಿತಿಗಳಿಗೆ ತಾಂತ್ರಿಕ ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡಲಾಗಿದೆ. ಸದರಿ ಆದೇಶದಲ್ಲಿನ ಸದಸ್ಯರನ್ನು ತಾಂತ್ರಿಕ ಸಲಹಾ ಸಮಿತಿಯಲ್ಲಿ ನೇಮಿಸಿಕೊಳ್ಳದೇ, ಸದರಿ ಆದೇಶದ ಉಲ್ಲಂಘನೆ ಮಾಡಿರುವುದುಕ್ಕೆ ವಿವರಣೆ.

05. ವಿಶ್ವವಿದ್ಯಾನಿಲಯದ ಟೆಂಡರ್ ತಾಂತ್ರಿಕ ಸಮಿತಿ ಶಿಫಾರಸ್ಸಿನಲ್ಲಿ ಟೆಂಡರ್ ಅವಧಿಯನ್ನು 30 ದಿನಗಳು ನೀಡಲು ಸೂಚಿಸಿದ್ದಾಗ್ಯೂ ಕೇವಲ 22 ದಿನಗಳನ್ನು ಮಾತ್ರ ನೀಡಿರುವುದಕ್ಕೆ ವಿವರಣೆ.

06. ಮೇಲಿನ ಕೋಷ್ಟಕದ ಕ್ರಮ ಸಂಖ್ಯೆ:01ಕ್ಕೆ ಸಂಬಂಧಿಸಿದಂತೆ ರೂ.14,88,581/– ಹಾಗೂ ಕ್ರಮ ಸಂಖ್ಯೆ:02 ಕ್ಕೆ ಸಂಬಂಧಿಸಿದಂತೆ ರೂ.14,88,434/– ಗಳ ಭದ್ರತಾ ಠೇವಣಿ ಪಡೆದಿದ್ದು, ಸರ್ಕಾರಿ ಆದೇಶ ಸಂಖ್ಯೆ:FD611 EXP–12/2023, ದಿ:03.02.2024ರನ್ವಯ ಶೇ.5 ರಷ್ಟು ಭದ್ರತಾ ಠೇವಣಿ ಪಡೆಯಬೇಕಾಗಿದ್ದು, ಶೇ.3 ರಷ್ಟು ಭದ್ರತಾ ಠೇವಣಿ ಪಡೆದಿರುವುದಕ್ಕೆ ವಿವರಣೆ ಹಾಗೂ Bank Confirmation ಅನ್ನು ಹಾಜರುಪಡಿಸುವುದು.

07. ಕ್ರಮ ಸಂಖ್ಯೆ 03ಕ್ಕೆ ಸಂಬಂಧಿಸಿದ ಭದ್ರತಾ ಠೇವಣಿ ಹಾಗೂ Bank Confirmation ಅನ್ನು ಹಾಜರುಪಡಿಸುವುದು.

ಮೇಲಿನ ಅಂಶಗಳಿಗೆ ವಿವರಣೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:158/ದಿ:10.10.2025ರಲ್ಲಿ ಕೋರಲಾಗಿ ವಿಶ್ವವಿದ್ಯಾನಿಲಯದವರು "ಕರಾಮುವಿ ಕಾಯ್ದೆಯ ಅಧ್ಯಾಯ–IV, 18. (2). (II) ರಲ್ಲಿ ವ್ಯವಸ್ಥಾಪನ ಮಂಡಳಿಯು ಎಲ್ಲಾ ಆಡಳಿತ ವ್ಯವಹಾರಗಳನ್ನು ನಡೆಸುವ, ಅಧಿಕಾರಗಳನ್ನು ಹೊಂದಿರುವ ಹಿನ್ನೆಲೆಯಲ್ಲಿ, ಮಾನ್ಯ ವ್ಯವಸ್ಥಾಪನಾ ಮಂಡಳಿಯ 173 ನೇ (ವಿಷಯ ಸಂಖ್ಯೆ: 173.18 ಹಾಗೂ 173.19) ಸಭೆಯಲ್ಲಿ ಅಂದಾಜು ವೆಚ್ಚ ರೂ. 5 ಕೋಟಿ ವೆಚ್ಚದಲ್ಲಿ Data Centre ನ Storage enhance ಮಾಡಲು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಕ್ರಮವಹಿಸಲಾಗಿರುತ್ತದೆ. Data Centre ನ Storage enhance ಕಾರ್ಯಕ್ಕಾಗಿ ಅಂದಾಜು ವೆಚ್ಚವನ್ನು ವಿವಿಧ ಮೂರು ಸಂಸ್ಥೆಗಳಿಂದ ಪಡೆಯಲಾಗಿರುತ್ತದೆ. Data Centre ನಲ್ಲಿ 10 ಟಿಬಿ Storage ಒಂದು ಭಾಗವಾಗಿದ್ದು ಸದರಿ 10 ಟಿಬಿ Storage enhance ಆಗಿರುವ Storage ನೊಂದಿಗೆ ಬಳಕೆಯಲ್ಲಿರುತ್ತದೆ. ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಸಂಪೂರ್ಣ ಮಾಹಿತಿ, ಪರೀಕ್ಷಾ ಪ್ರಕ್ರಿಯೆ, ಫಲಿತಾಂಶ ಪ್ರಕಟಣೆ, ಕೋಡಿಂಗ್, ಡಿ–ಕೋಡಿಂಗ್, ಪ್ರವೇಶಾತಿ, ಪ್ರವೇಶ ಪತ್ರ ನೀಡುವುದು ಎಲ್ಲಾ ರೀತಿಯ ಶುಲ್ಕ ಪಾವತಿ, ಹಳೆಯ ವಿದ್ಯಾರ್ಥಿಗಳ ಮಾಹಿತಿಗಳ ಹಾಗೂ ಮುಂತಾದ ಅಂಕಿ–ಅಂಶಗಳು ಮಾಹಿತಿಗಳ ಡಿಜಿಟಲೀಕರಣಗೊಳಿಸಿ ಗೌಪ್ಯತೆಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ವಿವಿ ನಿಲಯದಲ್ಲಿ ದತ್ತಾಂಶ ಶೇಖರಣೆ (In–house Data Centre) ಕೇಂದ್ರವನ್ನು ಸ್ಥಾಪಿಸುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಯ ವಿಷಯ ಸಂಖ್ಯೆ: 160.14 ಹಾಗೂ 165.08 ತೀರ್ಮಾನದಂತೆ ರೂ.3,90,00,000/– (ಮೂರು ಕೋಟಿ ತೊಂಬತ್ತು ಲಕ್ಷ ರೂಪಾಯಿಗಳು ಮಾತ್ರ, ಎಲ್ಲಾ ತೆರಿಗೆಗಳು ಸೇರಿ) ಗಳಲ್ಲಿ ಸರಬರಾಜು ಮಾಡಿ ಅಳವಡಿಸಲು M/s. Cadmaxx Solutions Pvt., Ltd., ರವರಿಗೆ ಕಾರ್ಯಾದೇಶ ನೀಡಿ ಒಡಂಬಡಿಕೆ ಮಾಡಿಕೊಂಡು Data Centre ಸ್ಥಾಪಿಸಲಾಗಿರುತ್ತದೆ. ವಿವಿಯ ಪರೀಕ್ಷಾ ವಿಭಾಗದ ಮೌಲ್ಯಮಾಪನಾ ಕಾರ್ಯವನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸುವ ಸಂಬಂಧ Digital Evaluation ಕಾರ್ಯ ಪ್ರಾರಂಭಿಸಿದ್ದು ಸದರಿ ಕಾರ್ಯದಲ್ಲಿ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ Scanned copies, A forms, Evaluation scripts

ಗಳನ್ನು store ಮಾಡಲು ಹಾಗೂ ವಿವಿಯ ವೈತ್ಯ ಸ್ಟುಡಿಯೋ ವಿಭಾಗದಿಂದ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ಚಿತ್ರೀಕರಿಸಿರುವ ವಿಡಿಯೋಗಳನ್ನು store ಮಾಡಲು ಹಾಗೂ ವಿವಿಯ ವಿವಿಧ ವಿಭಾಗಗಳಿಗೆ File Storage ಒದಗಿಸಲು. ಸ್ಥಾಪಿತವಾದ Data Centre ನಲ್ಲಿ ಲಭ್ಯವಿರುವ 10 ಟಿಬಿ Storage ಕಡಿಮೆಯಾಗಿರುವ ಹಿನ್ನೆಲೆಯಲ್ಲಿ Data Centre Storage Enhance ಮಾಡುವ ಸಂಬಂಧ ದಿನಾಂಕ:24.07.2023 ರಂದು Technical Experts Committee ಸಭೆಯ ಶಿಫಾರಸ್ಸಿನಂತೆ ಹಾಗೂ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯಂತೆ ಕ್ರಮವಹಿಸಲಾಗಿರುತ್ತದೆ ಹಾಗೂ 200 ಟಿಬಿಯ Storage ಅನ್ನು ವಿವಿಧ ಸರ್ವರ್‌ಗಳಿಗೆ ಅವಶ್ಯಕತೆಗನುಸಾರ ಹಂಚಿಕೆ ಮಾಡಿ ಬಳಕೆಯಲ್ಲಿರುತ್ತದೆ. ಮಾನ್ಯ ಕುಲಪತಿಗಳ ಅನುಮೋದನೆಯಂತೆ ವಿವಿಗೆ ತಾಂತ್ರಿಕ ಪರಿಣಿತರ ಸಲಹಾ ಸಮಿತಿ ರಚಿತವಾಗಿದ್ದು, ಸದರಿ ಸಮಿತಿಯ ನಿಗಧಿಪಡಿಸಲಾಗಿರುತ್ತದೆ." ಎಂದು ಅನುಪಾಲನ ವರದಿ ನೀಡಿರುತ್ತಾರೆ ಆದರೆ ವಿಶ್ವವಿದ್ಯಾನಿಲಯವು ಸರ್ಕಾರವು ಕಾಲ ಕಾಲಕ್ಕೆ ಹೊರಡಿಸುವ ಆದೇಶ/ನಿಯಮಗಳಿಗೆ ಬದ್ಧರಾಗಿರಬೇಕು. ಇದನ್ನು ಉಲ್ಲಂಘಿಸಿ ವಿಶ್ವವಿದ್ಯಾನಿಲಯದ ಸಮಿತಿಗಳಲ್ಲಿ ತೀರ್ಮಾನ ತೆಗೆದುಕೊಳ್ಳಲು ಅವಕಾಶ ಇರುವುದಿಲ್ಲವಾದ್ದರಿಂದ ಅಲ್ಲದೇ ದರ ಅಂದಾಜುಗಳನ್ನು ಮಾರುಕಟ್ಟೆ ಆಧಾರದ ಮೇಲೆ ಮಾಡಬೇಕೆ ಏನಃ ಸಮಿತಿಗಳಲ್ಲಿ ತೀರ್ಮಾನಿಸಲು ಅವಕಾಶವಿರುವುದಿಲ್ಲ. ವ್ಯವಸ್ಥಾಪನ ಮಂಡಲಿ ಸಮಿತಿಯು ಸರ್ಕಾರದ ಆದೇಶಗಳನ್ನು ಮೀರಿ ತೀರ್ಮಾನ ಕೈಗೊಳ್ಳಲು ಅವಕಾಶವಿರುವುದಿಲ್ಲ ಹಾಗೂ ಭದ್ರತಾ ಠೇವಣಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಿದ ಕಾರಣ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಉಲ್ಲೇಖಿಸಿರುವ ಸರ್ಕಾರಿ ಆದೇಶಗಳನ್ನು ಉಲ್ಲಂಘನೆ ಮಾಡಿರುವುದರಿಂದ ಡೇಟಾ ಸೆಂಟರ್ ಸ್ಥಾಪನೆಗಾಗಿ ಭರಿಸಿರುವ ವೆಚ್ಚ ರೂ.3,36,05,636/-, ಡೇಟಾ ರಿಕವರಿ ಸೆಂಟರ್ ಸ್ಥಾಪನೆಗಾಗಿ ಭರಿಸಿರುವ ವೆಚ್ಚ ರೂ.3,24,53,799/-ಗಳನ್ನು ಹಾಗೂ In house Data Centreನ ಎರಡನೇ ವರ್ಷದ ವಾರ್ಷಿಕ ನಿರ್ವಹಣೆ ವೆಚ್ಚ ರೂ.39,00,001/-ಗಳನ್ನು ಸೇರಿ ಒಟ್ಟು ಮೊತ್ತ **ರೂ.6,99,59,436/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

38.23 ಜೆ.ಆರ್.ಎ ಸಾಮಾನ್ಯ ಖಾತೆಯಿಂದ ಎಸಿ ಬಿಲ್ಲಿನ ಮೂಲಕ ವೆಚ್ಚ ಭರಿಸಲಾದ ಹೊಂದಾಣಿಕೆ ವೋಚರ್‌ಗಳಲ್ಲಿನ ನ್ಯೂನತೆಗಳು.

ವಿಶ್ವವಿದ್ಯಾನಿಲಯದಲ್ಲಿ 2024-25ನೇ ಸಾಲಿಗೆ ವಿವಿಧ ಉದ್ದೇಶಗಳಿಗಾಗಿ ಸಾಮಾನ್ಯ ಖಾತೆಯಿಂದ ಕ್ರಮವಾಗಿ ಅನುಬಂಧ-60ರಲ್ಲಿ ವಿವರಿಸಿರುವಂತೆ ಕ್ರಮವಾಗಿ ರೂ.44,22,570/-ಗಳನ್ನು ಎಸಿ ಬಿಲ್ಲಿನ ಮೂಲಕ ಹಣ ಸೆಳೆಯಲಾಗಿದೆ. ಸದರಿ ಬಿಲ್ಲುಗಳಿಗೆ ಸಲ್ಲಿಸಲಾಗಿರುವ ಎನ್.ಡಿ.ಸಿ ವೋಚರ್‌ಗಳ ಪರಿಶೀಲನೆಯಲ್ಲಿ ಈ ಕೆಳಕಂಡ ನ್ಯೂನತೆಗಳು ಕಂಡು ಬಂದಿರುತ್ತದೆ.

1. ಸಾದಿಲ್ವಾರು ವೆಚ್ಚ ಕೈಪಿಡಿ-1958 ನಿಯಮ 37(8)ರ ಪ್ರಕಾರ ಎನ್.ಡಿ.ಸಿ ಬಿಲ್ಲುಗಳನ್ನು ಎಸಿ ಬಿಲ್ಲಿನಲ್ಲಿ ಡ್ರಾ ಮಾಡಲಾದ ಮುಂದಿನ ತಿಂಗಳ ಮೊದಲ ವಾರದ ಮುಕ್ತಾಯದ ಒಳಗೆ ಮೇಲು ಸಹಿ ಅಧಿಕಾರಿಗಳಿಗೆ ಸಲ್ಲಿಸಬೇಕಾಗಿರುತ್ತದೆ. ಆದರೆ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಕಛೇರಿಗಳಲ್ಲಿ ಕನಿಷ್ಠ 03 ದಿನಗಳಿಂದ 164 ದಿನಗಳವರೆಗೆ ತಡವಾಗಿ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಲಾಗಿದೆ. ವಿವರಗಳನ್ನು ಅನುಬಂಧ-60ರಲ್ಲಿ ನೀಡಲಾಗಿದೆ.
2. ಎಸಿ ಬಿಲ್ಲಿನಲ್ಲಿ ಡ್ರಾ ಮಾಡಿರುವ ಉಳಿಕೆ ಹಣವನ್ನು ಎಂ.ಸಿ.ಇ ನಿಯಮ-36(4)ರಂತೆ ತಡಮಾಡದೆ ಸಂಬಂಧಪಟ್ಟ ಖಾತೆಗೆ ಜಮಾ ಮಾಡಬೇಕಾಗಿದ್ದು, ತಡವಾಗಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಲಾಗಿರುತ್ತದೆ. ಹೀಗೆ ವಿಳಂಬವಾಗಿ ಎನ್.ಡಿ.ಸಿ ಸಲ್ಲಿಸುವ ಹಾಗೂ ಬಾಕಿ ಮೊತ್ತವನ್ನು ಜಮೆ ಮಾಡುವವರಿಂದ ವಿಳಂಬದ ಅವಧಿಗೆ ಅನ್ವಯವಾಗುವ ದರದಲ್ಲಿ ವಸೂಲಿಸಲು ಸೂಚಿಸಲಾಗಿದೆ.
3. ಸಾದಿಲ್ವಾರು ವೆಚ್ಚದ ಕೈಪಿಡಿ ನಿಯಮ-1958ರ ನಿಯಮ 36ರ ರೀತ್ಯ ತುರ್ತು ವೆಚ್ಚಗಳಿಗೆ ಅವಶ್ಯವಿರುವ ಸಂದರ್ಭಗಳಲ್ಲಿ ಸಂಕ್ಷಿಪ್ತ ಬಿಲ್ಲುಗಳ ಮೂಲಕ ಹಣ ಡ್ರಾ ಮಾಡಲು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಹಣ ಡ್ರಾ ಮಾಡಲು ಎಸಿ ಬಿಲ್ಲು ತಯಾರಿಸಿ ನಿಯಂತ್ರಣಾಧಿಕಾರಿಯವರಿಂದ ಬಿಲ್ಲಿಗೆ ಮೇಲು ಸಹಿಯಿಲ್ಲದೆಯೇ ಹಣ ಡ್ರಾ ಮಾಡಿ ವೆಚ್ಚ ಭರಿಸಿ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ.

4. ಸರ್ಕಾರದ ಆದೇಶ ಸಂಖ್ಯೆ:ಆಇ/03/ಟಿಎಫ್‌ಪಿ/2018, ಬೆಂಗಳೂರು, ದಿನಾಂಕ:14.05.2018ರ ಮಾರ್ಗಸೂಚಿಗಳಂತೆ ರೂ.2.00 ಲಕ್ಷಕ್ಕಿಂತ ಅಧಿಕ ಮೊತ್ತವನ್ನು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಿನ ಮೂಲಕ ಡ್ರಾ ಮಾಡಲು ಅವಕಾಶವಿರುವುದಿಲ್ಲವಾದರೂ ರೂ.2.00 ಲಕ್ಷಕ್ಕಿಂತ ಅಧಿಕ ಮೊತ್ತವನ್ನು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಿನ ಮೂಲಕ ಡ್ರಾ ಮಾಡಲಾಗಿದೆ.

ಈ ಮೇಲಿನ ನ್ಯೂನತೆಗಳಿಗೆ ಸಂಬಂಧಿಸಿದಂತೆ ಮುಂಗಡ ಹುಂಡಿ ಮೊತ್ತಗಳಿಗೆ ಎನ್.ಡಿ.ಸಿ ಬಿಲ್ಲುಗಳನ್ನು ವಿಳಂಬವಾಗಿ ಸಲ್ಲಿಸುತ್ತಿರುವ ಪ್ರಕರಣಗಳನ್ನು ಗುರುತಿಸಿ ವಿಳಂಭದ ಅವಧಿಗೆ ಬಡ್ಡಿ ಲೆಕ್ಕಾಚಾರ ಮಾಡಿ ಸಂಬಂಧಿಸಿದವರಿಂದ ವಸೂಲಿಸುವ ಹಾಗೂ ತುರ್ತುಲ್ಲದ ಪಾವತಿಗಳಿಗೆ ಕಡ್ಡಾಯವಾಗಿ ಡಿಸಿ ಬಿಲ್ಲುಗಳ ಮೂಲಕ ವೆಚ್ಚ ಭರಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳದೆ ಇರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

ಭಾಗ–3

39. ಹಿಂದಿನ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳ ಕಂಡಿಕೆಗಳ ತೀರುವಳಿ ಬಗ್ಗೆ

ವಿಶ್ವವಿದ್ಯಾನಿಲಯದ 1980–81 ರಿಂದ 2024–25ರವರೆಗಿನ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣಾ ಕಂಡಿಕೆಗಳ ಮತ್ತು ವಸೂಲಾತಿ ಕಂಡಿಕೆಗಳ ಮೊತ್ತ ತೀರುವಳಿಯಾದ ಮೊತ್ತ ಹಾಗೂ ಬಾಕಿ ಉಳಿದಿರುವ ಮೊತ್ತಗಳ ವಿವರಗಳು ಕೆಳಕಂಡಂತಿರುತ್ತದೆ.

ವಿವರಗಳು	ಆಕ್ಷೇಪಣಾ ಕಂಡಿಕೆಗಳ ಸಂಖ್ಯೆ	ಮೊತ್ತ	ವಸೂಲಾತಿ ಕಂಡಿಕೆಗಳ ಸಂಖ್ಯೆ	ಮೊತ್ತ
1996–97 ರಿಂದ 2023–24 ರವರೆಗಿನ ಕಂಡಿಕೆಗಳು	655	878,21,41,739	495	120,54,38,196
ಹಿಂದಿನ ಸಾಲಿನವರೆಗಿನ ತೀರುವಳಿ	0	0	0	0
1996–97 ರಿಂದ 2023–24 ರವರೆಗಿನ ಕಂಡಿಕೆಗಳಲ್ಲಿ ತೀರುವಳಿಯಾಗಿ ಬಾಕಿ ಉಳಿದಿರುವ ಕಂಡಿಕೆಗಳು	655	878,21,41,739	495	120,54,38,196
2024–25ನೇ ಸಾಲಿನಲ್ಲಿ ಸೇರ್ಪಡೆ	32	101,52,37,358	34	18,05,27,945
ಒಟ್ಟು	**687**	**979,73,79,097**	**529**	**138,59,66,141**
2024–25ರಲ್ಲಿ ತೀರುವಳಿ ಆಗಿರುವುದು	7	458,34,851	4	14,597,339

2024–25 ಅಂತ್ಯಕ್ಕೆ ಬಾಕಿ ಉಳಿದಿರುವುದು	680	975,15,44,246	525	137,13,68,802

ಬಾಕಿ ಉಳಿದಿರುವ ಕಂಡಿಕೆಗಳನ್ನು ಸಕಾಲದಲ್ಲಿ ತೀರುವಳಿ ಮಾಡದೆ ಇರುವುದರಿಂದ ಸೌಕರರ ವರ್ಗಾವಣೆ, ನಿವೃತ್ತಿ, ಗುತ್ತಿಗೆಗಳ ಮುಕ್ತಾಯ ಇತ್ಯಾದಿ ಕಾರಣಗಳಿಂದ ವಸೂಲಿಸಬೇಕಾದ ಮೊತ್ತಗಳನ್ನು ವಸೂಲಿಸಲಾಗದೆಯೆ ವಿಶ್ವವಿದ್ಯಾನಿಲಯಕ್ಕೆ ನಷ್ಟ ಉಂಟಾಗುವ ಸಂಭವವಿರುತ್ತದೆ. ಕರ್ನಾಟಕ ಬಜೆಟ್ ಕೈಪಿಡಿಯ ನಿಯಮ–303ರ ಪ್ರಕಾರ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆಗಳಿಗೆ ಉತ್ತರಿಸುವ ಮತ್ತು ಲೆಕ್ಕಪರಿಶೋಧನೆಯಲ್ಲಿ ಎತ್ತಿದ ಇತರೆ ವಿಷಯಗಳನ್ನು ಇತ್ಯರ್ಥಗೊಳಿಸುವ ಹೊಣೆಗಾರಿಕೆಯು ಲೆಕ್ಕಪರಿಶೋಧನಾ ಕಂಡಿಕೆಗಳ ಸ್ವರೂಪ ಮತ್ತು ಜವಾಬ್ದಾರಿಗನುಗುಣವಾಗಿ ಬಟವಾಡೆ ಅಧಿಕಾರಿಗಳು, ನಿಯಂತ್ರಣ ಅಧಿಕಾರಿಗಳು ಹಾಗೂ ವಿಶ್ವವಿದ್ಯಾನಿಲಯದ ಮುಖ್ಯಸ್ಥರದ್ದಾಗಿರುತ್ತದೆ. ಲೆಕ್ಕಪರಿಶೋಧನಾ ಆಕ್ಷೇಪಣೆಗಳ ಬಗ್ಗೆ ನಿಗಾ ಇಡಲು ವಿಶ್ವವಿದ್ಯಾನಿಲಯವು ಬಜೆಟ್ ಕೈಪಿಡಿಯ ನಿಯಮ–305ರ ಅನುಸಾರ ನಮೂನೆ–21ರಲ್ಲಿ ಲೆಕ್ಕಪರಿಶೋಧನಾ ಆಕ್ಷೇಪಣೆಗಳ ವಹಿಯನ್ನು ನಿರ್ವಹಿಸಬೇಕಿದ್ದು, ವಿಶ್ವವಿದ್ಯಾನಿಲಯವು ಸದರಿ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ವರ್ಷದಿಂದ ವರ್ಷಕ್ಕೆ ಲೆಕ್ಕಪರಿಶೋಧನಾ ಕಂಡಿಕೆಗಳು ಸಂಚಿಯವಾಗುತ್ತಾ ಹೋದಲ್ಲಿ ಹಳೆಯ ಕಂಡಿಕೆಗಳ ತೀರುವಳಿಗೆ ದಾಖಲಾತಿಗಳನ್ನು ಒದಗಿಸಿ ತೀರುವಳಿ ಮಾಡಿಸುವುದು ಶ್ರಮದಾಯಕವಾಗುತ್ತದೆ. ಆಕ್ಷೇಪಣೆ ಕಂಡಿಕೆಗಳಿಗೆ ಪೂರಕ ದಾಖಲಾತಿಗಳೊಡನೆ ಸೂಕ್ತ ಅನುಪಾಲನಾ ವರದಿ ನೀಡುವ ಮೂಲಕ ಹಾಗೂ ವಸೂಲಾತಿ ಮೊತ್ತವನ್ನು ಸಂಬಂಧಿಸಿದವರಿಂದ ವಸೂಲಿಸಿ ಕೈಗೊಂಡ ಕ್ರಮಗಳ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವ ಮೂಲಕ ಕಂಡಿಕೆಗಳ ತೀರುವಳಿಗೆ ಕ್ರಮವಹಿಸಲು ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೂಚಿಸಲಾಗಿದ್ದರೂ ಯಾವುದೇ ಕ್ರಮ ವಹಿಸದಿರುವುದು ಕಂಡು ಬಂದಿದೆ.

ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ:ರಾಲೆಲೆಪ/ಲೆಪವಿ/30/ಅಡಹಾಕ್/2020–21/3556 ದಿನಾಂಕ:10.03.2021ರ ಪ್ರಕಾರ ಲೆಕ್ಕಪರಿಶೋಧನಾ ಕಾರ್ಯಕ್ರಮದ ಅವಧಿಯ ಮೂರನೇ ವಾರದಲ್ಲಿ ಹಿಂದಿನ ಸಾಲುಗಳ ಆಕ್ಷೇಪಣೆ ಮತ್ತು ವಸೂಲಾತಿಗಳ ಕಂಡಿಕೆಗಳ ತೀರುವಳಿಗೆ ಅನುಪಾಲನಾ ವರದಿಯೊಂದಿಗೆ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:46/11.07.2025ರಲ್ಲಿ ಕೋರಲಾಗಿತ್ತು. ಇದಕ್ಕೆ ವಿಶ್ವವಿದ್ಯಾನಿಲಯದವರು ಪ್ರತಿಕ್ರಿಯಿಸಿ 2022–23ನೇ ಸಾಲಿನ ಕಂಡಿಕೆಗಳಿಗೆ ಮಾತ್ರ ಅನುಪಾಲನಾ ವರದಿ ಸಲ್ಲಿಸಿರುತ್ತಾರೆ. ಉಳಿದಂತೆ ಹಿಂದಿನ ಸಾಲುಗಳ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳಿಗೆ ಯಾವುದೇ ಅನುಪಾಲನಾ ವರದಿ ಅಥವಾ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

1996–97 ರಿಂದ 2024–25ನೇ ಸಾಲಿನವರೆಗೆ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ವಿವರಗಳನ್ನು ಅನುಬಂಧ–61ರಲ್ಲಿ, ತೀರುವಳಿಯಾಗಿರುವ ವಿವರಗಳನ್ನು ಅನುಬಂಧ–61(A) ಮತ್ತು ಬಾಕಿ ಉಳಿದಿರುವ ಕಂಡಿಕೆಗಳ ವಿವರಗಳನ್ನು ಅನುಬಂಧ–61(B)ನಲ್ಲಿ ನೀಡಲಾಗಿದೆ. ಸರ್ಕಾರದ ಆದೇಶ ಸಂಖ್ಯೆ:ಇಡಿ/20/ಮು.ಎನ್.ಇ/2021/ದಿ:09.11.2021ರನ್ವಯ ರಚಿಸಲಾಗಿರುವ ಅಡ್ವಾಕ್ ಸಮಿತಿಗೆ ವಿಶ್ವವಿದ್ಯಾನಿಲಯವು ಅನುಪಾಲನಾ ವರದಿಯನ್ನು ಪೂರಕ ದಾಖಲೆಗಳೊಡನೆ ಮಂಡಿಸುವ ಮೂಲಕ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ತಿರುವಳಿಗೆ ಕ್ರಮವಹಿಸಲು ಸೂಚಿಸಿದೆ.

40. ಮುಕ್ತ ವಿಶ್ವವಿದ್ಯಾನಿಲಯದ ನ್ಯಾಯಾಲಯ, ಪೋಲೀಸ್ ಠಾಣೆ, ಲೋಕಾಯುಕ್ತ ಹಾಗೂ ಸಿ.ಬಿ.ಐ. ಪ್ರಕರಣಗಳು.

2023–23ನೇ ಸಾಲಿನಲ್ಲಿ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ಪ್ರಕರಣಗಳು, ಇಲಾಖಾ ವಿಚಾರಣಾಗಳು, ಹಣ ದುರುಪಯೋಗ ಪ್ರಕರಣ ಹಾಗೂ ಆಸ್ತಿ ವಿಷಯಗಳ ದಾವೆಗಳ ಕುರಿತು ಕಡತ ಹಾಗೂ ಪೂರಕ ಲೆಕ್ಕಪತ್ರ ದಾಖಲೆಗಳೊಂದಿಗೆ ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:45/10.07.2025 ನೀಡಲಾಗಿತ್ತು. ವಿಶ್ವವಿದ್ಯಾನಿಲಯದವರು ಅನುಪಾಲನಾ ವರದಿಯಲ್ಲಿ ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.

ದಿನಾಂಕ:01.04.2024 ರಂದು ಉಳಿಕೆ ಪ್ರಕರಣ	ದಿನಾಂಕ:01.04.2024 ರಿಂದ 31.03.2025 ರಲ್ಲಿ ಹೊಸ ಮುಕದ್ದಮೆಗಳು	ಒಟ್ಟು ಪ್ರಕರಣಗಳು	ದಿನಾಂಕ:01.04.2024 ರಿಂದ 31.03.2025 ರಲ್ಲಿ ವಿಲೇವಾರಿಯಾದ ಮುಕದ್ದಮೆಗಳು	ದಿ: 31.03.2025 ರಲ್ಲಿ ಉಳಿದಿರುವ ಮುಕದ್ದಮೆಗಳು
162	26	188	36	152

ಮೇಲಿನ ಕೋಷ್ಟಕದ ವಿವರಗಳಂತೆ ಪ್ರಸ್ತುತ ಒಟ್ಟು 152 ನ್ಯಾಯಾಲಯ ಪ್ರಕರಣಗಳು ವಿವಿಧ ನ್ಯಾಯಾಲಯಗಳು ಮತ್ತು ಪ್ರಾಧಿಕಾರಗಳಲ್ಲಿ ಬಾಕಿ ಇರುವುದಾಗಿ ಮಾಹಿತಿ ನೀಡಿರುತ್ತಾರೆ. ವಿವರವನ್ನು **ಅನುಬಂಧ– 62**ರಲ್ಲಿ ನೀಡಲಾಗಿದೆ. ಹಾಗೂ ದೋದಕೇತರ ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ ಹಣದುರುಪಯೋಗ ಪ್ರಕರಣಗಳ ಯಾವುದೇ ವಿಚಾರಣೆಗಳು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಕಾನೂನು ಘಟಕಕ್ಕೆ ಒಳಪಟ್ಟಂತೆ ವಿಶ್ವವಿದ್ಯಾನಿಲಯದ ವಿವಿಧ ಅಧಿಕಾರಿಗಳ ವಿರುದ್ಧ ಪೋಲೀಸ್ ಠಾಣೆ, ಲೋಕಾಯುಕ್ತ ಹಾಗೂ ಸಿ.ಬಿ.ಐ.ಗಳಲ್ಲಿ ದಾಖಲಾಗಿರುವ 7 ಎಫ್.ಐ.ಆರ್. ಗಳ ವಿವರಗಳು ಕೆಳಕಂಡಂತಿರುತ್ತದೆ.

ಕ್ರ.ಸಂ	ಎಫ್.ಐ.ಆರ್./ಅಪರಾಧ ಸಂಖ್ಯೆ/ದಿನಾಂಕ	ವಿಷಯ	ಮೊತ್ತ
1	0042/2016, ದಿನಾಂಕ:20.08.2016	ಕರ್ನಾಟಕ ರಾಜ್ಯಪಾಲರ ಸಚಿವಾಲಯದ ಪತ್ರ ಸಂಖ್ಯೆ:ಜಿ.ಎಸ್.13.ಕ.ಪಿ.ಎಂ.2014(ಪಿ), ದಿ:22.07.2016 ರಲ್ಲಿ 2012–13 ಮತ್ತು 2013–14 ನೇ ಸಾಲಿನ ವಿಷೇಶ ಆಡಿಟ್ ವರದಿಯಲ್ಲಿ ಗಣಕಯಂತ್ರ ಮತ್ತು ಪಿತೋಪಕರಣಗಳನ್ನು ಖರೀದಿಸುವಾಗ ಹಾಗೂ ಸಾಫ್ಟವೇರ್ ಸಿದ್ಧಪಡಿಸಲು ಗುತ್ತಿಗೆ ನೀಡುವಾಗ ಪ್ರೋ.ಕೆ.ಎಸ್.ರಂಗಪ್ಪ, ಪ್ರೋ.ಟಿ.ಡಿ.ದೇವೇಗೌಡ, ಡಾ. ರಾಮನಾಥಮ್ ನಾಯ್ಡು, ಪ್ರೋ.ಬಿ.ಎಸ್.ವಿಶ್ವನಾಥ, ಡಾ.ಕಮಲೇಶ್, ಪ್ರೋ.ಎಮ್.ಜಿ.ಕೃಷ್ಣ ಹಾಗೂ ಪ್ರೋ.ಪಿ.ಎಸ್. ನಾಯ್ಕ ಇವರುಗಳು ನಿಯಮ ಉಲ್ಲಂಘನೆ ಮಾಡಿ ವಿಶ್ವವಿದ್ಯಾನಿಲಯಕ್ಕೆ ನಂಬಿಕೆ ದ್ರೋಹ ಮತ್ತು ದುರುಪಯೋಗವೆಸಗಿರುವ ಬಗ್ಗೆ ತನಿಖೆ ನಡೆಸಲು ದೂರು.	
2	20/2022, ದಿನಾಂಕ:11.08.2022	ಯಾವುದೇ ಶಾಸನಗಳಲ್ಲಿದೇ ವಿಶ್ವವಿದ್ಯಾನಿಲಯದ 21 ಪ್ರಾದೇಶಿಕ ಕೇಂದ್ರಗಳ ಸ್ಥಾಪನೆ ಮತ್ತು ಅವುಗಳಿಗೆ ಪ್ರಾದೇಶಿಕ ನಿರ್ದೇಶಕರುಗಳ ನೇಮಕ ಹಾಗೂ ಅವರುಗಳ ಸಂಬಳವನ್ನು ಮಾಸಿಕ ರೂ.20,000/– ಗಳಿಂದ ರೂ.36,200/– ಗಳಿಗೆ ಹೆಚ್ಚಿಸಿರುವುದು ಕಾನೂನು ಬಾಹಿರವಾಗಿರುತ್ತದೆ. ಈ ಸಂಬಂಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 ರಿತ್ಯ ಪ್ರಕರಣ ದಾಖಲಿಸಿದೆ.	

3	12/2022, ದಿನಾಂಕ:12.05.2022	ಮೆ: ಮದ್ದಾಲ ಇಂಡಸ್ಟ್ರೀಸ್, ಗುಂಟೂರ್, ಆಂದ್ರ ಪ್ರದೇಶ ಇವರಿಂದ 20 ಲಕ್ಷ ಅಂಕ ಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಕುಲಪತಿಗಳ ಹಾಗೂ ಸಮ ಕುಲಾಧಿಪತಿಗಳ ಒಪ್ಪಿಗೆಯನ್ನು ಪಡೆಯದೇ ಖರೀದಿ ಮಾಡಿರುವ ಸಂಬಂಧ ಪ್ರೋ. ಎಂ.ಜಿ. ಕೃಷ್ಣನ್, ನಿವೃತ್ತ ಉಪಕುಲಪತಿಗಳು, ಶ್ರೀ. ರಾಜಶೇಖರಯ್ಯ, ನಿವೃತ್ತ ಹಣಕಾಸು ಅಧಿಕಾರಿ ಪ್ರೋ. ಪಿ.ಎಸ್.ನಾಯ್ಕ, ನಿವೃತ್ತ ರಿಜಿಸ್ಟ್ರರ್, ಪ್ರೋ. ಕೆ.ಜಿ.ಸುರೇಶ್, ರಿಜಿಸ್ಟ್ರರ್(ಮೌಲ್ಯಮಾಪನ) ಇವರುಗಳ ವಿರುದ್ಧ ಭ್ರಷ್ಟಾಚಾರ ಪ್ರತಿಬಂಧ ಕಾಯ್ದೆ 1988 ರಿತ್ಯ ಪ್ರಕರಣ ದಾಖಲಿಸಿದೆ.	ರೂ. 6.30 ಕೋಟಿ

4	21/2022. ದಿನಾಂಕ:11.08.2022	ವಿದ್ಯಾಲಯದ ಮಾನ್ಯತೆ ಸಂಬಂಧ ಯು.ಜಿ.ಸಿ. ಪತ್ರ ಸಂ:ಎಫ್.ನಂ/ಡಿ.ಇ.ಸಿ.ಕೆ.ಎಸ್.ಒ.ಯು/2–14, ದಿ:22.01.2014 ರ ರೀತ್ಯ ಕರೆದಿದ್ದ ಸಭೆಗೆ ಹಾಜರಾಗದೇ, ನಿರ್ಲಕ್ಷ್ಯತೆ ತೋರಿಸಿದ್ದು, ನಂತರ ಯು.ಜಿ.ಸಿ. ಯು ಕರಾಮುವಿಗೆ ನೀಡಿದ್ದ ಮಾನ್ಯತೆಯನ್ನು ಹಿಂತೆಗೆದುಕೊಂಡಿದ್ದು, ದಿ:07.04.2013 ರಲ್ಲಿ ಕರಾಮುವಿಯ ಮಾನ್ಯತೆ ಮುಗಿದಿದ್ದು, ಸದರಿ ಮಾನ್ಯತೆಯ ನವೀಕರಣದ ಸಂಬಂಧ ವಿಶ್ವವಿದ್ಯಾಲಯವು ಯಾವುದೇ ರೀತಿಯ ಪ್ರಯತ್ನಗಳನ್ನು ಕೈಗೊಳ್ಳದೇ ಸಾವಿರಾರು ವಿದ್ಯಾರ್ಥಿಗಳು ತೊಂದರೆ ಗೊಳಗಾಗುವಂತಾಗಿರುತ್ತದೆ. ಈ ಆರೋಪದಲ್ಲಿ ಪ್ರೋ. ಎಂ.ಜಿ. ಕೃಷ್ಣನ್, ನಿವೃತ್ತ ಉಪಕುಲಪತಿಗಳು, ಪ್ರೋ. ಟಿ.ಎಸ್.ನಾಯ್ಕ, ನಿವೃತ್ತ ರಿಜಿಸ್ಟ್ರಾರ್, ಪ್ರೋ. ಕೆ.ಜೆ.ಸುರೇಶ್, ರಿಜಿಸ್ಟ್ರಾರ(ಮೌಲ್ಯಮಾಪನ) ಇವರುಗಳ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 ರಿತ್ಯ ಪ್ರಕರಣ ದಾಖಲಿಸಿದೆ.	
5	17/2022. ದಿನಾಂಕ:13.07.2022	ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ(ಡಿ.ಇ.ಸಿ) ಇವರ ಎಫ್.ನಂ./ಡಿ.ಇ.ಸಿ./ಕೆಎಸ್.ಒ.ಯು/ಕೆ.ಎ.ಆರ್/11/5880, ದಿ:10.06.2011 ರ ಷೋಕಾಸ್ ನೋಟೀಸ್ ನ್ನು ನೀಡಿದ್ದು ಎಂ.ಫಿಲ್, ಪಿ.ಹೆಚ್.ಡಿ, ಜಿ.ಇ, ಬಿ.ಟೆಕ್, ಎಂ.ಇ, ಎಂ.ಟೆಕ್, ಡಿಪ್ಲೊಮಾ ಇನ್ ಇಂಜಿನಿಯರಿಂಗ್ ಮತ್ತು ಇತರೇ ಟೆಕ್ನಿಕಲ್ ಕೋರ್ಸ ಗಳಿಗೆ ಡಿ.ಇ.ಸಿ ಇಂದ ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣಗಳಿಗೆ ಅನುಮತಿ ಪಡೆಯದೇ ಕೆ.ಎಸ್.ಒ.ಯು. ಕಾರ್ಯ ನಿರ್ವಹಿಸಿರುವುದಕ್ಕೆ ಯು.ಜಿ.ಸಿ ಯು ದಿ:16.05.2015 ರ ನೋಟೀಸ್ ರಲ್ಲಿ ಕ.ರಾ.ಮು.ವಿ.ಗೆ ನೀಡಿದ ಮಾನ್ಯತೆ ಹಿಂತೆಗೆದುಕೊಂಡಿದ್ದರಿಂದ ಸಾವಿರಾರು ವಿದ್ಯಾರ್ಥಿಗಳು ಕಷ್ಟಕ್ಕೆ ಗುರಿಯಾಗಿರುತ್ತಾರೆ. ಈ ಸಂಬಂಧ ಪ್ರೋ. ಕೆ.ಎಸ್. ರಂಗಪ್ಪ, ಪ್ರೋ. ಎಂ.ಜಿ. ಕೃಷ್ಣನ್, ಇಬ್ಬರು ನಿವೃತ್ತ ಉಪಕುಲಪತಿಗಳು, ಪ್ರೋ.ಜಿ.ಎಸ್. ವಿಶ್ವನಾಥ್, ಪ್ರೋ. ಟಿ.ಎಸ್.ನಾಯ್ಕ, ನಿವೃತ್ತ ರಿಜಿಸ್ಟ್ರಾರ್, ಪ್ರೋ. ಕೆ.ಜೆ.ಸುರೇಶ್, ರಿಜಿಸ್ಟ್ರಾರ್(ಮೌಲ್ಯಮಾಪನ) ಇವರುಗಳ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 ರಿತ್ಯ ಪ್ರಕರಣ ದಾಖಲಿಸಿದೆ.	
6	0054/2019. ದಿನಾಂಕ:17.12.2019	ಇಗ್ನೋ ಕಾಯ್ದೆ 1985 ರ ಕಲಂ 5 ರಂತೆ ನಿಯಮಗಳನ್ನು ಉಲ್ಲಂಘಿಸಿ ಕೆ.ಎಸ್.ಒ.ಯು. 255 ಯಾಸಗಿ ಸಂಸ್ಥೆಗಳು, ಕಂಪನಿಗಳು, ಸಂಘ ಸಂಸ್ಥೆಗಳೊಂದಿಗೆ ಎಂ.ಓ.ಯು ಗಳನ್ನು ಮಾಡಿಕೊಂಡು ತಾಂತ್ರಿಕ, ಪ್ಯಾರಾಮೆಡಿಕಲ್, ಜಿ.ಇ, ಬಿ.ಟೆಕ್, ಎಂ.ಟೆಕ್, ನರ್ಸಿಂಗ್, ರೆಡಿಯೇಷನ್ ಮುಂತಾದವುಗಳ ಪ್ರವೇಶಾತಿಯನ್ನು ಅಹ್ವಾನಿಸಲಾಗಿರುತ್ತದೆ. ಯುಜಿಸಿಯ ನಿಯಮಾವಳಿಗಳನ್ನು ಉಲ್ಲಂಘಿಸಿರುವ ಕಾರಣ ಅನ್ಯಾಯಕ್ಕೊಳಗಾದ ವಿದ್ಯಾರ್ಥಿಗಳ ಪರವಾಗಿ ಶೈಕ್ಷಣಿಕ ಸಹಭಾಗಿತ್ವ ಸಂಸ್ಥೆಗಳ ವಿರುದ್ಧ ಹಾಗೂ ಪ್ರೋ.ಕೆ. ಸುಧಾರಾವ್ ಮಾಜಿ ಕುಲಪತಿಗಳು ಇವರ ವಿರುದ್ಧ ಪ್ರಥಮ ವರದಿ ದಾಖಲಿಸಿದೆ.	
7	ಸರ್ಕಾರದ ಪತ್ರ ಸಂಖ್ಯೆ:ಇಡಿ 20 ಯುಬಿವಿ 2022. ದಿನಾಂಕ:03.05.2023 ರಲ್ಲಿ ಸಿ.ಬಿ.ಐ. ಗೆ ವಹಿಸಲಾಗಿದೆ.	ವಿಶ್ವವಿದ್ಯಾನಿಲಯದ 167 ನೇ ವ್ಯವಸ್ಥಾಪನಾ ಮಂಡಳಿಯಲ್ಲಿ ರಲ್ಲಿ 2009 ರಿಂದ 2016 ರ ವರೆಗಿನ ಶೈಕ್ಷಣಿಕ ಸಾಲುಗಳಲ್ಲಿ ಸಹಭಾಗಿತ್ವ ಸಂಸ್ಥೆಗಳಿಂದ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಪ್ರವೇಶಾತಿ, ಪರೀಕ್ಷಾ ಹಾಗೂ ಇತರೆ ಸೇವೆಗಳ ಮೊತ್ತ ಸುಮಾರು ರೂ.300.00 ಕೋಟಿಗಳಿಗೂ ಹೆಚ್ಚು ಮೊತ್ತದ ಆರ್ಥಿಕ ನಷ್ಟವಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಸದರಿ ವಿಷಯವನ್ನು ಸಿ.ಬಿ.ಐ. ಅಥವಾ ಎಸ್.ಐ.ಎ ಯಿಂದ ತನಿಖೆ ಮಾಡಿಸಲು ವಿಚಾರಸ್ಸು ಮಾಡಲು ಒಪ್ಪಿರುತ್ತದೆ. ಅದರಂತೆ ರಾಜ್ಯಪಾಲರ ಕಾರ್ಯಾಲಯದಿಂದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಇವರಿಗೆ ಪತ್ರ ಸಂಖ್ಯೆ:ಜಿಎಸ್ 17 ಕೆಒಎಮ್ 2022, ದಿನಾಂಕ:07.04.2022, ರಲ್ಲಿ ಮುಕ್ತ ವಿಶ್ವವಿದ್ಯಾನಿಲಯವಲ್ಲಿ ಪ್ರವೇಶಾತಿ ತುಲ್ಯಗಳಲ್ಲಿ	ರೂ. 300.00 ಕೋಟಿ

		ಅವ್ಯವಹಾರ ನಡೆದಿರುವ ಬಗ್ಗೆ ಸಿ.ಬಿ.ಐ. ಯಿಂದ ತನಿಖೆ ನಡೆಸಲು ಸೂಚಿಸಿರುವಂತೆ ಉನ್ನತ ಶಿಕ್ಷಣ ಇಲಾಖೆಯ ಪತ್ರ ದಿನಾಂಕ:03.05.2023 ರಲ್ಲಿ ಸಿ.ಬಿ.ಐ. ಗೆ ಪ್ರಕರಣವನ್ನು ವಹಿಸಲಾಗಿದೆ.	

ಸದರಿ ನ್ಯಾಯಾಲಯ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ವಿಶ್ವವಿದ್ಯಾನಿಲಯ ಕ್ರಮ ಕೈಗೊಳ್ಳಲು ಸೂಚಿಸಿದೆ.

41. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಸ್ತಿಗಳ ವಿವರ

ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳನ್ನೊಳಗೊಂಡಂತೆ ವಿಶ್ವವಿದ್ಯಾನಿಲಯದ ಸ್ವಾಧೀನದಲ್ಲಿರುವ ಒಟ್ಟು ಸ್ಥಿರ ಆಸ್ತಿ, ಒತ್ತುವರಿಯಾಗಿರುವ ಭೂಮಿ ಹಾಗೂ ಒತ್ತುವರಿ ತೆರವಿಗೆ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಗಳನ್ನು/ಮಾಹಿತಿಯನ್ನು, ಅಗತ್ಯ ದಾಖಲಾತಿಗಳೊಂದಿಗೆ (ಸರ್ವೆ ನಂ, ಹಕ್ಕುಪತ್ರ, ಸ್ವಾಧೀನ ಪತ್ರ, ಖಾತಾ ಎಕ್ಸ್‌ಟ್ರಾಕ್ಟ್/ಖಾತಾ ಉದ್ಧರಣಾ ಪ್ರತಿ ಇತ್ಯಾದಿ) ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ: / ನ್ನು ನೀಡಲಾಗಿತ್ತು. ವಿಶ್ವವಿದ್ಯಾನಿಲಯದವರು ಸ್ಥಿರಾಸ್ತಿಗಳ ವಿವರಗಳ ಪಟ್ಟಿ ಮಾತ್ರ ಸಿದ್ಧಪಡಿಸಿ ಹಾಜರುಪಡಿಸಿದ್ದು, ವಿವರಗಳನ್ನು **ಅನುಬಂಧ–63**ರಲ್ಲಿ ನೀಡಲಾಗಿದೆ. ಆದರೆ ಚರ ಆಸ್ತಿಗಳ ವಿವರಗಳನ್ನು ಹಾಗೂ ಸ್ಥಿರ ಆಸ್ತಿಗೆ ಸಂಬಂಧಿಸಿದಂತೆ ಮೇಲಿನ ಅಂಶಗಳಿಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

42. ಲೆಕ್ಕಪರಿಶೋಧನಾ ಶುಲ್ಕ.

ವಿಶ್ವವಿದ್ಯಾನಿಲಯದವರು ಲೆಕ್ಕಪರಿಶೋಧನಾ ಶುಲ್ಕವನ್ನು ಸರ್ಕಾರದ ಲೆಕ್ಕಶೀರ್ಷಿಕೆ ಪಾವತಿಸದಿರುವುದು.

2023–24ನೇ ಸಾಲಿನ ಅಂತ್ಯಕ್ಕೆ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಲೆಕ್ಕ ಶೀರ್ಷಿಕೆಗೆ ಸಂದಾಯ ಮಾಡಬೇಕಿರುವ ಲೆಕ್ಕಪರಿಶೋಧನಾ ಶುಲ್ಕದ ಬಾಕಿ ವಿವರಗಳು ಈ ಕೆಳಕಂಡಂತಿರುತ್ತದೆ.

ವರ್ಷ	ಆರಂಭಿಕ ಶಿಲ್ಕು	ಚಾಲ್ತಿ ವರ್ಷದ ಆಡಿಟ್ ಶುಲ್ಕ	ಒಟ್ಟು ಮೊತ್ತ	ಚಾಲ್ತಿ ವರ್ಷದ ಪಾವತಿ	ಬಾಕಿ ಮೊತ್ತ
2023–24	52,76,264	16,15,557	68,91,821	–	**68,91,821**
2024–25	68,91,821	25,11,558	94,03,379	52,76,264	**41,27,115**

ಬಾಕಿ ಉಳಿದಿರುವ ರೂ.41,27,115/–ಗಳ ಲೆಕ್ಕಪರಿಶೋಧನಾ ಶುಲ್ಕವನ್ನು ಇಲಾಖೆ ಲೆಕ್ಕ ಶೀರ್ಷಿಕೆ 0070–60–110–0–01–000ಗೆ ಜಮೆ ಮಾಡಿ, ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿದೆ. ಚಾಲ್ತಿ ವರ್ಷದ ಲೆಕ್ಕಪರಿಶೋಧನಾ ಶುಲ್ಕದ ವಿವರವನ್ನು **ಅನುಬಂಧ–64 ರಲ್ಲಿ** ವಿವರಿಸಲಾಗಿದೆ.

<u>ಭಾಗ–4</u>

43. ಸಂಸ್ಥೆಯ ಅತ್ಯುತ್ತಮ ಅಭ್ಯಾಸಗಳು ಹಾಗೂ ಸಾಧನೆಗಳು

1. ಕರಾಮುವಿಯು 1996 ರಲ್ಲಿ ಪ್ರಾರಂಭವಾಗಿದ್ದು, ಮೊಟ್ಟ ಮೊದಲ ಬಾರಿಗೆ ನ್ಯಾಕ್‌ಗೆ ಒಳಪಡಿಸಿ, ನ್ಯಾಕ್ ತಂಡವು ವಿ.ವಿ.ಗೆ ಬಂದು ಪರಿಶೀಲನೆ ಮಾಡಿ, ಕರಾಮುವಿಗೆ 3.31 ಸಿಜಿಪಿಎಯೊಂದಿಗೆ ನ್ಯಾಕ್ ಎ+ ಪಡೆಯಲಾಗಿದೆ.

2. ಕರಾಮುವಿಯಲ್ಲಿ 2021–22 ರಲ್ಲಿ ವಾರ್ಷಿಕ ಪ್ರವೇಶಾತಿ ಸುಮಾರು 44051 (ನಲವತ್ತನಾಲ್ಕು ಸಾವಿರದ ಐವತ್ತೊಂದು) ಸಂಖ್ಯೆಯಿತ್ತು. ಇವರ ಅವಧಿಯಲ್ಲಿ ü ಪ್ರಸ್ತುತ 2024–25 ರಲ್ಲಿ ವಾರ್ಷಿಕ 79085 ಪ್ರವೇಶಾತಿ ಆಗಿದ್ದು, ಯುಜಿ (3 ವರ್ಷಗಳು), ಪಿಜಿ (2 ವರ್ಷಗಳು), ಡಿಪ್ಲೊಮಾ, ಸರ್ಟಿಫಿಕೇಟ್ ಕೋರ್ಸ್‌ಗಳು ಸೇರಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

3. ಕರ್ನಾಟಕದ ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ಪತ್ರ ವ್ಯವಹಾರ ನಡೆಸಿ, ವಿವಿಧ ಜಿಲ್ಲೆಗಳಲ್ಲಿ ಪ್ರಾದೇಶಿಕ ಕೇಂದ್ರ/ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲು 20 ಎಕರೆಯಷ್ಟು ಭೂಮಿಯನ್ನು ಉಚಿತವಾಗಿ ಮಂಜೂರು ಮಾಡಲಾಗಿದೆ.

4. ಮಾನ್ಯ ಕುಲಪತಿಗಳ ಮಾರ್ಗದರ್ಶನದಲ್ಲಿ ಯುಜಿಸಿಗೆ ಹೊಸ **ಶೈಕ್ಷಣಿಕ ಕಾರ್ಯಕ್ರಮಗಳನ್ನು** ಪ್ರಾರಂಭಿಸಲು ಪ್ರಸ್ತಾವನೆಯನ್ನು ಸಲ್ಲಿಸಿ, ಯುಜಿಸಿ ಯಿಂದ 47 ಶೈಕ್ಷಣಿಕ ಕಾರ್ಯಕ್ರಮಗಳಿಗೆ ಮಾನ್ಯತೆ ಪಡೆಯುವಲ್ಲಿ ಸಫಲರಾಗಿದ್ದು, ಇದು ದೇಶದ ಮುಕ್ತ ವಿ.ವಿ.ಗಳಲ್ಲಿ ಅತ್ಯಧಿಕ ಸಂಖ್ಯೆಯ ಶೈಕ್ಷಣಿಕ ಕಾರ್ಯಕ್ರಮಗಳಾಗಿವೆ.

5. ಮಾನ್ಯ ಕುಲಪತಿಗಳು ಯುಜಿಸಿ ಯಿಂದ ಆನ್‌ಲೈನ್ ಮೋಡ್ ಮೂಲಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಲು ಮಾನ್ಯತೆ ಪಡೆದು, ಈಗಾಗಲೇ 10 ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಿದ್ದು, ಇದರ ಸದುಪಯೋಗವನ್ನು ರಾಜ್ಯ/ರಾಷ್ಟ್ರೀಯ/ಅಂತರರಾಷ್ಟ್ರೀಯ ಮಟ್ಟದಲ್ಲಿ ಕಲಿಕಾರ್ಥಿಗಳು ಪ್ರವೇಶಾತಿ ಪಡೆದು ಸದುಪಯೋಗ ಪಡೆಯುತ್ತಿದ್ದಾರೆ.

6. ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ (ಎನ್.ಎಸ್.ಡಿ.ಎಲ್) ಸಹಯೋಗದೊಂದಿಗೆ ಕರಾಮುವಿಯು ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಕೌಶಲ್ಯ ಕೇಂದ್ರವನ್ನು ಸ್ಥಾಪಿಸಿದ್ದು, ಇದು ಜಾಗತಿಕವಾಗಿ ಅತ್ಯಾಧುನಿಕ ತಂತ್ರಜ್ಞಾನದ ಮೂಲ ಸೌಕರ್ಯವಾಗಿದೆ.

7. ಕರಾಮುವಿಯು 10 ಕೋಟಿಗೂ ಹೆಚ್ಚು ಪಟ ಮರುಪಾವತಿಯನ್ನು ಯಶಸ್ವಿಯಾಗಿ ಪಡೆದುಕೊಂಡಿದೆ.

8. ಕರಾಮುವಿಯ ಪ್ರಾಧ್ಯಾಪಕರು ಮಾಡಿರುವ ಶೈಕ್ಷಣಿಕ ಸಾಧನೆಯ ಪ್ರತೀಕವಾಗಿ ಅತ್ಯುತ್ತಮ ಶಿಕ್ಷಕ, ಅತ್ಯುತ್ತಮ ಪ್ರಕಟಣೆ ಪ್ರಶಸ್ತಿ, ಅತ್ಯುತ್ತಮ ಪೇಟೆಂಟ್ ಪ್ರಶಸ್ತಿ ಮತ್ತು ಇತರೆ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಿ ಪ್ರೋತ್ಸಾಹಿಸಿದ್ದಾರೆ.

9. ನಿಷ್ಕ್ರೀಯವಾಗಿದ್ದ ಕರಾಮುವಿಯ ಪ್ರಸಾರಾಂಗವನ್ನು ಪುನರುಜ್ಜೀವನಗೊಳಿಸಿದ್ದು, ಮುಕ್ತವಾಹಿನಿ ಸುದ್ದಿಪತ್ರಿಕೆಯನ್ನು ಹೊರತಂದು ಪ್ರಸಾರವಾಗುತ್ತಿದೆ. ಹಾಗೆಯೇ ಇಲ್ಲಿ ಪ್ರಕಟವಾಗುವ ಪ್ರಕಟಣೆಗಳಿಗೆ ಐ.ಎಸ್.ಬಿ.ಎನ್ ಸಂಖ್ಯೆಯನ್ನು ಹೊಂದಿದೆ.

10. ಕರಾಮುವಿಯು ಸ್ಪರ್ಧಾತ್ಮಕ ಕೇಂದ್ರದಲ್ಲಿ ನಡೆಯುವ ತರಬೇತಿಗೆ ಎಲ್ಲಾ ರೀತಿಯ ಸಹಕಾರ ನೀಡಿ ಪ್ರೋತ್ಸಾಹಿಸುತ್ತಿದ್ದಾರೆ. ಸದರಿ ಕೇಂದ್ರದಲ್ಲಿ ತರಬೇತಿ ಪಡೆದವರು ಯುಪಿಎಸ್‌ಸಿ, ಕೆಪಿಎಸ್‌ಸಿ ಮತ್ತು ಇನ್ನಿತರೆ ಇಲಾಖೆ/ಸಂಸ್ಥೆಗಳಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿದ್ದಾರೆ. 20. ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡುವುದಕ್ಕೆ, ಅಧ್ಯಯನ ಕೇಂದ್ರ, ವಸತಿ ಸೌಕರ್ಯ, ಗ್ರಂಥಾಲಯ ಸೌಕರ್ಯ, ಸ್ಟುಡಿಯೋ ದೃಶ್ಯವಾಹಿನಿಯ ಮೂಲಕ ಬೋಧಕರಿಂದ ರೆಕಾರ್ಡ್ ಆಗಿರುವ ಪಾಠ ಪ್ರವಚನಗಳ ಪ್ರಸಾರ, ಸಿದ್ಧಪಾಠಗಳು, ಪ್ರಯೋಗಾಲಯಗಳು ಇತರೆ ಎಲ್ಲವನ್ನೂ ಅನುಕೂಲ ಮಾಡಿಕೊಟ್ಟಿದ್ದಾರೆ.

ಭಾಗ–5

44. ಲೆಕ್ಕ ಪರಿಶೋಧನಾ ವರದಿ ಸ್ವೀಕೃತಿ: Acknowledgement

ವಿಶ್ವವಿದ್ಯಾಲಯದ 2024–25ನೇ ಸಾಲಿನ ಲೆಕ್ಕಪರಿಶೋಧನೆಗೆ ವರದಿಯಲ್ಲಿ ಕಾಣಿಸಿದಂತೆ ದಾಖಲೆಗಳನ್ನು ಪರಿಶೀಲನೆಗೆ ಹಾಜರುಪಡಿಸಿರುವ ಬಗ್ಗೆ ವಿಶ್ವವಿದ್ಯಾಲಯದ ಸಹಕಾರವನ್ನು ಲೆಕ್ಕಪರಿಶೋಧನಾ ತಂಡವು ಶ್ಲಾಘಿಸುತ್ತದೆ.

ಪ್ರೀತಿ.ಪಿ.ಮಗ್ಗಾವಿ, ಲೆಕ್ಕಪರಿಶೋಧನಾಧಿಕಾರಿ	
ವಿ.ಎಸ್.ರೇಣು, ಲೆಕ್ಕಪರಿಶೋಧನಾಧಿಕಾರಿ	
ಎ.ಸಿ. ಗುರುಪಾದಸ್ವಾಮಿ, ಲೆಕ್ಕಪರಿಶೋಧನಾಧಿಕಾರಿ	
ಸತೀಶ.ಜಿ.ಕೆ, ಲೆಕ್ಕಾಧೀಕ್ಷಕರು	
ಅನಂತಲಕ್ಷ್ಮಿ.ಬಿ.ಎನ್, ಲೆಕ್ಕಾಧೀಕ್ಷಕರು	
ಸಮೀರ್ ಉಲ್ಲಾ, ಲೆಕ್ಕಾಧೀಕ್ಷಕರು	
ನುಜಹತ್ ಫಾತಿಮಾ ಲೆಕ್ಕಸಹಾಯಕರು	
ರಾಧಾ.ಎಸ್, ಲೆಕ್ಕಸಹಾಯಕರು	
ತೇಜಶ್ವಿನಿ.ಬಿ.ಎನ್, ಲೆಕ್ಕಸಹಾಯಕರು	
ಶೈಲಜಾ.ಎಸ್, ಲೆಕ್ಕಸಹಾಯಕರು	

45. ಲೆಕ್ಕಪರಿಶೋಧನಾ ವಿಚಾರಣಾ ಪತ್ರಗಳಿಗೆ ಕೈಗೊಂಡ ಕ್ರಮ:

ಶೋಧನೆಯಲ್ಲಿ ಒಟ್ಟಾರೆ 207 ವಿಚಾರಣಾ ಪತ್ರಗಳನ್ನು ನೀಡಲಾಗಿದ್ದು, ಲೆಕ್ಕಪರಿಶೋಧನಾ ಸಮಯದಲ್ಲಿ ವಿಶ್ವವಿದ್ಯಾಲಯದವರು 165 ವಿಚಾರಣಾ ಪತ್ರಗಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಿರುತ್ತಾರೆ. ಆದುದರಿಂದ ಕುಲಸಚಿವರು/ಹಣಕಾಸು ಅಧಿಕಾರಿಗಳು ಲೆಕ್ಕಪರಿಶೋಧನೆ ಸಮಯದಲ್ಲಿ ನೀಡಿದ ವಿಚಾರಣಾ ಪತ್ರಗಳಿಗೆ ಕೂಡಲೇ ಅನುಪಾಲನಾ ವರದಿ ಸಲ್ಲಿಸಲು ಕ್ರಮವಹಿಸುವುದು.

ಅನುಬಂಧ - 3.

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 15 ಯುಎನ್‌ಇ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 08.08.2023.

ಸುತ್ತೋಲೆ

ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ವಿಶ್ವವಿದ್ಯಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಳಗುತ್ತಿಗೆ ಮತ್ತು ಹೊರಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಿ ನೌಕರರುಗಳನ್ನು ಖಾಯಂಗೊಳಿಸುವಂತೆ ಸರ್ಕಾರಕ್ಕೆ ಮನವಿಗಳು ಸ್ವೀಕೃತಗೊಳ್ಳುತ್ತಿವೆ. ಬಹುತೇಕ ವಿಶ್ವವಿದ್ಯಾಲಯಗಳು ತಮ್ಮ ಆಂತರಿಕ ಸಂಪನ್ಮೂಲಗಳ ಬಲದ ಮೇಲೆ ರಾಜ್ಯ ಸರ್ಕಾರ/ಆರ್ಥಿಕ ಇಲಾಖೆಯ ಪೂರ್ವಾನುಮೋದನೆ ಇಲ್ಲದೇ ಮಂಜೂರಾದ ಹುದ್ದೆಗಳಿಗೂ ಮೀರಿ ದುಪ್ಪಟ್ಟು ಸಂಖ್ಯೆಯಲ್ಲಿ ಅಗತ್ಯಕ್ಕಿಂತಲೂ ಹೆಚ್ಚಿನ ಸಿಬ್ಬಂದಿಗಳನ್ನು ನಿಯಮಬಾಹಿರವಾಗಿ ನೇಮಿಸಿಕೊಳ್ಳಲಾಗಿದ್ದು, ಈ ರೀತಿ ನೇಮಿಸಿಕೊಂಡಿರುವ ತಾತ್ಕಾಲಿಕ ನೌಕರರನ್ನು ಕೂಡಲೇ ಬಿಡುಗಡೆಗೊಳಿಸುವಂತೆ ಈ ಹಿಂದೆ ಸರ್ಕಾರದಿಂದ ಸುತ್ತೋಲೆಗಳನ್ನು ಹೊರಡಿಸಲಾಗಿದ್ದರೂ ಅದರಂತೆ ವಿಶ್ವವಿದ್ಯಾಲಯಗಳು ಕ್ರಮವಹಿಸಿರುವುದಿಲ್ಲ.

ಪ್ರಸ್ತುತ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಕೆಳಹಂತದ ಸಿಬ್ಬಂದಿಗಳು ತಮ್ಮ ಸೇವೆಯನ್ನು ಖಾಯಂಗೊಳಿಸುವಂತೆ ಸರ್ಕಾರಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಆದರೆ ಮೇಲೆ ವಿವರಿಸಿರುವಂತೆ ಹೆಚ್ಚಿನ ಸಿಬ್ಬಂದಿಗಳನ್ನು ಮಂಜೂರಾಗದ ಹುದ್ದೆಗಳಿಗೆ ನಿಯಮಾಬಾಹಿರವಾಗಿ ನೇಮಿಸಲಾಗಿರುತ್ತದೆ. ದ್ವಿ.ದ.ಸ/ಬೆರಳಚ್ಚುಗಾರರು/ಡಿ.ಇ.ಓ/ವಾಹನಚಾಲಕರು /ಗ್ರೂಪ್-ಡಿ ಮುಂತಾದ ತತ್ಸಮಾನ ಅನೇಕ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡುವುದು ಸರ್ಕಾರದ ನೀತಿಯಾಗಿದ್ದು, ನೇರನೇಮಕಾತಿಗೆ ಅವಕಾಶವಿರುವುದಿಲ್ಲ. ಹೀಗಾಗಿ ನೇರನೇಮಕಾತಿಯಲ್ಲಿ ವಿಶೇಷ ಆದ್ಯತೆ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಮುಂದುವರೆದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಉಮಾದೇವಿ ಹಾಗೂ ಇತರರ ಪ್ರಕರಣದಲ್ಲಿ ದಿನಾಂಕ;10-04-2006ರಂದು ನೀಡಿರುವ ತೀರ್ಪಿನಲ್ಲಿ ಪ್ರಚುರಪಡಿಸಿರುವ ಕಾನೂನಾತ್ಮಯ ಒಳಗುತ್ತಿಗೆ/ಹೊರಗುತ್ತಿಗೆ/ತಾತ್ಕಾಲಿಕ ಸಿಬ್ಬಂದಿಗಳ ಸೇವಾ ಸಕ್ರಮಾತಿಗಾಗಲಿ ಅಥವಾ ನೇರನೇಮಕಾತಿಯಲ್ಲಿ ವಿಶೇಷ ಆದ್ಯತೆ ನೀಡಲಾಗಲೀ ಅವಕಾಶವಿರುವುದಿಲ್ಲ.

ಆದ್ದರಿಂದ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಸರ್ಕಾರದ ಪೂರ್ವಾನುಮೋದನೆ ಇಲ್ಲದೇ ನಿಯಮಬಾಹಿರವಾಗಿ ಮಂಜೂರಾದ ಹುದ್ದೆಗಳಿಗೂ ಮೀರಿ ಅಗತ್ಯಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ನೇಮಿಸಿಕೊಂಡ ನೌಕರರನ್ನು ಸೇವೆಯಿಂದ ಬಿಡುಗಡೆಗೊಳಿಸಿ ವಿಶ್ವವಿದ್ಯಾಲಯಗಳ ಸಿಬ್ಬಂದಿಗಳ ಸಂಖ್ಯೆಯನ್ನು ತರ್ಕಬದ್ಧಗೊಳಿಸಲು (Rationalize) ಕ್ರಮವಹಿಸುವಂತೆ ಈ ಮೂಲಕ ವಿಶ್ವವಿದ್ಯಾಲಯಗಳಿಗೆ ಸೂಚಿಸಲಾಗಿದೆ.

ಈ ವಿಚಾರವಾಗಿ ಪುನರಾವರ್ತಿತ ಸುತ್ತೋಲೆಗಳನ್ನು ಹೊರಡಿಸಲು ಅವಕಾಶ ನೀಡದಂತೆ ಮೇಲ್ಕಂಡ ಸೂಚನೆಗಳನ್ನು ಅನುಸರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ತಿಳಿಸಿದೆ. ಈ ಸೂಚನೆಗಳ ಉಲ್ಲಂಘನೆ/ಲೋಪಗಳಿಗೆ ಹಾಗೂ ಅದರ ಪರಿಣಾಮಗಳಿಗೆ ವಿಶ್ವವಿದ್ಯಾಲಯದ ಕುಲಪತಿ, ಕುಲಸಚಿವರು ಮತ್ತು ಹಣಕಾಸು ಅಧಿಕಾರಿ ಹಾಗೂ ಸಂಬಂಧಿಸಿದ ಅಧಿಕಾರಿ/ನೌಕರರನ್ನು ನೇರ ಹೊಣೆಗಾರರಾಗುತ್ತಾರೆ.

(ಶೀತಲ್ ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು 1)

ಗೆ:

1. ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
2. ಕುಲಸಚಿವರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
3. ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

...2

4. ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ.
5. ಕುಲಸಚಿವರು, ಗುಲ್ಬರ್ಗ ವಿಶ್ವವಿದ್ಯಾಲಯ, ಕಲಬುರಗಿ
6. ಕುಲಸಚಿವರು, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು
7. ಕುಲಸಚಿವರು, ತುಮಕೂರು ವಿಶ್ವವಿದ್ಯಾಲಯ, ತುಮಕೂರು
8. ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ
9. ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.
10. ಕುಲಸಚಿವರು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ.
11. ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
12. ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ.
13. ಕುಲಸಚಿವರು, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
14. ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ..
15. ಕುಲಸಚಿವರು, ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು
16 ಕುಲಸಚಿವರು, ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು.
17 ಕುಲಸಚಿವರು, ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ಶಿಗ್ಗಾವಿ ತಾಲ್ಲೂಕು, ಹಾವೇರಿ ಜಿಲ್ಲೆ.
18 ಕುಲಸಚಿವರು, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು
19 ಕುಲಸಚಿವರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ತಮಕಾ, ಕೋಲಾರ ಜಿಲ್ಲೆ
20 ಕುಲಸಚಿವರು, ಮಂಡ್ಯ ಕೃಷ್ಣರ್ ವಿಶ್ವವಿದ್ಯಾಲಯ, ಮಂಡ್ಯ
21 ಕುಲಸಚಿವರು, ಮಹಾರಾಣಿ ಕೃಷ್ಣರ್ ವಿಶ್ವವಿದ್ಯಾಲಯ, ಬೆಂಗಳೂರು
22 ಕುಲಸಚಿವರು, ನೃಪತುಂಗ ವಿಶ್ವವಿದ್ಯಾಲಯ, ಬೆಂಗಳೂರು
23 ಕುಲಸಚಿವರು, ರಾಯಚೂರು ವಿಶ್ವವಿದ್ಯಾಲಯ, ಯರಗೇರಾ, ರಾಯಚೂರು.
24 ಕುಲಸಚಿವರು, ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್, ಜ್ಞಾನಭಾರತಿ, ಬೆಂಗಳೂರು.
25 ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು.
26 ಹಾಸನ ವಿಶ್ವವಿದ್ಯಾಲಯ, ಹಾಸನ
27 ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.
28 ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ.
29 ಬೀದರ್ ವಿಶ್ವವಿದ್ಯಾಲಯ, ಬೀದರ್.
30 ಚಾಮರಾಜ ನಗರ ವಿಶ್ವವಿದ್ಯಾಲಯ, ಚಾಮರಾಜನಗರ,
3 . ಕೊಡಗು ವಿಶ್ವವಿದ್ಯಾಲಯ,ಕೊಡಗು ಜಿಲ್ಲೆ.
3 . ಬಾಗಲಕೋಟೆ ವಿಶ್ವವಿದ್ಯಾಲಯ, ಬಾಗಲಕೋಟೆ.

ಪ್ರತಿ:

. ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ ಬೆಂಗಳೂರು.
. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ.
. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು)

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 15 ಯುಎನ್‌ಇ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 08.08.2023.

ಸುತ್ತೋಲೆ

ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ವಿಶ್ವವಿದ್ಯಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಳಗುತ್ತಿಗೆ ಮತ್ತು ಹೊರಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಿ ನೌಕರರುಗಳನ್ನು ಖಾಯಂಗೊಳಿಸುವಂತೆ ಸರ್ಕಾರಕ್ಕೆ ಮನವಿಗಳು ಸ್ವೀಕೃತಗೊಳ್ಳುತ್ತಿವೆ. ಬಹುತೇಕ ವಿಶ್ವವಿದ್ಯಾಲಯಗಳು ತಮ್ಮ ಆಂತರಿಕ ಸಂಪನ್ಮೂಲಗಳ ಬಲದ ಮೇಲೆ ರಾಜ್ಯ ಸರ್ಕಾರ/ಆರ್ಥಿಕ ಇಲಾಖೆಯ ಪೂರ್ವಾನುಮೋದನೆ ಇಲ್ಲದೇ ಮಂಜೂರಾದ ಹುದ್ದೆಗಳಿಗೂ ಮೀರಿ ದುಪ್ಪಟ್ಟು ಸಂಖ್ಯೆಯಲ್ಲಿ, ಅಗತ್ಯಕ್ಕಿಂತಲೂ ಹೆಚ್ಚಿನ ಸಿಬ್ಬಂದಿಗಳನ್ನು ನಿಯಮಬಾಹಿರವಾಗಿ ನೇಮಿಸಿಕೊಳ್ಳಲಾಗಿದ್ದು, ಈ ರೀತಿ ನೇಮಿಸಿಕೊಂಡಿರುವ ತಾತ್ಕಾಲಿಕ ನೌಕರರನ್ನು ಕೂಡಲೇ ಬಿಡುಗಡೆಗೊಳಿಸುವಂತೆ ಈ ಹಿಂದೆ ಸರ್ಕಾರದಿಂದ ಸುತ್ತೋಲೆಗಳನ್ನು ಹೊರಡಿಸಲಾಗಿದ್ದರೂ ಅದರಂತೆ ವಿಶ್ವವಿದ್ಯಾಲಯಗಳು ಕ್ರಮವಹಿಸಿರುವುದಿಲ್ಲ.

ಪ್ರಸ್ತುತ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಕೆಳಹಂತದ ಸಿಬ್ಬಂದಿಗಳು ತಮ್ಮ ಸೇವೆಯನ್ನು ಖಾಯಂಗೊಳಿಸುವಂತೆ ಸರ್ಕಾರಕ್ಕೆ ಬೇಡಿಕೆ ಇಟ್ಟಿದ್ದಾರೆ. ಆದರೆ ಮೇಲೆ ವಿವರಿಸಿರುವಂತೆ ಹೆಚ್ಚಿನ ಸಿಬ್ಬಂದಿಗಳನ್ನು ಮಂಜೂರಾಗದ ಹುದ್ದೆಗಳಿಗೆ ನಿಯಮಾಬಾಹಿರವಾಗಿ ನೇಮಿಸಲಾಗಿರುತ್ತದೆ. ದ್ವಿ.ದ.ಸ/ಬೆರಳಚ್ಚುಗಾರರು/ಡಿ.ಇ.ಓ/ವಾಹನಚಾಲಕರು/ಗ್ರೂಪ್-ಡಿ ಮುಂತಾದ ತತ್ಸಮಾನ ಅನೇಕ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡುವುದು ಸರ್ಕಾರದ ನೀತಿಯಾಗಿದ್ದು, ನೇರನೇಮಕಾತಿಗೆ ಅವಕಾಶವಿರುವುದಿಲ್ಲ. ಹೀಗಾಗಿ ನೇರನೇಮಕಾತಿಯಲ್ಲಿ ವಿಶೇಷ ಆದ್ಯತೆ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಮುಂದುವರೆದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಉಮಾದೇವಿ ಹಾಗೂ ಇತರರ ಪ್ರಕರಣದಲ್ಲಿ ದಿನಾಂಕ;10-04-2006ರಂದು ನೀಡಿರುವ ತೀರ್ಪಿನಲ್ಲಿ ಪ್ರಚುರಪಡಿಸಿರುವ ಕಾನೂನಿನ್ವಯ ಒಳಗುತ್ತಿಗೆ/ಹೊರಗುತ್ತಿಗೆ/ತಾತ್ಕಾಲಿಕ ಸಿಬ್ಬಂದಿಗಳ ಸೇವಾ ಸಕ್ರಮಾತಿಗಾಗಲಿ ಅಥವಾ ನೇರನೇಮಕಾತಿಯಲ್ಲಿ ವಿಶೇಷ ಆದ್ಯತೆ ನೀಡಲಾಗಲೀ ಅವಕಾಶವಿರುವುದಿಲ್ಲ.

ಆದ್ದರಿಂದ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಸರ್ಕಾರದ ಪೂರ್ವಾನುಮೋದನೆ ಇಲ್ಲದೇ ನಿಯಮಬಾಹಿರವಾಗಿ ಮಂಜೂರಾದ ಹುದ್ದೆಗಳಿಗೂ ಮೀರಿ ಅಗತ್ಯಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ನೇಮಿಸಿಕೊಂಡ ನೌಕರರನ್ನು ಸೇವೆಯಿಂದ ಬಿಡುಗಡೆಗೊಳಿಸಿ ವಿಶ್ವವಿದ್ಯಾಲಯಗಳ ಸಿಬ್ಬಂದಿಗಳ ಸಂಖ್ಯೆಯನ್ನು ತರ್ಕಬದ್ಧಗೊಳಿಸಲು (Rationalize) ಕ್ರಮವಹಿಸುವಂತೆ ಈ ಮೂಲಕ ವಿಶ್ವವಿದ್ಯಾಲಯಗಳಿಗೆ ಸೂಚಿಸಲಾಗಿದೆ.

ಈ ವಿಚಾರವಾಗಿ ಪುನರಾವರ್ತಿತ ಸುತ್ತೋಲೆಗಳನ್ನು ಹೊರಡಿಸಲು ಅವಕಾಶ ನೀಡದಂತೆ ಮೇಲ್ಕಂಡ ಸೂಚನೆಗಳನ್ನು ಅನುಸರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ತಿಳಿಸಿದೆ. ಈ ಸೂಚನೆಗಳ ಉಲ್ಲಂಘನೆ/ಲೋಪಗಳಿಗೆ ಹಾಗೂ ಅದರ ಪರಿಣಾಮಗಳಿಗೆ ವಿಶ್ವವಿದ್ಯಾಲಯದ ಕುಲಪತಿ, ಕುಲಸಚಿವರು ಮತ್ತು ಹಣಕಾಸು ಅಧಿಕಾರಿ ಹಾಗೂ ಸಂಬಂಧಿಸಿದ ಅಧಿಕಾರಿ/ನೌಕರರನ್ನು ನೇರ ಹೊಣೆಗಾರರನ್ನಾಗಿ...

(ಶೀತಲ್ ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು 1)

ಗೆ:

1. ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
2. ಕುಲಸಚಿವರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
3. ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

...2

4 ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ.
5 ಕುಲಸಚಿವರು, ಗುಲ್ಬರ್ಗ ವಿಶ್ವವಿದ್ಯಾಲಯ, ಕಲಬುರಗಿ
6 ಕುಲಸಚಿವರು, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು
7 ಕುಲಸಚಿವರು, ತುಮಕೂರು ವಿಶ್ವವಿದ್ಯಾಲಯ, ತುಮಕೂರು
8 ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ
9 ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.
10. ಕುಲಸಚಿವರು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ.
11. ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
12. ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ.
13. ಕುಲಸಚಿವರು, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
14. ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
15. ಕುಲಸಚಿವರು, ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು
16. ಕುಲಸಚಿವರು, ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು.
17. ಕುಲಸಚಿವರು, ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ಶಿಗ್ಗಾವಿ ತಾಲ್ಲೂಕು, ಹಾವೇರಿ ಜಿಲ್ಲೆ.
18. ಕುಲಸಚಿವರು, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು
19. ಕುಲಸಚಿವರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ತಮಕಾ, ಕೋಲಾರ ಜಿಲ್ಲೆ.
20. ಕುಲಸಚಿವರು, ಮಂಡ್ಯ ಕೃಷ್ಣರ್ ವಿಶ್ವವಿದ್ಯಾಲಯ, ಮಂಡ್ಯ
21. ಕುಲಸಚಿವರು, ಮಹಾರಾಣಿ ಕೃಷ್ಣರ್ ವಿಶ್ವವಿದ್ಯಾಲಯ, ಬೆಂಗಳೂರು
22. ಕುಲಸಚಿವರು, ನೃಪತುಂಗ ವಿಶ್ವವಿದ್ಯಾಲಯ, ಬೆಂಗಳೂರು
23. ಕುಲಸಚಿವರು, ರಾಯಚೂರು ವಿಶ್ವವಿದ್ಯಾಲಯ, ಯರಗೇರಾ, ರಾಯಚೂರು.
24. ಕುಲಸಚಿವರು, ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್, ಜ್ಞಾನಭಾರತಿ, ಬೆಂಗಳೂರು.
25. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು.
26. ಹಾಸನ ವಿಶ್ವವಿದ್ಯಾಲಯ, ಹಾಸನ
27. ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.
28. ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ.
29. ಬೀದರ್ ವಿಶ್ವವಿದ್ಯಾಲಯ, ಬೀದರ್.
30. ಚಾಮರಾಜ ನಗರ ವಿಶ್ವವಿದ್ಯಾಲಯ, ಚಾಮರಾಜನಗರ.
31. ಕೊಡಗು ವಿಶ್ವವಿದ್ಯಾಲಯ,ಕೊಡಗು ಜಿಲ್ಲೆ.
32. ಬಾಗಲಕೋಟೆ ವಿಶ್ವವಿದ್ಯಾಲಯ, ಬಾಗಲಕೋಟೆ.

ಪ್ರತಿ:

1. ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ ಬೆಂಗಳೂರು.
2. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ.
4. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು)

ಅನುಬಂಧ - 4.

ಕರ್ನಾಟಕ ಸರ್ಕಾರ

ಅನುಬಂಧ - 4

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 148 ಹೆಚ್‌ಎಂಡಿ 2026

ಕರ್ನಾಟಕ ಸರ್ಕಾರ ಸಚಿವಾಲಯ,
ಉಪಮುಖ್ಯಮಂತ್ರಿಗಳ ಕಚೇರಿ
ಡಾ. ಬಿ.ಆರ್. ಅಂಬೇಡ್ಕರ್ ವೀಥಿ,
ಬೆಂಗಳೂರು, ದಿನಾಂಕ: 19.05.2026

ಇಂದ

ಸರ್ಕಾರದ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ

ಇವರಿಗೆ

ಉಪಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳು (ಶಿಕ್ಷಣ)
ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯ ಎಲ್ಲಾ ವಿಶ್ವವಿದ್ಯಾಲಯಗಳು,
ಮುಖ್ಯವಿ

ವಿಷಯ: ಉನ್ನತ ಶಿಕ್ಷಣ ಇಲಾಖಾ ವ್ಯಾಪ್ತಿಯ ವಿಶ್ವವಿದ್ಯಾಲಯಗಳಿಗೆ ಭವಿಷ್ಯದಲ್ಲಿ ಪಿಂಚಣಿ ಮತ್ತು ಪಿಂಚಣಿ ಸೌಲಭ್ಯಗಳ ಪಾವತಿಗಾಗಿ ಅನುದಾನ ಒದಗಿಸಲು ಅನುಸರಿಸಬೇಕಾದ ತತ್ವಗಳ (Principles) ಕುರಿತ

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉನ್ನತ ಶಿಕ್ಷಣ ಇಲಾಖಾ ವ್ಯಾಪ್ತಿಯ ವಿಶ್ವವಿದ್ಯಾಲಯಗಳು ಪಿಂಚಣಿ ಮತ್ತು ಪಿಂಚಣಿ ಸೌಲಭ್ಯ ಪಾವತಿಗಾಗಿ ಅನುದಾನ ಕೋರಿರುವ ಬಗ್ಗೆ ಪರಿಶೀಲಿಸಿದ ಉನ್ನತ ಶಿಕ್ಷಣ ಇಲಾಖಾ ವ್ಯಾಪ್ತಿಯ ವಿಶ್ವವಿದ್ಯಾಲಯಗಳಿಗೆ ಭವಿಷ್ಯದಲ್ಲಿ ಈ ಕೆಳಕಂಡ ತತ್ವಗಳ (Principles) ಆಧಾರದ ಮೇಲೆ ಪಿಂಚಣಿ ಮತ್ತು ಪಿಂಚಣಿ ಸೌಲಭ್ಯಗಳ ಪಾವತಿಗಾಗಿ ಅನುದಾನವನ್ನು ಒದಗಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಲು ನಿರ್ದೇಶಿಸಲಾಗಿದೆ.

1. ಪಿಂಚಣಿ ಭಾರವನ್ನು ಹಬ್ಬಿಸುವ ರೀತಿಯಲ್ಲಿ ಅಂತಿಮ ಸಂಬಳದಲ್ಲಿನ ಗಣನೀಯವಾಗಿ ಕಡಿಮೆಯಾಗಿರುವ ಹಳೆಯ ವಿಶ್ವವಿದ್ಯಾಲಯಗಳು ತಮ್ಮಲ್ಲಿ ಖಾಲಿ ಹುದ್ದೆಗಳಿಗಿಂತ ಹೆಚ್ಚುವರಿಯಾಗಿ ನೇಮಿಸಿಕೊಂಡಿರುವ ಹುದ್ದೆಗಳನ್ನು ತಗ್ಗಿಸಿದಾಗ ಮಾತ್ರ ವಿಶ್ವವಿದ್ಯಾಲಯಗಳ ಒಟ್ಟು ಪಿಂಚಣಿ ಕೋರಿಕೆಯಲ್ಲಿ ಶೇ.50ರಷ್ಟನ್ನು ಸರ್ಕಾರದಿಂದ ಒದಗಿಸಲು ಕ್ರಮವಹಿಸಲಾಗುವುದು.

2. ವಿಶ್ವವಿದ್ಯಾಲಯಗಳು ತಮ್ಮ ಪಿಂಚಣಿ ಬಾಧ್ಯತೆಗಳನ್ನುಸಮಗ್ರವಾಗಿ ತಮ್ಮ ಆಂತರಿಕ ಸಂಪನ್ಮೂಲದಲ್ಲಿ ಶೇಕಡಾವಾರು ನಿಧಿಯನ್ನು ಪಿಂಚಣಿ ನಿಧಿಗಾಗಿ ಪ್ರತ್ಯೇಕವಾಗಿ ಮೀಸಲಿಡಲು ಕ್ರಮವಹಿಸಬೇಕು.

3. ಸರ್ಕಾರದ ಸೂಚನೆಗಳಂತೆ ಕಮವಹಿಸದ ಖಾಲಿಇರುವ ಹುದ್ದೆಗಳನ್ನು/ಹೊಸ ಹುದ್ದೆಗಳನ್ನು ತಗ್ಗಿಸದಿರುವ ವಿಶ್ವವಿದ್ಯಾಲಯಗಳಿಗೆ ಪಿಂಚಣಿ ಅನುದಾನವನ್ನು ಕಡಿತ ಮಾಡಲಾಗುವುದು.

4. ಈ ಕೆಳಕಂಡ ಹಳೆಯ ವಿಶ್ವವಿದ್ಯಾಲಯಗಳಿಂದ ಬೇರ್ಪಟ್ಟು ಹೊಸ ವಿಶ್ವವಿದ್ಯಾಲಯಗಳು ಸೃಜನೆಯಾಗಿರುವುದರಿಂದ, ಪ್ರಸ್ತುತ ಹಳೆಯ ವಿಶ್ವವಿದ್ಯಾಲಯಗಳ ಸಂಯೋಜನಾ ಕಾಲೇಜುಗಳ ಸಂಖ್ಯೆ ಕಡಿಮೆಯಾಗಿ, ಸಂಗ್ರಹವಾಗುವ ಸಂಯೋಜನಾ ಶುಲ್ಕವು ಗಣನೀಯವಾಗಿ ಕಡಿಮೆಯಾಗಿರುತ್ತದೆ.

ಕ್ರ.ಸಂ.	ಹಳೆಯ ವಿಶ್ವವಿದ್ಯಾಲಯಗಳು
1	ಮೈಸೂರು ವಿಶ್ವವಿದ್ಯಾಲಯ
2	ಕರ್ನಾಟಕ ವಿಶ್ವವಿದ್ಯಾಲಯ
3	ಬೆಂಗಳೂರು ವಿಶ್ವವಿದ್ಯಾಲಯ
4	ಮಂಗಳೂರು ವಿಶ್ವವಿದ್ಯಾಲಯ
5	ಗುಲ್ಬರ್ಗ ವಿಶ್ವವಿದ್ಯಾಲಯ
6	ಕುವೆಂಪು ವಿಶ್ವವಿದ್ಯಾಲಯ

5. ಹಳೆಯ ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸಿ, ವಯೋನಿವೃತ್ತಿ ಹೊಂದಿ ಪಿಂಚಣಿ ಪಡೆಯುತ್ತಿರುವ ಪಿಂಚಣಿದಾರರ ಸಂಖ್ಯೆ ಅಧಿಕವಿದ್ದು, ಹಳೆಯ ವಿಶ್ವವಿದ್ಯಾಲಯಗಳಲ್ಲಿ ಆಂತರಿಕ ಸಂಪನ್ಮೂಲದ ಹರಿವು ಕಡಿಮೆಯಿರುತ್ತದೆ.

6. ಆದುದರಿಂದ, ಮೇಲ್ಕಂಡ ಹಳೆಯ ವಿಶ್ವವಿದ್ಯಾಲಯಗಳಲ್ಲಿ ಮಂಜೂರಾದ ಖಾಲಿ ಹುದ್ದೆಗಳಿಗಿಂತ ಹೆಚ್ಚುವರಿಯಾಗಿ ಸಿಬ್ಬಂದಿಯನ್ನು ನೇಮಿಸಿಕೊಂಡಿರುವ ಹುದ್ದೆಗಳನ್ನು ತಗ್ಗಿಸುವುದಾಗಿದ್ದಲ್ಲಿ ಮಾತ್ರ ವಿಶ್ವವಿದ್ಯಾಲಯದ ಒಟ್ಟು ಪಿಂಚಣಿಯಲ್ಲಿ

ಶೇಕಡ 70% ರಷ್ಟು ಹಣವನ್ನು ಸರ್ಕಾರದಿಂದ ಒದಗಿಸಲು ಪರಿಶೀಲಿಸಲಾಗುವುದು ಹಾಗೂ ಉಳಿದ ಶೇಕಡ 30% ರಷ್ಟು ಹಣವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಪ್ರತ್ಯೇಕ ಪಿಂಚಣಿ ಖಾತೆಯಲ್ಲಿ ಠೇವಣಿ ಮಾಡಲು ಕ್ರಮವಹಿಸತಕ್ಕದ್ದು.

7. ಅಳಿದುಳಿದ ವಿಶ್ವವಿದ್ಯಾಲಯಗಳಲ್ಲಿ ಆಂತರಿಕ ಸಂಪನ್ಮೂಲದ ಹರಿವು ಇರುವುದರಿಂದ ಹಾಗೂ ಪಿಂಚಣಿದಾರರ ಸಂಖ್ಯೆ ಕಡಿಮೆ ಇರುವುದರಿಂದ ಪಿಂಚಣಿಯ ಶೇಕಡ 50% ರಷ್ಟು ಮೊತ್ತವನ್ನು ವಿಶ್ವವಿದ್ಯಾಲಯಗಳ ಆಂತರಿಕ ಸಂಪನ್ಮೂಲಗಳಲ್ಲಿ ಪ್ರತ್ಯೇಕ ಪಿಂಚಣಿ ಖಾತೆಯಲ್ಲಿ ಠೇವಣಿ ಮಾಡುವಂತೆ ಹಾಗೂ ಇನ್ನುಳಿದ ಶೇಕಡ 50% ಹಣವನ್ನು ಸರ್ಕಾರದಿಂದ ಬರಿಸಲಾಗುವುದು.

ಈ ಪತ್ರವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಟಿಇಡಿ 154 ಎಫ್‌ಬಿಎ 8/2025 ದಿನಾಂಕ 09.02.2026ರಲ್ಲಿನ ಅಭಿಪ್ರಾಯ/ಸಹಮತಿಯಂತೆ ಹೊರಡಿಸಲಾಗಿದೆ.

ತಮ್ಮ ನಂಬುಗೆಯ,

(ಎನ್. ಕುಮಾರ) 19/05/2026

ಸರ್ಕಾರದ ಉಪ ಕಾರ್ಯದರ್ಶಿ
(ಆಂತರಿಕ ಶಿಕ್ಷಣ ಮತ್ತು ಯೋಜನೆ)
ಉನ್ನತ ಶಿಕ್ಷಣ ಇಲಾಖೆ